ಶ್ರೀ ನೀಲಕಂಠನಾಗನಾಥಾಚಾರ್ಯ ವಿರಚಿತ

ವೀರಮಾಹೇಶ್ವರಾಚಾರಸಂಗ್ರಹಃ

ಶ್ರೀಧರಾಂಕಪ್ರಣೀತ ಕರ್ನಾಟಕಭಾಷಾವಿವರಣ ಸಹಿತಃ

VĪRAMĀHEŚWARĀCĀRA SAṄGRAHAḤ

of

Śri NĪLAKANṬHANĀGANĀTHĀCĀRYA

with the Commentary 'Karnātakabhāṣābhūṣaṇa' of

Śri ŚRĪDHARĀNKA

Vol. I

General Editor :

Dr. K. RAJAGOPALACHAR, M.A., Ph.D.

Editor :

Vidwan M. S. BASAVARAJAIAH

ಪ್ರಾಚ್ಯವಿದ್ಯಾ ಸಂಶೋಧನಾಲಯ

ORIENTAL RESEARCH INSTITUTE, MYSORE

೧೯೯೧

Price : Rs. 58-00

UNIVERSITY OF MYSORE
ORIENTAL RESEARCH INSTITUTE SERIES No. 176

ಮೈಸೂರು ವಿಶ್ವವಿದ್ಯಾನಿಲಯ
ಪ್ರಾಚ್ಯವಿದ್ಯಾ ಸಂಶೋಧನಾಲಯ ಗ್ರಂಥಮಾಲಾ—176

VĪRAMĀHEŚWARĀCHĀRA SAÑGRAHAḤ

ಶ್ರೀನೀಲಕಂಠನಾಗನಾಥಾಚಾರ್ಯವಿರಚಿತ

ವೀರಮಾಹೇಶ್ವರಾಚಾರಸಂಗ್ರಹಃ

ಶ್ರೀಧರಾಂಕಪ್ರಣೀತಕರ್ನಾಟಭಾಷಾಸಹಿತಃ

ORIENTAL RESEARCH INSTITUTE
MYSORE

ಪ್ರಾಚ್ಯವಿದ್ಯಾಸಂಶೋಧನಾಲಯ
ಮೈಸೂರು
1991

First Edition 1991
ಪ್ರಥಮ ಮುದ್ರಣ ೧೯೯೧

Published by :
The Oriental Research Institute
University of Mysore, Mysore
ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾಸಂಶೋಧನಾಲಯದಿಂದ
ಪ್ರಕಟವಾಗಿದೆ

Printed by :
R. SRINIVASACHAR, B Sc.
Samskrita Sahitya Sadana
1040, Devaparthiva Road, Chamarajapuram, Mysore-4

ಮುದ್ರಕರು :
ಆರ್. ಶ್ರೀನಿವಾಸಾಚಾರ್, ಬಿ. ಎಸ್ಸಿ.
ಸಂಸ್ಕೃತ ಸಾಹಿತ್ಯ ಸದನ
೧೦೪೦, ದೇವಪಾರ್ಥಿವ ರಸ್ತೆ, ಚಾಮರಾಜಪುರಂ, ಮೈಸೂರು-೪

UNIVERSITY OF MYSORE
ORIENTAL RESEARCH INSTITUTE SERIES No. 176

VĪRAMĀHEŚWARĀCHĀRA SAṄGRAHAḤ

of

Sri NEELAKANTHANAGANATHACHARYA

with Kannada Commentary

of

Sri SRIDHARANKA

General Editor:

Dr. K. RAJAGOPALACHAR, M.A., Ph.D.
Director
Oriental Research Institute
and Professor and Head of the P.G. Dept. of Sanskrit
Manasagangotri
University of Mysore, Mysore

Edited by:

Vidwan M. S. BASAVARAJAIAH
Senior Research Asst. (Retd.)
Oriental Research Institute, Mysore

ORIENTAL RESEARCH INSTITUTE
MYSORE
1991

ಮೈಸೂರು ವಿಶ್ವವಿದ್ಯಾನಿಲಯ
ಪ್ರಾಚ್ಯವಿದ್ಯಾಸಂಶೋಧನಾಲಯಗ್ರಂಥಮಾಲಾ ಸಂ. 176

ಶ್ರೀ ನೀಲಕಂಠನಾಗನಾಥಾಚಾರ್ಯವಿರಚಿತ

ಶ್ರೀವೀರಮಾಹೇಶ್ವರಾಚಾರಸಂಗ್ರಹಃ

ಶ್ರೀ ಶ್ರೀಧರಾಂಕಪ್ರಣೀತಕರ್ನಾಟಭಾಷಾವ್ಯಾಖ್ಯಾಸಹಿತ

ಪ್ರಧಾನ ಸಂಪಾದಕ :

ಡಾ. ಕೆ. ರಾಜಗೋಪಾಲಾಚಾರ್, ಎಂ.ಎ., ಪಿಹೆಚ್.ಡಿ.

ಪ್ರಾಚ್ಯವಿದ್ಯಾಸಂಶೋಧನಾಲಯ ನಿರ್ದೇಶಕ
ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಸಂಸ್ಕೃತ ವಿಭಾಗ
ಪ್ರಾಧ್ಯಾಪಕ ಹಾಗೂ ಮುಖ್ಯರು
ಮಾನಸಗಂಗೋತ್ರಿ, ಮೈಸೂರು

ಸಂಪಾದಕ :

ವಿದ್ವಾನ್ ಎಂ. ಎಸ್. ಬಸವರಾಜಯ್ಯ

ಹಿರಿಯ ಸಂಶೋಧನಸಹಾಯಕರು (ನಿವೃತ್ತ)
ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು

ಪ್ರಾಚ್ಯವಿದ್ಯಾಸಂಶೋಧನಾಲಯ
ಮೈಸೂರು
೧೯೯೧

ಮುನ್ನುಡಿ

ತ್ರಿವಿಧಾತ್ಮಕ ಆಗಮಶಾಸ್ತ್ರಗಳಲ್ಲಿ ಶೈವಾಗಮವೊಂದು. ಈ ಶೈವಾಗಮದಲ್ಲಿ 'ವೀರಮಾಹೇಶ್ವರಾಚಾರಸಂಗ್ರಹ' ಎಂಬುದು ಬಹಳ ಪ್ರಥಿತವಾದುದು. ಇದರ ಕರ್ತೃ ಶ್ರೀನೀಲಕಂಠನಾಗನಾಥಾಚಾರ್ಯ. ಈ ಕೃತಿಯಲ್ಲಿ 8 ಸಾವಿರ ಶ್ಲೋಕ ಗಳನ್ನೊಳಗೊಂಡ 78 ಅಧ್ಯಾಯಗಳಿವೆ. ಸರಳ ಶೈಲಿಯಲ್ಲಿ ವೀರಶೈವಸಿದ್ಧಾಂತದ ಪ್ರಕಾರ 'ಶಿವತತ್ತ್ವ'ದ ನಿರೂಪಣೆಯನ್ನೊಳಗೊಂಡ ಆಚಾರದ ಪ್ರತಿಪಾದನೆಯನ್ನು ಗ್ರಂಥ ಕರ್ತೃವು ಮಾಡಿದ್ದಾನೆ. ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಎಲ್ಲ ಮಾಹೇಶ್ವರ ಗ್ರಂಥಗಳನ್ನೂ ಪುರಾಣೇತಿಹಾಸಗಳನ್ನೂ ಅವಲೋಕಿಸಿ ಈ ಗ್ರಂಥದ ರಚನೆಯಾಗಿದೆ ಎಂಬುದನ್ನು ಗ್ರಂಥಕರ್ತೃವೇ ಪ್ರಾಸ್ತಾವಿಕ ಶ್ಲೋಕವೊಂದರಲ್ಲಿ ತಿಳಿಸಿದ್ದಾನೆ. ಇದರ ಪ್ರಭಾವವು ಅನಂತರದ ವೀರಶೈವ ಸಿದ್ಧಾಂತ ನಿರೂಪಣಾಗ್ರಂಥಗಳಲ್ಲಿ ಕಂಡುಬರು ವುದರಿಂದ ಈ ಗ್ರಂಥವು ಪ್ರಮಾಣಗ್ರಂಥಗಳಲ್ಲೊಂದು ಎಂದು ಪರಿಗಣಿತವಾಗಿದೆ. ಇದು ಸಂಸ್ಕೃತ ಭಾಷೆಯಲ್ಲಿರುವುದು ಮತ್ತೊಂದು ವೈಶಿಷ್ಟ್ಯ. ಇದಕ್ಕೆ ಶ್ರೀಧರಾಂಕ ನೆಂಬುವನು ಕನ್ನಡದಲ್ಲಿ ವಿವರಣೆಯನ್ನು ಕೊಟ್ಟಿರುವುದು ಗ್ರಂಥಕ್ಕೆ ಮತ್ತಷ್ಟು ಒನಪು ತಂದಿದೆ.

ಈ ಗ್ರಂಥದ ಹಿರಿಮೆಯನ್ನು ಓದುಗರೆಲ್ಲರಿಗೂ ಪರಿಚಯಮಾಡಿಕೊಡಬೇಕೆಂಬ ಉದಾತ್ತ ಉದ್ದೇಶದಿಂದ ಶ್ರೀಮಾನ್ ಬಸವರಾಜಯ್ಯನವರು ಈ ಗ್ರಂಥದ ನಾಲ್ಕೈದು ಹಸ್ತಪ್ರತಿಗಳನ್ನು ಕೂಲಂಕಷವಾಗಿ ಅವಲೋಕಿಸಿ ಪಾಠಪರಿಷ್ಕರಣ ಮಾಡಿ ಗ್ರಂಥವನ್ನು ಪ್ರಕಟಿಸಲು ಮಹದುಪಕಾರವನ್ನು ಸಲ್ಲಿಸಿದ್ದಾರೆ. ಕೃತಿಯ ಪರಿಚಯ, ಕರ್ತೃವಿನ ಪರಿಚಯ ಇತ್ಯಾದಿ ವಿಷಯಗಳನ್ನು ಸವಿಸ್ತಾರವಾಗಿ ನಿರೂಪಿಸಿರುವುದು ಸ್ತುತ್ಯರ್ಹ. ಅವರಿಗೆ ಪ್ರಾಚ್ಯವಿದ್ಯಾಸಂಶೋಧನಾಲಯದ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಸಂಸ್ಥೆಯಿಂದ ಅವ್ಯಾಹತವಾಗಿ ಸಾಗುತ್ತಿರುವ ಪ್ರಕಟಣೆಗೆ ಸಾಕಷ್ಟು ಉತ್ತೇಜನವನ್ನು ನೀಡಿ ಆರ್ಥಿಕವಾಗಿ ಹರಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ

ಕುಲಪತಿಗಳಾಗಿರುವ ಡಾ. ಸೆಲ್ವೀದಾಸ್‌ರವರಿಗೂ, ಕುಲಸಚಿವರಾಗಿರುವ ಪ್ರೊ. ವಿ. ಕೆ. ನಟರಾಜ್‌ರವರಿಗೂ, ವಿತ್ತಾಧಿಕಾರಿಗಳಿಗೂ ನನ್ನ ಅನಂತಾನಂತ ಕೃತಜ್ಞತೆಗಳು. ಮೈಸೂರು ವಿಶ್ವವಿದ್ಯಾನಿಲಯದ ಈ ಸಂಶೋಧನಾಲಯದ ಪ್ರಕಟಣೆಯ ಬಗೆಗೆ ಬಹಳ ಆಸ್ಥೆಯನ್ನು ವಹಿಸಿ ಉತ್ತೇಜನ ನೀಡುತ್ತಿರುವ ಮುದ್ರಣಾಲಯದ ನಿರ್ದೇಶಕರಾದ ಶ್ರೀಯುತ ಸಿದ್ದೇಗೌಡರಿಗೆ ನಾನು ಆಭಾರಿಯಾಗಿದ್ದೇನೆ.

ಶ್ರದ್ಧಾನ್ವಿತ ಕೆಲಸಗಾರರು ವಿರಳವಾಗುತ್ತಿರುವ ಈ ಪರಿಸರದಲ್ಲಿ ಎಂದಿನಂತೆ ಸಂಸ್ಕೃತ ಸಾಹಿತ್ಯ ಸದನದ ಮೂಲಕ ಸಾಕಷ್ಟು ಸಂಸ್ಕೃತ ಪುಸ್ತಕಗಳನ್ನು ಹೊರತಂದಿರುವ ಮುದ್ರಣಾಲಯದ ಮಾಲೀಕರಾದ ಪ್ರೊ. ಎಸ್. ರಂಗಾಚಾರ್ಯರವರು ಈ ಗ್ರಂಥವನ್ನು ಅಚ್ಚುಹಾಕಿಸಿ ಸಕಾಲಕ್ಕೆ ಸಿದ್ಧಪಡಿಸಿರುತ್ತಾರೆ. ನನ್ನ ವಿದ್ಯಾಗುರುಗಳಾದ ಪ್ರೊ. ಎಸ್. ರಂಗಾಚಾರ್ಯರವರಿಗೆ ವೈಯಕ್ತಿಕ ನಮನ ಮಾತ್ರವಲ್ಲದೆ, ಪ್ರಾಚ್ಯವಿದ್ಯಾಸಂಶೋಧನಾಲಯದ ಪರವಾಗಿ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುವುದು ನನ್ನ ಭಾಗ್ಯವಾಗಿದೆ. ಮುಂಪೆಯೂ ಇದೇರೀತಿ ಈ ಸಂಶೋಧನಾಲಯದ ಪ್ರಕಟಣೆಗೆ ಅವರು ಅನುವಾಗುವುದರ ಮೂಲಕ ಹರಸಲೆಂದು ಆಶಿಸುತ್ತೇನೆ.

ಕೆ. ರಾಜಗೋಪಾಲಾಚಾರ್
ನಿರ್ದೇಶಕರು
ಪ್ರಾಚ್ಯವಿದ್ಯಾಸಂಶೋಧನಾಲಯ
ಮೈಸೂರು

ಪ್ರಸ್ತಾವನೆ

ಗ್ರಂಥದ ಸ್ಥೂಲಪರಿಚಯ

ವೀರಮಾಹೇಶ್ವರಾಚಾರಸಂಗ್ರಹನೆಂಬ ಸಂಸ್ಕೃತ ಗ್ರಂಥವನ್ನು ಬರೆದವನು ಮಹಾವಿಬುಧನೂ ವೀರಮಾಹೇಶ್ವರನೂ ಆದ ನೀಲಕಂಠನಾಗನಾಥಾಚಾರ್ಯನು. ಈ ಗ್ರಂಥದಲ್ಲಿ 78 ಅಧ್ಯಾಯಗಳೂ 8 ಸಾವಿರ ಶ್ಲೋಕಗಳೂ ಇದ್ದು ಸುಮಾರು 60 ಕ್ಕೂ ಹೆಚ್ಚಿನ ಪುರಾತನ ಗ್ರಂಥಗಳಿಂದ ಸಂಗ್ರಹಿಸಿದ ಪ್ರಮಾಣಗಳು ಇರುತ್ತವೆ. ಈ ಗ್ರಂಥಕಾರನೇ ತನ್ನ ಕೃತಿಯ ಬಗೆಗೆ "ಏತಾನ್ ಮಾಹೇಶ್ವರಾನ್ ಸರ್ವಾನ್ ನತ್ವಾ ತತ್ತತ್ಪ್ರಸಾದತಃ (1–23), ತತ್ಸಂಗೃಹೀತಾನ್ ಗ್ರಂಥಾಂಶ್ಚ ಶ್ರುತಿ–ಸ್ಮೃತಿ–ಶಿವಾಗಮಾನ್ । ಇತಿಹಾಸಪುರಾಣಾದೀನ್ ಆಲೋಕ್ಯಾತಿಪ್ರಯತ್ನತಃ (1–24), ತತ್ರ ಸಾರತರಾನ್ ಶ್ಲೋಕಾನ್ ವೀರಮಾಹೇಶ್ವರೋಚಿತಾನ್ । ಆದಾಯ ತಾನ್ ನೀಲಕಂಠನಾಗನಾಥಾರ್ಯಧೀಮತಾ। ಶ್ರೀಮನ್ಮುಕ್ಕಾಯಿಸೋಮೇಶಪಾದಾಬ್ಜಾಹಿತ ಚೇತಸಾ (1–25), ಹಿತಾಯ ಶಿವಭಕ್ತಾನಾಂ ಸದಾಚಾರಾನುವರ್ತಿನಾಂ। ವೀರ-ಮಾಹೇಶ್ವರಾಚಾರಸಂಗ್ರಹಃ ಕ್ರಿಯತೇ ಮಹಾನ್ (1–26), ಎಂಬೀ ಶ್ಲೋಕಗಳಲ್ಲಿ ತನ್ನ ವಿದ್ವತ್ಪರಿಶ್ರಮವನ್ನೂ ತಾನು ಬಳಸಿಕೊಂಡಿರುವ ಆಕರಗ್ರಂಥಗಳನ್ನೂ ಮತ್ತು ತನ್ನ ಗ್ರಂಥದ ಆಶಯವನ್ನೂ ಸ್ಥೂಲವಾಗಿ ವಿಶದೀಕರಿಸಿರುತ್ತಾನೆ.

ಈ ಗ್ರಂಥ ಬೀರಿರುವ ಪ್ರಭಾವ

ಈ ಬೃಹದ್ಗ್ರಂಥವು ವೀರಮಾಹೇಶ್ವರರ (ವೀರಶೈವರ) ಉತ್ತಮೋತ್ತಮ ನಿಬಂಧ ಗ್ರಂಥವಾಗಿದ್ದು ಪ್ರಮಾಣಗ್ರಂಥವೆನಿಸಿದೆ. ಮುಂದಿನ ವೀರಶೈವವಿಬುಧರು ಒಂದಲ್ಲೊಂದು ರೀತಿಯಲ್ಲಿ ಈ ಗ್ರಂಥಕ್ಕೆ ಋಣಿಗಳಾಗಿರುತ್ತಾರೆ. ಕನ್ನಡದಲ್ಲಿ ಬೆಳೆದುಬಂದಿರುವ ಪದ್ಮಣಾಂಕನ ಪದ್ಮರಾಜಪುರಾಣ, ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಗುಬ್ಬಿಮಲ್ಲಣಾರ್ಯನ ವೀರಶೈವಾಮೃತಮಹಾಪುರಾಣ, ಸಿದ್ಧನಂಜೇಶನ ಗುರುರಾಜಚಾರಿತ್ರ, ವಿರಕ್ತ–ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರ ಪುರಾಣಾದಿಗಳು ಈ ಗ್ರಂಥವನ್ನು ಮಾದರಿಯಾಗಿಟ್ಟುಕೊಂಡು ತುಂಬಿಕೊಂಡು ಬೆಳೆದುಬಂದಿವೆಯೆಂಬುದು ಇವುಗಳಲ್ಲಿನ

ವಿಷಯಪ್ರತಿಪಾದನೆಗಳ ತುಲನೆಯಿಂದ ಅರಿಯಬಹುದಾಗಿದೆ. ಪದ್ಮರಾಜಪುರಾಣಕಾರ, ಭೈರವೇಶ್ವರಕಾವ್ಯಕಥಾಮಣಿಸೂತ್ರರತ್ನಾಕರಕಾರ, ಗಣಾಡಂಬರ (ಪುರಾತನರ-ಚರಿತೆ) ಚರಿತ್ರೆಕಾರ, ಶಿವಾಧಿಕ್ಯ ಪುರಾಣಕಾರ, ಗಂಗೋದಯ ಕಾವ್ಯಕಾರ ಇವರೇ ಮೊದಲಾದವರು ಈ ಗ್ರಂಥವನ್ನು ಉಲ್ಲೇಖಿಸಿ ಇದರಿಂದ ಉಪಕಾರವನ್ನು ಪಡೆದಿರುತ್ತಾರೆ. ಅಲ್ಲದೆ ಈ ಮಹಾಗ್ರಂಥಕ್ಕೆ ಶ್ರೀಧರಾಂಕನೆಂಬ ವಿದ್ವಾಂಸನು ಕನ್ನಡ ವ್ಯಾಖ್ಯಾನವನ್ನು ಬರೆದಿರುತ್ತಾನೆ. ಇಷ್ಟೇ ಅಲ್ಲದೆ ಪರ್ವತಲಿಂಗನಾಮಾತ್ಯನೆಂಬ ತೆನುಗು ವಿದ್ವಾಂಸನಿಂದ ಆಂಧ್ರಭಾಷೆಯಲ್ಲಿ ದ್ವಿಪದಕಾವ್ಯವಾಗಿ ಹತ್ತು ಆಶ್ವಾಸಗಳಲ್ಲಿ ಸುಂದರವಾಗಿ ಸಂಗ್ರಹರೂಪವಾಗಿ ಅನುವಾದ ಮಾಡಲ್ಪಟ್ಟಿದೆ.

ಗ್ರಂಥಸಾರ

ಈ ಗ್ರಂಥದಲ್ಲಿ ಪ್ರಧಾನವಾಗಿ ಧರ್ಮಾಧರ್ಮ ವಿಚಾರಗಳೂ ಶಿವನ ಲೀಲೆಗಳೂ, ಶಿವಾಧಿಕ್ಯವೂ ಶಿವಭಕ್ತರ ಆಚಾರ-ವಿಚಾರಗಳೂ ವೀರಮಾಹೇಶ್ವರರ ಷಟ್ಸ್ಥಲ-ಸಿದ್ಧಾಂತವೂ ಶಿವಭಕ್ತಾಧಿಕ್ಯವೂ ನಿಗಮಾಗಮಪುರಾಣೇತಿಹಾಸಾದಿಗ್ರಂಥಗಳಿಂದ ಸಂಗ್ರಹಿಸಲ್ಪಟ್ಟು ಮನಂಬುಗುವಂತೆ ಪ್ರತಿಪಾದಿತಗಳಾಗಿವೆ.

ಈ ಗ್ರಂಥದ ಮೇಲೆ ಪ್ರಾಕ್ತನ ಗ್ರಂಥಪ್ರಭಾವ

ಈ ಮಹಾಗ್ರಂಥ ಪ್ರತಿಪಾದಿತ ವಿಚಾರಗಳು ವೇದಾಗಮ ಪುರಾಣೇತಿಹಾಸಾದಿಗಳಲ್ಲಿಯೂ ಕ್ರಿ. ಶ. 1073 ರಲ್ಲಿದ್ದ ಸೋಮಶಂಭುವಿನ ಸೋಮಶಂಭುಪದ್ಧತಿಃ, ಜ್ಯೋತಿರ್ನಾಥನ ಶೈವರತ್ನಾಕರಃ, ಹರದತ್ತಾಚಾರ್ಯನ ತಾತ್ಪರ್ಯಸಂಗ್ರಹಃ, ದೇವರ ದಾಸಿಮಯ್ಯನ ವಚನಗಳು ಇವುಗಳಲ್ಲಿಯೂ, 12ನೆಯ ಶತಮಾನದ ಶ್ರೀ ಬಸವೇಶ್ವರಾದಿ ಶಿವಶರಣ-ಶರಣೆಯರ ವಚನಶಾಸ್ತ್ರಗಳಲ್ಲಿಯೂ, ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವಸಾರ, ಕೆರೆಯ ಪದ್ಮರಸರ ದೀಕ್ಷಾಬೋಧೆ, ಕುಮಾರ ಪದ್ಮರಸನ ಸಾನಂದ ಚರಿತೆಗಳಲ್ಲಿಯೂ ಹರಿಹರನ ಕೃತಿಗಳಲ್ಲಿಯೂ ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಮು, ಬಸವಪುರಾಣಮು, ಚತುರ್ವೇದಸಾರಸೂಕ್ತಾಲು, ಅನುಭವಸಾರಮು, ಗಂಗೋತ್ಪತ್ತಿರಗಡ, ವೃಷಾಧಿಪಶತಕಮು, ಬಸವೋದಾಹರಣಮ್, ಷಟ್ಸ್ಥಲಗದ್ಯಂ ಬಸವರಾಜೀಯಮ್ ಅಥವಾ ಸೋಮನಾಥಭಾಷ್ಯಂ, ಮುಂತಾದ ಪಾಲ್ಕುರಿಕೆ ಸೋಮನಾಥನ ಕೃತಿಗಳಲ್ಲಿಯೂ ಬಿತ್ತರೂಪಗಳಾಗಿ ಪ್ರತಿಪಾದಿತಗಳೇ ಆಗಿರುವ ವಿಚಾರಗಳು ಇಲ್ಲಿ ಉಪಬೃಂಹಣರೂಪಗಳಾಗಿರುತ್ತವೆ.

ಈ ಎಲ್ಲಾ ವಿಚಾರಗಳೂ ತಮಿಳು ನಾಡಿನ ಶಿವಭಕ್ತರಾದ ಪುರಾತನರ ಹಾಗೂ ಶೈವರ ಕೃತಿಗಳಲ್ಲಿಯೂ ಕಾಶ್ಮೀರದ ಮಹಾಮಾಹೇಶ್ವರರ ಕೃತಿಗಳಲ್ಲಿಯೂ

ಕರ್ಣಾಟಾಂಧ್ರ ತಮಿಳು ದೇಶಗಳ ವೀರಮಾಹೇಶ್ವರರ ಕನ್ನಡ-ತೆನುಗು-ತಮಿಳು ಮತ್ತು ಸಂಸ್ಕೃತಕೃತಿಗಳಲ್ಲಿಯೂ ಮೂಡಿಬಂದಿವೆ. ಸಪ್ತವಿಧ ಶೈವಕ್ಕೂ ಶಿವಲಿಂಗ ಪೂಜೆಯೂ ಶಿವಾಧಿಕ್ಯವೂ ಶಿವಭಕ್ತಾಧಿಕ್ಯವೂ ಶಿವಾನುಗ್ರಹಸಾಧನೆಯೆ ಶಿವಜ್ಞಾನ ವಿದ್ಯೆಯೂ ಹಲ-ಕೆಲವು ವೈಶಿಷ್ಟ್ಯಗಳೊಂದಿಗೆ ಸರ್ವಸಾಮಾನ್ಯ ವಿಷಯಗಳಾಗಿವೆ. ಇದೇ ತೆರನ ಬೃಹದ್ಗ್ರಂಥಗಳೂ ಪ್ರಕರಣಗ್ರಂಥಗಳೂ, ಶಿವಾಗಮಗಳನ್ನೂ, ಶೈವಸಿದ್ಧಾಂತಗಳನ್ನೂ ಎತ್ತಿ ಹಿಡಿದಿರುವ ಗ್ರಂಥಗಳೂ ತಮಿಳು ಭಾಷೆಯಲ್ಲಿಯೂ ಸಂಸ್ಕೃತದಲ್ಲಿಯೂ ಬಂದಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥ, ಕೆರೆಯ ಪದ್ಮರಸರ ಹಾಗೆ ವಾದಿಸಿಯೂ ಶ್ರುತ್ಯಾಧಾರಗಳಿಂದ ಬೃಹದ್ಗ್ರಂಥ ರಚಿಸಿಯೂ ಶಿವಾಧಿಕ್ಯವನ್ನೂ ಶಿವಾದ್ವೈತವನ್ನೂ ಪುಲವಕಪಿಲರು ಎಂಬ ತಮಿಳುನಾಡಿನ ವಿಬುಧರು ತಮಿಳು ಭಾಷೆಯಲ್ಲಿ ಸಾಧಿಸಿರುವರು ಎಂದು ಕೆರೆಯ ಪದ್ಮರಸರ ಪುತ್ರನಾದ ಕುಮಾರ ಪದ್ಮರಸನು 'ಶ್ರುತಿಗಳಾಣುವನೆತ್ತಿ ದ್ರಾವಿಡ। ಕೃತಿಯ ಬೆಂಬಾವುಗಳನಱುದಶ! ಶತವ ತೊಂಬತ್ತಾರು ಪ್ರಕರಣವೆಸಗಿ ಮಾಧವನಂ॥ ಶ್ರುತಿಬಹಿಷ್ಕೃತನೆನಿಸಿ ವಾದಿಸಿ। ಜಿತಪುರಾದ್ವೈತಪ್ರತಿಷ್ಠೆಯ। ನತಿಶಯದಿನೆಸಗಿದ ಪುಲವಕಪಿಲರುವನಂತಲ್ಲಿ॥ ಎಂದು ತನ್ನ ಸಾನಂದ ಚರಿತೆಯಲ್ಲಿ (ಸಂಧಿ 9-44) ತಿಳಿಸಿರುವನು. ಹೀಗೆಯೇ ಪ್ರಚ್ಛನ್ನ ಬೌದ್ಧನ ವೇದಾಂತವನ್ನು ಖಂಡಿಸಿ ಭಂಗಿಸಿದ ಒರುಮುಕ್ಕಾಳುವರ್ ಎಂಬವರನ್ನೂ (ಸಾ. ಚ. 9-44) ಮತ್ತು ಶ್ರೀವಿಶುದ್ಧ ಪ್ರಕರಣಂಗಳನೆಸಗಿ ವೇದ। ಶೈವತಂತ್ರಾವಳಿಗೆ ಭಾಷ್ಯಮಂ ದೀಪಿಕೆಯ। ನಾ ವೃತ್ತಿಯಂ ವ್ಯಾಖ್ಯೆಯಂ ಬರೆದ ಬೋಧಾಯನಾರ್ಯನುರು ಶಂಕರಾರ್ಯನಂ॥ ವೋವೊ ಹರದತ್ತರ್ ತ್ರಿಲೋಚನಾಘೋರಶಿವ। ದೇವ ಗುಣನಿಲಯ ಸರ್ವಾತ್ಮಶಂಭುಗಳಾದ।ಪಾವನರ್ ಭೂತಿಕಂಠಾದಿ ಪೂರ್ವಾಚಾರ್ಯರನ್ನೂ (ಪದ್ಮರಾಜ ಪುರಾಣ 1-11) ಪದ್ಮಣಾಂಕನು ಸೂಚಿಸಿ ಮಣಿದಿರುವನು.

ಈ ಎಲ್ಲ ವಿಚಾರಗಳಿಂದ ಈ ವೀರಮಾಹೇಶ್ವರಾಚಾರಸಂಗ್ರಹದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಶೈವಾಗಮಿಕ ವಿಚಾರಗಳು ಪುರಾತನ ಕಾಲದಿಂದಲೂ ಇದ್ದವುಗಳೇ ಎಂಬುದು ಮಥಿತಾರ್ಥವಾಗಿದ್ದು ಇಲ್ಲಿ ಶ್ರುತಿ-ಸ್ಮೃತಿ ಪುರಾಣೇತಿಹಾಸಗಳಿಂದ ಉಪಬೃಂಹಣ ಮಾಡಲ್ಪಟ್ಟು ಮಂಡಿತಗಳಾಗಿವೆ.

ಈ ಗ್ರಂಥದ ಬಗೆಗೆ ಕನ್ನಡ ವ್ಯಾಖ್ಯಾಕಾರನಾದ ಶ್ರೀಧರಾಂಕನ ಹೇಳಿಕೆ

ಕನ್ನಡ ವ್ಯಾಖ್ಯಾನಕಾರನಾದ ಶ್ರೀಧರಾಂಕನು ಈ ಗ್ರಂಥದ ಬಗೆಗೆ ಗ್ರಂಥಾಂತ್ಯದಲ್ಲಿ ಎಂದರೆ 78ನೆಯ ಅಧ್ಯಾಯ ಪರಿಸಮಾಪ್ತಿಯಾದನಂತರ ಹೀಗೆ ಹೇಳಿರುತ್ತಾನೆ— (ಚ ಪ್ರತಿಯಿಂದ ಉದ್ಧೃತ)

"॥೫೧॥ ಇತಿ ಶ್ರೀ ನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ ಶ್ರೀಮದ್ ವೀರಮಾಹೇಶ್ವರಾಚಾರಸಂಗ್ರಹೇ ಸದಾಚಾರನಿರೂಪಣೇ ವೀರಶೈವಾಗಮಸುಧಾರ್ಣವ-ಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಮಲ್ಲಿಕಾರ್ಜುನಾಚಾರ್ಯಸ್ಯಾನು-ಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾವಿವರಣೇ ಶಿವಭಕ್ತಪೂಜಾ-ಮಾಹಾತ್ಮ್ಯಕಥನೇ ಶ್ರೀಮದ್ವೀರಸ್ಕಂದಸಂವಾದೋ ನಾಮಾಷ್ಟಸಪ್ತತಿತಮೋಽಧ್ಯಾಯಃ ॥ ಅಂತು ಅಧ್ಯಾಯ ೭೮ಕ್ಕಂ ವೃತ್ತ ೩೩೧। ಅಂತು ಸಹ ಗ್ರಂಥ ೮೮೦೦ಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ ॥

ಶಾರ್ದೂಲವೃತ್ತ ॥

ಶ್ರೀಮದ್ಬೊಪ್ಪಣದೇಶಿಕೇಂದ್ರತನಯಃ ಸರ್ವಾಗಮಾರ್ಥೋದಯಃ
ಸಾರಜ್ಞಃ ಶಿವಪಾದಪಂಕಜಲಸದ್ಭೃಂಗಃ ಪ್ರಕಾಶೀಕೃತಃ ॥
ವ್ಯಾಖ್ಯಾಂ ಸದ್ಗುರುಮಲ್ಲಿಕಾರ್ಜುನವಿಭುಃ ಶ್ರೀ ವೀರಮಾಹೇಶ್ವರಾ-
ಚಾರಸ್ಯಾಸ್ತು ಶುಭಂ ತು ತಸ್ಯ ಸುಧಿಯಾ ಯಚ್ಛ್ರೀಧರಾಂಕೇಣ ವಾ ॥೧॥

ಗ್ರಂಥ ॥ ವೀರಮಾಹೇಶ್ವರಾಚಾರಸಂಗ್ರಹಸ್ಯ ಶುಭಾತ್ಮಿಕಾ
ಕರ್ಣಾಟಭಾಷಯಾ ವ್ಯಾಖ್ಯಾ ಜೀಯಾದಾಚಂದ್ರತಾರಕಮ್ ॥೨॥

ಗದ್ಯ ॥ ಇತಿ ನಿಖಿಲಸುರಾಸುರೇಂದ್ರವಿರಿಂಚಿಮುಕುಂದಮಕುಟಮಣಿಕಿರಣ-ಬಿಂಬಚುಂಬಿತಾಂಘ್ರಿನಖೇಂದುಭಗವದಂಬಿಕಾಮುಖಾಂಬುಜಾದಿತ್ಯಪರಮಶಿವಚರಣ-ನಳಿನಾರ್ಚನಕೃತಾರ್ಥೀಕೃತಹೃದಯಃ ಶಿವಾದ್ವೈತಪ [ಥನಿವಾರಿತ]ಸರ್ವಸಂಶಯಃ ಷಟ್ಸ್ಥಲಬ್ರಹ್ಮವಾದೀ ಸುಗುಣಮಣಿಗಣಾಲಂಕೃತಕರ್ಣಾಟದೇಶಜನಾಜ್ಞಾನ-ನಿರ್ಹರಣಾರಾಧ್ಯವರ್ಯಃ ಗೊರಗೋಡಪುರವರಾಧೀಶ್ವರಬೊಪ್ಪಣದೇಶಿಕೇಂದ್ರ-ತನೂಭವಃ ಶ್ರೀಮಲ್ಲಿಕಾರ್ಜುನಾಚಾರ್ಯಃ ಸಕಲವಿದ್ವತ್ಸಭಾಮಧ್ಯೇ 'ಪದವಾಕ್ಯ-ಪ್ರಮಾಣಜ್ಞಂ ವಿಬುಧಜನಕರ್ಣಾಮೃತಸ್ಯಂದಿನಂ ಶ್ರೀಧರಾಂಕಂ ಮಾಂ ಆಲೋಕ್ಯ, 'ಪೂರ್ವಸ್ಮಿನ್ ವೀರಶೈವಾಗ್ರಗಣ್ಯವಿದ್ಯಾಶಂಕಂ ನಾಮದ ರಾಜಪುತ್ರಾನುಮತಾನ್ ಮಾಹೇಶ್ವರಮನಃಕುಮುದವನವಿಕಾಸನಮನೋಲ್ಲಾಸಚಂದ್ರೋದಯವೀರಮಾಹೇ-ಶ್ವರಾಚಾರಸಂಗ್ರಹಂ ನೀಲಕಂಠನಾಗನಾಥಾಚಾರ್ಯಃ ಕಲ್ಪಯಾಮಾಸ। ' ತಚ್ಚಾಷ್ಟ-ಸಹಸ್ರಗ್ರಂಥಂ ಜಗದ್ಧಿತಾರ್ಥಂ ಕರ್ಣಾಟಭಾಷಾವ್ಯಾಖ್ಯಾಕರ್ತವ್ಯೇತ್ಯುದೀರಯಾ-ಮಾಸ। ತಥೇತ್ಯಂಗೀಕೃತ್ಯ ಮಯಾ ಮಂಜುಳಗಿರಾ ವ್ಯಾಕ್ರಿಯತೇ। ಪರಗುಣಪರ-ಮಾಣುಮಪಿಪರ್ವತಾಕಾರಂ ಕೃತವದ್ಭಿರ್ನಿತ್ಯಂ ಸುಖಾತಿಶಯೇನ ಶಿವಕಥಾಮೃತಂ ಪೇಪೀಯಮಾನೈಸ್ತ್ರಿಯಂಬಕಪದಪಂಕೇಜಮಕರಂದಭ್ರಮರಾಯಮಾಣೈಃ ಶಿವಾ-ದ್ವೈತಸುಧಾರ್ಣವತರಂಗಸಂಘಟ್ಟನನಿಮಗ್ನಮಾನಸೈಃ ಪರಮಮಾಹೇಶ್ವರೈರ್ಭವದ್ಭಿಃ ಶ್ರೋತವ್ಯಮ್ ॥೩॥

ಆಶೀರ್ವಾದವೃತ್ತಂ।

ವಿಶ್ವಂ ಯಸ್ಯ ಹೃದಿ ಸ್ಫುರತ್ಯವಿರತಂ ದೇವಪ್ರಸಾದಾದಹೋ
ಜಜ್ಞೇ ಸರ್ವಮಿದಂ ಸುರಾಸುರಗುರೋಶ್ಶಂಭೋಃ ಪ್ರಭಾವಾದಪಿ ॥
[1]ದೇವೇಷು ಪ್ರಥಿತೇಷು ಶಾಸ್ತ್ರನಿಚಯೇಷು ಸ್ತುತ್ಯ ಏವೇತಿ ಸಃ
ಪಾಯಾದ್ವಸ್ಸತತಂ ಮುದಾ ಶುಭಕರಸ್ತ್ರೈಲೋಕ್ಯರಕ್ಷಾಕ್ಷಮಃ ॥೪॥

ಯಚ್ಚಾಪಸ್ತು ಸುರಾಶ್ರಯಸ್ತ್ವವಿರತಂ ಬಾಣಸ್ತು ರಕ್ಷಾಕರಃ
ಸೃಷ್ಟಿಂ ಚಾಪಿ ಕರೋತಿ ಸಾರಥಿರಹೋ ಜ್ಯಾ ಧಾರ್ಯತೇ ಮೇದಿನೀಮ್ ॥
ಯಜ್ಞಾರ್ಥಾಸ್ತುರಗಾಶ್ಚರಾಚರಮಿದಂ ಧತ್ತೇ ರಥಸ್ತ್ವೀದೃಶೋ
ದೇವಸ್ಸರ್ವಜಗತ್ಪತಿಃ ಪ್ರತಿದಿನಂ ತುಷ್ಟ್ಯರ್ಥಮ್ . . . ॥೫॥

ಇದು ಶಿವಭಕ್ತಚಾತಕಚಯಕ್ಕೆ ಮಹಾಭ್ರ ಶಿವೈಕ್ಯಚಂದ್ರಕಾಂ-
ತದ ನಿವಹಕ್ಕೆ ಚಂದ್ರಿಕೆ ಮನೋಹರಭಾಕ್ತಿಕಪದ್ಮವೃಂದಸಂ-
ಪದಕೆ ಖರಾಂಶು ಸಜ್ಜನಸುಚಿತ್ತವನಕ್ಕೆ ವಸಂತ ನಾಡೆ ಸೋ—
ಪೊದವಿದ ವೀರಶೈವಘನತಂತ್ರದ ದೀಪಿಕೆ ಭೂತಳಾಗ್ರದೊಳ್ ॥೬॥

ಹೀಗೆ ತನ್ನ ವ್ಯಾಖ್ಯಾನವನ್ನು ಮುಗಿಸುವಾಗ ಈ ಗ್ರಂಥ ರಚನೆಯಾದ ಬಗೆಗೆ ಮತ್ತು ಈ ಮಹಾಗ್ರಂಥಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆ ಎಂದು ಪ್ರೇರಣೆಯಿತ್ತವರ ಬಗೆಗೆ ವ್ಯಾಖ್ಯಾಕಾರನಾದ ಶ್ರೀಧರಾಂಕನೇ ತಿಳಿಸಿರುವನು.

ಇಲ್ಲಿ ಶ್ರೀಧರಾಂಕನು ತನ್ನನ್ನು 'ಪದವಾಕ್ಯಪ್ರಮಾಣಜ್ಞನೆಂದೂ ವಿಬುಧಜನ ಕರ್ಣಾಮೃತಸ್ಯಂದಿ' ಎಂದೂ ವರ್ಣಿಸಿಕೊಂಡಿರುವನು, ಅಷ್ಟೆ. ತನ್ನ ದೇಶ-ಕಾಲ-ತಂದೆ ತಾಯಿ ಮುಂತಾದ ಪರಿಚಯುಗಳೇನೂ ಇಲ್ಲಿ ಹೇಳಲ್ಪಟ್ಟಿರುವುದಿಲ್ಲ, ತನಗೆ ಕನ್ನಡದಲ್ಲಿ ವ್ಯಾಖ್ಯಾನಮಾಡಲು ಅಜ್ಞೆಯಿತ್ತ ಗೊರಗೋಡಪುರವರಾಧೀಶ್ವರನಾದ ಬೊಪ್ಪಣದೇಶಿಕೇಂದ್ರನ ಪುತ್ರನಾದ ಮಲ್ಲಿಕಾರ್ಜುನಾಚಾರ್ಯನಿಗೆ ಕೊಟ್ಟಿರುವ ವಿಶೇಷಣಗಳಲ್ಲಿ 'ಕರ್ಣಾಟದೇಶಜನಾಜ್ಞಾನನಿರ್ಹರಣಾರಾಧ್ಯವರ್ಯಃ' ಎಂಬ ವಿಶೇಷಣವು ಕನ್ನಡ ದೇಶದ ಜನರ ಉದ್ಧಾರದ ಬಗೆಗೆ ಇರುವ ಈ ಆಚಾರ್ಯನ ಕಳಕಳಿ ಆದರ್ಶಪ್ರಾಯವಾಗಿದೆ. ಜಗದ್ಹಿತಾರ್ಥವಾಗಿ ಈ ಗ್ರಂಥಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆ ಎಂದು ಹೇಳಿರುವುದು ಈ ಗ್ರಂಥದ ಬಗೆಗೆ ಇರುವ ಆಚಾರ್ಯನ ಅತೀವ ಆಸಕ್ತಿಯನ್ನೂ ತೋರಿಸುತ್ತದೆ. ಈ ಬೃಹದ್ಗ್ರಂಥದ ಪರಿಚಯವನ್ನು ಆಚಾರ್ಯನು ವ್ಯಾಖ್ಯಾನಕಾರನಾದ ಶ್ರೀಧರಾಂಕನಿಗೆ ತಿಳಿಸಿರುವಲ್ಲಿನ ''ಪೂರ್ವದಲ್ಲಿ ವೀರಶೈವಾಗ್ರಗಣ್ಯ 'ವಿದ್ಯಾಶಂಕಂ ನಾಮದ ರಾಜಪುತ್ರನ ಅನುಮತಾನುಸಾರವಾಗಿ' ಮಾಹೇಶ್ವರರ

1 ದೇವೇಷು (ಕ.ಪಾಠ.)

ಮನವೆಂಬ ಕನ್ನೈದಿಲೆಯ ವನವಿಕಾಸಕ್ಕೆ ಚಂದ್ರೋದಯ ರೂಪವಾದ 'ವೀರಮಾಹೇಶ್ವರಾಚಾರಸಂಗ್ರಹ'ವನ್ನು ನೀಲಕಂಠನಾಗನಾಥಾಚಾರ್ಯನು ರಚಿಸಿರುವನು. ಆ ಗ್ರಂಥವು ಎಂಟು ಸಾವಿರ ಗ್ರಂಥವನುಳ್ಳುದಾಗಿದೆ. ಈ ಬೃಹದ್ಗ್ರಂಥಕ್ಕೆ ನೀನು ಕನ್ನಡ ವ್ಯಾಖ್ಯಾನವನ್ನು ಬರೆ" ಎಂಬ ಈ ಭಾಗವು ಶಾ|| ಶಕ 1556 (ಕ್ರಿ.ಶ. 1634) ರಲ್ಲಿ ಪ್ರತಿಮಾಡಿರುವ ವ್ಯಾಖ್ಯಾನವಿರುವ 'ಕ' ಸಂಜ್ಞಕವಾದ ಓಲೆಯ ಪ್ರತಿಯಲ್ಲಿಯೂ ಶಾ|| ಶಕ 1583 (ಕ್ರಿ.ಶ. 1661)ರಲ್ಲಿ ಪ್ರತಿಮಾಡಿರುವ ವ್ಯಾಖ್ಯಾನವಿರುವ 'ಚ' ಸಂಜ್ಞಕವಾದ ಓಲೆಯ ಪ್ರತಿಯಲ್ಲಿಯೂ 'ಖ' ಸಂಜ್ಞಕವಾದ (ವ್ಯಾಖ್ಯಾನವಿರುವ) ಓಲೆಯ ಪ್ರತಿಯು ಅಸಮಗ್ರವಾಗಿದ್ದು ತ್ರುಟಿತವಾಗಿ ರಾಜಪುತ್ರನ ಹೆಸರು ಉಕ್ತವಾಗಿರುವ ಭಾಗವು ಲುಪ್ತವಾಗಿ ಉಳಿದ ಭಾಗವು ಅಲ್ಪಸ್ವಲ್ಪ ಅಕ್ಷರಗಳನುಳ್ಳದಾಗಿದೆ. ಅಂತೂ ವ್ಯಾಖ್ಯಾನವಿರುವ ಎಲ್ಲ ಪ್ರತಿಗಳಲ್ಲಿಯೂ ಈ ಅಂಶ ಬಂದಿದೆ.

ಇಲ್ಲಿ "ನೀಲಕಂಠನಾಗನಾಥಾಚಾರ್ಯನು ಓರ್ವ 'ವೀರಶೈವಾಗ್ರಗಣ್ಯನಾದ ವಿದ್ಯಾಶಂಕಂ ನಾಮದ ರಾಜಪುತ್ರನ' ಇಚ್ಛೆಯಿಂದಾಗಿ ಈ ಗ್ರಂಥವನ್ನು ಬರೆದನು" ಎಂಬಂಶ ವ್ಯಾಖ್ಯಾಕಾರನ ಗದ್ಯಭಾಗದಿಂದ ತಿಳಿದುಬರುತ್ತದೆ. ಆದರೆ ಆ ವೀರಶೈವ ರಾಜಪುತ್ರನ ಹೆಸರು 'ವಿದ್ಯಾಶಂಕಂ ನಾಮದ ಎಂದೇ ಎಲ್ಲ ಓಲೆಗಳಲ್ಲಿಯೂ ವ್ಯತ್ಯಾಸವಿಲ್ಲದೆ ಬರೆಯಲ್ಪಟ್ಟಿದ್ದು 'ವಿದ್ಯಾಶಂಕಂ' ಎಂಬ ಪದ ಅಸ್ಪಷ್ಟಾರ್ಥವುಳ್ಳುದಾಗಿದೆ. 'ನಾಮದ' ಎಂಬುದು ಕನ್ನಡ ಪದದಂತಿದೆ.' 'ವಿದ್ಯಾಶಂಕ ನಾಮಕ' ಇಲ್ಲವೇ 'ವಿದ್ಯಾ ಸಂಕಮ ನಾಯಕ' ಎಂದಿರಬಹುದೇ? ಹೀಗೆ ತಿಳಿಯಲು ಸಂದಿಗ್ಧವಾಗಿದೆ. ಈ ಗ್ರಂಥ ಬರೆಸಿದ ಈ ವೀರಶೈವರಾಜಪುತ್ರನಾರು? ಇವನ ನೈಜ ಹೆಸರೇನಿರಬಹುದು? ಎಂಬುದು ಸಂಶೋಧನಾರ್ಹ ವಿಚಾರವಾಗಿದೆ.

ಈ ಗ್ರಂಥದ ಬಗ್ಗೆ ಆಂಧ್ರಾನುವಾದಕನಾದ
ಪರ್ವತ ಮಂತ್ರಿ ಲಿಂಗನಾಮಾತ್ಯನ ಹೇಳಿಕೆ

ತೆನುಗಿನಲ್ಲಿ ಈ ಗ್ರಂಥವನ್ನು ಅನುವಾದ ಮಾಡಿರುವ ಪರ್ವತಮಂತ್ರಿ ಲಿಂಗನಾಮಾತ್ಯನು— × × × × × × × ಊರ್ಧ್ವಲೋಚನುಡು |
ವಿವಿಧವೇದಜ್ಞುಂಡು ವಿಜ್ಞಾನಕರುಡು | ಅವನಿಲಿಂಗಾಕಾರವೈನ ನಿಸ್ಕಲುಡು |
ಸದ್ಗುಣಾಚಾರುಂಡು ಸರ್ವಪೂಜಿತುಡು | ಮದ್ಗುರುಂಡೈನ ಶ್ರೀಮಲ್ಲಿಕಾರ್ಜುನುಡು |
ಮುದಮುನ ಪ್ರತ್ಯಕ್ಷ ಮೂರ್ತಿಯೈ ನಿಲಿಚಿ | ಸದಮಲಾತ್ಮಕ ಯಾಲ
'ಶಂಕ (ಶಂಕ್ಕ) ನೊಂದ್ವಿ (ದ್ವೈ)ರವು'

ಹರ (ರು) ದಿವ್ಯನಾಮುಸಂಸ್ಮರಣ ಮಾತ್ರಮುನ! ಪರಮಾತ್ಮ ಸಾಯುಜ್ಯ ಪದಮು
ಸಿದ್ಧಿಂಚು |
ಮಾನ್ಯೈನ ಸಪ್ತಸಂತಾನಂಬುಲಂದು | ಪೂನಿ ಕಾವ್ಯ [ವ್ಯ ?] ಮು ಶೇಯು
ಪುಣ್ಯಮಗ್ಗಲಮು |
ಸಿದ್ಧಿಂಚು ಗಾವುನ ಕ್ಷಿತಿಬೂರ್ವಮಂದು | ಶುದ್ಧಾತ್ಮುಡೈನ ಭೂಸುರವರ್ಯುಡಯಿನ |
ಶ್ರೀಗುರುಪ್ರಿಯುಡೈನ 'ಶ್ರೀ ನೀಲಕಂಠು | ನಾಗನಾಥಾಚಾರ್ಯ
ನಾಮಾಂಕುಡೆಲಮಿ' ? |
ಸಕಲಶ್ರುತಿಸ್ಮೃತಿಶಾಸ್ತ್ರ ಪುರಾಣ | ನಿಕರಂಬುಲಂದುನ್ನ ನಿಟಲಾಕ್ಷುಮಹಿಮ |
ಅಧ್ಯಾಯಮುಲುದಿವಿಚಿಯಾದಿ ಸಂಸ್ಕೃತಮು | ಹೃದ್ಯಮ್ಮೈ
ಸಕಲವೇದೋಕ್ತಂಬು ನೊಂದ (?) |
ವೀರಮಾಹೇಶ್ವರಾಚಾರ ಸಂಗ್ರಹಮು | ವೇರ ಬ್ರವರ್ತಿಲ್ಲ
ಜೇರ್ಚಿ (ಜ್ಯೈರ್ಚಿ) ಪುಣ್ಯಾಲಕು |
ತೆರಗೊಪ್ಪ ವಿಜ್ಞಾನದೀಪಂಬು ಜೇಶೇ | ನರು (ವ ?) ದಾರ
ಚೆಪ್ಪೆಂದು ನಪ್ಪುರಾಣಂಬು (ಬ)|
ಕೃ (ಧೃ ?) ತಿನಾಂಧ್ರಭಾಷನು ಕೃತಿಶೇಯುದೇನಿ | ಅತುಲಿತ
ಸುಜ್ಞಾನಮ(ಮು)ದಿನೀಕುಗಲ(ಲು)ಗು |
ಕಾಮಿಂಚಿನಟ್ಲನಿ (ನ ಲಕ್ಷ್ಮನಿ) ಕಾವ್ಯಂಬುವೆಲ್ಲ | ನಾ
ಮಹೇಶ್ವರುಡಿಚ್ಚುನದಿ ನಿಶ್ಚಯಂಬು |
ಅನುಚು ಶ್ರೀಗುರುನಾಥುಡತ್ಯಂತ ಕರುಣ | ನನುರಾಗಮುನ
ಬ್ರೀತಿ (ಪ್ರೀತಿ) ನಾಜ್ಞ ಶೇಯುಟಯು |
ಗುರುನಾಥುನಾಜ್ಞನು ಗುರುನಿ ಸತ್ಕೃಪನು ಗುರುವುನು
ಗುರುವೈನ ಗುರುಬ್ರಸ್ತುತಿಂತು |
ನಾದೇವದೇವು ಮಹಾತ್ಮ್ಯಂಬುದೆಲಸಿ | ಸಾಧಿಂಚಿ ವರ್ಣಿಂಪ ಶಕ್ಯಂಬುಗಾಕ |"

ಎಂದು ತನ್ನ ದ್ವಿಪದ ಗ್ರಂಥದ ಅನುವಾದದ ಅವತಾರಿಕೆಯಲ್ಲಿ ತಿಳಿಸಿರುವ ವಿಚಾರಗಳೂ ಕನ್ನಡ ವ್ಯಾಖ್ಯಾನಕಾರನ ಹೇಳಿಕೆಯಂತೆಯೇ ಇದ್ದು ಅಸ್ಪಷ್ಟವಾಗಿಯೇ ಇವೆ. ಇಲ್ಲಿ ಆಂಧ್ರಕವಿಯು ಊರ್ಧ್ವಲೋಚನ ಪಡೆದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿಷ್ಯನೆಂದೂ ಹೇಳಿಕೊಂಡಿರುವನು. ಮದುಗ್ಗರುಂಡೈನ ಶ್ರೀಮಲ್ಲಿಕಾರ್ಜುನುಡು ಎಂಬುದು ಕನ್ನಡ ವ್ಯಾಖ್ಯಾನಕಾರನು ತಿಳಿಸಿರುವ ಗೊರಗೋಡಿನ ಮಲ್ಲಿಕಾರ್ಜುನನಾಗಿರಬೇಕು. ಹಾಗೆ ಅನುವಾದಕನು ತಿಳಿಸಿಲ್ಲ. ಸಾಕ್ಷಾತ್ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿಷ್ಯನಾದಲ್ಲಿ 12ನೆಯ ಶತಕದವನಾಗಬೇಕಾಗುತ್ತದೆ ಅನುವಾದಕ. ಕೇವಲ ಗುರುಭಾವನೆಯಿಂದ ಸ್ಮರಿಸಿರುವನೆಂದಿಟ್ಟುಕೊಂಡಲ್ಲಿ ಗೊರಗೋಡಿನ ಮಲ್ಲಿಕಾರ್ಜುನನೆಂದು ಸ್ಪಷ್ಟವಾಗಿ ಹೇಳಿಲ್ಲವಾಗಿ ತೊಡಕಾಗಿರುತ್ತದೆ. ಇಲ್ಲಿಯೂ

ಶಂಕ (ಶಂಕ್ಕ) ನೊಂದ್ನಿ(ದ್ನೆ)ರವು ಎಂಬ ಪದವಿದೆ. **ವಿದ್ಯಾಶಂಕನೆಂದೇನೂ** ಇಲ್ಲಿ ಹೇಳಿಲ್ಲ. ಹೀಗಾಗಿ ಅನುವಾದಕನಾದ ಪರ್ವತ ಮಂತ್ರಿಲಿಂಗನಾಮಾತ್ಯನ ಹೇಳಿಕೆಯೂ ಸಂದಿಗ್ಧವಾಗಿಯೇ ಇದೆ. 'ಕ್ಷಿತಿಬೂರ್ವಮಂದು' ಇತ್ಯಾದಿಯಾಗಿ ಅನುವಾದ ಮಾಡಿರುವ ಧಾಟಿ ನೋಡಿದರೆ ಕನ್ನಡ ವ್ಯಾಖ್ಯಾನಕಾರನ ಹೇಳಿಕೆಯನ್ನೇ ಅನುಕರಿಸಿ ಚಿತ್ರಿಸಿ ದಂತಿದೆ. ಈ ಕನ್ನಡ ವ್ಯಾಖ್ಯಾನಾನಂತರವೇ ತೆನುಗಿನಲ್ಲಿ ಅನುವಾದವಾದಂತಿದೆ.

ನೀಲಕಂಠನಾಗನಾಥಾಚಾರ್ಯನ ಸ್ಥಳ–ಕಾಲಾದಿಗಳ ಸಮೀಕ್ಷೆ

ಈತನು ಗ್ರಂಥಾದಿಯಲ್ಲಿ ಶ್ರೀಗುರುನುತಿಮಾಡುವಾಗ 'ನಮೋ ಮುಳ್ವಾಯಿ ಸೋಮೇಶಗುರವೇ (1–2) ಎಂಬುದಕ್ಕೆ ವ್ಯಾಖ್ಯಾನಕಾರನು 'ಮುಳುವಾಗಿಲ ಸೋಮೇಶ್ವರ ಗುರುರಾಯಂಗೋಸ್ಕರ ನಮಸ್ಕಾರವು' ಎಂದೂ 'ಶ್ರೀಮನ್ಮುಳ್ವಾಯಿ ಸೋಮೇಶಪಾದಾಬ್ಜಹಿತಚೇತಸಾ (1-25)' ಎಂಬುದಕ್ಕೆ **ಒಪ್ಪುತ್ತಂವಿದ್ದ** ಮುಳುವಾಗಿಲ ಸೋಮೇಶ್ವರಲಿಂಗದ ಪಾದಕಮಲದಲ್ಲಿ ಇರಿಸಲ್ಪಟ್ಟ ಚಿತ್ತವನುಳ್ಳಂಥಾ 'ನೀಲಕಂಠನಾಗನಾಥಾರ್ಯಧೀಮತಾ = ನೀಲಕಂಠನಾಗನಾಥಾಚಾರ್ಯನೆಂಬ ವಿದ್ವಾಂಸನ್ನುವಿನಿಂದ' ಎಂದೂ ವ್ಯಾಖ್ಯಾನಮಾಡಿರುವದರಿಂದ, ವ್ಯಾಖ್ಯಾನಕಾರನನ್ನು ಅವಲಂಬಿಸಿ ಹೇಳಬೇಕೆಂದರೆ, ಈ ನೀಲಕಂಠನಾಗನಾಥಾಚಾರ್ಯನಿಗೆ ಮುಳವಾಗಿಲಲ್ಲಿದ್ದ ಸೋಮೇಶ್ವರನೆಂಬ ಗುರುರಾಯನೊಬ್ಬನಿದ್ದನೆಂದೂ, ನೀಲಕಂಠನಾಗನಾಥಾಚಾರ್ಯನು ಮುಳವಾಗಿಲ ಸೋಮೇಶ್ವರಲಿಂಗದ ಅನನ್ಯ ಭಕ್ತನಾಗಿದ್ದನು ಎಂದೂ ತಿಳಿದುಬರುತ್ತದೆ. ಕೋಲಾರಜಿಲ್ಲೆಯ ಮುಳಬಾಗಿಲಿಗೆ ಮುಳವಾಯಿ ಮುಳುವಾಯಿ ಎಂಬ ಹೆಸರುಗಳೂ ಶಾಸನಗಳಲ್ಲಿವೆ. ವೀರ ಕಂಪಣರಾಯಚರಿತದಲ್ಲಿ ಗಂಗಾದೇವಿಯು ಈ ಊರಿಗೆ 'ಕಂಟಕಾನನ'ವೆಂದು ಹೇಳಿರುವಳು. ಇಲ್ಲಿ ಸೋಮೇಶ್ವರ ದೇವಾಲಯವೂ ಇದೆ. ಮೊಟ್ಟಮೊದಲಲ್ಲಿಯೇ ಸೋಮೇಶಗುರುರಾಯನನ್ನು ನುತಿಸಿರುವುದರಿಂದಲೂ 'ಮುಳ್ವಾಯಿ ಸೋಮೇಶ (ಲಿಂಗ) ಪಾದಾಬ್ಜಹಿತಚೇತಸಾ' ಎಂದು ತನಗೆ ವಿಶೇಷಣವನ್ನು ಕೊಟ್ಟುಕೊಂಡಿರುವುದರಿಂದಲೂ ಬಹುಶಃ ಈ ನೀಲಕಂಠನಾಗನಾಥಾಚಾರ್ಯನು ಇದೇ ಮುಳಬಾಗಿಲವನೆಂದು ಊಹಿಸಬಹುದಾಗಿದೆ.

ಕೆರೆಯ ಪದ್ಮರಸರ ಜೊತೆಗೂಡಿದ್ದ ವಿಬುಧರಲ್ಲಿ ಜಗದಾರಾಧ್ಯನಾಗಾರ್ಯ ಹಾಗೂ ನೀಲಕಂಠನಾಗಾರ್ಯ ಅಥವಾ ನೀಲಕಂಠನಾಗನಾಥಾಚಾರ್ಯರೀರ್ವರು ತರುಣವಿಬುಧರಾಗಿದ್ದರೆಂಬ ವಿಚಾರ—

ಉದ್ಭಟ ಕಾವ್ಯವನ್ನು ಬರೆದಿರುವ ಸೋಮರಾಜನು ಕ್ರಿ.ಶ. 1160ರಲ್ಲಿದ್ದ ಶ್ರೀ ಅಲ್ಲಮಪ್ರಭುದೇವರ ಮಹಾಭಕ್ತ. ಬಸವೇಶ್ವರಾದಿಗಳಲ್ಲಿಯೂ ಅತೀವ ಭಕ್ತಿಯನ್ನು ತೋರ್ಪಡಿಸಿರುವನು. ತನ್ನ ಇಳಿ ವಯಸ್ಸಿನಲ್ಲಿ ಕಮನೀಯವಾದ ಈ

ಕಾವ್ಯವನ್ನು ಶಾಲಿವಾಹನಶಕ 1141ನೆಯ ಚಿತ್ರಭಾನು ಸಂವತ್ಸರದಲ್ಲಿ ಎಂದರೆ, ಕ್ರಿ.ಶಕ. 1222ರಲ್ಲಿ ಬರೆದು ಅಲ್ಲಮಗಂಗರ್ಪಿತಮಾಡಿ ಮುಗಿಸಿರುವುದಾಗಿ ತಾನೇ ತನ್ನ ಗ್ರಂಥಾಂತ್ಯ ಪದ್ಯ (ಆಶ್ವಾಸ 12-146)ದಲ್ಲಿ ತಿಳಿಸಿರುವನು. ಈ ಕಾವ್ಯವು 1921 ರಲ್ಲಿ ಆರ್. ಶ್ಯಾಮಶಾಸ್ತ್ರಿಗಳಿಂದ ಸಂಪಾದಿತವಾಗಿ ಮೈಸೂರು ಓರಿಯಂಟಲ್ ಲೈಬ್ರರಿ ಯಿಂದ ಪ್ರಕಟವಾಗಿದೆ. ಈ ಗ್ರಂಥದ ಆದಿಮ ಭಾಗದಲ್ಲಿ 'ಪ್ರಸ್ಥಾನೀಕ ಕಥಾರ್ಣ-ವೇಂದು ಹರಿದೇವಾಚಾರ್ಯ (ಹರಿಹರದೇವ), ವೃಷಭಸ್ತವಾಮರಮಹೀಜಾರಾಮನಾದ ಸೋಮ ಎಂದರೆ ಪಾಲ್ಕುರಿಕೆ ಸೋಮನಾಥ, ಮತ್ತು ವಿಮಲಜ್ಞಾನ ಸುದೀಪಿಕಾ-ಸ್ಫುರಿತ ಚೇತಸ್ಸದ್ಮನಾದ ಪದ್ಮ ಎಂದರೆ ಕೆರೆಯ ಪದ್ಮರಸ ಈ ಮೂವರನ್ನು ಬಲ ಗೊಂಡು ಈ ಕಾವ್ಯವನ್ನು ಹೇಳುವುದಾಗಿ (ಆ. 1-9) ತಿಳಿಸಿರುವನು. ಈ ಸೋಮ ರಾಜನು ಬಸವೇಶ್ವರಾದಿ ಶರಣರ ಸಮಕಾಲೀನನಾಗಿ ಶತಾಯುವಾಗಿರುವನು. ಇವನಿಂದ ನುತರಾದ ಹರಿದೇವಾಚಾರ್ಯ-ಪಾಲ್ಕುರಿಕೆ ಸೋಮ-ಕೆರೆಯಪದ್ಮರಸರೂ ಸಹ ಬಸವಾದಿ ಶರಣರ ಸಮಕಾಲೀನರಲ್ಲದಿದ್ದರೂ ಅತೀವ ಸಮೀಪಕಾಲದವರಾಗಿ ಕ್ರಿ.ಶ. 1222ರ ಕಾಲಕ್ಕೂ ಮುನ್ನವೇ ಪ್ರಖ್ಯಾತರಾಗಿದ್ದರು ಎಂಬುದು ನಿರ್ವಿವಾದವಾದ ಅಂಶವೆಂದು ಈ ಗ್ರಂಥದಿಂದ ತಿಳಿಯಬಹುದಾಗಿದೆ.

ನರಸಿಂಹಬಲ್ಲಾಳನ (ಕ್ರಿ.ಶ. 1141-1179) ಆಸ್ಥಾನದಲ್ಲಿ ತ್ರಿಭುವನತಾತ ನೆಂಬವನೊಡನೆ ವಾದ ಮಾಡಲು ದೋರಾಂಬುಧಿಗೆ (ದ್ವಾರಸಮುದ್ರ-ಹಳೇಬೀಡು) ಸುತನಾದ ಕುಮಾರಪದ್ಮರಸನೊಂದಿಗೆ ಹೊರಟ ಕೆರೆಯ ಪದ್ಮರಸರೊಂದಿಗೆ ಹೋಗಿದ್ದ ವಿದ್ವಜ್ಜನರ ಹಾಗೂ ಅವರ ಹೇಳಿಕೆಗಳ ಪಟ್ಟಿಯನ್ನು ಕೆರೆಯಪದ್ಮರಸರ ಸುತನಾದ ಕುಮಾರಪದ್ಮರಸನು ತನ್ನ 'ಸಾನಂದ ಚರಿತೆಯ ಕಥಾಗರ್ಭಸಂಧಿ'ಯಲ್ಲಿಯೂ, ಕೆರೆಯ ಪದ್ಮರಸರಿಂದ ೮ನೆಯ ತಲೆಮಾರಿನವನಾಗಿ ವಂಶಜನೇ ಆದ ಕವಿಪದ್ಮಣಾಂಕನು (ಕ್ರಿ.ಶ. 1385) ತನ್ನ 'ಪದ್ಮರಾಜಪುರಾಣ'ದಲ್ಲಿಯೂ ಕೊಟ್ಟಿರುವರು. ಈ ಎರಡು ಗ್ರಂಥ ಗಳಲ್ಲಿಯೂ ವಿದ್ವಜ್ಜನರ ಕ್ರಮಾಂಕವು ಸಮಾನವಾಗಿಯೇ ಇದೆ. ಸಾನಂದ ಚರಿತೆ ಯಲ್ಲಿ 'ಜಗದಾರಾಧ್ಯ ನಾಗಾರ್ಯನು' ಪಟ್ಟಿಯಲ್ಲಿ ಬಂದಿಲ್ಲವಾದರೂ ಐದನೆಯ ವಿಶ್ವಣ್ಣಗಳ—

ಸಾನಂದಚರಿತಂ ಶೈವಾದ್ವೈತಂ ಧೂತಮತಾಂತರಂ।
ಶಿವಸಾಕಾರಸಿದ್ಧಾಂತಂ ಪದ್ಮರಾಜೋ ವ್ಯಚೀಕರತ್ (9)
ಹರಸಾಕಾರಸಿದ್ಧಾಂತಂ ಸಾನಂದಚರಿತಂ ಸತಾಮ್।
ಕಥಯನ್ನಾಗಿದೇವಾರ್ಯಃ ಶಿವಾಯ ಜಯತಾದಿಹ (10)
ಶ್ರೀಮದ್ದೇಶಿಕಪದ್ಮರಾಜಚರಿತಂ ಸಾಕಾರ ಸಿದ್ಧಾಂತಕಂ।
ಶೈವಾದ್ವೈತಮಶೇಷದುರ್ಮತಕುಲಧ್ವಾಂತಪ್ರಭಾವಲ್ಲಭಂ।

ಸಾನಂದಸ್ಯ ಚರಿತ್ರಮತ್ರ ಜಗತಿ ಪ್ರಖ್ಯಾಪಯಂತಂ ಮುದಾ |
'ನಾಗಾರ್ಯಂ' ಸಮವತ್ವಶೇಷ 'ಜಗದಾರಾಧ್ಯಂ' ಭವಾನೀಧವಃ (11)

ಎಂಬ ಹೇಳಿಕೆಯಲ್ಲಿಯೂ

ಎಂಟನೆಯವರಾದ ಹಂಪೆಯ ರಾಮಣ್ಣಗಳ—

'ಪರವಾದಿಧ್ವಾಂತಸೂರ್ಯಂ ಕೆರೆಯ ಪದುಮರಾಜಂ ಸ್ವಗುರ್ವಾಜ್ಞೆಯಿಂ |
ದೀಶ್ವರ ಭಕ್ತರ್ ಮೆಚ್ಚೆಯಾಹಾ ವಿರಚಿಸಿದ ಶಿವಾದ್ವೈತ ಸಾಕಾರ ಸಿದ್ಧಾಂ |
ತರಸಂ ಸಾನಂದಚಾರಿತ್ರಮನೆಸಸರಿಸುತ್ತಿರ್ಪುದೀಕ್ಷೋಣಿಗೆಂದುಂ |
ಗುರುಭಕ್ತಂ ಕಾರಣಾತ್ಮಂ ವರಗುಣಿ 'ಜಗದಾರಾಧ್ಯನಾ ನಾಗಿದೇವಮ್' (16)

ಎಂಬ ಹೇಳಿಕೆಯಲ್ಲಿಯೂ, ಹೀಗೆಯೇ ಸಾನಂದಚರಿತೆ-ಪದ್ಮರಾಜಪುರಾಣಗಳಲ್ಲಿಯೂ ಈ ಜಗದಾರಾಧ್ಯನಾಗಿದೇವನ ಹೆಸರು ಬಂದಿದ್ದು, ಉಭಯ ಗ್ರಂಥಗಳಲ್ಲಿಯೂ ಕೆರೆಯಪದ್ಮರಸರೊಡನಿದ್ದ 12 ಮಂದಿ ಶೈವ ವಿದ್ವಾಂಸರ ಬಗೆಗೆ ಏಕಾಭಿಪ್ರಾಯವಿದೆ. ಪದ್ಮರಾಜಪುರಾಣದಲ್ಲಿ 'ಜಗದಾರಾಧ್ಯನಾಗಿದೇವೋತ್ತಮು' ಎಂದು ಹೇಳಿದೆ. ಗುರುಭಕ್ತನೂ ಕಾರಣಾತ್ಮನೂ ವರಗುಣಿಯೂ ಆದ ಈತನು ಸಾನಂದಚರಿತೆಯನ್ನು ಸಜ್ಜನರಲ್ಲಿ ಪ್ರಚಾರಮಾಡುತ್ತಾ ಪ್ರಖ್ಯಾತಿಗೊಳಿಸುತ್ತಿದ್ದನು ಎಂಬುದರಿಂದ ಇವನು ಕೆರೆಯ ಪದ್ಮರಸರ ಜೊತೆಗೂಡಿ ಇದ್ದ ತರುಣವಿಬುಧನೆಂದು ತಿಳಿಯುತ್ತದೆ.

ಒಟ್ಟಾಗಿ, ಸಾನಂದ ಚರಿತೆಯಲ್ಲಿ ಜಗದಾರಾಧ್ಯವಿಶೇಷಣವಿಲ್ಲದೇ ಕೇವಲ 'ನಾಗಿದೇವಾರ್ಯ' 'ಜಗದಾರಾಧ್ಯನಾಗಾರ್ಯ' 'ಜಗದಾರಾಧ್ಯನಾಗಿದೇವ' ಪದ್ಮರಾಜಪುರಾಣದಲ್ಲಿ 'ಜಗದಾರಾಧ್ಯನಾಗಿದೇವೋತ್ತಮು' ವೀರಮಾಹೇಶ್ವರಾಚಾರಸಂಗ್ರಹದಲ್ಲಿ 'ಜಗದಾರಾಧ್ಯನಾಗೇಶಗುರು' ಎಂಬುದಾಗಿ ಅಲ್ಪಸ್ವಲ್ಪ ವ್ಯತ್ಯಾಸದಿಂದ ಪ್ರಯೋಗಿಸಿರುವ ಹೆಸರುಗಳೆಲ್ಲಾ, ಹೇಗೆ ಶ್ರೀ ಬಸವಣ್ಣನವರೊಬ್ಬರಿಗೇ 'ಬಸವ-ಬಸವಣ್ಣ-ಬಸವಿದೇವ-ಬಸವೇಶ್ವರ-ಬಸವಲಿಂಗ' ಎಂಬ ಹೆಸರುಗಳು ಬಂದಿರುವುವೋ ಹಾಗೆಯೇ ಈ ಹೆಸರುಗಳೂ ಜಗದಾರಾಧ್ಯ ನಾಗಿದೇವನೊಬ್ಬನಿಗೇ ಸಂಬಂಧಿಸಿಕೊಂಡು ಬಂದಿವೆ.

ವೀರಮಾಹೇಶ್ವರಾಚಾರಸಂಗ್ರಹಕಾರನಾದ ನೀಲಕಂಠನಾಗನಾಥಾಚಾರ್ಯನು ತನ್ನ ಗ್ರಂಥದ ಆದಿಮಭಾಗದಲ್ಲಿ '**ವ್ಯಾಕರೋತ್**' ಯಃ 'ಶಿವಜ್ಞಾನಸಮುಚ್ಚಯಮ-ಕಲ್ಮಷಂ | ಜಗದಾರಾಧ್ಯನಾಗೇಶಗುರುಂ ತಂ ಸತತಂ ಭಜೇ' (ಅ. 1-19) ಎಂದು ನುತಿಸಿರುವ 'ಜಗದಾರಾಧ್ಯವಿಶೇಷಣಯುಕ್ತನಾದ ನಾಗೇಶಗುರುವೂ ಮೇಲ್ಕಂಡ ಜಗದಾರಾಧ್ಯ ನಾಗಿದೇವನೂ ಭಿನ್ನವ್ಯಕ್ತಿಗಳಾಗದೇ ಒಬ್ಬನೇ ಆಗಿದ್ದಿರಬೇಕು. ಈ ಜಗದಾರಾಧ್ಯನಾಗೇಶಗುರುವು 'ಶಿವಜ್ಞಾನಸಮುಚ್ಚಯಃ' ಎಂಬ ಗ್ರಂಥವನ್ನು

ರಚಿಸಿದನು ಅಥವಾ ಆ ಗ್ರಂಥವನ್ನು ವ್ಯಾಖ್ಯಾನಿಸಿವನು ಎಂಬುದೊಂದು ಇಲ್ಲಿನ ಹೊಸ ವಿಶೇಷಾಂಶ. ವ್ಯಾಖ್ಯಾನಕಾರನು ತನ್ನ ಗ್ರಂಥಾಂತ್ಯದ ಹೇಳಿಕೆಯಲ್ಲಿ 'ಮಯಾ ಮಂಜುಳಗಿರಾ ವ್ಯಾಕ್ರಿಯತೇ' ಎಂಬಲ್ಲಿ ವ್ಯಾಖ್ಯಾನ ಮಾಡಲ್ಪಡುತ್ತಿದೆ ಎಂದು ಹೇಳಿರುವುದರಿಂದ ಈ ಸಂದೇಹ ಉಂಟಾಗಿದೆ.

ನೀಲಕಂಠನಾಗನಾಥಾಚಾರ್ಯನೂ ಈ ಜಗದಾರಾಧ್ಯ ನಾಗಿದೇವನಂತೆ ಕೆರೆಯ ಪದ್ಮರಸರ ಜೊತೆಗಿದ್ದ ತರುಣವಿಬುಧನೆಂಬ ವಿಚಾರ

ಪದ್ಮರಾಜಪುರಾಣದಲ್ಲಿ ಮಾತ್ರ (ಸಂ. 9–21) ಕೆರೆಯ ಪದ್ಮರಸರ ವಾದ ಕಾಲದಲ್ಲಿ ಜೊತೆಗಿದ್ದ ವಿದ್ವಾಂಸರ ಪಟ್ಟಿಯಲ್ಲಿ 'ಉದ್ಧತಶಾಸ್ತ್ರಿನಿಕರಭಂಜನ–ನಾಗನಾಥಾರ್ಯ' ಎಂಬ ಹೊಸ ಹೆಸರೊಂದು ಬಂದಿದೆ. ಸಾನಂದಚರಿತೆಯ ಪಟ್ಟಿಯಲ್ಲಿ ಬಂದಿರುವುದಿಲ್ಲ. ಈ ಪುರಾಣಕಾರನಾದ ಪದ್ಮಣಾಂಕನಿಗೆ (ಕ್ರಿ.ಶ.ಸು. 1385) ನೀಲಕಂಠನಾಗನಾಥಾಚಾರ್ಯನ ಮತ್ತು ಆತನ ಗ್ರಂಥವಾದ ವೀರಮಾಹೇ–ಶ್ವರಾಚಾರಸಂಗ್ರಹದ ಪೂರ್ಣ ಮಾಹಿತಿ ಗೊತ್ತಿದೆ. ಈ ತನ್ನ ಪುರಾಣದಲ್ಲಿ ನೀಲಕಂಠ ನಾಗನಾಥಾಚಾರ್ಯನು ನುತಿಸಿರುವ ಕೆಲ ಗ್ರಂಥಕಾರರ ಹೆಸರುಗಳನ್ನೂ ಕೂಡಿಸಿ–ಕೊಂಡೇ

" ವೀರಮಾಹೇಶ್ವರಾಚಾರಸಂಗ್ರಹಶಾಸ್ತ್ರ |
ಕಾರನೆನಿಸಿದ 'ನೀಲಕಂಠನಾಗಾರ್ಯಂಗೆ | '
ಸಾರತರ ಬಸವರಾಜೀಯಮಂ ನೆಗಳ್ದ ಪಾಲ್ಕುರಿಕೆ ಸೋಮೇಶ್ವರಂಗೆ ||

ಚಾರುಸಾರೋದ್ಧಾರಮಂ ಪಡೆದ ಲಕ್ಷ್ಮೀಧ |
ರಾರಾಧ್ಯಪತಿ ಗುರುಶಿವಜ್ಞಾನದೀಪಿಕೆಯ |
ನೋರಂತೆ ರಚಿಸಿದನುಪನು ಮಲ್ಲಿಕಾರ್ಜುನಾಚಾರ್ಯಂಗೆ ವಂದಿಸುವೆನು ||

(ಪ. ಪು. ಸಂ. 1-12) ಎಂಬ ಪದ್ಯವನ್ನು ರಚಿಸಿ ನುತಿಸಿರುವನು. ಇಲ್ಲಿಯೂ 'ನೀಲಕಂಠನಾಗನಾಥಾಚಾರ್ಯನ' ಗ್ರಂಥೋಲ್ಲೇಖಮಾಡುತ್ತಲೂ ಹೆಸರನ್ನು ಸ್ವಲ್ಪ ವ್ಯತ್ಯಾಸದಿಂದ '**ನೀಲಕಂಠನಾಗಾರ್ಯ**' ಎಂದು ಸಂಕ್ಷಿಪ್ತವಾಗಿ ಪ್ರಯೋಗಿಸಿರುವನು. ನೀಲಕಂಠನಾಗನಾಥಾಚಾರ್ಯನೂ ಸಹ ತನ್ನ ವೀರಮಾಹೇಶ್ವರಾಚಾರ–ಸಂಗ್ರಹದ ಅ. 1–25ರಲ್ಲಿ ತನ್ನ ಹೆಸರನ್ನು 'ನೀಲಕಂಠನಾಗನಾಥಾಚಾರ್ಯ'ನೆಂದೂ ಹೇಳಿಕೊಂಡಿರುವನು. ಕೆರೆಯ ಪದ್ಮರಸರೊಡಗೂಡಿ ವಾದಕಾಲಕ್ಕೆ ಹೋಗಿದ್ದ ವಿಬುಧರಲ್ಲಿ 'ಉದ್ಧತಶಾಸ್ತ್ರಿನಿಕರಭಂಜನ ನಾಗನಾಥಾರ್ಯ'ನೂ ಒಬ್ಬ ಎಂದು

(ಸಂ. 9-21) ಕೆರೆಯಪದ್ಮರಸರ ವಂಶಜನಾಗಿ ಕೆರೆಯಪದ್ಮರಸರಿಂದ 8ನೆಯ ತಲೆಯವ-ನಾಗಿರುವ ಕವಿಪದ್ಮಣಾಂಕನು ಉಲ್ಲೇಖಿಸಿರುವ 'ನೀಲಕಂಠನಾಗಾರ್ಯ'ನೆಂಬ ಈ ಹೆಸರು ಈ ವೀರಮಾಹೇಶ್ವರಾಚಾರ ಸಂಗ್ರಹಕಾರನಾದ 'ನೀಲಕಂಠನಾಗನಾಥಾ-ಚಾರ್ಯನ' ಸಂಕ್ಷಿಪ್ತನಾಮವೆಂದೇ ಇಟ್ಟುಕೊಂಡಲ್ಲಿ ಈ ವೀರಮಾಹೇಶ್ವರಾಚಾರ-ಸಂಗ್ರಹಕಾರನಾದ ನೀಲಕಂಠನಾಗನಾಥಾಚಾರ್ಯನೂ ಕೆರೆಯಪದ್ಮರಸರಕಾಲದ ತರುಣವಿಬುಧನೆಂದು ವಿದಿತವಾಗುತ್ತದೆ. ತನ್ನ ವೀರಮಾಹೇಶ್ವರಾಚಾರಸಂಗ್ರಹದಲ್ಲಿ ಕೆರೆಯಪದ್ಮರಸ-ಹರಿಹರ-ಪಾಲ್ಕುರಿಕೆ ಸೋಮನಾಥರನ್ನು ತಾನೂ ಹೆಸರಿಸಿ ನಮಿಸಿರು-ವುದರಿಂದ ಇವರ ಸಮಕಾಲೀನ ತರುಣವಿಬುಧನಾಗಿ ಕ್ರಿ.ಶ. 12ನೆಯ ಶತಮಾನದ ಉತ್ತರಾರ್ಧದಿಂದ 13ನೆಯ ಶತಮಾನದ ಪೂರ್ವಾರ್ಧಕಾಲದವನೆಂದು ಇಟ್ಟುಕೊಳ್ಳ-ಬಹುದಾಗಿದೆ.

ನೀಲಕಂಠನಾಗನಾಥಾಚಾರ್ಯನು ತನ್ನ ಗ್ರಂಥದ ಆದಿಮಭಾಗದಲ್ಲಿ ಉಲ್ಲೇಖಿಸಿರುವ ಗ್ರಂಥಕರ್ತೃಗಳ ಮತ್ತು ಗ್ರಂಥಗಳ ವಿಚಾರ

ಈತನು ಉಲ್ಲೇಖಿಸಿರುವ ಗ್ರಂಥಗಳಲ್ಲಿ ಮಲ್ಲಪಾರ್ಯಗುರುವಿನ ಶಿವಜ್ಞಾನ ದೀಪಿಕಾ, ಲಕ್ಷ್ಮೀದೇವ ಗುರುವಿನ ಸಾರೋದ್ಧಾರಃ, ಜಗದಾರಾಧ್ಯ ನಾಗೇಶ ಗುರುವಿನ ಶಿವಜ್ಞಾನಸಮುಚ್ಚಯಃ ಎಂಬ ಗ್ರಂಥಗಳು ಸಿಕ್ಕಿರುವುದಿಲ್ಲ. ಪಾಲ್ಕುರಿಕೆ ಸೋಮ ನಾಥನ ಬಸವರಾಜೀಯಮ್ (ಸೋಮನಾಥಭಾಷ್ಯಂ), ಜ್ಯೋತಿರ್ನಾಥನ ಶೈವ ರತ್ನಾಕರಃ, ದೇಶಭಾಷೆಯಲ್ಲಿ ಬರೆದಿರುವ ಹಂಪೆಯ ಹರೀಶ್ವರನ ಪುರಾತನರ ರಗಳೆಗಳು ಉಪಲಬ್ಧಗಳಾಗಿವೆ.

ಸಂಸ್ಕೃತಸಾನಂದ ಚರಿತ ವಿಚಾರ

ಸಾನಂದಚರಿತಂ ನಾಮ ಗ್ರಂಥಂ ಚಕ್ರೇತಿಯತ್ನತಃ |
ಯಸ್ತಸ್ಮೈ ಪದ್ಮರಾಜಾಯ ನಮೋ ದುರ್ವಾದದಾಹಿನೇ (೧-೧೬)

ಎಂಬುದಾಗಿ ಸಂಸ್ಕೃತ ಗ್ರಂಥಗಳ ಸಾಲಿನಲ್ಲಿ ತಿಳಿಸಿರುವ ಪದ್ಮರಾಜವಿರಚಿತವಾದ ಸಾನಂದಚರಿತಮ್ ಎಂಬುದು 'ಕೆರೆಯ ಪದ್ಮರಾಜ' ಎಂಬ ವಿಶೇಷಣದಿಂದ ಕೂಡಿದ ಪೂರ್ಣನಾಮ ಈ ನುತಿಯಲ್ಲಿಲ್ಲದುದರಿಂದಲೂ, ಕೆರೆಯ ಪದ್ಮರಸರ ಮಗನಾದ ಕುಮಾರ ಪದ್ಮರಸನಿಂದ ರಚಿತವಾಗಿ ಮುದ್ರಿತವಾಗಿರುವ ಕನ್ನಡ ಸಾನಂದ ಚರಿತೆಯಲ್ಲಿ

ಪಿರಿದುಮಾರುಂ ಮುನ್ನ |
ವಿರಚಿಸಿದರಿಲ್ಲೆಂದು |

ಧರಣಿಯೊಳೊಳುಗನ್ನಡದಿ ಪಸರಿಸೆಂದು ॥
ಗುರುರೂಪವಿಶ್ವಪತಿ ।
ಕರುಣಿಸಿದ ತೆರದಿ ನಾಂ ।
ವರ ಪುರಾಣಾರ್ಥಮಂ ಕನ್ನಡಿಸಿದೆಂ ॥ (ಸಾ. ಚ. ಸಂಧಿ. 2-3);

ಹರಚವಮೂವರ ಪರಮ ।
ವಿರಚಿತ ಶ್ಲೋಕಬಂ ।
ಧುರ ದೇವಭಾಷೆಯಂ ಕನ್ನಡಿಸಿದೆಂ ॥
ಗುರು ಕೆರೆಯ ಪದ್ಮರಸ ।
ವರಸೂನು ಪದುಮಿಗಂ ।
ಧರೆಯೊಳು ಸ್ತ್ರೀಬಾಲಸಾಧ್ಯಮಾಗೆ ॥ (ಸಾ. ಚ. 1-10),

ಇಂದುಜೂಟನ ಕಂದ ।
ನಿಂದೊರೆದ ಶ್ರೀ ಮಹಾ ।
ಸ್ಕಾಂದದಾಖ್ಯಾನಂಗಳಿಗೆ ತಲೆಯಿದೆ ॥
ಯೆಂದು ಕೃಪೆಯಿಂ ಪೇಳ್ದನಂದೊಲಿದು ಕೈಲಾದಿ ।
ಯಂದಾ ಸನತ್ಕುಮಾರಂಗೆ ತಾನೆ ॥ (ಸಾ. ಚ. 1-31)

ಎಂದೂ ಮತ್ತೆ ಪ್ರತಿಸಂಧಿಯ ಅಂತ್ಯದಲ್ಲಿಯೂ 'ಶ್ರೀನಂದಿನಾಥೇಶನಿಗದಿತ'ವೆಂದೂ ಹೇಳಿರುವನು. ತನ್ನ ತಂದೆಯಾದ ಕೆರೆಯ ಪದ್ಮರಸರ ಸಂಸ್ಕೃತ ಕೃತಿಯೊಂದು ಇದ್ದಿತೆಂದೊ ಅದರ ಅನುವಾದವೇ ಇದೆಂದೂ ಎಲ್ಲಿಯೂ ಹೇಳಿಕೊಂಡಿಲ್ಲ. ಅಷ್ಟೇ ಅಲ್ಲ, ಸೂಚನಾಮಾತ್ರದಿಂದಲೂ ತಿಳಿಸಿರುವುದಿಲ್ಲ. ಇದೇ ಮಗನ ಸಾನಂದಚರಿತೆಯಲ್ಲಿ ಸಂಧಿ 9-53ರಲ್ಲಿ ಈ ಕನ್ನಡ ಸಾನಂದ ಚರಿತೆ ಮುಗಿವ ಮುನ್ನವೇ ಕೆರೆಯ ಪದ್ಮರಸರು ಲಿಂಗೈಕ್ಯರಾಗಿ ಕೈಲಾಸ ಸೇರಿದ್ದರು ಎಂದೂ ಮಗನೇ ತಿಳಿಸಿರುವನು. ಈ ಕನ್ನಡ ಕೃತಿಗೆ—ವೇದಾಗಮ ಪುರಾಣಗಳಿಂದ ಕೆರೆಯ ಪದ್ಮರಸರು ಅತಿಪ್ರಯತ್ನದಿಂದ ಸುಮಾರು 800ಕ್ಕೂ ಮೇಲ್ಪಟ್ಟು ಶಿವಸಿದ್ಧಾಂತ ಸ್ಥಾಪನೆಗನುಕೂಲವಾಗುವಂತಹ ಪ್ರಮಾಣಗಳನ್ನೊದಗಿಸಿ ಸ್ತ್ರೀ-ಬಾಲ ಸಾಧ್ಯವಾಗುವ ಹಾಗೆ ಸ್ಕಾಂದಪುರಾಣದಲ್ಲಿನ ಸಾನಂದ ಚರಿತೆಯನ್ನು ಬರೆದು ಅದರಲ್ಲಿ ತಂದೆಯ ಗಳಿಕೆಗಳಾದ ದೃಷ್ಟಿಕೆಗಳನ್ನು ಧಾರಾಳವಾಗಿ ಬಳಸಿಕೊಂಡಿರುವನು. ಇಂತಹ ಪ್ರಮಾಣಗಳ ಗಣಿಯೇ ಇವರಲ್ಲಿತ್ತು. ಆದ್ದರಿಂದಲೇ ವಾದದಲ್ಲಿ ಜಯಗಳಿಸಿದರು. ಮಗನಿಗೂ ಈ ಪ್ರಮಾಣಗಳನ್ನು ನೀನು ಸಾನಂದಚರಿತೆಯಲ್ಲಿ ಬಳಸಿಕೋ ಎಂದು ರೂಪ-ರೇಖೆಗಳನ್ನು ಹೇಳಿದ್ದ ವಿಚಾರಗಳೂ ಅವರ ಜೊತೆಗಿದ್ದ ವಿಬುಧರಿಗೂ ಗೊತ್ತಿದ್ದ ವಿಚಾರ. ಆದ್ದರಿಂದಲೇ 'ಮಗನಿಂದ ಸಾನಂದಚರಿತೆ ಮಾಡಿಸಲು ಸಿದ್ಧತೆಗಳನ್ನೇರ್ಪಡಿಸಿಕೊಂಡಿದ್ದರಿಂದ — ವಿಬುಧರು ಸಾಕ್ಷಾತ್—ಕೆರೆಯ ಪದ್ಮರಸರೇ ಈ ಪ್ರಮಾಣಗಳನ್ನು ಬಳಸಿಕೊಂಡು ಸಂಸ್ಕೃತ

ಸಾನಂದಚರಿತೆಯನ್ನು ಬರೆದಿರುವರು ಎಂಬ ಭ್ರಮೆಗೆ ಬಿದ್ದು, ಸಾನಂದಚರಿತೆಯ ನಿರ್ಮಾಣಕ್ಕೂ ಮುನ್ನವೇ ವಾದ ಕಾಲದಲ್ಲಿ ಕೊಟ್ಟಿರುವ ವಿಬುಧರ ಹೇಳಿಕೆಗಳೂ ಅಸ್ಪಷ್ಟಗಳಾಗಿಯೇ ಇವೆ. ಸಂಸ್ಕೃತ ಸಾನಂದಚರಿತೆಯನ್ನು ತನ್ನ ತಂದೆಯೇ ಬರೆದುದಾಗಿದ್ದಲ್ಲಿ ಮಗನಾದ ಕುಮಾರ ಪದ್ಮರಸನು ಸ್ಪಷ್ಟವಾಗಿ ಭಕ್ತಿಪೂರ್ವಕವಾಗಿ ಈ ತನ್ನ ಕೃತಿಯಲ್ಲಿ ಹೇಳಿಕೊಳ್ಳುತ್ತಿರಲಿಲ್ಲವೇ? ಅಥವಾ ತಾವೂ ಸಂಸ್ಕೃತದಲ್ಲಿ ರಚಿಸಬೇಕೆಂದಿರುವಲ್ಲಿ ಲಿಂಗೈಕ್ಯರಾಗಿರಬೇಕು.

ಈ ಕೆರೆಯ ಪದ್ಮರಸರ ವಂಶಜನೇ ಆಗಿ ಕೆರೆಯ ಪದ್ಮರಸರಿಂದ ಎಂಟನೆಯ ತಲೆಮಾರಿನವನಾದ ಕವಿ ಪದ್ಮಣಾಂಕನು ಈ ಬಗೆಗೆ ನೇರವಾಗಿ ತನ್ನ ಪದ್ಮರಾಜಪುರಾಣದಲ್ಲಿ ಹೀಗೆ ತಿಳಿಸುತ್ತಾನೆ—

ಬಾಪು ದೇಶಿಕಶಿರೋರತ್ನ ಧರೆಯಂ ಪೊರೆಯ |
ಲೌಪಚಾರಿಕ ವಿಗ್ರಹಂದಾಳ್ದು ಬಂದ ಗುರು |
ರೂಪ ವಿಶ್ವೇಶನಲ್ಲದೆ ಪೆರನೆ ನಿನಗಿದರಿದೇಯೆಂದು ಭಕ್ತರುಲಿಯೆ ||
ಓಪ ಶಿಷ್ಯನ ಬೋಧಿಸಿದ ರೀತಿಯಿಂದ ರಘು |
ಟಾಪದ್ಧತಿಯೊಳುರೆ ಸಸಾಕ್ಷಿಕಂ ವೀರಶೈ |
ವೋಪಕಾರಾರ್ಥವಿಂಪಮರೆ 'ದೀಕ್ಷಾಬೋಧ'ವೆಂಬ ಕೃತಿಯಂ ವಿರಚಿಸಿ ||
(ಪ. ಪು. ಸಂ. 12-55);

ಬಳಿಕ ಸಮಯಸ್ಥಾಪನಾರ್ಥಂ ಶ್ರುತಿ ಸ್ಮೃತಿ ವಿ |
ಮಲ ಪುರಾಣಾಗಮೋಪನಿಷತ್ಪ್ರಭೃತಿಶಾಸ್ತ್ರ |
ಕುಳದ ಸಾರಂದೆಗೆದು ದೃಷ್ಟಕೆ ಬರೆದು. ಸರ್ವರರಿಯೆ ಕರ್ಣಾಟವಾಗಿ ||
ಅಲಘು ವರ್ಣಕರೀತಿಯಿಂ ರಸಂ ಮುಸುಕಿಯು |
ಜ್ಜ್ವಳಿಪಂತೆ 'ಸಾನಂದಚರಿತಾಖ್ಯಶಾಸ್ತ್ರಮು'ನ |
ತುಳ ಗುಡುವರಂ ನಿಜಾತ್ಮಜನಿನೊರೆಯಿಸುತೆ ಶಿವಸುಖದೊಳಿಂತೊಪ್ಪುತಿರ್ದಂ ||
(ಪ ಪು. ಸಂ. 12-56)

ಎಂದು ಈ ವಂಶಜರು ಕೊಟ್ಟಿರುವ ಸ್ಪಷ್ಟ ವಿವರಣೆಗಳಿಂದ ಕೆರೆಯಪದ್ಮರಸರು ಸಂಸ್ಕೃತ ಸಾನಂದಚರಿತೆಯನ್ನು ಬರೆದಿರುವರು ಎಂಬ ಭ್ರಮೆಯನ್ನು ಸ್ಪಷ್ಟವಾಗಿ ಹೋಗಲಾಡಿಸಿರುವರು. ದೀಕ್ಷಾಬೋಧೆಯನ್ನು ಉಲ್ಲೇಖಿಸಿದವನು ಸಂಸ್ಕೃತ ಸಾನಂದಚರಿತೆಯಿದ್ದುದೇ ಆದರೆ ಅದನ್ನೂ ಇಲ್ಲಿ ಉಲ್ಲೇಖಿಸುತ್ತಿರಲಿಲ್ಲವೇ? ಅಥವಾ ಕುಮಾರಪದ್ಮರಸನ ಕನ್ನಡ ಸಾನಂದ ಚರಿತೆಯನ್ನೇ ಸಮಕಾಲದ ತರುಣ ವಿಬುಧನಾದ ನೀಲಕಂಠನಾಗನಾಥಾಚಾರ್ಯನು ಉಲ್ಲೇಖಿಸಿರಬಹುದು. 'ಕೆರೆಯ (ತಟಾಕ)' ಎಂಬ ವಿಶೇಷಣ ಕೊಡದೆ ಕೇವಲ 'ಪದ್ಮರಾಜಾಯ' ಎಂದೇ ನುತಿಸಿರು

ವೆನು. ಅಲ್ಲದೆ ಶಿವಧರ್ಮೋತ್ತರದಲ್ಲಿನ ಧರ್ಮಾಧರ್ಮಭೇದ–ನರಕಗಳ ವರ್ಣನೆ ಪಿಂಡೋತ್ಪತ್ತಿ—ಸಂಸಾರ ಹೇಯತ್ವ ಮತ್ತು ಸ್ಕಾಂದಪುರಾಣದ ಸಾನಂದಚರಿತೆ ಇವುಗಳು ಎರಡು ಗ್ರಂಥಗಳಲ್ಲಿಯೂ ಆದಿಮ ಭಾಗದಲ್ಲಿಯೇ ಸಂಕ್ಷೇಪ-ವಿಸ್ತಾರ ಗಳಿಂದ ಮೂಡಿಬಂದಿವೆಯಾಗಿ ಸುಲಭವಾಗಿ ತಳ್ಳಿಹಾಕುವಂತೆಯೂ ಇಲ್ಲ. ವ್ಯತ್ಯಾಸ ಭಾಷೆ ಮಾತ್ರ. ಅಲ್ಲಿ ಕನ್ನಡ, ಇಲ್ಲಿ ಸಂಸ್ಕೃತ, ಇಷ್ಟೆ. ಸ್ಪಷ್ಟವಾಗಿ ಹರೀಶ್ವರನ ಬಗೆಗೆ ಹೇಳಿದಂತೆ ಇಲ್ಲಿ 'ದೇಶಭಾಷಯಾ' ಎಂದು ಹೇಳಿಲ್ಲವೆಂಬು ದೊಂದೇ ಭ್ರಮೆಗೆ ಕಾರಣವಾಗಿದೆ. ಸಂಸ್ಕೃತ ಸಾನಂದಚರಿತೆಯು ಉಲ್ಲೇಖ ಮಾತ್ರವಾಗಿಯಾದರೂ ವೀರಶೈವ ಸಾಹಿತ್ಯದಲ್ಲಿ ಈ ವರೆಗೆ ಕಾಣಬಂದಿಲ್ಲ. ಇದು ಲಭ್ಯವಾದಲ್ಲಿ ಪರಮಭಾಗ್ಯವೆನ್ನಬಹುದಾಗಿದೆ.

ಜ್ಯೋತಿರ್ನಾಥನ ಶೈವರತ್ನಾಕರ ಗ್ರಂಥ ವಿಚಾರ

ಜ್ಯೋತಿರ್ನಾಥನ ಶೈವರತ್ನಾಕರಃ ಎಂಬ ಗ್ರಂಥವು ಸೊಲ್ಲಾಪುರದಲ್ಲಿ ವಾರ ದವರಿಂದ ಮರಾಠಿ ವ್ಯಾಖ್ಯಾನದೊಂದಿಗೆ 1909ರಲ್ಲಿ ಮುದ್ರಿತವಾಗಿದೆ. ಈ ಗ್ರಂಥವು ಏಕೋತ್ತರಶತಸ್ಥಲೀ ಗ್ರಂಥ ರಚಿಸಿರುವ ಜಕ್ಕಣಾರ್ಯ ಮುಂತಾದವರಿಂದ ಉಲ್ಲೇಖಿತವಾಗಿದ್ದು ವೀರಶೈವರ ಪ್ರಾಚೀನ ಗ್ರಂಥವಾಗಿದೆ. ಪಾಲ್ಕುರಿಕೆ ಸೋಮನಾಥನ ಬಸವರಾಜೀಯದ ಪೀಠಿಕಾ ಭಾಗವೂ ಶೈವರತ್ನಾಕರದ ಪೀಠಿಕಾ ಭಾಗವೂ ಪರಸ್ಪರ ಹೋಲುತ್ತದೆ. ನಿಜಗುಣ ಶಿವಯೋಗಿಯ ವಿವೇಕ ಚಿಂತಾ ಮಣಿಯ ಮೇಲೂ ಈ ಗ್ರಂಥದ ಪ್ರಭಾವ ಬಿದ್ದಿದೆ. ಜ್ಯೋತಿರ್ನಾಥನು ಸಪ್ತ ವಿಧಶೈವಕ್ಕೂ ಅಧಿಕವಾಗಿ ವೀರಶೈವಕ್ಕೂ ಸಂಬಂಧಿಸಿದಂತೆ ಸದಾಚಾರ–ಷಟ್ಸ್ಥಲ-ಪಂಚಾಚಾರ-ಅಷ್ಟಾವರಣ ಇತ್ಯಾದಿ ವಿಷಯಗಳನ್ನು ಮಂಡಿಸಿರುತ್ತಾನೆ. ಈ ಗ್ರಂಥದಲ್ಲಿ ಹರದತ್ತಾಚಾರ್ಯನ ತಾತ್ಪರ್ಯ ಸಂಗ್ರಹವನ್ನೂ ಸೋಮಶಂಭುವಿನ [ಸೋಮಶಂಭುಪದ್ಧತಿಃ] ಎಂಬ ಗ್ರಂಥವನ್ನೂ ಉಲ್ಲೇಖಿಸಿರುವನಾಗಿ ಇವರೀರ್ವರಿ ಗಿಂತ ಈಚಿನವನಾಗಿದ್ದಾನೆ. ಪಾಲ್ಕುರಿಕೆ ಸೋಮನಾಥನೂ ಈ ಗ್ರಂಥಗಳನ್ನು ಉಲ್ಲೇಖಿಸಿರುವನು. ಡಾ. ಎಸ್. ಸಿ. ನಂದೀಮಠ ಅವರು ಕನ್ನಡ ನಾಡಿನ ಚರಿತ್ರೆ ಭಾಗ 2 (ಕ. ಸಾ. ಪರಿಷತ್ತು 1944) ರಲ್ಲಿ ಪುಟ 193, 194ರಲ್ಲಿ "ಸೋಮಶಂಭು ಕರ್ಮಕ್ರಿಯಾಕಾಂಡವನ್ನು ಬರೆದಿದ್ದಾನೆ. ಇದರ ಹಸ್ತಪ್ರತಿಗಳು ನೇಪಾಳ ಕಾಶ್ಮೀರ ಕಲ್ಕತ್ತೆ ತಂಜಾವೂರು ಮದ್ರಾಸು ಪುಸ್ತಕಾಲಯಗಳಲ್ಲಿ ಇವೆ. ಅಘೋರ ಶಿವನೂ, ಈಶಾನ ಶಿವನೂ ಸರ್ವದರ್ಶನ ಸಂಗ್ರಹಕಾರನೂ ಈ ಗ್ರಂಥ ವನ್ನು ಉಲ್ಲೇಖಿಸಿದ್ದಾರೆ. ಸೋಮಶಂಭು ಈ ಗ್ರಥಂವನ್ನು ವಿಕ್ರಮಸಂವತ್ 1130 ಅಂದರೆ ಕ್ರಿ.ಶ. 1073ರಲ್ಲಿ ಬರೆದನು." ಎಂದು ತಿಳಿಸಿರುವರು. ಗುಂಟೂರು

ಡಿಸ್ಟ್ರಿಕ್ಟ್ ಗುಂಟೂರು ತಾಲೂಕಿನ ಮಲ್ಕಾಪುರಂ ಗ್ರಾಮದ ಪಾಳುಬಿದ್ದ ದೇವಾಲ-ಯದ ಸಮೀಪದಲ್ಲಿ ಇರುವ ದೊಡ್ಡ ನಂದಿಕಂಬದ ಮೇಲೆ ಕೆತ್ತಿರುವ ಶಕ 1183 ದುರ್ಮತಿ ಸಂವತ್ಸರದ ಶಾಸನದಲ್ಲಿ ಕಾಕತೀಯ ದೊರೆ ಗಣಪತಿ ಮತ್ತು ಮಗಳು ರುದ್ರಮದೇವಿ ಇವರೀರ್ವರೂ ಶುದ್ಧಶೈವಮತವಾದ ಗೋಳಕಿಮಠದ ಧರ್ಮಕಾರ್ಯಗಳಿಗಾಗಿ ಈ ಮಠದ ಗುರುಗಳಾದ ವಿಶ್ವೇಶ್ವರ ಶಿವಾಚಾರ್ಯರಿಗೆ ಹಳ್ಳಿಗಳನ್ನು ದಾನವಿತ್ತ ವಿಚಾರ ಬಂದಿದ್ದು, ಇದರಲ್ಲಿ ಕಾಕತೀಯ ದೊರೆಗಳ ವಂಶಾವಳಿಯೂ ಗೋಳಕಿಮಠದ ಆಚಾರ್ಯರ ಪರಂಪರೆಯ ವಿವರಣವೂ ಇದ್ದು ಈ ಗುರುಗಳಲ್ಲಿ ಒಂದನೆಯವರು ವಿಶ್ವೇಶ್ವರದೇಶಿಕೇಂದ್ರರು. ಮೂರನೆಯವರು ಕಲಚುರಿಗಳಿಂದ ಆರಾಧಿಸಲ್ಪಟ್ಟ ಸೋಮಶಂಭು ಎಂಬವರು. ಒಂಬತ್ತನೆಯವರು ವಿಶ್ವೇಶ್ವರ ಶಂಭು ಅಥವಾ ವಿಶ್ವೇಶ್ವರ ಶಿವ ಅಥವಾ ವಿಶ್ವೇಶ್ವರದೇಶಿಕರೆಂಬವರು. ಈ ಒಂಬತ್ತನೆಯವರೇ ಕಾಕತೀಯ ಗಣಪತಿರಾಜ ಪೂಜಿತರು ಹಾಗೂ ಈ ರಾಜರ ದೀಕ್ಷಾಗುರುಗಳು ಅಲ್ಲದೆ ಕಲಚುರಿಕ್ಷ್ಮಾಪಾಲದೀಕ್ಷಾಗುರು ಮತ್ತು ಚೋಳ, ಗೌಡ, ಮಾಳವ ರಾಜರುಗಳಿಂದಲೂ ಪೂಜಿತರು. ಈ ಒಂಬತ್ತನೆ ಯವರಿಗೇ ಕಾಕತೀಯ ಗಣಪತಿರಾಜ ಮತ್ತು ಮಗಳು ರುದ್ರಮದೇವಿಯ ರೀರ್ವರೂ ದಾನವಿತ್ತಿರುವುದು. ಇವರು ಈ ಗುರುಪೀಳಿಗೆಯಲ್ಲಿನ ಮೂರನೆಯ ಸೋಮಶಂಭುವಿನಿಂದ ಏಳನೆಯ ತಲೆಯವರು. ಈ ಶಾಸನ ಕಾಲ ಶಕ 1183 ದುರ್ಮತಿ. ಈ ಶಾಸನದ 64ರಿಂದ 66ರ ಸಾಲುಗಳಲ್ಲಿ

"ಪ್ರಾಚೀನ ಪುಣ್ಯಪರಿಪಾಕವಶಾತ್ಪ್ರಜಾನಾಮಾವಿರ್ಬಭೂವ
ಭಗವಾನಿಹ ಸೋಮಶಂಭುಃ ||
'ನಾಮ್ನಾ ನಿಜೇನ' ಸಕಲಾಗಮಸಿಂಧುಸೇತುಂ ಯಃ 'ಪದ್ಧತಿಂ'
ಕರುಣಯಾಽಪ್ರತಿಮಾಂ ಬಬಂಧ ||"

ಎಂದರೆ ಯಾರು ಕೃಪೆದೋರಿ ಸಕಲಾಗಮನೆಂಬ ಸಮುದ್ರಕ್ಕೆ ಸೇತುವಿನಂತಿರುವ 'ಪದ್ಧತಿಃ' ಎಂಬ ಅಸದೃಶವಾದ ಗ್ರಂಥವನ್ನು ತಮ್ಮ ಹೆಸರಿನಿಂದ ರಚಿಸಿದರೆ ೋ ಅಂತಹ ಭಗವಾನ್ ಸೋಮಶಂಭುವು ಪ್ರಜೆಗಳ ಪೂರ್ವಪುಣ್ಯ ಪರಿಪಾಕವಶದಿಂದ ಭೂಮಿಯಲ್ಲಿ ಅವತರಿಸಿದರು. ಅರ್ಥಾತ್ ಭಗವಾನ್ ಸೋಮಶಂಭುವು ತಮ್ಮ ಹೆಸರಿನಿಂದ ಸಕಲಾಗಮಸಾಗರಕ್ಕೆ ಸೇತುವಿನಂತಿರ್ಪ 'ಸೋಮಶಂಭು ಪದ್ಧತಿಃ' ಎಂಬ ಅಸದೃಶವಾದ ಗ್ರಂಥವನ್ನು ರಚಿಸಿದರು ಎಂದು ಹೇಳಿದೆ. ಕರ್ಮಕ್ರಿಯಾ ಕಾಂಡವನ್ನು ಸೋಮಶಂಭುವು ಕ್ರಿ. ಶ. 1073ರಲ್ಲಿ ಬರೆದು ಮುಗಿಸಿರುವನಷ್ಟೆ. ಆದ್ದರಿಂದ ಈ ಗ್ರಂಥದ ರಚನಾಕಾಲವೂ ಕ್ರಿ. ಶ. 11 ನೆಯ ಶತಮಾನದ ಉತ್ತರಾರ್ಧಕಾಲವೆಂದು ಇಟ್ಟುಕೊಳ್ಳಬಹುದಾಗಿದೆ.

ಜ್ಯೋತಿರ್ನಾಥ ಮತ್ತು ಇವನ ಕಾಲಾದಿಗಳ ವಿಚಾರ

ಜ್ಯೋತಿರ್ನಾಥನು ತನ್ನ ಶೈವರತ್ನಾಕರ ಗ್ರಂಥದಲ್ಲಿ ಕೊಟ್ಟಿರುವ ತನ್ನ ವಂಶಾವಳಿಯ ಪ್ರಕಾರ—ಪ್ರಸಿದ್ಧ ಶರಣನಾದ ಓಹಿಲಾರ್ಯನು ಸೌರಾಷ್ಟ್ರ ಸೋಮನಾಥನಿಗೆ ನಿತ್ಯವೂ ತಪ್ಪದೆ ಗುಗ್ಗುಳವನರ್ಪಿಸುವ ಕಾಯಕ ಕೈಕೊಂಡಿದ್ದ ವೀರಮಾಹೇಶ್ವರ. ಉತ್ಪಟ ಕಾವ್ಯದಲ್ಲಿ (ಆ. 11-109) ತಿಳಿಸಿರುವಂತೆ ಲಿಂಗಾಂಗಿ ಜ್ಯೋತಿರ್ನಾಥನು ಈ ಓಹಿಲಾರ್ಯನ ಸಂಪ್ರದಾಯಕ್ಕೆ ಸೇರಿದವನು. ಓಹಿಲಾರ್ಯನ ನಂತರ ಮೊದಲನೆಯ ಶಿವದೇವ ಮಹಾಯೋಗಿಯು ಈ ಸಂಪ್ರದಾಯದಲ್ಲಿ ಬಂದ ಮಹಿತ. ಇವನು ಸಮಾಧಿಹೊಂದಿದುದು ಶ್ರೀಶೈಲೋತ್ತರ ದಿಕ್ತಟದ ಮಹಾಶಿಲೆಯ ಒಳಗೆ ಎಂದರೆ ಗೊಪೆ (ಗುಹೆ)ಯ ಒಳಗೆ. ಈತನೇ ಗೊಪೆಯ ಶಿವದೇವಯೋಗಿ. ಈ ಪ್ರಥಮ ಶಿವದೇವಮಹಾಯೋಗಿಯ ಶಿಷ್ಯನು ಪ್ರಥಮ ಧರಣೀಧರಮುನಿ. ಈತನು ಶಿವದೇವಯೋಗಿಯ ಸಮಾಧಿಯಿದ್ದ ತಾಣದಲ್ಲಿ ಶಿವದೇವಪುರವನ್ನು ನಿರ್ಮಾಣಮಾಡಿ, ಶಿವದೇವಲಿಂಗಕ್ಕೆ ಮಂಟಪ ಪ್ರಾಸಾದ ಪ್ರಾಕಾರಾದಿಗಳನ್ನೂ ನಿರ್ಮಿಸಿ ವೈಭವದ ಪೂಜೆಗೆ ಏರ್ಪಾಡು ಮಾಡಿ, ತಾನೇ ಪೂಜಿಸುತ್ತಾ ಶಿವದೇವಪುರದ ಪೌರ ಕಾರ್ಯವನ್ನೂ ನಿರ್ವಹಿಸುತ್ತಿದ್ದನು. ಪ್ರಥಮ ಧರಣೀಮುನಿಯ ಮಗ ಅಪ್ಪಯಸುಧೀಮಣಿ. ಈತನ ಮಕ್ಕಳೇ ಮಲ್ಲಿನಾಥ ಮತ್ತು ಎರಡನೆಯ ಶಿವದೇವಗುರು ಎಂಬವರು. ಇವರಲ್ಲಿ ಮಲ್ಲಿನಾಥನಿಗೆ ಈರ್ವರು ಪುತ್ರರಾದರು. ಮೊದಲನೆಯ ಪುತ್ರನೇ ಎರಡನೆಯ ಧರಣೀಧರ ಯೋಗೀಂದ್ರನು. ದ್ವಿತೀಯ ಪುತ್ರನೇ ಈ ಶೈವರತ್ನಾಕರಕಾರನಾದ ಜ್ಯೋತಿರ್ನಾಥನು. ಇದು ಜ್ಯೋತಿರ್ನಾಥನು ತನ್ನ ಶೈವರತ್ನಾಕರ ಗ್ರಂಥದಲ್ಲಿ ತಿಳಿಸಿರುವ ತನ್ನ ಪರಂಪರೆ ಅಥವಾ ವಂಶಾವಳಿ. ಈ ಗ್ರಂಥದ ಆದಿಯಲ್ಲಿ ಇತರವಸ್ತುತ್ಯಾದಿಗಳಿಲ್ಲವು. ಪ್ರತಿ ಅಧ್ಯಾಯಾಂತ್ಯದಲ್ಲಿಯೂ 'ಇತಿ ಶ್ರೀಸದ್ಗುರುಶಿವದೇವಲಿಂಗ ದಿವ್ಯಶ್ರೀಪಾದಪದ್ಮಾರಾಧಕಜ್ಯೋತಿರ್ನಾಥವಿರಚಿತೇ ಸಕಲಶ್ರುತಿಸ್ಮೃತೀತಿಹಾಸ' ಪುರಾಣಾಗಮಸಮ್ಮತೇ ಶ್ರೀಶೈವ ರತ್ನಾಕರೇ × × × × × ಪ್ರಥಮೋऽಧ್ಯಾಯಃ" ಈ ಗದ್ಯವಿದೆ. ಇಲ್ಲಿನ 'ಶ್ರೀಸದ್ಗುರು ಶಿವದೇವಲಿಂಗ', ಎಂಬುದು ಈ ಜ್ಯೋತಿರ್ನಾಥನ ಚಿಕ್ಕಪ್ಪನವರಾದ ಎರಡನೆಯ 'ಶಿವದೇವಗುರು' ಎಂಬವರೇ ಆಗಿರುವರು. S. A. 402 O.R. 1 ಹಸ್ತಪ್ರತಿ ನೋಡಿ. ಈ ಹಸ್ತಪ್ರತಿಯು 21/30/9— (19)08ರಲ್ಲಿ ಪ್ರತಿಯಾಗಿ O.R.I.ಗೆ ಸೇರಿದೆ.)

ಜ್ಯೋತಿರ್ನಾಥನು ಈ ತನ್ನ ಗ್ರಂಥದಲ್ಲಿ ಕೊಟ್ಟಿರುವ ವಂಶಾವಳಿಯಿಂದ ಸೌರಾಷ್ಟ್ರ ಸೋಮನಾಥನಿಗೆ ನಿತ್ಯವೂ ಗುಗ್ಗುಳವನರ್ಪಿಸುವ ವ್ರತವನ್ನು ಕೈಕೊಂಡ ಓಹಿಲಾರ್ಯನೆಂಬ ಶರಣನ ಸಂಪ್ರದಾಯದವನು. ಈ ವೀರಮಾಹೇಶ್ವರ

ನಾದ ಓಹಿಲಾರ್ಯನು ಲಿಂಗಾಂಗಿ ಎಂದು ಉದ್ಭಟ ಕಾವ್ಯದಲ್ಲಿ ಸೋಮ ರಾಜನು ತಿಳಿಸಿರುವನು. ಈ ಓಹಿಲಾರ್ಯನ ಸಂಪ್ರದಾಯದಲ್ಲಿ ಬಂದವನು ಮೊದಲನೆಯ ಶಿವದೇವಮಹಾಯೋಗಿಯು ಅಥವಾ ಗೊಪೆಯ ಶಿವದೇವನು. ಈ ಶಿವದೇವನು ವಚನಕಾರನಾದ ಸಕಲೇಶ ಮಾದರಸರ ಕೃಪಾಪಾತ್ರ. ಬಸವೇಶನ ಐಕ್ಯವನ್ನು ಕೂಡಲಸಂಗಮದಲ್ಲಿ ಕಣ್ಣಾರೆ ಕಂಡು ಬಸವೇಶನಂ ಅಭಿವರ್ಣಿಸಿ ಅಲ್ಲಿ ನೆರೆದಿರ್ದ ಶರಣಸಮೂಹಕ್ಕೆ ಕೈಮುಗಿದು, ನಂತರ ಶ್ರೀಶೈಲ ದಲ್ಲಿನ ತನ್ನ ಪರ್ವತಾಶ್ರಮಕ್ಕೆ ಹಿಂತಿರುಗುವಾಗ ದಾರಿಯಲ್ಲಿ ಶಿಷ್ಯನಾದ ಈ ಗೊಪೆಯ ಶಿವದೇವನಲ್ಲಿಗೆ ಬಂದು ಬಸವಣ್ಣನ ಐಕ್ಯ ವಿಚಾರವನ್ನು ತಿಳಿಸಿ ಶಿವದೇವನಿಗೆ ಅನುಗ್ರಹವಿತ್ತು ಮುಂದೆ ಸಾಗಿ ಶ್ರೀಶೈಲದಲ್ಲಿನ ತನ್ನ ಪರ್ವತಾ ಶ್ರಮದತ್ತ ಪ್ರಯಾಣ ಬೆಳಸಿದನು ಎಂದು ಕುಮಾರಪದ್ಮರಸನ ಸಾನಂದಚರಿತೆ ಪಾಲ್ಕುರಿಕೆ ಸೋಮೇಶ್ವರನ ಬಸವಪುರಾಣ ಭೀಮಕವಿಯ ಬಸವಪುರಾಣ ಪದ್ಮಣಾಂಕನ ಪದ್ಮರಾಜಪುರಾಣಾದಿಗಳಲ್ಲಿ * ಸಂಕ್ಷಿಪ್ತವಾಗಿಯೂ ವಿಸ್ತೃತ ರೂಪವಾಗಿಯೂ ತಿಳಿಸಿರುವರು. ಶಿವದೇವಪುರದಲ್ಲಿನ ಗೊಪೆಯ ಶಿವದೇವ ಮಹಾಯೋಗಿಯ ಹಾಗೂ ಸಕಲೇಶ ಮಾದರಸರ ಕಾಲ ಸು. ಕ್ರಿ. ಶ. 1150. ಈ ಮೊದಲನೆಯ ಗೊಪೆಯ ಶಿವದೇವ ಮಹಾಯೋಗಿಯಿಂದ ಜ್ಯೋತಿರ್ನಾಥನು ಐದನೆಯ ತಲೆಮಾರಿನವನಾಗಿರುತ್ತಾನೆ. ವೀರಮಾಹೇಶ್ವರಾಚಾರಸಂಗ್ರಹಕಾರನು

'ಶೈವರತ್ನಾಕರಂ ನಾಮ ಗ್ರಂಥಂ ಯಃ ಕೃತವಾನ್ ಪುರಾ |
ಜಗದ್ಧಿತಾರ್ಥಂ ಕೃಪಯಾ ಜ್ಯೋತಿರ್ನಾಥಂ ನಮಾಮಿ ತಮ್' (1.18)

ಎಂಬಲ್ಲಿ ಈ ಗ್ರಂಥವು ಪ್ರಾಚೀನನೆಂಬುದನ್ನು 'ಪುರಾ' ಎಂದು ತಿಳಿಸಿ ಜ್ಯೋತಿರ್ನಾಥ ನಿಗೆ ಮಣಿದಿರುವನು. ಇಷ್ಟು ವಿಚಾರಮಥನದಿಂದ ಜ್ಯೋತಿರ್ನಾಥನ ಕಾಲವು ಸುಮಾರು ಕ್ರಿ. ಶ. 1150ರಿಂದೀಚಿನದಾಗಿದೆಯೆಂಬುದು ಸ್ಪಷ್ಟ.

ವ್ಯಾಖ್ಯಾಕಾರನಾದ ಶ್ರೀಧರಾಂಕನ ಕಾಲನಿರ್ಣಯ

ವ್ಯಾಖ್ಯಾನಕಾರನಾದ ಶ್ರೀಧರಾಂಕನು, ಲಕ್ಕಣ್ಣದಂಡೇಶನ (ಕ್ರಿ. ಶ. 1440) ಶಿವತತ್ತ್ವಚಿಂತಾಮಣಿಯ ಸಂಧಿ 38 ಪದ್ಯ 121 ರಲ್ಲಿ ಬಂದಿರುವ ತನ್ನ ಸಮಕಾಲೀನ ನೂತನ ಶರಣರನ್ನು ಹೇಳುವಲ್ಲಿ 'ಗೊರಗೋಡ ಬೊಪ್ಪಯ್ಯ'ನ ಹೆಸರು ಬಂದಿದೆ. ಈ ಗೊರಗೋಡ ಬೊಪ್ಪಯ್ಯನೇ ವ್ಯಾಖ್ಯಾಕಾರನು ಗ್ರಂಥಾಂತ್ಯ

* ಭೀಮಕವಿಯ ಬಸವಪುರಾಣದ ಸಂಧಿ 63-31, 63-32. ಪದ್ಮರಾಜಪುರಾಣ ದಲ್ಲಿ ಸಂಧಿ 2-26, 2-27, 28, 29, 30, 31ನ್ನೂ ಮತ್ತು ಸಾನಂದಚರಿತೆಯ 9-32, 9-49, 9-51ನ್ನೂ ನೋಡಿರಿ.

ದಲ್ಲಿ ಹೇಳಿರುವ ಗೊರಗೋಡಪುರವರಾಧೀಶ್ವರನಾದ ಬೊಪ್ಪಣದೇಶಿಕೇಂದ್ರನಾಗಿದ್ದಲ್ಲಿ ಈ ಬೊಪ್ಪಣದೇಶಿಕೇಂದ್ರನ ಕಾಲವೂ ಕ್ರಿ. ಶ. 1440 ಆಗಬೇಕಾಗುತ್ತದೆ. ಈ ಬೊಪ್ಪಣ ದೇಶಿಕೇಂದ್ರನ ತನೂಭವನಾದ ಮಲ್ಲಿಕಾರ್ಜುನಾಚಾರ್ಯನ ಆಜ್ಞಾನುಸಾರವಾಗಿ ಕನ್ನಡ ವ್ಯಾಖ್ಯಾನ ಬರೆದಿರುವುದಾಗಿ ತಿಳಿಸಿರುವ ಶ್ರೀಧರಾಂಕನ ಕಾಲವನ್ನು ಸು. ಕ್ರಿ. ಶ. 1460ಕ್ಕೆ ಹಾಕಬಹುದೆಂದು ಪ್ರಬುದ್ಧ ಕರ್ಣಾಟಕ ಪತ್ರಿಕೆಯಲ್ಲಿ (ಸಂಪುಟ 30, ಸಂಚಿಕೆ 4 ಪುಟ 105, 106 149) ಲಿಂ|| ಹೆಚ್. ದೇವೀರಪ್ಪನವರು ಊಹಿಸಿರುವುದು ಸರಿಯೆಂದು ತೋರುತ್ತದೆ. ವ್ಯಾಖ್ಯಾನಕಾರನಾದ ಶ್ರೀಧರಾಂಕನ ಕಾಲವನ್ನು ಕ್ರಿ. ಶ. 1460 ಎಂದು ಇಟ್ಟುಕೊಳ್ಳಬಹುದಾಗಿದೆ. ಕನ್ನಡ ಕವಿಚರಿತೆ, ಭಾಗ 1, ಪುಟ 474 ರಲ್ಲಿ ಅಮರಕೋಶಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿರುವ ನಾಚಿರಾಜನ ಕಾಲವನ್ನು ಸು. ಕ್ರಿ.ಶ. 1300 ಎಂದು ನಿರ್ಧರಿಸಿರುವರು. ಈ ನಾಚಿರಾಜೀಯವನ್ನು ಶ್ರೀಧರಾಂಕನು ಉಲ್ಲೇಖಿಸಿರುವುದರಿಂದ—ಈ ಕಾಲಕ್ಕೆ ಈಚಿನವನಾಗಿ ಕ್ರಿ. ಶ. 1460 ಎಂದು ಇಟ್ಟುಕೊಳ್ಳುವುದೇ ಸರಿಯೆಂದು ಕಾಣುತ್ತದೆ. ಗೊರಕೋಡ ಎಂಬ ಪಾಠಾಂತರವೂ ಶಿವತತ್ತ್ವಚಿಂತಾಮಣಿಯಲ್ಲಿ ಬಂದಿದೆ.

ವೀರಮಾಹೇಶ್ವರಾಚಾರ ಸಂಗ್ರಹದ ಸಿಂಹಾವಲೋಕನ

ಸಿಂಹಾವಲೋಕನದಂತೆ ಈ ವೀರಮಾಹೇಶ್ವರಾಚಾರಸಂಗ್ರಹವೆಂಬ ಬೃಹದ್ಗ್ರಂಥದ ಸಮಗ್ರ ಸ್ಥೂಲ ಪರಿಚಯಕ್ಕಾಗಿ ಈ ಗ್ರಂಥದ ಎಲ್ಲಾ ಅಧ್ಯಾಯಗಳ ವಿಷಯಾನುಕ್ರಮಣಿಕೆಯನ್ನು ಈ ಕೆಳಗೆ ಕೊಟ್ಟಿರುತ್ತದೆ. ಇದರಿಂದ ಓದುಗರಿಗೆ ಈ ಬೃಹದ್ಗ್ರಂಥದ ಸ್ವರೂಪವು ವಿದಿತವಾಗುತ್ತದೆ.

ಇಂತಿಷ್ಟು ಈ ವೀರಮಾಹೇಶ್ವರಾಚಾರಸಂಗ್ರಹದಲ್ಲಿರುವ ವಿಷಯಾನುಕ್ರಮಣಿಕೆ

ಪ್ರಾಣಲಿಂಗಧಾರಿಗಳಾದ ವೀರಶೈವರ ಸಂಸ್ಕೃತಿ ಆಗಮಸಂಸ್ಕೃತಿ ಎಂಬ ವಿಚಾರ

ವೇದಗಳ ಬಗೆಗೆ ವೀರಮಾಹೇಶ್ವರರ ನಿಲವು

ಅಗ್ನಿಪೂಜಕರಾದ ವೈದಿಕರಿಗೆ ವೇದಗಳು, ವೀರವೈಷ್ಣವರಿಗೆ ಪಾಂಚರಾತ್ರ ಆಗಮಗಳು, ಜೈನ–ಬೌದ್ಧರಿಗೆ ಜೈನ–ಬೌದ್ಧಾಗಮಗಳು ಹೇಗೋ ಹಾಗೆಯೇ ತಮಿಳುನಾಡಿನ ಶುದ್ಧಶೈವರಿಗೂ ಕಾಶ್ಮೀರದ ಮಾಹೇಶ್ವರರಿಗೂ ಕರ್ಣಾಟಕದ ವೀರಮಾಹೇಶ್ವರರಿಗೂ ಮತ್ತು ಉಳಿದ ಶೈವರೆಲ್ಲರಿಗೂ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳೂ ಪರಮಪ್ರಮಾಣಗಳು, ಸ್ವತಃ ಪ್ರಮಾಣಗಳು ಹಾಗೂ ವೇದಾಧಿಕ ಪ್ರಮಾಣಗಳು. ಈ ಆಗಮಗಳ ಆಧಾರದ ಮೇಲಿಂದ ಶಿವಸೂತ್ರಗಳು, ಪಾಶುಪತಸೂತ್ರಂ, ಅಗಸ್ತ್ಯಸೂತ್ರಂ, (ಶಕ್ತಿಸೂತ್ರಂ) ನಾಗಾನಂದಿಸೂತ್ರಂ, ರೌರವಸೂತ್ರಂ, ಸ್ವಾಯಂಭುವಸೂತ್ರಂ ಇತ್ಯಾದಿಗಳೂ ಹೊರಬಂದಿವೆ. ಶಿವೋಕ್ತಗಳಾದ 28 ಶಿವಾಗಮಗಳಲ್ಲಿನ ಧರ್ಮಕ್ಕೆ 'ಶಿವಧರ್ಮ'ವೆಂಬ, ಈ ಧರ್ಮವನ್ನು ಆಚರಿಸುವವರಿಗೆ ಶಿವಧರ್ಮಿಯರೆಂಬ ವ್ಯವಹಾರವು ಸಮಸ್ತ ಶೈವಸಾಧಾರಣವಾದುದಾಗಿದೆ. ವೇದಗಳು ಕ್ರಿಯಾ–ಜ್ಞಾನಕಾಂಡಗಳಾಗಿ ವೇದ–

-ವೇದಾಂತಗಳೆಂದು ವಿಭಕ್ತವಾಗಿ ವೈದಿಕರು-ವೇದಾಂತಿಗಳು ಎಂಬ ವ್ಯವಹಾರ ಉಂಟಾಗಿರುವಂತೆ ಕ್ರಿಯಾಪಾದ ಚರ್ಯಾಪಾದ ಜ್ಞಾನಪಾದ ಯೋಗಪಾದಗಳೆಂಬ ಚತುಷ್ಪಾದಾತ್ಮಕಗಳಾದ ಶಿವಾಗಮಗಳ ಕ್ರಿಯಾ-ಚರ್ಯಾಪಾದಗಳು ಆಗಮಪೂರ್ವಭಾಗವೆನಿಸಿ ಸ್ಥಿರಲಿಂಗಾರ್ಚಕರಾದ (ಸ್ಥಾವರಲಿಂಗಾರ್ಚಕರಾದ) ಶಿವಧರ್ಮೀಯರಿಗೂ ಎಂದರೆ ಷಡ್ವಿಧಶೈವರಿಗೂ, ಜ್ಞಾನ-ಯೋಗಪಾದಗಳು ಶಿವಾಗಮಗಳ ಉತ್ತರಭಾಗವೆನಿಸಿ 'ಶಿವಧರ್ಮೋತ್ತರ' ವೆಂದೂ 'ಅಂತೇ ಸಿದ್ಧಃ ಸಿದ್ಧಾಂತಃ' ಎಂಬಂತೆ ಶಿವಾಗಮಗಳ ಕೊನೆಯ ಭಾಗಗಳಲ್ಲಿ ಶಿವನಿಂದ ನಿರ್ಣಯಿಸಲ್ಪಟ್ಟುದಾಗಿ 'ಶಿವಸಿದ್ಧಾಂತ' ವೆಂದೂ ವೀರಶೈವರ ಷಟ್ಸ್ಥಲಸಿದ್ಧಾಂತವು ಈ ಭಾಗಗಳಲ್ಲಿರುವುದರಿಂದಾಗಿ 'ವೀರಶೈವಾಗಮ' ವೆಂದೂ ಪರಿಗಣಿತವಾಗಿ ಚರಲಿಂಗಾರ್ಚಕರಾದ ಎಂದರೆ ಲಿಂಗ (ಪ್ರಾಣಲಿಂಗ) ಧಾರಿಗಳಾಗಿ ಕರಪೀಠಾರ್ಚಕರಾದ ವೀರಮಾಹೇಶ್ವರರೆನಿಸಿದ ಶಿವಧರ್ಮೀಯರಿಗೂ ವಿಶಿಷ್ಟಗಳೆನಿಸಿವೆ. ಆದರೂ ಶೈವರೆಲ್ಲರೂ ಲಿಂಗಪೂಜಕರೇ ಆದುದರಿಂದ ಲಿಂಗಪೂಜಾದಿಗಳಿಗಾಗಿ ಕ್ರಿಯಾ-ಚರ್ಯಾಪಾದಗಳೂ ಸರ್ವಸಾಮಾನ್ಯಗಳೆನಿಸಿ ಪರಮಪ್ರಮಾಣಗಳಾಗಿರುತ್ತವೆ. ಶಿವಧರ್ಮಕ್ಕೆ ಈ 28 ಶಿವಾಗಮಗಳೇ ಮೂಲ ಆಕರಗಳು.

ವೀರಶೈವರ ಲಿಂಗಪೂಜಾ ವೈಶಿಷ್ಟ್ಯ

ಎಲ್ಲ ಶೈವರೂ ಲಿಂಗೋಪಾಸಕರೇ ಆದರೂ ಲಿಂಗ (ಪ್ರಾಣಲಿಂಗ) ಧಾರಿಗಳಾದ ವೀರಮಾಹೇಶ್ವರರ ಲಿಂಗೋಪಾಸನೆಯು ವಿಶಿಷ್ಟವಾದುದು. ಶಿವದೀಕ್ಷಾಸಂಸ್ಕಾರಪೂರ್ವಕವಾಗಿ ಶ್ರೀ ಗುರುವು

'ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್ |
ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ' ||

ಎಂಬಂತೆ ಶಿಷ್ಯನ ಪ್ರಾಣಕಲೆಯನ್ನು ಲಿಂಗದಲ್ಲಿಯೂ ಲಿಂಗಕಲೆಯನ್ನು ಶಿಷ್ಯನ ಪ್ರಾಣದಲ್ಲಿಯೂ ಪ್ರತಿಷ್ಠಿಸಿ ಪ್ರಾಣಲಿಂಗರೂಪವಾದ ಇಷ್ಟಲಿಂಗವನ್ನು ಶಿಷ್ಯನ ಕರಕ್ಕೆ ಕೊಟ್ಟು

"ತಲ್ಲಿಂಗಂ ದಾಪಯೇತ್ ಶಿಷ್ಯೇ 'ಪ್ರಾಣಲಿಂಗಮಿದಂ' ತವ |
ಏವಮುಕ್ತ್ವಾ ಸದಾ ಲಿಂಗಂ ನ ಕದಾಚಿತ್ ವಿಯೋಜಯೇತ್ ||

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ |
ಕದಾಚಿತ್ ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ||

ಯದಿ ಪ್ರಮಾದಾತ್ ಪತಿತೇ ಲಿಂಗೇ ದೇಹಾತ್ ಮಹೀತಲೇ ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ ॥

ಎಂದರೆ ಈ ಇಷ್ಟಲಿಂಗವು ನಿನ್ನ ಪ್ರಾಣಲಿಂಗವು. ಈ ಪ್ರಾಣಲಿಂಗವನ್ನು ಎಲ್ಲಿಯೂ ಯಾವಾಗಲೂ ದೇಹದಿಂದ ಅಗಲಿಸಬಾರದು. ಈ ಪ್ರಾಣಲಿಂಗವು ಅಕಸ್ಮಾತ್ ದೇಹದಿಂದ ಭೂಮಿಗೆ ಕಳಚಿ ಬಿದ್ದರೆ ಕೂಡಲೇ ಪ್ರಾಣಬಿಡಬೇಕು. ಈ ಲಿಂಗನಿಷ್ಠೆಯಿಂದ, ಈ ವೀರವ್ರತದಿಂದ ಮೋಕ್ಷಸಂಪದ ದೊರಕುತ್ತದೆ.

"ಉತ್ತಮಾಂಗೇ ಗಲೇ ಕಕ್ಷೇ ತಥಾ ವಕ್ಷಸ್ಥಲೇಽಪಿ ವಾ !
ತಥಾ ಹಸ್ತಸ್ಥಲೇ ವಾಽಪಿ ಪ್ರಾಣಲಿಂಗಂ ಧರೇತ್ ಸುಧೀಃ ॥

ನಾಭೇರಧೋ ಲಿಂಗಧಾರೀ ಪಾಪ್ಮನಾ ಚ ಸ ಯುಜ್ಯತೇ"

ಎಂದರೆ ಈ ಪ್ರಾಣಲಿಂಗ (ಇಷ್ಟಲಿಂಗ)ವನ್ನು ಶಿರಸ್ಸು, ಕೊರಳು, ಕಕ್ಷ, ಹೃದಯ, ಹಸ್ತಗಳಲ್ಲಿ ಧರಿಸಬೇಕು. ಹೊಕ್ಕುಳದಿಂದ ಕೆಳಭಾಗದಲ್ಲಿ ಧರಿಸಬಾರದು.

"ಅಪವರ್ಗೇಪ್ಸುರೀಶಾನಂ ಗಲೇ ಭಕ್ತಿಪರಾಯಣಃ ।
ಈಶ್ವರೇಣಾವಿನಾಭಾವಸಂಬಂಧಂ ಕರ್ತುಮಾತ್ಮನಃ ॥

ಮೂರ್ಧ್ನಿ ವಾ ಧಾರಯೇಲ್ಲಿಂಗಂ ನ ಕದಾಚಿತ್ ವಿಯೋಜಯೇತ್ ।
ಶಿವಸ್ಯ ನಿತ್ಯಸಂಯೋಗಪರಯಾ ನಿಜನಿಷ್ಠಯಾ ॥

ವಕ್ತ್ರೇ ವಾ ಧಾರಯೇತ್ ಲಿಂಗಂ ಮತ್ಪ್ರಭಾವಂ ವಿಭಾವಯೇತ್ ।
ತಸ್ಮಿನ್ ಸನ್ನಿಹಿತೇ ಕಿಂಚಿತ್ ನೋಚ್ಛಿಷ್ಟಮಿತಿ ನಿಶ್ಚಿತಮ್ ॥"

ಎಂದರೆ ಮೋಕ್ಷಬೇಕೆಂದಲ್ಲಿ ಕೊರಳಲ್ಲಿ ಧರಿಸಬೇಕು. ತನಗೂ ಶಿವನಿಗೂ ಅವಿನಾಭಾವಸಂಬಂಧನಿರುವಂತೆ ಮಾಡಲು ಶಿರಸ್ಸಿನಲ್ಲಿ ಈ ಲಿಂಗವನ್ನು ಧರಿಸಬೇಕು. ಯಾವಾಗಲೂ ಅಗಲಿರಬಾರದು. ತನ್ನ ನಿಜನಿಷ್ಠೆಯಿಂದ ನಿತ್ಯಸಂಯೋಗವಿರಬೇಕೆಂಬುದಾದರೆ ಬಾಯಲ್ಲಿಯಾದರೂ ಧರಿಸಬಹುದು. ಲಿಂಗಸಾನ್ನಿಧ್ಯದಿಂದಾಗಿ ಉಚ್ಛಿಷ್ಟವೆನಿಸುವುದಿಲ್ಲ. ಪ್ರಾಣಲಿಂಗಧರರು (ಲಿಂಗಧಾರಿಗಳು) ಮೃತರಾದಾಗಲೂ ಈ ಲಿಂಗವನ್ನು ಬೇರ್ಪಡಿಸಬಾರದು ಮತ್ತು ದಹನಸಂಸ್ಕಾರವನ್ನೂ ಮಾಡಬಾರದು. ಕೇವಲ ಖನನ ಮಾಡಿ ಲಿಂಗಸಮೇತವಾಗಿ ಸಮಾಧಿಗೈಯಬೇಕು.

'ಸ್ತ್ರೀ ವಾಽಥ ಪುರುಷಃ ಷಂಡಃ ಚಂಡಾಲೋ ದ್ವಿಜವಂಶಜಃ ।
ನ ಜಾತಿಭೇದೋ ಲಿಂಗಾರ್ಚೇ ಸರ್ವೇ ರುದ್ರಸಮಾಃ ಸ್ಮೃತಾಃ ॥ '

ಎಂದರೆ ಸ್ತ್ರೀಯಾಗಲಿ ಪುರುಷನಾಗಲಿ ಷಂಡನಾಗಿರಲಿ, ಬ್ರಾಹ್ಮಣನಾಗಿರಲಿ ಯಾರೇ ಆಗಿರಲಿ ಲಿಂಗಪೂಜೆಗೆ ಲಿಂಗಧಾರಣೆಗೆ ಜಾತಿಭೇದವಿಲ್ಲ. ಅಷ್ಟೇ ಅಲ್ಲ ಲಿಂಗಾರ್ಚಕರಾದ ಈ ಎಲ್ಲ ಶಿವಭಕ್ತರೂ ರುದ್ರಸಮರೆನಿಸುವರು. ' ಪೂಜಾಲೋಪೋ ನ ಕರ್ತವ್ಯಃ ಸೂತಕೇ ಮೃತಕೇऽಪಿ ವಾ ' ಎಂದರೆ ಜನನಸೂತಕ ಮರಣಸೂತಕ ಕಾಲಗಳಲ್ಲಿಯೂ ಸಹ ಲಿಂಗಪೂಜೆಯನ್ನು ನಿಲ್ಲಿಸಬಾರದು.

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋರಮಂ ।
ಅರ್ಚಯೇತ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥

ಎಂದರೆ, ತ್ರಿಕಾಲದಲ್ಲಿಯೂ ಸದಾ ಶುಚಿರ್ಭೂತವಾಗಿ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿಟ್ಟುಕೊಂಡೇ ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಲಿಂಗಗುಣಗಳನ್ನು ತನ್ನ ಅಂಗದಲ್ಲಿ ಅಳವಡಿಸಿಕೊಳ್ಳುತ್ತಾ ಶಿವಯೋಗಸಾಧನೆಯಿಂದ ಶಿವನಲ್ಲಿ ಜೀವತ್ವನಿವೃತ್ತಿ ಪೂರ್ವಕವಾಗಿ ಶಿವನಲ್ಲಿ ಅವಿನಾಭಾವದಿಂದ ಬೆರೆತು ಶಿವತ್ವ ಪ್ರಾಪ್ತಿ ಸಾಧಿಸಬೇಕು. ಇಂತಾಗಲು ಪಂಚಮಪುರುಷಾರ್ಥವೆಂದು ಶಿವಧರ್ಮೀಯರು ಪರಿಗಣಿಸಿರುವ ಶಿವಭಕ್ತಿಯೊಂದೇ ಪರಮಸಾಧನ. ಈ ಸಾಧನದಿಂದ ಪಂಚಾಚಾರ ಪರಾಯಣನಾಗಿ ಅಷ್ಟಾವರಣನಿಷ್ಠಾಗರಿಷ್ಠನಾಗಿ ಷಟ್ಸ್ಥಲವನ್ನು ಸಾಧಿಸಿಕೊಳ್ಳಬೇಕು. ಸರ್ವಜೀವಾವಳಿಗೂ ಲೇಸುಂಟಾಗುವ ರೀತಿಯಲ್ಲಿ ನೈತಿಕವಾಗಿ ನಡೆದುಕೊಳ್ಳಬೇಕು. ಇತ್ಯಾದಿ ಬೋಧೆಯಿತ್ತು ಅನುಗ್ರಹಿಸಿದ ಇಷ್ಟಲಿಂಗ (ಪ್ರಾಣಲಿಂಗ) ವನ್ನು ಸದಾ ಧರಿಸಿ ಕರಪೀಠದಲ್ಲಿಯೇ ಅರ್ಚನೆ ಹಾಗೂ ಶಿವಯೋಗಾನುಸಂಧಾನ (ನಿಟ್ಟೆರಗಿನ ಲಿಂಗದೃಷ್ಟಿ) ಮಾಡುವ ವೀರಮಾಹೇಶ್ವರರಿಗೆ ಈ ಶಿವಾಗಮೋತ್ತರ ಭಾಗಗಳಾದ ಜ್ಞಾನ-ಯೋಗಪಾದಗಳು ಪ್ರಧಾನವಾಗಿ ಸಂಬಧಿಸಿದವುಗಳಾಗಿ ಶಿವಧರ್ಮೋತ್ತರ, ಶಿವಸಿದ್ಧಾಂತ, ವೀರಶೈವಾಗಮಗಳೆನಿಸಿ ಪ್ರಥಿತವಾಗಿವೆ.

ವೇದಗಳ ಬಗೆಗೆ ವೀರಮಾಹೇಶ್ವರರಾದ ಶಿವಾಗಮಿಕರ ನಿಲವು

ವೇದಗಳಿಗೂ-ಶಿವಾಗಮಗಳಿಗೂ ಬಹಳ ಅಂತರವಿದೆ. ವೇದ ಸಂಸ್ಕೃತಿ ಆಗಮ ಸಂಸ್ಕೃತಿಗಳು ಭಿನ್ನ ಭಿನ್ನಗಳು. ವೇದಗಳಿಗಿಂತಲೂ ಹಿಂದಿನ ಭಾರತೀಯರ ಸಂಸ್ಕೃತಿ ಶಿವಾಗಮಸಂಸ್ಕೃತಿ. ವೇದಗಳು ಶಿವನ ನಿಃಶ್ವಾಸ (ಅಸ್ಫುಟವಾಣಿ) ಗಳೆಂದೂ ಶಿವಾಗಮಗಳು ಶಿವನ ಸ್ಫುಟವಾಣಿಗಳೆಂದೂ ವೇದಕ್ಕೂ ಹಿಂದಿನ ಭಾರತೀಯರ ಜ್ಞಾನರಾಶಿಯೆಂದೂ ಅನಾದಿಕಾಲದಿಂದಲೂ ಶಿವಭಕ್ತರು ಭಾವಿಸಿ ವೇದಗಳಿಗೆ ಪರತಃ ಪ್ರಾಮಾಣ್ಯವನ್ನೂ ಶಿವಾಗಮಗಳಿಗೆ ಸ್ವತಃ ಪ್ರಾಮಾಣ್ಯವನ್ನೂ ಸಾಧಿಸುತ್ತಾ ಆಗಮ-ಪ್ರಾಣರಾಗಿರುವರು. ಈ ಶಿವಾಗಮಗಳಿಗೆ ತಂತ್ರಗಳೆಂಬ ಪರ್ಯಾಯ

ನಾಮವೂ ಉಂಟು. ಭಾರತೀಯರಲ್ಲಿ ತಾಂತ್ರಿಕರು, ವೈದಿಕರು, ವೈದಿಕ-ತಾಂತ್ರಿಕರು ತಾಂತ್ರಿಕವೈದಿಕರು ಎಂದು ನಾಲ್ಕು ಬಗೆಗಳಿರುತ್ತವೆ. ಇವುಗಳಲ್ಲಿ ವೀರಮಾಹೇಶ್ವರರು ಅಥವಾ ಪ್ರಾಣಲಿಂಗ (ಇಷ್ಟಲಿಂಗಧಾರಿ) ಧಾರಿಗಳಾದ ವೀರಶೈವರು ತಾಂತ್ರಿಕ-ವೈದಿಕರೆನಿಸಿ ವೇದಾಗಮೋಭಯಪ್ರೀತರಾಗಿರುವರು. ತಾಂತ್ರಿಕ ವೈದಿಕರೆಂದರೆ ತಂತ್ರಕ್ಕೆ ಎಂದರೆ ಶಿವಾಗಮಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನೂ ವೇದಕ್ಕೆ ತಕ್ಕಮಟ್ಟಿನ ಗೌರವವನ್ನೂ ತೋರಿಸತಕ್ಕವರು. ಉದಾಹರಣೆಗೆ ವೀರಮಾಹೇಶ್ವರ ಮತೋದ್ಧಾರಕರಾದ ಶ್ರೀ ಬಸವಣ್ಣನವರು ವೇದಗಳ ಬಗೆಗೆ 'ವೇದವೆಂಬುದನರಿಯಿರಿ. ಕೊಲ್ಲು ಎಂದು ಹೇಳಿತ್ತೇ ವೇದ?' ಎಂದು ಪಶುಬಲಿ ಮುಂತಾದ ಕರ್ಮಕಾಂಡವಾದ ವೇದದ ಪೂರ್ವಭಾಗವನ್ನು ಖಂಡಿಸಿದ್ದರೂ 'ಕೂಡಲಸಂಗಮದೇವನೊಬ್ಬನಲ್ಲದೆ ಇಲ್ಲ ಎಂದಿತ್ತು ಆ ವೇದ' ಎಂಬಲ್ಲಿ ವೇದದ ಉತ್ತರ ಭಾಗವಾದ ಜ್ಞಾನಕಾಂಡಾತ್ಮಕ ವೇದಾಂತಭಾಗದ ಶಿವಾಗಮಗಳಿಗೆ ಅವಿರೋಧಗಳಾದ 'ಶಿವ ಏಕೋ ಧ್ಯೇಯಃ ಸರ್ವಮನ್ಯತ್ಪರಿತ್ಯಜ್ಯ' 'ಈಶಾವಾಸ್ಯಮಿದಗ್ಂ ಸರ್ವಂ' 'ವಿಶ್ವತಶ್ಚಕ್ಷುರುತ ವಿಶ್ವತೋಮುಖೋ' ಇತ್ಯಾದಿ ವೇದಾಂತ ಭಾಗಗಳನ್ನು ತಮ್ಮ ವಚನದಲ್ಲಿ ಸ್ವೀಕರಿಸಿ ಉದಾಹರಿಸುತ್ತಾರೆ.

'ವೇದಾಂತಜನ್ಯಂ ಯತ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ |
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ ||'

ಎಂದು ಸಿದ್ಧಾಂತಶಿಖಾಮಣ್ಯಾದಿಗಳಲ್ಲಿ ಹೇಳಿರುವಂತೆ ಜ್ಞಾನಭಾಗವಾದ ವೇದವನ್ನು ಮಾತ್ರ ಪುರಸ್ಕರಿಸುವರು.

'ಶಿವಾರ್ಥೇ ದೇಹಸಂಶೋಷಃ ತಪಃ, ಕೃಚ್ಛ್ರಾದಿ ನೋ ಮತಂ |
ಶಿವಾರ್ಚಾ ಕರ್ಮವಿಜ್ಞೇಯಂ, ಬಾಹ್ಯಂ ಯಾಗಾದಿ ನೋಚ್ಯತೇ |
ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ |
ರುದ್ರಾಧ್ಯಾಯಾದಿಕಾಭ್ಯಾಸೋ ನ ವೇದಾಧ್ಯಯನಾದಿಕಂ |
ಧ್ಯಾನಂ ಶಿವಸ್ಯ ರೂಪಾದಿಚಿಂತಾ ನಾತ್ಮಾದಿಚಿಂತನಂ |
ಶಿವಾಗಮಾರ್ಥವಿಜ್ಞಾನಂ ಜ್ಞಾನಂ, ನಾನ್ಯಾರ್ಥವೇದನಂ |
ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ ||'

ಎಂದರೆ ಶಿವಾರ್ಥಕ್ಕಾಗಿ ದೇಹವನ್ನು ದಂಡಿಸುವುದೇ ತಪವಲ್ಲದೆ, ವ್ರತಾದಿಗಳಿಂದ ದೇಹವನ್ನು ಕೃಶಪಡಿಸುವುದು ತಪವೆನಿಸದು. ಶಿವಪೂಜಾಕರ್ಮವೇ ಕರ್ಮವಲ್ಲದೆ ಇನ್ನಿತರ ವೈದಿಕರ ಯಾಗಾದಿ ಕರ್ಮಗಳು ಕರ್ಮಗಳೆನಿಸವು. ಆ ಕರ್ಮಗಳು

ಆಗಮಿಕರಿಗೆ ನಿಷಿದ್ಧಗಳು. ಜಪವೆಂದರೆ ಶಿವಪಂಚಾಕ್ಷರೀ ಮಂತ್ರವೇ ಜಪ, ಅಥವಾ ಪ್ರಣವೋಪಾಸನೆ ಜಪ. ಬೇರಾವೂ ಜಪಗಳಲ್ಲ. ವೇದದಲ್ಲಿ ರುದ್ರಾಧ್ಯಾಯಾದಿಗಳ ಅಭ್ಯಾಸಮಾತ್ರವೇ ಅಭ್ಯಾಸ. ಉಳಿದ ವೇದಾಧ್ಯಯನ ನಿಷಿದ್ಧ. ಶಿವನ ರೂಪಾದಿ ಚಿಂತನೇ ಧ್ಯಾನವಲ್ಲದೆ ಆತ್ಮಾದಿಚಿಂತನೆಯು ಧ್ಯಾನವೆನಿಸದು. ಶಿವಾಗಮಗಳನ್ನರಿಯುವುದೇ ಜ್ಞಾನ. ಇತರ ಶಾಸ್ತ್ರಾರ್ಥಗಳ ಜ್ಞಾನವು ಜ್ಞಾನವಲ್ಲ. ಹೀಗೆ ಶಿವಭಕ್ತರಿಗೆ ಪಂಚಪ್ರಕಾರವಾದ ಶಿವಯಜ್ಞವು ವಿಧಾಯಕವಾಗಿದೆ. ಈ ಪಂಚಪ್ರಕಾರಾತ್ಮಕವಾದ ಶಿವಯಜ್ಞವು ಎಲ್ಲ ಶಿವಾಗಮಾನುಯಾಯಿಗಳ ನಿಲವು. ವೀರಮಾಹೇಶ್ವರರ ನಿಲವೂ ಇದೇ. ಶಿವವಿದ್ಯೆಯ ಮುಂದೆ ವೇದವಿದ್ಯೆಯು ಸಲ್ಲ. ಪಾಲ್ಕುರಿಕೆ ಸೋಮನಾಥನು ತನ್ನ ಬಸವರಾಜೀಯಂ ಎಂಬ ಭಾಷ್ಯದಲ್ಲಿ ವೇದ ಮತ್ತು ಆಗಮಗಳ ಬಗೆಗೆ

'ವೇದಶಾಸ್ತ್ರಪುರಾಣಾದ್ಯಾಃ ಜ್ಞೇಯಾ ವೇಶ್ಯಾವಧೂರಿವ ।
ಯಾ ಪುನಶ್ಶಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ ॥"

ಎಂದು ಕಟುವಾಗಿಯೇ ತಿಳಿಸಿ ಶಿವಾಗಮಸ್ಥ ಶಿವಜ್ಞಾನವು ವೇದಜ್ಞಾನಕ್ಕಿಂತಲೂ ಮಿಗಿಲು ಹಾಗೂ ಶುದ್ಧ ಎಂಬುದನ್ನು ಸಾರಿದ್ದಾನೆ. ವೀರಮಾಹೇಶ್ವರರ ಸಿದ್ಧಾಂತದಲ್ಲಿ ವರ್ಣಾಶ್ರಮವನ್ನು ಒಪ್ಪುವುದಿಲ್ಲ. ಇವರು ಅತಿವರ್ಣಾಶ್ರಮಿಗಳು, ಶಿವಾಶ್ರಮಿಗಳು. ಜಾತಿ ಭೇದಗಳನ್ನು ತೊಡೆದುಹಾಕಿ ಸರ್ವರಿಗೂ ಸಮಾನತೆಯನ್ನಿತ್ತು ಸೋದರತ್ವವನ್ನೂ ಕಾರುಣ್ಯವನ್ನೂ ಸಾಧಿಸಿ ಸರ್ವರಿಗೂ ಲಿಂಗೋಪಾಸನಾಧಿಕಾರ ಲಿಂಗಧಾರಣಾಧಿಕಾರ ಕೊಟ್ಟು ಕಾಯಕತತ್ವವನ್ನು ಕಡ್ಡಾಯಗೊಳಿಸಿ ಸಂಪೂರ್ಣವಾಗಿ ನೀತಿಯ ನೆಲಗಟ್ಟಿನ ಮೇಲೆ ಶಿವಧರ್ಮದಲ್ಲಿ ಸರ್ವರನ್ನೂ ನಿಲ್ಲಿಸಿತು. ಈ ಶಿವಾಗಮಾನುಯಾಯಿಗಳಾದ ವೀರಮಾಹೇಶ್ವರರ ವೈಶಿಷ್ಟ್ಯವೆಂದರೆ ಲಿಂಗಧಾರಣೆ. ಅದೂ ಪ್ರಾಣಲಿಂಗಧಾರಣೆ. ಈ ಲಿಂಗವನ್ನು ಸದಾ ಮೈಮೇಲೆ ಆಗಲದಂತೆ ಧರಿಸಿ ಕರಪೀಠದಲ್ಲಿಯೇ ಅರ್ಚಿಸಿ-ಕರಪೀಠದ ಲಿಂಗದ ಮೂಲಕವೇ ಶಿವಯೋಗಸಾಧನೆ ಮಾಡಿ ಶಿವತ್ವ ಗಳಿಸುವುದು. ಇಂತಹ ವೀರಮಾಹೇಶ್ವರರ ಲಕ್ಷಣಗಳೇನು ? ಅವರ ಆಚರಣೆಗಳು ಹೇಗಿರಬೇಕು ? ಇವರ ಸಿದ್ಧಾಂತವೆಂತಹುದು? ಇವರ ಮನೋಭಾವಗಳು ಎಂತಿರುವುವು ? ಎಂಬುದನ್ನು ಸಮನ್ವಯ ದೃಷ್ಟಿಯಿಟ್ಟುಕೊಂಡು ವೇದ-ಆಗಮ-ಪುರಾಣೇತಿಹಾಸಾದಿಗಳಿಂದ ಈ ವೀರಮಾಹೇಶ್ವರಾಚಾರಸಂಗ್ರಹ ಗ್ರಂಥವನ್ನು ನಿರೂಪಿಸಿರುವನು. ಹೆಚ್ಚು ಸದಾಚಾರಕ್ಕೆ ಒತ್ತು ಕೊಟ್ಟು ರಚಿಸಿರುತ್ತಾನೆ. ಗ್ರಂಥದ ಹೆಸರೂ ಅನ್ವರ್ಥಕವಾಗಿಯೇ ಇದೆ.

ಲಿಂಗೋಪಾಸನೆ ಶೈವಾಗಮ ಸಂಸ್ಕೃತಿ ಮತ್ತು ಅದರ ಪ್ರಾಚೀನತೆ

ಶಿವಾಗಮಗಳು ಸರ್ವರನ್ನೂ ಲಿಂಗಪೂಜಕರನ್ನಾಗಿಸಿ ಶಿವಂಕರ ಶಿವಮಾರ್ಗವನ್ನು ಸರ್ವರಿಗೂ ಸಮಾನತೆ-ಸೋದರತೆ-ಕಾರುಣ್ಯ ಮುಂತಾದ ಸಕಲ ಜೀವಾವಳಿಗೆ ಲೇಸುಂಟುಮಾಡಿ, ತಾನೂ ಶಿವಾನುಗ್ರಹ ಪಡೆದು ಮುಕ್ತನಾಗುವಂತಹ ವೈಶಾಲ್ಯ ಮನೋಭಾವದ ಶಿವಜ್ಞಾನವನ್ನು ಬೋಧಿಸುತ್ತವೆ. ಅವರಿವರೆನ್ನದೆ ಸ್ತ್ರೀ-ಪುರುಷ ಚಂಡಾಲ-ಬ್ರಾಹ್ಮಣ ಯಾರೇ ಆಗಿರಲಿ ಎಲ್ಲರಿಗೂ ಸಮಾನ ಧರ್ಮಾವಕಾಶವನ್ನು ಈ ಶಿವಧರ್ಮವು ಅನಾದಿಯಿಂದಲೂ ಕೊಟ್ಟಿದೆ ಎಂಬುದಕ್ಕೆ ಸರ್ವರೂ ಸ್ವಹಸ್ತಗಳಿಂದಲೇ ಪೂಜಿಸಿಕೊಂಡು ಬಂದಿರುವ, ಈಗಲೂ ಪೂಜಿಸುತ್ತಿರುವ ಭಾರತಾದ್ಯಂತ ಶ್ರೀಶೈಲ-ಕಾಶೀ ಮುಂತಾದ ಕ್ಷೇತ್ರಗಳಲ್ಲಿರುವ ದ್ವಾದಶಜ್ಯೋತಿರ್ಲಿಂಗಗಳೇ ಇವುಗಳ ಉಪಾಸನೆಯೇ ಈ ಶಿವಾಗಮಧರ್ಮದ ಮನೋವೈಶಾಲ್ಯಕ್ಕೆ, ಲೋಕಕಾರುಣ್ಯಕ್ಕೆ, ವಿಶ್ವಭ್ರಾತೃತ್ವಕ್ಕೆ ಮಹಾಸಾಕ್ಷೀಭೂತಗಳಾಗಿವೆ. ಅಲ್ಲದೆ ಈ ಲಿಂಗೋಪಾಸನೆಯು ಒಂದಾನೊಂದು ಕಾಲಕ್ಕೆ ಪ್ರಪಂಚಾದ್ಯಂತ ಹರಡಿತ್ತು ಎಂಬುದಕ್ಕೆ ಪ್ರಾಚೀನ ಇತಿಹಾಸದ ಸಾಕ್ಷಿಗಳೂ ಸಾಕಷ್ಟಿವೆ. ಈ ಶಿವಾಗಮ ಸಂಸ್ಕೃತಿಯೇ ಮೂಲ ಭಾರತೀಯ ಸಂಸ್ಕೃತಿ. ಈ ದೇಶಕ್ಕೆ ವಲಸೆ ಬಂದುದು ವೈದಿಕಸಂಸ್ಕೃತಿ. ಈ ಎರಡು ಸಂಸ್ಕೃತಿಗಳಲ್ಲಿ ಮಹದಂತರಗಳಿವೆ. ಇದ್ದರೂ ಈಗ ಭಾರತದಲ್ಲಿ ವೇದಸಂಸ್ಕೃತಿಯ ಮಿಶ್ರವಾದ ಶೈವಸಂಸ್ಕೃತಿಯನ್ನು ಕಾಣುತ್ತೇವೆ.

ಶಿವಾಗಮಗಳ ಉಜ್ಜೀವನ ಕಾರ್ಯ

ಈ ಶಿವಾಗಮ ಸಂಸ್ಕೃತಿಯು ಭಾರತದಲ್ಲಿ ಕಾಶ್ಮೀರ-ತಮಿಳುನಾಡು-ಕರ್ಣಾಟಕಗಳಲ್ಲಿ ತಮ್ಮ ಪ್ರಾಂತೀಯ ಭಾಷೆಗಳಲ್ಲಿಯೂ ಮತ್ತು ಸಂಸ್ಕೃತದಲ್ಲಿಯೂ ಉಜ್ಜೀವಿತವಾಗಿದೆ ಎಂಬುದಕ್ಕೆ ಕಾಶ್ಮೀರ ವಿಬುಧರ ಕಾಶ್ಮೀರಿ ಹಾಗೂ ಸಂಸ್ಕೃತ ಭಾಷಾಗ್ರಂಥಗಳೂ, ತಮಿಳಿನಲ್ಲಿರುವ ಒಂಭತ್ತು ಶಿವಾಗಮಾಧಾರಗಳ ಮೇಲೆ 3000 ಪದ್ಯಾತ್ಮಕವಾಗಿ ರಚಿಸಿರುವ ತಿರುಮೂಲರ್ ಎಂಬ ಪ್ರಸಿದ್ಧ ಶೈವಾಚಾರ್ಯರ 'ತಿರುಮಂದಿರಂ' ಎಂಬ ಮಹಾಕೃತಿ. ಮೆಯಕಂಡ ದೇವರ್ ಅವರು ರೌರವಾಗಮದ 12 ಸೂತ್ರಾಧಾರಗಳಿಂದ ರಚಿಸಿರುವ ಶಿವಜ್ಞಾನಬೋಧೆ ಎಂಬ ದ್ರಾವಿಡ ಕೃತಿ, ಅಘೋರಶಿವಾಚಾರ್ಯಕೃತ ಸಂಸ್ಕೃತದ 'ಮೃಗೇಂದ್ರಾಗಮ ವೃತ್ತಿದೀಪಿಕಾ' ಸೋಮಶಂಭುವಿನ ಸಕಲಾಗಮಸೇತುವೆನಿಸಿರ್ಪ 'ಸೋಮಶಂಭುಪದ್ಧತಿಃ, ಜ್ಯೋತಿರ್ನಾಥನ 'ಶೈವರತ್ನಾಕರಃ' ಕರ್ಣಾಟಕದ ಶಿವಶರಣರ ಕನ್ನಡ ವಚನಶಾಸ್ತ್ರ, ಪಾಲ್ಕುರಿಕೆ ಸೋಮನಾಥನ ಸಮಗ್ರ ಕೃತಿಗಳು, ಶಿವಯೋಗಿ

ಕೃತ ಸರ್ವಾಗಮಸಾರಭೂತವಾದ 'ಸಿದ್ಧಾಂತಶಿಖಾಮಣಿಃ,' ಜಕ್ಕಣಾರ್ಯಕೃತ 'ಏಕೋತ್ತರಶತಸ್ಥಲೀ' ಮೊಗ್ಗೆಮಾಯಿದೇವನ ಸಮಗ್ರ ಕೃತಿಗಳು, ನೀಲಕಂಠ ಶಿವಾಚಾರ್ಯನ 'ಕ್ರಿಯಾಸಾರಃ,' ವಿರಕ್ತತೋಂಟದಾರ್ಯನ 'ಕೈವಲ್ಯಸಾರಃ' ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ' ಶಿವತಾಂತ್ರಿಕರ ಚರಣಾಂಬುಜಕ್ಕೆ ಶರಣು' ಎಂದು ಶೈವಾಗಮಿ ಕರಾದ ವೀರಮಾಹೇಶ್ವರರಿಗೆ ನಮಿಯುತ್ತ ಬರೆದಿರುವ 'ಶಿವತತ್ತ್ವ ಚಿಂತಾಮಣಿ,' ಇತ್ಯಾದಿ ಶಿವಾಗಮ ಸಾಹಿತ್ಯ ವಿಪುಲವಾಗಿ ಬೆಳೆದುಬಂದಿದ್ದರೂ, 28 ಶಿವಾಗಮಗಳ ಸಮಗ್ರಪರಿಚಯಾತ್ಮಕ ಗ್ರಂಥ ಭಾರತದೇಶದಲ್ಲಿ ಸಂಸ್ಕೃತದಲ್ಲೂ ಭಾರತೀಯ ಇತರ ಭಾಷೆಗಳಲ್ಲಿಯೂ ದೊರೆತಿಲ್ಲ. ವ್ಯಷ್ಟಿಯಾಗಿ ಪರಿಚಯಿಸುವ ಕೃತಿಗಳು ಹಲವಿದ್ದರೂ ಸಮಷ್ಟಿಯಾಗಿ 28 ಶಿವಾಗಮಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಕೃತಿಯೆಂದರೆ ಕನ್ನಡ ನಾಡಿನ ಶ್ರೀ ನಿಜಗುಣಶಿವಯೋಗಿಗಳ 'ವಿವೇಕ ಚಿಂತಾಮಣಿ' ಎಂಬ ಕನ್ನಡಗ್ರಂಥ ಮಾತ್ರವಾಗಿದೆ. ಇದು ಕನ್ನಡದಲ್ಲಿನ ವಿಶ್ವಕೋಶದಂತಿದ್ದು ಒಂದು ಪ್ರಕರಣದಲ್ಲಿ ಸ್ಥೂಲವಾಗಿ ಸಮಗ್ರ ಶಿವಾಗಮಗಳ ಪರಿಚಯುವನ್ನು ಕೊಡತಕ್ಕ ಅಖಂಡ ಭಾರತದಲ್ಲಿನ ಏಕೈಕ ಗ್ರಂಥವಾಗಿದೆ. ಈ ಅಂಶವನ್ನು ಕಪಟರಾಳ್ ಕೃಷ್ಣರಾಯರು ತಮ್ಮ 'ಲಾಕುಳಶೈವರ ಇತಿಹಾಸ'ವೆಂಬ ಗ್ರಂಥದಲ್ಲಿ ತಿಳಿಸಿರುವರು.

ಕಾಮಿಕಾದಿವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳ ಮೂಲಕ ಶಿವಪ್ರತಿಷ್ಠಿತವಾದ ಈ ಶಿವಧರ್ಮವನ್ನು ನಂದ್ಯಾದಿಪ್ರಮಥರೂ ಶ್ವೇತಾಚಾರ್ಯಾದಿ ಲಕುಲೀಶಾಂತಯೋಗಾಚಾರ್ಯರೂ ರುರು ಉಪಮನ್ಯು ದಧೀಚಿ ದುರ್ವಾಸ ಗೌತಮ ಅಗಸ್ತ್ಯಾದಿ ಋಷಿಪುಂಗವರೂ ಸಾನಂದಶಿವಯೋಗಿ ಮುಂತಾದ ಮುನಿಗಳೂ ಕಾಶ್ಮೀರದ ವಿಬುಧರೂ ತಮಿಳುನಾಡಿನ ಶೈವಾಚಾರ್ಯರೂ ಕರ್ಣಾಟಕದ ಬಸವಾದಿ ಶಿವಶರಣ-ಶರಣೆಯರೂ ಬೆಳೆಸಿಕೊಂಡು ಬಂದು ಅವಿಸ್ಮರಣೀಯರಾಗಿರುವರು. ಅದರಲ್ಲೂ ಶ್ರೀಲಕುಲೀಶ ಮಹಾಯೋಗಿಯ ಪ್ರಭಾವ ವಂತೂ ಭಾರತಾದ್ಯಂತ ಪ್ರಭಾವಶಾಲಿಯಾಗಿ ಸಮಸ್ತ ಶಿವಧರ್ಮೀಯರ ಮೇಲೆ ಅಚ್ಚಳಿಯದಂತೆ ಕ್ರಿ.ಶ. 17ನೆಯ ಶತಕದವರೆಗೂ ಅಚ್ಚೊತ್ತಿದ್ದಂತೆ ನಿಂತಿವೆ ಯೆಂಬುದಕ್ಕೆ ಶೈವಶಾಸನಾಧಾರಗಳೂ ಶೈವಸಾಹಿತ್ಯಾಧಾರಗಳೂ ವಿಪುಲವಾಗಿವೆ. ಅಗಸ್ತ್ಯನಷ್ಟೇ ಶಿವಾಗಮಗಳಿಗೆ ಶೈವಧರ್ಮಕ್ಕೆ ಇತ್ತಿರುವ ಕೊಡುಗೆ ಅಪಾರ ಅವಿಸ್ಮರಣೀಯ.

ಚಾರಿತ್ರಿಕವಾಗಿ ಲಿಂಗಧಾರಣೆಯ ಸಮೀಕ್ಷೆ

ಇನ್ನು ಈ ಲಿಂಗಧಾರಿಗಳಾದ ವೀರಮಾಹೇಶ್ವರರ ಲಿಂಗಧಾರಣೆಯನ್ನು ಚಾರಿತ್ರಿಕವಾಗಿ ಕಾಣಲು—

1. ಕ್ರಿ.ಶ. 2-3-4ನಲ್ಲಿ ಶಿವಸಮುತ್ಪಾದಿತ ರಾಜವಂಶದವರಾಗಿ ಹಿಂದೂಧರ್ಮ ಸಂರಕ್ಷಕರಾಗಿ ಶಿವಧರ್ಮೋದ್ಧಾರಕರಾಗಿ ಸಮ್ರಾಟರೆನಿಸಿ ಬಾಳಿದ ನಾಗವಂಶೀಯರಾದ-ಭವನಾಗಾದಿ ಭಾರಶಿವರಾಜರುಗಳು ಲಿಂಗಧಾರಿಗಳಾಗಿದ್ದರೆನ್ನಲು — 'ಅಂಸಭಾರ ಸನ್ನಿವೇಶಿತಶಿವಲಿಂಗೋದ್ವಹನಶಿವಪರಿತುಷ್ಟಸಮುತ್ಪಾದಿತರಾಜವಂಶಾನಾಮ್' ಎಂಬ ಅವರ ಶಾಸನಸ್ಥ ವಾಕ್ಯವು ಭಾರಶಿವರು ಲಿಂಗಧಾರಿಗಳಾಗಿದ್ದರೆಂದು ಸ್ಪಷ್ಟಪಡಿಸುತ್ತದೆ.

2. ಕ್ರಿ.ಶ. 4-5. ಇದೇ ಭಾರಶಿವರ ಬೀಗರಾಗಿ ಭಾರಶಿವರ ಪುತ್ರಿಯ ಸಂಬಂಧ ಮಾಡಿ ಭಾರಶಿವರ ಸಮ್ರಾಟ್ ಗಿರಿಯನ್ನೂ ಭಾರಶಿವರು ತಾವಾಗಿಯೇ ವಾಕಾಟಕ ಸಾಮ್ರಾಜ್ಯದಲ್ಲಿ ವಿಲೀನ ಮಾಡಿಕೊಟ್ಟುದರಿಂದ—ಮಹಾಸಮ್ರಾಟರೆನಿಸಿ ಭಾರಶಿವರಂತಯೇ ಮುಂದುವರಿದು—ಉತ್ತರ ಭಾರತದಲ್ಲಿ ಶೈವಧರ್ಮವನ್ನು ನೆಲೆಗೊಳಿಸಿ ಹಿಂದೂ ಧರ್ಮರಕ್ಷಕರಾಗಿ ಉಜ್ವಲವಾಗಿ ರಾಜ್ಯಭಾರ ಮಾಡಿದ ವಾಕಾಟಕರರಾಜನಾದ ಪ್ರವರಸೇನನ ಶಾಸನದಲ್ಲಿಯೂ ಮೇಲಿನ ಭಾರಶಿವರ ವರ್ಣನೆಯಂತೆಯೇ 'ಅಂಸಭಾರ × × ×" ಎಂದೂ 'ಮಹಾಭೈರವಭಕ್ತಸ್ಯ' 'ಅತ್ಯಂತ-ಮಾಹೇಶ್ವರಸ್ಯ' 'ಪರಮಮಾಹೇಶ್ವರಮಹಾರಾಜಶ್ರೀಪ್ರವರಸೇನಸ್ಯ ವಚನಾತ್' ಇತ್ಯಾದಿಯಾದ ಶಾಸನದಲ್ಲಿ ಇವರೂ ಲಿಂಗಧಾರಿಗಳೆಂಬ ವಿಚಾರವು ವಿದಿತವಾಗುತ್ತದೆ.

3. ಕ್ರಿ.ಶ. 567ರಲ್ಲಿ ಇದೇ ವಾಕಾಟಕವಂಶದ ಕಿರುಶಾಖೆಯವರಾಗಿದ್ದ ಪಲ್ಲವರು ದಕ್ಷಿಣ ಭಾರತದಲ್ಲಿ ಕಾಂಚಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಸಮ್ರಾಟರಾಗಿ ದಕ್ಷಿಣಭಾರತವನ್ನೆಲ್ಲಾ ಶೈವವನ್ನಾಗಿಸಿ ಶಿವಧರ್ಮಕ್ಕೆ ಒತ್ತುಕೊಟ್ಟರು. ಉನ್ನತ ರೀತಿಯಲ್ಲಿ ಮಹಾಸಾಮ್ರಾಜ್ಯವನ್ನೂ ಆಳಿದರು. ಈ ಚಕ್ರವರ್ತಿಗಳಲ್ಲಿ ರಾಜಸಿಂಹನೆಂಬ ಚಕ್ರವರ್ತಿಯು—ಶಿವಲಿಂಗಧಾರಿಯಾಗಿದ್ದನೆನ್ನಲು ಡಾ. ಹುಲ್ಷ್‌ರವರು ಸಂಪಾದಿಸಿ ಪ್ರಕಟಿಸಿರುವ (South Indian Inscriptions(Tamil & Sanskrit Vol I) ಗ್ರಂಥದಲ್ಲಿನ—ನಂ, 18,19,21, 22 ರಲ್ಲಿ ಬಂದಿರುವ

'ಯಸ್ಯಾಂಗುಷ್ಠಭರಾಕ್ರಾಂತಃ ಕೈಲಾಸಸ್ಸದಶಾನನಃ ।
ಪಾತಾಲಮಗಮನ್ಮೂರ್ಧ್ನಾ ಶ್ರೀನಿಧಿಸ್ತಂ ಬಿಭರ್ತ್ಯಜಮ್ ॥
ಭಕ್ತಿಪ್ರಹ್ವೇಣ ಮನಸಾ ಭವಂ ಭೂಷಣಲೀಲಯಾ
ದೋಷ್ಣಾ ಚ ಯೋ ಭುವೋ ಭಾರಂ ಜೀಯಾತ್ ಸ ಶ್ರೀಭರಶ್ಚಿರಮ್ ॥

ಶ್ರೀಮತೋಽತ್ಯನ್ತಕಾಮಸ್ಯ × × ।
ಶ್ರೀನಿಧೇಃ × × ಹರಾರಾಧನಸಂಗಿನಃ
ಅಭಿಷೇಕಜಲಾಪೂರ್ಣೇ ಚಿತ್ರರತ್ನಾಂಬುಜಾಕರೇ ।
'ಆಸ್ತೇ ವಿಶಾಲೇ ಸುಮುಖಃ ಶಿರಸ್ಸರಸಿ ಶಂಕರಃ ॥

ನಂ 24, 31ರಲ್ಲಿನ—

ರಾಜಸಿಂಹೋ ರಣಜಯಃ ಶ್ರೀಭರಶ್ಚಿತ್ರಕಾರ್ಮುಕಃ
ಏಕವೀರಶ್ಚಿರಂ ಪಾತು **ಶಿವಚೂಡಾಮಣಿರ್ಮಹೀಮ್** ॥

ನಂ. 33ರಲ್ಲಿನ—

'ಗುಣಭರನಾಮನಿ ರಾಜನ್ಯನೇನ **ಲಿಂಗೇನ** ಲಿಂಗಿನಿ ಜ್ಞಾನಮ್
ಪ್ರಥತಾಚ್ಚಿರಾಯ ಲೋಕೇ ವಿಪಕ್ಷವೃತ್ತೇಃ ಪರಾವೃತ್ತಮ್ ॥'

ಚಂಗಲ್‌ಪೇಟೆ. ಡಿ॥ ವಾಯಲೂರು ಗ್ರಾಮದ (ಸರ್ಕಾರದವರು 1903ರಲ್ಲಿ ಮುದ್ರಿಸಿರುವ) ಶಾಸನದಲ್ಲಿನ—

"ಜೀಯಾನ್ಮಹೇಶ್ವರಶಿಖಾಮಣಿದೀಪ್ತಮೌಲಿಃ"

ಎಂಬ ವಿಶೇಷಣವೂ ಇತ್ಯಾದಿಯಾಗಿ ಈ ಪಲ್ಲವ ಚಕ್ರವರ್ತಿಯು ಲಿಂಗಧಾರಿಯಾಗಿದ್ದನೆಂಬುದನ್ನು ಚಮತ್ಕಾರವಾಗಿ, ಶ್ಲೇಷದಿಂದಲೂ, ತಾರ್ಕಿಕರೀತಿಯಿಂದಲೂ ವರ್ಣಿಸಿದೆ.

ನಂ 34ರ ಶಾಸನದಲ್ಲಿ ಈ ಲಿಂಗಧಾರಣೆಯು ಪ್ರಾಣಲಿಂಗರೂಪವೇ ಆಗಿರುವದೆಂಬುದನ್ನು ವಿಶದವಾಗಿ ಈ ರೀತಿ ತಿಳಿಸುತ್ತದೆ—

' ಶಿವಂ ಶಿರಸಿ ಧಾರಯತಾತ್ಮಸಂಸ್ಥಂ '

ಎಂಬಲ್ಲಿ ಆತ್ಮಸಂಸ್ಥಂ ಶಿವಂ ಶಿರಸಿ ಧಾರಯತಾ ಗುಣಭರನೃಪತಿನಾ' ಎಂಬುದ—ಶೈವಾಗಮರೀತ್ಯಾ ಶ್ರೀಗುರುವು ದೀಕ್ಷಾಕಾಲಕ್ಕೆ ಸಂಸ್ಕರಿಸಿ ಶಿಷ್ಯನ ಪ್ರಾಣಕಲೆಯನ್ನೂ ಲಿಂಗದಲ್ಲಿಯೂ, ಲಿಂಗಕಲೆಯನ್ನು ಶಿಷ್ಯನ ಪ್ರಾಣದಲ್ಲಿಯೂ ನೆಲೆಗೊಳಿಸಿ ಶಿಷ್ಯನ ಕರಕ್ಕೆ ಕೊಟ್ಟು ಉಪದೇಶಿಸುವಾಗ

ಪ್ರಾಣವದ್ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ ।
ಕದಾಚಿತ್ ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ।'

ಎಂದು ಈ ಇಷ್ಟಲಿಂಗವು ಪ್ರಾಣಲಿಂಗವು ಪ್ರಾಣಲಿಂಗರೂಪ. ಇದು ನಿನ್ನ ಪ್ರಾಣಲಿಂಗ

ಇತ್ಯಾದಿ ಹೇಳಿರುವಂತೆ, ಈ ಅಂಶವನ್ನೇ ಶಾಸನದಲ್ಲಿ ಈ ರಾಜನು ಶಿರಸ್ಸಿನಲ್ಲಿ ಧರಿಸಿಕೊಂಡಿರುವ ಲಿಂಗವು ಪ್ರಾಣಲಿಂಗವೆಂಬುದನ್ನು 'ಆತ್ಮಸಂಸ್ಥಂ ಶಿವಂ ಶಿರಸಿ ಧಾರಯತಾ' ಎಂಬ ವಾಕ್ಯದಿಂದ ಚಿತ್ರಿಸಿದ್ದಾನಾಗಿ ಈ ಪಲ್ಲವ ಚಕ್ರವರ್ತಿಯೂ ಲಿಂಗಧಾರಿಯಾದ ವೀರಶೈವನಾಗಿದ್ದನೆಂಬಂಶವು ಸರಳವಾಗಿ ತಿಳಿಯುತ್ತದೆ. ಅಲ್ಲದೆ—ಈತನಿಗೆ ಶ್ರೀಕಾರಸಹಿತವಾಗಿ ಬರೆದಿರುವ ವಿಶೇಷಣಗಳು ಅದೇ ರಾಜಸಿಂಹೇಶ್ವರ ದೇವಾಲಯದಲ್ಲಿ ಸುಮಾರು 274 ಇದ್ದು ಅವುಗಳಲ್ಲಿ "ಶ್ರೀ ಆಗಮಪ್ರಮಾಣಃ ಶ್ರೀಆಗಮಾನುಸಾರೀ, ಶ್ರೀಇಲಾಪರಮೇಶ್ವರಃ, ಶ್ರೀಈಶಾನಶರಣಃ ಶ್ರೀಈಶ್ವರಭಕ್ತಃ ಶ್ರೀಶಂಕರಭಕ್ತಃ, ಶ್ರೀಋಷಭ-ಲಾಂಛನಃ' ಇತ್ಯಾದಿ ವಿಶೇಷಣಗಳೂ ಇದ್ದು ವೀರಮಾಹೇಶ್ವರನಿವನು, ಎಂಬುದು ಸಿದ್ಧವಾಗುತ್ತದೆ.

4. ಹರಿಭದ್ರಸೂರಿಯು (ಕ್ರಿ.ಶ. 700–770) ತನ್ನ ಷಡ್ದರ್ಶನ ಸಮುಚ್ಚಯದಲ್ಲಿ 'ಅಥ ನೈಯಾಯಿಕಾನಾಂ ಯೌಗಪದಾಭಿಧಾನಾಂ ಲಿಂಗಾದಿವ್ಯಕ್ತಿರುಚ್ಯತೇ' ಎಂದು ಹೇಳುವಲ್ಲಿ 'ಕರೇ ಜಟಾದೌ ಚ ಪ್ರಾಣಲಿಂಗಧರಾಶ್ಚಾಪಿ ಭವಂತಿ' ಎಂದು ಪ್ರಾಣಲಿಂಗಧರರ ಉಲ್ಲೇಖ ಮಾಡಿರುವನು.

5. ಪಾಲ್ಕುರಿಕೆ ಸೋಮನಾಥನು ತನ್ನ ಬಸವಪುರಾಣದ (ಅ.)ಲ್ಲಿ ಗಣಪಾಲು (ಕಲಿಗಣನಾಥ) ಕಥಾ ಎಂಬುದಾಗಿ ಹೇಳುವಲ್ಲಿ ಗಣಪಾಲು ಎಂಬ ಅಥವಾ (ಕಲಿಗಣನಾಥನೆಂಬ) ಪ್ರಾಚೀನ ಶಿವಭಕ್ತನೊಬ್ಬನು 'ಶಿವನಿಗೂ ಶಿವದೀಕ್ಷೆಯಿತ್ತು ಲಿಂಗಧಾರಣ ಮಾಡಿದನು' ಎಂದು ಹೇಳಿದೆ.

6. ಭಾರಶಿವರು-ವಾಕಾಟಕರು ತಮ್ಮ ಭುಜಗಳಲ್ಲಿ ಲಿಂಗವನ್ನು ಧರಿಸಿಕೊಂಡಂತೆ ಸಾಕ್ಷಾತ್ ಶಿವನೂ ತನ್ನ ಭುಜದ ಮೇಲೆ ಲಿಂಗವನ್ನು ಧರಿಸಿ, ಉಮಾಸಮೇತನಾಗಿ ಗೋಡೆಯ ಗೂಡು (ದೇವಕೋಷ್ಠ)ಗಳಲ್ಲಿ ಮಂಡಿಸಿರುವ ಶಿವನ ಮೂರ್ತಿ ಶಿಲ್ಪಗಳೂ ದಕ್ಷಿಣ ಭಾರತದಲ್ಲಿ ಅನೇಕ ಸ್ಥಳಗಳಲ್ಲಿ ದೊರಕುತ್ತವೆ. ಉದಾಹರಿಸಬೇಕೆಂದರೆ, ಎಲ್ಲೋರದ ಕೈಲಾಸಗವಿಯ ಒಳಗೆ ಇಂತಹ ಲಿಂಗಧಾರೀ ಶಿವನ ಎರಡು ಮೂರ್ತಿಗಳಿವೆ. ಮತ್ತು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿಯೂ ಲಿಂಗಧಾರಿಯಾದ ಶಿವನ ಮೂರ್ತಿಯಿರುತ್ತದೆ. ಹೀಗೆ ಸಾಕ್ಷಾತ್ ಶಿವನೇ ಲಿಂಗಧಾರಿಯಾಗಿ ಈ ಲಿಂಗಧಾರಣೆಯ ಪದ್ಧತಿಯ ಪ್ರಚಾರಕನೆಂಬಂತೆ ಈ ಶಿಲ್ಪಗಳು ಮೂಡಿಬಂದಿವೆ. ಈ ಲಿಂಗಧಾರಣ ಸಂಸ್ಕೃತಿಯು ಮುಂದೆ ಕರ್ನಾಟಕದಲ್ಲಿ ಶ್ರೀ ಬಸವೇಶಾದಿ ಶಿವಶರಣರ ಆಂದೋಲನದಿಂದಾಗಿ ಹೆಚ್ಚು ಪ್ರಚಾರಕ್ಕೆ ಬಂದು ಸ್ತ್ರೀ-ಪುರುಷರೆಲ್ಲರೂ ಕರಡಿಗೆ ಅಥವಾ ವಸ್ತ್ರಗಳಲ್ಲಿ

ಲಿಂಗವನ್ನು ಕೊರಳಲ್ಲಿ ಧರಿಸಿರುವ ವೀರಮಾಹೇಶ್ವರರ ಸಂಸ್ಕೃತಿಯು ದಕ್ಷಿಣ ಭಾರತದಲ್ಲಿ ವರ್ಧಿಸಿತು.*

7. ಇನ್ನು ಪ್ರಾಣಲಿಂಗಧರರ ಸಂಸ್ಕೃತಿಯನ್ನು ಅರ್ಥಾತ್ ಶಿವಧರ್ಮೋತ್ತರದಲ್ಲಿನ ವೀರಮಾಹೇಶ್ವರರ ಷಟ್ಸ್ಥಲ ಸಿದ್ಧಾಂತವನ್ನು ಉದ್ಧರಿಸಿದ ಮಹಾನುಭಾವನು ಬಸವೇಶ್ವರನು. ಮಡಿವಾಳ ಮಾಚಿದೇವರು ಬಸವಣ್ಣನವರನ್ನು ಚಿತ್ರಿಸುವಾಗ—'ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು' ಎಂಬಂತೆ ಸರ್ವರಿಗೂ ಲಿಂಗಧಾರಣೆಗೆ ಅವಕಾಶವಿತ್ತು ಶೈವಾಗಮ ಧರ್ಮದ ಹೆಚ್ಚಳವನ್ನು ಮಾತೃಭಾಷೆಯಲ್ಲಿ ಬೋಧಿಸಿದನು. ಈತನ ಕ್ರಾಂತಿಗೆ ಓಗೊಟ್ಟು ಕಾಶ್ಮೀರ-ಓಢ್ರ, ಸೌರಾಷ್ಟ್ರ-ಆಂಧ್ರ-ತಮಿಳುಪ್ರಾಂತ ಇತ್ಯಾದಿಗಳಿಂದ ಬಂದು ಪ್ರಾಣಲಿಂಗಧರರಾಗಿ ತಾವೂ ಕನ್ನಡ ಕಲಿತು ವಚನಶಾಸ್ತ್ರದ್ರಷ್ಟಾರರಾಗಿ ಶಿವಧರ್ಮಕ್ಕೆ ಮೆರಗುಕೊಟ್ಟರು. ಬಸವಣ್ಣನವರ ಸಮಕಾಲಕ್ಕೇ ವಚನಶಾಸ್ತ್ರವನ್ನು ಕೊಟ್ಟಿರುವ ಶರಣಶರಣೆಯರ, ಲಿಂ|| ಹಳಕಟ್ಟಿಯವರ ಸಂಶೋಧನ ಪ್ರಕಾರವಾಗಿ ಸಿಕ್ಕಿರುವ ವಚನಕಾರರ ಸಂಖ್ಯೆ 200ಕ್ಕೂ ಹೆಚ್ಚಿದೆ. ಈ ವಚನಗಳು ಉಪನಿಷತ್ತುಗಳಿಗಿಂತಲೂ ಹೊಳಪುಳ್ಳವುಗಳಾಗಿ ಶಿವಧರ್ಮಪ್ರತಿಷ್ಠಾಪಕಗಳಾಗಿವೆ. ಪಾಲ್ಕುರಿಕೆ ಸೋಮನಾಥನನು ತನ್ನ ಬಸವಪುರಾಣದಲ್ಲಿ ಬಸವಣ್ಣನವರು ಶೈಶವಲೀಲೆಯಲ್ಲಿ ಎದ್ದು ನಿಲ್ಲುವ ಅಭ್ಯಾಸ ಮಾಡುತ್ತಿದ್ದುದನ್ನು "ನಾ ವೀರಮಾಹೇಶ್ವರಾಚಾರವೆಲ್ಲ | ಬೋವ ಈ ನಿಲ್ಬಿನ ಪೋಲ್ಕಿ ನಿಲ್ವುಂಡು" ಎಂದರೆ ವೀರಮಾಹೇಶ್ವರಾಚಾರವನ್ನು ನಾನು ಹೀಗೆ ಎತ್ತಿ ನಿಲ್ಲಿಸುವೆನೆಂಬುದನ್ನು ಸೂಚಿಸುವನೋ ಎಂಬಂತೆ ಬಸವಣ್ಣನು ಎದ್ದೆದ್ದು ನಿಲ್ಲುತ್ತಿದ್ದನಂತೆ.

ಈ ಬಸವಮಹಾನುಭಾವನೇ ಪ್ರಾಣಲಿಂಗಧರರಾದ ವೀರಮಾಹೇಶ್ವರರ ಸಿದ್ಧಾಂತೋದ್ಧಾರಕ ಮಹಾನುಭಾವನಾಗಿ ಪೂಜ್ಯನೆನಿಸಿ ಮೆರೆಯುತ್ತಿರುವನು. ಈ ಬಸವಣ್ಣನನ್ನು ಕರ್ಣಾಟಕದ ಲಕುಲೀಶನೆನ್ನಬಹುದು.

---

* ವಿಶ್ವೇಶ್ವರಾನಂದ ಇಂಡೋಲಾಜಿಕಲ್ ಜರ್ನಲ್ ಭಾಗ II p.i (ಮಾರ್ಚಿ 1964) ಇಲ್ಲಿ ಬಂದಿರುವ 'LAKULISA AND LINGA POLYMORPHISM' ಎಂಬ ಹೋಷಿಯಾರ್‌ಪುರ ಸನ್ಯಾಸ್ಯ (K. V. SOUNDARARAJAN) ಕೆ. ವಿ. ಸೌಂದರರಾಜನ್ ಸೂಪರಿ; ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ಬರೋಡ ಇವರ ಲೇಖನ. p. 115-122 ನೋಡಿರಿ.

ವೈದಿಕ ಸಂಸ್ಕೃತಿ ಮತ್ತು ಆಗಮ (ತಂತ್ರ) ಸಂಸ್ಕೃತಿಗಳ ತುಲನೆ

ಭಾರತದಲ್ಲಿ ವೈದಿಕಧರ್ಮವೆಂಬುದು ಮೊದಲಿನಿಂದಲೂ ಸ್ವತಂತ್ರವಾಗಿ ಉಳಿದುಕೊಂಡು ಬಂದಿಲ್ಲ. ಬಹುಕಾಲದಿಂದಲೂ ಭಾರತದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ಮತಗಳು ಚತುಸ್ಸಮಯಗಳೆಂದು ಪ್ರಸಿದ್ಧಿ ಹೊಂದಿವೆ. ಈಗ ಭಾವಿಸಿರುವಂತೆ ಹಿಂದೂ ಜನರೆಂದರೆ, ಶೈವರು ಅಥವಾ ವೈಷ್ಣವರು ಎಂಬ ಎರಡು ಭಾಗಗಳಲ್ಲಿ ವಿಲೀನರಾಗಿ ಹೋಗಿರುವರು. ಹಿಂದೂಧರ್ಮದಿಂದ (ವೇದ-ಆಗಮಗಳಿಂದ) ಸಿಡಿದುಹೋದ ಜೈನ-ಬೌದ್ಧ ಮತಗಳಲ್ಲಿ ಜೈನಧರ್ಮವು ಮಾತ್ರ ಅತೀವ ಅಲ್ಪಸಂಖ್ಯಾತವಾಗಿ ಉಳಿದಿದೆ. ಬೌದ್ಧಧರ್ಮವು ಭಾರತದಿಂದಲೇ ದೂರ ವಾಗಿ ಪರದೇಶಿಯಾಗಿ ಹೆಸರಿಗೆ ಮಾತ್ರ ಅಹಿಂಸಾವಾದಿಯಾಗಿ ಬೆಳೆದು ನಿಂತಿದೆ. ಇಂದು ಭಾರತದಲ್ಲಿ ಅಲ್ಪಸಂಖ್ಯಾತರಾಗಿರುವ ಪಾರ್ಸಿ ಜನರು (ಇರಾನಿಯನ್ನರು ಅಥವಾ ಆರ್ಯರು) ಮಾತ್ರ ನಿತ್ಯಾಗ್ನಿ ಪೂಜಕರಾಗಿ ಸ್ವತಂತ್ರ ಸಮಯದವರಾಗಿ ರುವರೇ ವಿನಾ ಸನಾತನ ವೈದಿಕರೆಂಬ ಭಾರತೀಯರೆಲ್ಲರೂ ಹೆಸರಿಗೆ ಮಾತ್ರ ವಿಶೇಷ ಸಂದರ್ಭಗಳಲ್ಲಿ ಮಾತ್ರ ಅಗ್ನಿಪೂಜಕರೆನಿಸಿದರೂ ನಿತ್ಯವೂ ಶಿವ-ವಿಷ್ಣು ಪೂಜಕರೇ ಆಗಿದ್ದು ಶಿವ-ವಿಷ್ಣುಮೂರ್ತಿಗಳನ್ನು ಸಂಪುಟಗಳಲ್ಲಿಟ್ಟುಕೊಂಡು ಮನೆ ಗಳಲ್ಲಿಯೂ ಅಥವಾ ಶಿವದೇವಾಲಯ ಇಲ್ಲವೇ ವಿಷ್ಣುಮಂದಿರಗಳಲ್ಲಿನ ಸ್ಥಾವರ ದೈವಗಳಲ್ಲಿ ಭಕ್ತಿಮಾಡುತ್ತಾ ಶೈವರು ಅಥವಾ ವೈಷ್ಣವರು ಎನಿಸಿರುತ್ತಾರೆ. ಇದು ಆಗಮ ಸಂಸ್ಕೃತಿಯ ಪ್ರಭಾವ.

ಸರ್ ರಾಧಾಕೃಷ್ಣನ್‌ರವರು ತಮ್ಮ (ಭಾರತಧರ್ಮ ಭಾಗ II ಉಪನ್ಯಾಸ I ಪುಟ 17-18) 'ಇದೇ ಹಿಂದೂ ಜನರ ಮೂಲವು; ಆರ್ಯ-ದ್ರಾವಿಡರ ಸಂಪರ್ಕವು; ವೇದಾಗಮ (ತಂತ್ರ)ಗಳು' ಎಂಬ ಶೀರ್ಷಿಕೆಯಲ್ಲಿ ತಿಳಿಸಿರುವುದೇನೆಂದರೆ–

'ಭಾರತ ಚರಿತ್ರೆಯನ್ನು ಎಲ್ಲಿಂದ ನೋಡಿದರೂ, ಇಲ್ಲಿನ ಜ್ಞಾನವನ್ನೇ ತೆಗೆಯಿರಿ (ತೆಗೆದುಕೊಳ್ಳಿರಿ) ಕರ್ಮವನ್ನೇ ತೆಗೆಯಿರಿ, ಯಾವುದನ್ನು ತೆಗೆದರೂ ಸರಿಯೇ. ಇಲ್ಲಿನ ನಾಯಕರು ಸತತವೂ ಹೊಸಹೊಸ ಆಚಾರವ್ಯವಹಾರಗಳನ್ನು ಪರೀಕ್ಷಿಸುತ್ತಲೂ, ಮತ್ತು ಹೊಸಹೊಸದಾಗಿ ಬರುವ ಆಯಾಕಾಲದ ದೇಶ ಸ್ಥಿತಿ ಗತಿಗಳಿಗೆ ತಕ್ಕಂತೆ ತಮ್ಮ ಆದರ್ಶಗಳನ್ನು ಸರಿಯಾಗಿ ಕ್ರಮಪಡಿಸುತ್ತಲೂ ಮುಂದುವರಿದಿದ್ದಾರೆ. ಈ ಅಭಿವೃದ್ಧಿಕಾರ್ಯ "ಆರ್ಯರು ಈ ದೇಶದ ಪೂರ್ವ ನಿವಾಸಿಗಳೊಡನೆ ಕಲೆತಾಗ ಇವರ ಪ್ರಥಮ ಪರಿಚಯವನ್ನೂ ತಮ್ಮೆಲ್ಲರ ಶ್ರೇಯೋಭಿವೃದ್ಧಿಗೆ ಬೇಕಾದ ಕಾರ್ಯೋತ್ಸಾಹ (FIRST IMPULSE TO PROGRESS)ವನ್ನೂ ಪಡೆದರು. ಹೀಗೆಯೇ ಈ ಆರ್ಯರು ಗಂಗಾನದಿಯ ಬಯ ಲಿಗೆ ಬಂದಾಗ ಸಾಂಪ್ರದಾಯಿಕ ಧರ್ಮಕ್ಕೆ ವಿರೋಧ ಮಾರ್ಗಗಳಾದ ಬೌದ್ಧ-ಜೈನ

ಮತಗಳು ಇವರಲ್ಲಿಯೇ ತಲೆಯೆತ್ತಿಕೊಂಡವು. ಮತ್ತಿವರು ಶ್ರೇಷ್ಠ ನಾಗರಿಕತೆಯನ್ನು ಪಡೆದಿದ್ದ ದ್ರಾವಿಡಜನರೊಡನೆ ಬೆರೆತಾಗ ಇವರ ವೇದಧರ್ಮವು ಸೇಶ್ವರಮತ (THEISTIC RELIGION) ರೂಪವನ್ನು ಹೊಂದಿತು.'

"ವೇದಸಂಸ್ಕೃತಿಯು ಹೋಮರ್ ಕವಿಯ ಗ್ರೀಕ್ ಜನರಲ್ಲಿಯೂ ಕ್ರಿಸ್ತಶಕದ ಮೊದಲಿನಲ್ಲಿದ್ದ ಐರ್ಲೆಂಡ್ ದೇಶದ ಕೆಲ್ಟ್ ಜನಗಳಲ್ಲಿಯೂ ಮತ್ತು ಕ್ರಿಸ್ತಪೂರ್ವದಲ್ಲಿದ್ದ ಟ್ಯೂಟನ್ ಮತ್ತು ಸ್ಲಾವ್ ಜನಗಳ ಸಂಸ್ಕೃತಿಯನ್ನು ಹೋಲುವುದಲ್ಲದೆ ನಮ್ಮ ಇತಿಹಾಸ ಗ್ರಂಥಗಳಲ್ಲಿ ಈ ವೇದದ ಸಂಸ್ಕೃತಿಯು ಇಲ್ಲಿನ ದ್ರಾವಿಡ ಜನರ ಸಂಯೋಗದಿಂದ 'ಹಿಂದೂ ಸಂಸ್ಕೃತಿ'ಯಾಗಿ ಪರಿಣಾಮ ಹೊಂದಿತು. ಬಹುಪೂರ್ವದಲ್ಲಿ ಆರ್ಯಪೂಜಾ ಪದ್ಧತಿಯು ಏನಾಗಿದ್ದಿತೆಂದರೆ, ನಮ್ಮ ತಲೆಯ ಮೇಲಿರುವ ಸ್ವರ್ಗಲೋಕಾಧಿದೇವನಾದ ದ್ಯೌಃಪಿತೃವನ್ನೋ ಇಲ್ಲವೆ ಬೇರೊಬ್ಬ ದೇವತೆಯನ್ನು ಕರೆದು ಯಜ್ಞಕರ್ತೃವನ್ನು ಪ್ರೀತಿಯಿಂದ ಕಾಣಬೇಕೆಂದು ಪ್ರಾರ್ಥಿಸಿ ಈ ಕರ್ತೃವಿನಿಂದ ಹವ್ಯ ಪಾನೀಯ ಭಿಕ್ಷಾದಿ ಬಲಿಗಳನ್ನು ಸ್ವೀಕರಿಸಬೇಕೆಂಬುದೇ ಆಗಿತ್ತು. ಆದರೆ ಸ್ವಲ್ಪಕಾಲದಲ್ಲಿಯೇ ಇಂಥಾ ಯಜ್ಞಹೋಮಾದಿಗಳು ತಪ್ಪಿಹೋಗಿ ಇವುಗಳ ಸ್ಥಾನದಲ್ಲಿ ಪೂಜಾರ್ಚನಾದಿಗಳು ಬಂದು ನೆಲೆಗೊಂಡುವು. ಇದರಂತೆಯೇ ದ್ರಾವಿಡಜನರ ಭಕ್ತಿಯಲ್ಲಿ ಮುಖ್ಯವಾಗಿದ್ದ ವಿಗ್ರಹಾರಾಧನೆಯನ್ನು ಆರ್ಯರು ತಮ್ಮ ಧರ್ಮದಲ್ಲಿ ಸೇರಿಸಿಕೊಂಡರು. ಮತ್ತು ಹೀಗೆಯೇ ಅಹಿಂಸಾ ಸಾತ್ವಿಕಾಹಾರಾದಿಧರ್ಮಗಳೂ ಕೂಡ ನಮ್ಮಲ್ಲಿ ವೃದ್ಧಿಯಾಗುತ್ತ ಬಂದವ. ಅಲ್ಲದೆ ವೇದಮಾರ್ಗವು ಆಗಮ (ತಂತ್ರ) ಮಾರ್ಗಗಳಿಂದ ಆವರಿಸಲ್ಪಟ್ಟು ಈಗ ನಮ್ಮ ಹಿಂದೂಧರ್ಮದ ಸಂಪ್ರದಾಯವು ಕೇವಲ ವೇದೋಕ್ತವಾಗಿರುವುದಲ್ಲದೇ ಬಹಳಮಟ್ಟಿಗೆ ಆಗಮಯುಕ್ತವೂ ಆಗಿದೆ. ಅಂದರೆ ಈಗಿನ ಹಿಂದೂಧರ್ಮದಲ್ಲಿ ಆರ್ಯ-ದ್ರಾವಿಡ ಸಂಪ್ರದಾಯಗಳು ಬೇರೆಬೇರೆಯೆಂದು ಗೊತ್ತಾದ ರೀತಿಯಲ್ಲಿ ಕಾಣುತ್ತವೆ ಎಂದಲ್ಲ. ಮತ್ತು ಕೇವಲ ಸಂಯೋಗಕೃತವಾಗಲ್ಲದೆ (RESULTANT) ಅಭಿವೃದ್ಧಿಯುಕ್ತವಾದ (EMERGENT) ಪ್ರತ್ಯೇಕ ಧಾರ್ಮಿಕ ರಚನೆಯೊಂದರಲ್ಲಿ ಸೇರಿಸಲ್ಪಟ್ಟಿದೆ. ಇದರಿಂದ ಹಿಂದೂ ಮತದ ಅಭಿವೃದ್ಧಿ ಮಾರ್ಗದಲ್ಲಿ ವೇದಾಗಮ ಸಂಪ್ರದಾಯಗಳಲ್ಲಿ ವೈಷಮ್ಯ (FRICTION) ಕಂಡುಬಂದರೂ ಕೊನೆಯಲ್ಲಿ ಇವೆರಡೂ ಸಾಕಾದಷ್ಟು ಮಟ್ಟಿಗೆ ಸಮರಸದಿಂದ ಕೂಡಿ ಒಂದಾಗಿವೆ."* (—ಭಾರತಧರ್ಮ ಭಾಗ II ಉಪನ್ಯಾಸ I I ಪುಟ. 47-48 (1929) NSS ಬೆಂಗಳೂರು)

* ಇದೇ ರಾಧಾಕೃಷ್ಣನ್‌ರವರು ತಮ್ಮ Indian Philosophy part. II p. 73, footnote ನಲ್ಲಿ ಹೀಗೆ ಹೇಳಿರುವರು—"ಕೈಲಾಸನಾಥ temple t ಕಾಂಚೀಪುರಂ

ಇದರಿಂದ—ವೈದಿಕಸಂಸ್ಕೃತಿಯೂ ಭಾರತೀಯರ ಮೂಲ ವಾಙ್ಮಯವಾದ ಆಗಮಸಂಸ್ಕೃತಿಯಲ್ಲಿ ಲೀನವಾಯಿತು ಎಂಬುದು ತಿಳಿದು ಬರುತ್ತದಲ್ಲದೆ ಈ ಆಗಮ ಸಂಸ್ಕೃತಿಯ ಮಹತ್ವವೂ ಪ್ರಭಾವವೂ ವಿದಿತವಾಗುತ್ತದೆ.

ಶಿವಧರ್ಮೀಯರ ಇತಿಹಾಸ ತಿಳಿಯಲು ಇವರಿಗಿರುವ ಪರ್ಯಾಯ ನಾಮಗಳ ಅರಿವು ಅತ್ಯವಶ್ಯ

ಈ ವೀರಮಾಹೇಶ್ವರರ ಮತ್ತು ಸಮಸ್ತ ಶೈವರ ಇತಿಹಾಸವನ್ನು ಇತಿಹಾಸ ಪುರಾಣಾದಿಗಳಲ್ಲಿ ಗುರುತಿಸಿಕೊಳ್ಳಬೇಕಾದರೆ ಇವರಿಗೆ ಆಗಮಗಳಲ್ಲಿ–ಆಗಮೋಕ್ತ ಶಿವಧರ್ಮೀಯರ ಗ್ರಂಥಗಳಲ್ಲಿ ವ್ಯವಹರಿಸಿರುವ ಪರ್ಯಾಯ ನಾಮಗಳ ಅರಿವು ಅವಶ್ಯ ಬೇಕಾಗುತ್ತದೆ. ಅವುಗಳು ಹೀಗಿರುತ್ತವೆ.

ಆಗಮೋಕ್ತ ಶಿವಧರ್ಮಗ್ರಂಥೋಕ್ತ ಪರ್ಯಾಯ ನಾಮಗಳು

ಭೂರುದ್ರರು	ಜಂಗಮರು
ಅಸಂಖ್ಯಾತರು	ಪ್ರಮಥರು
ಲಿಂಗಿಗಳು	ಗಣಂಗಳು
ಲಿಂಗಾಂಗಿಗಳು	ಶಿವಭಕ್ತರು
ಲಿಂಗಾಯತ್ತರು	ಚರಮಶರೀರಿಗಳು
ವೀರಶೈವರು	ಲೋಕಪಾವನರು
ವೀರಮಾಹೇಶ್ವರರು	ಶಿವಕುಲೀನರು
ಮಹಾವ್ರತಿಗಳು	ಶಿವಗೋತ್ರೀಯರು
ಶಿರೋವ್ರತಿಗಳು	ಶಿವತಾಂತ್ರಿಕರು
ಶಿವವ್ರತಿಗಳು	ಆಗಮಿಕರು
ಮಹಾಪಾಶುಪತರು	ಶಿವಭಾಗವತರು
ಶಿವಾಚಾರ್ಯರು	ಶಿವಾಗಮಾನುಯಾಯಿಗಳು

---

we have the earliest record of 28 Saivagamas in which ಪಲ್ಲವ king ರಾಜಸಿಂಹವರ್ಮ of the 5th century states his faith. ಎಂದರೆ ಕಾಂಚಿಯಲ್ಲಿರುವ ಕೈಲಾಸನಾಥ ದೇವಾಲಯದಲ್ಲಿ 28 ಶಿವಾಗಮಗಳ ಉಲ್ಲೇಖವನ್ನು ಮೊಟ್ಟಮೊದಲನೆಯದಾಗಿ ಕಾಣುತ್ತೇವೆ. ಆ ಶಾಸನದಲ್ಲಿ 5ನೆಯ ಶತಮಾನದ ರಾಜಸಿಂಹವರ್ಮನು ಶಿವಾಗಮದಲ್ಲಿ ನಂಬಿಕೆಯಿಟ್ಟಿದ್ದನೆಂದೂ ತಿಳಿಸುತ್ತದೆ." ಎಂದೂ ತಿಳಿಸಿರುವರು.

ಪರಮಮಾಹೇಶ್ವರರು
ಶಿವಯೋಗಿಗಳು
ಷಟ್ಸ್ಥಲಬ್ರಹ್ಮಿಗಳು
ಅಪ್ರಾಕೃತರು
ಅಯೋನಿಜರು
ಲಿಂಗೋದ್ಭವರು
ಲಿಂಗೈಕ್ಯರು
ಶಿವಶರಣರು
ಪ್ರಾಣಲಿಂಗಧರರು
ಶಿವಧರ್ಮೀಯರು
ಕರಪೀಠಾರ್ಚಕರು
ಶೀಲವಂತರು
ಶಿವಾನುಭಾವೀಪ್ರಸಾದಿಗಳು
ಪ್ರಾಣಲಿಂಗಿಗಳು
ಸದಾಶುಚಿಗಳು
ಅತ್ಯಾಶ್ರಮಿಗಳು
ಶಿವಾಶ್ರಮಿಗಳು
ಮಹಾಮಾಹೇಶ್ವರರು
ಲಿಂಗಧಾರಿಗಳು
ಸರ್ವೋತ್ತಮವ್ರತಿಗಳು
ಜಂಗಮಲಿಂಗಿಗಳು
ಚರಲಿಂಗಾರ್ಚಕರು
ಶಿವಾದ್ವೈತಿಗಳು
ಶಿವಸಿದ್ಧಾಂತಿಗಳು
ಶಿವಾಚಾರದವರು
ದ್ವೈತಾದ್ವೈತಿಗಳು
ಶೈವರು
ಶಿವದೀಕ್ಷಿತರು—ಇತ್ಯಾದಿ

ಶೈವವು ಸಪ್ತವಿಧ

ಅನಾದಿಶೈವ
ಆದಿಶೈವ
ಅನುಶೈವ
ಮಹಾಶೈವ
ಯೋಗಶೈವ
ಜ್ಞಾನಶೈವ
ವೀರಶೈವ

ಶೈವಷಡ್ದರ್ಶನಗಳು

ಶೈವ
ಪಾಶುಪತ
ಕಾಳಾಮುಖ
ಮಹಾವ್ರತಿ
ಸಂನ್ಯಾಸಿ
ಕಾಲ

ಶೈವಪ್ರಭೇದಗಳು

ವಾಮಶೈವ
ದಕ್ಷಿಣಶೈವ
ಮಿಶ್ರಶೈವ
ಭೈರವಶೈವ

ಲಾಕುಳಶೈವ
ಪಾಶುಪತಶೈವ
ರಸೇಶ್ವರಶೈವ
ಕಾಪಾಲಿಕಶೈವ
ಶುದ್ಧಶೈವ
ಮಾಹೇಶ್ವರ

ಆಧಾರ ಗ್ರಂಥಗಳು

28 ಶಿವಾಗಮಗಳು (ತಂತ್ರಗಳು)
ಉಪಾಗಮಗಳು
ಪಾಶುಪತಸೂತ್ರ
ಅಗಸ್ತ್ಯಸೂತ್ರ
ಶಿವಸೂತ್ರಗಳು
ನಾಗಾನಂದಿಸೂತ್ರ
ರೌರವಾಗಮಸೂತ್ರಗಳು
ಸ್ವಾಯಂಭುವಸೂತ್ರಗಳು
ಮಾಹೇಶ್ವರಸೂತ್ರಗಳು

ಸಂಪಾದನೆಯ ಕಾರ್ಯದಲ್ಲಿ ಬಳಸಿಕೊಂಡಿರುವ ಮಾತೃಕೆಗಳ ವಿವರ

(1) (ಚ) ಪ್ರತಿ (ಓ.ಆರ್.ಐ.)

ಇದು ಚಿತ್ರದುರ್ಗದ ಮುರುಘಾ ಮಠದ ಪ್ರತಿ. ಬೃಹದೋಲೆ. ವ್ಯಾಖ್ಯಾಸಹಿತ. 24.7''×1.11''. ಪತ್ರಗಳು 1 ರಿಂದ 388. ಸಾಲು 10. ಅಕ್ಷರ 130. ಶಕಟರೇಫವಿದೆ. ಸಮಗ್ರ ಭಾಷೆ ಸಂಸ್ಕೃತ. ವ್ಯಾಖ್ಯಾನ ಕನ್ನಡ. ಅಧ್ಯಾಯ 78. ಗ್ರಂಥ 8000.

ಅನುಕ್ರಮಣಿಕಾಧ್ಯಾಯ

ಆದಿ—ಶ್ರೀಮದ್ಗುರು ಬೋಳಮಲ್ಲಿಕಾರ್ಜುನದೇವಾಯ ನಮಃ.
ಬಸವೇಶ್ವರಚೆನ್ನಬಸವೇಶ್ವರ ಅಲ್ಲಮಪ್ರಭುವೇ ನಮಃ ॥
ನೀಲಕಂಠನಾಗನಾಥಾಚಾರ್ಯ್ಯನು ವಿರಚಿಸಿದಂಥ ವೀರಮಾಹೇಶ್ವರಾಚಾರ ಸಂಗ್ರಹದ ವ್ಯಾಖ್ಯಾನದ ಪುಸ್ತಕಕ್ಕೆ ನಿರ್ವಿಘ್ನಮಸ್ತು ॥

ಅಂತ್ಯ—ಪ್ರಸ್ತಾವನೆಯಲ್ಲಿ ವ್ಯಾಖ್ಯಾನಕಾರನ ಹೇಳಿಕೆಯಲ್ಲಿ ಅಂತ್ಯಭಾಗವನ್ನು ಈ (ಚ) ಪ್ರತಿಯಿಂದಲೇ ಉದ್ಧರಿಸಿದೆ.

'ಇದು ಶಿವಭಕ್ತ ಜಾತಕಚಯಕ್ಕೆ × × × ಭೂತಳಾಗ್ರದೊಳ್ ॥೬॥' ಇಲ್ಲಿಯವರೆಗೆ ಕೊಟ್ಟಿದೆಯಷ್ಟೆ. ಇದು ವ್ಯಾಖ್ಯಾನಕಾರನು ಹೇಳಿಕೊಂಡಿರುವುದು. ಇದಾದ ನಂತರ ಪ್ರತಿಮಾಡಿದವನು ಈ ರೀತಿ ಬರೆದುಕೊಂಡಿರುವನು—

'ಶ್ರೀಮತ್ ಸಜ್ಜನ ಶುದ್ಧ ಶಿವಾಚಾರಸಂಪನ್ನರಾದ ಪಂಚಾಚಾರಾಷ್ಟಾವರಣಸಂಯುಕ್ತರಾದ ಶಿವಲಿಂಗಾರ್ಚನೆಯುಳ್ಳಿ ತತ್ಪರರಾದ ಬೆಳಕನಾಡಿ ಬೋಳಮಲ್ಲಿಕಾರ್ಜುನಸ್ವಾಮಿಯು ಸುಹಸ್ತದ ಬರಹವನಭ್ಯಾಸಿಸಿ, ಚಿಕ್ಕೈಯ ದೇವರ ಸನ್ನಿಧಿಯಲ್ಲಿರ್ದ ವಿರಕ್ತ ಅಂನದಾನದೇವರ ಸುಹಸ್ತದಲ್ಲಿ ವೀರಮಾಹೇಶ್ವರಾಚಾರಸಂಗ್ರಹದ ಪುಸ್ತಕವಂ ಬರಇಸಿ, ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳು ಬರದೋದಿ ಮಹಾನುಭಾವನಂ ಕರ್ನ್ನಪೂರಿತವಾಗೊಲ್ದು ಕೇಳಿ ಶಿವನೊಳ್ಕೂಡಿ ಸುಖಸಂತೋಷದಿಂದೊಪ್ಪುತ್ತಿರಲಿ ಯೆಂದು ಸಚ್ಚಿದಾನಂದ ನಿತ್ಯಪರಿಪೂರ್ನ್ನ ನಿರಂಜನಸ್ವಯಂ ಜ್ಯೋತಿಸ್ವರೂಪ ಷಟ್ಸ್ಥಲಾಚಾರ್ಯ ಸಂಪಂನ ವೀರಮಾಹೇಶ್ವರಾಚಾರಾಗ್ರಗಣ್ಯ ಸಕಲ. ಸದ್ಭಕ್ತ ಮಾಹೇಶ್ವರರಲ್ಲಿ ಪರಿಪೂಜ್ಯವಾಗಿ ಕವಿತಾಚಾತುರ್ಯದಿಂ ಪ್ರಖ್ಯಾತಿಯಾದ ಮರಿರಾಚವಟ್ಟಿಸ್ವಾಮಿಯು ಕೃಪಾಮೃತಕಟಾಕ್ಷ ನಿರೀಕ್ಷಣೆಯಿಂ ವರ್ಧನವಾದ ಚಿಕ್ಕೈಯದೇವರು ತಂಮ ಕರುಣ ಕೃಪೆ ಇಂದಂ ಯೋಚಿಸಿ ನೋಡುತ್ತಿರಲಾ ಶಿವಾನುಭಾವವೆಂಬ ಪರಮಾಂಮೃತರಸಂ ತೊಟ್ಟಿಡುತ್ತಿರಲು ಯಿಂತಿದಕ್ಕೊಂದಾಶ್ರಯುವಂ ನಿರ್ಮಿಸಲಿಚ್ಛೈಸಿ, ಪಡುವಣದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುರ್ಬಂ ಪುಟ್ಟಿದ ಹಾಂಗಿರ್ದ್ದ ಗಟ್ಟದ ಸರೋವರಂಗಳಲ್ಲೇಕವಾದ ಚರ (?) ಕೆದಱದ ಮುಂಡೆ, ಮೌನವ್ರತದಿಂದೊಪ್ಪುತ್ತಿರ್ದ್ದ ದಿವ್ಯತಾಳಾಪತ್ರವಂ ತಂದು ದ್ವಿತೀಯ ರಂಧ್ರವಂ ಮಾಡಿ ಬಂಗದ ಹೊರೆಯೆಂತೊಂದೊಂದಂ ಪೊಂದಿಸಿಕ್ಕಲದಲುಭಯಂ ಪಲಗೆಯಷ್ಟಲೋವೆಯಷ್ಟಮೂಲೆಗಳಿಂದತ್ಯಂತಲಂಕರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯುವಂ ನಿರ್ಮಿಸಿದಿಂತಿರಬಾರದೆಂದು ಬಿಂದು ವಿಸರ್ಗ್ಗಂ ದಡ್ಡತೆ ಪೊಂದಿದಾ ವೃತೋರ್ಧ್ವರೇಫೆ ದೀರ್ಘ ಹ್ರಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತ್ತಿಗಳಂ ಲೇಖನವಂ ಮಾಡೆಂದು ಚಿಕ್ಕೈಯನವರು ದಿವ್ಯ ಆಲೇಖವುಂ ಷಟ್ಸ್ಥಲಜ್ಞಾನಸಂಪನ್ನರಾದ ವಿರಕ್ತ ಅಂನದೇವರ ಹಸ್ತದಲ್ಲಿ ಪಾಲಿಸಲು, ಯಿಂತೀ ಶಿವಗಣಂಗಳ ನಿರೂಪವಂ ಕೈಕೊಂಡು ಬರಊದಕ್ಕೆ ಯಂನ ಕಂಗಳು ಜಿಹ್ವೆ ಕರಕರ್ನ್ನಂಗಳು ಗತಿಮತಿಚೈತನ್ಯಕ್ಕೆ ಸಮಸ್ತ ಸದ್ಭಕ್ತವೀರಮಾಹೇಶ್ವರರುಗಳೇ ಕರ್ತರಾದ ಕಾರಣ ಯಿಂತಿವರ ಕರುಣಪ್ರಸಾದವಂ ಕೈಕೊಂಡು ಈ ವೀರಮಾಹೇಶ್ವರಾಚಾರಸಂಗ್ರಹವ ಬರೆದೆನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ ॥

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ ।
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷಂ ನ ವಿದ್ಯತೇ ॥

ಇಂತೆಂದುದಾಗಿ ಈ ಪುಸ್ತಕವ ಬರದ ಸ್ಥಿತಿಯೆಂತೆಂದಡೆ—ಸ್ವಸ್ತಿ ಶ್ರೀ ವಿಜಯಾಭ್ಯುದಯ ವಿಥಿಷ್ಟಶಖ ವಿಕ್ರಮಶಖಯೊ ದ್ವಿತೀಯಶಖಸಂದದು ೪೦೦೦ ವರುಷ । ಸಾಲಿವಾಹನ ಶಖ ಸಂದದು ೧೫೪೩ ವರುಷ ಸಂದು ವರ್ತ್ತಮಾನವಾದ ॥

ಸಾರ್ವರಿ ಸಂವತ್ಸರದ ಜೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅಂನದಾನದೇವರು ಆಚಾರ್ಯ ಚಿಕ್ಕೈಯ ದೇವರಿಗೆ ನೀಲಕಂಠನಾಗನಾಥಾಚಾರ್ಯ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನ್ನವಾಯಿತ್ತು ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ನ್ನ-ಮಸ್ತು ಆಯೊರಾರೋಗ್ಯಮಸ್ತು ಚಂದ್ರಾರ್ಕತಾರಾನಭವುಳ್ಳನಕಂ ಸ್ಥಾಯಿಯಸ್ತು ||

ಭಗ್ನಪೃಷ್ಟಕಟಿಗ್ರೀವಬದ್ಧದೃಷ್ಟಿರಧೋಮುಖಂ ||
ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಕೃತ ಪಾಲಯ ||

ಇಂತೆಂದುದಾಗಿ | ಈ ಪುಸ್ತಕವಂ ಬರವರ್ಗ೯ಂ ಓದುವರ್ಗಂ ಶಿವಾನುಭಾವವಂ ನಿರೂಪಿಸುವರ್ಗಂ ಲಾಲಿಸುವರ್ಗಂ ಸಹಸ್ರಕೋಟಿ ನಮುಸ್ಕಾರವಂ ಮಾಡುತ್ತಿದೇನೆ. ಯಂನ ಬಿಂನಪವನವಧರಿಸಿ ಯಿದಂ ಬರದ ನಿಂಮ ಕರುಣದ ಕಂದನಿಗೆ ನಿಂಮ ಕೃಪಾಮೃತರಸವನೆಱದು ನೋಡಿ ಸಲಹಿ ನಿಮ್ಮ ಶ್ರೀಪಾದಪದ್ಮಾರಾಧನೆಯಂ ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣಾರ್ತ್ತಿ ||

ಪುಸ್ತಕಂ ವನಿತ ವಿತ್ತಂ || ಪರಹಸ್ತಗತಾಗತಂ |
ಆಯಾಸಂ ಪುನರಾಯಾಸಂ ಭ್ರಸ್ಟಭ್ರಷ್ಟಾ ಚ ಭ್ರಸ್ಟಯೋ ||
ಜಲಾದ್ರಕ್ಷ ತೈಲಾದ್ರಕ್ಷ | ದ್ರಕ್ಷಮುಸ್ಥಾಗ್ಯಬಂಧನಾತ್ !
ಅವಸ್ಯಂ ಯಾಚಕದ್ರಕ್ಷ ಮಮ ರಕ್ಷಂತು ಪುಸ್ತಕಂ ||

ನೀಲಕಂಠನಾಗನಾಥಾಚಾರ್ಯರು ವಿರಚಿತೇ |
ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳ ಮಹಾ
ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಈ ಪ್ರತಿಯ (ಚ) ಆದಿಮ ಪತ್ರದಲ್ಲಿ ಗ್ರಂಥಾರಂಭಕ್ಕೆ ಮೊದಲು ಇರುವ ಓಲೆಯ ಪತ್ರದಲ್ಲಿ 10 ಶೀರ್ಷಿಕೆಗಳಲ್ಲಿ ವಿಷಯಾನುಕ್ರಮಣಿಕೆಯನ್ನು ಓಲೆ ಸಂಖ್ಯಾ ಸಹಿತವಾಗಿ ಬರೆದಿರುತ್ತದೆ.

(2) (ಕ) **ಪ್ರತಿ** (ಓ.ಆರ್.ಐ.)

K 474. 34.5″ × 2.1″ ಪತ್ರಗಳು 365. ಸಾಲು 10. ಅಕ್ಷರ 140. ವ್ಯಾಖ್ಯಾನಸಹಿತ. ಸಮಗ್ರ.
ಆದಿ—ಶುಭಮಸ್ತು ವೀರಮಾಹೇಶ್ವರಾಚಾರಸಂಗ್ರಹದ ವ್ಯಾಖ್ಯಾನ ||
ಯಸ್ಸಂಸಾರಾತ್ × × × ×

ಅಂತ್ಯ—(ಚ) ಪ್ರತಿಯಲ್ಲಿರುವಂತೆಯೇ ವ್ಯಾಖ್ಯಾಕಾರನ ಹೇಳಿಕೆಯಿದೆ.

'ಇದು ಶಿವಭಕ್ತ ಚಾತಕಚಯಕ್ಕೆ × × × ಭೂತಳಾಗ್ರದೋಳ್'

ಆದನಂತರ ಪ್ರತಿಮಾಡಿದವನ ಹೇಳಿಕೆ—

'ಶ್ರೀವೀರ..........ಸಿದವರು ಸೆಜ್ಜೆ ರೇವಣಸಿದ್ಧೇಶ್ವರನು |
ಈ ಪುಸ್ತಕ ಎಲ್ಲಾ ವೀರಮಾಹೇಶ್ವರರ ಪುಸ್ತಕ ಸಮಾಪ್ತ ಮಂಗಲಮಹಾ ||

ಶ್ರೀ ಶ್ರೀ ಶ್ರೀ ಶ್ರೀ ಶುಭಮಸ್ತು ನಿರ್ವಿಘ್ನಮಸ್ತು | ಮಳವಳ್ಳಿಯ ನೋಟದ ಮಲ್ಲೇದೇವರ ಮಗ ಮಲ್ಲಿಕಾರ್ಜುನನು ಬರೆದನು ಶುಭಮಸ್ತು ನಿರ್ವಿಘ್ನಮಸ್ತು ||

× × × ಪುಸ್ತಿಕೆಯೆಂದು ತೆಕ್ಕೊಂಡ ಂದಾವರು ಶಿವಭಕ್ತರು ತಂಮ ಜನನಿ × × × ಅಳಿಪಿದ ಹಾಂಗೆ × ×

(3) (ಖ) ಪ್ರತಿ

K 167. 21.4″ × 1.3″ ಒಟ್ಟು 432 ಪತ್ರ. ಸಾಲು 12. ಅಕ್ಷರ 120. ವ್ಯಾಖ್ಯಾಯುತ. ಅಲ್ಲಲ್ಲಿ ತ್ರುಟಿತ ಪತ್ರಗಳು. 17 ರಿಂದ 432 ಮತ್ತೆ 3 ಪತ್ರಗಳು. ಕೊನೆಯ 432ನೆಯ ಪತ್ರವೂ ತ್ರುಟಿತವಾಗಿ ಮುಕ್ತಾಯ ಭಾಗವಿದೆ. 'ಇದು ಶಿವಭಕ್ತ ಚಾತಕ–ಚಯಕ್ಕೆ × ಭೂತಳಾಗ್ರದೊಳ್' ಎಂಬುದಿದ್ದು, ಇತಿ ಶ್ರೀ ನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ಸದಾಚಾರ ನಿರೂಪ ....ಶ್ರೀಮದೀಶ್ವರ–ಸ್ಕಂದಸಂವಾದೋ ನಾಮಾಷ್ಟಸಪ್ತತಿತಮೋಽಧ್ಯಾಯಃ ಶ್ರೀ ಶ್ರೀ ಶ್ರೀ ಎಂದು ಮುಕ್ತಾಯವಾಗಿದೆ.

ಆದಿ—ಶ್ರೀ ಗುರುಬಸವಲಿಂಗಾಯ ನಮಃ ||
ವೀರಮಾಹೇಶ್ವರಾಚಾರಸಂಗ್ರಹದ ವ್ಯಾಖ್ಯಾನವು ||
ಯಸ್ಸಂಸಾರಾತ್ × × × ಶ್ರೀಗುರವೇ ನಮಃ ||

ಕಾಲಾದಿಗಳು ಈ 'ಖ' ಪ್ರತಿಯಲ್ಲಿರುವುದಿಲ್ಲ.

(4) (ಗ) ಪ್ರತಿ (ಓ.ಆರ್.ಐ.)

S. A. 564. 381 ಪತ್ರಗಳು. ಕನ್ನಡ ಲಿಪಿ. ಕಾಗದ ಪ್ರತಿ. ಮೂಲ ಮಾತ್ರ.

ಆದಿ—ಶ್ರೀ ಶ್ರೀರಸ್ತು ಪರಬ್ರಹ್ಮಣೇ ನಮಃ. ಶ್ರೀಗುರುಸ್ವತಂತ್ರಸಿದ್ಧಲಿಂಗೇಶ್ವ–ರಾಯನಮಃ. ಶ್ರೀವೀರಮಾಹೇಶ್ವರಾಚಾರಸಂಗ್ರಹೋ ಲಿಖ್ಯತೇ. ಲಿಖಿತಮ–ವಿಘ್ನಮಸ್ತು. 'ಯಸ್ಸಂಸಾರಾತ್ × × ಇತ್ಯಾದಿ.' ಈ ಎಲ್ಲ ಪ್ರತಿಗಳೂ ಸಾಮಾನ್ಯವಾಗಿ 'ಕ' ಪ್ರತಿಯನ್ನೇ ಹೋಲುವುವು.

ಅಂತ್ಯ—ಶ್ರೀ ಕಲಿಯುಗೇ ಪಶ್ಚಾದ್ಭೂತಾನಾಂ ೪೯೨೪ ವರ್ಷಾಣಾಂ ಮಂತ್ಯಸ್ಯ ಶೋಭನಸಂವತ್ಸರಸ್ಯ ಮಾಘಕೃಷ್ಣಚತುರ್ದಶಿ ಭಾನುಜವಾಸರೇ ಶ್ರೀನೀಲಕಂಠ-ನಾಗನಾಥಾಚಾರ್ಯವರ್ಯವಿರಚಿತೋಽಯಂ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹಃ ಶ್ರೀಮಲ್ಲೀಲಾಖ್ಯ ಮುರಿಗಾಖ್ಯ ಶಿವಯೋಗಿನಾ ಲಿಖಿತ್ವಾ ಪರಿಸಮಾಪ್ತಃ ॥ ಮಂಗಳಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಆಯುರಾರೋಗ್ಯಮಸ್ತು ॥ ಶ್ರೀಗುರು ಸ್ವತಂತ್ರಸಿದ್ಧಲಿಂಗದೇಶಿಕೇಂದ್ರಾಯ ನಮಃ । ಶ್ರೀಗರಳಪುರಾಧೀಶ್ವರಶ್ರೀಕಂಠಾಯ ನಮಃ। ಶ್ರೀಮಲ್ಲಿಕಾರ್ಜುನೇಶ್ವರಾಯ ನಮಃ ॥ ಶ್ರೀ॥ ಸಮಗ್ರ ಮೂಲಮಾತ್ರ.

(5) (ಘ) ಪ್ರತಿ. ಮುದ್ರಿತಪ್ರತಿ (3 ಭಾಗಗಳು)

ಗ್ರಂಥಕಾರನು ಈ ಗ್ರಂಥವನ್ನು ಭಾಗಗಳನ್ನಾಗಿ ವಿಭಜಿಸಿರುವುದಿಲ್ಲ. ಸೌಕರ್ಯ ದೃಷ್ಟಿಯಿಂದ ಮಾತ್ರ ಈ ಬೃಹದ್ ಗ್ರಂಥವನ್ನು ಮರಾಠೀ ಗದ್ಯಾನುವಾದ ಸಹಿತವಾಗಿ ಸೊಲ್ಲಾಪುರದಲ್ಲಿ ರಾವ್‌ಸಾಹೇಬ್ ಮಲ್ಲಪ್ಪಾ ಬಸಪ್ಪಾ ವಾರದ ಇವರು ಮೂರು ಭಾಗಗಳಾಗಿ ವಿಭಜಿಸಿ 1906 ರಲ್ಲಿ 1ರಿಂದ 16 ಅಧ್ಯಾಯಗಳನ್ನೊಳಗೊಂಡ ಪ್ರಥಮ ಭಾಗವನ್ನೂ 1907ರಲ್ಲಿ 17ರಿಂದ 45 ಅಧ್ಯಾಯಗಳನ್ನೊಳಗೊಂಡ ದ್ವಿತೀಯಭಾಗವನ್ನು ಮತ್ತು 46 ರಿಂದ 78 ಅಧ್ಯಾಯಗಳನ್ನೊಳಗೊಂಡ ತೃತೀಯ ಭಾಗವನ್ನೂ ಮುದ್ರಿಸಿರುವರು. * ಈ ಗ್ರಂಥದ ಆಂಧ್ರಾನುವಾದವನ್ನು ಪರಿಶೀಲಿಸಲಾಗಿದೆ. ಹೀಗೆ ಆರು ಮಾತೃಕೆಗಳನ್ನು ಸಂಪಾದನೆಯ ಕಾರ್ಯಕ್ಕೆ ಬಳಸಲಾಗಿದೆ. ಕ. ಗ. ಚ. ಪ್ರತಿಗಳು ಮೈಸೂರು ಜಿಲ್ಲೆಯ ಪ್ರತಿಗಳೆಂದೂ ಪ್ರತಿಕಾರರ ಬರವಣಿಗೆಗಳಿಂದ ವಿದಿತವಾಗುತ್ತದೆ. ಇಷ್ಟು ಮಾತೃಕೆಗಳ ವಿಚಾರ.

ಮುದ್ರಣವಿಚಾರ

ಈ ಗ್ರಂಥವನ್ನು ಶ್ರೀಧರಾಂಕನ ಕನ್ನಡ ವ್ಯಾಖ್ಯಾನಸಹಿತವಾಗಿ ಆದಿಮ ಇಪ್ಪತ್ತು ಅಧ್ಯಾಯಗಳನ್ನು ಪ್ರಥಮಭಾಗವಾಗಿ ಮೈಸೂರು ವಿಶ್ವವಿದ್ಯಾನಿಲಯದ

---

*ಲಿಂ ॥ ನಿರ್ದೇಶಕರಾದ—ಹೆಚ್. ದೇವೀರಪ್ಪನವರು—

9-11-56ರಲ್ಲಿ ಕಾಶೀಜಂಗಮವಾಡೀ ಮಠದಿಂದ ಪರಿಶೀಲನೆಗಾಗಿ ತಂದಿದ್ದ—ಪರ್ವತ ಮಂತ್ರಿ ಲಿಂಗನಾಮಾತ್ಯನು ದ್ವಿಪದ ಕಾವ್ಯವಾಗಿ 10 ಆಶ್ವಾಸಗಳಲ್ಲಿ ಅನುವಾದ ಮಾಡಿರುವ ವೀರಮಾಹೇಶ್ವರಾಚಾರ ಸಂಗ್ರಹವು ಎಂಬ ಗ್ರಂಥದ ಮೂರು ಓಲೆಗಳಲ್ಲಿ ಒಂದು ಓಲೆ (199 ಪತ್ರಗಳಿದ್ದ 2 ಗೇಣುದ್ದ 12 ಅಂಗುಲ ಅಗಲದ) ಮಾತ್ರ ಶುದ್ಧವಾಗಿಯೂ ಸಮಗ್ರವಾಗಿಯೂ ಇದ್ದು ಉಳಿದ ಎರಡು ಓಲೆಗಳು ಅಸಮಗ್ರಗಳಾಗಿಯೂ, ತ್ರುಟಿತಗಳಾಗಿಯೂ ಇದ್ದುವು. ಆ ಕಾಲಕ್ಕೆ ನಾನು ಪರಿಶೀಲಿಸಿ ಬರೆದುಕೊಂಡಿದ್ದ ಟಿಪ್ಪಣಿಗಳಿಂದ—ಈ ಆಂಧ್ರ ಭಾಷೆಯ ಹಸ್ತಪ್ರತಿಯ ಸ್ಥೂಲ ವಿವರಣೆಯನ್ನು ಪ್ರಸ್ತಾವನೆಯಲ್ಲಿ ಬರೆದಿರುತ್ತೇನೆ.

ಪ್ರಾಚ್ಯವಿದ್ಯಾಸಂಶೋಧನಾಲಯದ ವತಿಯಿಂದ ಹೊರತರುತ್ತಿರಲಾಗಿದೆ. ನಿವೃತ್ತ ನಾಗುವ ಮುನ್ನ ನನ್ನಿಂದ ಸಂಪಾದಿತವಾಗಿದ್ದ ಈ ಪ್ರಥಮ ಭಾಗವು ನನ್ನ ನಿವೃತ್ತಿಯ ನಂತರ ಹೊರಬರುತ್ತಿರುವುದು ಸಂಪಾದಿಸಿದ ನನಗೆ ಸಂತಸವನ್ನುಂಟು ಮಾಡಿದೆ. ಪ್ರಕಟಪಡಿಸಲು ಸರ್ವಸಹಕಾರವಿತ್ತ ಸಂಸ್ಥೆಯ ನಿರ್ದೇಶಕರಾದ ಸನ್ಮಾನ್ಯ ಡಾ. ಕೆ. ರಾಜಗೋಪಾಲಾಚಾರ್ ಅವರಿಗೂ ಮತ್ತು ಉಪನಿರ್ದೇಶಕರಾದ ವೇದಾಂತಭೂಷಣಂ ವಿದ್ವಾನ್ ಆರ್. ಜಿ. ಮಾಳಗಿ ಅವರಿಗೂ ಮುದ್ರಣದ ಕರಡಚ್ಚನ್ನು ಸಮಗ್ರವಾಗಿ ನೋಡಿ ಸಹಕರಿಸಿದ ವಿದ್ವನ್ಮಣಿಗಳೂ ಸನ್ಮಿತ್ರರೂ ಆದ ಪ್ರಾಚ್ಯಸಂಶೋಧನಪಂಡಿತ ಹೆಚ್. ಎಸ್. ಫಾಟಕ್, ಎಂ.ಎ., ಇವರಿಗೂ ಅನೇಕ ರೀತಿಯಿಂದ ನೆರವಾದ ಸಂಸ್ಥೆಯ ಸಹೋದ್ಯೋಗಿಗಳಾದ ವಿದ್ವಾಂಸರಿಗೂ ನಾನು ಕೃತಜ್ಞನಾಗಿರುವೆನು.

ಇತಿ ವಿದ್ವಜ್ಜನವಿಧೇಯ

ವಿದ್ವಾನ್ ಎಂ. ಎಸ್. ಬಸವರಾಜಯ್ಯ

ನಿವೃತ್ತ ಹಿರಿಯ ಸಂಶೋಧಕ

ಪ್ರಾಚ್ಯವಿದ್ಯಾಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

ವೀರಮಾಹೇಶ್ವರಾಚಾರ ಸಂಗ್ರಹದ ಪ್ರಥಮಭಾಗ

ವಿಷಯಾನುಕ್ರಮಣಿಕಾ

ಶ್ರೀ ನೀಲಕಂಠನಾಗನಾಥಾಚಾರ್ಯವಿರಚಿತಃ

ವೀರಮಾಹೇಶ್ವರಾಚಾರಸಂಗ್ರಹಃ

ಶ್ರೀಧರಾಂಕಪ್ರಣೀತಕರ್ಣಾಟಭಾಷಾವಿವರಣೋಪೇತಃ

ಪ್ರಥಮೋಽಧ್ಯಾಯಃ

(ಗುರುವಂದನಮ್)

ಯಸ್ಸಂಸಾರಾನ್ಮಹಾಘೋರಾನ್ಮೋಚಯ[1]ತ್ಯಾಶ್ರಿತಾನ್[1] ಜನಾನ್ ।
ಕೃಪಾಕಟಾಕ್ಷಪಾತೇನ ತಸ್ಮೈ ಶ್ರೀಗುರವೇ ನಮಃ ॥ ೧ ॥
ಅನತಾಖಿಲಸದ್ಭಕ್ತಕಾಮಿತಾರ್ಥಪ್ರದಾಯಿನೇ
ನಮೋ ಮಳ್ಳಾ[2]ಯಿ[2]ಸೋಮೇಶಗುರವೇ ಕರುಣಾಬ್ಧಯೇ ॥ ೨ ॥

ವ್ಯಾಖ್ಯಾ ॥ ಯಃ = ಆವ[3]ನಾ[3]ನೊಬ್ಬ ಗುರುರಾಯನು ಆಶ್ರಿತಾನ್ = ಆಶ್ರಯಿಸಿದಂಥಾ ಜನಾನ್ = ಜನರುಗಳನು ಕೃಪಾಕಟಾಕ್ಷಪಾತೇನ = [4]ಕರುಣ[4] ಕಟಾ[5]ಕ್ಷ[5] ಬೀಳುವದರಿಂದ ಮಹಾಘೋರಾತ್ = [6]ಅತಿ[6]ಭಯಂಕರ[7]ವಹೆಂಥ[7] ಸಂಸಾರಾತ್ = [8]ಸಂಸಾರದ[8] ದೆಸೆಯಿಂದ ಮೋಚಯತಿ = ಬಿಡಿಸುತ್ತ[9]ವಿಹನು[9] ತಸ್ಮೈ = ಅಂಥಾ [10]ಶ್ರೀ[10] ಗುರವೇ = ಶ್ರೀಗುರುವಿಂಗೋಸ್ಕರ ನಮಃ = ನಮಸ್ಕಾರವು. ॥ ೧ ॥

ಅನತಾಖಿಲಸದ್ಭಕ್ತಕಾಮಿತಾರ್ಥಪ್ರದಾಯಿನೇ = ಅನತ – ನಮಸ್ಕರಿಸಲ್ಪಟ್ಟ ಅಖಿಲಸದ್ಭಕ್ತ–ಸಮಸ್ತಸದ್ಭಕ್ತರುಗಳ ಕಾಮಿತಾರ್ಥ– ಇಷ್ಟಾರ್ಥಂಗಳ ಪ್ರದಾಯಿನೇ– ಕೊಡು[11]ತ್ತಂವಿದ್ದಂಥಾ[11] ಕರುಣಾಬ್ಧಯೇ = ಕರು[12]ಣಕ್ಕೆ[12] ಸಮುದ್ರ[13]ನಹೆಂಥಾ[13]

---

1 ತ್ಯಖಿಲಾನ್ (ಕ ಘ) ಮೂಲಪಾಠ 2 ಯ (ಕ) 3 (ಕ) ದಲ್ಲಿಲ್ಲ. 4 ಇಲ್ಲ (ಕ). 5 ಕ್ಷದ (ಕ) 6 ಬಹು (ಕ) 7 ವಾದ (ಕ) 8 ಜಗತ್ತಿನ (ಕ) 9 ಯಿಹನೋ (ಕ) 10 ಇಲ್ಲ (ಕ) 11 ತ್ತಲಿರುವಂಥಾ (ಕ) 12 ಣೆಗೆ (ಕ) 13 ದಂತಿರುವ (ಕ)

ನಮಃ ಕಪಿಲಸಂಸಿದ್ಧಮಲ್ಲಿಕಾರ್ಜುನಮೂರ್ತಯೇ
ಅದ್ವಿತೀಯಾಯ ನಿತ್ಯಾಯ ಶಿವಾಯ ಶಿವದಾಯಿನೇ ॥ ೩ ॥

ಶಿವಭಕ್ತ್ಯಮೃ[1]ತಾಸ್ವಾದಚೇತಸೇ ಶಿವಜನ್ಮನೇ
ನಮಶ್ಶ್ರೀನಂದಿನಾಥಾಯ ಶಂಕರಾಪರಮೂರ್ತಯೇ ॥ ೪ ॥

ಸರ್ವಂ ಶಕ್ತ್ಯಂಶಮುತ್ಸೃಜ್ಯ ಶಿವಮೇಕಮಶಿಶ್ರಿಯತ್
ಯಸ್ತಸ್ಮೈ ಭೃಂಗಿನಾಥಾಯ ನಮಃ ಕಲ್ಯಾಣರೂಪಿಣೇ ॥ ೫ ॥

ದಕ್ಷಯಜ್ಞಶಿರೋಹರ್ತ್ರೇ ಸುರದರ್ಪಾಪಹಾರಿಣೇ
ವೀರಭದ್ರಾಯ ರೌದ್ರಾಯ ನಮೋ ವಿಕ್ರಮಶಾಲಿನೇ ॥೬॥

ಮು[2]ಳ್ಳಾಯಿ[2]ಸೋಮೇಶಗುರವೇ = ಮುಳು[3]ವಾಗಿಲ[3] ಸೋಮೇಶ್ವರ ಗುರುರಾಯ ಗೋಸ್ಕರ ನಮಃ = ನಮಸ್ಕಾರವು. ॥ ೨ ॥

ಕಪಿಲಸಂಸಿದ್ಧಮಲ್ಲಿಕಾರ್ಜುನಮೂರ್ತಯೇ = ಕಪಿಲ ಸಿದ್ಧಮಲ್ಲಿಕಾರ್ಜುನ ಮೂರ್ತಿಯಹಂಥಾ ಅದ್ವಿತೀಯಾಯ = ಏಕನಹಂಥಾ ನಿತ್ಯಾಯ = ನಿತ್ಯನ ಹಂಥಾ ಶಿವದಾಯಿನೇ = ಮಂಗಳವನು ಕೊಡುತ್ತಂವಿದ್ದಂಥಾ ಶಿವಾಯ = ಶಿವಂಗೋಸ್ಕರ ನಮಃ = ನಮಸ್ಕಾರವು. ॥೩॥

ಶಿವಭಕ್ತ್ಯಮೃತಾಸ್ವಾದಚೇತಸೇ = ಶಿವಭಕ್ತಿಯೆಂಬ ಅಮೃತವನು ಸ್ವಾದಿಸು[4]ತ್ತಂ[4]ವಿದ್ದ ಚಿತ್ತವನುಳ್ಳಂಥಾ ಶಿವಜನ್ಮನೇ = ಶಿವನಿಂದ ಉತ್ಪತ್ತಿಯನುಳ್ಳಂಥಾ ಶಂಕರಾಪರಮೂರ್ತಯೇ = ಪರಮೇಶ್ವರನ ಅಪರಾವತಾರವಹಂಥಾ ಶ್ರೀನಂದಿ-ನಾಥಾಯ = ಶ್ರೀನಂ[5]ದಿಕೇ[5]ಶ್ವರಂಗೋಸ್ಕರ ನಮಃ = ನಮಸ್ಕಾರವು. ॥ ೪ ॥

ಯಃ = ಆವ[6]ನಾ[6]ನೊಬ್ಬ ಭೃಂಗೀಶ್ವರನು ಸರ್ವಂ = ಸಮಸ್ತವಹಂಥಾ ಶಕ್ತ್ಯಂಶಂ = ಶಕ್ತಿಯ ಅಂಶವನು ಉತ್ಸೃಜ್ಯ = ಬಿಟ್ಟು ಏಕಂ ಶಿವಂ = ಒಬ್ಬ ಶಿವನನು ಅಶಿಶ್ರಿಯತ್ = ಆ[7]ಶ್ರಯಿ[7]ಸಿದನು, ಕಲ್ಯಾಣರೂಪಿಣೇ = ಮಂಗಳ ಸ್ವರೂಪನಹಂಥಾ ತಸ್ಮೈ ಭೃಂಗಿನಾಥಾಯ = ಆ ಭೃಂಗೀಶ್ವರಂಗೋಸ್ಕರ ನಮಃ = ನಮಸ್ಕಾರವು. ॥ ೫ ॥

ದಕ್ಷಯಜ್ಞಶಿರೋಹರ್ತ್ರೇ = ದಕ್ಷನ ಯಜ್ಞದ ಶಿರಸ್ಸನ್ನು ಸಂಹರಿಸಿದಂಥಾ ಸುರ ದರ್ಪಾಪಹಾರಿಣೇ = ದೇವರ್ಕಳ ಗರ್ವವ ತಗ್ಗಿಸಿದಂಥಾ ರೌದ್ರಾಯ = ರೌದ್ರನ

---

1 ತ (ಕ) 2 ಯ (ಕ) 3 ಳ್ವಾಯ (ಕ) 4 ತಂ (ಕ) 5 ನಂದೀ (ಕ) 6 ಇಲ್ಲ (ಕ)
7 ಶ್ರೈಸಿ (ಕ)

ಜಗತ್ಸಂ[1]ಹರ[1]ಣೋದ್ಯುಕ್ತನೃಸಿಂಹಾಜಿನ[2]ಹಾರಿಣೇ[2]
ನಮಃ ಶ್ರೀಶರಭೇಶಾಯ ಪದಾಷ್ಟಕವಿಭಾಸಿನೇ ||೭||

ಏವಮಾದೀನ್ಮಹಾಶೂರಾನಸಂಖ್ಯಾತಾನ್ಮಹಾಗಣಾನ್
ನಮಾಮಿ ಶಿವಸದ್ಭಕ್ತಿಸಾಗರೇ ಮಗ್ನಮಾನಸಾನ್ ||೮||

ನಮೋ ಬಸವರಾಜಾಯ ವೃಷೇಂದ್ರಾಪರಮೂರ್ತಯೇ
ಚರಾರ್ಚನೈಕನಿಷ್ಠಾಯ ಶಿವಾಚಾರಪ್ರವರ್ತಿನೇ ||೯||

ಶಿವತತ್ತ್ವಾಮೃತಾಸ್ವಾದಚೇತಸೇ ಯೋಗಿನೇ ನಮಃ
ಶ್ರೀಚೆನ್ನಬಸವೇಶಾಯ ಷಟ್ಸ್ಥಲಬ್ರಹ್ಮವಾದಿನೇ ||೧೦||

ಹಂಥಾ ವಿಕ್ರಮಶಾಲಿನೇ = ಪರಾಕ್ರಮದಿಂದ ಒಪ್ಪು[3]ತಂ[3]ವಿದ್ದಂಥಾ ವೀರಭದ್ರಾಯ = ವೀರಭದ್ರಂಗೋಸ್ಕರ ನಮಃ ನಮಸ್ಕಾರವು. ||೬||

ಜಗತ್ಸಂಹರಣೋದ್ಯುಕ್ತನೃಸಿಂಹಾಜಿನಹಾರಿಣೇ = ಲೋಕಂಗಳ ಸಂಹರಿಸು[4]ವಲ್ಲಿ[4] ಉದ್ಯೋಗವನುಳ್ಳ ನರಸಿಂಹನ ಚರ್ಮವ ತೆಗೆದಂಥಾ ಪದಾಷ್ಟಕ ವಿಭಾಸಿನೇ = ಪಾದ ವೆಂಟ[5]ರಿಂ[5]ದೊಪ್ಪುತಂವಿದ್ದಂಥಾ ಶ್ರೀಶರಭೇಶಾಯ = ಶ್ರೀಶರಭೇಶ್ವರಂಗೋಸ್ಕರ ನಮಃ = ನಮಸ್ಕಾರವು. ||೭||

ಏವಮಾದೀನ್ = ಇವರು ಮೊದಲಾಗಿ ಇದ್ದಂಥಾ ಮಹಾಶೂರಾನ್ = ಮಹಾ ಪರಾಕ್ರಮಿಗಳಹಂಥಾ ಶಿವಸದ್ಭಕ್ತಿಸಾಗರೇ = ಶಿವ[6]ನ[6] ಸದ್ಭಕ್ತಿಯೆಂಬ ಸಮುದ್ರದಲ್ಲಿ ಮಗ್ನಮಾನಸಾನ್ = ಮುಳುಗ[7]ಲುಪ[7]ಟ್ಟ ಮನಸ್ಸನ್ನುಳ್ಳಂಥಾ ಅಸಂಖ್ಯಾತಾನ್ = ಅಸಂಖ್ಯಾತರಹಂಥಾ ಮಹಾಗಣಾನ್ = ಮಹಾಗಣೇಶ್ವರರುಗಳನು ನಮಾಮಿ = ನಮಸ್ಕರಿಸುತಂವಿದ್ದೇನು. ಣಮು ಪ್ರಹ್ವೀಭಾವೇ ಎಂಬ ಧಾತುವಿಂಗೆ ಲಟ್ಪರಸ್ಮೈಪದ ಉತ್ತಮಪುರುಷೈಕವಚನವು. ||೮||

ಚರಾರ್ಚನೈಕನಿಷ್ಠಾಯ = ಚರಲಿಂಗದ ಅರ್ಚನೆಯಲ್ಲಿ ಏಕನಿಷ್ಠೆಯನುಳ್ಳಂಥಾ ಶಿವಾಚಾರಪ್ರವರ್ತಿನೇ = ಶಿವಾಚಾರದಲ್ಲಿ ವರ್ತನೆಯನುಳ್ಳಂಥಾ ವೃಷೇಂದ್ರಾಪರ-ಮೂರ್ತಯೇ = ವೃಷಭೇಶ್ವರನ ಎರಡನೆಯ ಮೂರ್ತಿ[8]ಯಾದಂಥಾ[8] ಬಸವರಾಜಾಯ = ಬಸವದಂಡೇಶ್ವರಂಗೋಸ್ಕರ ನಮಃ = ನಮಸ್ಕಾರವು. ||೯||

ಶಿವತತ್ತ್ವಾಮೃತಾಸ್ವಾದಚೇತಸೇ = ಶಿವತತ್ತ್ವಾಮೃತವ ಸ್ವಾದಿಸುತ್ತಂವಿದ್ದ ಚಿತ್ತವನುಳ್ಳಂಥಾ ಯೋಗಿನೇ = ಶಿವಯೋಗೀಶ್ವರನಹಂಥಾ ಷಟ್ಸ್ಥಲ ಬ್ರಹ್ಮವಾದಿನೇ

---

[1] ಹಾರ (ಖ.ಚ.) [2] ಧಾರಿಣೇ (ಕ.ಖ.) [3] ತ್ತ ಇ (ಕ) [4] ಇಲ್ಲ (ಕ) [5] ರಿಂ (ಕ)
[6] ಕ–ದಲ್ಲಿಲ್ಲ [7] ಲ್ಪ (ಕ) [8] ಯಹಂ (ಕ)

[1]ಬಸವೇಶಾದಿ ಸರ್ವೇಷಾಂ[1] ಗಣಾನಾಂ ಜ್ಞಾನದಾಯಿನೇ
ಯೋಗೀಂದ್ರಾಯ ನಮಸ್ತಸ್ಮೈ ಪ್ರಭವೇ ಶಿವಮೂರ್ತಯೇ ॥೧೧॥

ಶಿವಯೋಗಾಮೃತಾಂಭೋಧಿಮಗ್ನಮಾನಸವೃತ್ತಯೇ
ವಂದೇ ಶ್ರೀಸಿದ್ಧರಾಮಾಯ [2]ಭಕ್ತ[2]ಸಂಪತ್ಪ್ರಮೋದಿನೇ ॥೧೨॥

ನಮಶ್ಶ್ರೀಪಂಡಿತಾರಾಧ್ಯಗುರವೇ ಸರ್ವವೇದಿನೇ
ಮಹೇಶಚರಣಾಂಭೋಜಪರಿನಿಷ್ಠಿತಚೇತಸೇ ॥೧೩॥

ಪುರಾ ವ್ಯಾಕೃತವಾನ್ಯಸ್ತು 'ಶ್ರೀಶಿವಜ್ಞಾನದೀಪಿಕಾಂ'
ಮಲ್ಲ[3]ಪಾ[3]ರ್ಯಗುರುಂ ನೌಮಿ ಮಲ್ಲಿಕಾರ್ಜುನವಲ್ಲಭಮ್ ॥೧೪॥

= ಷಟ್ಸ್ಥಲಬ್ರಹ್ಮವಾದಿಯಹಂಥಾ ಶ್ರೀ ಚೆನ್ನಬಸವೇಶಾಯ = [4]ಒಪ್ಪುತ್ತಂವಿದ್ದ[4] ಚೆನ್ನಬಸವೇಶ್ವರಂಗೋಸ್ಕರ ನಮಃ = ನಮಸ್ಕಾರವು. ॥೧೦॥

ಬಸವೇಶಾದಿ ಸರ್ವೇಷಾಂ ಗಣಾನಾಂ = ಬಸವೇಶ್ವರನೇ ಮೊದಲಾದಂಥಾ ಸಮಸ್ತ ಗಣೇಶ್ವರರುಗಳಿಗೆ ಜ್ಞಾನದಾಯಿನೇ = ಜ್ಞಾನವನ್ನು ಕೊಡುತ್ತಂ ವಿದ್ದಂಥಾ ಶಿವಮೂರ್ತಯೇ = ಶಿವಮೂರ್ತಿ ಆಹಂಥಾ ಯೋಗೀಂದ್ರಾಯ = ಶಿವಯೋಗೀಂದ್ರನಹಂಥಾ ತಸ್ಮೈ ಪ್ರಭವೇ = ಆ ಪ್ರಭುವಿಂಗೋಸ್ಕರ ನಮಃ = ನಮಸ್ಕಾರವು. ॥೧೧॥

ಶಿವಯೋಗಾಮೃತಾಂಬೋಧಿಮಗ್ನಮಾನಸವೃತ್ತಯೇ = ಶಿವಯೋಗವೆಂಬ ಅಮೃತ ಸಮುದ್ರದಲ್ಲಿ ಮುಳುಗಲ್ಪ[5]ಟ್ಟ[5] ಚಿತ್ತ[6]ದ[6] ವರ್ತನೆಯುನುಳ್ಳಂಥಾ ಭಕ್ತಸಂಪತ್ಪ್ರಮೋದಿನೇ = ಶಿವಭಕ್ತರ ಸಂಪತ್ತಿಗೆ ಸಂತೋಷಿಸುತ್ತಂವಿದ್ದಂ[7]ಥಾ[7] ಶ್ರೀ ಸಿದ್ಧರಾಮಾಯ = ಒಪ್ಪುತ್ತಂವಿದ್ದ ಸಿದ್ಧರಾಮಂಗೋಸ್ಕರ ವಂದೇ = ನಮಸ್ಕರಿಸುತ್ತಂವಿದ್ದೇನು. ವದಿ ಅಭಿವಾದನಸ್ತುತ್ಯೋಃ ಎಂಬ ಧಾತುವಿಂಗೆ ಲಡಾತ್ಮನೇ ಪದ ಉತ್ತಮಪುರುಷೈಕವಚನವು. ॥೧೨॥

ಸರ್ವವೇದಿನೇ = ಸರ್ವವನು ಬಲ್ಲಂಥಾ ಮಹೇಶಚರಣಾಂಭೋಜಪರಿನಿಷ್ಠಿತ-ಚೇತಸೇ = ಪರಮೇಶ್ವರನ ಚರಣ ಕಮಲದಲ್ಲಿ ನಿಷ್ಠೆಯುಹ ಚಿತ್ತವನುಳ್ಳಂಥಾ ಶ್ರೀ ಪಂಡಿತಾರಾಧ್ಯಗುರವೇ = ಒಪ್ಪು[8]ತ್ತಂ[8]ವಿದ್ದ ಪಂಡಿತಾರಾಧ್ಯಗುರುವಿಂಗೋಸ್ಕರ ನಮಃ = ನಮಸ್ಕಾರವು. ॥೧೩॥

ಪುರಾ = ಪೂರ್ವದಲ್ಲಿ ಯಃ = [9]ಆವನಾನೊರ್ವ[9] ಆಚಾರ್ಯನು ಶ್ರೀಶಿವಜ್ಞಾನ

---

[1] ಸರ್ವೇಷಾಂ ಬಸವಾದೀನಾಂ (ಗ) [2] ಭಕ್ತಿ (ಕ) [3] ಯಾ (ಘ-ಮುದ್ರಿತಪಾಠ)
[4] ಕ-ದಲ್ಲಿಲ್ಲ [5] ಟ್ಟಂಥಾ (ಕ) [6] ಕ-ದಲ್ಲಿಲ್ಲ. [7] ಕ-ದಲ್ಲಿಲ್ಲ [8] ತಂ (ಖ)
[9] ಯಾವನಾನೊಬ್ಬ (ಕ).

ವೇದಶಾಸ್ತ್ರಪುರಾಣೇಷು ಸಾರಮುದ್ಧೃತ್ಯ ಶಾಂಕರಮ್
'ಸಾರೋದ್ಧಾರಃ' ಕೃತೋ ಯೇನ ಲಕ್ಷ್ಮೀದೇವಗುರುಂ ಭಜೇ ॥೧೫॥

'ಸಾನಂದಚರಿತಂ' ನಾಮ ಗ್ರಂಥಂ ಚಕ್ರೇಽತಿಯತ್ನತಃ
ಯಸ್ತಸ್ಮೈ ಪದ್ಮರಾಜಾಯ ನಮೋ ದುರ್ವಾದದಾಹಿನೇ ॥೧೬॥

ಯಸ್ಸರ್ವವಾದಾನ್ನಿರ್ಜಿತ್ಯ ವೀರಮಾಹೇಶ್ವರೋಚಿತಮ್
'ಶ್ರೀಮದ್ಬಸವರಾಜೀಯ[ಂ]' ನಾಮ ಗ್ರಂಥಮಚೀಕರತ್
[1]ಪಾಲ್ಕು[ರ್ಕೆ][1] ಸೋಮನಾಥಾಯ ನಮಸ್ತಸ್ಮೈ ಸುಶೀಲಿನೇ ॥೧೭॥

ದೀಪಿಕಾಂ = ಒಪ್ಪುತ್ತಂವಿದ್ದ ಶಿವಜ್ಞಾನದೀಪಿಕೆಯೆಂಬ ಶಾಸ್ತ್ರವನು ತು = ವಿಶೇಷವಾಗಿ ವ್ಯಾಹೃತವಾನ್ = ಮಾಡಿದನು. ಮಲ್ಲಿಕಾರ್ಜುನವಲ್ಲಭಃ = ಮಲ್ಲಿಕಾರ್ಜುನಲಿಂಗಕ್ಕೆ ಮನೋಹರವಹಂಥಾ ಮಲ್ಲಪಾರ್ಯಗುರುಂ = ಮಲ್ಲಪಾಚಾರ್ಯಗುರುವನು ನೌಮಿ = ನಮಸ್ಕರಿಸುತ್ತಂ ಇದ್ದೇನು. ೧೪

ಯೇನ = [2]ಆವನೋರ್ವ[2] ಆಚಾರ್ಯನಿಂದ ವೇದಶಾಸ್ತ್ರಪುರಾಣೇಷು = ವೇದ ಶಾಸ್ತ್ರ ಪುರಾಣಂಗಳಲ್ಲಿ ಶಾಂಕರಂ = ಶಿವಸಂಬಂಧವಹಂಥಾ ಸಾರಂ = ಸಾರವಹ ಗ್ರಂಥವನು ಉದ್ಧೃತ್ಯ = ತೆಗೆದು ಸಾರೋದ್ಧಾರಃ = ಸಾರೋದ್ಧಾರವೆಂಬ ಗ್ರಂಥವು ಕೃತಃ = ಮಾಡಲ್ಪಟ್ಟಿತ್ತು [ತಂ—ಆ] ಲಕ್ಷ್ಮೀದೇವಗುರುಂ = ಲಕ್ಷ್ಮೀದೇವಗುರುವನು ಭಜೇ = ಭಜಿಸುತ್ತಂಇದ್ದೇನು. ೧೫

ಯಃ = ಆವನಾನೊ[3]ರ್ವ[3] ಮಹಾತ್ಮನು ಸಾನಂದಚರಿತಂ ನಾಮ = ಸಾನಂದ ಚರಿತೆಯೆಂಬ ಹೆಸರನ್ನುಳ್ಳಂಥಾ ಗ್ರಂಥಂ = ಗ್ರಂಥವನು ಅತಿಯತ್ನತಃ = ಅತಿ ಪ್ರಯತ್ನದ ದೆಸೆಯಿಂದ ಚಕ್ರೇ = ಮಾಡಿದನು. ದುರ್ವಾದದಾಹಿನೇ = ದುರ್ವಾದ ವನು ದಹಿಸುತ್ತಂವಿದ್ದಂಥಾ ತಸ್ಮೈ ಪದ್ಮರಾಜಾಯ = ಆ ಪದ್ಮರಸರಿಂಗೋಸ್ಕರ ನಮಃ = ನಮಸ್ಕಾರವು. ೧೬

ಯಃ = ಆವನಾನೊರ್ವ ಮಹಾತ್ಮನು ಸರ್ವವಾದಾನ್ = ಸಮಸ್ತವಾದಂಗಳನು ನಿರ್ಜಿತ್ಯ = ಗೆದ್ದು ವೀರಮಾಹೇಶ್ವರೋಚಿತಂ = ವೀರಮಾಹೇಶ್ವರಕ್ಕೆ ಉಚಿತವಹಂಥಾ ಶ್ರೀಮದ್ಬಸವರಾಜೀಯನಾಮಗ್ರಂಥಂ = ಒಪ್ಪುತ್ತಂವಿದ್ದ ಬಸವರಾಜೀಯವೆಂಬ ಹೆಸರನುಳ್ಳ ಗ್ರಂಥವನು ಅಚೀಕರತ್ = ಮಾಡಿದನು. ಸುಶಿಲಿನೇ = ಮನೋಹರವಹ ಶೀಲಸಂಪಾದನೆಯನುಳ್ಳಂಥಾ ತಸ್ಮೈ = ಆ ಪಾಲ್ಕುರ್ಕೆಸೋಮನಾಥಾಯ = ಪಾಲ್ಕು-ರಿಕೆಯ ಸೋಮೇಶ್ವರಾಚಾರ್ಯಂಗೋಸ್ಕರ ನಮಃ = ನಮಸ್ಕಾರವು. ೧೭

---

[1] ಪಾಲ್ಕುರಿಚಿಕೆ (ಕ.ಖ.) ಪಾಲ್ಕುರಿಕೀ (ಗ) ಪಾಲಕುರಿಕೆ (ಘ) [2] ನಾನೊಬ್ಬ (ಚ)
[3] ಬ್ಬ (ಕ)

'ಶೈವರತ್ನಾಕರಂ' ನಾಮ ಗ್ರಂಥಂ ಯಃ ಕೃತವಾನ್ ಪುರಾ
ಜಗದ್ಧಿತಾರ್ಥಂ ಕೃಪಯಾ ಜ್ಯೋತಿರ್ನಾಥಂ ನಮಾಮಿ ತಮ್ ||೧೮||

ವ್ಯಾಕರೋದ್ಯಃ 'ಶಿವಜ್ಞಾನ ಸಮುಚ್ಚಯ'ಮಕಲ್ಮಷಮ್
ಜಗದಾರಾಧ್ಯನಾಗೇಶಗುರುಂ ತಂ ಸತತಂ ಭಜೇ ||೧೯||

ಯಃ ಪುರಾತನಚಾರಿತ್ರಂ ಕೃತವಾನ್ ದೇಶಭಾಷಯಾ
ಪಂಪಾಹರೀಶ್ವರಂ ನೌಮಿ ಸಂಪಾದಿತಶಿವಾಸ್ಪದಂ ||೨೦

ಶೈವಶಾಸ್ತ್ರಾರ್ಥತತ್ತ್ವಜ್ಞಾನೇತಾನನ್ಯಾನ್ಪುರಾತನಾನ್
ತ್ರಿಷಷ್ಟಿಗಣ[1]ಮುಖ್ಯಾಂಸ್ತು[1]ನೌಮಿ ಲಿಂಗಾಂಗಸಂಗಿನಃ ||೨೧||

ಯಃ = ಆವನಾನೊಬ್ಬ ಮಹಾತ್ಮನು ಕೃಪಯಾ = ಕೃಪೆಯಿಂದಂ ಜಗದ್ಧಿತಾರ್ಥಂ = ಲೋಕದ ಹಿತಕ್ಕೋಸ್ಕರ ಪುರಾ = ಪೂರ್ವದಲ್ಲಿ ಶೈವರತ್ನಾಕರಂ = ಶೈವರತ್ನಾಕರ[2]ವೆಂಬಂಥಾ[2] ಗ್ರಂಥಂ = ಗ್ರಂಥವನು ನಾಮ = ಪ್ರಸಿದ್ಧವಾಗಿ ಕೃತವಾನ್ = ಮಾಡಿದನು ತಂ = ಆ ಜ್ಯೋತಿರ್ನಾಥಂ = ಜ್ಯೋತಿರ್ನಾಥಾಚಾರ್ಯನನು ನಮಾಮಿ = ನಮಸ್ಕರಿಸುತ್ತಂವಿದ್ದೇನು. ೧೮

ಯಃ = ಆವನಾನೊಬ್ಬ ಮಹಾತ್ಮನು ಅಕಲ್ಮಷಂ = ನಿರ್ದೋಷವಹೆಂಥಾ ಶಿವಜ್ಞಾನಸಮುಚ್ಚಯಂ = 'ಶಿವಜ್ಞಾನ ಸಮುಚ್ಚಯವೆಂಬ ಗ್ರಂಥವನು *ವ್ಯಾಕರೋತ್ = ಮಾಡಿದನು ತಂ = ಆ ಜಗದಾರಾಧ್ಯನಾಗೇಶಗುರುಂ = ಜಗದಾರಾಧ್ಯ ನಾಗೇಂದ್ರ ಗುರುವನು ಸತತಂ = ಆವಾಗ[3]ವೂ[3] ಭಜೇ = ಭಜಿಸುತ್ತಂವಿದ್ದೇನು. ೧೯

ಯಃ = ಆವನಾನೊಬ್ಬ ಮಹಾತ್ಮನು ದೇಶಭಾಷಯಾ = [4]ಕರ್ಣಾಟದೇಶದ ಭಾಷೆಯಿಂದ[4] ಪುರಾತನಚಾರಿತ್ರಂ = ಪುರಾತನ ಗಣಂಗಳ ಚಾರಿತ್ರವನು ಕೃತವಾನ್ = ಮಾಡಿದನು (ತಂ = ಆ) ಸಂಪಾದಿತಶಿವಾಸ್ಪದಂ = ಸಂಪಾದಿಸಲುಪಟ್ಟ ಶಿವನ ಸ್ಥಾನವನುಳ್ಳಂಥಾ ಪಂಪಾಹರೀಶ್ವರಂ = ಹಂಪೆಯ ಹರೀಶ್ವರನನು ನೌಮಿ = ನಮಸ್ಕರಿ[5]ಸುತ್ತಂವಿದ್ದೇನು.[5] ೨೦

ಶೈವಶಾಸ್ತ್ರಾರ್ಥತತ್ತ್ವಜ್ಞಾನ್ = ಶೈವಶಾಸ್ತ್ರಂಗಳ ಅರ್ಥಂಗಳನು ನಿಶ್ಚಯವಾಗಿ

---

[1] ಮುಖ್ಯಾಂಸ್ತಾನ್ (ಕ) [2] ವೆಂಬ (ಖ.ಚ.) [3] ಲೂ (ಕ) [4] ಕರ್ನಾಟದೇಶದ ಭಾಷೆಯಿಂದ (ಖ) ದೇಶಭಾಷೆಯಿಂದ (ಕ). [5] ಸುತ್ತೇನೆ. (ಖ).

* ವ್ಯಾಕರೋತ್–ಮಾಡಿದನು. ಶಿವಜ್ಞಾನ ಸಮುಚ್ಚಯದೆಂಬ ಗ್ರಂಥವನ್ನು ರಚಿಸಿದನೋ ಅಥವಾ ಆ ಗ್ರಂಥಕ್ಕೆ ವ್ಯಾಖ್ಯಾನ ಮಾಡಿದನೋ ? ಎಂಬಂಶ ಪರಿಶೀಲನಾರ್ಹ—'ವ್ಯಾಕರೋತ್' ಎಂಬ ಪದ ಮತ್ತು ವ್ಯಾಖ್ಯಾನಗಳಿಂದ ವಿಚಾರ ಸಂದಿಗ್ಧವಾಗಿದೆ.

ಪುರಾ ಯೇಽಪೂಜಯನ್ ಶಂಭುಂ ಪುರಾರಾತಿಂ ಪುರಾತನಾಃ
ಇದಾನೀಂ ಶಿವಲಿಂಗಂ ತು ಪೂಜಯಂತೀಹ ಯೇ ನರಾಃ ||೨೨||

(ಗ್ರಂಥಕೃತ್ಪ್ರತಿಜ್ಞಾ)

ಪೂಜಯಿಷ್ಯಂತಿ ಯೇ ಭಕ್ತ್ಯಾ ಶ್ರೀವಿಶ್ವೇಶಮತಂದ್ರಿತಾಃ
ಏತಾನ್ ಮಾಹೇಶ್ವರಾನ್ ಸರ್ವಾನ್ ನತ್ವಾ ತತ್ತತ್ಪ್ರಸಾದತಃ ||೨೩||

ತತ್ಸಂಗೃಹೀತಾನ್ ಗ್ರಂಥಾಂಶ್ಚ ಶ್ರುತಿಸ್ಮೃತಿಶಿವಾಗಮಾನ್
ಇತಿಹಾಸಪುರಾಣಾದೀನಾಲೋಕ್ಯಾತಿಪ್ರಯತ್ನತಃ ||೨೪||

ಬಲ್ಲಂಥಾ ಏತಾನ್ ಪುರಾತನಾನ್ = ಈ ಪೂರ್ವದ ಗಣೇಶ್ವರರುಗಳನು ಲಿಂಗಾಂಗ ಸಂಗಿನಃ = ಲಿಂಗಾಂಗ ಸಂಬಂಧವುಳ್ಳಂಥಾ ಅನ್ಯಾನ್ = ಮತ್ತೆ ಕೆಲಬರಹಂಥಾ ತ್ರಿಷಷ್ಟಿ ಗಣಮುಖ್ಯಾನ್ = ಅಱುವತ್ತು ಮೂವರು ಗಣಮುಖ್ಯರುಗಳನು ತು = ವಿಶೇಷವಾಗಿ ನೌಮಿ = ನಮಸ್ಕರಿಸುತ್ತಂವಿದ್ದೇನು. ೨೧

ಪುರಾ = ಮುನ್ನ ಯೇ = ಆರು ಕೆಲಬರು ಪುರಾತನಾಃ = ಪೂರ್ವದ ಗಣಂಗಳು ಪುರಾರಾತಿಂ = [1]ತ್ರಿಪುರಾರಿಯಹಂಥಾ[1] ಶಂಭುಂ = [2]ಸುಖವನು ಮಾಡುತ್ತಂ ವಿದ್ದಂಥಾ ಪರಮೇಶ್ವರನನು[2] ಅಪೂಜಯನ್ = ಪೂಜಿಸಿದ[3]ರು[3] ಇದಾನೀಂ = ಈಗಲು ಇಹ = [4]ಈ ಲೋಕದಲ್ಲಿ[4] ಯೇ = ಆರು ಕೆಲಬರು ನರಾಃ = ಮನುಷ್ಯರುಗಳು ಶಿವಲಿಂಗಂ ತು = ಶಿವಲಿಂಗವನು ಪೂಜಯಂತಿ = ಪೂಜಿಸುತ್ತಂ ವಿದ್ದಾರು. ||೨೨||

ಯೇ = ಆರು ಕೆಲಬರು ಅತಂದ್ರಿತಾಃ = ಮಱವೆಯಿಲ್ಲದವರುಗಳಾಗಿ ಭಕ್ತ್ಯಾ = ಭಕ್ತಿಯಿಂದ ಶ್ರೀ ವಿಶ್ವೇಶಂ = ಶ್ರೀವಿಶ್ವೇಶ್ವರನನು ಪೂಜಯಿಷ್ಯಂತಿ = ಪೂಜಿಪಿಯಾರು ಏತಾನ್ = ಈ ಸರ್ವಾನ್ = ಸಮಸ್ತರಹಂಥಾ ಮಾಹೇಶ್ವರಾನ್ = ವೀರಮಾಹೇಶ್ವರರು ಗಳನು ನತ್ವಾ = ನಮಸ್ಕರಿಸಿ ತತ್ತತ್ಪ್ರಸಾದತಃ = ಅವರವರುಗಳ ಪ್ರಸನ್ನತಿಕೆಯ ದೆಸೆಯಿಂದ, ||೨೩||

ತತ್ಸಂಗೃಹೀತಾನ್ = ಆ ಮಹಾತ್ಮರುಗಳಿಂದ ಸಂಗ್ರಹಿ[5]ಸಲುಪಟ್ಟಂಥಾ ಗ್ರಂಥಾಂಶ್ಚ = ಗ್ರಂಥಂಗಳನು ಶ್ರುತಿಸ್ಮೃತಿ ಶಿವಾಗಮಾನ್ = ಶ್ರುತಿಸ್ಮೃತಿಶಿವಾಗ ಮಂಗಳನು ಇತಿಹಾಸಪುರಾಣಾದೀನ್ = ಇತಿಹಾಸ ಪುರಾಣ ಮೊದಲಾಗಿದ್ದಂಥಾ ಅವನು ಆಲೋಕ್ಯ = ನೋಡಿ ಅತಿಪ್ರಯತ್ನತಃ = ಅತ್ಯಂತ ಪ್ರಯತ್ನದ ದೆಸೆಯಿಂದ, ||೨೪||

---

1 ತ್ರಿಪುರಂಗಳಿಗೆ ಶತ್ರುವಾದ (ಕ) 2 ಶಿವನನ್ನು (ಕ) 3 ರೋ (ಕ) 4 ಇಹದಲ್ಲಿ (ಕ)
5 ಸಲ್ಪ (ಕ)

ತತ್ರ ಸಾರತರಾನ್ ಶ್ಲೋಕಾನ್ ವೀರಮಾಹೇಶ್ವರೋಚಿತಾನ್
ಆದಾಯ ತಾನ್ನೀಲಕಂಠನಾಗನಾಥಾರ್ಯಧೀಮತಾ
ಶ್ರೀಮನ್ಮ[1]ಳ್ವಾಯಿ[1]ಸೋಮೇಶಪಾದಾಬ್ಜಾಹಿತಚೇತಸಾ ||೨೫||

ಹಿತಾಯ ಶಿವಭಕ್ತಾನಾಂ ಸದಾಚಾರಾನುವರ್ತಿನಾಮ್
"ವೀರಮಾಹೇಶ್ವರಾಚಾರಸಂಗ್ರಹಃ" ಕ್ರಿಯತೇ ಮಹಾನ್ ||೨೬||

(ಗ್ರಂಥಾನುಕ್ರಮಣಿಕಾ)

ವೀರಮಾಹೇಶ್ವರಾಚಾರಸಂಗ್ರಹೇಽಸ್ಮಿನ್ ಶಿವಾಶ್ರಯೇ
ಅಧ್ಯಾಯಾನಾಂ ಕ್ರಮೇಣೈವ ಪ್ರೋಚ್ಯತೇಽನುಕ್ರಮೋಽಧುನಾ ||

ಆದಾವನುಕ್ರಮಸ್ತಾವದ್ಯಥಾವತ್ ಸಮುದೀರಿತಃ
ಧರ್ಮಾಧರ್ಮಪ್ರಭೇದಸ್ತು ತತೋ ನರಕಯಾತನಾ ||೨೮||

ತತ್ರ = ಅಲ್ಲಿ ಸಾರತರಾನ್ = ಅತ್ಯಂತ ಸಾರವಹಂಥಾ ವೀರಮಾಹೇಶ್ವರೋಚಿತಾನ್ = ವೀರಮಾಹೇಶ್ವರ ಶಾಸ್ತ್ರಕ್ಕೆ ಉಚಿತವಹಂಥಾ ತಾನ್ ಶ್ಲೋಕಾನ್ = ಆ ಶ್ಲೋಕಂಗಳನು ಆದಾಯ = ತೆಗೆದುಕೊಂಡು ಶ್ರೀಮನ್ಮಳ್ವಾಯಿಸೋಮೇಶ ಪಾದಾಬ್ಜಾಹಿತಚೇತಸಾ = ಒಪ್ಪುತ್ತಂವಿದ್ದ ಮುಳುವಾಗಿಲ ಸೋಮೇಶ್ವರಲಿಂಗದ ಪಾದ ಕಮಲದಲ್ಲಿ ಇರಿಸಲುಪಟ್ಟ ಚಿತ್ತವನುಳ್ಳಂಥಾ ನೀಲಕಂಠನಾಗನಾಥಾರ್ಯಧೀಮತಾ ನೀಲಕಂಠನಾಗನಾಥಾಚಾರ್ಯನೆಂಬ ವಿದ್ವಾನ್ನುವಿನಿಂದ, ||೨೫||

ಸದಾಚಾರಾನುವರ್ತಿನಾಂ = ಸದಾಚಾರದಲ್ಲಿ ಬಳಿವಿಡಿದು ವರ್ತಿಸುತ್ತಂವಿದ್ದಂಥಾ ಶಿವಭಕ್ತಾನಾಂ = ಶಿವಭಕ್ತರುಗಳ ಹಿತಾಯ = ಹಿತಕ್ಕೋಸ್ಕರ ಮಹಾನ್ = ದೊಡ್ಡಿತ್ತಹಂಥಾ ವೀರಮಾಹೇಶ್ವರಾಚಾರ ಸಂಗ್ರಹಃ = ವೀರಮಾಹೇಶ್ವರಾಚಾರ ಸಂಗ್ರಹವೆಂಬ ಈ ಶಾಸ್ತ್ರವು ಕ್ರಿಯತೇ = ಮಾಡಲುಪಟ್ಟುತ್ತು. ಕುಳಕಂಗಳು. ||೨೬||

ಶಿವಾಶ್ರಯೇ = ಶಿವನನಾಶ್ರೈಸಿದಂಥಾ ಅಸ್ಮಿನ್ = ಈ ವೀರಮಾಹೇಶ್ವರಾಚಾರಸಂಗ್ರಹೇ = ವೀರಮಾಹೇಶ್ವರಾಚಾರ ಸಂಗ್ರಹದಲ್ಲಿ ಅಧುನಾ = ಈಗಳು ಕ್ರಮೇಣೈವ = ಕ್ರಮದಿಂದವೆ ಅಧ್ಯಾಯಾನಾಂ = ಅಧ್ಯಾಯಂಗಳ ಅನುಕ್ರಮಃ = ಬಳಿವಿಡಿಯಲುಪಟ್ಟ ಕ್ರಮವು ಪ್ರೋಚ್ಯತೆ = ಹೇಳಲು ಪಡುತ್ತಿದ್ದುದು. ||೨೭||

ತಾವತ್ = ಅಂನಬರ ಆದೌ = ಮೊದಲಲ್ಲಿ ಅನುಕ್ರಮಃ = ಅನುಕ್ರಮಣಿಕಾಧ್ಯಾಯವು ಯಥಾವತ್ = ಯಥಾವತ್ತಾಗಿ ಸಮುದೀರಿತಃ = ಲೇಸಾಗಿ ಹೇಳಲು ಪಟ್ಟುತ್ತು. ತತಃ = ಅನಂತರದಲ್ಲಿ ಧರ್ಮಾಧರ್ಮಪ್ರಭೇದಸ್ತು = ಧರ್ಮಾಧರ್ಮ

---

1 ಯ (ಘ) 2 ಶ್ರಯಿ (ಕ)

ಪಿಂಡೋತ್ಪತ್ತಿಶ್ಚ ತದನು ತತಃ ಸಂಸಾರಹೇಯತಾ
ಮಾಹೇಶ್ವರೋಚಿತಾ ದೀಕ್ಷಾ ಗುರುಶುಶ್ರೂಷಣಕ್ರಮಃ ||೨೯||

ಪಂಚಾಕ್ಷರೀ ಪ್ರಭಾವಶ್ಚ ಸಾನಂದಚರಿತಂ ತತಃ
ಮಹಾಲಿಂಗೋದ್ಭವಶ್ಚಾಥ ಶಿವರಾಜ್ಯಕ್ರಮಸ್ತತಃ ||೩೦||

ಶಿವಾಜ್ಞಾಯಾಃ ಪ್ರಭಾವಶ್ಚ ಶಿರಸಶ್ಛೇದನಂ ವಿಧೇಃ
ಭಿಕ್ಷಾಟನಸುಲೀ[1]ಲಾಚ ತತಃ ಪರಮುದಾಹೃತಾ ||೩೧||

ದಕ್ಷಶಾಪಕ್ರಮಶ್ಚೈವ ದಕ್ಷಾಧ್ವರವಿನಾಶನಮ್
ತತಃ ಶರಭಲೀಲಾ ಚ ಕಾಮದಾಹಸ್ತ್ವನಂತರಮ್ ||೩೨||

ಪ್ರಭೇದಾಧ್ಯಾಯವು ತತಃ = ಅನಂತರದಲ್ಲಿ ನರಕಯಾತನಾ = ನರಕಯಾತನಾಧ್ಯಾಯವು, ||೨೮||

ತದನು = ಅವಱ ತಱುವಾಯಲ್ಲಿ ಪಿಂಡೋತ್ಪತ್ತಿಶ್ಚ = ಪಿಂಡೋತ್ಪತ್ತಿಯ ಅಧ್ಯಾಯವು ತತಃ = ಅನಂತರದಲ್ಲಿ ಸಂಸಾರಯೇತಾ ಸಂಸಾರಹೇಯತ್ವವು ಮಾಹೇಶ್ವರೋಚಿತಾ = ವೀರಮಾಹೇಶ್ವರತ್ವಕ್ಕೆ ಉಚಿತವಹಂಥಾ ದೀಕ್ಷಾ = ದೀಕ್ಷಾಧ್ಯಾಯವು ಗುರುಶುಶ್ರೂಷಣ ಕ್ರಮಃ = ಗುರುಶುಶ್ರೂಷಣ ಕ್ರಮಾಧ್ಯಾಯವು, ||೨೯||

ಪಂಚಾಕ್ಷರೀಪ್ರಭಾವಶ್ಚ = ಪಂಚಾಕ್ಷರೀ ಪ್ರಭಾವಾಧ್ಯಾಯವು ತತಃ = ಅನಂತರದಲ್ಲಿ ಸಾನಂದಚರಿತಂ = ಸಾನಂದಚರಿತಾಧ್ಯಾಯವು ಅಥ = ಅನಂತರದಲ್ಲಿ ಮಹಾಲಿಂಗೋದ್ಭವಃ = ಮಹಾಲಿಂಗೋತ್ಪತ್ತಿಯ ಅಧ್ಯಾಯವು ತತಃ = ತಱುವಾಯಲ್ಲಿ ಶಿವರಾಜ್ಯಕ್ರಮಃ = ಶಿವರಾಜ್ಯ ಕ್ರಮಾಧ್ಯಾಯವು, ||೩೦||

ಶಿವಾಜ್ಞಾಯಾಃ ಪ್ರಭಾವಶ್ಚ = ಶಿವಾಜ್ಞಾಪ್ರಭಾವಾಧ್ಯಾಯವು ವಿಧೇಃ = ಬ್ರಹ್ಮನ ಶಿರಸಃ = ಶಿರಸ್ಸಿನ ಛೇದನಂ = ಛೇದನವಹಂಥಾ ಅಧ್ಯಾಯವು ತತಃಪರಂ = ಅನಂತರದಲ್ಲಿ ಭಿಕ್ಷಾಟನಸುಲೀಲಾಚ = ಭಿಕ್ಷಾಟನ ಲೀಲಾಧ್ಯಾಯವು ಉದಾಹೃತಾ ಹೇಳಲು[1]ಪಟ್ಟು[2]ತ್ತು. ||೩೮||

ದಕ್ಷಶಾಪಕ್ರಮಶ್ಚೈವ = ಪರಮೇಶ್ವರದತ್ತ ದಕ್ಷಶಾಪಕ್ರಮಾಧ್ಯಾಯವು ದಕ್ಷಾಧ್ವರವಿನಾಶನಂ = ದಕ್ಷಾಧ್ವರಧ್ವಂಸಾಧ್ಯಾಯವು ತತಃ = ಅನಂತರದಲ್ಲಿ ಶರಭಲೀಲಾಚ

---

1 ಶೀ (ಖ) 2 ಪಟ್ಟಿ

ಗಿರಿಜಾಯಾ ವಿವಾಹಶ್ಚ ಸ್ಕಂದೋತ್ಪತ್ತೇಶ್ಚ ಸೂಚನಾ
ಉತ್ಪನ್ನೇನ ಕುಮಾರೇಣ ತಾರಕಸ್ಯ ವಧಕ್ರಮಃ ||೩೩||

ಪುರತ್ರಯವಿನಾಶಾಯ ರಥಕರ್ಮನಿರೂಪಣಮ್
ದಹನಂ ತ್ರಿಪುರಸ್ಯಾಥ ಜಲಂಧರವಧಸ್ತತಃ ||೩೪||

ಅಂಧಕಸ್ಯ ಗಣೇಶತ್ವಪ್ರತಿಪಾದನಮೇವ ಚ
ಗಜಾಸುರ ಮಹಾಕೃತ್ತಿಧಾರಣಂ ತದನಂತರಮ್ ||೩೫||

ವೃಷೇಂದ್ರವಾಹನಾಹ್ಯಸ್ಥಿಭಸ್ಮಾದ್ಯಾದಾನಕಾರಣಮ್
ಗಂಗಾಧರಣಲೀಲಾ ಚ ವಿಷಸಂಹರಣಂ ತತಃ ||೩೬||

= ಶರಭಲೀಲಾಧ್ಯಾಯವು ಅನಂತರಂ = ತಱುವಾಯಲ್ಲಿ ಕಾಮದಾಹಸ್ತು = ಕಾಮ ದಹನಾಧ್ಯಾಯವು, ||೩೨||

ಗಿರಿಜಾಯಾಃ = ಪಾರ್ವತೀದೇವಿಯ ವಿವಾಹಶ್ಚ = ವಿವಾಹಾಧ್ಯಾಯವು ಸ್ಕಂದೋತ್ಪತ್ತೇಃ = ಸ್ಕಂದನ ಉತ್ಪತ್ತಿಯ ಸೂಚನಾ ಚ = ಸೂಚನಾಧ್ಯಾಯವು ಉತ್ಪನ್ನೇನ = ಹುಟ್ಟಿದಂಥಾ ಕುಮಾರೇಣ = ಸ್ವಾಮಿಕುಮಾರನಿಂದ ತಾರಕಸ್ಯ = ತಾರಕಾಸುರನ ವಧಕ್ರಮಃ = ವಧಿಸಿದಂಥಾ ಅಧ್ಯಾಯವು- ||೩೩||

ಪುರತ್ರಯವಿನಾಶಾಯ = ತ್ರಿಪುರವ ಸಂಹರಿಸಲೋಸ್ಕರ ರಥಕರ್ಮನಿರೂಪಣಂ = ರಥವ ಮಾಡುವ ಪ್ರಕಾರವ ಹೇಳುವಂಥಾ ಅಧ್ಯಾಯವು ಅಥ = ಅನಂತರದಲ್ಲಿ ತ್ರಿಪುರಸ್ಯ = ತ್ರಿಪುರದ ದಹನಂ = ದಹಿಸುವಂಥಾ ಅಧ್ಯಾಯವು ತತಃ = ಅನಂತರದಲ್ಲಿ ಜಲಂಧರವಧಃ = ಜಲಂಧರಾಸುರನ ವಧಿಸಿದಂಥಾ ಅಧ್ಯಾಯವು, ||೩೪||

ಅಂಧಕಸ್ಯ = ಅಂಧಕಾಸುರಂಗೆ ಗಣೇಶತ್ವಪ್ರತಿಪಾದನಮೇವ ಚ = ಗಣೇಶತ್ವವ ಕೊಟ್ಟಂಥಾ ಅಧ್ಯಾಯವು ತದನಂತರಂ = ಅದಱ ತಱುವಾಯಲ್ಲಿ ಗಜಾಸುರಮಹಾಕೃತ್ತಿಧಾರಣಂ = ಗಜಾಸುರನ ಮಹತ್ತಾಹ ಚರ್ಮವ ಧರಿಸಿದಂಥಾಧ್ಯಾಯವು, ||೩೫||

ವೃಷೇಂದ್ರವಾಹನಾಹ್ಯಸ್ಥಿಭಸ್ಮಾದ್ಯಾದಾನ ಕಾರಣಂ = [1]ವೃಷಭ[1]ವಾಹನ ಸರ್ಪ ಅಸ್ಥಿ ವಿಭೂತಿ ಮೊದಲಾಗಿ ಧರಿಸುವ ಕಾರಣವಹಂಥಾ ಅಧ್ಯಾಯವು ಗಂಗಾಧರಣ ಲೀಲಾ ಚ = ಗಂಗೆಯ ಧರಿಸಿದ ಲೀಲೆಯ ಅಧ್ಯಾಯವು ತತಃ = ಅನಂತರದಲ್ಲಿ ವಿಷ ಸಂಹರಣಂ = ಕಾಳಕೂಟವಿಷವ ತಗ್ಗಿಸಿದಂಥಾ ಅಧ್ಯಾಯವು,

---

[1] ವೃಷೇಂದ್ರ (ಕ)

ಶ್ರೀಮನ್ನಂದೀಶ್ವರೋತ್ಪತ್ತಿಸ್ತದ್ಗಾಣಾಪತ್ಯವರ್ಣನಂ[1]
ಚಕ್ರಾದುತ್ಪತ್ತಿತದ್ದಾನಂ ವಿಷ್ಣವೇ ಸರ್ವಜಿಷ್ಣವೇ ||೩೭||

ಪುನಶ್ಚಕ್ರಾದಿದಾನಂ ಚ ವಿಷ್ಣವೇ ಶರಣಾರ್ಥಿನೇ
ಯಾದವೇಂದ್ರಾಯ ಕೃಷ್ಣಾಯ ಪುತ್ರಾದಿಪ್ರತಿ[2]ಪಾದ[2]ನಮ್ ||೩೮||

ಸತ್ಯಸಂಧಾಖ್ಯವಿಪ್ರಸ್ಯ ವಿಮುಕ್ತಿಪ್ರತಿಪಾದನಮ್
ವಿಷ್ಣೋಃ ಸನತ್ಕುಮಾರಸ್ಯ ಸಂವಾದ[3]ಸ್ಸಮ[3]ನಂತರಮ್ ||೩೯||

ತತೋ ವ್ಯಾಸಭುಜಸ್ತಂಭಸ್ತದ್ವಿಮೋಚನಮೇವ ಚ
ವರಪ್ರದಾನಂ ವೇದಾನಾಂ[4]ಯಾಥಾರ್ಥ್ಯಂ[4] ಬ್ರುವತಾಂ ತತಃ ||೪೦||

ಶ್ರೀಮನ್ನಂದೀಶ್ವರೋತ್ಪತ್ತಿಃ = ಒಪ್ಪುತಂವಿದ್ದ ನಂದಿಕೇಶ್ವರನ ಉತ್ಪತ್ತಿಯು ತದ್ಗಾಣಾಪತ್ಯವರ್ಣನಂ = ಆ [5]ನಂದಿಕೇ[5]ಶ್ವರಂಗೆ ಗಣೇಶ್ವರತ್ವವ ಕೊಟ್ಟ ವರ್ಣನೆಯ ಅಧ್ಯಾಯವು ಚಕ್ರಾದ್ಯುತ್ಪತ್ತಿ = ಚಕ್ರಮೊದಲಾಗಿದ್ದವಱ ಉತ್ಪತ್ತಿಯು ಸರ್ವಜಿಷ್ಣವೇ = ಸರ್ವರನು ಗೆದ್ದಂಥಾ ವಿಷ್ಣವೇ = ವಿಷ್ಣುವಿಂಗೋಸ್ಕರ ತದ್ದಾನಂ = ಆ ಚಕ್ರ ಮೊದಲಾ[6]ದಂಥಾ[6] ಅವನು ಕೊಟ್ಟಂಥಾ ಅಧ್ಯಾಯವು, ||೩೭||

ಶರಣಾರ್ಥಿನೇ = ನಮಸ್ಕರಿಸಿದಂಥಾ ವಿಷ್ಣವೇ = ವಿಷ್ಣುವಿಂಗೋಸ್ಕರ ಪುನಃ = ಮರಳಿ ಚಕ್ರಾದಿದಾನಂಚ = ಚಕ್ರಮೊದಲಾಗಿದ್ದದನು ಕೊಟ್ಟಂಥಾ ಅಧ್ಯಾಯವು ಯಾದವೇಂದ್ರಾಯ = ಯಾದವರಿಗೆ ಒಡೆಯನಹಂಥಾ ಕೃಷ್ಣಾಯ = ಕೃಷ್ಣಂಗೋಸ್ಕರ ಪುತ್ರಾದಿಪ್ರತಿಪಾದನಾ = ಪುತ್ರ ಮೊದಲಾದ ವರವ ಕೊಟ್ಟಂಥಾ ಅಧ್ಯಾಯವು, ||೩೮||

ಸತ್ಯಸಂಧಾಖ್ಯವಿಪ್ರಸ್ಯ = ಸತ್ಯಸಂಧನೆಂಬ ಹೆಸರನುಳ್ಳ ಬ್ರಾಹ್ಮಣಂಗೆ ವಿಮುಕ್ತಿ ಪ್ರತಿಪಾದನಂ = ಮುಕ್ತಿಯ ಕೊಟ್ಟಂಥಾ ಅಧ್ಯಾಯವು ಸಮನಂತರಂ = ಅನಂತರದಲ್ಲಿ ವಿಷ್ಣೋಃ = ವಿಷ್ಣುವಿನ ಸನತ್ಕುಮಾರಸ್ಯ = ಸನತ್ಕುಮಾರನ ಸಂವಾದಃ = ಸಂವಾದವೆ ನಹಂಥಾ ಅಧ್ಯಾಯವು, ||೩೯||

ತತಃ = ಅನಂತರದಲ್ಲಿ ವ್ಯಾಸಭುಜಸ್ತಂಭಃ = ವ್ಯಾಸನ ಭುಜ ಸ್ತಂಭವು ತದ್ವಿಮೋಚನಮೇವ ಚ = ಆ ಭುಜಸ್ತಂಭವ ಬಿಟ್ಟಂಥಾ ಅಧ್ಯಾಯವು ತತಃ = ತಱು

---

1 ನಾ (ಕ. ಖ. ಚ.) 2 ಪಾದನಾ (ಗ) 3 ಸ್ತದ (ಖ) 4 ಯಥಾರ್ಥ್ಯಂ (ಖ. ಚ.) ಯಥಾರ್ಥಂ (ಘ) 5 ನಂದೀಕೇ (ಕ) 6 ಗ್ಗಿದಂಥಾ (ಖ. ಚ.)

ಬ್ರಹ್ಮಗೀತಾ ತತಃ ಪ್ರೋಕ್ತಾ ಸೂತಗೀತಾ ತತಃ ಪರಮ್
ಶಿವಸ್ಮೃತಿ ಪ್ರಭಾವಶ್ಚ ನಾಮೋಚ್ಚಾರಣಶಂಸನಮ್ ॥೪೧॥

ತತಸ್ತು ಶಿವಲಿಂಗಸ್ಯ [1]ದರ್ಶನ ಸ್ಪರ್ಶನೇ ಫಲಮ್
ಶಿವಲಿಂಗಸ್ಯ ಪೂಜಾಯಾ ಮಾಹಾತ್ಮ್ಯಂ ತದನಂತರಮ್ ॥೪೨॥

ವೀರಮಾಹೇಶ್ವರಗ್ರಾಹ್ಯಧರ್ಮನಿರ್ಣಯ ಉತ್ತಮಃ
ಉಪಮನ್ಯುಮುನೀಂದ್ರಸ್ಯ ಚರಿತಂ ಕಥಿತಂ ತತಃ ॥೪೩॥

ಶ್ರೀಮತ್ಕರಾಬ್ಜಪೀಠಸ್ಯ ನಿರ್ಣಯಸ್ತದನಂತರಮ್
ಶಿವಷಣ್ಮುಖಸಂವಾದಃ ಷಟ್ಸ್ಥಲಾನಾಂ ಕ್ರಮಸ್ತತಃ ॥೪೪॥

ವಾಯಲ್ಲಿ ಯಾಥಾರ್ಥ್ಯಂ = ಯಥಾರ್ಥವನು ಬ್ರುವತಾಂ = ನುಡಿದಂಥಾ ವೇದಾನಾಂ ವೇದಂಗಳಿಗೆ ವರಪ್ರದಾನಂ = ವರವಕೊಟ್ಟಂಥಾ ಅಧ್ಯಾಯವು, ॥೪೦॥

ತತಃ = ಅನಂತರದಲ್ಲಿ ಬ್ರಹ್ಮಗೀತಾ = ಬ್ರಹ್ಮಗೀತೆ ಪ್ರೋಕ್ತಾ = ಹೇಳಲ್ಪಟ್ಟಿತ್ತು ತತಃಪರಂ = ಅದರಿಂದ ಮೇಲೆ ಸೂತಗೀತಾ = ಸೂತಗೀತೆ ಹೇಳಲುಪಟ್ಟಿತ್ತು. ಶಿವಸ್ಮೃತಿಪ್ರಭಾವಶ್ಚ = ಶಿವ[2]ಸ್ಮರಣೆಯ ಸಾಮರ್ಥ್ಯಾಧ್ಯಾಯವು ನಾಮೋಚ್ಚಾರಣ ಶಂಸನಂ = ಶಿವನಾಮೋಚ್ಚಾರಣೆಯ ಮಹಿಮೆಯ ಹೇಳುವಂಥಾ ಅಧ್ಯಾಯವು ॥೪೧॥

ತತಸ್ತು = ಅನಂತರದಲ್ಲಿ ಶಿವಲಿಂಗಸ್ಯ = ಶಿವಲಿಂಗದ ದರ್ಶನಸ್ಪರ್ಶನೇ = ದರ್ಶನ ಸ್ಪರ್ಶನದಲ್ಲಿ ಫಲಂ = ಫಲವ = ಹೇಳುವಂಥಾ ಅಧ್ಯಾಯವು ತದನಂತರಂ = ಆ ತರುವಾಯಲ್ಲಿ ಶಿವಲಿಂಗಸ್ಯ = ಶಿವಲಿಂಗದ ಪೂಜಾಯಾಃ = ಪೂಜೆಯ ಮಾಹಾತ್ಮ್ಯಂ = ಮಹಿಮೆಯ ಹೇಳುವಂಥಾ ಅಧ್ಯಾಯವು, ॥೪೨॥

ಉತ್ತಮಃ = ಉತ್ತಮವಹಂಥಾ ವೀರಮಾಹೇಶ್ವರಗ್ರಾಹ್ಯಧರ್ಮನಿರ್ಣಯಃ = ವೀರಮಾಹೇಶ್ವರ[3]ರು ಗ್ರಹಿಸಲು ಯೋಗ್ಯವಹಂಥಾ[3] ಧರ್ಮನಿರ್ಣಯವ ಹೇಳುವಂಥಾ ಅಧ್ಯಾಯವು ತತಃ = ಅನಂತರದಲ್ಲಿ ಉಪಮನ್ಯುಮುನೀಂದ್ರಸ್ಯ = ಉಪಮನ್ಯುಮುನೀಶ್ವರನ ಚರಿತಂ = ಚಾರಿತ್ರವು ಕಥಿತಂ = ಹೇಳಲುಪಟ್ಟಿತ್ತು

ತದನಂತರಂ = ಅದರ ತರುವಾಯಲ್ಲಿ ಶ್ರೀಮತ್ಕರಾಬ್ಜಪೀಠಸ್ಯ = ಒಪ್ಪುತ್ತಂ ವಿದ್ದ ಕರಕಮಲಪೀಠದ ನಿರ್ಣಯಃ = ನಿರ್ಣಯವ ಹೇಳುವಂಥಾ ಅಧ್ಯಾಯವು

---

[1] ದರ್ಶನಾತ್ ಸ್ಪರ್ಶನೇ (ಖ. ಚ) [2] ಸ್ಮೃತಿಯ (ಕ) [3] (ಕ) ದಲ್ಲಿ ಲುಪ್ತ.

ವಿಭೂತಿಕಲ್ಪತತ್ಸ್ನಾನೋದ್ಧೂಳನಾನಾಂ ಫಲಂ ತತಃ
ತ್ರಿಪುಂಡ್ರವಿಧಿಮಾಹಾತ್ಮ್ಯಂ ರುದ್ರಾಕ್ಷವಿಧಿತತ್ಫಲಮ್ ||೪೫||

ಪೂಜಾಗಾರಸುನಿರ್ಮಾಣತತ್ಸಮ್ಮಾರ್ಜನಶಂಸನಾ
ತತೋಽನುಲೇಪನೇ[1] ಚೈವ ವರ್ಣಕಸ್ಯ [2]ವಿಧೌ ತಥಾ ||೪೬||

ಪೂಜಾಗೃಹಾಲಂಕರಣೇ ಕ್ರಮಸ್ತತ್ಫಲಶಂಸನಮ್[3]
ಅರ್ಘ್ಯಾದಿದಾನಮಾಹಾತ್ಮ್ಯಂ ತದನಂತರಮೀರಿತಮ್ ||೪೭||

ತತೋ ನಾನಾವಿಧಸ್ನಾನಕ್ರಮಸ್ತತ್ಫಲಸೂಚನಾ

ತತಃ = ಅನಂತರದಲ್ಲಿ ಶಿವಷಣ್ಮುಖಸಂವಾದಃ = [4]ಶಿವನ ಷಣ್ಮುಖರ ಸಂವಾದವ[4] ಹೇಳುವಂಥಾ ಅಧ್ಯಾಯವು ಷಟ್ಸ್ಥಲಾನಾಂ = ಷಟ್ಸ್ಥಲಂಗಳ ಕ್ರಮಃ = ಕ್ರಮವ ಹೇಳುವಂಥಾ ಅಧ್ಯಾಯವು ||೪೪||

ತತಃ = ಅನಂತರದಲ್ಲಿ ವಿಭೂತಿಕಲ್ಪತತ್ಸ್ನಾನೋದ್ಧೂಳನಾನಾಂ = ವಿಭೂತಿಯ ಕಲ್ಪ ಆ ವಿಭೂತಿಯ ಸ್ನಾನ ಉದ್ಧೂಳನಂಗಳ ಫಲಂ = ಫಲವ ಹೇಳುವಂಥಾ ಅಧ್ಯಾಯವು ತ್ರಿಪುಂಡ್ರವಿಧಿಮಾಹಾತ್ಮ್ಯಂ = ತ್ರಿಪುಂಡ್ರದ ವಿಧಾನದ ಮಹಿಮೆಯ ಹೇಳುವಂಥಾ ಅಧ್ಯಾಯವು ರುದ್ರಾಕ್ಷವಿಧಿ ತತ್ಫಲಂ = ರುದ್ರಾಕ್ಷಿಯ ವಿಧಾನ ಅದರ ಫಲವ ಹೇಳುವಂಥಾ ಅಧ್ಯಾಯವು ||೪೫||

ಪೂಜಾಗಾರಸುನಿರ್ಮಾಣ ತತ್ಸಮ್ಮಾರ್ಜನಶಂಸನಾ = ದೇವಪೂಜಾ ಗೃಹವ ನಿರ್ಮಿಸುಹ ಅದರ ಸಮ್ಮಾರ್ಜನೆಯ ಪ್ರಕಾರವ ಹೇಳುವಂಥಾ ಅಧ್ಯಾಯವು ತತಃ = ಅನಂತರದಲ್ಲಿ ಅನುಲೇಪನೇ ಚೈವ = ಸಾರಿಸುವಲ್ಲಿಯೂ ಮತ್ತು ತಥಾ = ಹಾಂಗೆ ವರ್ಣಕಸ್ಯ = ಪಂಚವರ್ಣಿಗೆಯ ವಿಧೌ = ವಿಧಾನದಲ್ಲಿಯೂ, ||೪೬||

ಪೂಜಾಗೃಹಾಲಂಕರಣೇ = ದೇವಪೂಜಾ ಗೃಹವ ಅಲಂಕರಿಸುವಲ್ಲಿಯೂ ಕ್ರಮಃ ತತ್ಫಲಶಂಸನಂ = ಕ್ರಮವು ಅದರ ಫಲವ ಹೇಳುವಂಥಾ ಅಧ್ಯಾಯವು ತದನಂತರಂ = ಅದರ ತರುವಾಯಲ್ಲಿ ಅರ್ಘ್ಯಾದಿದಾನಮಾಹಾತ್ಮ್ಯಂ = ಅರ್ಘ್ಯ ಮೊದಲಾದ ದಾನದ ಮಹಿಮೆಯು ಈರಿತಂ = ಹೇಳಲುಪಟ್ಟಂಥಾ ಅಧ್ಯಾಯವು,

ತತಃ = ಅನಂತರದಲ್ಲಿ ನಾನಾವಿಧಸ್ನಾನಕ್ರಮಃ ತತ್ಫಲಸೂಚನಾ = ನಾನಾ ಪ್ರಕಾರವಹಂಥಾ ಸ್ನಾನದ ಕ್ರಮವು ಅದರ ಫಲವ ಹೇಳುವಂಥಾ ಅಧ್ಯಾಯವು,

---

1 ನ (ಕ) 2 ವಿಧಿಸ್ತಥಾ (ಖ.ಚ.) 3 ನಾ (ಖ) 4 ಶಿವನ ಷಣ್ಮುಖನ ಸಂಭಾಷಣೆಯ (ಖ.ಚ)

ವಸ್ತ್ರೋಪವೀತಾಭರಣಗಂಧಾಕ್ಷತತಿಲಾರ್ಪಣೇ ।
ಕ್ರಮಸ್ತತ್ಫಲಶಂಸಾ ಚ ತತಸ್ತು ಪರಿಕೀರ್ತಿತಾ ॥೪೮॥

ನಾನಾವಿಧಾನಾಂ ಪುಷ್ಪಾಣಾಂ ಲಕ್ಷಣಾರ್ಪಣತತ್ಫಲಮ್ ।
ಪತ್ರಾಣಾಂ ಶಿವಯೋಗ್ಯಾನಾಂ ಲಕ್ಷಣಾಶಂಸನಂ ತತಃ ॥೪೯॥

ಧೂಪಲಕ್ಷಣಮಾಹಾತ್ಮ್ಯಂ ದೀಪಲಕ್ಷಣತತ್ಸ್ತುತಿಃ ।
ಘಂಟಾಪಂಚಮಹಾಶಬ್ದಲಕ್ಷಣಾರ್ಪಣತತ್ಫಲಮ್ ॥೫೦॥

ನೈವೇದ್ಯಮುಖಸದ್ವಾಸತಾಂಬೂಲಾನಾಮನುಕ್ರಮಾತ್ ।
ಲಕ್ಷಣಾರ್ಪಣಮಾಹಾತ್ಮ್ಯಂ ತತಃಪರಮುದೀರಿತಮ್ ॥೫೧॥

ನೀರಾಜನಾದರ್ಶಫಲಚ್ಛತ್ರಾಣಾಂ ತದನಂತರಮ್ ।
ಚಾಮರವ್ಯಜನಾನಾಂ ಚ ಲಕ್ಷಣಾರ್ಪಣತತ್ಸ್ತುತಿಃ ॥೫೨॥

ತತಸ್ತು = ಅನಂತರದಲ್ಲಿ ವಸ್ತ್ರೋಪವೀತಾಭರಣಗಂಧಾಕ್ಷತತಿಲಾರ್ಪಣೇ = ವಸ್ತ್ರ ಯಜ್ಞೋಪವೀತ ಆಭರಣ ಗಂಧ ಅಕ್ಷತೆ ತಿಲಂಗಳ ಸಮರ್ಪಿಸುವಲ್ಲಿಯು ಕ್ರಮಃ ತತ್ಫಲಶಂಸಾ ಚ = ಕ್ರಮವು ಅವರ ಫಲವ ಹೇಳುವಂಥಾ ಅಧ್ಯಾಯವೂ ಪರಿಕೀರ್ತಿತಾ = ಹೇಳಲುಪಟ್ಟಿತ್ತು. ॥೪೮॥

ತತಃ = ಅನಂತರದಲ್ಲಿ ನಾನಾವಿಧಾನಾಂ = ನಾನಾಪ್ರಕಾರವಹಂಥಾ ಪುಷ್ಪಾಣಾಂ = ಪುಷ್ಪಂಗಳ ಲಕ್ಷಣಾರ್ಪಣ ತತ್ಫಲಂ = ಲಕ್ಷಣವು ಸಮರ್ಪಣವು ಅವಱ ಫಲವ ಹೇಳುವಂಥಾ ಅಧ್ಯಾಯವು ಶಿವಯೋಗ್ಯಾನಾಂ = ಶಿವಂಗೆ ಯೋಗ್ಯವಹಂಥಾ ಪತ್ರಾಣಾಂ = ಪತ್ರೆಗಳ ಲಕ್ಷಣಾಶಂಸನಂ = ಲಕ್ಷಣವ ಹೇಳುವಂಥಾ ಅಧ್ಯಾಯವು, ॥೪೯॥

ಧೂಪಲಕ್ಷಣಮಾಹಾತ್ಮ್ಯಂ = ಧೂಪಲಕ್ಷಣಮಹಿಮೆಯ ಹೇಳುವ ಅಧ್ಯಾಯವು ದೀಪಲಕ್ಷಣತತ್ಸ್ತುತಿಃ = ದೀಪಲಕ್ಷಣವು ಅದಱ ಮಹಿಮೆಯ ಹೇಳುವ ಅಧ್ಯಾಯವು ಘಂಟಾಪಂಚಮಹಾಶಬ್ದಲಕ್ಷಣಾರ್ಪಣತತ್ಫಲಂ = ಘಂಟೆ ಪಂಚಮಹಾಶಬ್ದದ ಲಕ್ಷಣ ಸಮರ್ಪಣ ಅವಱ ಫಲವ ಹೇಳುವ ಅಧ್ಯಾಯವು, ॥೫೦॥

ತತಃ ಪರಂ = ಅಷ್ಟರ ಮೇಲೆ ಅನುಕ್ರಮಾತ್ = ಅನುಕ್ರಮದಿಂದವೆ ನೈವೇದ್ಯಮುಖಸದ್ವಾಸತಾಂಬೂಲಾನಾಂ = ನೈವೇದ್ಯ ಮುಖವಾಸನೆ ತಾಂಬೂಲಂಗಳ ಲಕ್ಷಣಾರ್ಪಣಮಾಹಾತ್ಮ್ಯಂ = ಲಕ್ಷಣ ಸಮರ್ಪಣಂಗಳ ಮಾಹಾತ್ಮ್ಯೆಯ ಹೇಳುವ ಅಧ್ಯಾಯವು ಉದೀರಿತಂ = ಹೇಳಲುಪಟ್ಟಿತ್ತು.

ತದನಂತರಂ = ಅದಱ ತಱುವಾಯಲ್ಲಿ ನೀರಾಜನಾದರ್ಶಫಲಛತ್ರಾಣಾಂ =

[1]ಗೀತೇ ವಾದ್ಯೇ[1] ತಥಾ [2]ನೃತ್ಯೇ ಪುರಾಣ[2]ಪಠನೇ ಸ್ತುತೌ
ನಮಸ್ಕಾರೇ [3]ತಥೈತೇಷು[3] ಕ್ರಮಸ್ತನ್ಮಹಿಮಸ್ತುತಿಃ ||೫೩||
ಸಾವಿತ್ರ್ಯರುಂಧತೀವಾದೋ ಲಿಂಗಾರ್ಚನವಿಧಿಸ್ತತಃ
ಪಾದೋದಕಾದಿಮಾಹಾತ್ಮ್ಯಂ ಪ್ರಸಾದಸ್ಯ ಪ್ರಶಂಸ[4]ನಾ[4] ||೫೪||
ಶ್ವೇತೋಪಾಖ್ಯಾನಮನಘಂ ಮಾರ್ಕಂಡೇಯಚರಿತ್ರಕಮ್
ಶಿವರಾತ್ರಿವ್ರತೋತ್ಪತ್ತಿಸ್ತದ್ವಿಧಾನಂ ಸವಿಸ್ತರಮ್ ||೫೫||
ತತಸ್ತು ಸುಕುಮಾರಸ್ಯ ಗಣತ್ವಪ್ರಾಪ್ತಿಸೂಚನಾ
ಯಮಶಂಕರಸಂವಾದಃ ಶಿವಭಕ್ತಪ್ರಶಂಸ[5]ನಾ[5] ||೫೬||

ಆರತಿ ಕನ್ನಡಿ ಹಣ್ಣುಗಳು ಸತ್ತಿಗೆಗಳ, ಚಾಮರವ್ಯಜನಾನಾಂ ಚ = ಚವರಬೀಸಣಿಗೆಗಳ ಲಕ್ಷಣಾರ್ಪಣತತ್ಸ್ತುತಿಃ = ಲಕ್ಷಣ ಸಮರ್ಪಣ ಅವರ ಫಲವ ಹೇಳುವ ಅಧ್ಯಾಯವು, ||೫೨||

ಗೀತೇ = ಗೀತದಲ್ಲಿಯುಂ ವಾದ್ಯೇ = ವಾದ್ಯದಲ್ಲಿ ತಥಾ = ಹಾಂಗೆ ನೃತ್ಯೇ = ನೃತ್ಯದಲ್ಲಿ ಪುರಾಣಪಠನೇ = ಪುರಾಣವನೋದುವಲ್ಲಿ ಸ್ತುತೌ = ಸ್ತೋತ್ರದಲ್ಲಿ ತಥಾ = ಹಾಂಗೆ ನಮಸ್ಕಾರೇ = ನಮಸ್ಕಾರದಲ್ಲಿ ಏತೇಷು = ಹೇಳಿದಂಥಾ ಇವಱಲ್ಲಿ ಕ್ರಮಸ್ತನ್ಮಹಿಮಸ್ತುತಿಃ = ಕ್ರಮವು ಅವಱ ಮಹಿಮೆಯ ಹೇಳುವ ಅಧ್ಯಾಯವು.

ತತಃ = ಅನಂತರದಲ್ಲಿ ಸಾವಿತ್ರ್ಯರುಂಧತೀವಾದಃ = ಸಾವಿತ್ರೀದೇವಿ ಅರುಂಧತೀದೇವಿ ಇಬ್ಬರು ಸಂಭಾಷಣೆಯ ಮಾಡಿದಂಥಾ ಅಧ್ಯಾಯವು ಲಿಂಗಾರ್ಚನವಿಧಿಃ = ಲಿಂಗಾರ್ಚನೆಯ ವಿಧಾನದ ಅಧ್ಯಾಯವು ಪಾದೋದಕಾದಿಮಾಹಾತ್ಮ್ಯಂ = ಪಾದತೀರ್ಥ ಮೊದಲಾಗಿದ್ದಂಥಾ ಅವಱ ಮಹಿಮೆಯ ಅಧ್ಯಾಯವು ಪ್ರಸಾದಸ್ಯ = ಪ್ರಸಾದದ ಪ್ರಶಂಸನಾ = ಮಹತ್ವದ ಅಧ್ಯಾಯವು.

ಅನಘಂ = ನಿರ್ದೋಷವಹಂಥಾ ಶ್ವೇತೋಪಾಖ್ಯಾನಂ = ಶ್ವೇತೋಪಾಖ್ಯಾನವು ಮಾರ್ಕಂಡೇಯಚರಿತ್ರಕಂ = ಮಾರ್ಕಂಡೇಯ ಚರಿತ್ರವು ಶಿವರಾತ್ರಿವ್ರತೋತ್ಪತ್ತಿಃ = ಶಿವರಾತ್ರಿ ವ್ರತದ ಉತ್ಪತ್ತ್ಯವು ಸವಿಸ್ತಾರಂ = ವಿಸ್ತಾರವಹಂಥಾ ತದ್ವಿಧಾನಂ = ಆ ಶಿವರಾತ್ರಿಯ ವ್ರತದ ವಿಧಾನವ ಹೇಳುವ ಅಧ್ಯಾಯವು.

ತತಸ್ತು = ಅನಂತರದಲ್ಲಿ ಸುಕುಮಾರಸ್ಯ = ಸುಕುಮಾರಂಗೆ ಗಣತ್ವಪ್ರಾಪ್ತಿ

---

1 ಗೀತವಾದ್ಯೇ(ಘ). 2 ನೃತ್ಯಪುರಾಣ(ಘ) 3 ತದಂತೇಷು (ಘ) 4 ನಂ(ಘ) 5 ನಂ (ಘ)

ದಧೀ[1]ಚ[1]ಕ್ಷುಪಸಂವಾದೋ ವಿಷ್ಣುಶಾಪನಿರೂಪಣಮ್
ಶಿವಭಕ್ತಸ್ಯ ಪೂಜಾಯಾಃ ಫಲವೈಶಿಷ್ಟ್ಯಸೂಚನಾಃ ||೫೭||

ಈಶ್ವರಸ್ಕಂದಸಂವಾದಃ ಶಿವಭಕ್ತಾರ್ಚನಾಂ [2]ಪ್ರತಿ
ಅಷ್ಟಸಪ್ತತಿ ಸಂಖ್ಯಾಕಾ ಅಧ್ಯಾಯಾಶ್ಚಾತ್ರ ದರ್ಶಿತಾಃ ||೫೮||

ಏವಂತ್ವನುಕ್ರಮಾಧ್ಯಾಯೋ ಯಥಾವತ್ಸಂಪ್ರಕಾಶಿತಃ
ಯಃ ಪಠೇದಿಮಮಧ್ಯಾಯಮನುಕ್ರಮಣಿಕಾಹ್ವಯಮ್
ಸ ಸಮ್ಯಕ್ ಜ್ಞಾನವಾನ್ ಭೂತ್ವಾ ಶಿವಸಾಯುಜ್ಯಮಾಪ್ನುಯಾತ್ ||

ಸೂಚನಾ = ಗಣತ್ವವಾದುದ ಹೇಳುವ ಅಧ್ಯಾಯವು ಯಮಶಂಕರವಾದಃ = ಯಮನ ಈಶ್ವರನ ಸಂಭಾಷಣೆಯ ಅಧ್ಯಾಯವು ಶಿವಭಕ್ತಪ್ರಶಂಸನಾ = ಶಿವಭಕ್ತರ ಮಹಿಮೆಯ ಕೊಂಡಾಡುವ ಅಧ್ಯಾಯವು.

ದಧೀಚಕ್ಷುಪಸಂವಾದಃ = ದಧೀಚ ಋಷಿಯ ಕ್ಷುಪನ ಸಂವಾದವ ಹೇಳುವ ಅಧ್ಯಾಯವು ವಿಷ್ಣುಶಾಪನಿರೂಪಣಂ = ವಿಷ್ಣುವಿಂಗೆ ಶಾಪವ ಕೊಟ್ಟಂಥ ಅಧ್ಯಾಯವು ಶಿವಭಕ್ತಸ್ಯ = ಶಿವಭಕ್ತನ ಪೂಜಾಯಾಃ = ಪೂಜೆಯ ಫಲವೈಶಿಷ್ಟ್ಯ ಸೂಚನಾ = ಫಲವಿಶೇಷವ ಹೇಳುವ ಅಧ್ಯಾಯವು.

ಶಿವಭಕ್ತಾರ್ಚನಾಂ = ಶಿವಭಕ್ತನ ಅರ್ಚನೆಯನು ಪ್ರತಿ = ಕುರಿತು ಈಶ್ವರಸ್ಕಂದಸಂವಾದಃ = ಈಶ್ವರನ ಸ್ಕಂದನ ಸಂಭಾಷಣೆಯ ಅಧ್ಯಾಯವು ಅತ್ರ = ಈ ವೀರಮಾಹೇಶ್ವರಾಚಾರಸಂಗ್ರಹ ಶಾಸ್ತ್ರದಲ್ಲಿ ಅಷ್ಟಸಪ್ತತಿಸಂಖ್ಯಾಕಾಃ = ಎಪ್ಪತ್ತೆಂಟು ಸಂಖ್ಯೆಯನುಳ್ಳಂಥಾ ಅಧ್ಯಾಯಾಶ್ಚ = ಅಧ್ಯಾಯಂಗಳು ದರ್ಶಿತಾಃ = ತೋರಿಸಲು ಪಟ್ಟವು.

ಏವಂ = ಈ ಪ್ರಕಾರದಲ್ಲಿ ಅನುಕ್ರಮಾಧ್ಯಾಯಃ = ಅನುಕ್ರಮಣಿಕಾಧ್ಯಾಯವು ಯಥಾವತ್ = ಯಥಾವತ್ತಾಗಿ ತು = ವಿಶೇಷದಿಂದ ಸಂಪ್ರಕಾಶಿತಃ = ಲೇಸಾಗಿ ಹೇಳಲು ಪಟ್ಟಿತ್ತು. ಯಃ = ಆವನಾನೊಬ್ಬಾತನು ಇಮಂ = ಈ ಅನುಕ್ರಮಣಿಕಾಹ್ವಯಂ = ಅನುಕ್ರಮಣಿಕೆಯೆಂಬ ಹೆಸರನುಳ್ಳಂಥಾ ಅಧ್ಯಾಯಂ = ಅಧ್ಯಾಯವನು ಪಠೇತ್ = ಪಠಿಸುವನು ಸಃ = ಆತನು ಸಮ್ಯಕ್‌ಜ್ಞಾನವಾನ್ = ಸಮ್ಯಕ್‌ಜ್ಞಾನವನುಳ್ಳಾತನು ಭೂತ್ವಾ = ಆಗಿ ಶಿವಸಾಯುಜ್ಯಂ = ಶಿವಸಾಯುಜ್ಯವನು ಆಪ್ನುಯಾತ್ = ಎಯ್ದುವನು.

---

[1] ಚಿ(ಘ) [2] ನಂ (ಘ)

ಇತಿ ಶ್ರೀ ನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ [1]ವೀರಶೈವಾಗಮ-
ಸುಧಾರ್ಣವಪೂರ್ಣಚಂದ್ರಸ್ಯ ಗೊರಗೋಡಪುರವರಾ-
ಧೀಶ್ವರಮಲ್ಲಿಕಾರ್ಜುನಾಚಾರ್ಯಸ್ಯಾನುಜ್ಞಯಾ
ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾ-
ವಿವರಣೇ ' ಅನುಕ್ರಮಣಸೂಚನಾನಾಮ '
ಪ್ರಥಮೋಽಧ್ಯಾಯಃ *

ಇತಿ ಶ್ರೀ ನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮಸುಧಾರ್ಣವ-
ಪೂರ್ಣಚಂದ್ರಸ್ಯ ಗೋರಗೋಡಪುರವರಾಧೀಶ್ವರಮಲ್ಲಿಕಾರ್ಜುನಾ
ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾ
ವಿವರಣೇ 'ಅನುಕ್ರಮಣಸೂಚನಾನಾಮ' ಪ್ರಥಮೋಽಧ್ಯಾಯಃ
ಅಧ್ಯಾಯ ೧ಕ್ಕೆ ೫೯ ಶ್ರೀ

---

1 ಶಿವಾಧಿಕ್ಯಕಥನೇ (ಘ).

*ಇತಿ ಶ್ರೀಮನ್ನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ಶಿವಾಧಿಕ್ಯಕಥನೇ ಅನುಕ್ರಮಣಿಕಾಸೂಚನಾ ನಾಮ ಪ್ರಥಮೋಽಧ್ಯಾಯಃ (ಘ)

ದ್ವಿತೀಯೋಽಧ್ಯಾಯಃ
(ಧರ್ಮಾಧರ್ಮಭೇದಃ)

ಶಿವಧರ್ಮೋತ್ತರೇ

ಜ್ಞಾನಶಕ್ತಿಧರಂ ಶಾಂತಂ ಕುಮಾರಂ ಶಂಕರಾತ್ಮಜಮ್
ದೇವಾರಿಸೂದನಂ ಸ್ಕಂದಮಗಸ್ತ್ಯಃ ಪರಿಪೃಚ್ಛತಿ ||೧||

ಅಗಸ್ತ್ಯ ಉವಾಚ

ಧರ್ಮಾಧರ್ಮಪ್ರಭೇದಾಶ್ಚ ಕಿಯಂತಃ ಪರಿಕೀರ್ತಿತಾಃ
ತತ್ಸಾಧನಾನಿ ಕತಿ ವಾ ಗತಯಶ್ಚ ತದಾತ್ಮಿಕಾಃ ||೨||

ಸಂಸಾರಸಾಗರಾದ್ಘೋರಾದ್ಧರ್ಮಾಧರ್ಮೋರ್ಮಿಸಂಕುಲಾತ್
ಗರ್ಭಾದಿದುಃಖಫೇನಾಢ್ಯಾನ್ಮುಚ್ಯಂತೇ ದೇಹಿನಃ ಕಥಮ್ ||೩||

ಶಿವಧರ್ಮೋತ್ತರೇ = ಶಿವಧರ್ಮೋತ್ತರದಲ್ಲಿ

ಶಂಕರಾತ್ಮಜಂ = ಪರಮೇಶ್ವರನ ಪುತ್ರನಹಂಥಾ ಕುಮಾರಂ = ಚಿಕ್ಕವಯಸ್ಸನುಳ್ಳಂಥಾ ಜ್ಞಾನಶಕ್ತಿಧರಂ = ಜ್ಞಾನಶಕ್ತಿಯ ಧರಿಸಿದಂಥಾ ಶಾಂತಂ = ಶಾಂತನಹಂಥಾ ದೇವಾರಿಸೂದನಂ = ದೇವರ್ಕಳ ಶತ್ರುಗಳಹ ರಾಕ್ಷಸರ ಮರ್ದಿಸಿದಂಥಾ ಸ್ಕಂದಂ = ಸ್ಕಂದನನು ಅಗಸ್ತ್ಯಃ = ಅಗಸ್ತ್ಯ ಋಷೀಶ್ವರನು ಪರಿಪೃಚ್ಛತಿ = ಬೆಸಗೊಳುತ್ತಂವಿದ್ದಾನು. ಪ್ರಚ್ಛ ಜ್ಞೀಪ್ಸಾಯಾಂ ಎಂಬ ಧಾತುವಿಂಗೆ ಕರ್ತರಿ ಲಟ್ ಪರಸ್ಮೈಪದವು. ||೧||

ಅಗಸ್ತ್ಯಃ = ಅಗಸ್ತ್ಯಋಷಿ ಉವಾಚ = ನುಡಿದನು.

ಧರ್ಮಾಧರ್ಮಪ್ರಭೇದಾಶ್ಚ = ಧರ್ಮಾಧರ್ಮಭೇದಂಗಳು ಕಿಯಂತಃ = ಎಷ್ಟು ಪ್ರಕಾರಂಗಳಾಗಿ ಪರಿಕೀರ್ತಿತಾಃ = ಹೇಳಲುಪಟ್ಟವು. ತತ್ಸಾಧನಾನಿ = ಆ ಪುಣ್ಯಪಾಪಂಗಳಿಗೆ ಸಾಧನಂಗಳು ಕತಿ ವಾ = ಎಷ್ಟು ಪ್ರಕಾರಂಗಳು ತದಾತ್ಮಿಕಾಃ = ಅವರ ಸ್ವರೂಪವಹಂಥಾ ಗತಯಶ್ಚ = ಗತಿಗಳು ಎಷ್ಟು ಪ್ರಕಾರಂಗಳು. ||೨||

ಧರ್ಮಾಧರ್ಮೋರ್ಮಿ ಸಂಕುಲಾತ್ = ಪುಣ್ಯಪಾಪಂಗಳೆಂಬ ತೆರೆಗಳ ಸಮೂಹವನುಳ್ಳಂಥಾ ಗರ್ಭಾದಿದುಃಖಫೇನಾಢ್ಯಾತ್ = ಗರ್ಭವೊದಲಾಗಿಹ ದುಃಖಂಗಳೆಂಬ

ಇತಿ ಸಂಚೋದಿತಃ ಸ್ಕಂದಃ ಸರ್ವಪ್ರಶ್ನಾರ್ಥಸಾಧಕಃ
ಪ್ರತ್ಯುವಾಚ ಮಹಾಸೇನೋ ನಮಸ್ಕೃತ್ವಾ ಮಹೇಶ್ವರಮ್ ॥೪॥
ಸ್ವರ್ಗಾಪವರ್ಗಫಲದಂ ನರಕಾರ್ಣವತಾರಣಮ್

ಸ್ಕಂದ ಉವಾಚ

ಪುರಾಣಂ ಭಾರತಂ ವೇದಾಃ ಶಾಸ್ತ್ರಾಣಿ ಸುಬಹೂನಿ ಚ
ಆಯುಷಃ[1] ಕ್ಷಪಣಾಯೈವ ಧರ್ಮೋಽಲ್ಪಗ್ರಂಥಸಂಸ್ಥಿತಃ ॥೫॥

ಪುತ್ರದಾರಾದಿಸಂಸಾರಃ ಪುಂಸಾಂ ಸಂಮೂಢಚೇತಸಾಮ್
ವಿದುಷಾಂ ಶಾಸ್ತ್ರಸಂಸಾರಃ ಸ ಯೋಗಾಭ್ಯಾಸವಿಘ್ನಕೃತ್ ॥೬॥

ನೊರೆಗಳ ಬಹಳವನುಳ್ಳಂಥಾ ಘೋರಾತ್ = ಭಯಂಕರವಹಂಥಾ ಸಂಸಾರ ಸಾಗರಾತ್ = ಸಂಸಾರವೆಂಬ ಸಮುದ್ರದ ದೆಸೆಯಿಂದ ದೇಹಿನಃ = ಪ್ರಾಣಿಗಳು ಕಥಂ = ಹೇಂಗೆ ಮುಚ್ಯಂತೇ = ಬಿಡಲುಪಡುತ್ತಂವಿಹರು. ॥೩॥

ಇತಿ = [2]ಈ ಪ್ರಕಾರದಲ್ಲಿ[2] ಸಂಚೋದಿತಃ = ಬಿನ್ನೈಸಿಕೊಳಲುಪಟ್ಟಂಥಾ ಸರ್ವಪ್ರಶ್ನಾರ್ಥಸಾಧಕಃ = [3]ಸಮಸ್ತ[3] ಪ್ರಶ್ನೆಗಳ ಅರ್ಥಂಗಳ ಸಾಧಿಸುತ್ತಂವಿದ್ದಂಥಾ ಮಹಾಸೇನಃ = ಬಹಳವಹ ಸೇನೆಯನುಳ್ಳಂಥಾ ಸ್ಕಂದಃ = ಸ್ಕಂದನು ಸ್ವರ್ಗಾಪವರ್ಗ ಫಲದಂ = ಸ್ವರ್ಗದ ಮೋಕ್ಷಂಗಳ ಫಲವ ಕೊಡುತ್ತಂವಿದ್ದಂಥಾ ನರಕಾರ್ಣವತಾರಣಂ = ನರಕವೆಂಬ ಸಮುದ್ರವ ದಾಂಟಿಸುತ್ತಂವಿದ್ದಂಥಾ ಮಹೇಶ್ವರಂ = ಪರಮೇಶ್ವರನನು ನಮಸ್ಕೃ[4]ತ್ವಾ[4] = ನಮಸ್ಕರಿಸಿ ಪ್ರತ್ಯುವಾಚ = ಮರಳಿ ನುಡಿದನು. ॥೪॥

ಸ್ಕಂದ ಉವಾಚ = ಸ್ಕಂದನ ವಾಕ್ಯವು.

ಪುರಾಣಂ = ಪುರಾಣವು ಭಾರತಂ = ಭಾರತವು ವೇದಾಃ = ವೇದಂಗಳು ಸುಬಹೂನಿ = ಅತಿ ಬಹಳವಹಂಥಾ ಶಾಸ್ತ್ರಾಣಿ ಚ = ಶಾಸ್ತ್ರಂಗಳು ಆಯುಷಃ = ಆಯುಷ್ಯದ ಕ್ಷಪಣಾಯೈವ = ಕ್ಷಯಕ್ಕೋಸ್ಕರವೇ. ಧರ್ಮಃ = ಧರ್ಮವು ಅಲ್ಪಗ್ರಂಥ ಸಂಸ್ಥಿತಃ = ಅಲ್ಪಗ್ರಂಥದಲ್ಲಿ ಇರಲುಪಟ್ಟಿತ್ತು. ॥೫॥

ಸಂಮೂಢಚೇತಸಾಂ = ಮೂಢಚಿತ್ತವನುಳ್ಳಂಥಾ ಪುಂಸಾಂ = ಪುರುಷರುಗಳಿಗೆ ಪುತ್ರದಾರಾದಿಸಂಸಾರಃ = ಪುತ್ರ ಸ್ತ್ರೀ ಮೊದಲಾದ ಸಂಸಾರವು. ವಿದುಷಾಂ = ವಿದ್ವಾಂಸ್ನಗಳಿಗೆ ಶಾಸ್ತ್ರಸಂಸಾರಃ = ಶಾಸ್ತ್ರವೇ ಸಂಸಾರವು. ಸಃ = [5]ಆ ಸಂಸಾರವು[5] ಯೋಗಾಭ್ಯಾಸವಿಘ್ನಕೃತ್ = ಯೋಗಾಭ್ಯಾಸಕ್ಕೆ ವಿಘ್ನವ ಮಾಡುವಂಥಾದು. ॥೬॥

---

[1] ಷ್ಯ (ಕ). [2] ಹೀಂಗೆ (ಕ). [3] ಸರ್ವ (ಕ). [4] ತ್ಯ (ಕ). [5] ಅದು (ಕ).

ಇದಂ ಜ್ಞೇಯಮಿದಂ ಜ್ಞೇಯಂ ಯಸ್ಸರ್ವಂ ಜ್ಞಾತುಮಿಚ್ಛತಿ
ಅಪಿ ವರ್ಷಸಹಸ್ರಾಯುಃ ಶಾಸ್ತ್ರಾಂತಂ ನಾಧಿಗಚ್ಛತಿ ||೭||

ವಿಜ್ಞಾಯಾಕ್ಷರತನ್ಮಾತ್ರಂ ಜೀವಿತಂ ಚಾಪಿ ಚಂಚಲಮ್
ವಿಹಾಯ ಶಾಸ್ತ್ರಜಾಲಾನಿ ಪಾರಲೌಕಿಕಮಾಚರೇತ್ ||೮||

ಪಂಡಿತೇನಾಪಿ ಕಿಂ ತೇನ ಸಮರ್ಥೇನ ಚ ದೇಹಿನಾ
ಯಃ ಪುಣ್ಯಭಾರಮುದ್ವೋಢುಮಶಕ್ತಃ ಪಾರಲೌಕಿಕಮ್ ||೯||

ಪಂಡಿತೋಽಪಿ ಸ ಮೂರ್ಖಸ್ಸ್ಯಾಚ್ಛಕ್ತಿಯುಕ್ತೋಽಪ್ಯಶಕ್ತಿಮಾನ್
ಯಸ್ಸಂಸಾರಾತ್ಸ್ವಮಾತ್ಮಾನಮುತ್ತಾರಯಿತುಮಕ್ಷಮಃ ||೧೦||

ಯಃ = ಅವನೊಬ್ಬನು ಇದಂ = ಇದು ಜ್ಞೇಯಂ = ಅರಿಯಲು ಯೋಗ್ಯವು ಇದಂ = ಇದು ಜ್ಞೇಯಂ = ಅರಿಯಲು ಯೋಗ್ಯವೆಂದು ಸರ್ವಂ = ಸಮಸ್ತವನು ಜ್ಞಾತುಂ = ಅರಿಯಲೋಸ್ಕರ ಇಚ್ಛತಿ = ಇಚ್ಛೈಸುತ್ತಿರುವಿಹನು ವರ್ಷಸಹಸ್ರಾಯುಃ ಅಪಿ = ವರ್ಷಂಗಳ ಸಹಸ್ರಾಯುಷ್ಯವಾಯಿತ್ತಾದರೂ ಶಾಸ್ತ್ರಾಂತಂ = ಶಾಸ್ತ್ರಗಳ ಕಡೆಯನು ನಾಧಿಗಚ್ಛತಿ = ಎಯ್ದುತ್ತಂ ವಿರನು. ||೭||

ಜೀವಿತಂ ಚ = ಜೀವಿತವು ಚಂಚಲಮಪಿ = ಚಂಚಲವಹಂಥಾ ಅದು ಅಕ್ಷರ ತನ್ಮಾತ್ರಂ = ಅಕ್ಷರ ಮಾತ್ರವನು ವಿಜ್ಞಾಯ = ಅರಿದು ಶಾಸ್ತ್ರಜಾಲಾನಿ = ಶಾಸ್ತ್ರ ಸಮೂಹಂಗಳನು ವಿಹಾಯ = ಬಿಟ್ಟು ಪಾರಲೌಕಿಕಂ = ಪರಲೋಕಸಂಬಂಧವಹಂಥಾ ಧರ್ಮವನು ಆಚರೇತ್ = ಆಚರಿಸೂದು. ||೮||

ಯಃ = ಅವನಾನೊಬ್ಬನು ಪಾರಲೌಕಿಕಂ = ಪರಲೋಕಸಂಬಂಧವಹಂಥಾ ಪುಣ್ಯಭಾರಂ = ಪುಣ್ಯದ ಭಾರವನು ಉದ್ವೋಢುಂ = ಧರಿಸಲು ಅಶಕ್ತಃ = ಶಕ್ತನಲ್ಲ. ಸಮರ್ಥೇನ = ಸಮರ್ಥನಹಂಥಾ ಪಂಡಿತೇನ = ವಿದ್ವಾಂಸನ್ನುವಹಂಥಾ ತೇನ ದೇಹಿನಾಪಿ ಚ = ಆ ಪ್ರಾಣಿಯಿಂದಲು ಕಿಂ = ಏನು ಪ್ರಯೋಜನವು ? ||೯||

ಯಃ = ಅವನಾನೊಬ್ಬನು ಸಂಸಾರಾತ್ = ಸಂಸಾರದ ದೆಸೆಯಿಂದ ಸ್ವಂ = ತನ ಸಂಬಂಧವಹಂಥಾ ಆತ್ಮಾನಂ = ಸ್ವರೂಪವನು ಉತ್ತಾರಯಿತುಂ = ದಾಂಟಿಸಲು ಅಕ್ಷಮಃ = ಸಮರ್ಥನಲ್ಲ ಸಃ = ಆತನು ಪಂಡಿತೋಽಪಿ = ವಿದ್ವಾಂಸನ್ನುವಾಯಿತ್ತಾದರೂ ಮೂರ್ಖಃ = ಮೂರ್ಖನು ಸ್ಯಾತ್ = ಅಹನು ಶಕ್ತಿಯುಕ್ತೋಽಪಿ = ಸಾಮರ್ಥ್ಯ ದಿಂದ ಕೂಡಲ್ಪಟ್ಟಾತನಾಯಿತ್ತಾದರೂ ಅಶಕ್ತಿಮಾನ್ = ಸಾಮರ್ಥ್ಯವಿಲ್ಲದಾತನು.

ತಸ್ಮಾತ್ಸ ಪಂಡಿತಶ್ಶಕ್ತಸ್ಸ ತಪಸ್ವೀ ಜಿತೇಂದ್ರಿಯಃ
ಯಶ್ಶಿವಜ್ಞಾನಸದ್ಭಾವಮಾಲೋಕಯಿತುಮುದ್ಯತಃ ||೧೧||

ಅಪಿ ಶ್ಲೋಕಂ ತದರ್ಧಂ ವಾ ಶಿವಜ್ಞಾನಸ್ಯ ಯಃ ಪಠೇತ್
ವಾಚಯೇಚ್ಚಿಂತಯೇದ್ವಾಪಿ ಲಿಖೇದ್ವಾ ಲೇಖಯೇತ[1] ವಾ ||೧೨||

ಶೃಣುಯಾದೇಕಚಿತ್ತಶ್ಚ ತದರ್ಥಂ ಚ ವಿಚಾರಯೇತ್
ಅನ್ಯೇಭ್ಯಃ ಶ್ರಾವಯೇದ್ಯಸ್ತು ತಸ್ಯ ಪುಣ್ಯಫಲಂ ಶೃಣು ||೧೩||

ತ್ರಿಃ ಪ್ರದಾಯ ಮಹೀಂ ಪೂರ್ಣಾಂ ಸರ್ವರತ್ನೈಸ್ತು ಯತ್ಫಲಮ್।
ಶ್ಲೋಕಾರ್ಧಮೀಶ್ವರಜ್ಞಾನಂ ಪಠನ್ ತತ್ಫಲಮಾಪ್ನುಯಾತ್ ||೧೪||

ಯಃ = ಆವನಾನೊಬ್ಬಾತನು ಶಿವಜ್ಞಾನಸದ್ಭಾವಂ = ಶಿವಜ್ಞಾನದ ಸದ್ಭಾವವನು ಆಲೋಕಯಿತುಂ = ನೋಡಲು ಉದ್ಯತಃ = ಉದ್ಯುಕ್ತನಹನು ತಸ್ಮಾತ್ = ಆಮಕಾರಣ ಸಃ = ಆತನು ಪಂಡಿತಃ = ವಿದ್ವಾನ್ನು, ಶಕ್ತಃ = ಸಮರ್ಥನು. ಸಃ = ಆತನು ತಪಸ್ವೀ = ತಪಸ್ವಿಯಹಂಥಾ ಆತನು. ಜಿತೇಂದ್ರಿಯಃ = ಜೀತೇಂದ್ರಿಯನು. ||೧೧||

ಯಃ = ಆವನಾನೊಬ್ಬನು ಶಿವಜ್ಞಾನಸ್ಯ = ಶಿವಜ್ಞಾನ ಶಾಸ್ತ್ರದ ಶ್ಲೋಕಮಪಿ = ಒಂದು ಶ್ಲೋಕವನಾದರೂ ತದರ್ಧಂವಾ = ಆ ಶ್ಲೋಕದ ಅರ್ಧವನಾಯಿತ್ತಾದರೂ ಪಠೇತ್ = ಪಠಿಸುವನು ವಾಚಯೇತ್ = ಓದುವನು ಚಿಂತಯೇತ್ = ಚಿಂತನೆಯ ಮಾಡುವನು [2]ವಾಪಿ[2] = ಅಲ್ಲಾ ಲಿಖೇದ್ವಾ = ಬರೆವನು ವಾ = ಅಲ್ಲಾ ಲೇಖಯೇತ = ಬರಸುವನು. ||೧೨||

ಯಃ = ಆವನಾನೊಬ್ಬನು ಏಕಚಿತ್ತಶ್ಚ = ಏಕಚಿತ್ತನಾಗಿಯೂ ಶೃಣುಯಾತ್ = ಕೇಳುವನು ತದರ್ಥಂ ಚ = ಆ ಶಿವಜ್ಞಾನ ಶಾಸ್ತ್ರದ ಅರ್ಥವನು ವಿಚಾರಯೇತ್ = ವಿಚಾರಿಸುವನು ಅನ್ಯೇಭ್ಯಃ = ಮತ್ತೆ ಕೆಲವರಿಗೋಸ್ಕರ ಶ್ರಾವಯೇತ್ = ಕೇಳಿಸುವನು ತಸ್ಯ = ಅದರ ಪುಣ್ಯಫಲಂ = ಪುಣ್ಯದ ಫಲವನು ಶೃಣು = ಕೇಳು. ||೧೩||

ಸರ್ವರತ್ನೈಸ್ತು = ಸರ್ವರತ್ನಂಗಳಿಂದಲೂ ಪೂರ್ಣಾಂ = ತುಂಬಿಕೊಂಡಿದ್ದಂಥಾ ಮಹೀಂ = ಭೂಮಿಯನು ತ್ರಿಃ ಪ್ರದಾಯ = ಮೂಱುಬಾರಿ ದಾನವ ಕೊಡಲಾಗಿ ಯತ್ಫಲಂ = ಆವುದಾನೊಂದು ಫಲವುಂಟೋ ಈಶ್ವರಜ್ಞಾನಂ = ಶಿವಜ್ಞಾನವಹಂಥಾ

---

[1]ಯಾತ (ಖ). ಯೀತ (ಗ). [2] ಅಪಿ (ಕ).

ಸಂಸಾರಬೀಜಮಜ್ಞಾನಂ ಸಂಸಾರ್ಯಜ್ಞಃ ಪುಮಾನ್ ಯತಃ
ಅಜ್ಞಾನೇ ಸತಿ ರಾಗಾದ್ಯಾಃ ಧರ್ಮಾಧರ್ಮೌ ಚ ತದ್ವಶೌ ||೧೫||

ಧರ್ಮಾಧರ್ಮವಶಾತ್ಪುಂಸಾಂ ಶರೀರಮುಪಜಾಯತೇ
ಶರೀರೇ ಸತಿ [1]ಸಂಕ್ಲೇಶೈಃ[1] ಸರ್ವೈಃ ಸಂಯುಜ್ಯತೇ ನರಃ ||೧೬||

ಧರ್ಮರಜ್ಜ್ವಾ ವ್ರಜೇದೂರ್ಧ್ವಂ ಪಾಪರಜ್ಜ್ವಾ ವ್ರಜೇದಧಃ
[2]ದ್ವಯಂ ಜ್ಞಾ[2]ನಾಸಿನಾ ಛಿತ್ವಾ ವಿದೇಹಃ ಶಾಂತಿಮೃಚ್ಛತಿ ||೧೭||

ಶ್ಲೋಕಾರ್ಧಂ = ಶ್ಲೋಕದ ಅರ್ಧವನು ಪಠನ್ = ಪಾಠವ ಮಾಡುವಾತನು ತತ್ಫಲಂ = [3]ಆ[3] ಫಲವನು ಆಪ್ನುಯಾತ್ = ಎಯ್ದುವನು. ||೧೪||

ಅಜ್ಞಾನಂ = ಅಜ್ಞಾನವು ಸಂಸಾರಬೀಜಂ = ಸಂಸಾರಕ್ಕೆ ಬೀಜವಹಂಥಾದು ಯತಃ = ಆವುದಾದೊಂದು ಕಾರಣವಾಗಿ ಸಂಸಾರೀ = ಸಂಸಾರಿಯಹಂಥಾ ಪುಮಾನ್ = ಪುರುಷನು ಅಜ್ಞಃ = ಅಜ್ಞಾನಿಯಹಂಥಾ ಆತನು ಅಜ್ಞಾನೇ ಸತಿ = ಅಜ್ಞಾನವಾಗುತ್ತಂವಿರಲು ರಾಗಾದ್ಯಾಃ = ರಾಗ ದ್ವೇಷ ಮೊದಲಾದಂಥಾವಹವು ಧರ್ಮಾಧರ್ಮೌ ಚ = ಪುಣ್ಯಪಾಪಂಗಳು ತದ್ವಶೌ = ಆ ರಾಗದ್ವೇಷಂಗಳ ಅಧೀನಂಗಳು. ||೧೫||

ಧರ್ಮಾಧರ್ಮವಶಾತ್ = ಪುಣ್ಯಪಾಪಂಗಳಾಧೀನದ ದೆಸೆಯಿಂದ ಪುಂಸಾಂ = ಪುರುಷರುಗಳಿಗೆ ಶರೀರಂ = ಶರೀರವು ಉಪಜಾಯತೇ = [4]ಹುಟ್ಟಲುಪಡುತ್ತಂ[4] ವಿಹುದು. ಶರೀರೇ ಸತಿ = ಶರೀರವಾಗುತ್ತಂ ವಿರಲು ಸ ನರಃ = ಆ ಮನುಷ್ಯನು ಸರ್ವೈಃ ಸಂಕ್ಲೇಶೈಃ = ಸಮಸ್ತ ಕ್ಲೇಶಂಗಳಿಂದ ಸಂಯುಜ್ಯತೇ = ಕೂಡಲುಪಡುತ್ತಂ ವಿಹನು. ||೧೬||

ಧರ್ಮರಜ್ಜ್ವಾ = ಧರ್ಮವೆಂಬ ರಜ್ಜುವಿನಿಂದ ಊರ್ಧ್ವಂ = ಸ್ವರ್ಗವನು ವ್ರಜೇತ್ = ಎಯ್ದುವನು. ಪಾಪರಜ್ಜ್ವಾ = ಪಾಪವೆಂಬ ಹಗ್ಗದಿಂದ ಅಧಃ = ನರಕವನು ವ್ರಜೇತ್ = ಎಯ್ದುವನು ದ್ವಯಂ = ಪುಣ್ಯ ಪಾಪಂಗಳೆಂಬ ಎರಡು ರಜ್ಜುವನು ಜ್ಞಾನಾಸಿನಾ = ಜ್ಞಾನವೆಂಬ ಖಡ್ಗದಿಂದ ಛಿತ್ವಾ = ಛೇದಿಸಿ ವಿದೇಹಃ = ದೇಹವಿಲ್ಲದಾತನಾಗಿ ಶಾಂತಿಂ = ಮೋಕ್ಷವನು ಋಚ್ಛತಿ = ಎಯ್ದುತ್ತಂವಿಹನು. ಋ + ಗತೌ ಎಂಬ ಧಾತು. ||೧೭||

---

1 ಸಕ್ಲೇಶೈಃ (ಖ.ಗ.ಚ.). 2 ದ್ವಯೋರ್ಜ್ಞಾ (ಕಖಗಘ) 3 ಅವನ (ಖ).
4 ಆಗುತ್ತಂ (ಕ).

ಸದ್ಧರ್ಮಾಶ್ಚ ಶಿವೇನೋಕ್ತಾಃ ಶಿವಧರ್ಮಾಗಮೋತ್ತರೇ
ಜ್ಞೇಯಾ ಬಹುವಿಧಾಸ್ತೇ ಚ ಕರ್ಮಯೋಗಪ್ರಭೇದತಃ ||೧೮||

ಅಥಾಹಿಂಸಾ ಕ್ಷಮಾ ಸತ್ಯಂ ಹ್ರೀಶ್ಶ್ರದ್ಧೇಂದ್ರಿಯನಿಗ್ರಹಃ
ದಾನಂ ವಿದ್ಯಾ ತಪೋ ಧ್ಯಾನಂ 'ದಶಕಂ ಧರ್ಮಲಕ್ಷಣಮ್' ||೧೯||

ಅಧರ್ಮಭೇದಾ ವಿಜ್ಞೇಯಾಶ್ಚಿತ್ತವೃತ್ತಿಪ್ರಭೇದತಃ
ಸ್ಥೂಲಾಃ ಸೂಕ್ಷ್ಮಾಃ ಸುಸೂಕ್ಷ್ಮಾಶ್ಚ ಕೋಟಿಭೇದೈರನೇಕಧಾ ||೨೦||

ತತ್ರ ಯೇ ಪಾಪನಿಚಯಾಃ ಸ್ಥೂಲಾ ನರಕಹೇತವಃ
ತೇಽಸಮಾಸೇನ[1] ಕಥ್ಯಂತೇ ಮನೋವಾಕ್ಕಾಯಸಾಧನೈಃ ||೨೧||

ಶಿವೇನ = ಪರಮೇಶ್ವರನಿಂದ ಶಿವಧರ್ಮಾಗಮೋತ್ತರೇ = ಶಿವಧರ್ಮಾಗಮೋತ್ತರದಲ್ಲಿ ಸದ್ಧರ್ಮಾಶ್ಚ = ಒಪ್ಪುತ್ತಂಇದ್ದಂಥಾ ಧರ್ಮಂಗಳು ಉಕ್ತಾಃ = ಹೇಳಲು ಪಟ್ಟವು. ತೇ ಚ = ಆ ಧರ್ಮಂಗಳು ಕರ್ಮಯೋಗಪ್ರಭೇದತಃ = ಕ್ರಿಯಾಯೋಗದ ಭೇದದ ದೆಸೆಯಿಂದ ಬಹುವಿಧಾಃ = ಹಲವು ಪ್ರಕಾರಂಗಳಾಗಿ ಜ್ಞೇಯಾಃ = ಅಱಿಯಲು ಯೋಗ್ಯಂಗಳು. ||೧೮||

ಕ್ರಿಯಾಯೋಗದ ಧರ್ಮದಲಕ್ಷಣವ ಹೇಳುತ್ತಂಇದ್ದಾರು —

ಅಥ = ಅನಂತರದಲ್ಲಿ ಅಹಿಂಸಾ = ಹಿಂಸೆಯ ಮಾಡದಿರುಹವು ಕ್ಷಮಾ = ಶಾಂತಿ ಸತ್ಯಂ = ಸತ್ಯವು ಹ್ರೀಃ = ಲಜ್ಜೆ ಶ್ರದ್ಧಾ = ನಿಶ್ವಾಸವು ಇಂದ್ರಿಯನಿಗ್ರಹಃ = ಇಂದ್ರಿಯಂಗಳ ನಿಗ್ರಹಿಸುಹವು ದಾನಂ = ದಾನವು ವಿದ್ಯಾ = ವಿದ್ಯಾಭ್ಯಾಸವು ತಪಃ = ತಪಸ್ಸು ಧ್ಯಾನಂ = ಧ್ಯಾನವು ದಶಕಂ = ಈ ಹತ್ತು ಧರ್ಮಲಕ್ಷಣಂ = ಧರ್ಮದ ಲಕ್ಷಣವು. ||೧೯||

ಅಧರ್ಮಭೇದಾಃ = ಪಾಪಂಗಳ ಭೇದಂಗಳು ಚಿತ್ತವೃತ್ತಿ ಪ್ರಭೇದತಃ = ಚಿತ್ತದ ವರ್ತನೆಯ ಭೇದದ ದೆಸೆಯಿಂದ ಅನೇಕಧಾ = ಹಲವು ಪ್ರಕಾರವಹಂಥಾ ಕೋಟಿ ಭೇದೈಶ್ಚ = ಕೋಟಿಭೇದಂಗಳಿಂದ ಸ್ಥೂಲಾಃ = ಸ್ಥೂಲಂಗಳು ಸೂಕ್ಷ್ಮಾಃ = ಸೂಕ್ಷ್ಮಂಗಳು ಸುಸೂಕ್ಷ್ಮಾಃ = ಅತಿಸೂಕ್ಷ್ಮಂಗಳಾಗಿ ಜ್ಞೇಯಾಃ = ಅಱಿಯಲು ಯೋಗ್ಯಂಗಳು. ||೨೦||

ತತ್ರ = ಅಲ್ಲಿ ಯೇ = ಆವವು ಕೆಲವು ಸ್ಥೂಲಾಃ = ದೊಡ್ಡಿತ್ತಹಂಥಾ ಪಾಪನಿಚಯಾಃ = ಪಾಪಸಮೂಹಂಗಳು ನರಕಹೇತವಃ = ನರಕಕ್ಕೆ ಕಾರಣಂಗಳು

---

1 ಸಮಾಸೇನ (ಘ).

ಪರಸ್ತ್ರೀದ್ರವ್ಯಸಂಕಲ್ಪಶ್ಚೇತಸಾಽನಿಷ್ಟಚಿಂತನಮ್
ಅಕಾರ್ಯಾಭಿನಿವೇಶಶ್ಚ ಚತುರ್ಥಂ ಕರ್ಮ ಮಾನಸಮ್ ॥೨೨॥

ಅನಿಬದ್ಧಪ್ರಲಾಪಿತ್ವಮಸತ್ಯಂ ಚಾಪ್ರಿಯಂ ಚ ಯತ್
ಪರಾಪವಾದಪೈಶುನ್ಯಂ ಚತುರ್ಥಂ ಕರ್ಮ ವಾಚಿಕಮ್ ॥೨೩॥

ಅಭಕ್ಷ್ಯಭಕ್ಷಣಂ ಹಿಂಸಾ ಮಿಥ್ಯಾ[1]ಕಾಮಸ್ಯ ಸೇವನಮ್[1]
ಪರಸ್ವಾನಾಮುಪಾದಾನಂ ಚತುರ್ಥಂ ಕರ್ಮ ಕಾಯಿಕಮ್ ॥೨೪॥

ತೇ = ಆ ಪಾಪಂಗಳು [ಅ] ಸಮಾಸೇನ = ವಿಸ್ತರದಿಂದ ಮನೋವಾಕ್ಕಾಯಸಾಧನೈಃ ಮನಸ್ಸು ವಾಕ್ಯ ಕಾಯಂಗಳ ಸಾಧನಂಗಳಿಂದ ಕಥ್ಯಂತೇ = ಹೇಳ[2]ಲು ಪ[2]ಡುತ್ತಿದ್ದಾವು. ॥೨೧॥

ಪರಸ್ತ್ರೀದ್ರವ್ಯಸಂಕಲ್ಪಃ = ಪರಸ್ತ್ರೀ ಪರದ್ರವ್ಯವ ನೆನಹೆವು ಅನಿಷ್ಟಚಿಂತನಂ = ಹಿತವಲ್ಲದಂಥಾದ ಚಿಂತಿಸುಹೆವು ಅಕಾರ್ಯಾಭಿನಿವೇಶಶ್ಚ = ಮಾಡಬಾರದಂಥಾ ಅದಱಲ್ಲಿ ಆಗ್ರಹವ [3]ಕೊಳುಹವು[3] ಚತುರ್ಥಂ = ಈ ನಾಲ್ಕು ಮಾನಸಂ = ಮನಸ್ಸಿನ ಸಂಬಂಧವಹಂಥಾ ಕರ್ಮ = ವ್ಯಾಪಾರವು. ॥೨೨॥

ಅನಿಬದ್ಧಪ್ರಲಾಪಿತ್ವಂ = ನಿಬದ್ಧಿಯಲ್ಲದ ನುಡಿಯ ನುಡಿಹವು, ರಪ ಲಪ-ವ್ಯಕ್ತಾಯಾಂ ವಾಚಿ ಎಂಬ ಧಾತುವಿನಲ್ಲಿ ಹುಟ್ಟಿದ ಪದವು. ಅಸತ್ಯಂ ಚ = ಹುಸಿಯ ನುಡಿಹವು ಯತ್ = ಆವುದಾನೊಂದು ಅಪ್ರಿಯಂ ಚ = ನಿಷ್ಠುರವಾಕ್ಯವು ಪರಾಪವಾದ ಪೈಶುನ್ಯಂ = ಪರರ ನಿಂದೆಯನಾಡು[4]ಹವು ಚತುರ್ಥಂ = ಈ ನಾಲ್ಕು ವಾಚಿಕಂ = ವಾಕ್ಯದ ಸಂಬಂಧವಹಂಥಾ ಕರ್ಮ = ವ್ಯಾಪಾರವು.[4] ॥೨೩॥

ಅಭಕ್ಷ್ಯಭಕ್ಷಣಂ = ಮೆಲ್ಲಬಾರದಂಥಾದ ಮೆಲ್ಲುಹವು ಹಿಂಸಾ = ಕೊಲುಹವು ಮಿಥ್ಯಾಕಾಮಸ್ಯ = ಮಿಥ್ಯವಹ ಬಯಕೆಯ ಸೇವನಂ = ಸೇವಿಸುಹೆವು ಮಾಡು[5]ಹವೆಂ[5]ಬುದರ್ಥ. ಪರಸ್ವಾನಾಂ = ಪರರಲ್ಲಿ ಇದ್ದಂಥಾ ವಸ್ತುಗಳ ಉಪಾದಾನಂ = ತೆಗೆದು ಕೊಳುಹವು ಚತುರ್ಥಂ = ಈ ನಾಲ್ಕು ಕಾಯಿಕಂ = ಕಾಯದ ಸಂಬಂಧವಹಂಥಾ ಕರ್ಮ = ವ್ಯಾಪಾರವು. ॥೨೪॥

---

[1] ಕಾರ್ಯನಿವೇಶನಂ (ಘ) ದಲ್ಲಿ ಮೂಲಪಾಠ. 'ಕಾಮಸ್ಯ ಸೇವನಂ' ಪಾಠಾಂತರ (ಘ).
[2] ಲ್ಪ (ಕ.ಖ.ಚ.).
[3] ಕೊಳುತಿಹವು (ಖ.ಚ.) ಆಗ್ರಹವಣಳುಹವು (ಕ) [4] (ಕ) ದಲ್ಲಿ ಲುಪ್ತ ಭಾಗ
[5] ವುದೆಂ (ಕ).

ಇತ್ಯೇತತ್ ದ್ವಾದಶವಿಧಂ ಕರ್ಮ ಪ್ರೋಕ್ತಂ ತ್ರಿಸಾಧನಮ್
ಅಸ್ಯ ಭೇದಾನ್ ಪುನರ್ವಕ್ಷ್ಯೇ[1]ಏಷಾಂ ಫಲಮನಂತರಮ್ ||೨೫||

ಯೇ ದ್ವಿಷಂತಿ ಮಹಾದೇವಂ ಸಂಸಾರಾರ್ಣವ[2]ತಾರಣಮ್[2]
ಸಮಸ್ತಪಾತಕೋಪೇತಾಸ್ತೇ ಯಾಂತಿ ನರಕಾರ್ಣವಮ್ ||೨೬||

ಶಿವಜ್ಞಾನಸ್ಯ ವಕ್ತಾರಂ ಗುರುಂ ನಿಂದಂತಿ ಯೇ ನರಾಃ
ಸುಮಹತ್ಪಾತಕೋಪೇತಾಸ್ತೇ ಯಾಂತಿ ನರಕಾರ್ಣವಮ್ ||೨೭||

ದೂಷಯಂತಿ ಶಿವಜ್ಞಾನಂ ಯೇ ಸರ್ವಾರ್ಥಪ್ರಸಾಧಕಮ್
ಸುಮಹತ್ಪಾತಕಂ ತೇಷಾಂ ನಿರಯಾರ್ಣವಗಾಮಿನಾಮ್ ||೨೮||

ಇತಿ = ಈ ಪ್ರಕಾರದಲ್ಲಿ ತ್ರಿಸಾಧನಂ = ಮನೋವಾಕ್ಕಾಯಕರ್ಮಂಗಳಿಗೆ ಸಾಧನವಹಂಥಾ ಏತತ್ದ್ವಾದಶವಿಧಂ = ಈ ಹನ್ನೆರಡು ಪ್ರಕಾರವಹಂಥಾ ಕರ್ಮ = ಕರ್ಮವು ಪ್ರೋಕ್ತಂ = ಹೇಳಲುಪಟ್ಟುತ್ತು. ಅಸ್ಯಭೇದಾನ್ = ಈ ಪಾಪದ ಭೇದಂಗಳನು ಅನಂತರಂ = ತಜುವಾಯಲ್ಲಿ ಏಷಾಂ = ಈ ಪಾಪಂಗಳ ಫಲಂ = ಫಲವನು ಪುನಃ = ಮರಳಿ ವಕ್ಷ್ಯೇ = ಹೇಳಿಹೆನು. ||೨೫||

ಯೇ = ಆರು ಕೆಲಬರು ಸಂಸಾರಾರ್ಣವತಾರಣಂ = ಸಂಸಾರವೆಂಬ ಸಮುದ್ರವ ದಾಂಟಿಸುತ್ತಂವಿದ್ದಂಥಾ ಮಹಾದೇವಂ = ಪರಮೇಶ್ವರನನು ದ್ವಿಷಂತಿ = ದ್ವೇಷವ ಮಾಡುತ್ತಂವಿಹರು. ದ್ವಿಷ-ಅಪ್ರೀತೌ ಎಂಬ ಧಾತು. ತೇ = ಅವರುಗಳು ಸಮಸ್ತಪಾತಕೋಪೇತಾಃ = ಸರ್ವಪಾಪಂಗಳೊಡ[3]ನೆ ಕೂ[3]ಡಿದಂಥಾ ಅವರುಗಳಾಗಿ ನರಕಾರ್ಣವಂ = ನರಕ[4]ವೆಂಬ[4] ಸಮುದ್ರವನು ಯಾಂತಿ = ಎಯ್ದುತ್ತಂವಿಹರು.

ಯೇ = ಆರು [5]ಕೆಲಬರು[5] ನರಾಃ = ಮನುಷ್ಯರುಗಳು ಶಿವಜ್ಞಾನಸ್ಯ = ಶಿವಜ್ಞಾನಶಾಸ್ತ್ರವ ವಕ್ತಾರಂ = ಹೇಳುತ್ತಂವಿದ್ದಂಥಾ ಗುರುಂ = ಆಚಾರ್ಯನನು ನಿಂದಂತಿ = ನಿಂದಿಸುತ್ತಂವಿಹರು. ಣಿದಿ ಕುತ್ಸಾಯಾಂ ಎಂಬ [6]ಧಾತುಜ ಪದವು.[6] ತೇ = ಅವರುಗಳು ಸುಮಹತ್ಪಾತಕೋಪೇತಾಃ = ಅತಿದೊಡ್ಡಿತ್ತಹ ಪಾಪಂಗಳೊಡನೆ ಕೂಡಲುಪಟ್ಟವರುಗಳಾಗಿ ನರಕಾರ್ಣವಂ = ನರಕ ಸಮುದ್ರವನು ಯಾಂತಿ = ಎಯ್ದುತ್ತಂವಿಹರು. ಯಾ ಪ್ರಾಪಣೇ ಇತಿ ಧಾತುಃ. ||೨೭||

ಯೇ = ಆರು ಕೆಲಬರು ಸರ್ವಾರ್ಥಪ್ರಸಾಧಕಂ = ಸಮಸ್ತ ಪ್ರಯೋಜನನನು ಸಾಧಿಸಿಕೊಡುವಂಥಾ ಶಿವಜ್ಞಾನಂ = ಶೈವಶಾಸ್ತ್ರವನು ದೂಷಯಂತಿ = ದೂಷಿಸುತ್ತಂ

---

1 ಯೇಷಾಂ (ಖ.ಗ.ಚ). 2 ತಾರಕಂ (ಕ) ವ್ಯಾಖ್ಯಾನಪಾಠ. 3 ಗೂ (ಕ).
4 ಇಲ್ಲ (ಕ). 5 ಕೆಲಂಬರು (ಕ.ಖ). 6 ಧಾತು (ಕ).

ಶಿವನಿಂದಾ ಗುರೋರ್ನಿಂದಾ ಶಿವಜ್ಞಾನಸ್ಯ ದೂಷಣಮ್
ದೇವದ್ರವ್ಯಾಪಹರಣಂ ಗುರುದ್ರವ್ಯವಿನಾಶನಮ್ ||೨೯||

ಹರಂತಿ ಯೇ ಚ ಸಂಮೂಢಾಶ್ಶಿವಜ್ಞಾನಸ್ಯ ಪುಸ್ತಕಮ್
ಸುಮಹತ್ಪಾತಕಾನ್ಯಾಹುರತಿಪಾಪಫಲಾನಿ ಷಟ್ ||೩೦||

ನಾಭಿನಂದಂತಿ ಯೇ ದೃಷ್ಟ್ವಾ ಶಿವಪೂಜಾಂ ಪ್ರಕಲ್ಪಿತಾಮ್
ನ ನಮಂತ್ಯರ್ಚಿತಂ ದೃಷ್ಟ್ವಾ[1]ಪೂಜಿತಂ ನ ಸ್ತುವಂತಿ ಚ ||೩೧||

ಯಥೇಷ್ಟಚೇಷ್ಟಾ ನಿಶ್ಶಂಕಾಸ್ತಿಷ್ಠಂತಿ ಚ ರಮಂತಿ ಚ
ಸ್ಥಾನಸಂಸ್ಕಾರಪೂಜಾಶ್ಚ ಯೇ ಕುರ್ವಂತಿ ನ ಪರ್ವಸು ||೩೨||

ವಿಹರು ನಿರಯಾರ್ಣವಗಾಮಿನಾಂ = ನರಕಸಮುದ್ರವನೆಯ್ದುತ್ತಂವಿದ್ದಂಥಾ ತೇಷಾಂ = ಅವರುಗಳಿಗೆ ಪಾತಕಂ = ಪಾತಕವು ಸುಮಹತ್ = ದೊಡ್ಡಿತ್ತಹಂಥಾದಹುದು.

ಶಿವನಿಂದಾ = ಶಿವನಿಂದೆ ಗುರೋಃ = ಗುರುವಿನ ನಿಂದಾ = ನಿಂದೆ ಶಿವಜ್ಞಾನಸ್ಯ = ಶಿವಜ್ಞಾನಶಾಸ್ತ್ರವ ದೂಷಣಂ = ದೂಷಿಸುಹವು ದೇವದ್ರವ್ಯಾಪಹರಣಂ = ದೇವದ್ರವ್ಯವನಪಹರಿಸುಹವು ಗುರುದ್ರವ್ಯವಿನಾಶನಂ = ಗುರುದ್ರವ್ಯವ ಕೆಡಿಸುಹವು. ||೨೯||

ಯೇ = ಆರು ಕೆಲಬರು ಸಂಮೂಢಾಶ್ಚ = ಮೂರ್ಖರುಗಳು ಶಿವಜ್ಞಾನಸ್ಯ = ಶಿವಜ್ಞಾನದ ಪುಸ್ತಕಂ = ಪುಸ್ತಕವನು ಹರಂತಿ = ಅಪಹರಿಸುತ್ತಂವಿಹರು ಅತಿಪಾಪಫಲಾನಿ = ಅತ್ಯಂತ ಪಾಪದ ಫಲಂನುಳ್ಳಂಥಾ ಷಟ್ = ಈ ಆಱು ಸುಮಹತ್ಪಾತಕಾನಿ = [2]ದೊಡ್ಡಿತ್ತಹ[2] ಪಾಪಂಗಳೆಂದು ಆಹುಃ = ಹೇಳುತ್ತಂವಿಹರು.

ಯೇ = ಆರು ಕೆಲಬರುಗಳು ಪ್ರಕಲ್ಪಿತಾಂ = ಮಾಡಲುಪಟ್ಟಂಥಾ ಶಿವಪೂಜಾಂ = ಶಿವಲಿಂಗಪೂಜೆಯನು ದೃಷ್ಟ್ವಾ = ಕಂಡು ಅಭಿನಂದಂತಿ ನ = ಸಂತೋಷಿಸುತ್ತಂವಿರರು ಅರ್ಚಿತಂ = ಅರ್ಚಿಸಿಕೊಳಲುಪಟ್ಟಂಥಾ ಶಿವಲಿಂಗವನು ದೃಷ್ಟ್ವಾ = ಕಂಡು ನ ನಮಂತಿ = ನಮಸ್ಕರಿಸುತ್ತಂವಿರರು ಪೂಜಿತಂ = ಪೂಜಿಸಿ[3]ಕೊಳಲುಪಟ್ಟಂಥಾ[3] ಶಿವಲಿಂಗವನು ನ ಸ್ತುವಂತಿ = ಸ್ತೋತ್ರವ ಮಾಡುತ್ತಂವಿರರು. ||೩೧||

ಯಥೇಷ್ಟಚೇಷ್ಟಾಃ = ಮನಸ್ಸಿಗೆ ಬಂದ ಹಾಗೆ ವರ್ತಿಸುತ್ತಂವಿಹವರುಗಳಾಗಿ ನಿಶ್ಶಂಕಾಃ = ಶಂಕೆಯಿಲ್ಲದವರುಗಳಾಗಿ ತಿಷ್ಠಂತಿ ಚ = ಶಿವಲಿಂಗದ ಮುಂದೆ ಇರುತ್ತಂವಿಹರು ರಮಂತಿ ಚ = ಸುಖಿಸುತ್ತಂವಿಹರು ಯೇ = ಆರು ಕೆಲಬರು ಪರ್ವಸು = ಅಷ್ಟಮಿ ಚತುರ್ದಶಿ ಪೌರ್ಣಮಿ ಅಮಾವಾಸೆಯೆಂಬ ಪರ್ವತಿಥಿಗಳಲ್ಲಿ ಸ್ಥಾನಸಂಸ್ಕಾರ

---

[1] ನ ಪೂಜಂತಿ (ಘ) [2] ದೊಡ್ಡಿಹ (ಕ) [3] ಕೊಳ್ಳಲ್ಪಟಂಥಾ (ಕ)

ಶಿವವಿದ್ಯಾಗುರೂಣಾಂ ಚ ಕರ್ಮಯೋಗವ್ಯವಸ್ಥಿತಾಃ
ಯೇ ತ್ಯಜಂತಿ ಶಿವಾಚಾರಂ ಶಿವಭಕ್ತಾನ್ ದ್ವಿಷಂತಿ ಚ ||೩೩||

ಶಿವನಿಂದಾಸಮಾ ಹ್ಯೇತೇ ಮಹಾಂತಃ ಪಾತಕೋತ್ತಮಾಃ ||೩೪||

ಗುರುಪೂಜಾಮಕೃತ್ವೈವ ಯಃ ಶಾಸ್ತ್ರಂ ಶ್ರೋತುಮಿಚ್ಛತಿ
ನ ಕರೋತಿ ಚ ಶುಶ್ರೂಷಾಮಾಜ್ಞಾಂ ಭಕ್ತಿಂ ಚ ಭಾವತಃ ||೩೫||

ನಾಭಿನಂದತಿ ತದ್ವಾಚಾಮುತ್ತರಂ ಚ ಪ್ರಯಚ್ಛತಿ
ಗುರುಕರ್ಮಣಿ ಶಾಠ್ಯಂ ಚ ತದುಪೇಕ್ಷಾಂ ಕರೋತಿ ಚ ||೩೬||

ಗುರುಮಾರ್ತಮಶಕ್ತಂ ವಾ ವಿದೇಶಪ್ರಸ್ಥಿತಂ ತು ವಾ
ಅರಿಭಿಃ ಪರಿಭೂತಂ ವಾ ಯಃ ಸಂತ್ಯಜತಿ ಪಾಪಕೃತ್ ||೩೭||

ಪೂಜಾಶ್ಚ ಶಿವಸ್ಥಾನವ ಸಾರಿಸುಹ ಮೊದಲಹ ಪೂಜೆಗಳನು ನ ಕುರ್ವಂತಿ = ಮಾಡದೆಯಿಹರು. ||೩೨||

ಯೇ ಚ = ಆರು ಕೆಲಬರು ಕರ್ಮಯೋಗ-ವ್ಯವಸ್ಥಿತಾಃ = ಕರ್ಮಮಾರ್ಗದಲ್ಲಿರುತ್ತಂವಿದ್ದಂಥಾ ಅವರುಗಳು ಶಿವವಿದ್ಯಾಗುರೂಣಾಂ = ಈಶ್ವರ–ಶಿವಾಗಮ–ಆಚಾರ್ಯರುಗಳ ದ್ವಿಷಂತಿ = ದ್ವೇಷಿಸುತ್ತಂವಿಹರು ಶಿವಾಚಾರಂ ಚ = ಶಿವಾಗಮೋಕ್ತವಹಂಥಾ ಆಚಾರವನು ತ್ಯಜಂತಿ = ಬಿಡುತ್ತಂವಿಹರು. ಶಿವಭಕ್ತಾನ್ = ಈಶ್ವರಭಕ್ತರುಗಳನು ದ್ವಿಷಂತಿ = ದ್ವೇಷಿಸುತ್ತಂವಿಹರು. ||೩೩||

ಏತೇ ಪಾತಕೋತ್ತಮಾಃ = ಈ ಪಾತಕದ ಉತ್ಕೃಷ್ಟಂಗಳು ಮಹಾಂತಃ = ದೊಡ್ಡಿತ್ತಹಂಥಾ ಶಿವನಿಂದಾಸಮಾ ಹಿ = ಶಿವನಿಂದೆಗೆ ಸಮಾನವಹಂಥಾವಲಾ. ||೩೪||

ಯಃ = ಆವನಾನೊಬ್ಬಾತನು ಗುರುಪೂಜಾಂ = ಶ್ರೀ ಗುರುಪೂಜೆಯನು ಅಕೃತ್ವೈವ = ಮಾಡದೆ ಶಾಸ್ತ್ರಂ = ಶಾಸ್ತ್ರವನು ಶ್ರೋತುಂ = ಕೇಳಲು ಇಚ್ಛತಿ = ಇಚ್ಛಿಸುತ್ತಂವಿಹನು ಭಾವತಃ = ತಾತ್ಪರ್ಯದ ದೆಸೆಯಿಂದ ಭಕ್ತಿಂ ಚ = ಭಕ್ತಿಯನು ಶುಶ್ರೂಷಾಂ ಚ = ಸೇವೆಯನು ನ ಕರೋತಿ = ಮಾಡುತ್ತಿರನು ಆಜ್ಞಾಂ = ಶ್ರೀಗುರುವಿನ ಆಜ್ಞೆಯನು ನ ಕರೋತಿ = ನಡಸುತ್ತಂವಿರನು. ||೩೫||

ತದ್ವಾಚಾಂ = ಆ ಗುರುವಾಕ್ಯಂಗಳಿಗೆ ನ ಅಭಿನಂದತಿ = ಸಂತೋಷಿಸುತ್ತಂವಿರನು ಉತ್ತರಂ ಚ = ಪ್ರತ್ಯುತ್ತರವನು ಪ್ರಯಚ್ಛತಿ = ಕೊಡುತ್ತಂವಿಹನು ಗುರುಕರ್ಮಣಿ = ಗುರುಕಾರ್ಯದಲ್ಲಿ ಶಾಠ್ಯಂ ಚ = ಶಠೆಯನೂ ತದುಪೇಕ್ಷಾಂ ಚ = ಆ ಗುರುವಿನ ಕಾರ್ಯದಲ್ಲಿ ಉಪೇಕ್ಷೆಯನು ಕರೋತಿ = ಮಾಡುತ್ತಂವಿಹನು. ||೩೬||

ಯಃ = ಆವನಾನೊಬ್ಬಾತನು ಆರ್ತಂ = ಕ್ಲೇಶಿತನಾದಂಥಾ ಅಶಕ್ತಂ =

ತದ್ಭಾರ್ಯಾಪುತ್ರಮಿತ್ರೇಷು ಯಶ್ಚಾವಜ್ಞಾಂ ಕರೋತಿ ಚ
ಇತ್ಯೇತತ್ಪಾತಕಂ ಜ್ಞೇಯಂ ಗುರುನಿಂದಾಸಮಂ ಭವೇತ್ ||೩೮||

ಅಸಂಪೂಜ್ಯ ಶಿವಜ್ಞಾನಮಧೀಯಂತೇ ಲಿಖಂತಿ ವಾ
ಅನ್ಯಾಯತಃ ಪ್ರಯಚ್ಛಂತಿ ಶೃಣ್ವಂತ್ಯುಚ್ಚಾರಯಂತಿ ಚ ||೩೯||

ವಿಕ್ರೀಣಂತಿ ಚ ಲೋಭೇನ ಕುಜ್ಞಾನನಿಯಮೇನ ವಾ
ಅಸಂಸ್ಕೃತಪ್ರದೇಶೇಷು ಯಥೇಷ್ಟಂ ಸ್ಥಾಪಯಂತಿ [1]ಚ[1] ||೪೦||

ಶಿವಜ್ಞಾನಕಥಾಽಽಕ್ಷೇಪಂ [2]ಯಃ ಕೃತ್ವಾಽನ್ಯತ್ರ ಭಾಷತೇ
ನಾಧೀಯತೇ ಸಮರ್ಥಶ್ಚ ಪ್ರಮಾದಂ ಯಃ ಕರೋತಿ ಚ ||೪೧||

ಅಶಕ್ತನಹಂಥಾ ವಾ = ಅಲ್ಲಾ ವಿದೇಶಪ್ರಸ್ಥಿತಂ ವಾ = ಪರದೇಶದಲ್ಲಿ ಇದ್ದಂಥಾ ಅರಿಭಿಃ = ಶತ್ರುಗಳಿಂದ ಪರಿಭೂತಂ ವಾ = ತಿರಸ್ಕರಿಸಲುಪಟ್ಟಂಥಾ ಗುರುಂ = ಶ್ರೀಗುರುವನು ಸಂತ್ಯಜತಿ = ಬಿಡುತ್ತಂವಿಹನು ತು = ವಿಶೇಷವಾಗಿ ಪಾಪಕೃತ್ = ಪಾಪವ ಮಾಡಿದಾತನಹನು. ||೩೭||

ಯಃ = ಆವನಾನೊಬ್ಬಾತನು ತದ್ಭಾರ್ಯಾಪುತ್ರಮಿತ್ರೇಷು ಚ = ಆ ಗುರುವಿನ ಸ್ತ್ರೀ ಪುತ್ರ ಮಿತ್ರರುಗಳಲ್ಲಿಯೂ ಅವಜ್ಞಾಂ ಚ = ಅವುನ್ನಣೆಯನು ಕರೋತಿ = ಮಾಡುತ್ತಂವಿಹನು ಏತತ್ಪಾತಕಂ = ಈ ಪಾಪವು ಇತಿ = ಈ ಪ್ರಕಾರದಲ್ಲಿ ಜ್ಞೇಯಂ = ಆಱಿಯಲು ಯೋಗ್ಯವು. ಜ್ಞಾತುಂ ಯೋಗ್ಯಂ ಜ್ಞೇಯಂ ಇದು ನಿರ್ವಚನವು. ಏತತ್ = ಇದು ಗುರುನಿಂದಾಸಮಂ = ಗುರುನಿಂದೆಗೆ ಸಮಾನವು ಭವೇತ್ = ಅಹುದು. ||೩೮||

ಶಿವಜ್ಞಾನಂ = ಶಿವನ ಜ್ಞಾನವನಱಿವಂಥಾ ಶಾಸ್ತ್ರವನು ಅಸಂಪೂಜ್ಯ = ಪೂಜಿಸದೆ ಅಧೀಯಂತೇ = ಓದುತ್ತಂವಿಹರೂ ವಾ = ಅಲ್ಲಾ ಲಿಖಂತಿ = ಬರೆಯುತ್ತಂವಿಹರೂ ಅನ್ಯಾಯತಃ = ಅಮಾರ್ಗದಿಂದ ಪ್ರಯಚ್ಛಂತಿ = ಕೊಡುತ್ತಂವಿಹರು ಶೃಣ್ವಂತಿ = ಕೇಳುತ್ತಂವಿಹರು ಉಚ್ಚಾರಯಂತಿ = ಉಚ್ಚರಿಸುತ್ತಂವಿಹರು. ||೩೯||

ಲೋಭೇನ = ಧನಲೋಭದಿಂದ ವಾ = ಅಲ್ಲಾ ಕುಜ್ಞಾನ ನಿಯಮೇನ = ಅಜ್ಞಾನ ಸಂಬಂಧವಹಂಥಾ ವರ್ತನೆಯಿಂದ ವಿಕ್ರೀಣಂತಿ ಚ = ವಿಕ್ರಯವಮಾಡುತ್ತಂವಿಹರು ಅಸಂಸ್ಕೃತ ಪ್ರದೇಶೇಷು = ಶುದ್ಧವಲ್ಲದೆಯಿದ್ದ ಸ್ಥಾನಂಗಳಲ್ಲಿ ಯಥೇಷ್ಟಂ = ಮನಸ್ಸಿಗೆ ಬಂದ ಹಾಂಗೆ ಸ್ಥಾಪಯಂತಿ ಚ = ಇರಿಸುತ್ತಂವಿಹರು. ||೪೦||

ಯಃ = ಆವನಾನೊಬ್ಬಾತನು ಶಿವಜ್ಞಾನಕಥಾಽಽಕ್ಷೇಪಂ = ಶಿವಜ್ಞಾನ

---

[1] ವಾ (ಕ.ಖ.ಗ.ಘ). [2] ಪೇಕ್ಷಂ ? (ಖ.ಗ).

ಅಶುಚಿಶ್ಚಾಶುಚೌ ಸ್ಥಾನೇ ಯಃ [1]ಪ್ರವರ್ತೀ[1] ಶೃಣೋತಿ ವಾ
ಇತಿ ಸರ್ವಂ ಸಮಾಸೇನ ಜ್ಞಾನನಿಂದಾಸಮಂ ಸ್ಮೃತಮ್ ||೪೨||

ಬ್ರಹ್ಮಘ್ನಶ್ಚ ಸುರಾಪಶ್ಚ ಸ್ತೇಯೀ ಚ ಗುರುತಲ್ಪಗಃ
ಮಹಾಪಾತಕಿನಸ್ತ್ವೇತೇ ತತ್ಸಂಯೋಗೀ ಚ ಪಂಚಮಃ ||೪೩||

ಯಃ ಶ್ರೋತೄಣಾಂ ಶಾಂಕರೀಯಂ ಶಾಸ್ತ್ರಂ ಕಾವ್ಯಾದಿಕಂ ತಥಾ
ನ ಶ್ರಾವಯತ್ಯ[2]ಭಿಜ್ಞಸ್ಸನ್[2]ತಮಾಹುರ್ಬ್ರಹ್ಮಘಾತಕಮ್ ||೪೪||

ಶಾಸ್ತ್ರದ ಕಥೆಗೆ[3] ಆಕ್ಷೇಪವನ್ನು ಕೃತ್ವಾ = ಮಾಡಿ ಅನ್ಯತ್ = ಮತ್ತೊಂದನ್ನು ಪ್ರಭಾಷತೇ = ನುಡಿ[4]ಯುತ್ತಿಹನು. ಆಕ್ಷೇಪವೆಂದರೆ ಇದು ಹೇಗೆಯೆಂದು ಧಿಕ್ಕರಿಸುಹವು. ನ ಸಮರ್ಥಶ್ಚ = ಶಬ್ದಾರ್ಥದ[4]ಲ್ಲಿ ಸಮರ್ಥನಲ್ಲದವನು ಅಧೀಯತೇ = ಓದುತ್ತಿಹನು ಯಃ = ಆವನಾನೊಬ್ಬನು ಪ್ರಮಾದಂ ಚ = ವಿಘ್ನವನು ಕರೋತಿ = ಮಾಡುತ್ತಿಹನು. ||೪೧||

ಯಃ = ಆವನಾನೊಬ್ಬನು **ಅಶುಚಿಃ** = ಅಶುಚಿಯಾಗಿ ಅಶುಚೌ = ಶುದ್ಧವಲ್ಲದೆಯಿದ್ದಂಥಾ ಸ್ಥಾನೇ = ಸ್ಥಾನದಲ್ಲಿ [5]ಪ್ರವರ್ತೀ = ವರ್ತಿಸುತ್ತಿಹನು (ಪ್ರವಕ್ತಿ = ಶಿವಧರ್ಮಶಾಸ್ತ್ರವನು ಹೇಳುವನು.)[5] ಶೃಣೋತಿ ವಾ = ಕೇಳುತ್ತಿಹನು ಇತಿ = ಈ ಪ್ರಕಾರದಲ್ಲಿ ಸರ್ವಂ = ಸಮಸ್ತವೂ ಸಮಾಸೇನ = ವಿಸ್ತರದಿಂದ (?) [ಸಂಕ್ಷೇಪದಿಂದ] ಜ್ಞಾನನಿಂದಾಸಮಂ = ಜ್ಞಾನವನಿಂದಿಸಿದ ಸಮಾನವೆಂದು ಸ್ಮೃತಂ = ಹೇಳಲುಪಟ್ಟಿತ್ತು. ||೪೨||

ಬ್ರಹ್ಮಘ್ನಶ್ಚ = ಬ್ರಾಹ್ಮಣನ ಕೊಂದವನು ಸುರಾಪಶ್ಚ = ಸುರಾಪಾನವ ಮಾಡಿದವನು ಸ್ತೇಯೀ ಚ = ಸುವರ್ಣವ ಕದ್ದವನು ಗುರುತಲ್ಪಗಃ = ಗುರುಸ್ತ್ರೀಯ ಗಮಿಸಿದವನು ಏತೇ = ಇವರುಗಳು ಮಹಾಪಾತಕಿನಃ = ಮಹಾಪಾಪಿಗಳು ತತ್ಸಂಯೋಗೀ ಚ = ಅವರುಗಳ ಸಂಪ[6]ರ್ಕವ ಮಾಡಿದಾತನು ಪಂಚಮಃ = ಐದನೆಯ ಪಾತಕನು. ||೪೩||

ಯಃ = ಆವನಾನೊಬ್ಬನು. ಅಭಿಜ್ಞಃ ಸನ್ = ಬಲ್ಲವನಾಗಿದ್ದು ಶ್ರೋತೄಣಾಂ = ಕೇಳುವವರುಗಳಿಗೆ ಶಾಂಕರೀಯಂ = ಈಶ್ವರ ಸಂಬಂಧವಹಂಥಾ ಶಾಸ್ತ್ರಂ = ಶಾಸ್ತ್ರ

---

[1] ಪ್ರವಕ್ತಿ (ಕ ಗ ಘ) [2] ವಿಘ್ನಃಸನ್ (ಘ) [3] ಅಪೇಕ್ಷವನು ? (ಖ) [4] ಈ ಭಾಗ (ಚ) ದಲ್ಲಿ ಲುಪ್ತ. [5] (ಕ) ದಲ್ಲಿ ವ್ಯಾಖ್ಯಾನದಲ್ಲಿ ಈ ಎರಡೂ ಪಾಠಗಳಿವೆ. ಎರಡೂ ಅರ್ಥಗಳಿವೆ. ಖ.ಚ. ಗಳಲ್ಲಿ 'ಪ್ರವರ್ತೀ' ಎಂದೇ ಇದೆ. 'ಪ್ರವಕ್ತಿ' ಎಂಬುದಿಲ್ಲ.

[6] ಈ ಭಾಗ (ಚ) ದಲ್ಲಿ ಲುಪ್ತ.

ಗವಾಂ[1]ತೃಷ್ಣಾ[1]ಭಿಭೂತಾನಾಂ ಜಲಾರ್ಥಮುಪಸರ್ಪತಾಮ್
ಯಃ ಸಮಾಚರತೇ ವಿಘ್ನಂ ತಮಾಹುರ್ಬ್ರಹ್ಮಘಾತಕಮ್ ॥೪೫॥

ಪರದೋಷಾನ್ ಪರಿಜ್ಞಾಯ ನೃಪಕರ್ಣೇ ಜಪೇತ್ತು[2]ಯಃ
ಪಾಪೀಯಾನ್ ಪಿಶುನಃ ಕ್ಷುದ್ರಃ ಸ ವೈ ಬ್ರಹ್ಮಹಣಃ ಸ್ಮೃತಃ ॥೪೬॥

ಪಿಶುನಃ ಸರ್ವಲೋಕೇಷು ರಂಧ್ರಾನ್ವೇಷಣತತ್ಪರ [3]
ಉದ್ವೇಗಜನಕಃ ಕ್ರೂರಸ್ತಮಾಹುರ್ಬ್ರಹ್ಮಘಾತಕಮ್ ॥೪೭॥

ಅಧೀತ್ಯ ಯಃ ಶಿವಜ್ಞಾನಂ ಪರಿತ್ಯಜತಿ ಮೂಢಧೀಃ
ಸುರಾಪಾನಸಮಂ ಜ್ಞೇಯಂ ತಸ್ಯ ಪಾತಕಮುತ್ತಮಮ್ ॥೪೮॥

ವನು ತಥಾ=ಹಾಂಗೆ [4]ಕಾವ್ಯಾದಿಕಂ = ಕಾವ್ಯ ಮೊದಲಾಗಿದ್ದಂಥಾ ಅವನು ನ ಶ್ರಾವಯತಿ = ಕೇಳಿಸದೆ ಇಹನು. ಹೇಳನೆಂಬುದರ್ಥ. ತಂ = ಆತನನು ಬ್ರಹ್ಮ-ಘಾತಕಂ=ಬ್ರಹ್ಮ[4]ಹತ್ಯವ ಮಾಡಿದಾತನೆಂದು ಆಹುಃ=ಹೇಳುತ್ತಂವಿಹರು. ॥೪೪॥

ತೃಷ್ಣಾಭಿಭೂತಾನಾಂ=ಬಾಯಾಱುವದ[5]ಱಿಂದ ಮುಂದುಗೆಟ್ಟಂಥಾ ಜಲಾರ್ಥಂ =ಉದಕಕ್ಕೋಸ್ಕರ ಉಪಸರ್ಪತಾಂ=ಬರುತ್ತಂವಿದ್ದಂಥಾ ಗವಾಂ=ಗೋವುಗಳಿಗೆ[5] ಯಃ=ಆವನಾನೊಬ್ಬನು ವಿಘ್ನಂ=ವಿಘ್ನವನು ಸಮಾಚರತೇ=ಮಾಡುತ್ತಂವಿಹನು ತಂ = ಆತನನು ಬ್ರಹ್ಮಘಾತಕಂ = ಬ್ರಹ್ಮಹತ್ಯವ ಮಾಡಿದಾತನೆಂದು ಆಹುಃ= ಹೇಳುತ್ತಂವಿಹರು. ॥೪೫॥

ಯಃ=ಆವನಾನೊಬ್ಬನು ಪರದೋಷಾನ್ = [6]ಪರರ ದೋಷಂಗಳನು ಪರಿ-ಜ್ಞಾಯ=ಅಱಿದು ನೃಪಕರ್ಣೇ=ಅರಸಿನ ಕಿವಿಯಲ್ಲಿ ತು=ವಿಶೇಷವಾಗಿ ಜಪೇತ್ =ಹೇಳುವನು ಸಃ=ಆತನು ಪಾಪೀಯಾನ್=ಪಾಪಿಷ್ಠನು ಪಿಶುನಃ=ದುರ್ಜನನು ಕ್ಷುದ್ರಃ=ಅಲ್ಪನು ಬ್ರಹ್ಮಹಣಃ = ಬ್ರ[6]ಹ್ಮಹತ್ಯಕಾರನೆಂದು ಸ್ಮೃತಃ = ಹೇಳಲು ಪಟ್ಟನು. ॥೪೬॥

ಸರ್ವಲೋಕೇಷು = ಸಮಸ್ತ ಜನರುಗಳಲ್ಲಿ ರಂಧ್ರಾನ್ವೇಷಣತತ್ಪರಃ = ತೆಱಹನಱಸುವಲ್ಲಿ ತಾತ್ಪರ್ಯವನುಳ್ಳಾತನು ಪಿಶುನಃ=ಕೊಂಡೆಯನು ಉದ್ವೇಗ ಜನಕಃ = [7]ಉ[7]ಬ್ಬೆ[7]ಗವ ಹುಟ್ಟಿಸುವಾತನು ಕ್ರೂರಃ = ಕ್ರೂರನಹಂಥಾ ಆತನು ತಂ=ಆತನನು ಬ್ರಹ್ಮಘಾತಕಂ=ಬ್ರ[1]ಹ್ಮಹತ್ಯವ ಮಾಡಿದಾತನನೆಂದು ಆಹುಃ = ಹೇಳುತ್ತಂವಿಹರು. ॥೪೭॥

ಯಃ=ಆವನಾನೊಬ್ಬನು ಶಿವಜ್ಞಾನಂ=ಶಿವಜ್ಞಾನ ಶಾಸ್ತ್ರವನು ಅಧೀತ್ಯ

---

[1] ತೃಷಾ (ಘ) [2] (ಚ) ದಲ್ಲಿ ಉಪ್ತಭಾಗ. [3] (ಚ) ದಲ್ಲಿ ಲುಪ್ತ ಭಾಗ.
[4] ಲುಪ್ತ ಭಾಗ (ಚ). [5] ಲುಪ್ತ ಭಾಗ (ಚ). [6] ಲುಪ್ತ ಭಾಗ (ಚ) [7] ದ್ವೇ (ಕ)

ಅಪ್ರಿಯಂ ಶಿವಭಕ್ತಾನಾಮಭಕ್ಷ್ಯಸ್ಯ ಚ ಭಕ್ಷಣಮ್
ಅಗ್ನಿಹೋತ್ರಪರಿತ್ಯಾಗಃ ಪಂಚಯಜ್ಞಾದಿಕರ್ಮಣಾಮ್ ||೪೯||

[1]ಮಾತಾ[2]ಪಿತೃ[2]ಪರಿತ್ಯಾಗಃ ಕೂಟಸಾಕ್ಷೀ ಸುಹೃದ್ವಧಃ
ವನೇ ನಿರಪರಾಧಾನಾಂ ಪ್ರಾಣಿನಾಂ ಚ ಪ್ರಘಾತನಮ್ ||೫೦||

ಗವಾಂ ಮಾರ್ಗೇ ವನೇ[3]ಚಾಗ್ನಿಂ ಪುರಗ್ರಾಮೇ ಚ ದೀಪಯೇತ್[3]
ಇತಿ ಪಾಪಾನಿ ಘೋ*ರಾಣಿ ಸುರಾಪಾನಸಮಾನಿ ತು ||೫೧||

=[4]ಓದಿ ಮೂಢಧೀಃ=ಮೂರ್ಖಬುದ್ಧಿಯನುಳ್ಳಾತನಾಗಿ ಪರಿತ್ಯಜತಿ=ಬಿಡುತ್ತಾಂ ವಿದ್ವಾನು ತಸ್ಯ=ಆತಂಗೆ ಸುರಾಪಾನಸಮಂ = ಸುರಾಪಾನಕ್ಕೆ ಸಮಾನವಹಂಥಾ ಉತ್ತಮಂ=ಉತ್ಕೃಷ್ಟವಹಂಥಾ ಪಾತಕಂ=ಪಾತಕವೆಂದು ಜ್ಞೇಯಂ = ಅರಿಯಲು ಯೋಗ್ಯವು. ||೪೮||

ಶಿವಭಕ್ತಾನಾಂ=ಶಿವಭಕ್ತರುಗಳಿಗೆ ಅಪ್ರಿಯಂ = ಅಪ್ರಿಯವಾಗಿಯಿರುಹವು ಅ[4]ಭಕ್ಷ್ಯಸ್ಯ ಚ=ಮೆಲಬಾರದಂಥಾದ ಭಕ್ಷಣಂ ಚ=ಮೆಲುಹವು ಪಂಚಯಜ್ಞಾದಿಕರ್ಮಣಾಂ = ಪಂಚಮಹಾಯಜ್ಞ ಮೊದಲಾದ ಕರ್ಮಂಗಳ ಪರಿತ್ಯಾಗಃ = ಬಿಡುಹವು ಅಗ್ನಿಹೋತ್ರ ಪರಿತ್ಯಾಗಃ=ಅಗ್ನಿಹೋತ್ರವ ಬಿಡುಹವು. ||೪೯||

ಮಾತಾ[5]ಪಿತೃಪರಿತ್ಯಾಗಃ = ತಂದೆ ತಾಯಿಗಳ ಬಿಡುಹವು ಕೂಟಸಾಕ್ಷೀ = ಕೂಟಸಾಕ್ಷಿಯ ನುಡಿಹವು ಸುಹೃದ್ವಧಃ=ಬಂಧುಗಳ ಕೊಲುಹವು ವನೇ=ಅರಣ್ಯದಲ್ಲಿ ನಿರಪರಾಧಾನಾಂ = ನಿರಪರಾಧಿಗಳಹಂಥಾ ಪ್ರಾಣಿನಾಂ = ಪ್ರಾಣಿಗಳ ಪ್ರ[5]ಘಾತನಂ ಚ=ಕೊಲುಹವು. ||೫೦||

ಗವಾಂ=ಗೋವುಗಳ ಮಾರ್ಗೇ=ಮಾರ್ಗವಹಂಥಾ ವನೇ = ಅರಣ್ಯದಲ್ಲಿ ಪುರಗ್ರಾಮೇ ಚ=ಪಟ್ಟಣದಲ್ಲಿ ಹಳ್ಳಿಯಲ್ಲಿಯೂ ಅಗ್ನಿಂ ಚ=ಕಿಚ್ಚನು ದೀಪಯೇತ್ =ಇಕ್ಕುವನು ಇತಿ = ಈ ಪ್ರಕಾರದಲ್ಲಿ ಘೋರಾಣಿ = ಭಯಂ[4]ಕರವಹಂಥಾ ಪಾಪಾನಿ = ಪಾಪಂಗಳು ಸುರಾಪಾನಸಮಾನಿ ತು = ಸುರಾಪಾನಕ್ಕೆ ಸಮಾನಂಗಳಹವು.[4] ||೫೧||

---

[1] ಲುಪ್ತ (ಚ). [2] ಪಿತ್ರೋಃ (ಕ). [3] ಗ್ರಾಮೇ ಯಚ್ಚೈವಾಗ್ನಿಃ ಪ್ರದೀಪಯೇತ್ (ಘ)
[4] ಲುಪ್ತ (ಚ). [5] ಲುಪ್ತ (ಚ).

ದೀನಸರ್ವಸ್ವಹರಣಂ ಪರಸ್ತ್ರೀಗಜವಾಜಿನಾಮ್
ಗೋಭೂರತ್ನಸುವರ್ಣಾನಾಮೋಷಧೀನಾಂ ಹರಸ್ಯ ಚ ||೫೨||

ಚಂದನಾಗರುಕರ್ಪೂರಕಸ್ತೂರೀಪಟ್ಟವಾಸಸಾಮ್
ಹಸ್ತನ್ಯಸ್ತಾಪಹರಣಂ ರುಕ್ಮಸ್ತೇಯಸಮಂ ಸ್ಮೃತಮ್ ||೫೩||

ಕನ್ಯಾನಾಂ ವರಯೋಗ್ಯಾನಾಮದಾನಂ ಸದೃಶೇ ವರೇ
ಪುತ್ರಮಿತ್ರಕಳತ್ರೇಷು ಗಮನಂ ಭಗಿನೀಷು ಚ ||೫೪||

ಕುಮಾರೀಸಾಹಸಂ ಘೋರಮಂತ್ಯಜಸ್ತ್ರೀನಿಷೇವಣಮ್
[1]ಸವರ್ಣಾಯಾಶ್ಚ ಗಮನಂ ಗುರುತಲ್ಪಸಮಂ ಸ್ಮೃತಮ್ ||೫೫||

ದೀನಸರ್ವಸ್ವಹರಣಂ = ಒಡವನ ಸರ್ವಸ್ವಾಪಹಾರವ ಮಾಡುಹವು ಪರಸ್ತ್ರೀ ಗಜವಾಜಿನಾಂ = ಪರಸ್ತ್ರೀ ಆನೆ ಕುದುರೆಗಳ ಗೋಭೂರತ್ನ ಸುವರ್ಣಾನಾಂ = ಗೋವು ಭೂಮಿ ರತ್ನ ಸುವರ್ಣಂಗಳ ಓಷಧೀನಾಂ = ಕೆಯಿ ಮೊದಲಾದ ಸಮಸ್ತ ಬೆಳೆಗಳ ಹರಸ್ಯ ಚ = ಅಪಹರಿಸಿಕೊಂಡಾತಂಗೆ. ||೫೨||

ಚಂದನಾಗರುಕರ್ಪೂರಕಸ್ತೂರೀಪಟ್ಟವಾಸಸಾಂ = ಶ್ರೀಗಂಧ ಅಗಿಲು ಕರ್ಪೂರ ಕಸ್ತೂರಿ ಪಟ್ಟಾವಳಿ ವಸ್ತ್ರಂಗಳ ಹರಸ್ಯ = ಅಪಹರಿಸಿದಾತಂಗೆ ಹಸ್ತನ್ಯಸ್ತಾಪಹರಣಂ = ಕೈಯ್ಯಲ್ಲಿ[2]ಕೊಟ್ಟ ಧನವನಪಹರಿಸಿಕೊಳುಹವು ರುಕ್ಮಸ್ತೇಯಸಮಂ = ಸುವರ್ಣ ಸ್ತೇಯಕ್ಕೆ ಸಮಾನವಹಂಥಾ ಪಾತಕವೆಂದು ಸ್ಮೃತಂ = ಹೇಳಲುಪಟ್ಟುತ್ತು. ||೫೩||

ವರಯೋಗ್ಯಾನಾಂ = ವರಂಗೆ ಯೋಗ್ಯವಹಂಥಾ ಕನ್ಯಾನಾಂ = ಕನ್ನಿಕೆಯರುಗಳ ಸದೃಶೇ = ಸಮಾನವಹಂಥಾ ವರೇ = ವರನಲ್ಲಿ ಅದಾನಂ = ಕೊಡದೆ ಇರುಹವು ಪುತ್ರಮಿತ್ರಕಳತ್ರೇಷು = ಪುತ್ರಮಿತ್ರಸ್ತ್ರೀಯರುಗಳಲ್ಲಿ ಭಗಿನೀಷು ಚ = ತಂಗಿಯರುಗಳಲ್ಲಿ ಗಮನಂ = ರಮಿಸುಹವು. ||೫೪||

ಕುಮಾರೀಸಾಹಸಂ = ಮಗಳ ರಮಿಸುಹವು ಘೋರಂ ಭಯಂಕರವಹಂಥಾ ಅಂತ್ಯಜಸ್ತ್ರೀ ನಿಷೇವಣಂ = ಚಾಂಡಾಲಿ ಗಮನವು ಸವರ್ಣಾಯಾಃ = ಬ್ರಾಹ್ಮಣಿತಿಯ ಗಮನಂ ಚ = ರಮಿಸುಹವು. ಗುರುತಲ್ಪಸಮಂ = ಗುರುಪತ್ನಿಯ ರಮಿಸಿದ ಪಾತಕಕ್ಕೆ ಸಮಾನವೆಂದು ಸ್ಮೃತಂ = [3]ಹೇಳಲುಪಟ್ಟುತ್ತು.[3] ||೫೫||

---

[1] ಸು (ಗ) [2] ಕೊಟ್ಟದ್ದ (ಕ) [3] ಹೇಳಲ್ಪಟ್ಟಿತ್ತು (ಕ)

ಮಹಾಪಾತಕತುಲ್ಯಾನಿ ಪಾಪಾನ್ಯುಕ್ತಾನಿ ಯಾನಿ ತು
ತಾನಿ ಪಾತಕಸಂಜ್ಞಾನಿ ತದೂನಮುಪಪಾತಕಮ್ ||೫೬||

ಯಃ ಪೀಡಾಮಾಶ್ರಮಸ್ಥಾನಾಮಾಚರೇದಲ್ಪಿಕಾಮಪಿ
ತದ್ಭೃತ್ಯಪರಿವರ್ಗಸ್ಯ ಪಶುಧಾನ್ಯಧನಸ್ಯ ಚ ||೫೭||

ಅತಿಮಾನೋಽತಿಕೋಪಶ್ಚ ದಾಂಭಿಕತ್ವಂ ಕೃತಘ್ನತಾ
ಅತ್ಯಂತವಿಷಯಾಸಕ್ತಿಃ ಕಾರ್ಪಣ್ಯಂ ಶಾಠ್ಯಮತ್ಸರಮ್ ||೫೮||

ಪರದಾರಾಭಿಗಮನಂ ಸಾಧುಕನ್ಯಾರ್ಥದೂಷಣಮ್
ಪುತ್ರಮಿತ್ರಕಳತ್ರಾಣಾಮಭಾವೇ ಸ್ವಾಮಿನಸ್ತಥಾ ||೫೯||

ಮಹಾಪಾತಕತುಲ್ಯಾನಿ = ಮಹಾಪಾತಕಂಗಳಿಗೆ ಸಮಾನವಹಂಥಾ ಯಾನಿ ಪಾಪಾನಿ = ಆವವು ಕೆಲವು ಪಾಪಂಗಳುಂಟು ತಾನಿ ಪಾತಕಸಂಜ್ಞಾನಿ = ಆ ಪಾತಕಂಗಳ ಹೆಸರುಗಳು ತು = ವಿಶೇಷವಾಗಿ ಉಕ್ತಾನಿ = ನುಡಿಯಲ್ಪಟ್ಟವು. ತದೂನಂ = ಆ ಪಂಚಮಹಾಪಾತಕಂಗಳಿಗೆ ಹೀನವಹಂಥಾದು ಉಪಪಾತಕಂ = ಉಪಪಾತಕವೆಂದು ಹೇಳಲ್ಪಟ್ಟಿತ್ತು. ||೫೬||

ಯಃ = ಆವನಾನೊಬ್ಬಾತನು ಆಶ್ರಮಸ್ಥಾನಾಂ = ಆಶ್ರಮಿಗಳಹಂಥಾ ಅವರುಗಳ ಪಶುಧಾನ್ಯಧನಸ್ಯ = ಗೋವು ಧಾನ್ಯ ಧನಕ್ಕೆ ತದ್ಭೃತ್ಯಪರಿವರ್ಗಸ್ಯ ಚ = ಆ ಆಶ್ರಮಿಗಳ ಸೇವಕವರ್ಗಕ್ಕೆಯೂ ಅಲ್ಪಿಕಾಂ = ಅಲ್ಪಮಾತ್ರವಹಂಥಾ ಪೀಡಾಮಪಿ = ಬಾಧೆಯನು ಆಚರೇತ್ = ಮಾಡುವನು. ||೫೭||

ಅತಿಮಾನಃ = ಅತ್ಯಂತಗರ್ವವು ಅತಿಕೋಪಶ್ಚ = ಅತಿಕೋಪವು ದಾಂಭಿಕತ್ವಂ = ಡಂಬಕತನವು ಕೃತಘ್ನತಾ = ಮಾಡಿದ್ದನಳಿಹವು ಅತ್ಯಂತವಿಷಯಾಸಕ್ತಿಃ = ಅತ್ಯಂತವಾಗಿ ವಿಷಯದಲ್ಲಿ ಲೋಲುಪ್ತಿ[1]ಯಾಗಿರುಹವು[1] ಕಾರ್ಪಣ್ಯಂ = ದೈನ್ಯವೃತ್ತಿಯು ಶಾಠ್ಯಮತ್ಸರಂ = ಶಠೆಯು ಮತ್ಸರವು. ||೫೮||

ಪರದಾರಾಭಿಗಮನಂ = ಪರಸ್ತ್ರೀಯರ ರಮಿಸುಹವು ಸಾಧುಕನ್ಯಾರ್ಥದೂಷಣಂ = ಸಜ್ಜನೆಯಹ ಕನ್ನಿಕೆಯನು ದೂಷಿಸುಹವು ಪುತ್ರಮಿತ್ರಕಳತ್ರಾಣಾಂ = ಪುತ್ರಮಿತ್ರಸ್ತ್ರೀಯರುಗಳ ಅಭಾವೇ = ಉದಾಸೀನದಲ್ಲಿಯು ತಥಾ = ಹಾಗೆ ಸ್ವಾಮಿನಃ = ಒಡೆಯನ ಅಭಾವೇ = ಉದಾಸೀನದಲ್ಲಿಯು ಪಾತಕವಹುದು. ||೫೯||

---

[1] (ಕ) ಇಲ್ಲ.

ಸಹಾಯಾನಾಂ[1]ಚ ಸಂತ್ಯಾಗಃ[1] ಸಾಧುಬಂಧುತಪಸ್ವಿನಾಮ್
ಗವಾಂ ಕ್ಷತ್ರಿಯವೈಶ್ಯಾನಾಂ ಸ್ತ್ರೀಶೂದ್ರಾಣಾಂ ಚ ಘಾತನಮ್

[2]ಶಿವಾಶ್ರಮ[2]ತರೂಣಾಂ ಚ ಪುಷ್ಪಾರಾಮವಿನಾಶನಮ್
ಯಜ್ಞಾರಾಮತಟಾಕಾನಾಂ*ದಾರಾಪತ್ಯಸ*ವಿಕ್ರಯಃ ||೬೧||

ತೀರ್ಥಯಾತ್ರೋಪವಾಸಾನಾಂ ವ್ರತಾಯತನಕರ್ಮಣಾಮ್
ಸ್ತ್ರೀ ಧನಾ[3]ನ್ಯು[3]ಪಜೀವಂತಿ ಸ್ತ್ರೀಭಿರತ್ಯಂತನಿರ್ಜಿತಾಃ ||೬೨||

ಅರಕ್ಷಣಂ ಚ ನಾರೀಣಾಂ ಮದ್ಯಪಸ್ತ್ರೀ ನಿಷೇವಣಮ್
ಋಣಾನಾಮಪ್ರದಾನಂ ಚ [4]ಧಾನ್ಯ[4]ವೃದ್ಧ್ಯುಪಜೀವನಮ್ ||೬೩||

ಸಹಾಯಾನಾಂ ಚ = ಸಂಘಾತಿಗಳ ಸಂತ್ಯಾಗಃ = ಬಿಡುಹವು ಸಾಧುಬಂಧು ತಪಸ್ವಿನಾಂ = ಸಜ್ಜನರು ಬಂಧುಗಳು ತಪಸ್ವಿಗಳ ಗವಾಂ = ಗೋವುಗಳ ಕ್ಷತ್ರಿಯ ವೈಶ್ಯಾನಾಂ = ಕ್ಷತ್ರಿಯ ವೈಶ್ಯರುಗಳ ಸ್ತ್ರೀಶೂದ್ರಾಣಾಂ = ಸ್ತ್ರೀಯರುಗಳ ಶೂದ್ರರುಗಳ ಘಾತನಂ ಚ = ಕೊಲುಹವು. ||೬೦||

ಶಿವಾಶ್ರಮತರೂಣಾಂ = ಶಿವಸ್ಥಾನದಲ್ಲಿಯ ವೃಕ್ಷಂಗಳ ವಿನಾಶನಂ = ಕೆಡಿಸುಹವು ಯಜ್ಞಾರಾಮತಟಾಕಾನಾಂ = ಯಾಗ ತೋಟ[5]ಕೆಱೆ[5]ಗಳ ವಿನಾಶನಂ = ಕೆಡಿಸುಹವು ಪುಷ್ಪಾರಾಮವಿನಾಶನಂ ಚ = ಪುಷ್ಪದ ತೋಟಂಗಳ ಕೆಡಿಸುಹವು ದಾರಾಪತ್ಯಸವಿಕ್ರಯಃ = ಹೆಂಡತಿ ಮಕ್ಕಳು ಸಹಿತವಾಗಿ ವಿಕ್ರಯಃ = ಮಾಱುಹವು. ||೬೧||

ತೀರ್ಥಯಾತ್ರೋಪವಾಸಾನಾಂ = ತೀರ್ಥಯಾತ್ರೆ ಉಪವಾಸಂಗಳ ವ್ರತಾಯತನಕರ್ಮಣಾಂ = ವ್ರತಂಗಳು ಬಹಳವಹ ಸತ್ಕರ್ಮಂಗಳ ವಿಕ್ರಯಃ = ಮಾಱುಹವು ಸ್ತ್ರೀಧನಾನಿ = ಸ್ತ್ರೀಧನಂಗಳನು ಕುಱುತು ಉಪಜೀವಂತಿ = ಬದುಕುತ್ತಂವಿಹರು. ಸ್ತ್ರೀಭಿಃ = ಸ್ತ್ರೀಯರುಗಳಿಂದ ಅತ್ಯಂತ[6]ನಿರ್ಜಿತಾಃ = ಅತ್ಯಂತವಾಗಿ ಸೋಲಲ್ಪಟ್ಟವರುಗಳು. ಕಾಮುಕರು ಎಂಬುದರ್ಥ. ||೬೨||

ನಾರೀಣಾಂ = ಸ್ತ್ರೀಯರುಗಳ ಅರಕ್ಷಣಂ ಚ = ರಕ್ಷಿಸದೆಯಿರುಹವು ಮದ್ಯಪಸ್ತ್ರೀನಿಷೇವಣಂ = ಮದ್ಯಪಾನಿಯಹಂಥಾ ಸ್ತ್ರೀಯ ರಮಿಸುಹವು ಋಣಾನಾಂ = ಸಾಲಂಗಳ ಅಪ್ರದಾನಂ ಚ = ಕೊಡದೆಯಿರುಹವು ಧಾನ್ಯವೃದ್ಧ್ಯುಪಜೀವನಂ = ಧಾನ್ಯಂಗಳ ಬಡ್ಡಿಯಿಂದ ಬದುಕುಹವು. ||೬೩||

---

[1] ಪರಿತ್ಯಾಗಃ (ಕ) ಮೂಲಪಾಠ. 'ಚಸಂತ್ಯಾಗಃ' ಕ–ವ್ಯಾಖ್ಯಾನಪಾಠ. [2] ಶಿವಾರಾಮ (ಕ) ವ್ಯಾಖ್ಯಾನಪಾಠ. * ದಾರಾಪತ್ಯಸ್ಯ (ಕ) ಮೂಲಪಾಠ. ವ್ಯಾಖ್ಯಾನದಲ್ಲಿ 'ಸಹಿತವಾಗಿ' ಎಂದಿದೆ. [3] ದು (ಘ) [4] ಧಾನ್ಯಂ (ಘ) [5] ಕಟ್ಟೆ (ಕ) [6] ವ (ಕ) ವ್ಯಾಖ್ಯಾಪಾಠ.

ನಿಂದಿತಾಚ್ಚ [1]ಧನಾದಾನಮಪಣ್ಯಾನಾಂ ಚ [1]ವಿಕ್ರಯಃ ||೬೪||

ವಿಷಮಾರಣಯಂತ್ರಾಣಾಂ ಪ್ರಯೋಗೋ ಮೂಲಕರ್ಮಣಾಮ್
ಉಚ್ಚಾಟನಾಭಿ[2]ಚಾರಶ್ಚ[2] [3]ರಾಗದ್ವೇಷಣಕಕ್ರಿಯಾಃ[3] ||೬೫||

ಜಿಹ್ವಾಕಾಮೋಪಭೋಗಾರ್ಥಂ ಯಸ್ಯಾರಂಭಸ್ಸ್ವಕರ್ಮಸು
ಮೂಲ್ಯೇನಾಧ್ಯಾಪಯೇದ್ಯಸ್ತು ಮೂಲ್ಯೇನಾಧೀಯತೇ ಚ ಯಃ

[4]ವ್ರಾತ್ಯತಾ[4] [5]ವ್ರತಸಂತ್ಯಾಗಃ ಸರ್ವಾಕರನಿಷೇವಣಮ್[5]
ಅಸಚ್ಛಾಸ್ತ್ರಾ[6]ಭಿ[6]ಗಮನಂ ಶುಷ್ಕತರ್ಕಾವಲಂಬನಮ್ ||೬೭||

ನಿಂದಿತಾತ್ = ನಿಂದೆಯ ಹೊತ್ತವನ ದೆಸೆಯಿಂದ ಧನಾದಾನಂ ಚ = ಧನವ ತೆಗೆದುಕೊಳುಹವು ಅಪಣ್ಯಾನಾಂ = ಅಂಗಡಿಯ ಸಂಬಂಧವಲ್ಲದೆಯಿದ್ದ ದ್ರವ್ಯಂಗಳ ವಿಕ್ರಯಶ್ಚ = ಮಾಱುಹವು ||೬೪||

ವಿಷಮಾರಣಯಂತ್ರಾಣಾಂ = ವಿಷವನಿಕ್ಕುಹ ಮಾರಣಯಂತ್ರಂಗಳಹಂಥಾ ಮೂಲಕರ್ಮಣಾಂ = ಮೊದಲಾದ ಕರ್ಮಂಗಳ ಪ್ರಯೋಗಃ = ಪ್ರಯೋಗವ ಮಾಡುಹ ಉಚ್ಚಾಟನಾಭಿಚಾರಶ್ಚ = ಉಚ್ಚಾಟನವು ಅಭಿಚಾರಕರ್ಮವು ಅಭಿಚಾರ ವೆಂದೆಡೆ ಮಾಟವಮಾಡುಹವೆಂಬುದರ್ಥ. ರಾಗದ್ವೇಷಣಕಕ್ರಿಯಾಃ = ರಾಗದ್ವೇಷಂ ಗಳ ಕ್ರಿಯೆಗಳು. ||೬೫||

ಸ್ವಕರ್ಮಸು = ತನ್ನ ಕ್ರಿಯೆಗಳಲ್ಲಿ ಆರಂಭಃ = ಉದ್ಯೋಗವನುಳ್ಳಂಥಾ ಯಸ್ತು = ಆವನಾನೊಬ್ಬನು ಜಿಹ್ವಾಕಾಮೋಪಭೋಗಾರ್ಥಂ = ಜಿಹ್ವೆಯ ಬಯಕೆಯ ಭೋಗಕ್ಕೋಸ್ಕರ ಯಸ್ಯ = ಆವನಾನೊಬ್ಬಾತನ ಮೂಲ್ಯೇನ = ಜೀವಿತದಿಂದ ಅಧ್ಯಾಪಯೇತ್ = ವೇದವ ಹೇಳುವನು ಯಃ = ಆವನಾನೊಬ್ಬನು ಮೂಲ್ಯೇನ = ಜೀವಿತದಿಂದ ಅಧೀಯತೇ = ಓದುತ್ತಂ ಇಹನು. ||೬೬||

ವ್ರಾತ್ಯತಾ = ಉಪನಯನಾದಿ* ಕರ್ಮವಿಲ್ಲದಾತನು ವ್ರತಸಂತ್ಯಾಗಃ = ವ್ರತವ ಬಿಡುಹವು. ಸರ್ವಾಕರನಿಷೇವಣಂ = ಎಲ್ಲಾ ಠಾವಿನಲ್ಲಿಯೂ ಇರುಹವು. ಅಸಚ್ಛಾಸ್ತ್ರಾ ಭಿಗಮನಂ = ಅಲ್ಲದ ಶಾಸ್ತ್ರಂಗಳಲ್ಲಿ ತಾತ್ಪರ್ಯವಾಗಿ ಇಹವು. ಶುಷ್ಕತರ್ಕಾವಲಂಬನಂ = ಶುಷ್ಕತರ್ಕವನಾಶ್ರಯಿಸುಹವು. ||೬೭||

---

[1] ಧನಾದಾನಂ ಪುಣ್ಯಾನಾಂ ಕೂಟವಿಕ್ರಯಃ (ಘ) ?

[2] ಚಾತಾ ಚ (ಘ). [3] ರಾಗದ್ವೇಷಣ ವಿಕ್ರಿಯಾಃ (ಖ. ಗ. ಚ) ಸಕ್ರಿಯಾಃ (ಕ)

[4] ವ್ರಾತ್ಯತ್ವಂ (ಘ). [5] ವ್ರತಸಂತ್ಯಾಗಶ್ಚಾನ್ಯಾಚಾರನಿಷೇವಣಂ (ಘ) [6] ಧಿ (ಖ)

* ಕರ್ಮವಿಲ್ಲದಿರುಹವು, ಎಂಬರ್ಥ ಸೂಕ್ತ

ಉತ್ಸನ್ನಪಿತೃದೇವೇಜ್ಯಾಃ ಸ್ವಕರ್ಮತ್ಯಾಗಿನಸ್ತಥಾ
ದುಶ್ಶೀಲಾ ನಾಸ್ತಿಕಾಃ ಪಾಪಾಃ [1]ಸದಸಚ್ಛೂನ್ಯವಾದಿನಃ ||೬೮||

[2]ಪರ್ವಕಾಲೇ ದಿವಾ ಚಾಪ್ಸು ವಿಯೋನೌ ಪಶುಯೋನಿಷು
ರಜಸ್ವಲಾಯಾ ಯೋನೌ ಚ ಮೈಥುನಂ ಯಃ ಸಮಾಚರೇತ್ ||೬೯||

ಸ್ತ್ರೀಪುತ್ರಮಿತ್ರಸಂಪ್ರೀತೇರಾಶಾಯಾಶ್ಛೇದಕಾಶ್ಚ ಯೇ
ಜನಸ್ಯಾಪ್ರಿಯವಕ್ತಾರಃ ಕ್ರೂರಾಃ ಸಮಯಭೇದಿನಃ ||೭೦||

ಭೇತ್ತಾ ತಟಾಕವಪ್ರಾಣಾಂ ಸಂಕ್ರಮಾ[3]ಣಾಂ ರಥಸ್ಯ ಚ
ಏಕಪಙ್ಕ್ತಿಸ್ಥಿತಾನಾಂ ಚ ಪಾಕಭೇದಂ ಕರೋತಿ ಯಃ ||೭೧||

ಉತ್ಸನ್ನಪಿತೃದೇವೇಜ್ಯಾಃ = ಬಿಡಲುಪಟ್ಟ ಪಿತೃಯಜ್ಞ ದೇವಯಜ್ಞವನುಳ್ಳಂಥಾ ಅವರುಗಳು. ತಥಾ = ಹಾಂಗೆ ಸ್ವಕರ್ಮತ್ಯಾಗಿನಃ = ತನ್ನ ಕರ್ಮವ ಬಿಟ್ಟಂಥಾವರುಗಳು ದುಶ್ಶೀಲಾಃ = ದುಶ್ಶೀಲರುಗಳು ನಾಸ್ತಿಕಾಃ = ಸರ್ವವೂ ಹುಸಿಯೆಂಬವರುಗಳು ಸದಸಚ್ಛೂನ್ಯವಾದಿನಃ = ಒಳ್ಳಿತ್ತು ಹೊಲ್ಲೆಹವು ಇಲ್ಲವೆಂದು ನುಡಿವವರುಗಳು ಪಾಪಾಃ = ಪಾಪಿಗಳು. ||೬೮||

ಪರ್ವಕಾಲೇ = ಅಷ್ಟಮೀ ಚತುರ್ದಶೀ ಪೂರ್ಣಿಮಾ ಅಮಾವಾಸೆಗಳಲ್ಲಿ ದಿವಾ = ಹಗಲು ಅಪ್ಸು = ಉದಕಂಗಳಲ್ಲಿ ವಿಯೋನೌ = ಯೋನಿಯಲ್ಲದೆಯಿದ್ದ ಠಾವಿನಲ್ಲಿ ಪಶುಯೋನಿಷು = ಪಶುಗಳ ಯೋನಿಗಳಲ್ಲಿ ರಜಸ್ವಲಾಯಾಃ = ಸೂತಕಗೊಂಡಾಯಕನ ಯೋನೌ = ಯೋನಿಯಲ್ಲಿಯೂ ಮೈಥುನಂ = ಮೈಥುನವನು ಯಃ = ಆವನಾನೊಬ್ಬನು ಸಮಾಚರೇತ್ = ಮಾಡುವನು. ||೬೯||

ಯೇ ಚ = ಆರು ಕೆಲಂಬರು ಸ್ತ್ರೀಪುತ್ರಮಿತ್ರಸಂಪ್ರೀತೇಃ = ಸ್ತ್ರೀಪುತ್ರಮಿತ್ರರುಗಳಿಗೆ ಇಷ್ಟವಹಂಥಾ ಆಶಾಯಾಃ = ಆಸೆಯ ಛೇದಕಾಃ = ಕೆಡಿಸುವಂಥಾ ಅವರುಗಳು ಜನಸ್ಯ = ಜನಕ್ಕೆ ಅಪ್ರಿಯವಕ್ತಾರಃ = ಪ್ರಿಯವಲ್ಲದಂಥಾದನು ನುಡಿವವರುಗಳು ಕ್ರೂರಾಃ = ಕ್ರೂರರುಗಳು ಸಮಯಭೇದಿನಃ = ವೇಳೆಯನು ಭೇದಿಸುವಂಥಾ ಅವರುಗಳು. ||೭೦||

ತಟಾಕವಪ್ರಾಣಾಂ = ಕೆಱೆಯೇರಿಗಳ ಭೇತ್ತಾ = ಒಡೆವಾತನು ರಥಸ್ಯ = ಬಂಡಿಯ ಸಂಕ್ರಮಾ[3]ಣಾಂ ಚ = (ಸೇತುವೆಗಳ?) (ಭೇತ್ತಾ = ಹೊಡೆದುಹಾಕುವಾತನು) ಮುರಿಹವು ಯಃ = ಆವನಾನೊಬ್ಬನು ಏಕಪಙ್ಕ್ತಿಸ್ಥಿತಾನಾಂ ಚ = ಒಂದೇ

[1] ಸದಾ ಚಾಸತ್ಯವಾದಿನಃ (ಘ) [2] ಸ (ಘ) [3] ಣಂ (ಕ)

ಇತ್ಯೇತೈಃ ಸ್ತ್ರೀನರಾಃ ಪಾಪೈರುಪಪಾತಕಿನಃ ಸ್ಮೃತಾಃ
ಯುಕ್ತಾಸ್ತದೂನಕೈಃ ಕ್ಷುದ್ರೈಃ ಪಾಪೈಃ ಪಾಪನರಾಃ ಸ್ಮೃತಾಃ ॥೭೨॥

ಪರ ಶ್ರೀ[1]ಯಾಭಿತಪ್ಯಂತೇ ಯೇ ಪರದ್ರವ್ಯಸೂಚಕಾಃ
ದ್ರವ್ಯಾಪಹಾರನಿರತಾಃ ಪರಸ್ತ್ರೀನರದೂಷಕಾಃ ॥೭೩॥

ಗೋಷ್ಠಾಗ್ನಿಜಲರಥ್ಯಾಸು ತರುಚ್ಛಾಯಾನಗೇಷು ಚ
ಯೇ ತ್ಯಜಂತಿ ಪುರೀಷಾದ್ಯಮಾರಾಮಾಯತನೇಷು ಚ ॥೭೪॥

ಹಂತಿಯಲ್ಲಿದ್ದಂಥಾ ಅವರುಗಳಿಗೆ ಪಾಕಭೇದಂ ಚ = ಪಾಕಭೇದವನು ಕರೋತಿ = ಮಾಡುತ್ತಿಂವಿಹನು. ॥೭೧॥

ಇತಿ = ಈ ಪ್ರಕಾರದಲ್ಲಿ ಏತೈಃಪಾಪೈಃ = ಈ ಪಾಪಗಳಿಂದ ಸ್ತ್ರೀನರಾಃ = ಹೆಂಗೂಸು ಗಂಡುಗೂಸುಗಳು ಉಪಪಾತಕಿನಃ = ಉಪಪಾತಕಿಗಳೆಂದು ಸ್ಮೃತಾಃ = ಹೇಳಲುಪಟ್ಟರು. ತದೂನಕೈಃ = ಆ ಪಾಪಂಗಳಿಗೆ ಕೊಱತೆಯುಹಂಥಾ ಕ್ಷುದ್ರೈಃ = ಅಲ್ಪವಹಂಥಾ ಪಾಪೈಃ = ಪಾಪಂಗಳಿಂದ ಯುಕ್ತಾಃ = ಕೂಡಲುಪಟ್ಟವರುಗಳು ಪಾಪನರಾಃ = ಪಾಪಿಮನುಷ್ಯರುಗಳೆಂದು ಸ್ಮೃತಾಃ = ಹೇಳಲುಪಟ್ಟರು* ॥೭೨॥

ಯೇ = ಆರು ಕೆಲಬರು [2]ಪರಶ್ರಿಯಾ = ಪರರ ಸಿರಿಯಿಂದ[2] ಅಭಿತಪ್ಯಂತೇ = ಸಂತಾಪಿಸುತ್ತಿಂವಿಹರು ಪರದ್ರವ್ಯಸೂಚಕಾಃ = ಪರರ ದ್ರವ್ಯವಿಷ್ಟುಯೆಂದು ಹೇಳುವವರುಗಳು ದ್ರವ್ಯಾಪಹಾರನಿರತಾಃ = ಪರದ್ರವ್ಯವನಪಹರಿಸುವಲ್ಲಿ ಇಚ್ಛೆಯನುಳ್ಳವರುಗಳು ಪರಸ್ತ್ರೀನರದೂಷಕಾಃ = ಪರಸ್ತ್ರೀಯನೂ ಮನುಷ್ಯರುಗಳನೂ ನಿಂದಿಸುವವರುಗಳು. ॥೭೩॥

ಯೇ = ಆರು ಕೆಲಬರು ಗೋಷ್ಠಾಗ್ನಿಜಲರಥ್ಯಾಸು = ಹಟ್ಟಿ ಅಗ್ನಿ ಜಲ ಬೀದಿಗಳಲ್ಲಿ ತರುಚ್ಛಾಯಾನಗೇಷು ಚ = ಮರದ ನೆಳಲಲ್ಲಿ ಪರ್ವತಂಗಳಲ್ಲಿಯು ಆರಾಮಾಯತನೇಷು ಚ = ತೋಟಂಗಳಲ್ಲಿ ಗೃಹಂಗಳಲ್ಲಿಯು ಪುರೀಷಾದ್ಯಂ = ಮಲ ಮೊದಲಾಗಿದ್ದಂಥಾ ಅವನು ತ್ಯಜಂತಿ = ಬಿಡುತ್ತಿಂವಿಹೆರು. ॥೭೪॥

---

1 ಸ್ತ್ರಿ (ಕ) 2 ಪರಸ್ತ್ರಿಯಾ = ಪರಸತಿಯಿಂದ (ಕ) ವ್ಯಾಖ್ಯಾ

* ಈ ಶ್ಲೋಕಾನಂತರ (ಘ) ದಲ್ಲಿ ಮಾತ್ರ —

ಯೇ ಗೋಬ್ರಾಹ್ಮಣಕನ್ಯಾನಾಂ ಸ್ವಾಮಿಮಿತ್ರತಪಸ್ವಿನಾಮ್ ।
ಅಂತರಾಯಂತಿ ಕಾರ್ಯೇಷು ತೇ ಸ್ಮೃತಾ ನಾರಕಾ ನರಾಃ ॥ (ಘ)

ಎಂಬ ಶ್ಲೋಕ ಬಂದಿದೆ. ಉಳಿದ ಮಾತೃಕೆಗಳಲ್ಲಿ ಬಂದಿಲ್ಲ.

[1]ಕೇಳಿಶೀಲಾ[1]ಭುಜಂಗಾಶ್ಚ ರಂಧ್ರಾನ್ವೇಷಣತತ್ಪರಾಃ
ವಂಶೇ[2]ಷ್ಟ[2]ಕಾಶಿಲಾಕಾಷ್ಠೈಃ ಶ್ವಭ್ರೈಃ ಶಂಕುಭಿರೇವ [3]ವಾ[3]
ಯೇ ಮಾರ್ಗಮುಪರುಂಧಂತಿ ಪರಸೀಮಾಂ ಹರಂತಿ ಚ ||೭೫||

ಕೂಟಶಾಸನಕರ್ತಾರಃ ಕೂಟಕರ್ಮರತಾ ನರಾಃ
ಕೂಟಯುದ್ಧಾ[4]ಕ್ಷ[4]ಶಸ್ತ್ರಾಶ್ಚ ಯೇ ಕೂಟವ್ಯವಹಾರಿಣಃ ||೭೬||

ನಿರ್ದಯೋಽತೀವ ಭೃತ್ಯೇಷು ಪಶೂನಾಂ ದಮ[5]ಕ[5]ಶ್ಚ ಯಃ
ಮಿಥ್ಯಾಪ್ರವದತೋ ವಾಚಮಾಕರ್ಣಯತಿ ಯಃ ಶನೈಃ ||೭೭||

ನಿಯಮಾನ್ ಸ್ವಯಮಾದಾಯ ಯೇ ತ್ಯಜಂತ್ಯಜಿತೇಂದ್ರಿಯಾಃ
ಪ್ರವ್ರಜ್ಯಾವಸಿತಾ ಯೇ ಚ ರಹಸ್ಯಾನಾಂ ಚ ಭೇದಕಾಃ ||೭೮||

ಕೇಳಿಶೀಲಾಃ = ಕ್ರೀಡಾಶೀಲರಹಂಥಾ ಅವರುಗಳು ಭುಜಂಗಾಶ್ಚ = ಸೂಳೆಗರು ರಂಧ್ರಾನ್ವೇಷಣತತ್ಪರಾಃ = ತೆಱಹು ಮಱಹನಱಸುವಲ್ಲಿ ಇಚ್ಛೈಸುವಂಥಾ ಅವರುಗಳು ಯೇ = ಆರು ಕೆಲಬರು ವಂಶೇಷ್ಟಕಾಶಿಲಾಕಾಷ್ಠೈಃ = ಬಿದಿರು ಇಟ್ಟಗೆ ಕಲ್ಲು ಕೊರಡುಗಳಿಂದ ಶ್ವಭ್ರೈಃ = ಕುಳಿಗಳಿಂದ ಶಂಕುಭಿರೇವ ವಾ = ದಸಿಗಳಿಂದವೆ ಮಾರ್ಗಂ = ದಾರಿಯನು ಉಪರುಂಧಂತಿ = ಹೆರಹುತ್ತಿಹರು ಪರಸೀಮಾಂ ಚ = ಪರರ ಸೀಮೆಯನು ಹರಂತಿ ಚ = ಅಪಹರಿಸುತ್ತಿಹರೂ. ||೭೫||

ಕೂಟಶಾಸನಕರ್ತಾರಃ = ನೆರವಿಯಲ್ಲಿ ಶಿಕ್ಷೆಯ ಮಾಡುವಂಥಾ ಅವರುಗಳು ಕೂಟಕರ್ಮರತಾಃ = ಎಲ್ಲರೂ ಕೂಡಿ ದುಷ್ಕರ್ಮದಲ್ಲಿ ತಾತ್ಪರ್ಯವನುಳ್ಳಂಥಾ ಅವರುಗಳು ಯೇ ನರಾಶ್ಚ = ಆರು ಕೆಲಬರು ನರರುಗಳು ಕೂಟಯುದ್ಧಾಕ್ಷಶಸ್ತ್ರಾಃ = ಕೂಟದ ಕಾ[6]ಳೆ[6]ಗದಲ್ಲಿ ರಥ ಶಸ್ತ್ರಂಗಳಿಂದ ಪ್ರಯೋಗಿಸುವವರುಗಳು ಕೂಟವ್ಯವಹಾರಿಣಃ = ಹುದುವ್ಯವಹಾರಿಗಳು. ||೭೬||

ಯಃ = ಆವನಾನೊಬ್ಬನು ಭೃತ್ಯೇಷು = ಸೇವಕರುಗಳಲ್ಲಿ ಅತೀವ ನಿರ್ದಯಃ = ಅತ್ಯಂತ ದಯೆಯಿಲ್ಲದಾತನಹನು ಪಶೂನಾಂ = ಪಶುಗಳ ದಮಕಃ = ಹೊಯ್ದವನು ಮಿಥ್ಯಾಪ್ರವದತಃ = ಮಿಥ್ಯೆಯಿಂದ ನುಡಿವವನ ವಚನಂ = ವಾಕ್ಯವನು ಯಃ = ಆವನಾನೊಬ್ಬನು ಶನೈಃ = ಮೆಲ್ಲನೆ ಆಕರ್ಣಯತಿ = ಕೇಳುತ್ತಿಹನೂ ||೭೭||

ಯೇ = ಆರು ಕೆಲಬರು ಅಜಿತೇಂದ್ರಿಯಾಃ = ಜಿತೇಂದ್ರಿಯರಲ್ಲದಂಥಾ ಸಂಸಾರಿಗಳು ನಿಯಮಾನ್ = ನಿಯಮಂಗಳನು ಸ್ವಯಂ = ತಾವೇ ಆದಾಯ = ಮಾಡಿಕೊಂಡು

---

[1] ಕೃತಕೇಳಿ (ಘ). ಕೃತಲೀಲಾ (ಗ) [2] ಷ್ಠಿ (ಘ) [3] ಚ (ಘ) [4] ಸ್ನ (ಘ) ಸ್ನಶಸ್ತ್ರಾಶ್ಚ (ಖ ಗ) ಕ್ಷಶಾಸ್ತ್ರಶ್ಚ (ಚ) [5] ನ (ಘ) [6] ಳ (ಕ)

ಯೇ ತಾಡಯಂತಿ ಗಾಶ್ಚೈವ ಶಪಂತೇ ಚ ಮುಹುರ್ಮುಹುಃ
ದುರ್ಬಲಾನ್ನ ಚ ಪುಷ್ಣಂತಿ ಪ್ರನಷ್ಟಾನ್ ಪ್ರದ್ವಿಷಂತಿ ಚ ||೭೯||

ಪೀಡಯಂತ್ಯತಿಭಾರೇಣ ಸದಾ ತಾನ್ವಾಹಯಂತಿ ಚ
[1]ಸಾರ್ಥಯಾನಾಚ್ಚ ಪರತಃ ಸ[ಂ]ಯುಕ್ತಾನ್ನ [ವಿ]ಯುಂಜತೇ[1] ||೮೦||

ಯೇ ಭಗ್ನಕ್ಷತರೋಗಾರ್ತಾ ಗಾಃ ಪರಂ ಕ್ಷುಧಿತಾಽಽತುರಾಃ
ನ ಪಾಲಯಂತಿ ಯತ್ನೇನ ತೇ ಗೋಘ್ನಾ ನಾರಕಾಃ ಸ್ಮೃತಾಃ ||೮೧||

ತ್ಯಜಂತಿ = ಬಿಡುತ್ತಂವಿಹರು ಪ್ರವ್ರಜ್ಯಾವಸಿತಾಃ = ತೊಟ್ಟನೆ ತೊಳಲುವ ಉದ್ಯೋಗವನುಳ್ಳವರುಗಳಾಗಿ ಯೇ ಚ = ಆರು ಕೆಲಬರು ರಹಸ್ಯಾನಾಂ = ಏಕಾಂತಂಗಳ ಭೇದಕಾಶ್ಚ = ಭೇದಿಸುವಂಥಾ ಅವರುಗಳೂ ||೭೮||

ಯೇ = ಆರು ಕೆಲಬರು ಗಾಶ್ಚೈವ = ಗೋವುಗಳನೆ ತಾಡಯಂತಿ = ಹೊಯ್ವುತ್ತಂವಿಹರು ಮುಹುರ್ಮುಹುಃ = ಅಡಿಗಡಿಗೆ ಶಪಂತೇ = ಬೈವುತ್ತಂವಿಹರು ದುರ್ಬಲಾನ್ = ಬಡವುಗಳನು ನಪುಷ್ಣಂತಿಚ = ಪೋಷಿಸುತ್ತಂವಿರರು. ಪ್ರನಷ್ಟಾನ್ = ನಷ್ಟವಾದಂಥಾ ಅವರುಗಳನು ಪ್ರದ್ವಿಷಂತಿ ಚ = ಅಪ್ರೀತಿಯನು ಮಾಡುತ್ತಿಹರೂ ||೭೯||

ತಾನ್ = ಆ ಬಡವುಗಳನು ಸದಾ = ಎಲ್ಲಾಗವು ಪೀಡಯಂತಿ = ಬಾಧಿಸುತ್ತಂವಿಹೆರು. ಅತಿಭಾರೇಣ ಚ = ಅತ್ಯಂತ ಭಾರದಿಂದವು ವಾಹಯಂತಿ = ಹೊಱಿಸುತ್ತಂವಿಹರು [ಹೊರಿಸಿ ನಡಸುವರು]. ಪರತಃ = ಪರರೊಡನೆ ಸಾರ್ಥಯಾನಾತ್ = ಸಂಘಾತಿಗಳಾಗಿ ವರ್ತಿಸುವವರ [ಒಟ್ಟಾಗಿ ಎಣೆಯಂತೆ ಕಟ್ಟಿ ನಡೆಸುವುದರ] ದೆಸೆಯಿಂದ ಸ[ಂ]ಯುಕ್ತಾಂಶ್ಚ = [ಕಟ್ಟಿದವುಗಳನ್ನು] ಕೂಡಿದವರುಗಳಾಗಿಯು (?) ನ [ವಿ] ಯುಂಜತೇ = [ಬಿಚ್ಚಿ ಬಿಡುವುದಿಲ್ಲ] ಕೂಡದವರುಗಳಾಗಿರುತ್ತಂವಿಹೆರು (?).

['ಸಾರ್ಥಯಾಮಾಚ್ಚ' ಎಂಬ ಪಾಠವಿಟ್ಟುಕೊಂಡರೆ, "ಸಾರ್ಥಯಾಮಾತ್ = ಒಂದೂವರೆ ಜಾವಕ್ಕಿಂತಲೂ ಪರತಶ್ಚ = ಹೆಚ್ಚಾಗಿ ಸಂಯುಕ್ತಾನ್ = ಕೆಲಸಕ್ಕೆ ಕಟ್ಟಿದವುಗಳನ್ನು ನ ವಿಯುಂಜತೇ ಚ = ಬಿಡುವುದಿಲ್ಲವೋ" ಹೀಗಿರಬೇಕೆಂದು ಪ್ರಸಂಗಾನುಸಾರಿಯಾಗಿ ತೋರುತ್ತದೆ.] ||೮೦||

ಯೇ = ಆರು ಕೆಲಬರು ಭಗ್ನಕ್ಷತರೋಗಾರ್ತಾಃ = ಕೈ ಕಾಲು ಕೋಡು ಮುಱಿದ ಘಾಯವಾದ ರೋಗದಿಂದ ಕ್ಲೇಶಗೊಳುತ್ತಂವಿದ್ದಂಥಾ ಪರಂ = ಉತ್ಕೃಷ್ಟ

---

[1] ಎಲ್ಲಾ ಪ್ರತಿಗಳ ಮೂಲ ಮತ್ತು ವ್ಯಾಖ್ಯಾನ ಪಾಠ— 'ಸಾರ್ಥಯಾಮಾಚ್ಚ ಪರತಃ ಸಂಯುಕ್ತಾನ್ನ ಚ ಯುಂಜತೇ' ಎಂದಿದೆ. [ ] ಈ ಕಂಸಪಾಠ ಕೊಟ್ಟಿರುವ ಪಾಠ. ಸಂಯುತಾನ್ನ ಚ ಯುಂಜತೇ (ಘ).

ವೃಷಾಣಾಂ ವೃಷಣೌ ಯೇ ಚ ಪಾಪಿಷ್ಠಾಃ [1]ಶಾತಯಂತಿ[1] ಚ
ವಾಹಯಂತಿ ಚ ಗಾಂ ವಂಧ್ಯಾಂ ಮಹಾನಾರಕಿಣೋ ನರಾಃ ||೮೨||

ಯಃ ಸೇವೇತ ದ್ವಿಜಃ ಶೂ[2]ದ್ರಂ[2] ಯಶ್ಚಾಘ್ರಾತಿ [3]ಸುರಾಂ ದ್ವಿಜಃ[3]
ಯೇ ಪಾಪನಿರತಾಃ ಕ್ರೂರಾಃ ಯೇ ಚ ಹಿಂಸಾಪ್ರಿಯಂವದಾಃ ||೮೩||

ಯಸ್ತು ಭಾರ್ಯಾಪುತ್ರಮಿತ್ರಬಾಲವೃದ್ಧಕೃಶಾಂಸ್ತಥಾ
ಭೃತ್ಯಾನತಿಥಿಬಂಧೂಂಶ್ಚ ತ್ಯಕ್ತ್ವಾಽಶ್ನಾತಿ ಬುಭುಕ್ಷಿತಾನ್ ||೮೪||

ವಾಗಿ ಕ್ಷುಧಿತಾತುರಾಃ = ಹಸಿವಿನಿಂದ ಮುಂದುಗೆಟ್ಟಂಥಾ ಗಾಃ = ಗೋವುಗಳನು ಯತ್ನೇನ = ಪ್ರಯತ್ನದಿಂದ ನ ಪಾಲಯಂತಿ = ರಕ್ಷಿಸುತ್ತಿಂವಿರರು, ತೇ = ಅವರುಗಳು ಗೋಘ್ನಾಃ = ಗೋಹತ್ಯವ ಮಾಡಿದವರುಗಳು ನಾರಕಾಃ = ನರಕಿಗಳೆಂದು ಸ್ಮೃತಾಃ = ಹೇಳಲುಪಟ್ಟರು. ||೮೧||

ವೃಷಾಣಾಂ = ಹೋರಿಗಳ ವೃಷಣೌ ಚ = ಅಂಡಂಗಳನು ಯೇ ಚ = ಆರು ಕೆಲಬರು ಶಾತಯಂತಿ = ತಾಡಿಸುತ್ತಂವಿಹರು ತೇ ನರಾಃ = ಆ ನರರುಗಳು ಪಾಪಿಷ್ಠಾಃ = ಪಾಪಿಗಳು. ವಂಧ್ಯಾಂ = ಗೊಡ್ಡಾದಂಥಾ ಗಾಂ ಚ = ಆಕಳನು ವಾಹಯಂತಿ = ಹೇಱುತ್ತಿದ್ದಾರು [ತೇ ನರಾಃ — ಆ ನರರು] ಮಹಾಪಾಪಿಗಳು. ||೮೨||

ಯಃ = ಆವನಾನೊಬ್ಬ ದ್ವಿಜಃ = ಬ್ರಾಹ್ಮಣನು ಶೂದ್ರಂ = ಶೂದ್ರನನು ಸೇವೇತ = ಸೇವೆಯ ಮಾಡುವವನು, ಯಃ = ಆವನಾನೊಬ್ಬ ದ್ವಿಜಶ್ಚ = ಬ್ರಾಹ್ಮಣನು ಸುರಾಂ = ಮದ್ಯವನು ಆಘ್ರಾತಿ = ಆಘ್ರಾಣಿಸುತ್ತಿಹನು. ಯೇ = ಆರು ಕೆಲಬರು ಪಾಪನಿರತಾಃ = ಪಾಪದಲ್ಲಿಯೇ ತತ್ಪರರುಗಳು ಕ್ರೂರಾಃ = ಕ್ರೂರರುಗಳು ಯೇ ಚ = ಆರು ಕೆಲಬರು ಹಿಂಸಾಪ್ರಿಯಂವದಾಃ = ಕೊಲ್ಲು ಎಂದು ನಿಷ್ಠುರವನು ನುಡಿವುತ್ತಿಹರು. ||೮೩||

ಯಸ್ತು = ಆವಾತನು ಭಾರ್ಯಾಪುತ್ರಮಿತ್ರಬಾಲವೃದ್ಧಕೃಶಾನ್ = ಸ್ತ್ರೀಪುತ್ರಮಿತ್ರಬಾಲವೃದ್ಧರು ಬಡವುಗಳನು ತಥಾ = ಹಾಂಗೆ ಭೃತ್ಯಾನ್ = ಸೇವಕರುಗಳನು ಬುಭುಕ್ಷಿತಾನ್ = ಹಸಿದಂಥಾ ಅತಿಥಿಬಂಧೂನ್ = ಅತಿಥಿಗಳನು ಬಂಧುಗಳನು ತ್ಯಕ್ತ್ವಾ = ಬಿಟ್ಟು ಅಶ್ನಾತಿ = ಉಣುತ್ತಿಹನೂ. ||೮೪||

---

[1] ಶಾಂತಯಂತಿ (ಖ.ಗ.ಚ).

[2] ದ್ರೀಂ (ಘ). [3] ದ್ವಿಜಸ್ಸುರಾಂ (ಘ).

ಆಶಯಾ ಸಮನುಪ್ರಾಪ್ತಾನ್ ಕ್ಷುತ್ತೃಷ್ಣಾಶ್ರಮಪೀಡಿತಾನ್
ಯೋಽತಿಥೀನವಮನ್ಯಂತೇ ತೇ ವೈ ನಿರಯಗಾಮಿನಃ ||೮೫||

ಅನಾಥಾನ್ ವಿಕಲಾನ್ ದೀನಾನ್ ರೋಗಾರ್ತಾನ್ ಬಾಲಪಂಗುಕಾನ್
ನಾನುಕಂಪಂತಿ ಯೇ ಮೂಢಾಸ್ತೇ ಯಾಂತಿ ನರಕಾರ್ಣವಮ್ ||೮೬||

ಅಜಾವಿಕೋ ಮಾಹಿಷಿಕಃ ಸಾಮುದ್ರೀ ವೃಷಲೀಪತಿಃ
ಶೂದ್ರವಿಟ್‌ಕ್ಷತ್ರವೃತ್ತಿರ್ಯಃ ಸ ದ್ವಿಜೋ ನಾರಕೀ ಭವೇತ್ ||೮೭||

ಯಶ್ಚೋಚಿತಮತಿಕ್ರಮ್ಯ ಸ್ವೇಚ್ಛಯಾ ವಾ ಹರೇತ್ಕರಮ್
ನರಕೇಷು ಸ ಪಚ್ಯೇತ ಯಶ್ಚ ದಂಡರುಚಿರ್ನೃಪಃ ||೮೮||

ಯೇ = ಆರು ಕೆಲಬರು ಆಶಯಾ = ಆಸೆಯಿಂದ ಸಮನುಪ್ರಾಪ್ತಾನ್ = ಬಂದಂಥಾ ಕ್ಷುತ್ತೃಷ್ಣಾಶ್ರಮಪೀಡಿತಾನ್ = ಹಸಿವು ತೃಷೆ ಬಳಲಿಕೆಯಿಂದ ಪೀಡಿತರಹಂಥಾ ಅತಿಥೀನ್ = ಅತಿಥಿಗಳನು ಅವಮನ್ಯಂತೇ = ಉದಾಸೀನವ ಮಾಡುತ್ತಿಹರು. ತೇ ವೈ = ಅವರುಗಳೇ ನಿರಯಗಾಮಿನಃ = ನರಕವನೆಯ್ದುವವರುಗಳು.

ಅನಾಥಾನ್ = ಅನಾಥರುಗಳನು ವಿಕಲಾನ್ = ಮುಂದುಗೆಟ್ಟಂಥಾ ಅವರುಗಳನು ದೀನಾನ್ = ದೈನ್ಯರುಗಳನು ರೋಗಾರ್ತಾನ್ = ರೋಗದಿಂದ ಪೀಡಿತರಹಂಥಾ ಅವರುಗಳನು ಬಾಲಪಂಗುಕಾನ್ = ಬಾಲರುಗಳನು ಹೆಳವರುಗಳನು ಕುಂಟರು ಯೇ ಮೂಢಾಃ = ಆರು ಕೆಲಬರು ಮೂರ್ಖರುಗಳು ನ ಅನುಕಂಪಂತಿ = ಕರುಣವಿಲ್ಲದೆಯಿಹರು ತೇ = ಅವರುಗಳು ನರಕಾರ್ಣವಂ = ನರಕಸಮುದ್ರವನು ಯಾಂತಿ = ಎಯ್ದುತ್ತಂಇಹರು. ||೮೬||

ಯಃ = ಆವನಾನೊಬ್ಬ ದ್ವಿಜಃ = ಬ್ರಾಹ್ಮಣನು ಅಜಾವಿಕಃ = ಆಡುಗಳ ಮಾಱುವವನು *ಮಾಹಿಷಿಕಃ = ಸ್ತ್ರೀಯದ್ರವ್ಯದಿಂದ ಬದುಕುವಾತನು ಸಾಮುದ್ರೀ = ಉಪ್ಪು ಮಾಱುವಾತನು ವೃಷಲೀಪತಿಃ = ಶೂದ್ರಿತಿಗೆ ಗಂಡನಹನು ಶೂದ್ರವಿಟ್-ಕ್ಷತ್ರವೃತ್ತಿಃ = ಶೂದ್ರ ವೈಶ್ಯ ಕ್ಷತ್ರಿಯರುಗಳ ವರ್ತನೆಯನುಳ್ಳಾತನಹನು ಸಃ = ಆ ಬ್ರಾಹ್ಮಣನು ನಾರಕೀ = ನರಕವನೆಯ್ದುವಾತನು ಭವೇತ್ = ಆಹನು. ||೮೭||

ಯಃ = ಆವನಾನೊಬ್ಬನು ನೃಪಶ್ಚ = ಅರಸು ಉಚಿತಂ = ನಿಯತವಹಂಥಾ ಕರಂ = ಸಿದ್ಧಾಯವನು ಅತಿಕ್ರಮ್ಯ = ಮೀಱಿ ಸ್ವೇಚ್ಛಯಾ = ತನ್ನಿಚ್ಛೆಯಿಂದ ಹರೇದ್ವಾ = ಅಪಹರಿಸುವನೋ ಯಶ್ಚ = ಆವನಾನೊಬ್ಬ-ಅರಸು ದಂಡರುಚಿಃ =

---

* ಸಂದರ್ಭಾನುಸಾರವಾಗಿ 'ಎಮ್ಮೆ ಮಾರುವವನು' ಎಂದಿರಬೇಕೆಂದು ತೋರುತ್ತದೆ.

ಉತ್ಕೋಚಕೈರಧಿಕೃತೈಸ್ತಸ್ಕರೈಶ್ಚ ಪ್ರಪೀಡ್ಯತೇ
ಯಸ್ಯ ರಾಜ್ಞಃ ಪ್ರಜಾ ರಾಜ್ಯೇ ಪಚ್ಯತೇ ನರಕೇಷು ಸಃ ||೮೯||

ಯೇ ದ್ವಿಜಾಃ ಪ್ರತಿಗೃಹ್ಣಂತಿ [1]ನೃಪಾಚ್ಚಾನ್ಯಾಯ[1]ಕಾರಿಣಃ
ಪ್ರಯಾಂತಿ ತೇಽಪಿ ಘೋರೇಷು ನರಕೇಷು ನ ಸಂಶಯಃ ||೯೦||

ಪಾರದಾರಿಕಚೋರಾಣಾಂ ಯತ್ ಪಾಪಂ ಪಾರ್ಥಿವಸ್ಯ ತತ್
ಭವೇದರಕ್ಷತಃ ಸರ್ವಂ ಘೋರಸ್ತಸ್ಯ ಪ್ರತಿಗ್ರಹಃ ||೯೧||

ದಂಡವಕೊಂಬಲ್ಲಿ [ದಂಡನವಿಧಿಸುವಲ್ಲಿ] ತಾತ್ಪರ್ಯವನುಳ್ಳಾತನಹನು ಸಃ = ಆ ಅರಸು ನರಕೇಷು = ನರಕಂಗಳಲ್ಲಿ ಪಚ್ಯೇತ = ಬೇವುತ್ತಿಹನು. ||೮೮||

ಯಸ್ಯ = ಆವನಾನೊಬ್ಬ ರಾಜ್ಞಃ = ಅರಸಿನ ರಾಜ್ಯೇ = ರಾಜ್ಯದಲ್ಲಿ ಪ್ರಜಾ = ಪ್ರಜೆ ಉತ್ಕೋಚಕೈಃ = *ಉತ್ಕೋಚೆಗಳಹಂಥಾ ಅವರುಗಳಿಂದ ಅಧಿಕೃತೈಃ = ಅಧಿಕಾರಿಗಳಿಂದ ತಸ್ಕರೈಶ್ಚ = ಕಳ್ಳರುಗಳಿಂದವೂ ಪ್ರಪೀಡ್ಯತೇ = ಬಾಧೆಗೊಳಗಾಗುತ್ತಂ[2]ವಿಹುದು[2] ಸಃ = ಆ ಅರಸು ನರಕೇಷು = ನರಕಗಳಲ್ಲಿ ಪಚ್ಯತೇ = ಬೇವುತ್ತಿಹನು. ||೮೯||

ಯೇ = ಆರು ಕೆಲಬರು ದ್ವಿಜಾಃ = ಬ್ರಾಹ್ಮಣರುಗಳು ಅನ್ಯಾಯಕಾರಿಣಃ = ಅನ್ಯಾಯವ ಮಾಡುತ್ತಂವಿದ್ದಂಥಾ ನೃಪಾಚ್ಚ = ಅರಸಿನ ದೆಸೆಯಿಂದ ಪ್ರತಿಗೃಹ್ಣಂತಿ = ದಾನವನೀಸಿಕೊಳುತ್ತಂವಿಹರು ತೇಽಪಿ = ಆ ಬ್ರಾಹ್ಮಣರುಗಳು ಘೋರೇಷು = ಭಯಂಕರವಹಂಥಾ ನರಕೇಷು = ನರಕಂಗಳಲ್ಲಿ ಪ್ರಯಾಂತಿ = ಎಯ್ದುತ್ತಂವಿಹರು. ನ ಸಂಶಯಃ = ಸಂದೇಹವಿಲ್ಲ. ||೯೦||

ಪಾರದಾರಿಕಚೋರಾಣಾಂ = ಹಾದರಿಗರು ಕಳ್ಳರುಗಳಿಗೆ ಯತ್ಪಾಪಂ = ಆವುದೊಂದು ಪಾಪವುಂಟು ತತ್ಸರ್ವಂ = ಆ ಸಮಸ್ತಪಾಪವು ಅರಕ್ಷತಃ = ಶಿ[ರ]ಕ್ಷಿಸದೆಯಿದ್ದಂಥಾ ಪಾರ್ಥಿವಸ್ಯ = ಅರಸಿಂಗೆ ಭವೇತ್ = ಆಹುದು. ತಸ್ಯ = ಆ ಅರಸಿನ ಪ್ರತಿಗ್ರಹಃ = ದಾನವು ಘೋರಃ = [3]ಭಯಂಕರವಹಂಥಾದು.[3] ||೯೧||

---

[1] ನೃಪಸ್ಯಾನ್ಯಾಯ (ಘ)

*ಅನ್ಯಾಯಕವರ್ಾಚರಣೆಗಾಗಿ ವಾದಿ-ಪ್ರತಿವಾದಿಗಳಿಂದ ಹಣ ಪಡೆಯುವ ಲಂಚಗುಳಿಗಳು. 'ಲಂಚಾ ತೂತ್ಕೋಚ ಆಮಿಷಃ' (ಅಮರಃ) [2] ತ್ತಿಹುದು (ಚ).

[3] ದೋಷವಹಂಥಾದು (ಕ).

ಅಚೋರಂ ಚೋರವತ್ಪಶ್ಯೇತ್ ಚೋರಂ ಚಾಚೋರರೂಪಿಣಮ್
ಅವಿಚಾರ್ಯ ನೃಪಸ್ತಸ್ಮಾದ್ಘಾತಯೇನ್ನರಕಂ ವ್ರಜೇತ್ ||೯೨||

ಗುಡೇಕ್ಷುಕ್ಷೀರಶಾಕಾನಿ ದಧಿಮೂಲಫಲಾನಿ ಚ
ಊರ್ಣಾಕಾರ್ಪಾಸಕೌಶೇಯಭೃಂಗಪಟ್ಟೋದ್ಭವಾನಿ ಚ
ಸ್ಥೂಲಸೂಕ್ಷ್ಮಾಣಿ ವಸ್ತ್ರಾಣಿ ಯೇ ಲೋಭೇನ ಹರಂತಿ ಚ ||೯೩||

ಏವಮಾದೀನಿ ಚಾನ್ಯಾನಿ ದ್ರವ್ಯಾಣಿ ವಿವಿಧಾನಿ ಚ
ಗಂಧಾಢ್ಯಪತ್ರಪುಷ್ಪಾಣಿ ಚೌಷಧಂ ಧಾನ್ಯಭಾಜನಮ್ ||೯೪||

ಉಪಾನಟ್ಛತ್ರಶಕಟಮಾಸನಂ ಶಯನಂ ಮೃದು
ತಾಮ್ರಸೀಸತ್ರಪುಃ ಕಾಂಸ್ಯಂ ಶಂಖಾದ್ಯಂ ಚ ಜಲೋದ್ಭವಮ್ ||೯೫||

ಅಚೋರಂ=ಕಳ್ಳನಲ್ಲದಾತನನು ಚೋರವತ್=ಕಳ್ಳನೋಪಾದಿ ಪಶ್ಯೇತ್=ಕಾಬನು ಚೋರಂ ಚ = ಕಳ್ಳನನು ಅಚೋರರೂಪಿಣಂ = ಒಳ್ಳಿದನ ರೂಪನುಳ್ಳಾತನಾಗಿ ಪಶ್ಯೇತ್=ಕಾಬನು ನೃಪಃ=ಅರಸು ಅವಿಚಾರ್ಯ=ವಿಚಾರಿಸದೇ ಘಾತಯೇತ್=ಕೊಲುವನು ತಸ್ಮಾತ್ = ಆ ಕೊಲುವುದಱ ದೆಸೆಯಿಂದ ನರಕಂ ನರಕವನು ವ್ರಜೇತ್=ಎಯ್ದುವನು. ||೯೨||

ಗುಡೇಕ್ಷುಕ್ಷೀರಶಾಕಾನಿ = ಬೆಲ್ಲ ಕಬ್ಬು ಹಾಲು ಶಾಕಂಗಳನು ದಧಿಮೂಲಫಲಾನಿ ಚ=ಮೊಸರು ಗೆಂಡೆ ಗೆಣಸು ಫಲಂಗಳನು ಊರ್ಣಾಕಾರ್ಪಾಸಕೌಶೇಯಭೃಂಗಪಟ್ಟೋದ್ಭವಾನಿ ಚ = [ಉಣ್ಣೆ] ಕಂಬಳಿ, ಹತ್ತಿ, ಭೃಂಗವೆಂಬ [ರೇಷ್ಮೆ] ಹುಳುವಿನಿಂದಾದ, ಪಟ್ಟೆನೂಲಿಂದ ಹುಟ್ಟಿದಂಥಾ ಸ್ಥೂಲಸೂಕ್ಷ್ಮಾಣಿ=ದೊಡ್ಡಿತ್ತಹ ಸಣ್ಣವಹಂಥಾ ವಸ್ತ್ರಾಣಿ=ವಸ್ತ್ರಂಗಳನು ಯೇ ಚ=ಆರು ಕೆಲಬರು ಲೋಭೇನ=ಅಜ್ಞಾನದಿಂದ ಹರಂತಿ=ಅಪಹರಿಸುತ್ತಂವಿಹರು. ||೯೩||

ಏವಮಾದೀನಿ = ಇವು ಮೊದಲಾದಂಥಾ ವಿವಿಧಾನಿ ಚ = ನಾನಾಪ್ರಕಾರವಹಂಥಾ ಅನ್ಯಾನಿ=ಮತ್ತೆ ಕೆಲವು ದ್ರವ್ಯಾಣಿ ಚ = ವಸ್ತುಗಳನು ಗಂಧಾಢ್ಯಪತ್ರಪುಷ್ಪಾಣಿ ಚ=ವಾಸನೆಯಿಂದ ಬಹಳವಹ ಪತ್ರಪುಷ್ಪಂಗಳನು ಔಷಧಂ = ಔಷಧವನು ಧಾನ್ಯಭಾಜನಂ=ಧಾನ್ಯವನು ಭಾಜನವನು. ||೯೪||

ಉಪಾನಟ್ಛತ್ರ ಶಕಟಂ=ಪಾದರಕ್ಷೆ ಸತ್ತಿಗೆ ಭಂಡಿಯುನು ಆಸನಂ=ಕುಳ್ಳಿಹ ಮಣೆ ಮುಂತಾದನನು ಮೃದು = ಮೃದುವಹಂಥಾ ಶಯನಂ = ಹಾಸಿಗೆಯುನು ತಾಮ್ರಸೀಸತ್ರಪುಃಕಾಂಸ್ಯಂ=ತಾಮ್ರ ಸೀಸ ತವರ ಲೋಹ ಕಂಚನು ಜಲೋದ್ಭವಂ = ಉದಕದಲ್ಲಿ ಹುಟ್ಟಿದಂಥಾ ಶಂಖಾದ್ಯಂ ಚ = ಶಂಖವೇ ಮೊದಲಾದಂಥಾ ವಸ್ತುವನು. ||೯೫||

ವಾರ್ಕ್ಷಂ ಚ ವೈಣವಾದ್ಯಂ ಚ ಗೃಹೋಪಕರಣಾನಿ ಚ
ನರಕೇ ಸತತಂ ಗಚ್ಛೇತ್ ಅಪಹೃತ್ಯಾಲ್ಪಕಾನ್ಯಪಿ ||೯೬||

ಯದ್ವಾ ತದ್ವಾ ಪರದ್ರವ್ಯಮಪಿ ಸರ್ಷಪಮಾತ್ರಕಮ್
ಅಪಹೃತ್ಯ ನರೋ ಯಾತಿ ನರಕಂ ನಾತ್ರ ಸಂಶಯಃ ||೯೭||

ಯಃ ಕರೋತಿ ಸ್ವಯಂ ಕರ್ಮ ಕಾರಯೇದ್ವಾನುಮೋದಯೇತ್
ಕಾಯೇನ ಮನಸಾ ವಾಚಾ ನ ತಸ್ಯೋರ್ಧ್ವಗತಿರ್ಭವೇತ್ ||೯೮||

ಏವಮಾದ್ಯೈರ್ನರಾಃ ಪಾಪೈರುತ್ಕ್ರಾಂತಾಃ ಸಮನಂತರಮ್
ಶರೀರಂ ಯಾತನಾಖ್ಯಂ ಚ ಪೂರ್ವಾಕಾರಮವಾಪ್ನು[1]ಯುಃ[1] ||೯೯||

ವಾರ್ಕ್ಷಂ ಚ = ಮರದಿಂದಾದಂಥಾ ಅವನು ವೈಣವಾದ್ಯಂ ಚ = ಬಿದಿರಿಂದಾದಂಥಾ ಅವನು ಗೃಹೋಪಕರಣಾನಿ ಚ = ಮನೆಯ ಭಾಂಡ ಭಾಜನಾದಿಕಂಗಳನು ಅಲ್ಪಕಾನ್ಯಪಿ = ಅಲ್ಪಂಗಳನಾದರೂ ಅಪಹೃತ್ಯ = ಅಪಹರಿಸಿ ಸತತಂ = ಎಂದೆಂದು ನರಕೇ = ನರಕದಲ್ಲಿ ಗಚ್ಛೇತ್ = ಎಯ್ದುವನು ||೯೬||

ಯದ್ವಾ ತದ್ವಾ = ಆವುದಾದರೂ ಆಗಲಿ ಪರದ್ರವ್ಯಂ = ಪರರೊಡವೆಯನು ಸರ್ಷಪಮಾತ್ರಕಮಪಿ = ಸಾಸವೆಯಷ್ಟನಾದರೂ ಅಪಹೃತ್ಯ = ಅಪಹರಿಸಿ ನರಃ = ಮನುಷ್ಯನು ನರಕಂ = ನರಕವನು ಯಾತಿ = ಎಯ್ದುತ್ತಿಹನು ಅತ್ರ = ಇಲ್ಲಿ ನ ಸಂಶಯಃ = ಸಂದೇಹವಿಲ್ಲ. ||೯೭||

ಯಃ = ಆವನಾನೊಬ್ಬನು ಸ್ವಯಂ = ತಾನೇ ಕರ್ಮ = ಪಾಪವನು ಕಾಯೇನ = ಶರೀರದಿಂದ ಕರೋತಿ = ಮಾಡುತ್ತಿಹನು ವಾ = ಅಲ್ಲಾ ವಾಚಾ = ವಾಕ್ಯದಿಂದ ಕಾರಯೇತ್ = ಮಾಡಿಸುವನು ಮನಸಾ = ಮನಸ್ಸಿನಿಂದ ಅನುಮೋದಯೇತ್ = ಸಂತೋಷಿಸುವನು ತಸ್ಯ = ಆತಂಗೆ ಊರ್ಧ್ವಗತಿಃ = ಸ್ವರ್ಗವು ನ ಭವೇತ್ = ಆಗದು. ||೯೮||

ಏವಮಾದ್ಯೈಃ = ಇವು ಮೊದಲಾಗಿದ್ದಂಥಾ ಪಾಪೈಃ = ಪಾಪಂಗಳೊಡನೆ ಉತ್ಕ್ರಾಂತಾಃ = ಮರಣವನೆಯ್ದಿದಂಥಾ ನರಾಃ = ಮನುಷ್ಯರುಗಳು ಸಮನಂತರಂ = ಅನಂತರದಲ್ಲಿ ಪೂರ್ವಾಕಾರಂ = ಮುನ್ನಿನಾಕಾರವಹಂಥಾ ಯಾತನಾಖ್ಯಂ ಶರೀರಂ ಚ = ಯಾತನಾ ಶರೀರವನು ಅವಾಪ್ನುಯುಃ = ಎಯ್ದುವರು. ||೯೯||

---

1 ಯಾತ್ (ಘ).

ಯಮಲೋಕಂ ವ್ರಜಂತ್ಯೇತೇ ಶರೀರೇಣ ಯಮಾಜ್ಞಯಾ
ಯಮದೂತೈರ್ಮಹಾಘೋರೈರ್ನೀಯಮಾನಾಃ ಸುದುಃಖಿತಾಃ ೧೦೦

ದೇವತಿರ್ಯಙ್ಮನುಷ್ಯಾಣಾಮಧರ್ಮನಿರತಾತ್ಮನಾಮ್
ಧರ್ಮರಾಜಃ ಸ್ಮೃತಃ ಶಾಸ್ತಾ ಸುಘೋರೈರ್ವಿವಿಧೈರ್ವಧೈಃ ||೧೦೧||

ಇತಿ ಸಂಕ್ಷೇಪತಃ ಪ್ರೋಕ್ತಾಃ ಪಾಪಭೇದಾಸ್ತ್ರಿಸಾಧನಾಃ
ಕಥ್ಯಂತೇ ಗತಯಶ್ಚಿತ್ರಾ ನರಾಣಾಂ ಪಾಪಕರ್ಮಿಣಾಮ್ ||೧೦೨||

ಇತಿ ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮ-
ಸುಧಾರ್ಣವಪೂರ್ಣಚಂದ್ರಸ್ಯ ಗೊರ[1]ಗೋ[1]ಡಪುರವರಾಧೀಶ್ವರ
ಮಲ್ಲಿಕಾರ್ಜುನಾಚಾರ್ಯಸ್ಯ ಅನುಜ್ಞಯಾ ಶ್ರೀಧರಾಂಕ-
ಪ್ರಣೀತೇ ಕರ್ಣಾಟಭಾಷಾವಿವರಣೇ 'ಧರ್ಮಾಧರ್ಮಭೇದ-
ಕಥನಂ ನಾಮ' ದ್ವಿತೀಯೋಽಧ್ಯಾಯಃ

ಏತೇ=ಇವರುಗಳು ಶರೀರೇಣ=ಯಾತನಾಶರೀರದಿಂದ ಯಮಲೋಕಂ = ಯಮಲೋಕವನು ವ್ರಜಂತಿ=ಎಯ್ದುತ್ತಂವಿಹರು ಯಮಾಜ್ಞಯಾ = ಯಮನ ಆಜ್ಞೆಯಿಂದ ಮಹಾಘೋರೈಃ = ಅತಿಭಯಂಕರವಹಂಥಾ ಯಮದೂತೈಃ = ಯಮದೂತರುಗಳಿಂದ ನೀಯಮಾನಾಃ = ಎಳಸಿಕೊಳಲುಪಟ್ಟವರುಗಳಾಗಿ ಸುದುಃಖಿತಾಃ=ಅತ್ಯಂತದುಃಖಿತರಹರು. ||೧೦೦||

ಅಧರ್ಮನಿರತಾತ್ಮನಾಂ = ಪಾಪದಲ್ಲಿ ನಿಯತವಹ ಬುದ್ಧಿಯನುಳ್ಳಂಥಾ ದೇವತಿರ್ಯಙ್ಮನುಷ್ಯಾಣಾಂ=ದೇವಜಾತಿ ತಿರ್ಯಗ್ಜಾತಿ ಮನುಷ್ಯರುಗಳ ಸುಘೋರೈಃ =ಅತಿಭಯಂಕರವಹಂಥಾ ವಿವಿಧೈಃ = ನಾನಾ ಪ್ರಕಾರವಹಂಥಾ ವಧೈಃ = ವಧೆಗಳಿಂದ ಶಾಸ್ತಾ = ಶಿಕ್ಷೆಯಮಾಡುವಾತನು ಧರ್ಮರಾಜಃ = ಯಮಧರ್ಮರಾಜನೆಂದು ಸ್ಮೃತಃ=ಹೇಳಲುಪಟ್ಟನು. ||೧೦೧||

ಇತಿ=ಈ ಪ್ರಕಾರದಲ್ಲಿ ಪಾಪಕರ್ಮಿಣಾಂ = ಪಾಪಕರ್ಮವ ಮಾಡಿದಂಥಾ ನರಾಣಾಂ=ಮನುಷ್ಯರುಗಳ ತ್ರಿಸಾಧನಾಃ= ಮನೋ[2]ವಾಕ್ಕಾಯಗ[ಳೇ] ಸಾಧನವಹಂಥಾ ಪಾಪಭೇದಾಃ = ಪಾಪಭೇದಗಳು ಸಂಕ್ಷೇಪತಃ = ಸಂಕೋಚದಿಂದ ಪ್ರೋಕ್ತಾಃ=ಹೇಳಲ್ಪಟ್ಟವು. ಚಿತ್ರಾಃ=ಆಶ್ಚರ್ಯವಹಂಥಾ ಗತಯಃ=ಗತಿಗಳು ಕಥ್ಯಂತೇ=ಹೇಳಲ್ಪಡುತ್ತಂವಿದ್ದಾವು. ||೧೦೨||

ಅಧ್ಯಾಯ ೨ ಕ್ಕಂ ಗ್ರಂಥ ೧೬ಳ ಮಂಗಳಮಹಾ.

---

[1] ಕೋ (ಖ). [2] ವಾಕ್ಕ್ಯಯಂಗಳಿಗೆ ಸಾದನವಹಂಥಾ ? (ವ್ಯಾಖ್ಯಾನ).

ತೃತೀಯೋಽಧ್ಯಾಯಃ
(ನರಕಯಾತನಾನಿರೂಪಣಂ)

ಸ್ಕಂದ ಉವಾಚ—

ಅಥ ಪಾಪೈರಿಮೇ ಯಾಂತಿ ಯಮಲೋಕಂ ಚತುರ್ವಿಧೈಃ
ಸಂತ್ರಾಸಜನನಂ ಘೋರಂ ವಿವಶಾಃ ಸರ್ವದೇಹಿನಃ ||೧||

ಗರ್ಭಸ್ಥೈರ್ಜಾಯಮಾನೈಶ್ಚ ಬಾಲೈಸ್ತರುಣಮಧ್ಯಮೈಃ
ಸ್ತ್ರೀಪುನ್ನಪುಂಸಕೈರ್ವೃದ್ಧೈರ್ಯಾತವ್ಯಂ ಸರ್ವಜಂತುಭಿಃ ||೨||

ಶುಭಾಶುಭಫಲಂ ಚಾತ್ರ ದೇಹಿನಾಂ ಪ್ರವಿಚಾರ್ಯತೇ
ಚಿತ್ರಗುಪ್ತಾದಿಭಿಃ ಸದ್ಭಿರ್ಮಧ್ಯಸ್ಥೈಃ ಸಮದರ್ಶಿಭಿಃ ||೩||

ಶ್ರೀಸ್ಕಂದ ಉವಾಚ= ಕುಮಾರಸ್ವಾಮಿಯ ವಾಕ್ಯವು.

ಅಥ= ಅನಂತರದಲ್ಲಿ ಚತುರ್ವಿಧೈಃ= ನಾಲ್ಕು ಪ್ರಕಾರಂಗಳಹಂಥಾ ಪಾಪೈಃ = ಪಾಪಂಗಳಿಂದ ವಿವಶಾಃ = ಮುಂದುಗೆಟ್ಟಂಥಾ ಇಮೇ ಸರ್ವದೇಹಿನಃ = ಈ ಸಮಸ್ತ ಪ್ರಾಣಿಗಳು ಸಂತ್ರಾಸಜನನಂ = ಭೀತಿಯನು ಹುಟ್ಟಿಸುತ್ತಂವಿದ್ದಂಥಾ ಘೋರಂ= ಭಯಂಕರವಹಂಥಾ ಯಮಲೋಕಂ= ಯಮಲೋಕವನು ಯಾಂತಿ= ಎಯ್ದುತ್ತಂವಿಹರು. ||೧||

ಗರ್ಭಸ್ಥೈಃ = ಗರ್ಭದಲ್ಲಿಯಿದ್ದಂಥಾವರುಗಳಿಂದ ಜಾಯಮಾನೈಶ್ಚ = ಹುಟ್ಟಿದಂಥಾವರುಗಳಿಂದ ಬಾಲೈಃ = ಶಿಶುಗಳಿಂದ ತರುಣಮಧ್ಯಮೈಃ = ಪ್ರಾಯದವರುಗಳಿಂದ ನಡುಪ್ರಾಯದವರುಗಳಿಂದ ಸ್ತ್ರೀಪುನ್ನಪುಂಸಕೈಃ = ಸ್ತ್ರೀಯರುಗಳು ಪುರುಷರುಗಳು ನಪುಂಸಕರುಗಳಿಂದ ವೃದ್ಧೈಃ = ವೃದ್ಧರುಗಳಿಂದ ಸರ್ವಜಂತುಭಿಃ = ಸಮಸ್ತ ಪ್ರಾಣಿಗಳಿಂದವೂ ಯಾತವ್ಯಂ= ಎಯ್ದಲು ಯೋಗ್ಯವು. ||೨||

ಅತ್ರ= ಈ ಯಮಲೋಕದಲ್ಲಿ ದೇಹಿನಾಂ = ಪ್ರಾಣಿಗಳ ಶುಭಾಶುಭಫಲಂ ಚ= ಪುಣ್ಯಪಾಪಂಗಳ ಫಲವು ಚಿತ್ರಗುಪ್ತಾದಿಭಿಃ = ಚಿತ್ರಗುಪ್ತ ಮೊದಲಾದಂಥಾ ಸದ್ಭಿಃ= ಸತ್ಪುರುಷರಹಂಥಾ ಸಮದರ್ಶಿಭಿಃ = ಸಮಾನವಾಗಿ ಕಾಣುತ್ತಂವಿದ್ದಂಥಾ ಮಧ್ಯಸ್ಥೈಃ = ಮಧ್ಯಸ್ಥರುಗಳಿಂದ ಪ್ರವಿಚಾರ್ಯತೇ = ಲೇಸಾಗಿ ವಿಚಾರಿಸಲು ಪಡುತ್ತಂವಿಹುದು. ||೩||

ನ ತೇಽತ್ರ ಪ್ರಾಣಿನಸ್ಸಂತಿ ಯೇ ನ ಯಾಂತಿ ಯಮಕ್ಷಯಮ್
ಅವಶ್ಯಂ ಹಿ ಕೃತಂ [1]ಕರ್ಮ[1] ಭೋಕ್ತವ್ಯಮವಿಚಾರತಃ ॥೪॥

ತತ್ರ ಯೇ ಶುಭಕರ್ಮಾಣಃ ಸೌಮ್ಯಚಿತ್ತಾ ದಯಾನ್ವಿತಾಃ
ತೇ ನರಾ ಯಾಂತಿ ಸೌಮ್ಯೇನ ಪಥಾ ಯಮನಿಕೇತನಮ್ ॥೫॥

ದೇವಾಯತನಕರ್ತಾ [3]ಯೋ[3] ಯತೀನಾಮಾಶ್ರಮಸ್ಯ ಚ
ಅನಾಥಮಂಟಪಾನಾಂ ಚ [4]ಕ್ರೀಡನ್ ಯಾತಿ[4] ಗೃಹೋತ್ತಮೇ ॥೬॥

ಅತ್ರ = ಈ ಭೂಲೋಕದಲ್ಲಿ ಯೇ = ಆರು ಕೆಲಬರು ಪ್ರಾಣಿನಃ = ಪ್ರಾಣಿಗಳು ಸಂತಿ = ಉಂಟು ತೇ = ಅವರುಗಳು [2]ಯಮಕ್ಷಯಂ = ಯಮನ ಸ್ಥಾನವನು ನ ಯಾಂತಿ ನ = ಎಯ್ದುರೆಂಬುದಿಲ್ಲ. ಎಯ್ದುವರೆಂಬುದರ್ಥ. 'ದ್ವೌ ನಞಾ ಪ್ರಕೃತಮರ್ಥಂ ಗಮಯತಃ'[2] ಈ ವ್ಯಾಕರಣಸೂತ್ರ ಪ್ರಾಪ್ತಿಯಿಂದ ಎರಡು ನ ಕಾರಂಗಳು ಬಂದರೆ ಉಂಟೆಂಬುದರ್ಥ. ಅವನೆ ಊಹಿಸುವವು. ಹಿ = ಆವುದಾನೊಂದು ಕಾರಣವಾಗಿ ಕೃತಂ = ಮಾಡಿದಂಥಾ ಕರ್ಮ = ಕರ್ಮವು ಅವಿಚಾರತಃ = ವಿಚಾರಿಸದೆ ಅವಶ್ಯಂ = ನಿಶ್ಚಯವಾಗಿ ಭೋಕ್ತವ್ಯಂ = ಅನುಭವಿಸಲು ಯೋಗ್ಯವು. ॥೪॥

ತತ್ರ = ಅಲ್ಲಿ ಯೇ = ಆರು ಕೆಲಬರು ಶುಭಕರ್ಮಾಣಃ = ಪುಣ್ಯವನು ಮಾಡಿದಂಥಾ ಸೌಮ್ಯಚಿತ್ತಾಃ = ನಿರ್ಮಲಚಿತ್ತರಹಂಥಾ ದಯಾನ್ವಿತಾಃ = ಕರುಣದಿಂದ ಕೂಡಲುಪಟ್ಟಂಥಾವರುಗಳುಂಟು ತೇ ನರಾಃ = ಆ ಮನುಷ್ಯರುಗಳು ಸೌಮ್ಯೇನ = ಒಳ್ಳಿತ್ತಹಂಥಾ ಪಥಾ = ಮಾರ್ಗದಿಂದ ಯಮನಿಕೇತನಂ = ಯಮನ ಅರಮನೆಯನು ಯಾಂತಿ = ಎಯ್ದುತ್ತಂವಿಹರು. ॥೫॥

ಯಃ = ಆವನಾನೊಬ್ಬಾತನು ದೇವಾಯತನಕರ್ತಾ = ದೇವಾಲಯವ ಮಾಡಿದಾತನು ಯತೀನಾಂ = ಯತಿಗಳಿಗೆ ಆಶ್ರಮಸ್ಯ ಚ = ಮಠವ ಕರ್ತಾ = ಕಟ್ಟಿಸಿದಾತನು ಅನಾಥಮಂಟಪಾನಾಂ = ಅನಾಥರಿಗೆ ಧರ್ಮಶಾಲೆಗಳ ಕರ್ತಾ ಚ = ಕಟ್ಟಿಸಿದಾತನು ಗೃಹೋತ್ತಮೇ = ಉತ್ತಮವಹಂಥಾ ಮನೆಯಲ್ಲಿ ಕ್ರೀಡನ್ = ಸುಖಿಸುತ್ತವು ಯಾತಿ = ಎಯ್ದುತ್ತಂವಿಹನು. ॥೬॥

---

[1] ಧರ್ಮ (ಕ) ಮೂಲಪಾಠಃ. [2] ಈ ಭಾಗ (ಕ) ದಲ್ಲಿ ಲುಪ್ತ. [3] ರೋ (ಘ).
[4] ಕ್ರೀಡಂತಿ ಚ (ಘ).

ಆರಾಮಕರ್ತಾ ಛಾಯಾಸು ಶೀತಲಾಸು ಸುಖೀ ವ್ರಜೇತ್
ಯಾಂತಿ ಪುಷ್ಪಕಯಾನೇನ ಪುಷ್ಪಾರಾಮಪ್ರದಾಯಿನಃ ||೭||

ವಿ[1]ಶ್ರಾ[1]ಮ್ಯಮಾಣಾ ಗಚ್ಛಂತಿ ಗುರುಶುಶ್ರೂಷಣೇ ರತಾಃ
ಪಾದಶೌಚಪ್ರದಾನೇನ ಶೀತಲೇನ ಪಥಾ ವ್ರಜೇತ್ ||೮||

ಪಾದಾಭ್ಯಂಗಂ ಚ ಯಃ ಕುರ್ಯಾದಶ್ವಪೃಷ್ಠೇನ [2]ಸ [2]ವ್ರಜೇತ್
ದಿವ್ಯವಸ್ತ್ರಪರೀಧಾನಾ ಯಾಂತಿ ವಸ್ತ್ರಪ್ರದಾಯಿನಃ ||೯||

ಸರ್ವಕಾಮಸಮೃದ್ಧೇನ ಪಥಾ ಗಚ್ಛಂತಿ ಗೋಪ್ರದಾಃ
ಛತ್ರಪ್ರದಾನಾದ್ಗಚ್ಛಂತಿ ಪಥಾ ಸಾಭ್ರೇಣ ದೇಹಿನಃ ||೧೦||

ಆರಾಮಕರ್ತಾ = ಉದ್ಯಾನವನವ ಮಾಡಿದಾತನು ಶೀತಲಾಸು = ಶೈತ್ಯವ ಹಂಥಾ ಛಾಯಾಸು = ನೆಳಲುಗಳಲ್ಲಿ ಸುಖಂ = ಸುಖವಾಗಿ ವ್ರಜೇತ್ = ಎಯ್ದುವನು. ಪುಷ್ಪಾರಾಮಪ್ರದಾಯಿನಃ = ಪುಷ್ಪದ ತೋಟಂಗಳ ದಾನವ ಮಾಡಿದವರುಗಳು ಪುಷ್ಪಕಯಾನೇನ = ಪುಷ್ಪಕದ ವಾಹನದಿಂದ ಯಾಂತಿ = ಎಯ್ದುತ್ತಂವಿಹರು. ||೭||

ಗುರುಶುಶ್ರೂಷಣೇ = ಗುರುಸೇವೆಯಲ್ಲಿ ರತಾಃ = ತಾತ್ಪರ್ಯವನುಳ್ಳವರುಗಳು ವಿಶ್ರಾಮ್ಯಮಾಣಾಃ = ವಿಶ್ರಮಿಸಲ್ಪಟ್ಟವರುಗಳಾಗಿ ಗಚ್ಛಂತಿ = ಎಯ್ದುತ್ತಂವಿಹರು. ಪಾದಶೌಚ ಪ್ರದಾನೇನ = ಪಾದಪ್ರಕ್ಷಾಲನೆಯ ಮಾಡಿದ್ದರಿಂದ ಶೀತಲೇನ = ಶೈತ್ಯವ ಹಂಥಾ ಪಥಾ = ಮಾರ್ಗದಿಂದ ವ್ರಜೇತ್ = ಎಯ್ದುವನು. ||೮||

ಯಃ = ಆವನಾನೊಬ್ಬಾತನು ಪಾದಾಭ್ಯಂಗಂ ಚ = ಪಾದಾಭ್ಯಂಗವನು ಕುರ್ಯಾತ್ = ಮಾಡುವನು ಸಃ = ಆತನು ಅಶ್ವಪೃಷ್ಠೇನ = ಕುದುರೆಯ ಬೆನ್ನ ಮೇಲಣಿಂದ ವ್ರಜೇತ್ = ಎಯ್ದುವನು. ವಸ್ತ್ರಪ್ರದಾಯಿನಃ = ವಸ್ತ್ರದಾನವ ಮಾಡಿದವರುಗಳು ದಿವ್ಯವಸ್ತ್ರಪರೀಧಾನಾಃ = ದೇವಾಂಗವಸ್ತ್ರವ ಹೊದ್ದುಕೊಂಡವರುಗಳಾಗಿ ಯಾಂತಿ = ಎಯ್ದುತ್ತಿಹರು. ||೯||

ಗೋಪ್ರದಾಃ = ಗೋದಾನವ ಮಾಡಿದವರುಗಳು ಸರ್ವಕಾಮಸಮೃದ್ಧೇನ = ಸಮಸ್ತ ಬಯಕೆಯ ಸಮೃದ್ಧಿಯನುಳ್ಳಂಥಾ ಪಥಾ = ಮಾರ್ಗದಿಂದ ಗಚ್ಛಂತಿ = ಎಯ್ದುತ್ತಂವಿಹರು. ಛತ್ರಪ್ರದಾನಾತ್ = ಸತ್ತಿಗೆಯ ದಾನದ ದೆಸೆಯಿಂದ ದೇಹಿನಃ = ಪ್ರಾಣಿಗಳು ಸಾಭ್ರೇಣ = ಮೇಘದಿಂದ ಸಹಿತವಹಂಥಾ ಪಥಾ = ಮಾರ್ಗದಿಂದ ಗಚ್ಛಂತಿ = ಎಯ್ದುತ್ತಂವಿಹರು ||೧೦||

---

[1] ಶ್ರ (ಕ) ಮೂಲಪಾಠ. [2] ಸಂ (ಖ. ಗ) ಮೂಲಪಾಠ.

ಶಿಬಿಕಾಶ್ವೇಭದಾನೇನ ಸ ರಥೇನ ಸುಖಂ ವ್ರಜೇತ್
ಹೇಮರತ್ನಪ್ರದಾನೇನ ದುರ್ಗಾಣ್ಯತಿತರಂತಿ ತೇ ||೧೧||

[1]ರೌಪ್ಯಾ[1]ನಡ್ವಾಹದಾನೇನ ದಿವ್ಯಯಾನೇನ ಗಚ್ಛತಿ
ಸರ್ವಕಾಮಸಮೃದ್ಧಾತ್ಮಾ ಭೂಮಿದಾನೇನ ಗಚ್ಛತಿ ||೧೨||

[2]ಪ್ರತಿಶ್ರಯ [2]ಪ್ರದಾನೇನ ಗೃಹೈರ್ಯಾಂತಿ ಮಹಾಸುಖಮ್
ಶಯ್ಯಾಸನಪ್ರದಾನೇನ ಸುಖಂ ಯಾಂತಿ ಸವಿಶ್ರಮಮ್ ||೧೩||

ದ್ಯೋತಯಂತೋ ದಿಶಃ ಸರ್ವಾ ಯಾಂತಿ ದೀಪಪ್ರದಾಯಿನಃ
ಆರ್ತೌಷಧಪ್ರದಾನೇನ ಸುಖಂ ಯಾಂತಿ ನಿರಾಮಯಾಃ ||೧೪||

ಶಿಬಿಕಾಶ್ವೇಭದಾನೇನ = ದಂಡಿಗೆ ಕುದುರೆ ಆನೆಗಳ ದಾನವ ಮಾಡಿದ್ದರಿಂದ ಸಃ = ಆತನು ರಥೇನ = ರಥದಿಂದ ಸುಖಂ = ಸುಖವಾಗಿ ವ್ರಜೇತ್ = ಎಯ್ದುವನು ಹೇಮರತ್ನಪ್ರದಾನೇನ = ಸುವರ್ಣರತ್ನಗಳ ದಾನವ ಮಾಡಿದ್ದರಿಂದ ತೇ = ಅವರುಗಳು ದುರ್ಗಾಣಿ = ದುರ್ಗಂಗಳನು ಕುರಿತು ಅತಿತರಂತಿ = ಅತ್ಯಂತ ಎಯ್ದುತ್ತಿಹರು. ||೧೧||

ರೌಪ್ಯಾನಡ್ವಾಹದಾನೇನ = ಬೆಳ್ಳಿಯನು ಎತ್ತುಗಳನು ದಾನವ ಮಾಡಿದ್ದರಿಂದ ದಿವ್ಯಯಾನೇನ = ಪುಷ್ಪಕದಿಂದ ಗಚ್ಛತಿ = ಎಯ್ದುತ್ತಿಹನು. ಭೂಮಿದಾನೇನ = ಭೂದಾನದಿಂದ ಸರ್ವಕಾಮಸಮೃದ್ಧಾತ್ಮಾ = ಸಮಸ್ತ ಬಯಕೆಯ ಸಂಪೂರ್ಣವನುಳ್ಳಾತನಾಗಿ ಗಚ್ಛತಿ = ಎಯ್ದು[3]ತ್ತಿಹನು[3]. ||೧೨||

ಪ್ರತಿಶ್ರಯಪ್ರದಾನೇನ = ಗೃಹದಾನದಿಂದ ಗೃಹೈಃ = ಗೃಹಂಗಳಿಂದ ಮಹಾಸುಖಂ = ಅತ್ಯಂತ ಸುಖವಾಗಿ ಯಾಂತಿ = ಎಯ್ದುತ್ತಿಹರು. ಶಯ್ಯಾಸನಪ್ರದಾನೇನ = ಹಾಸಿಕೆ ಗದ್ದುಗೆಯ ದಾನದಿಂದ ಸವಿಶ್ರಮಂ = ವಿಶ್ರಮಿಸುವದರಿಂದ ಸಹಿತವೆಹಗಹುದಹಗೆ ಸುಖಂ = ಸುಖವಾಗಿ ಯಾಂತಿ = ಎಯ್ದುತ್ತಿಹರು. ||೧೩||

ದೀಪಪ್ರದಾಯಿನಃ = ದೀಪದಾನವ ಮಾಡಿದವರುಗಳು ಸರ್ವಾ ದಿಶಃ = ಸಮಸ್ತ ದಿಕ್ಕುಗಳನು ದ್ಯೋತಯಂತಃ = ಪ್ರಕಾಶಿಸುತ್ತಿದ್ದಂಥಾ ಅವರುಗಳಾಗಿ ಯಾಂತಿ = ಎಯ್ದುತ್ತಿಹರು. ಆರ್ತೌಷಧಪ್ರದಾನೇನ = ರೋಗಿಗಳಿಗೆ ಔಷಧವ ಕೊಟ್ಟುದರಿಂದ ನಿರಾಮಯಾಃ = ವ್ಯಾಧಿಯಿಲ್ಲದವರುಗಳಾಗಿ ಸುಖಂ = ಸುಖವಾಗಿ ಯಾಂತಿ = ಎಯ್ದುತ್ತಿಹರು. ||೧೪||

---

1 ದಿವ್ಯಾ (ಕ) ಮೂಲಪಾಠ. 2 ಪ್ರತ್ಯಾಶ್ರಯ (ಘ) 3 ತ್ತಿಹನು (ಕ. ಜ.)

[1]ಯೇಽನ್ನ[1]ದಾನಾನಿ ಕುರ್ವಂತಿ ತೃಪ್ತಾ ಯಾಂತಿ ಚ ಸತ್ಪಥಾ
ಸರ್ವೇಷಾಮೇವ ದಾನಾನಾಮನ್ನದಾನಂ ಪರಂ ಸ್ಮೃತಮ್ ||೧೫||

ಸದ್ಯಃ ಪ್ರೀತಿಕರಂ ದಿವ್ಯಂ ಬಲಪುಷ್ಟಿವಿವರ್ಧನಮ್
ನಾನ್ನದಾನಸಮಂ ದಾನಂ ತ್ರಿಷು ಲೋಕೇಷು ವಿದ್ಯತೇ ||೧೬||

[2]ಅನ್ನಾದ್ಭವಂತಿ[2]ಭೂತಾನಿ ತದಭಾವೇ ಮ್ರಿಯಂತಿ ಚ
ರಕ್ತಂ ಮಾಂಸಂ ವಸಾ ಶುಕ್ಲಂ ಕ್ರಮಾದನ್ನಾತ್ಪ್ರವರ್ಧತೇ ||೧೭||

ಶುಕ್ಲಾದ್ಭವಂತಿ ಭೂತಾನಿ ತಸ್ಮಾದನ್ನಮಯಂ ಜಗತ್

ಯೇ = ಆರು ಕೆಲಬರು ಅನ್ನದಾನಾನಿ = ಅನ್ನದಾನಂಗಳನು ಕುರ್ವಂತಿ = ಮಾಡುತ್ತಿಹರು ತೃಪ್ತಾಃ = ತೃಪ್ತರುಗಳಾಗಿ ಸತ್ಪಥಾ = ಒಳ್ಳಿಹ ದಾರಿಯಿಂದ ಯಾಂತಿ = ಎಯ್ದುತ್ತಂವಿಹರು ಸರ್ವೇಷಾಂ = ಸಮಸ್ತವಹಂಥಾ ದಾನಾನಾಮೇವ = ದಾನಂಗಳಿಗೆ ಅನ್ನದಾನಂ ಚ = ಅನ್ನದಾನವು ಪರಂ = ಅಧಿಕವೆಂದು ಸ್ಮೃತಂ = ಹೇಳ[3]ಲುಪಟ್ಟು[3]ತ್ತ. ||೧೫||

ಸದ್ಯಃ = ಆ ಕ್ಷಣದಲ್ಲಿ ಪ್ರೀತಿಕರಂ = ಸಂತೋಷವ ಮಾಡುವಂಥಾದು ದಿವ್ಯಂ = ಕಾಂತಿಯ ಮಾಡುವಂಥಾದು ಬಲಪುಷ್ಟಿವಿವರ್ಧನಂ = ಸತ್ತ್ವವನು ಪುಷ್ಟಿಯನು ಹೆಚ್ಚಿಸುವಂಥಾದು ಅನ್ನದಾನಸಮಂ = ಅನ್ನದಾನಕ್ಕೆ ಸಮಾನವಹೆಂಥಾ ದಾನಂ = ದಾನವು ತ್ರಿಷು ಲೋಕೇಷು = ಮೂಱು ಲೋಕಂಗಳಲ್ಲಿ ನ ವಿದ್ಯತೇ = ಇಲ್ಲ. ||೧೬||

ಅನ್ನಾತ್ = ಅನ್ನದ ದೆಸೆಯಿಂದ ಭೂತಾನಿ = ಪ್ರಾಣಿಗಳು ಭವಂತಿ = ಹುಟ್ಟುತ್ತಂವಿಹರು. ತದಭಾವೇ = ಆ ಅನ್ನವಿಲ್ಲದೆ ಇಹದೞಲ್ಲಿ ಮ್ರಿಯಂತಿ = ಸಾವುತ್ತಿಹರು. ರಕ್ತಂ = ರಕ್ತವು ಮಾಂಸಂ = ಮಾಂಸವು ವಸಾ = ಬಸೆ ಶುಕ್ಲಂ ಚ = ರೇತಸ್ಸೂ ಕ್ರಮಾತ್ = ಕ್ರಮದಿಂದ ಅನ್ನಾತ್ = ಅನ್ನವ ದೆಸೆಯಿಂದ ಪ್ರವರ್ಧತೇ = ಹೆಚ್ಚುತ್ತಿಹುದು. ||೧೭||

ಶುಕ್ಲಾತ್ = ಇಂದ್ರಿಯದ ದೆಸೆಯಿಂದ ಭೂತಾನಿ = ಪ್ರಾಣಿಗಳು ಭವಂತಿ = ಹುಟ್ಟುತ್ತಿಹರು. ತಸ್ಮಾತ್ = ಅದುಕಾರಣವಾಗಿ ಜಗತ್ = ಲೋಕವು ಅನ್ನಮಯಂ = ಅನ್ನಮಯವಹಂಥಾದು.

---

[1] ಅನ್ನ (ಕ) ಮೂಲಪಾಠ [2] ಅನ್ನಾಜ್ಜೀವಂತಿ (ಗ) [3] ಲ್ಪಟ್ಟ(ಕ)

ಹೇಮರತ್ನಾಶ್ವನಾಗೇಂದ್ರನಾರೀಸ್ರಕ್ಚಂದನಾದಿಭಿಃ
ಸಮಸ್ತೈರಪಿ ಸಂಪ್ರಾಪ್ತೈರ್ನ ರಮಂತಿ ಬುಭುಕ್ಷಿತಾಃ ||೧೮||

ಗರ್ಭಸ್ಥಾ ಜಾಯಮಾನಾಶ್ಚ [1]ಬಾಲಾ ವೃದ್ಧಾಶ್ಚ [2]ಮಧ್ಯಮಾಃ
ಆಹಾರಮಭಿಕಾಂಕ್ಷಂತೇ ದೇವದಾನವತಾಪಸಾಃ ||೧೯||

ಕ್ಷುಧಾ ಹಿ ಸರ್ವರೋಗಾಣಾಂ ವ್ಯಾಧಿಃ ಶ್ರೇಷ್ಠತಮಸ್ಮೃತಃ
ತಸ್ಯಾನ್ನೌಷಧಲೇಪೇನ ಪ್ರತೀಕಾರಃ ಪ್ರಕೀರ್ತಿತಃ ||೨೦||

ನಾಸ್ತಿ ಕ್ಷುಧಾಸಮಂ ದುಃಖಂ ನಾಸ್ತಿ ರೋಗಃ ಕ್ಷುಧಾಸಮಃ
ನಾಸ್ತ್ಯಾಹಾರಸಮಂ ಸೌಖ್ಯಂ ನಾಸ್ತಿ ಕ್ರೋಧಸಮೋ ರಿಪುಃ ||೨೧||

ಬುಭುಕ್ಷಿತಾಃ = ಹಸಿದಂಥಾ ಅವರುಗಳು ಹೇಮರತ್ನಾಶ್ವನಾಗೇಂದ್ರನಾರೀ-ಸ್ರಕ್ಚಂದನಾದಿಭಿಃ = ಸುವರ್ಣ ರತ್ನ ಕುದುರೆ ಆನೆ ಸ್ತ್ರೀ ಪುಷ್ಪಮಾಲೆ ಗಂಧ ಮೊದಲಾಗಿದ್ದಂಥಾ ಸಂಪ್ರಾಪ್ತೈಃ = ಹಡೆಯಲುಪಟ್ಟಂಥಾ ಸಮಸ್ತೈರಪಿ = ಎಲ್ಲಾ ವಸ್ತುಗಳಿಂದವೂ ನ ರಮಂತಿ = ಸುಖಿಸುತ್ತಂವಿರರು. ||೧೮||

ಗರ್ಭಸ್ಥಾಃ = ಗರ್ಭದಲ್ಲಿದ್ದ ಪ್ರಾಣಿಗಳು ಜಾಯಮಾನಾಶ್ಚ = ಹುಟ್ಟಿದಂಥಾ ಪ್ರಾಣಿಗಳು ಬಾಲಾಃ ವೃದ್ಧಾಶ್ಚ = ಶಿಶುಗಳು ವೃದ್ಧರುಗಳು ಮಧ್ಯಮಾಶ್ಚ = ಪ್ರಾಯದವರುಗಳು ದೇವದಾನವತಾಪಸಾಃ = ದೇವರ್ಕಳು ರಾಕ್ಷಸರು ತಪಸ್ವಿಗಳು ಆಹಾರಂ = ಆಹಾರವನು ಅಭಿಕಾಂಕ್ಷಂತೇ = ಬಯಸುತ್ತಿಹರು. ||೧೯||

ಕ್ಷುಧಾ = ಹಸಿವು ಸರ್ವರೋಗಾಣಾಂ = ಸಮಸ್ತರೋಗಗಳಿಗೆ ಶ್ರೇಷ್ಠತಮಃ = ಅತ್ಯಂತ ಶ್ರೇಷ್ಠವಹಂಥಾ ವ್ಯಾಧಿಃ = ವ್ಯಾಧಿಯೆಂದು ಸ್ಮೃತೋ ಹಿ = ಹೇಳಲುಪಟ್ಟುದಲಾ. ತಮಶಬ್ದವು ಅತಿಶಯಾರ್ಥದಲ್ಲಿ ವರ್ತಿಸೂದು. 'ಅತಿಶಾಯನೇ ತಮಬಿಷ್ಠನೌ' ಇತಿ [3]ಸೂತ್ರಪ್ರಾಪ್ತಿಃ. ತಸ್ಯ = ಆ ಹಸಿವೆಂಬ ರೋಗಕ್ಕೆ ಅನ್ನೌಷಧ ಲೇಪೇನ = ಅನ್ನವೆಂಬ ಔಷಧದ ಲೇಪದಿಂದ ಪ್ರತೀಕಾರಃ = ಪ್ರತೀಕಾರವೆಂದು ಪ್ರಕೀರ್ತಿತಃ = ಹೇಳಲುಪಟ್ಟುತ್ತು. ||೨೦||

ಕ್ಷುಧಾಸಮಂ = ಹಸಿವಿಂಗೆ ಸಮಾನವಹಂಥಾ ದುಃಖಂ = ದುಃಖವು ನಾಸ್ತಿ = ಇಲ್ಲ. ಕ್ಷುಧಾಸಮಃ = ಹಸಿವಿಂಗೆ ಸಮಾನವಹಂಥಾ ರೋಗಃ = ರೋಗವು ನಾಸ್ತಿ = ಇಲ್ಲ. ಆಹಾರಸಮಂ = ಆಹಾರಕ್ಕೆ ಸಮಾನವಹಂಥಾ ಸೌಖ್ಯಂ = ಸುಖವು ನಾಸ್ತಿ = ಇಲ್ಲ ಕ್ರೋಧಸಮಃ = ಕ್ರೋಧಕ್ಕೆ ಸಮಾನವಹಂಥಾ ರಿಪುಃ = ಶತ್ರುವು ನಾಸ್ತಿ = ಇಲ್ಲ. ||೨೧||

---

[1] ಬಾಲವೃದ್ಧಾಶ್ಚ (ಕ) [2] ತಿ (ಖ) [3] ಪಾಣಿನಿಸೂತ್ರ

ಅತ ಏವ ಮಹತ್ಪುಣ್ಯಮನ್ನದಾನಂ ಪ್ರಧಾನತಃ
ಯತಃ ಕ್ಷುಧಾಗ್ನಿಸಂತಪ್ತಾ ಮ್ರಿಯಂತೇ ಸರ್ವದೇಹಿನಃ ||೨೨||

ಅನ್ನದಃ ಪ್ರಾಣದಃ ಪ್ರೋಕ್ತಃ ಪ್ರಾಣದಶ್ಚಾಪಿ ಸರ್ವದಃ
ತಸ್ಮಾದನ್ನಪ್ರದಾನೇನ ಸರ್ವದಾನಫಲಂ ಲಭೇತ್ ||೨೩||

ತ್ರೈಲೋಕ್ಯೇ ಯಾನಿ ರತ್ನಾನಿ ಭೋಗಸ್ತ್ರೀವಾಹನಾನಿ ಚ
ಅನ್ನಪಾನಪ್ರದಃ ಸರ್ವಮಿಹಾಮುತ್ರ ಚ [1]ತಲ್ಲಭೇತ್[1] ||೨೪||

ಯಸ್ಯಾನ್ನಪಾನಪುಷ್ಟಾಂಗಃ ಕುರುತೇ ಧರ್ಮಸಂಚಯಮ್
ಅನ್ನಪ್ರದಾತುಸ್ತಸ್ಯಾರ್ಧಂ ಕರ್ತುರರ್ಧಂ ನ ಸಂಶಯಃ ||೨೫||

ಅತಏವ = ಆದು ಕಾರಣವಾಗಿಯೇ ಅನ್ನದಾನಂ = ಅನ್ನದಾನವು ಪ್ರಧಾನತಃ = ಮುಖ್ಯವಾದುದರ ದೆಸೆಯಿಂದ ಮಹತ್ಪುಣ್ಯಂ = ಅತ್ಯಂತ ಪುಣ್ಯವಹಂಥಾದು ಯತಃ = ಆವುದಾನೊಂದು ಕಾರಣವಾಗಿ ಕ್ಷುಧಾಗ್ನಿಸಂತಪ್ತಾಃ = ಹಸಿವೆಂಬ ಅಗ್ನಿಯಿಂದ ಬೇವುತ್ತಂ ವಿದ್ದಂಥಾ ಸರ್ವದೇಹಿನಃ = ಸಮಸ್ತ ಪ್ರಾಣಿಗಳು ಮ್ರಿಯಂತೇ = ಸಾವುತ್ತಿಹರು. ||೨೨||

ಅನ್ನದಃ = ಅನ್ನವನಿಕ್ಕಿದಾತನು ಪ್ರಾಣದಃ = ಪ್ರಾಣವಕೊಟ್ಟಾತನೆಂದು ಪ್ರೋಕ್ತಃ = ಹೇಳಲುಪಟ್ಟನು. ಪ್ರಾಣದಶ್ಚಾಪಿ = ಪ್ರಾಣವ ಕೊಟ್ಟಾತನು ಸರ್ವದಃ = ಎಲ್ಲವನು ಕೊಟ್ಟಾತನು. ತಸ್ಮಾತ್ = ಆದು ಕಾರಣವಾಗಿ ಅನ್ನಪ್ರದಾನೇನ = ಅನ್ನದಾನದಿಂದ ಸರ್ವದಾನಫಲಂ = ಸಮಸ್ತ ದಾನದ ಫಲವನು ಲಭೇತ್ = ಪಡವನು ||೨೩||

ಅನ್ನಪಾನಪ್ರದಃ = ಅನ್ನಉದಕವ ದಾನವ ಮಾಡಿದಾತನು ತ್ರೈಲೋಕ್ಯೇ = ಮೂಱುಲೋಕದಲ್ಲಿ ಯಾನಿ ರತ್ನಾನಿ = ಆವವು ಕೆಲವು ರತ್ನಂಗಳನು ಭೋಗಸ್ತ್ರೀವಾಹನಾನಿ ಚ = ಭೋಗಂಗಳನು ಸ್ತ್ರೀಯರುಗಳನು ವಾಹನಂಗಳನು ತತ್ಸರ್ವಂ = ಆ ಸಮಸ್ತವನು ಇಹ = ಈ ಲೋಕದಲ್ಲಿಯೂ ಅಮುತ್ರ ಚ = ಪರಲೋಕದಲ್ಲಿಯೂ ಲಭೇತ್ = ಪಡೆವನು. ||೨೪||

ಯಸ್ಯ = ಆವನಾನೊಬ್ಬನ ಅನ್ನಪಾನಪುಷ್ಟಾಂಗಃ = ಅನ್ನ ಉದಕಗಳಿಂದ ಪುಷ್ಟಿಯಾದ ಶರೀರವುಳ್ಳಾತನು ಧರ್ಮಸಂಚಯಂ = ಧರ್ಮದ ಮೊತ್ತವನು ಕುರುತೇ = ಮಾಡುತ್ತಿಹನು ಅನ್ನಪ್ರದಾತುಃ = ಅನ್ನದಾನವ ಮಾಡಿದಂಥಾ ತಸ್ಯ = ಆತಂಗೆ ಅರ್ಧಂ = ಅರ್ಧಫಲವು ಕರ್ತುಃ = ಪುಣ್ಯವ ಮಾಡಿದಾತಂಗೆ ಅರ್ಧಂ = ಅರ್ಧಫಲವು ನ ಸಂಶಯಃ = ಸಂದೇಹವಿಲ್ಲ. ||೨೫||

---

[1] ತಂ ಲಭೇತ್. ಮೂಲಪಾಠ ಮಾತ್ರ

ಧರ್ಮಾರ್ಥಕಾಮಮೋಕ್ಷಾಣಾಂ ದೇಹಃ ಪರಮಸಾಧನಮ್
ಸ್ಥಿತಿಸ್ತಸ್ಯಾನ್ನಪಾನಾಭ್ಯಾಮತಸ್ತತ್ಸರ್ವಸಾಧನಮ್ ||೨೬||
ತಸ್ಮಾದನ್ನಸಮಂ ದಾನಂ ನ ಭೂತಂ ನ ಭವಿಷ್ಯತಿ

ತ್ರಯಾಣಾಮಪಿ ಲೋಕಾನಾಮುದಕಂ ಜೀವನಂ ಸ್ಮೃತಮ್
ಪವಿತ್ರಮಮೃತಂ ದಿವ್ಯಂ ಶುದ್ಧಂ ಸರ್ವರಸಾಶ್ರಯಮ್ ||೨೭||
ಅನ್ನಪಾನಪ್ರದಾನೇನ ಪಿಬನ್ ಖಾದನ್ ಸ ಗಚ್ಛತಿ

ಅನ್ನಪಾನಾಶ್ವಗೋವಸ್ತ್ರಶಯ್ಯಾಛತ್ರಾಸನಾನಿ ಚ
[1]ಪ್ರೇತಲೋಕೇ ಪ್ರಶಸ್ತಾನಿ ದಾನಾನ್ಯಷ್ಟೌ ವಿಶೇಷತಃ ||೨೮||

ಧರ್ಮಾರ್ಥಕಾಮಮೋಕ್ಷಾಣಾಂ = ಧರ್ಮ ಅರ್ಥ ಕಾಮ ಮೋಕ್ಷಂಗಳಿಗೆ ದೇಹಃ = ದೇಹವು ಪರಮಸಾಧನಂ = ಅತ್ಯಂತ ಸಾಧನವು ತಸ್ಯ = ಆ ಶರೀರಕ್ಕೆ ಅನ್ನಪಾನಾಭ್ಯಾಂ = ಅನ್ನ ಉದಕಂಗಳಿಂದ ಸ್ಥಿತಿಃ = ವರ್ತನೆ. ಅತಃ = ಅದು ಕಾರಣವಾಗಿ ತತ್ = ಆ ಶರೀರವು ಸರ್ವಸಾಧನಂ = ಸಮಸ್ತಕ್ಕೆಯೂ ಸಾಧನವಹಂಥಾದು. ತಸ್ಮಾತ್ = ಅದು ಕಾರಣವಾಗಿ ಅನ್ನಸಮಂ = ಅನ್ನಕ್ಕೆ ಸಮಾನವಹಂಥಾ ದಾನಂ = ದಾನವು ನ ಭೂತಂ = ಹಿಂದೆ ಆದದೂ ಇಲ್ಲ. ನ ಭವಿಷ್ಯತಿ = ಮುಂದೆ [3]ಆಹುದೂ[3] ಇಲ್ಲ. ||೨೬||

ತ್ರಯಾಣಾಂ ಲೋಕಾನಾಮಪಿ = ಮೂರು ಲೋಕಂಗಳಿಗೆಯೂ ಉದಕಂ = ಉದಕವು ಜೀವನಂ = ಜೀವನವೆಂದು ಸ್ಮೃತಂ = ಹೇಳಲುಪಟ್ಟಿತ್ತು. ಪವಿತ್ರಂ = ಪವಿತ್ರವಹಂಥಾದು ಅಮೃತಂ = ಅಮೃತವಹಂಥಾದು ದಿವ್ಯಂ = ದೇವತಾಸ್ವರೂಪವಹಂಥಾದು ಶುದ್ಧಂ = ಶುದ್ಧವಹಂಥಾದು ಸರ್ವರಸಾಶ್ರಯಂ = ಷಡ್ರಸಂಗಳಿಗೆ ಆಶ್ರಯವಹಂಥಾದು ಅನ್ನಪಾನಪ್ರದಾನೇನ = ಅನ್ನ ಉದಕಂಗಳ ದಾನವ ಮಾಡಿದ್ದರಿಂದ ಖಾದನ್ = ಉಣುತ್ತವು ಪಿಬನ್ = ಪಾನಮಾಡುತ್ತವು ಸಃ = ಆತನು ಗಚ್ಛತಿ = ಎಯ್ದುತ್ತಿಹನು. ||೨೭||

ಅನ್ನಪಾನಾಶ್ವಗೋವಸ್ತ್ರಶಯ್ಯಾಛತ್ರಾಸನಾನಿ ಚ = ಅನ್ನ ಉದಕ ಕುದುರೆ ಗೋವು ವಸ್ತ್ರ ಹಾಸಿಕೆ ಸತ್ತಿಗೆ ಗದ್ದುಗೆಗಳೆಂಬ ವಿಶೇಷತಃ = ವಿಶೇಷದಿಂದ ಅಷ್ಟೌ ದಾನಾನಿ ಚ = ಎಂಟು ದಾನಂಗಳೂ ಪ್ರೇತಲೋಕೇ = ಯಮಲೋಕದಲ್ಲಿ ಪ್ರಶಸ್ತಾನಿ = ಪ್ರಖ್ಯಾತಂಗಳಾಗುತ್ತಿಹವು. ||೨೮||

---

[1] ಪಿತೃ(ಕ) [2] ಏತಾನಿ ಚಾಷ್ಟದಾನಾನಿ ಪ್ರೇತಲೋಕೇ ಶುಭಾನಿ ಚ (ಘ).
[3] ಆದದೂ (ಕ) ಆಹುದೂ (ಖ)

ಗೃಹೀತದಾನಪಾಥೇಯಾಃ ಸುಖಂ ಯಾಂತಿ ಯಮಾಲಯಮ್
ಏವಂ ದಾನ ವಿಶೇಷೇಣ ಧರ್ಮರಾಜಪುರಂ ನರಾಃ
ಯಸ್ಮಾದ್ಯಾಂತಿ ಸುಖೇನೈವ ತಸ್ಮಾದ್ಧರ್ಮಂ ಸಮಾಚರೇತ್ ||೨೯||

ಯೇ ಪುನಃ ಕ್ರೂರಕರ್ಮಾಣಃ ಪಾಪಾ [2]ದಾನ[2]ವಿವರ್ಜಿತಾಃ
ತೇ ಘೋರೇಣ ಪಥಾ ಯಾಂತಿ ದಕ್ಷಿಣೇನ ಯಮಾಲಯಮ್ ||೩೦||

ಷಡಶೀತಿಸಹಸ್ರಾಣಿ ಯೋಜನಾನಾಮತೀತ್ಯ ಯತ್
ವೈವಸ್ವತಪುರಂ [3]ಜ್ಞೇಯಂ[3] ನಾನಾರೂಪಂ ವ್ಯವಸ್ಥಿತಮ್ ||೩೧||

ಏವಂ = ಈ ಪ್ರಕಾರದಲ್ಲಿ ದಾನವಿಶೇಷೇಣ = ದಾನಂಗಳ ವಿಶೇಷದಿಂದ ನರಾಃ = ಮನುಷ್ಯರುಗಳು ಗೃಹೀತಧಾನಪಾಥೇಯಾಃ = ಗ್ರಹಿಸಲ್ಪಟ್ಟ ದಾನಂಗಳೆಂಬ ದಾರಿಸಂಬಳವನುಳ್ಳವರುಗಳಾಗಿ ಯಮಾಲಯಂ = ಯಮನ ಸ್ಥಾನವಹಂಥಾ ಧರ್ಮರಾಜಪುರಂ = [5]ಸಂಯಮನೀಪುರವನ್ನು ಸುಖಂ = ಸುಖವಾಗಿ ಯಾಂತಿ = ಎಯ್ದುತ್ತಂವಿಹೆರು. ಯಸ್ಮಾತ್ = ಆವುದಾನೊಂದು ಕಾರಣವಾಗಿ ಸುಖೇನೈವ = ಸುಖದಿಂದವೆ ಯಾಂತಿ = ಎಯ್ದುತ್ತಿಹೆರು ತಸ್ಮಾತ್ = ಅದಃಕಾರಣ ಧರ್ಮಂ = ಧರ್ಮವನು ಸಮಾಚರೇತ್ = ಮಾಡುವುದು. ||೨೯||

ಯೇ = ಆರು ಕೆಲಬರು ದಾನವಿವರ್ಜಿತಾಃ = ದಾನವ ಮಾಡದೆಯಿದ್ದಂಥಾ ಕ್ರೂರಕರ್ಮಾಣಃ = ಕ್ರೂರಕರ್ಮಿಗಳುಂಟು ತೇ = ಅವರುಗಳು ಪಾಪಾತ್ = ಪಾಪದ ದೆಸೆಯಿಂದ ಪುನಃ = ಮರಳಿ ಘೋರೇಣ = ಭಯಂಕರವಹಂಥಾ ದಕ್ಷಿಣೇನ ಪಥಾ = ದಕ್ಷಿಣ ಮಾರ್ಗದಿಂದ ಯಮಾಲಯಂ = ಯಮನ ಸ್ಥಾನವನು ಯಾಂತಿ = ಎಯ್ದುತ್ತಿಹೆರು ||೩೦||

ಯೋಜನಾನಾಂ = ಯೋಜನಂಗಳ ಷಡಶೀತಿಸಹಸ್ರಾಣಿ = ಎಂಭತ್ತಾರು ಸಾವಿರಂಗಳನು ಅತೀತ್ಯ = ಮೀಱಿ ನಾನಾರೂಪಂ = ನಾನಾರೂಪಾಗಿ ವ್ಯವಸ್ಥಿತಂ = ಇರುತ್ತಿದ್ದಂಥಾ ಯತ್ = ಆವುದಾನೊಂದು ವೈವಸ್ವತಪುರಂ = ಯಮನ ಪಟ್ಟಣವು ಜ್ಞೇಯಂ = ಅಱಿಯಲು ಯೋಗ್ಯವು. ಭೂಮಿಗೆ ಯಮನ ಪಟ್ಟಣ ಎಂಭತ್ತಾರು ಸಾವಿರ ಗಾವುದ ದಾರಿ ಯೆಂಬುದರ್ಥ. ||೩೧||

[1] ಧರ್ಮ (ಘ) [2] ಧರ್ಮ (ಘ) [3] ದಿವ್ಯಂ (ಘ)
[4] ಯಮನಿಹಪುರವನು (ಕ)

ಸಮೀಪಸ್ಥಮಿವಾಭಾತಿ ನರಾಣಾಂ ಪುಣ್ಯಕರ್ಮಣಾಮ್
[1]ಪಾಪಿ[1]ನಾಮತಿದೂರಸ್ಥಂ ಪಥಾ ರೌದ್ರೇಣ ಗಚ್ಛತಾಮ್ ||೩೨||

ತೀಕ್ಷ್ಣಕಂಟಕಯುಕ್ತೇನ ಶರ್ಕರಾಗ್ನಿಯುತೇನ ಚ
ಕ್ಷುರಧಾರಾನಿಭೈ[2]ಸ್ತೀಕ್ಷ್ಣೈಃ ಪಾಷಾಣೈರ್ನಿಚಿತೇನ ಚ[2] ||೩೩||

ಕ್ವಚಿತ್ಪಂಕೇನ ಮಹತಾ ದುರುತ್ತಾರೈಶ್ಚ ಕಾನನೈಃ
ಲೋಹಸೂಚೀನಿಭೈ*ರ್ದರ್ಭೈಃ [3]ಸಞ್ಛನ್ನೇನ[3] ಪಥಾ ಕ್ವಚಿತ್||೩೪||

ತಟಪ್ರಪಾತವಿಷಮೈಃ ಪರ್ವತೈರ್ವೃಕ್ಷಸಂಕುಲೈಃ
ಪ್ರತಪ್ತಾಂಗಾರ†ಯುಕ್ತೇನ ಯಾಂತಿ ಮಾರ್ಗೇಣ ದುಃಖಿತಾಃ ||೩೫||

ಪುಣ್ಯಕರ್ಮಣಾಂ = ಪುಣ್ಯವ ಮಾಡಿದಂಥಾ ನರಾಣಾಂ = ಮನುಷ್ಯರುಗಳಿಗೆ ಸಮೀಪಸ್ಥಮಿವ = ಸಮೀಪದಲ್ಲಿದ್ದು ತಕ್ಕೈಯೆಂಬ ಹಾಂಗೆ ಆಭಾತಿ = ತೋಱು ತ್ತಿಹುದು. ರೌದ್ರೇಣ = ಭಯಂಕರವಹಂಥಾ ಪಥಾ = ದಾರಿಯಿಂದ ಗಚ್ಛಂತಿ = ಹೋಗುತ್ತಂವಿದ್ದಂಥಾ ಪಾಪಿನಾಂ = ಪಾಪವ ಮಾಡಿದವರುಗಳಿಗೆ ಅತಿದೂರಸ್ಥಂ = ಅತ್ಯಂತ ದೂರದಲ್ಲಿದ್ದಂಥಾದಾಗಿ ಆಭಾತಿ = ತೋಱುತ್ತಿಹುದು. ||೩೨||

ತೀಕ್ಷ್ಣಕಂಟಕಯುಕ್ತೇನ = ಮೊನೆಯಾಗಿದ್ದ ಮುಳ್ಳುಗಳಿಂದ ಕೂಡಲು ಪಟ್ಟಂಥಾ ಪಥಾ = ಮಾರ್ಗದಿಂದ ಶರ್ಕರಾಗ್ನಿಯುತೇನ ಚ = ಕಲ್ಲಹರಳುಗಳು ಅಗ್ನಿ ಯಿಂದ ಕೂಡಲುಪಟ್ಟಂಥಾ ದಾರಿಯಿಂದ ಕ್ಷುರಧಾರಾನಿಭೈಃ = ಕೂರುವಿನ ಧಾರೆಗೆ ಸಮಾನವಾಗುತ್ತಂವಿದ್ದಂಥಾ ತೀಕ್ಷ್ಣೈಃ = ಕೂರಿತಹಂಥಾ ಪಾಷಾಣೈಃ = ಕಲ್ಲು ಗಳಿಂದ ನಿಚಿತೇನ ಚ = ಕೂಡಲುಪಟ್ಟಂಥಾ ದಾರಿಯಿಂದ. ||೩೩||

ಕ್ವಚಿತ್ = ಕೆಱದು ಠಾವಿನಲ್ಲಿ ಮಹತಾ = ಬಹಳವಹಂಥಾ *ಪಂಕೇನ = ಕೆಸಱನುಳ್ಳಂಥಾ ದಾರಿಯಿಂದ ಕ್ವಚಿತ್ = ಕೆಱದೆಡೆಯಲ್ಲಿ ದುರುತ್ತಾರೈಃ = ಹೋಗ ಬಾರದೇಯಿದ್ದಂಥಾ ಕಾನನೈಶ್ಚ = ಅರಣ್ಯಂಗಳಿಂದ ಲೋಹಸೂಚೀನಿಭೈಃ = ಉಕ್ಕಿನ ಸೂಜಿಗೆ ಸಮಾನವಹಂಥಾ ದರ್ಭೈಃ = ದರ್ಭೆಗಳಿಂದ ಸಞ್ಛನ್ನೇನ = ಮುಸುಕಿದಂಥಾ *ಪಥಾ = ದಾರಿಯಿಂದ. ||೩೪||

ತಟಪ್ರಪಾತವಿಷಮೈಃ = ದರಿಗಳಿಂದ ಕಮ್ಮರಿಗಳಿಂದ ವಿಷಮವಾಗಿದ್ದಂಥಾ ವೃಕ್ಷಸಂಕುಲೈಃ = ಮರಂಗಳ ಮೊತ್ತವನುಳ್ಳಂಥಾ ಪರ್ವತೈಃ = ಪರ್ವತಂಗಳಿಂದ ಪ್ರತಪ್ತಾಂಗಾರಯುಕ್ತೇನ = ಉರಿವುತ್ತಿದ್ದ ಕೆಂಡಂಗಳಿಂದ ಕೂಡಲುಪಟ್ಟಂಥಾ

---

1 ಪಾಪಾ (ಕ.ಖ.ಚ) 2 ರ್ದರ್ಭೈಃ ಸಂಚ್ಛನ್ನೇನ ಪಥಾ ಕ್ವಚಿತ್(ಕ) ಮೂಲಪಾಠ ಮಾತ್ರ.
* ಈ ಭಾಗ ಲುಪ್ತ (ಖ) 3 ಪ್ರಚ್ಛನ್ನೇನ (ಗ) † ಈ ಭಾಗ ಲುಪ್ತ (ಖ)

ಕ್ವಚಿದ್ವಿಷಮಗರ್ತೈಶ್ಚ ಕ್ವಚಿಲ್ಲೋಷ್ಟೈಶ್ಚ [1]ಪಿಚ್ಛಿಲೈಃ
ಸುತಪ್ತವಾಲುಕಾಭಿಶ್ಚ ತಥಾ ತೀಕ್ಷ್ಣೈಶ್ಚ ಶಂಕುಭಿಃ ||೩೬||

ಅನೇಕಶಾಖಾವಿತತೈರ್ವ್ಯಾಪ್ತಂ ವಂಶವನೈಃ ಕ್ವಚಿತ್
ಕ್ವಚಿತ್ಕಷ್ಟೇನ ತಮಸಾಪ್ಯನಾಲಂಬೇನ ಕುತ್ರಚಿತ್ ||೩೭||

†ಅಯಃಶೃಂಗಾಟಕೈಸ್ತಪ್ತೈಃ ಕ್ವಚಿದ್ದಾವಾಗ್ನಿನಾ ಪುನಃ
ಕ್ವಚಿತ್ತಪ್ತಶಿಲಾಭಿಶ್ಚ ಕ್ವಚಿದ್ವ್ಯಾಪ್ತಂ ಹಿ*ಮೇನ [2]ಚ[3] ||೩೮||

ಮಾರ್ಗೇಣ = ಮಾರ್ಗದಿಂದ ದುಃಖಿತಾಃ = ದುಃಖವನುಳ್ಳವರುಗಳಾಗಿ ಯಾಂತಿ = ಎಯ್ದುತ್ತಿಹರು. ||೩೫||

ಕ್ವಚಿತ್ = ಕೆಲುದೆಡೆಯಲ್ಲಿ ವಿಷಮಗರ್ತೈಶ್ಚ = ವಿಷಮವಹಂಥಾ ಕುಳಿಗಳಿಂದವೂ ಕ್ವಚಿತ್ = ಕೆಲುದು ಠಾವಿನಲ್ಲಿ ಲೋಷ್ಟೈಃ = ಹೆಂಟೆಗಳಿಂದವೂ ಪಿಚ್ಛಿಲೈಶ್ಚ = ಎಲವದ ಮರಂಗಳಿಂದವೂ ಸುತಪ್ತವಾಲುಕಾಭಿಶ್ಚ = ಕಾದ ಮಳಲುಗಳಿಂದವೂ ತಥಾ = ಹಾಂಗೆ ತೀಕ್ಷ್ಣೈಃ = ಮೊನೆಯಾಗಿದ್ದಂಥಾ ಶಂಕುಭಿಶ್ಚ = ದಸಿಗಳಿಂದವೂ. ||೩೬||

ಕ್ವಚಿತ್ = ಕೆಲುದು ಠಾವಿನಲ್ಲಿ ಅನೇಕಶಾಖಾವಿತತೈಃ = ಬಹಳ ಶಾಖೆಗಳಿಂದ ಮುಸುಕಿದಂಥಾ ವಂಶವನೈಃ = ಬಿದಿರುಹಿಂಡಿಲುಗಳಿಂದ ವ್ಯಾಪ್ತಂ = ವ್ಯಾಪಿಸಲು ಪಟ್ಟಂಥಾ ಮಾರ್ಗವೂ ಕ್ವಚಿತ್ = ಕೆಲುದೆಡೆಯಲ್ಲಿ ಕಷ್ಟೇನ = ಅತಿ ಕಷ್ಟವಹಂಥಾ ಅನಾಲಂಬೇನ = ಆಶ್ರಯಿಸಲು ಬಾರದಂಥಾ ತಮಸಾಪಿ = ಕತ್ತಲೆಯಿಂದವು ವ್ಯಾಪ್ತಂ = ವ್ಯಾಪಿಸಲುಪಟ್ಟಂಥಾ ಪಥವು ||೩೭||

ಕ್ವಚಿತ್ = ಕೆಲುದುಠಾವಿನಲ್ಲಿ ತಪ್ತೈಃ = ಕಾಸುತ್ತಿದ್ದಂಥಾ ಅಯಃಶೃಂಗಾಟಕೈಃ = ಕಬ್ಬುನವನುಳ್ಳ ನಾಲ್ಕುಬಟ್ಟೆಕೂಡಿದ ದಾರಿಗಳಿಂದ ಪುನಃ = ಮರಳಿ ಕುತ್ರಚಿತ್ ಕೆಲುದೆಡೆಯಲ್ಲಿ ದಾವಾಗ್ನಿನಾ = ಕಾಳುಕಿಚ್ಚಿಂದ ಕ್ವಚಿತ್ = ಕೆಲುದೆಡೆಯಲ್ಲಿ ತಪ್ತಶಿಲಾಭಿಶ್ಚ = ಕಾದಕಲ್ಲುಗಳಿಂದವೂ ಕ್ವಚಿತ್ = ಕೆಲುದೆಡೆಯಲ್ಲಿ ಹಿಮೇನ ಚ = ಹಿಮದ ಘಟ್ಟಿಯಿಂದವೂ ವ್ಯಾಪ್ತಂ = ವ್ಯಾಪಿಸಲುಪಟ್ಟಂಥಾ ಪಥವು ||೩೮||

---

1 ಪಿಚ್ಚಲೈಃ (ಘ)

† (ಕ) ದಲ್ಲಿಲ್ಲ ಈ ಶ್ಲೋಕ. ಉಳಿದೆಲ್ಲ ಪ್ರತಿಗಳಲ್ಲಿಯೂ ಇದೆ.

* ಈ ಭಾಗ (ಖ)ದಲ್ಲಿ ಲುಪ್ತ. 2 ವಾ (ಘ) 3 ಈ ಭಾಗ ಲುಪ್ತ (ಖ).

ಕ್ವಚಿದ್ವಾಲುಕಯಾ ವ್ಯಾಪ್ತಮಾಕಂಠಾಂತಪ್ರವೇಶಯಾ
ಕ್ವಚಿದುಷ್ಣಾಂಬು*ನಾ ವ್ಯಾಪ್ತಂ ಕ್ವಚಿತ್ಕಾರೀಷವಹ್ನಿನಾ ||೩೯||

ಕ್ವಚಿತ್ ಸಿಂಹೈರ್ವೃಕೈರ್ವ್ಯಾಘ್ರೈರ್ದಂಶೈಃ ಕೀಟೈಶ್ಚ ದಾರುಣೈಃ
ಕ್ವಚಿನ್ಮಹಾಜಲೂಕಾಭಿಃ ಕ್ವಚಿಚ್ಚಾಜಗರೈಃ ಪುನಃ ||೪೦||

ಮಕ್ಷಿಕಾಭಿಶ್ಚ ರೌದ್ರಾಭಿಃ ಕ್ವಚಿತ್ಸರ್ಪೈರ್ವಿಷೋಲ್ಬಣೈಃ
ಮತ್ತಮಾತಂಗಯೂಥೈಶ್ಚ ಬಲೋನ್ಮತ್ತೈಃ [1]ಪ್ರಹಾರಿಭಿಃ ||೪೧||

ಪಂಥಾನಮುಲ್ಲಿಖದ್ಭಿಶ್ಚ [2]ತೀಕ್ಷ್ಣಶೃಂಗೈರ್ಮಹಾವೃಷೈಃ
ಮಹಾಶೃಂಗೈಶ್ಚ ಮಹಿಷೈರು[3]ಷ್ಟ್ರೈರ್ಮತ್ತೈಶ್ಚ ಬಾಧಕೈಃ ||೪೨||

ಕ್ವಚಿತ್ = ಕೆಲವೆಡೆಯಲ್ಲಿ ಆಕಂಠಾಂತಪ್ರವೇಶಯಾ = ಕೊರಳುಪರ್ಯಂತ ಹೂಳಲುಪಟ್ಟಂಥಾ ವಾಲುಕಯಾ = ಮಳಲಿನಿಂದ ವ್ಯಾಪ್ತಂ = ವ್ಯಾಪಿಸಲುಪಟ್ಟಂಥಾ ಪಥವು ಕ್ವಚಿತ್ = ಕೆಲವೆಡೆಯಲ್ಲಿ ಉಷ್ಣಾಂಬುನಾ = ಕಾದನೀರಿಂದ ವ್ಯಾಪ್ತಂ = ವ್ಯಾಪಿಸಲುಪಟ್ಟಂಥಾ ಮಾರ್ಗವು ಕ್ವಚಿತ್ = ಕೆಲವೆಡೆಯಲ್ಲಿ ಕಾರೀಷವಹ್ನಿನಾ = ಬೆರಣಿಯ ಕಿಚ್ಚಿನಿಂದ ವ್ಯಾಪ್ತಂ = ವ್ಯಾಪಿಸಲುಪಟ್ಟಂಥಾ ಮಾರ್ಗವು ||೩೯||

ಕ್ವಚಿತ್ = ಕೆಲವು ಠಾವಿನಲ್ಲಿ ಸಿಂಹೈಃ = ಸಿಂಹಗಳಿಂದ ವೃಕೈಃ = ತೋಳಗಳಿಂದ ವ್ಯಾಘ್ರೈಃ = ಹುಲಿಗಳಿಂದ ದಂಶೈಃ = ಕಾಡನೊಣಂಗಳಿಂದ ದಾರುಣೈಃ = ಭಯಂಕರವಹಂಥಾ ಕೀಟೈಶ್ಚ = ಹುಳುಗಳಿಂದವೂ ಕ್ವಚಿತ್ = ಕೆಲವೆಡೆಯಲ್ಲಿ ಮಹಾಜಲೂಕಾಭಿಃ = ದೊಡ್ಡಿತ್ತಹ ಜಿಗುಳೆಗಳಿಂದ ಪುನಃ = ಮರಳಿ ಕ್ವಚಿತ್ = ಕೆಲವೆಡೆಯಲ್ಲಿ ಅಜಗರೈಶ್ಚ = ಹೆಬ್ಬಾವುಗಳಿಂದವೂ ||೪೦||

ಕ್ವಚಿತ್ = ಕೆಲವೆಡೆಯಲ್ಲಿ ರೌದ್ರಾಭಿಃ = ಭಯಂಕರ [3]ವಹಂಥಾ ಮಕ್ಷಿಕಾಭಿಶ್ಚ = ನೊಣಂಗಳಿಂದವು ವಿಷೋಲ್ಬಣೈಃ = ವಿಷದಿಂದ ಹೆಚ್ಚಿದಂಥಾ [3]ಸರ್ಪೈಶ್ಚ = ಸರ್ಪಂಗಳಿಂದವೂ ಬಲೋನ್ಮತ್ತೈಃ = ಸತ್ತ್ವದಿಂದ ಉನ್ಮತ್ತಗಳಹಂಥಾ ಪ್ರಹಾರಿಭಿಃ = ಕೊಲುತ್ತಂಮಿದ್ದಂಥಾ ಮತ್ತಮಾತಂಗಯೂಥೈಶ್ಚ = ಮದಸೊಕ್ಕಿದ ಆನೆಗಳ ಹಿಂಡುಗಳಿಂದವೂ ||೪೧||

ಪಂಥಾನಂ = ದಾರಿಯನು ಉಲ್ಲಿಖದ್ಭಿಃ = ಈಡಿಬೀವುತ್ತಿದ್ದಂಥಾ ತೀಕ್ಷ್ಣ-[4]ಶೃಂಗೈಃ = ಕೂರಿತಹ ಕೊಂಬುಗಳುಳ್ಳಂಥಾ ಮಹಾವೃಷೈಶ್ಚ = ದೊಡ್ಡಿತ್ತಹ ಬಸವಂಗಳಿಂದವೂ ಬಾಧಕೈಃ = ಬಾಧಿಸುತ್ತಿದ್ದಂಥಾ ಉಷ್ಟ್ರೈಶ್ಚ = ಒಟ್ಟೆ[ಒಂಟೆ]

---

* ಈ ಭಾಗ (ಖ)ದಲ್ಲಿ ಲುಪ್ತ 1 ಪ್ರಮಾಥಿಭಿಃ (ಘ). 2 ಸೂಕರೈಸ್ತೀಕ್ಷ್ಣದಂಷ್ಟ್ರಿಭಿಃ(ಘ) 3 (ಖ)ದಲ್ಲಿ ಲುಪ್ತ. 4 (ಖ)ದಲ್ಲಿ ಲುಪ್ತ.

[1]ಡಾಕಿನೀಭಿಶ್ಚ ರೌದ್ರಾಭಿಃ ವಿಕರಾಳೈಶ್ಚ ರಾಕ್ಷಸೈಃ
ವ್ಯಾಧಿಭಿಶ್ಚ ಮಹಾಘೋರೈಃ ಪೀಡ್ಯಮಾನಾ[1] ವ್ರಜಂತಿ ಚ ||೪೩||

[2]ಮಹಾಧೂಳಿ[2]ವಿಮಿಶ್ರೇಣ ಮಹಾಚಂ*ಡೇನ ವಾಯುನಾ
ಮಹಾಪಾಷಾಣವರ್ಷೇಣ ಹನ್ಯಮಾನಾ ನಿರಾಶ್ರಯಾಃ ||೪೪||

ಕ್ವಚಿದ್ವಿದ್ಯುತ್ಪ್ರಪಾತೇನ ಪೀಡ್ಯಮಾನಾ ವ್ರಜಂತಿ ಚ
ಮಹತಾ ಬಾಣವರ್ಷೇಣ ಭಿದ್ಯಮಾನಾ[3]ಶ್ಚ ಸರ್ವತಃ[3] ||೪೫||

ಪತದ್ಭಿರ್ವಜ್ರಸಂಘಾತೈರುಲ್ಕಾಪಾತೈಶ್ಚ ದಾರುಣೈಃ
ಪ್ರದೀಪ್ತಾಂಗಾರವರ್ಷೇಣ ದಹ್ಯಮಾನಾ ವ್ರಜಂತಿ ಚ ||೪೬||

ಗಳಿಂದವೂ ಮತ್ತೈಃ = ಸೊಕ್ಕಿದಂಥಾ ಮಹಾಶೃಂಗೈಃ = ದೊಡ್ಡಿಯ ಕೋಡುಗಳ-ನುಳ್ಳಂಥಾ ಮಹಿಷೈಶ್ಚ = ಕಾಡುಕೋಣಂಗಳಿಂದವೂ ||೪೨||

ರೌದ್ರಾಭಿಃ = ಭಯಂಕರವಹಂಥಾ ಡಾಕಿನೀಭಿಶ್ಚ = ಡಾಕಿನಿಯರುಗಳಿಂದವೂ ವಿಕರಾಳೈಃ = ರೌದ್ರವಹಂಥಾ ರಾಕ್ಷಸೈಶ್ಚ = ರಾಕ್ಷಸರುಗಳಿಂದವೂ ಮಹಾಘೋರೈಃ = ಅತಿಭಯಂಕರವಹಂಥಾ ವ್ಯಾಧಿಭಿಶ್ಚ = ವ್ಯಾಧಿಗಳಿಂದವೂ ಪೀಡ್ಯಮಾನಾಃ = ಪೀಡಿಸಲುಪಟ್ಟವರುಗಳಾಗಿ ವ್ರಜಂತಿ = ಎಯ್ದುತ್ತಿದರು. ||೪೩||

ಮಹಾಧೂಳಿವಿಮಿಶ್ರೇಣ = ಬಹಳಧೂಳಿಂದ ಮಿಶ್ರವಾಗಲುಪಟ್ಟಂಥಾ ಮಹಾಚಂಡೇನ ವಾಯುನಾ = [4]ಬಹಳವಾಗಿ ಬೀಸುತ್ತಿದ್ದಂಥಾ[4] ಬಿರುಗಾಳಿಯಿಂದ ಮಹಾಪಾಷಾಣವರ್ಷೇಣ = ಬಹಳವಹ ಕಲ್ಲ[5]ಮಳೆಯಿಂದ ಹನ್ಯಮಾನಾಃ = ತಾಟಿಸಲುಪಟ್ಟವರುಗಳಾಗಿ ನಿರಾಶ್ರಯಾಃ = ಆಶ್ರಯವಿಲ್ಲದವರುಗಳಹ[5]ರು. ||೪೪||

ಕ್ವಚಿತ್ = ಕೆಲವೆಡೆಯಲ್ಲಿ ವಿದ್ಯುತ್ಪ್ರಪಾತೇನ = ಮಿಂಚು ಹೊಳವುದರಿಂದ ಪೀಡ್ಯಮಾನಾಃ = ಪೀಡಿಸಲುಪಟ್ಟವರುಗಳು ಮಹತಾ = ಬಹಳವಹಂಥಾ ಬಾಣವ[6]ರ್ಷೇಣ = ಬಾಣದ ಮಳೆಯಿಂದ ಸರ್ವತಃ = ಎಲ್ಲಾ ಕಡೆಯಲೂ ಭಿದ್ಯಮಾನಾಶ್ಚ = ತಾಗಲುಪಟ್ಟವರುಗಳಾ[6]ಗಿ ವ್ರಜಂತಿ = ಎಯ್ದುತ್ತಿಹರು. ||೪೫||

ಪತದ್ಭಿಃ = ಎರಗುತ್ತಿದ್ದಂಥಾ ವಜ್ರಸಂಘಾತೈಃ = ಸಿಡಿಲ ಸಮೂಹಂಗಳಿಂದ ದಾರುಣೈಃ = ಭಯಂಕರವಹಂಥಾ ಉಲ್ಕಾಪಾತೈಶ್ಚ = ಉಳುಕುಗಳು ಬೀಳುಹಂಗಳಿಂದವೂ ಪ್ರದೀಪ್ತಾಂಗಾರವರ್ಷೇಣ = ಉರಿವುತ್ತಿದ್ದ ಕೆಂಡದ ಮಳೆಯಿಂದ ದಹ್ಯಮಾನಾಃ = ಬೇವುತ್ತಿದ್ದವರುಗಳಾಗಿ ವ್ರಜಂತಿ = ಎಯ್ದುತ್ತಿಹರು. ||೪೬||

---

[1] (ಖ)ದಲ್ಲಿ ಲುಪ್ತ [2] ಸದಾಧೂಳಿ (ಘ) * (ಖ) ಲುಪ್ತ [3] (ಖ) ಲುಪ್ತ
[4] ದೊಡ್ಡಿತ್ತಾದ(ಕ) [5] ಸ್ಸಮಂತತಃ (ಘ) [6] (ಖ) ಲುಪ್ತ.

ಮಹತಾ ಪಾಂಸುವರ್ಷೇಣ ಪೂರ್ಯಮಾಣಾ [1]ವ್ರಜಂತಿ[1] ಚ
ಮಹಾಮೇಘಸ್ವನೈರ್ಘೋರೈರ್ವಿತ್ರಸ್ಯಂತೇ ಮುಹುರ್ಮುಹುಃ ||೪೭||

ನಿಶಿತಾಯುಧವರ್ಷೇಣ [2]ಚೂರ್ಯಮಾಣಾಶ್ಚ[2] ಮರ್ಮಸು
ಮಹಾಕ್ಷಾರಾಂಬುಧಾರಾಭಿಃ ಸಿಚ್ಯಮಾನಾ [3]ವ್ರಜಂತಿ[3] ಚ ||೪೮||

ಮಹಾಶೀತೇನ ಮರುತಾ ರೂಕ್ಷೇಣ ಪರುಷೇಣ ಚ
ಸಮಂತಾತ್ ಭ್ರಾಮ್ಯಮಾಣಾಶ್ಚ ಶುಷ್ಯಂತೇ [4]ಸಂಕುಚಂತಿ[4] ಚ ||೪೯||

ಇತ್ಥಂ ಮಾರ್ಗೇಣ ರೌದ್ರೇಣ ಪಾಥೇಯರಹಿತೇನ ಚ
ನಿರಾಲಂಬೇನ [5]ದು[5]ರ್ಗೇಣ ನಿರ್ಜಲೇನ ಸಮಂತತಃ ||೫೦||

ಮಹತಾ = ದೊಡ್ಡಿತ್ತಹಂಥಾ ಪಾಂಸುವರ್ಷೇಣ = ಧೂಳಿನ ಮಳೆಯಿಂದ ಪೂರ್ಯಮಾಣಾಃ = ಮುಸುಕಲುಪಟ್ಟವರುಗಳಾಗಿ ವ್ರಜಂತಿ ಚ = ಎಯ್ದುತ್ತಿಹರು. ಘೋರೈಃ = ಭಯಂಕರವಹಂಥಾ ಮಹಾಮೇಘಸ್ವನೈಃ = ಬಹಳವಹ ಮೇಘಧ್ವನಿಗಳಿಂದ ಮುಹುರ್ಮುಹುಃ = ಅಡಿಗಡಿಗೆ ವಿತ್ರಸ್ಯಂತೇ = ನಡುಗುತ್ತಿಹರು. ||೪೭||

ನಿಶಿತಾಯುಧವರ್ಷೇಣ = ಕೂರಿತಹ ಆಯುಧಂಗಳ ಮಳೆಗಳಿಂದವೂ ಮರ್ಮಸು = ಮರ್ಮಸ್ಥಾನಂಗಳಲ್ಲಿ ಚೂರ್ಯಮಾಣಾಃ = ಚುಚ್ಚಲುಪಟ್ಟವರುಗಳಾಗಿ ಮಹಾಕ್ಷಾರಾಂಬುಧಾರಾಭಿಃ = ಬಹಳವಹ ಉಪ್ಪಿನ ಧಾರೆಯ ಮಳೆಗಳಿಂದ ಸಿಚ್ಯಮಾನಾಃ = ನೆನೆಯಲುಪಟ್ಟವರುಗಳಾಗಿ ವ್ರಜಂತಿ = ಎಯ್ದುತ್ತಿಹರು. ||೪೮||

ಮಹಾಶೀತೇನ = ಅತಿ ಛಳಿಯಹಂಥಾ ಮರುತಾ = ಘಾಳಿಯಿಂದ ಪರುಷೇಣ = ನಿಷ್ಠುರವಹಂಥಾ ರೂಕ್ಷೇಣ = ಸೆಖಳಿಯಿಂದ ಸಮಂತಾತ್ = ಎಲ್ಲಾ ಕಡೆಯಲೂ ಭ್ರಾಮ್ಯಮಾಣಾಶ್ಚ = ಸುತ್ತಿಯಾಡುತ್ತಂವಿದ್ದಂಥಾ ಅವರುಗಳಾಗಿಯೂ ಶುಷ್ಯಂತೇ = ಬಳಲುತ್ತಿಹರು ಸಂಕುಚಂತಿ = ವ್ಯಾಕುಳ[6]ವಾಗುತ್ತಿಹರು.[6] ||೪೯||

ಇತ್ಥಂ = ಈ ಪ್ರಕಾರದಲ್ಲಿ ರೌದ್ರೇಣ = ಭಯಂಕರವಹಂಥಾ ಮಾರ್ಗೇಣ = ಮಾರ್ಗದಿಂದ ಪಾಥೇಯರಹಿತೇನ ಚ = ದಾರಿ ಸಂಬಳವಿಲ್ಲದೆಯಿಹುದಱಿಂದವೂ ನಿರಾಲಂಬೇನ = ಆಶ್ರಯಿಸಬಾರದಂಥಾ ದುರ್ಗೇಣ = ದುರ್ಗದಿಂದ ಸಮಂತತಃ = ಎಲ್ಲಾ ಕಡೆಯಲ್ಲಿಯೂ ನಿರ್ಜಲೇನ = ಜಲವಿಲ್ಲದೆಯಿಹುದಱಿಂದ ||೫೦||

---

[1] ರುದಂತಿ (ಘ). [2] ಭಿಂದ್ಯಮಾನಾಶ್ಚ (ಘ). [3] ದ್ರವಂತಿ (ಖ.ಗ.ಘ.ಚ.)
[4] ಸಂಕುಲಂತಿ (ಕ. ಘ. ಚ). [5]ಮಾ (ಗ)
[6] ಪಡುತ್ತಿಹರು (ಕ). ವಾಗುತ್ತಂವಿಹರು (ಖ).

ಅವಿಶ್ರಮೇಣ ಮಹತಾ ನಿರ್ಗತಾಪಾಶ್ರಯೇಣ ಚ
ತಮೋರೂಪೇಣ ಕಷ್ಟೇನ ಸರ್ವದುಃಖಾಶ್ರಯೇಣ ಚ ||೫೧||

ನೀಯಂತೇ ದೇಹಿನಃ ಸರ್ವೇ ಯೇ ಮೂಢಾಃ ಪಾಪಕರ್ಮಿಣಃ
ಯಮದೂತೈರ್ಮಹಾಘೋರೈಃ ತದಾಜ್ಞಾಕಾರಿಭಿರ್ಬಲಾತ್ ||೫೨||

ಏಕಾಕಿನಃ ಪರಾಧೀನಾಃ ಮಿತ್ರಬಂಧುವಿವರ್ಜಿತಾಃ
[1]ಶೋಚಂತಿ[1] ಸ್ವಾನಿ ಕರ್ಮಾಣಿ ರುದಂತಿ ಚ ಮುಹುರ್ಮುಹುಃ ||೫೩||

ಪ್ರೇತಭೂತಾ ವಿವಸ್ತ್ರಾಶ್ಚ ಶುಷ್ಕಕಂಠೋಷ್ಠತಾಲುಕಾಃ
ಕೃಶಾಂಗಾಃ ಶೀತಭೀತಾಶ್ಚ ದಹ್ಯಮಾನಾ ಕ್ಷುಧಾಗ್ನಿನಾ ||೫೪||

ಅವಿಶ್ರಮೇಣ = ವಿಶ್ರಮಿಸಲಿಲ್ಲದೆಯಿದ್ದಂಥಾ ಮಹತಾ = ಬಹಳವಹಂಥಾ ನಿರ್ಗತಾಪಾಶ್ರಯೇಣ ಚ = ಹೋಗಲುಪಟ್ಟ ಉದಕಂಗಳ ಆಶ್ರಯವನುಳ್ಳಂಥಾ ತಮೋರೂಪೇಣ = ಅಂಧಕಾರಮಯವಹಂಥಾ ಕಷ್ಟೇನ = ಅತಿ ಕಷ್ಟವಹಂಥಾ ಸರ್ವದುಃಖಾಶ್ರಯೇಣ ಚ = ಸಮಸ್ತ ದುಃಖಂಗಳಿಗೆ ಆಶ್ರಯವಹಂಥಾ ಮಾರ್ಗೇಣ = ಮಾರ್ಗದಿಂದ ||೫೧||

ಯೇ = ಆರು ಕೆಲಬರು ಪಾಪಕರ್ಮಿಣಃ = ಪಾಪವ ಮಾಡಿದಂಥಾ ಮೂಢಾಃ = ಮೂರ್ಖರಹಂಥಾ ಸರ್ವದೇಹಿನಃ = ಸಮಸ್ತ ಪ್ರಾಣಿಗಳು ನೀಯಂತೇ = ಎಯ್ಯುತ್ತಿಹರು. ||೫೨||

ತದಾಜ್ಞಾಕಾರಿಭಿಃ = ಆ ಯಮನ ಆಜ್ಞಾಧಾರಿಗಳಹಂಥಾ ಮಹಾಘೋರೈಃ = ಅತಿಭಯಂಕರವಹಂಥಾ ಯಮದೂತೈಃ = ಯಮದೂತರುಗಳಿಂದ ಬಲಾತ್ = ಬಲಾತ್ಕಾರದ ದೆಸೆಯಿಂದ ಪರಾಧೀನಾಃ = ಪರಾಧೀನರುಗಳಹಂಥಾ ಏಕಾಕಿನಃ = ಏಕಾಕಿಗಳಹಂಥಾ ಮಿತ್ರಬಂಧುವಿವರ್ಜಿತಾಃ = ಸಂಗಡಿಗರೂ ನಂಟರೂ ಇಲ್ಲದವರುಗಳಾಗಿ ಸ್ವಾನಿ ಕರ್ಮಾಣಿ = ತಾವು ಮಾಡಿದಂಥಾ ಪಾಪಂಗಳ ಕುಱಿತು ಶೋಚಂತಿ = ಶೋಕಿಸುತ್ತಿಹರು. ಮುಹುರ್ಮುಹುಃ = ಅಡಿಗಡಿಗೆ ರುದಂತಿ = ಅಳುತ್ತಿಹರು ||೫೩||

ಪ್ರೇತಭೂತಾಃ = ಪ್ರೇತರುಗಳಾದಂಥಾ ವಿವಸ್ತ್ರಾಃ = ವಸ್ತ್ರವಿಲ್ಲದೆಯಿದ್ದಂಥಾ ಶುಷ್ಕಕಂಠೋಷ್ಠತಾಲುಕಾಃ = ಒಣಗಲುಪಟ್ಟ ಗಂಟಲು ತುಟಿ ಕಟವಾಯಿಗಳನುಳ್ಳಂಥಾ ಕೃಶಾಂಗಾಃ = ಬಡವಾದ ಶರೀರವನುಳ್ಳಂಥಾ ಶೀತಭೀತಾಃ = ಛಳಿಗಂಜುತ್ತಿದ್ದಂಥಾ ಕ್ಷುಧಾಗ್ನಿನಾ = ಹಸಿವೆಯೆಂಬ ಕಿಚ್ಚಿನಿಂದ ದಹ್ಯಮಾನಾಶ್ಚ = ಬೇಯಲುಪಟ್ಟವರುಗಳಾಗುತ್ತಿಹರು. ||೫೪||

---

1 ಶೋಚಂತಃ (ಘ).

ಬದ್ಧಾಃ ಶೃಂಖಲಯಾ ಕೇಚಿತ್ ಉತ್ತಾನಾಃ ಪಾದಯೋರ್ನರಾಃ
ಆಕೃಷ್ಯಂತೇ [1]ಘೃ[1]ಷ್ಯಮಾಣಾಃ ಯಮದೂತೈರ್ಬಲೋ[2]ತ್ಕಟೈಃ[2] ||೫೫

ಉರಸಾಧೋಮುಖಾಶ್ಚಾನ್ಯೇ [3]ಘೃ[3]ಷ್ಯಮಾಣಾಸ್ಸುದುಃಖಿತಾಃ
ಕೇಶಪಾಶನಿಬದ್ಧೇನ ಸಮಾಕೃಷ್ಯಂತಿ ರಜ್ಜುನಾ ||೫೬||

ಲಲಾಟೇ ಚಾಂಕುಶೇನಾನ್ಯೇ ಭಿನ್ನಾಃ[4]ಕೃಷ್ಯಂತಿ[4] ದೇಹಿನಃ
ಉತ್ತಾನಕಂಟಕಪಥಾ ಕ್ವಚಿದಂಗಾರವರ್ತ್ಮನಾ ||೫೭||

ಪಶ್ಚಾದ್ಬಾಹುಕಬದ್ಧಾಶ್ಚ ಜಠರೇ ಚ ಪ್ರಬಾಧಿತಾಃ
ಪೂರಿತಾಃ ಶೃಂಖಲಾಭಿಶ್ಚ ಹಸ್ತಯೋಶ್ಚ ಸುಕೀಲಿತಾಃ ||೫೮||

ಬಲೋತ್ಕಟೈಃ = ಸತ್ತ್ವದಿಂದ ಹೆಚ್ಚಿದಂಥಾ ಯಮದೂತೈಃ = ಯಮದೂತರುಗಳಿಂದ ಘೃಷ್ಯಮಾಣಾಃ = ಸದಸಿಕೊಳ್ಳುತ್ತಿದ್ದಂಥಾ ಶೃಂಖಲಯಾ = ಸಂಕಲೆಯಿಂದ ಪಾದಯೋಃ = ಕಾಲುಗಳಲ್ಲಿ ಬದ್ಧಾಃ = ಬಂಧಿಸಿಕೊಳಲುಪಟ್ಟಂಥಾ ಕೇಚಿನ್ನರಾಃ = ಕೆಲಬರು ಮನುಷ್ಯರುಗಳು ಉತ್ತಾನಾಃ = ಸಂಕಲೆಯನೆಗಹಿಕೊಂಡವರುಗಳಾಗಿ ಆಕೃಷ್ಯಂತೇ = ಎಳಸಿಕೊಳ್ಳುತ್ತಿಹರು. ||೫೫||

ಘೃಷ್ಯಮಾಣಾಃ = ತಿವಿಸಿಕೊಳ್ಳುತ್ತಿದ್ದಂಥಾ ಸುದುಃಖಿತಾಃ = ಅತ್ಯಂತ ದುಃಖಿಗಳಹಂಥಾ ಅನ್ಯೇ ಚ = ಮತ್ತೆ ಕೆಲಬರು ಕೇಶಪಾಶನಿಬದ್ಧೇನ = ಮಂಡೆಯು ಕೂದಲೆಂಬ ಪಾಶದಿಂದ ಕಟ್ಟಿಸಿಕೊಂಬುದರಿಂದ ಅಧೋಮುಖಾಃ = ಮುಖವಡಿಯಾದವರುಗಳಾಗಿ ರಜ್ಜುನಾ = ಹಗ್ಗದಿಂದ ಉರಸಾ ಚ = ಎದೆಯಿಂದವೂ ಸಮಾಕೃಷ್ಯಂತಿ = ಎಳಸಿಕೊಳುತ್ತಿಹರು. ||೫೬||

ಅನ್ಯೇ = ಮತ್ತೆ ಕೆಲಬರು ದೇಹಿನಃ = ಪ್ರಾಣಿಗಳು ಲಲಾಟೇ = ಹಣೆಯಲ್ಲಿ ಅಂಕುಶೇನ = ಅಂಕುಶದಿಂದ ಭಿನ್ನಾಃ = ಇರಿಸಿಕೊಳಲುಪಟ್ಟವರುಗಳಾಗಿ ಕ್ವಚಿತ್ = ಒಂದೆಡೆಯಲ್ಲಿ ಉತ್ತಾನಕಂಟಕಪಥಾ = ಹರಿಹಿದ ಮೇಲ್ಮುಖದ ಮುಳ್ಳನುಳ್ಳ ದಾರಿಯಿಂದ ಅಂಗಾರವರ್ತ್ಮನಾ = ಕೆಂಡವನುಳ್ಳ ಮಾರ್ಗದಿಂದ ಕೃಷ್ಯಂತಿ = ಎಳಸಿಕೊಳುತ್ತಿಹರು. ||೫೭||

ಪಶ್ಚಾತ್ = ಹಿಂದುಗಡೆಯಲ್ಲಿ ಬಾಹುಕಬದ್ಧಾಶ್ಚ = ತೋಳುಗಳ ಕಟ್ಟಿಸಿಕೊಳಲುಪಟ್ಟಂಥಾ ಜಠರೇ ಚ = ಹೊಟ್ಟೆಯಲ್ಲಿಯೂ ಪ್ರಬಾಧಿತಾಃ = ತಿವಿಸಿಕೊಳಲುಪಟ್ಟಂಥಾ ಶೃಂಖಲಾಭಿಶ್ಚ = ಸಂಕಲೆಗಳಿಂದವೂ ಪೂರಿತಾಃ = ಸಂಪೂರ್ಣಂಗಳಾಗಿ

---

[1] ಧೃ (ಕ). [2] ದ್ಧತೈಃ (ಘ). [3] ಧೃ (ಘ). [4] ಕ್ಲಿಶ್ಯಂತಿ (ಘ).

[1]ಗ್ರೀವಾ[1]ಪಾಶೇನ [2]ಕೃಷ್ಯಂತಃ[2] ಪ್ರಯಾಂತ್ಯನ್ಯೇ ಸುದುಃಖಿತಾಃ
ಜಿಹ್ವಾಂಕುಶ [3]ಪ್ರಬದ್ಧೇನ[3] ಸಮಾಕೃಷ್ಯಂತಿ ರಜ್ಜುನಾ ||೫೯||

ಕೃಕಟ್ಯಾಮರ್ಧಚಂದ್ರೇಣ ಕ್ಷಿಪ್ಯಮಾಣಾ ಇತಸ್ತತಃ
ಶಿಶ್ನೇ ಸವೃಷಣೇ ಬಧ್ವಾ ನೀಯಂತೇಽನ್ಯೇ ಚ ರಜ್ಜುನಾ ||೬೦||

ನಾಸಾಪುಟೇಷು ರಜ್ವಾ ಚ ಸಮಾಕೃಷ್ಯಂತಿ ಚಾಪರೇ
ಭಿನ್ನಾಃ ಕಪೋಲಯೋಃ ರಜ್ವಾ ಕೃಷ್ಯಂತ್ಯನ್ಯೇ ತಥೋಷ್ಠಯೋಃ||೬೧||

ವಿಭಿನ್ನಾಶ್ಚೋದರೇ ಚಾನ್ಯೇ ತಪ್ತಶೃಂಖಲಯಾ ನರಾಃ
ಕೃಷ್ಯಂತೇ ಕರ್ಣಯೋಶ್ಚಾನ್ಯೇ ಭಿನ್ನಾಶ್ಚ ಚಿಬುಕೇಽಪರೇ ||೬೨||

ಹಸ್ತಯೋಶ್ಚ=ಎರಡು ಕೈಗಳಲ್ಲಿಯೂ ಸುಕೀಲಿತಾಃ=ಕೀಲಿಸಿಕೊಳಲುಪಟ್ಟವರುಗಳಾಗಿ ಎಯ್ದುತ್ತಿಹರು. ||೫೮||

ಗ್ರೀವಾಪಾಶೇನ=ಕೊರಳ ನೇಣಿನಿಂದ ಕೃಷ್ಯಂತಃ=ಎಳಸಿಕೊಳುತ್ತಿದ್ದಂಥಾ ಸುದುಃಖಿತಾಃ=ಅತಿದುಃಖಿಗಳಹಂಥಾ ಅನ್ಯೇ=ಮತ್ತೆ ಕೆಲವರು ಪ್ರಯಾಂತಿ=ಎಯ್ದುತ್ತಿಹರು. ಜಿಹ್ವಾಂಕುಶಪ್ರಬದ್ಧೇನ = ನಾಲಗೆಯಲ್ಲಿ ಅಂಕುಶವ ಬೆಟ್ಟಿಸಿಕೊಂಬುದಱಿಂದ ರಜ್ಜುನಾ=ನೇಣಿನಿಂದ ಸಮಾಕೃಷ್ಯಂತಿ=ಎಳಸಿಕೊಂಬರು ||೫೯||

ಅನ್ಯೇ=ಮತ್ತೆ ಕೆಲಬರು ಕೃಕಟ್ಯಾಂ=ಕೂಕಟಿಯಲ್ಲಿ (ಹೆಗ್ಗತ್ತಿನಲ್ಲಿ) ಅರ್ಧಚಂದ್ರೇಣ=ಅರ್ಧಚಂದ್ರಾಕಾರವಹಂಥಾ ಅಂಕುಶದಿಂದ ಬಧ್ವಾ=ಹೆಟ್ಟಿಸಿಕೊಂಡು ಸವೃಷಣೇ=ವೃಷಣಂಗಳ ಸಹಿತವಹಂಥಾ ಶಿಶ್ನೇ=ಶಿಶ್ನಂಗಳಲ್ಲಿಯೂ ಬಧ್ವಾ=ಹೆಟ್ಟಿಸಿಕೊಂಡು ಇತಸ್ತತಃ = ಇತ್ತಲತ್ತಲು ರಜ್ಜುನಾ ಚ = ಹಗ್ಗದಿಂದವೂ ಕ್ಷಿಪ್ಯಮಾಣಾಃ=ಎಳಸಿಕೊಳುತ್ತಿದ್ದವರುಗಳಾಗಿ ನೀಯಂತೇ=ಎಯ್ದುತ್ತಿಹರು. ||೬೦||

ಅಪರೇ ಚ = ಮತ್ತೆ ಕೆಲಬರು ನಾಸಾಪುಟೇಷು=ಮೂಗಿನ ಹೊಳ್ಳೆಗಳಲ್ಲಿ ರಜ್ವಾ ಚ = ನೇಣಿನಿಂದ ಭಿನ್ನಾಃ = ತೂತುಗೊಱಸಿಕೊಳಲುಪಟ್ಟವರುಗಳಾಗಿ ಸಮಾಕೃಷ್ಯಂತಿ=ಎಳಸಿಕೋಂಬರು. ಅನ್ಯೇ=ಮತ್ತೆ ಕೆಲವರು ತಥಾ=ಆ ಪ್ರಕಾರದಲ್ಲಿಯೇ ಕಪಾಲಯೋಃ=ಗಲ್ಲಂಗಳಲ್ಲಿ ಓಷ್ಠಯೋಃ=ತುಟಿಗಳಲ್ಲಿ ರಜ್ವಾ=ನೇಣಿಂದ ಭಿನ್ನಾಃ=ತೂತುಗೊಱಸಿಕೊಳಲುಪಟ್ಟವರುಗಳಾಗಿ ಕೃಷ್ಯಂತಿ=ಎಳಸಿಕೊಂಬರು.

ಅನ್ಯೇ ನರಾಶ್ಚ=ಕೆಲಬರು ಮನುಷ್ಯರುಗಳೂ ತಪ್ತಶೃಂಖಲಯಾ=ಕಾಸಿದಂಥಾ ಸಂಕಲೆಯಿಂದ ಉದರೇ = ಹೊಟ್ಟೆಯಲ್ಲಿ ವಿಭಿನ್ನಾಶ್ಚ= ತೂತುಗೊಱಸಿ-

---

[1] ಕ್ರೀಡಾ (ಗ). [2] ಕೃಷ್ಯಾಶ್ಚ (ಘ). [3] ಪ್ರವೇಶೇನ (ಕ) ಮೂಲಪಾಠ.

ಛಿನ್ನಾಗ್ರ ಹಸ್ತಪಾದಾಶ್ಚ ಛಿನ್ನಕಂಠೋಷ್ಠನಾಸಿಕಾಃ
ಛಿನ್ನಶಿಶ್ನಾಸ್ಯವೃಷಣಾಃ ಛಿನ್ನಭಿನ್ನಾಂಗಸಂಧಯಃ ||೬೩||

ಪ್ರಭಿದ್ಯಮಾನಾಃ ಕುಂತೈಶ್ಚ ಭಿದ್ಯಮಾನಾಶ್ಚ ಸಾಯಕೈಃ
ಇತಸ್ತತಃ ಪ್ರಧಾವಂತಿ ಕ್ರಂದಮಾನಾ ನಿರಾಶ್ರಯಾಃ ||೬೪||

ಮುದ್ಗರೈರ್ಲೋಹದಂಡೈಶ್ಚ ಹನ್ಯಮಾನಾ ಮುಹುರ್ಮುಹುಃ
ಕ್ಲೇಶೈಶ್ಚ ವಿವಿಧೈರ್ಘೋರೈಃ ಜ್ವಲಿತಾಗ್ನಿಸಮಪ್ರಭೈಃ ||೬೫||

ಭಿಂಡಿವಾಲೈಶ್ಚ ಭಿದ್ಯಂತೇ ಸ್ರವಂತಃ ಪೂಯಶೋಣಿತಮ್
ಸಕ್ಷತಾಃ ಕ್ರಿಮಿ[1]ಜಗ್ಧಾಶ್ಚ[1] ನೀಯಂತೇ [2]ವಿವಿಧಾ[2]ನರಾಃ ||೬೬||

ಕೊಳಲುಪಟ್ಟವರುಗಳಾಗಿ ಅನ್ಯೇ ಚ = ಮತ್ತೆ ಕೆಲಬರು ಕರ್ಣಯೋಃ = ಕಿವಿಗಳಲ್ಲಿ ಪರೇ ಚ = ಮತ್ತೆ ಕೆಲಬರು ಚಿಬುಕೇ = ಗಡ್ಡದಲ್ಲಿ ಭಿನ್ನಾಃ = ತೂತುಗೊಳಿಸಿ ಕೊಳಲುಪಟ್ಟವರುಗಳಾಗಿ ಕೃಷ್ಯಂತೇ = ಎಳಸಿಕೊಂಬರು. ||೬೨||

ಛಿನ್ನಾಗ್ರಹಸ್ತಪಾದಾಶ್ಚ = ಛೇದಿಸಲುಪಟ್ಟ ತುದಿಹಸ್ತಪಾದಂಗಳನುಳ್ಳವರುಗಳು ಛಿನ್ನಕಂಠೋಷ್ಠನಾಸಿಕಾಃ = ಅರಿಯಲುಪಟ್ಟ ಕೊರಳು ತುಟಿ ಮೂಗನುಳ್ಳವರುಗಳು ಛಿನ್ನಶಿಶ್ನಾಸ್ಯವೃಷಣಾಃ = ಕತ್ತರಿಸಲುಪಟ್ಟ ಶಿಶ್ನ ಮುಖ ವೃಷಣಂಗಳನುಳ್ಳಂಥಾ ಅವರುಗಳು ಛಿನ್ನಭಿನ್ನಾಂಗಸಂಧಯಃ = ಕತ್ತರಿಸಲುಪಟ್ಟ ತುಂಡಾದ ಅವಯವಂಗಳ ಸಂದುಗಳನುಳ್ಳಂಥಾ ಅವರುಗಳು ||೬೩||

ಕುಂತೈಶ್ಚ = ಸಬಳಂಗಳಿಂದವೂ ಪ್ರಭಿದ್ಯಮಾನಾಃ = ಇರಿಸಿಕೊಳಲುಪಟ್ಟವರುಗಳು ಸಾಯಕೈಃ = ಬಾಣಂಗಳಿಂದ ಭಿದ್ಯಮಾನಾಶ್ಚ = ಎಸಸಿಕೊಳಲುಪಟ್ಟವರುಗಳೂ ಕ್ರಂದಮಾನಾಃ = ಅಳುತ್ತಿದ್ದಂಥಾ ಅವರುಗಳಾಗಿ ನಿರಾಶ್ರಯಾಃ = ಆಶ್ರಯವಿಲ್ಲದವರುಗಳಾಗಿ ಇತಸ್ತತಃ = ಇತ್ತಲತ್ತ ಪ್ರಧಾವಂತಿ = ಓಡುತ್ತಿಹರು ||೬೪||

ಜ್ವಲಿತಾಗ್ನಿಸಮಪ್ರಭೈಃ = ಉರಿವುತ್ತಿದ್ದ ಅಗ್ನಿಗೆ ಸಮಾನವಹ ಪ್ರಭೆಯನ್ನುಳ್ಳಂಥಾ ಮುದ್ಗರೈಃ = ಕಬ್ಬುನದ ಬಡಿಗೆಗಳಿಂದ ಲೋಹದಂಡೈಶ್ಚ = ಕಬ್ಬುನದ ಡಾಣೆಗಳಿಂದವೂ ಮುಹುರ್ಮುಹುಃ = ಅಡಿಗಡಿಗೆ ಹನ್ಯಮಾನಾಃ = ಹೊಡೆಸಿಕೊಳಲುಪಟ್ಟವರುಗಳು ಘೋರೈಃ = ಭಯಂಕರವಹಂಥಾ ವಿವಿಧೈಃ = ನಾನಾಪ್ರಕಾರವಹಂಥಾ ಕ್ಲೇಶೈಶ್ಚ = ಕ್ಲೇಶಂಗಳಿಂದವೂ ಎಯ್ದುತ್ತಿಹರು. ||೬೫||

ಭಿಂಡಿವಾಲೈಶ್ಚ = ಪಿಂಡಿವಾಳಂಗಳಿಂದವೂ ಭಿದ್ಯಂತೇ = ಇರಿಸಿಕೊಳಲುಪಡುತ್ತಿಹರು ಪೂಯಶೋಣಿತಂ = ಕೀವು ರಕ್ತವೂ ಸ್ರವಂತಃ = ಸುರಿವುತ್ತಿದ್ದಂಥಾ ಸಕ್ಷತಾಃ

---

[1] ದಗ್ಧಾಶ್ಚ (ಘ). [2] ವಿವಶಾ (ಘ).

ಯಾಚಮಾನಾಶ್ಚ ಸಲಿಲಮನ್ನಂ ಚಾತಿಬುಭುಕ್ಷಿತಾಃ
ಛಾಯಾಂ ಪ್ರಾರ್ಥಯಮಾನಾಶ್ಚ ಶೀತಾರ್ತಾಶ್ಚಾನಲಂ ಪುನಃ ||೬೭||

ದಾನಹೀನಾಃ ಪ್ರಯಾಂತ್ಯೇವಂ ಪ್ರಾರ್ಥಯಂತಃ ಸುಖಂ ನರಾಃ
ಏವಂ ಪಥಾಽತಿಕಷ್ಟೇನ ಪ್ರಾಪ್ತಾಃ ಪ್ರೇತಪುರಂ ನರಾಃ ||೬೮||

ವಿಜ್ಞಾಪಿತಾ[1]ಸ್ತದಾ[1]ದೂತೈಃ ನಿವೇಶ್ಯಂ[2]ತೇ[2] ಯಮಾಗ್ರತಃ
ತತ್ರ ಯೇ ಶುಭಕರ್ಮಾಣಃ ತಾಂಸ್ತು ಸಮ್ಮಾನಯೇದ್ಯಮಃ ||೬೯||

ಸ್ವಾಗತಾಸನದಾನೇನ ಪಾದ್ಯಾರ್ಘ್ಯೇಣ ಪ್ರಿಯೇಣ ಚ
ಧನ್ಯಾ ಯೂಯಂ ಮಹಾತ್ಮಾನಃ ಸ್ವಾತ್ಮನೋ ಹಿತಕಾರಿಣಃ ||೭೦||

=ಛಾಯದಿಂದ ಸಹಿತರಹಂಥಾ ಕ್ರಿಮಿಜಗ್ಧಾಶ್ಚ=ಕ್ರಿಮಿಗಳಿಂದ ಎಱಗಲುಪಟ್ಟಂಥಾ ವಿವಿಧಾಃ=ನಾನಾ ಪ್ರಕಾರವಹಂಥಾ ನರಾಃ=ಮನುಷ್ಯರುಗಳು ನೀಯಂತೇ=ಎಯ್ದುತ್ತಿಹರು. ||೬೬||

ಅತಿಬುಭುಕ್ಷಿತಾಃ=ಅತ್ಯಂತ ಹಸಿದವರುಗಳು ಅನ್ನಂ ಚ=ಅನ್ನವನು ಸಲಿಲಂ =ಉದಕವನು ಯಾಚಮಾನಾಶ್ಚ=ಬಯಸುತ್ತಿಹರು. ಛಾಯಾಂ=ನೆಳಲನು ಪ್ರಾರ್ಥಯಮಾನಾಶ್ಚ=ಬಯಸುತ್ತಿಹರು ಶೀತಾರ್ತಾಃ=ಛಳಿಹತ್ತಿದವರುಗಳು ಅನಲಂ ಚ=ಬೆಂಕಿಯನು ಪುನಃ=ಮರಳಿ ಪ್ರಾರ್ಥಯಮಾನಾಃ=ಇಚ್ಛೈಸುತ್ತಿಹರು. ||೬೭||

ದಾನಹೀನಾಃ=ದಾನಹೀನರಹಂಥಾ ನರಾಃ=ಮನುಷ್ಯರುಗಳು ಸುಖಂ=ಸುಖವನು ಏವಂ=ಈ ಪ್ರಕಾರದಲ್ಲಿ ಪ್ರಾರ್ಥಯಂತಃ=ಬಯಸುತ್ತಿದ್ದವರುಗಳಾಗಿ ಪ್ರಯಾಂತಿ=ಎಯ್ದುತ್ತಿಹರು. ಏವಂ=ಈ ಪ್ರಕಾರದಲ್ಲಿ ಅತಿಕಷ್ಟೇನ=ಅತ್ಯಂತ ಕಷ್ಟವಹಂಥಾ ಪಥಾ=ಮಾರ್ಗದಿಂದ ನರಾಃ=ಮನುಷ್ಯರುಗಳು ಪ್ರೇತಪುರಂ=ಯಮನಪಟ್ಟಣವನು ಪ್ರಾಪ್ತಾಃ=ಎಯ್ದುವರು. ||೬೮||

ತದಾ=ಆಗ ದೂತೈಃ=ದೂತರುಗಳಿಂದ ವಿಜ್ಞಾಪಿತಾಃ=ಬಿನ್ನೈಸಲುಪಟ್ಟವರುಗಳಾಗಿ ಯಮಾಗ್ರತಃ=ಯಮನ ಮುಂದೆ ನಿವೇಶ್ಯಂತೇ=ನಿಲ್ಲಿಸಲುಪಡುತ್ತಿಹರು. ತತ್ರ=ಅಲ್ಲಿ ಯೇ=ಆರು ಕೆಲಬರು ಶುಭಕರ್ಮಾಣಃ=ಪುಣ್ಯವ ಮಾಡಿದವರುಗಳುಂಟು ತಾನ್=ಅವರುಗಳನು ಯಮಃ=ಯಮನು ಸಮ್ಮಾನಯೇತ್=ಮನ್ನಿಸುವನು. ||೬೯||

ಸ್ವಾಗತಾಸನದಾನೇನ=ಕ್ಷೇಮವಾರ್ತೆಯ ಬೆಸಗೊಳುಹವು ಕುಳ್ಳಿರಕೊಡುವುದಱಿಂದ ಪಾದ್ಯಾರ್ಘ್ಯೇಣ=ಪಾದಪ್ರಕ್ಷಾಲನೆಯಿಂದ ಅರ್ಘ್ಯದಿಂದ ಪ್ರಿಯೇಣ ಚ

---

1 ಸ್ತಥಾ (ಘ). 2 ತಿ (ಘ).

ಯೇನ ದಿವ್ಯಸುಖಾರ್ಥಾಯ ಭವದ್ಭಿಃ ಸುಕೃತಂ ಕೃತಮ್
ಇದಂ ವಿಮಾನಮಾರುಹ್ಯ ದಿವ್ಯಸ್ತ್ರೀಭೋಗಭೂಷಿತಮ್ ||೨೧||

ಸ್ವರ್ಗಂ ಗಚ್ಛಧ್ವಮತುಲಂ ಸರ್ವಕಾಮಸಮನ್ವಿತಮ್
ತತ್ರ ಭುಕ್ತ್ವಾ ಮಹಾಭೋಗಾನಂತೇ ಪುಣ್ಯಸ್ಯ ಸಂಕ್ಷಯಾತ್ ||೨೨||

ಅಸ್ತಿ ಚೇದಲ್ಪಮಶುಭಂ ಪುನಸ್ತದಿಹ ಭೋಕ್ಷ್ಯಥ
ತೇ ಚಾಪಿ ಧರ್ಮರಾಜಾನಂ ನರಾಃ ಪುಣ್ಯಾನುಭಾವತಃ
ಪಶ್ಯಂತಿ ಸೌಮ್ಯವದನಂ ಮಿತ್ರಭೂತಮಿವಾತ್ಮನಃ ||೨೩||

= ಪ್ರಿಯದಿಂದವೂ ಸಮ್ಮಾನಯೇತ್ = ಮನ್ನಿಸುವನು. ಯೂಯಂ = ನೀವು ಧನ್ಯಾಃ = ಧನ್ಯರುಗಳು ಮಹಾತ್ಮರುಗಳು. ಸ್ವಾತ್ಮನಃ = ನಿಮ್ಮ ಶರೀರಕ್ಕೆ ಹಿತಕಾರಿಣಃ = ಹಿತವ ಮಾಡಿಕೊಂಡಂಥಾ ಅವರುಗಳು. ||೨೦||

ಯೇನ = ಆವುದಾನೊಂದು ಕಾರಣದಿಂದ ದಿವ್ಯಸುಖಾರ್ಥಾಯ = ಸ್ವರ್ಗದ ಸುಖದ ಪ್ರಯೋಜನಕ್ಕೋಸ್ಕರ ಭವದ್ಭಿಃ = ನಿಮ್ಮಿಂದ ಸುಕೃತಂ = ಪುಣ್ಯವು ಕೃತಂ = ಮಾಡಲುಪಟ್ಟಿತ್ತು. ದಿವ್ಯಸ್ತ್ರೀಭೋಗಭೂಷಿತಂ = ದೇವಸ್ತ್ರೀಯರುಗಳ ಭೋಗ[1]ದಿಂದ ಭೂಷಿತವಾದ[1] ಉತ್ತಮಂ = ಉತ್ಕೃಷ್ಟವಹಂಥಾ ಇದಂ ವಿಮಾನಂ = ಈ ಪುಷ್ಪಕವನು ಆರುಹ್ಯ = ಏಱಿ. ||೨೧||

ಸರ್ವಕಾಮಸಮನ್ವಿತಂ = ಸಮಸ್ತ ಬಯಕೆಯಿಂದ ಕೂಡಿದಂಥಾ ಅತುಲಂ = ಬಹಳವಹಂತಾ ಸ್ವರ್ಗಂ = ಸ್ವರ್ಗವನು ಗಚ್ಛಧ್ವಂ = [2]ಎಯ್ದಿ[2], ತತ್ರ = ಅಲ್ಲಿ ಮಹಾಭೋಗಾನ್ = ಮಹಾಭೋಗಂಗಳನು ಭುಕ್ತ್ವಾ = ಭೋಗಿಸಿ ಅಂತೇ = ಕಡೆಯಲ್ಲಿ ಪುಣ್ಯಸ್ಯ = ಪುಣ್ಯದ ಸಂಕ್ಷಯಾತ್ = ತೀರುವುದಱಿದೆಸೆಯಿಂದ. ||೨೨||

ಅಲ್ಪಂ = ಅಲ್ಪವಹಂಥಾ ಅಶುಭಂ = ಪಾಪವು ಅಸ್ತಿ ಚೇತ್ = ಉಂಟಾದ ಪಕ್ಷೇ ಪುನಃ = ಮರಳಿ ತತ್ = ಆ ಪಾಪವನು ಇಹ = ಈ ನನ್ನ ಲೋಕದಲ್ಲಿ ಭೋಕ್ಷ್ಯಥ = ಅನುಭವಿಸಿ. ತೇ ನರಾಶ್ಚ = ಪುಣ್ಯವ ಮಾಡಿದಂಥಾ ಆ ಮನುಷ್ಯರುಗಳು ಪುಣ್ಯಾನುಭಾವತಃ = ಧರ್ಮದ ಸಾಮರ್ಥ್ಯದ ದೆಸೆಯಿಂದ ಧರ್ಮರಾಜಾನಂ = ಯಮಧರ್ಮರಾಜನನೂ ಸೌಮ್ಯವದನಂ = ಒಪ್ಪುತಂಪಿದ್ದ ಮುಖವನುಳ್ಳಂಥಾ ಆತ್ಮನಃ = ತಮಗೆ ಮಿತ್ರಭೂತಮಿವ = ಮಿತ್ರನಾದನಕ್ಕೈ ಯಂಬ ಹಾಂಗಿದ್ದಂಥಾ ಆತನಾಗಿ ಪಶ್ಯಂತಿ = ಕಾಣುತ್ತಿಹರು. ||೨೩||

---

[1] ವನುಳ್ಳಂಥಾ (ಖ. ಚ). [2] ಎಯ್ದಿರಿ (ಖ. ಚ).

ಯೇ ಪುನಃ ಕ್ರೂರಕರ್ಮಾಣಸ್ತೇ ಪಶ್ಯಂತಿ ಭಯಾನಕಮ್
ಪಾಪಾವಷ್ಟಬ್ಧನಯನಾ ವಿಪರೀತಾತ್ಮವೃತ್ತಯಃ ||೭೪||

ದಂಷ್ಟ್ರಾಕರಾಳವದನಂ ಭ್ರುಕುಟೀಕುಟಿಲೇಕ್ಷಣಮ್
ಊರ್ಧ್ವಕೇಶಂ ಮಹಾಶ್ಮಶ್ರುಂ ಪ್ರಸ್ಫುರದ್ದಂತವಾಸಸಮ್ ||೭೫||

ಅಷ್ಟಾದಶಭುಜಂ ಕ್ರುದ್ಧಂ ನೀಲಾಂಜನಚಯೋಪಮಮ್
ಸರ್ವಾಯುಧೋದ್ಯತಕರಂ [1]ಯಮದಂಡೇನ ತರ್ಜಕಮ್[1] ||೭೬||

ಮಹಾಮಹಿಷಮಾರೂಢಂ ದೀಪ್ತಾಗ್ನಿಸಮಲೋಚನಮ್
ರಕ್ತಮಾಲ್ಯಾಂಬರಧರಂ ಮಹಾಮೇರುಮಿವೋಚ್ಛ್ರಿತಮ್ ||೭೭||

ಪ್ರಳಯಾಂಬುದನಿರ್ಘೋಷಂ ಪಿಬಂತಮಿವ ಸಾಗರಮ್
ಗ್ರಸಂತಮಿವ ಲೋಕಾಂಸ್ತ್ರೀನುದ್ಗಿರಂತಮಿವಾನಲಮ್ ||೭೮||

ಯೇ = ಆರು ಕೆಲಬರು ಪಾಪಾವಷ್ಟಬ್ಧನಯನಾಃ = ಪಾಪದಿಂದ ಕೆಡಲುಪಟ್ಟ ಕಣ್ಣುಗಳನುಳ್ಳಂಥಾ ವಿಪರೀತಾತ್ಮವೃತ್ತಯಃ = ವಿಪರೀತವಹ ಬುದ್ಧಿಯ ವರ್ತನ-ವನುಳ್ಳಂಥಾ ಕ್ರೂರಕರ್ಮಾಣಃ = ಕ್ರೂರಕರ್ಮಗಳುಂಟು ತೇ = ಅವರುಗಳು ಪುನಃ = ಮರಳಿ ಭಯಾನಕಂ = ಭಯಂಕರ ಸ್ವರೂಪವಹಂಥಾ ಯಮನನು ಪಶ್ಯಂತಿ = ಕಾಣುತ್ತಿಹರು. ||೭೪||

ದಂಷ್ಟ್ರಾಕರಾಳವದನಂ = ದಾಡೆಗಳಿಂದ ಭಯಂಕರವಹ ಮುಖವನುಳ್ಳಂಥಾ ಭ್ರುಕುಟೀಕುಟಿಲೇಕ್ಷಣಂ = ಹುಬ್ಬುಗಂಟಿಕ್ಕುವುದರಿಂದ ಕೆಕ್ಕಳಿಸಿ ನೋಡುವ ಕಣ್ಣುಗಳನುಳ್ಳಂಥಾ ಊರ್ಧ್ವಕೇಶಂ = ಮೇಲು ಮುಂತಾದ ಮಂಡೆಯ ಕೂದಲನುಳ್ಳಂಥಾ ಮಹಾಶ್ಮಶ್ರುಂ = ಬಹಳವಹ ಮೀಸೆಗಳನುಳ್ಳಂಥಾ ಪ್ರಸ್ಫುರದ್ದಂತವಾಸಸಂ = ನಡುಗಲುಪಟ್ಟ ತುಟಿಗಳನುಳ್ಳಂಥಾ ಅಷ್ಟಾದಶಭುಜಂ = ಹದಿನೆಂಟು ಭುಜಂಗಳನುಳ್ಳಂಥಾ ಕ್ರುದ್ಧಂ = ಕೋಪಿಸುತ್ತಿದ್ದಂಥಾ ನೀಲಾಂಜನಚಯೋಪಮಂ = ಕಪ್ಪಹ ಕಾಡಿಗೆಯ ಸಮೂಹಕ್ಕೆ ಸಮಾನವಹಂಥಾ ಸರ್ವಾಯುಧೋದ್ಯತಕರು = ಸಮಸ್ತ ಆಯುಧಂಗಳಿಂದ ಉದ್ಯೋಗಿಸಲುಪಟ್ಟ ಹಸ್ತಂಗಳನುಳ್ಳಂಥಾ ಯಮದಂಡೇನ = ಯಮದಂಡದಿಂದ ತರ್ಜಕಂ = ಅಂಜಿಸುತ್ತಿದ್ದಂಥಾ ಮಹಾಮಹಿಷಂ = ದೊಡ್ಡಿಯ ಕೋಣನನು ಆರೂಢಂ = ಏರಿದಂಥಾ ದೀಪ್ತಾಗ್ನಿಸಮಲೋಚನಂ = ಉರಿವುತ್ತಿದ್ದ ಅಗ್ನಿಗೆ ಸಮಾನವಹ ಕಣ್ಣುಗಳನುಳ್ಳಂಥಾ ರಕ್ತಮಾಲ್ಯಾಂಬರಧರಂ = ರಕ್ತವರ್ಣವಹ ಪುಷ್ಪಮಾಲೆ ವಸ್ತ್ರಂಗಳ ಧರಿಸಿದಂಥಾ ಉಚ್ಛ್ರಿತಂ = ಉನ್ನತವಹಂಥಾ ಮಹಾ-ಮೇರುಮಿವ = ಮಹಾಮೇರುಪರ್ವತ[2]ವಕ್ಕೈ[2]ಎಂಬ ಹಾಂಗಿದ್ದಂಥಾ ಪ್ರಳಯಾಂಬುದ

---

[1] ಸರ್ವದಂಡಸಮನ್ವಿತಂ (ಘ). [2] ವೊ (ಕ).

ಮೃತ್ಯುಂ ಚ ತತ್ಸಮೀಪಸ್ಥಂ ಕಾಲಾನಲಸಮಪ್ರಭಮ್
ಕಾಲಂ ಚಾಂಜನಸಂಕಾಶಂ ಕೃತಾಂತಂ ಚ ಭಯಾನಕಮ್ ||೭೯||

ಮಾರೀಂ ಚೋಗ್ರಾಂ ಮಹಾಮಾರೀಂ ಕಾಲರಾತ್ರಿಂ ಚ ದಾರುಣಾಮ್
ವಿವಿಧಾ ವ್ಯಾಧಯಃ ಕಷ್ಟಾಃ ನಾನಾರೂಪಾ ಭಯಾವಹಾಃ ||೮೦||

ಶಕ್ತಿಶೂಲಾಂಕುಶಧರಾಃ ಪಾಶಚಕ್ರಾಸಿಧಾರಿಣಃ
ವಜ್ರದಂಡಧರಾ ರೌದ್ರಾಃ ಕ್ಷುರತೂಣೀಧನುರ್ಧರಾಃ ||೮೧||

ಅಸಂಖ್ಯಾತಾ ಮಹಾವೀರಾಃ ಕ್ರೂರಾಶ್ಚಾಂಜನಸಪ್ರಭಾಃ
ಸರ್ವಾಯುಧೋದ್ಯತಕರಾಃ ಯಮದೂತಾ ಭಯಾವಹಾಃ ||೮೨||

ನಿರ್ಘೋಷಂ = ಪ್ರಳಯಮೇಘದೋಪಾದಿ ಗರ್ಜಿಸುತ್ತಂವಿದ್ದಂಥಾ ಸಾಗರಂ = ಸಮುದ್ರವನು ಪಿಬಂತಮಿವ = ಪಾನವ ಮಾಡುತ್ತಂವಿದ್ದಾತನಕ್ಕೈ ಯೆಂಬ ಹಾಂಗಿದ್ದಂಥಾ ತ್ರೀನ್‌ಲೋಕಾನ್ = ಮೂಱುಲೋಕಂಗಳನು ಗ್ರಸಂತಮಿವ = ನುಂಗುತ್ತಿದ್ದಾನತಕ್ಕೈ ಎಂಬ ಹಾಂಗೆ ಇದ್ದಂಥಾ ಅನಲಂ = ಅಗ್ನಿಯನು ಉದ್ಗಿರಂತಮಿವ = ಉಗುಳುತ್ತಿದ್ದಾನಕ್ಕೈ ಎಂಬ ಹಾಂಗೆ ಇದ್ದಂಥಾ ಯಮಂ = ಯಮನನು ಪಶ್ಯಂತಿ = ಕಾಣುತ್ತಿಹರು. ||೭೮||

ತತ್ಸಮೀಪಸ್ಥಂ = ಆ ಯಮನ ಸಮೀಪದಲ್ಲಿದ್ದಂಥಾ ಕಾಲಾನಲಸಮಪ್ರಭಂ = ಪ್ರಳಯಕಾಲದ ಅಗ್ನಿಗೆ ಸಮಾನವಹ ಕಾಂತಿಯನುಳ್ಳಂಥಾ ಮೃತ್ಯುಂ ಚ = ಮೃತ್ಯುವನು ಅಂಜನಸಂಕಾಶಂ = ಕಾಡಿಗೆಗೆ ಸಮಾನವಹಂಥಾ ಕಾಲಂ ಚ = ಕಾಲನನೂ ಭಯಾನಕಂ = ಭಯಂಕರವಹೆಂಥಾ ಕೃತಾಂತಂ ಚ = ಕೃತಾಂತನನೂ. ||೭೯||

ಮಾರೀಂ ಚ = ಮಾರಿಯನು ಉಗ್ರಾಂ = ಉಗ್ರವಹೆಂಥಾ ಮಹಾಮಾರೀಂ = ಮಹಾಮಾರಿಯನು ದಾರುಣಾಂ = ಭಯಂಕರವಹಂಥಾ ಕಾಲರಾತ್ರಿಂ ಚ = ಕಾಳರಾತ್ರಿಯನು ಪಶ್ಯಂತಿ = ಕಾಣುತ್ತಿಹರು. ಭಯಾವಹಾಃ = ಭಯಂಕರವ ಧರಿಸಿದಂಥಾ ನಾನಾರೂಪಾಃ = ನಾನಾರೂಪವನುಳ್ಳಂಥಾ ಕಷ್ಟಾಃ = ಅತಿಕಷ್ಟವಹಂಥಾ ವಿವಿಧಾಃ = ಹಲವಹಂಥಾ ವ್ಯಾಧಯಃ = ವ್ಯಾಧಿಗಳಿಹವು. ||೮೦

ಶಕ್ತಿಶೂಲಾಂಕುಶಧರಾಃ = ಶಕ್ತಿ ತ್ರಿಶೂಲ ಅಂಕುಶಗಳ ಧರಿಸಿದಂಥಾ ಪಾಶಚಕ್ರಾಸಿಧಾರಿಣಃ = ನೇಣು ಚಕ್ರ ಅಡಾಯುಧಂಗಳ ಧರಿಸಿದಂಥಾ ವಜ್ರದಂಡಧರಾಃ = ವಜ್ರದಂಡವ ಧರಿಸಿದಂಥಾ ರೌದ್ರಾಃ = ರೌದ್ರರುಗಳಹಂಥಾ ಕ್ಷುರತೂಣೀಧನುರ್ಧರಾಃ = ಕೂರುಹ ಬತ್ತಳಿಕೆ ಬಿಲ್ಲ ಧರಿಸಿದಂಥಾ. ||೮೧||

ಮಹಾವೀರಾಃ = ಅತಿವೀರರಹಂಥಾ ಕ್ರೂರಾಃ = ಕ್ರೂರರಹಂಥಾ ಅಂಜನ-

[1]ಅನೇನ[1] ಪರಿವಾರೇಣ ಮಹಾಘೋರೇಣ ಸಂವೃತಂ
ಯಮಂ ಪಶ್ಯಂತಿ ಪಾಪಿಷ್ಠಾಶ್ಚಿತ್ರಗುಪ್ತಂ ವಿಭೀಷಣಮ್ ||೮೩||

ನಿರ್ಭರ್ತ್ಸಯತಿ ಚಾತ್ಯಂತಂ ಯಮಸ್ತಾನ್ ಪಾಪಕಾರಿಣಃ
ಚಿತ್ರಗುಪ್ತಶ್ಚ ಭಗವಾನ್ ಯಮವಾಕ್ಯೈಃ ಪ್ರಬೋಧಯೇತ್ ||೮೪||

ಚಿತ್ರಗುಪ್ತ ಉವಾಚ

ಭೋ ಭೋ ದುಷ್ಕೃತಕರ್ಮಾಣಃ ಪರದ್ರವ್ಯಾಪಹಾರಿಣಃ
ಗರ್ವಿತಾ ರೂಪವೀರ್ಯೇಣ ಪರದಾರಾಭಿಮರ್ಶನಾಃ[2] ||೮೫||

ಸಪ್ರಭಾಃ = ಕಾಡಿಗೆಗೆ ಸಮಾನವಹ ಕಾಂತಿಯನುಳ್ಳಂಥಾ ಸರ್ವಾಯುಧೋದ್ಯತ-ಕರಾಃ = ಸಮಸ್ತ ಆಯುಧಂಗಳಿಂದ ಉದ್ಯೋಗಿಸಲುಪಟ್ಟ ಹಸ್ತಂಗಳನುಳ್ಳಂಥಾ ಭಯಾವಹಾಃ = ಭಯಂಕರವ ಧರಿಸಿದಂಥಾ ಯಮದೂತಾಃ = ಯಮದೂತರುಗಳು ಅಸಂಖ್ಯಾತಾಃ = ಅಸಂಖ್ಯಾತರುಗಳಿಹರು. ||೮೨||

ಮಹಾಘೋರೇಣ = ಅತಿಭಯಂಕರವಹಂಥಾ ಅನೇನ ಪರಿವಾರೇಣ = ಈ ಪರಿವಾರದಿಂದ ಸಂವೃತಂ = ಮುಸುಕಲುಪಟ್ಟಂಥಾ ಯಮಂ = ಯಮನನು ವಿಭೀಷಣಂ = ಶಾಂತನಹಂಥಾ ಚಿತ್ರಗುಪ್ತಂ = ಚಿತ್ರಗುಪ್ತನನು ಪಾಪಿಷ್ಠಾಃ = ಪಾಪವಮಾಡಿದವರುಗಳು ಪಶ್ಯಂತಿ = ಕಾಣುತ್ತಿಹರು. ವಿಗತಂ ಭೀಷಣಂ ಯಸ್ಯ ಸಃ ವಿಭೀಷಣಃ. ಇದು ವಿಭೀಷಣ ಶಬ್ದಕ್ಕೆ ನಿರ್ವಚನವು. ||೫೩||

ಯಮಃ = ಯಮನು ಪಾಪಕಾರಿಣಃ = ಪಾಪವ ಮಾಡಿದಂಥಾ ತಾನ್ = ಅವರುಗಳನು ಅತ್ಯಂತಂ = ಅತ್ಯಂತವಾಗಿ ನಿರ್ಭರ್ತ್ಸಯತಿ = ಶಿಕ್ಷಿಸುತ್ತಿಹನು. ಭಗವಾನ್ = ಸಮರ್ಥನಹಂಥಾ ಚಿತ್ರಗುಪ್ತಶ್ಚ = ಚಿತ್ರಗುಪ್ತನು ಯಮವಾಕ್ಯೈಃ = ಯಮವಾಕ್ಯಂಗಳಿಂದವು ಪ್ರಬೋಧಯೇತ್ = ಲೇಸಾಗಿ ಬೋಧಿಸುವನು. ||೮೪||

ಚಿತ್ರಗುಪ್ತ ಉವಾಚ = ಚಿತ್ರಗುಪ್ತನು ನುಡಿವುತ್ತಿದ್ದಾನು.

ಭೋ ಭೋ ದುಷ್ಕೃತಕರ್ಮಾಣಃ = ಎಲೆ ಎಲೆ ಪಾಪವ ಮಾಡಿದಂಥಾ ಅವರುಗಳಿರಾ ಪರದ್ರವ್ಯಾಪಹಾರಿಣಃ = ಪರರೊಡವೆಯ ತೆಗೆದುಕೊಂಡವರುಗಳಿರಾ ! ರೂಪವೀರ್ಯೇಣ = ರೂಪು ಪರಾಕ್ರಮದಿಂದ ಗರ್ವಿತಾಃ = ಗರ್ವಿಸಿದಂಥಾ ಅವರುಗಳಿರಾ ! ಪರದಾರಾಭಿಮರ್ಶನಾಃ = ಪರಸ್ತ್ರೀಯರ ರಮಿಸಿದವರುಗಳಿರಾ ! ||೮೫||

---

[1] ಅನೇಕ (ಘ) [2] ಶಿನಃ (ಕ)

ಯತ್ ಸ್ವಯಂ ಕ್ರಿಯತೇ ಕರ್ಮ ತತ್ ಸ್ವಯಂ ಭುಜ್ಯತೇ ಪುನಃ
ತತ್ಕಿಮಾತ್ಮೋಪಘಾತಾರ್ಥಂ ಭವದ್ಭಿರ್ದುಷ್ಕೃತಂ ಕೃತಮ್ ||೮೬||

ಇದಾನೀಂ ಕಿಂ ಪ್ರತಪ್ಯಧ್ವಂ ಪೀಡ್ಯಮಾನಾಃ ಸ್ವಕರ್ಮಭಿಃ
ಭುಂಜಧ್ವಂ ಸ್ವಾನಿ ಕರ್ಮಾಣಿ ನಾತ್ರ ದೋಷೋಽಸ್ತಿ ಕಸ್ಯಚಿತ್ ||೮೭||

ಯಮ ಉವಾಚ—

ಏತೇ ಚ ಪೃಥಿವೀಪಾಲಾಃ ಸಂಪ್ರಾಪ್ತಾಃ [1]ಮತ್ಸಮೀಪತಾಂ[1]
ಸ್ವಕೀಯೈಃ ಕರ್ಮಭಿರ್ಘೋರೈಃ ದುಷ್ಪ್ರಜ್ಞಾ ಬಲಗರ್ವಿತಾಃ ||೮೮||

ಭೋ ಭೋ ನೃಪಾ ದುರಾಚಾರಾಃ ಪ್ರಜಾವಿಧ್ವಂಸಕಾರಿಣಃ
ಅಲ್ಪಕಾಲಸ್ಯ ರಾಜ್ಯಸ್ಯ ಕೃತೇ ಕಿಂ ದುಷ್ಕೃತಂ ಕೃತಮ್ ||೮೯||

ಯತ್ = ಆವುದಾನೊಂದು ಕರ್ಮ = ಕರ್ಮವನು ಸ್ವಯಂ = ತಾನೇ ಕ್ರಿಯತೇ = ಮಾಡುತ್ತಿಹನು ತತ್ ಕರ್ಮ = ಆ ಕರ್ಮವನು ಪುನಃ = ಮರಳಿ ಸ್ವಯಂ = ತಾನೇ ಭುಜ್ಯತೇ = ಉಣುತ್ತಿಹೆನು. ತತ್ = ಆ ದುಷ್ಕೃತಂ = ಪಾಪವು ಆತ್ಮೋಪಘಾತಾರ್ಥಂ = ನಿಮ್ಮ ಕೇಡಿಂಗೋಸ್ಕರ ಭವದ್ಭಿಃ = ನಿಮ್ಮಿಂದ ಕಿಂ = ಏನುಕಾರಣ ಕೃತಂ = ಮಾಡಲುಪಟ್ಟಿತ್ತು. ||೮೬||

ಇದಾನೀಂ = ಈಗಳು ಸ್ವಕರ್ಮಭಿಃ = ನಿಮ್ಮ ಕರ್ಮಂಗಳಿಂದ ಪೀಡ್ಯಮಾನಾಃ ಬಾಧಿಸಿಕೊಳಲುಪಟ್ಟವರುಗಳಾಗಿ ಕಿಂ = ಆವುದಾನೊಂದು ಕಾರಣವಾಗಿ ಪ್ರತಪ್ಯಧ್ವಂ = [2]ಬೇವುತ್ತೀರಿ.[2] ಸ್ವಾನಿ ಕರ್ಮಾಣಿ = ನಿಮ್ಮ ಪಾಪಂಗಳನು ಭುಂಜಧ್ವಂ = ಅನು-ಭವಿಸುತ್ತಿರಿ. ಅತ್ರ = ಇಲ್ಲಿ ದೋಷಃ = ದೋಷವು ಕಸ್ಯಚಿತ್ = ಮತ್ತೊಬ್ಬಂಗೆ ನಾಸ್ತಿ = ಇಲ್ಲ. ||೮೭||

ಯಮ ಉವಾಚ = ಯಮನು ನುಡಿವುತ್ತಿದ್ದಾನು.

ಮತ್ಸಮೀಪತಾಂ = ಎನ್ನಸಮೀಪವನು ಸಂಪ್ರಾಪ್ತಾಃ = ಎಯ್ದಿದಂಥಾ ಬಲಗರ್ವಿತಾಃ = ಸತ್ತ್ವದಿಂದ ಗರ್ವಿಸಿದಂಥಾ ಏತೇ ಪೃಥಿವೀಪಾಲಾಶ್ಚ = ಈ ಅರಸು-ಗಳು ಸ್ವಕೀಯೈಃ = ತಮ್ಮ ಸಂಬಂಧವಹಂಥಾ ಘೋರೈಃ ಕರ್ಮಭಿಃ = ಪಾಪಕರ್ಮಂ-ಗಳಿಂದ ದುಷ್ಪ್ರಜ್ಞಾಃ = ಮತಿಹೀನರುಗಳು. ||೮೮||

ಪ್ರಜಾವಿಧ್ವಂಸಕಾರಿಣಃ = ಪ್ರಜೆಗಳ ಘಾಸಿ ಮಾಡಿದಂಥಾ ದುರಾಚಾರಾಃ = ದುರಾಚಾರಿಗಳಹಂಥಾ ಭೋ ಭೋ ನೃಪಾಃ = ಎಲೆ ಎಲೆ ಅರಸುಗಳಿರಾ ! ಅಲ್ಪ-

---

[1] ಮತ್ಸಮೀಪತಃ (ಕ. ಚ). ಮತ್ಸಮೀಪಕಂ (ಘ) [2] ಪರಿತಪಿಸಿ (ಕ)

ರಾಜ್ಯಲೋಭೇನ ಮೋಹೇನ ಬಲಾದನ್ಯಾಯತಃ ಪ್ರಜಾಃ
ಯದ್ದಂಡಿತಾಃ ಫಲಂ ತಸ್ಯ [1]ಭುಂಜಧ್ವ[1]ಮಧುನಾ ನೃಪಾಃ ||೯೦||

ಕ್ವ ತದ್ರಾಜ್ಯಂ ಕಲತ್ರಂ ವಾ ಯದರ್ಥಮಶುಭಂ ಕೃತಮ್
ತತ್ಸರ್ವಂ ಸಂಪರಿತ್ಯಜ್ಯ ಯೂಯಮೇಕಾಕಿನಃ ಸ್ಥಿತಾಃ ||೯೧||

ಪಶ್ಯಾಮಸ್ತತ್ಫಲಂ [2]ಸರ್ವಂ[2] ಯೇನ ವಿಧ್ವಂಸಿತಾಃ ಪ್ರಜಾಃ
ಮದ್ದೂತೈರ್ಹನ್ಯಮಾನಾನಾಮಧುನಾ ಕೀದೃಶಂ ಭವೇತ್ ||೯೨||

ಏವಂ ಬಹುವಿಧೈರ್ವಾಕ್ಯೈರುಪಾಲಬ್ಧಾ ಯಮೇನ ತೇ
ಸ್ಮರಂತಃ ಸ್ವಾನಿ ಕರ್ಮಾಣಿ ತೂಷ್ಣೀಂ ತಿಷ್ಠಂತಿ ಪಾರ್ಥಿವಾಃ ||೯೩||

ಕಾಲಸ್ಯ = ಅಲ್ಪಕಾಲವಹಂಥಾ ರಾಜ್ಯಸ್ಯ = ರಾಜ್ಯದ ಕೃತೇ = ಆಳುತ್ತಿಹ ಕಾಲದಲ್ಲಿ [3]ದುಷ್ಕೃತಂ = ಪಾಪವು ಕಿಂ = ಏನುಕಾರಣ [3]ಕೃತಂ = ಮಾಡಲುಪಟ್ಟಿತ್ತು. ||೮೯||

ರಾಜ್ಯಲೋಭೇನ = ರಾಜ್ಯದ ಲೋಭದಿಂದ ಮೋಹೇನ = ಮಜವೆಯಿಂದ ಬಲಾತ್ = ಸತ್ತ್ವದ ದೆಸೆಯಿಂದ ಅನ್ಯಾಯತಃ = ಅನ್ಯಾಯದಿಂದ ಯತ್ = ಆವುದಾನೊಂದು ಕಾರಣವಾಗಿ ಪ್ರಜಾಃ = ಪ್ರಜೆಗಳನು ದಂಡಿತಾಃ = ಬಾಧಿಸಿದಂಥಾ ನೃಪಾಃ = ಅರಸುಗಳಿರಾ! ತಸ್ಯ ಫಲಂ = ಅದಱ ಫಲವನು ಅಧುನಾ = ಈಗ ಭುಂಜಧ್ವಂ = ಉಣ್ಣಿ ಅನುಭವಿಸಿ ಎಂಬುವರ್ಥ. ||೯೦||

ತದ್ರಾಜ್ಯಂ = ಆ ರಾಜ್ಯವು ಕ್ವ = ಎಲ್ಲಿದ್ದೂದು ಕಳತ್ರಂ ವಾ = ಸ್ತ್ರೀ ಕ್ವ = ಎಲ್ಲಿದ್ದಾಳು ಯದರ್ಥಂ = ಆವುದಾನೊಂದು ಕಾರಣವಾಗಿ ಅಶುಭಂ = ಪಾಪವು ಕೃತಂ = ಮಾಡಲುಪಟ್ಟಿತ್ತು ತತ್ಸರ್ವಂ = ಆ ರಾಜ್ಯ ಸ್ತ್ರೀ ಮುಂತಾದ ಸಮಸ್ತವನು ಸಂಪರಿತ್ಯಜ್ಯ = ಬಿಟ್ಟು ಯೂಯಂ = ನೀವು ಏಕಾಕಿನಃ = ಏಕಾಕಿಗಳಾಗಿ ಸ್ಥಿತಾಃ = ಇದ್ದವರುಗಳು. ||೯೧||

ಯೇನ = ಆವುದಾನೊಂದು ಕಾರಣದಿಂದ ಪ್ರಜಾಃ = ಪ್ರಜೆಗಳು ವಿಧ್ವಂಸಿತಾಃ = ಬಾಧಿಸಲುಪಟ್ಟರು. ಅಧುನಾ = ಈಗ ಮದ್ದೂತೈಃ = ಎನ್ನ ದೂತರುಗಳಿಂದ ಹನ್ಯಮಾನಾನಾಂ = ಕೊಲಿಸಿ ಕೊಳಲುಪಟ್ಟಂಥಾ ನಿಮಗೆ ಸರ್ವಂ = ಸಮಸ್ತವಹಂಥಾ ತತ್ಫಲಂ = ಆ ಫಲವು ಕೀದೃಶಂ = ಎಂಥಾಪ್ರಕಾರವಹಂಥಾ ಬಾಧೆ ಭವೇತ್ = ಅಹುದು ಪಶ್ಯಾಮಃ = ನೋಡುತ್ತಂವಿದ್ದೇವು. ||೯೨||

ಏವಂ = ಈ ಪ್ರಕಾರದಲ್ಲಿ ಬಹುವಿಧೈಃ = ಹಲವು ಪ್ರಕಾರವಹಂಥಾ ವಾಕ್ಯೈಃ

---

1 ಭುಂಕ್ಷಧ್ವಂ (ಘ). 2 ತುಭ್ಯಂ (ಕ) ಮೂಲಪಾಠ. ಯೇನ ಚೈವಂ (ಘ)
3 ಕಿಂ ದುಷ್ಕೃತಂ = ಯಾವ ದುಷ್ಟಕರ್ಮವು (ಕ)

ಇತಿ ಧರ್ಮಂ ಸಮಾದಿಶ್ಯ ನೃಪಾಣಾಂ ಧರ್ಮರಾಟ್ ಪುನಃ
ತತ್ಪಾಪಪಂಕಶುದ್ಧ್ಯರ್ಥಮಿದಂ ವಚನಮಬ್ರವೀತ್ ||೯೪||

ಯಮ ಉವಾಚ—

ಭೋ ಭೋ ಚಂಡ ಮಹಾಚಂಡ ಗೃಹೀತ್ವಾ ನೃಪತೀನ್ನಿಮಾನ್[1]
ವಿಶೋಧಯೆಧ್ವಂ ಪಾಪೇಭ್ಯಃ ಕ್ರಮೇಣ ನರಕಾಗ್ನಿಷು ||೯೫||

ತತಃ ಶೀಘ್ರಂ ಸಮುತ್ಥಾಯ ನೃಪಾನ್ ಸಂಗೃಹ್ಯ ಪಾದಯೋಃ
[2]ಭ್ರಾಮಯಿತ್ವಾಽತಿವೇಗೇನ ನಿಕ್ಷಿಪ್ಯೋರ್ಧ್ವಂ ಪ್ರಗೃಹ್ಯ ಚ ||೯೬||

= ವಾಕ್ಯಂಗಳಿಂದ ಯಮೇನ = ಯಮನಿಂದ ಉಪಾಲಬ್ಧಾಃ = ನುಡಿಯಲುಪಟ್ಟಿಂಥಾ ತೇ ಪಾರ್ಥಿವಾಃ = ಆ ಅರಸುಗಳು ಸ್ವಾನಿ ಕರ್ಮಾಣಿ = ತಾವು ಮಾಡಿದಂಥಾ ಪಾಪಂಗಳನು ಸ್ಮರಂತಃ = ನೆನವುತ್ತಿದ್ದಂಥಾ ಅವರುಗಳಾಗಿ ತೂಷ್ಣೀಂ = ಸುಮ್ಮನೆ ತಿಷ್ಠಂತಿ = ಇರುತ್ತಿಹರು. ||೯೩||

ಇತಿ = ಈ ಪ್ರಕಾರದಲ್ಲಿ ಧರ್ಮರಾಟ್ = ಯಮಧರ್ಮರಾಜನು ನೃಪಾಣಾಂ = ಅರಸುಗಳಿಗೆ ಧರ್ಮಂ = ಧರ್ಮವನು ಸಮಾದಿಶ್ಯ = ಹೇಳಿ ತತ್ಪಾಪಪಂಕಶುದ್ಧ್ಯರ್ಥಂ = ಅವರುಗಳ ಪಾಪವೆಂಬ ಕೆಸಱ ತೊಳೆಯಲೋಸ್ಕರ ಪುನಃ = ಮರಳಿ ಇದಂ ವಚನಂ = ಈ ವಾಕ್ಯವನು ಅಬ್ರವೀತ್ = ನುಡಿದನು. ||೯೪||

ಯಮ ಉವಾಚ—ಯಮನು ನುಡಿದನು.

ಭೋ ಚಂಡ = ಎಲೆ ಚಂಡನೆ ! ಭೋ ಮಹಾಚಂಡ = ಎಲೆ ಮಹಾಚಂಡನೆ ! ಇಮಾನ್ ನೃಪತೀನ್ = ಈ ಅರಸುಗಳನು ಗೃಹೀತ್ವಾ = ಹಿಡಿದುಕೊಂಡು ಕ್ರಮೇಣ = ಕ್ರಮದಿಂದ ನರಕಾಗ್ನಿಷು = ನರಕಾಗ್ನಿಗಳಲ್ಲಿ ಪಾಪೇಭ್ಯಃ = ಪಾಪಂಗಳ ದೆಸೆಯಿಂದ ವಿಶೋಧಯಧ್ವಂ = ಶುದ್ಧವ ಮಾಡಿ. ||೯೫||

ತತಃ = ಅಷ್ಟಱಮೇಲೆ ಶೀಘ್ರಂ = ಬೇಗವು ಸಮುತ್ಥಾಯ = ಎದ್ದು ನೃಪಾನ್ = ಅರಸುಗಳನು ಸಂಗೃಹ್ಯ = ಹಿಡಿದುಕೊಂಡು ಪಾದಯೋಃ = ಕಾಲುಗಳ ಅತಿ ವೇಗೇನ = ಅತಿ ಬೇಗದಿಂದ ಭ್ರಾಮಯಿತ್ವಾ = ತಿರುಗಿಸಿ ಊರ್ಧ್ವಂ = ಮೇಲಕ್ಕೆ ನಿಕ್ಷಿಪ್ಯ = ಹಾಯಿಕಿ ಪ್ರಗೃಹ್ಯ ಚ = ಹಿಡಿದೂ ||೯೬||

---

1 ನಮೂನ್ (ಕ) ಮೂಲಪಾಠ. 2 ಭ್ರ (ಖ.ಚ.)

ಸರ್ವತ್ರಾಣೇನ ಮಹತಾ ಸುಪ್ರತಪ್ತೇ ಶಿಲಾತಲೇ
ಆಸ್ಫಾಲಯಂತಿ ತರಸಾ [1]ವಜ್ರೇಣೇವ[1] ಮಹಾದ್ರುಮಮ್ ||೯೭||

ತತಸ್ಸ ರಕ್ತಸ್ರೋತೋಭಿಃ ಸ್ರವತೇ ಜರ್ಝರೀಕೃತಃ
ನಿಸ್ಸಂಜ್ಞ[2]ಸ್ತು[2] ತತೋ ದೇಹೀ ನಿಶ್ಚೇಷ್ಟ[3]ಶ್ಚ[3] ಪ್ರಜಾಯತೇ ||೯೮||

ತತಃ ಸ ವಾಯುನಾ ಸ್ಪೃಷ್ಟಃ ಶನೈರುಜ್ಜೀ[4]ವತೇ[4] ಪುನಃ
ತತಃ ಪಾಪವಿಶುದ್ಧ್ಯರ್ಥಂ ಕ್ಷಿಪಂತಿ ನರಕಾರ್ಣವೇ ||೯೯||

ಅಷ್ಟಾವಿಂಶತಿರೇವಾಧಃ ಕ್ಷಿತೇರ್ನರಕಕೋಟಯಃ
ಸಪ್ತಮಸ್ಯ ತಲಸ್ಯಾಧೋ ಘೋರೇ ತಮಸಿ ಸಂಸ್ಥಿತಾಃ ||೧೦೦||

ಮಹತಾ=ಬಹಳವಹಂಥಾ ಸರ್ವತ್ರಾಣೇನ=ಸರ್ವಸತ್ತ್ವದಿಂದ ಸುಪ್ರತಪ್ತೇ =ಅಡಿಕಾದಂಥಾ ಶಿಲಾತಲೇ=ಹಾಸರೆಕಿಯಲ್ಲಿ ತರಸಾ=ಬೇಗದಿಂದ ಆಸ್ಫಾಲಯಂತಿ = ಅಪ್ಪಳಿಸುತ್ತಿಹರು. ಕಥಮಿವ = ಅದು ಹೇಗೆಂದರೆ ವಜ್ರೇಣ = ವಜ್ರದಿಂದ ಮಹಾದ್ರುಮಮಿವ=ದೊಡ್ಡಿಯ ಮರನನೀಗೆಹಗಹಗೆ. ||೯೭||

ತತಃ=ಅನಂತರದಲ್ಲಿ ಸಃ= ಆ ಪ್ರಾಣಿ ಜರ್ಝರೀಕೃತಂ=ಜಜ್ಝರಿತವಾಗಲ್ಪಟ್ಟಾತನಾಗಿ ರಕ್ತಸ್ರೋತೋಭಿಃ=ರಕ್ತದ ಪ್ರವಾಹಂಗಳಿಂದ ಸ್ರವತೇ=ಸುರಿಯಲುಪಡುತ್ತಿಹನು. ತತಃ=ಅಷ್ಟರ ಮೇಲೆ ನಿಸ್ಸಂಜ್ಞಃ=ಚೈತನ್ಯಮಾತ್ರವಿಲ್ಲದೆಯಿದ್ದಂಥಾ ದೇಹೀ ತು = ಪ್ರಾಣಿ ನಿಶ್ಚೇಷ್ಟಶ್ಚ = ಚೇಷ್ಟೆಯಿಲ್ಲದಾತನು ಪ್ರಜಾಯತೇ = ಆಗುತ್ತಿಹನು. ||೯೮||

ತತಃ = ಅಷ್ಟರ ಮೇಲೆ ಸಃ = ಆ ಪ್ರಾಣಿ ವಾಯುನಾ = ಗಾಳಿಯಿಂದ ಸ್ಪೃಷ್ಟಃ = ಸೋಂಕಲು ಪಟ್ಟಾತನಾಗಿ ಶನೈಃ = ಮೆಲ್ಲನೆ ಪುನಃ = ಮರಳಿ ಉಜ್ಜೀವತೇ = ಜೀವಿಸುತ್ತಿಹನು. ತತಃ = ಅನಂತರದಲ್ಲಿ ಪಾಪವಿಶುದ್ಧ್ಯರ್ಥಂ = ಪಾಪದ ಶುದ್ಧಿಕ್ಕೋಸ್ಕರ ನರಕಾರ್ಣವೇ = ನರಕಸಮುದ್ರದಲ್ಲಿ ಕ್ಷಿಪಂತಿ = ಹಾಯ್ಕುತ್ತಿಹರು. ||೯೯||

— ಇನ್ನು ನರಕಂಗಳ ಹೆಸರುಗಳು —

ಕ್ಷಿತೇಃ = ಭೂಮಿಯ ಅಧಃ = ಕೆಳಗೆ ಸಪ್ತಮಸ್ಯ = ಏಳನೆಯ ತಲಸ್ಯ = ಪಾತಾಳದ ಅಧಃ=ಕೆಳಗೆ ಘೋರೇ ತಮಸಿ=ಬಹಳವಹ ಕತ್ತಲೆಯಲ್ಲಿ ಅಷ್ಟಾವಿಂಶತಿಃ =ಇಪ್ಪತ್ತೆಂಟು ನರಕಕೋಟಯಃ=ನರಕಕೋಟಿಗಳು ಸಂಸ್ಥಿತಾಃ=ಇರುತ್ತಿಹವೆಂದು ಉಕ್ತಾಃ=ಹೇಳಲುಪಟ್ಟವು. ||೧೦೦||

---

[1] ವಜ್ರೇಣೈವ (ಗ). [2] ಶ್ಚ (ಗ.ಘ.ಚ.). [3] ಸ್ತು (ಗ.ಘ.ಚ.). [4] ವಿತಃ (ಘ.).

ಘೋರಾಖ್ಯಾ ಪ್ರಥಮಾ ಕೋಟಿಃ ಸುಘೋರಾ ತದಧಃ ಸ್ಥಿತಾ
ಅತಿಘೋರಾ ಮಹಾಘೋರಾ ಘೋರರೂಪಾ ಚ ಪಂಚಮೀ ||೧೦೧||

ಷಷ್ಠೀ ತರಲತಾರಾಖ್ಯಾ ಸಪ್ತಮೀ ಚ ಭಯಾನಕಾ
ಅಷ್ಟಮೀ ಕಾಲರಾತ್ರೀ ಚ ನವಮೀ ಚ ಭಯೋತ್ಕಟಾ ||೧೦೨||

ದಶಮೀ ತದಧಶ್ಚಂಡಾ ಮಹಾಚಂಡಾ ತತೋಽಪ್ಯಧಃ
ಚಂಡಕೋಲಾಹಲಾ ಚಾನ್ಯಾ ಪ್ರಚಂಡಾ ನರಕಾಧಿಕಾ ||೧೦೩||

ಪದ್ಮಾ ಪದ್ಮಾವತೀ ಭೀಮಾ ಭೀಮಭೀಷಣ[1]ನಾಯಿಕಾ[1]
[2]ಕರಾಲಾ ವಿಕರಾಲಾ[2] ಚ ವಜ್ರಾ ವಿಂಶತಿಕಾ ಸ್ಮೃತಾ ||೧೦೪||

ಪ್ರಥಮಾ = ಮೊದಲ ನರಕವು ಘೋರಾಖ್ಯಾ = ಘೋರವೆಂಬ ಹೆಸರನುಳ್ಳದು ಕೋಟಿಃ = ಒಂದು ಕೋಟಿ. ತದಧಃ = ಅದರ ಕೆಳಗೆ ಸುಘೋರಾ = ಸುಘೋರವೆಂಬುದು ಸ್ಥಿತಾ = ಇರುತ್ತಿಹುದು. ಅತಿಘೋರಾ = ಅತಿಘೋರವು ಮಹಾಘೋರಾ = ಮಹಾಘೋರವು ಪಂಚಮೀ = ಐದನೆಯದು ಘೋರರೂಪಾ ಚ = ಘೋರರೂಪವು. ||೧೦೧||

ಷಷ್ಠೀ = ಆರನೆಯದು ತರಲತಾರಾಖ್ಯಾ = ತರಳತಾರವೆಂಬ ಹೆಸರನುಳ್ಳದು. ಸಪ್ತಮೀ ಚ = ಏಳನೆಯದು ಭಯಾನಕಾ = ಭಯಾನಕವು ಅಷ್ಟಮೀ ಚ = ಎಂಟನೆಯದು ಕಾಲರಾತ್ರೀ = ಕಾಳರಾತ್ರಿಯೆನಿಸೂದು ನವಮೀ ಚ = ಒಂಭತ್ತನೆಯದು ಭಯೋತ್ಕಟಾ = ಭಯೋತ್ಕಟವು. ||೧೦೨||

ತದಧಃ = ಅದರ ಕೆಳಗೆ ದಶಮೀ = ಹತ್ತನೆಯದು ಚಂಡಾ = ಚಂಡವೆನಿಸೂದು. ತತಃ = ಅದರ ಅಧಃ = ಕೆಳಗೆ ಮಹಾಚಂಡಾಪಿ = ಮಹಾಚಂಡವೂ ಅನ್ಯಾ = ಮತ್ತೊಂದು ಚಂಡಕೋಲಾಹಲಾ = ಚಂಡಕೋಲಾಹಲವು ನರಕಾಧಿಕಾ = ನರಕಂಗಳಿಗೆ ಶ್ರೇಷ್ಠವಹಂಥಾ ಪ್ರಚಂಡಾ = ಪ್ರಚಂಡವೆಂಬಂಥಾದು. ||೧೦೩||

ಪದ್ಮಾ = ಪದ್ಮವೆಂಬುದು ಪದ್ಮಾವತೀ = ಪದ್ಮಾವತಿಯೆಂಬುದು ಭೀಮಾ = ಭೀಮವೆಂಬಂಥಾದು ಭೀಮಭೀಷಣನಾಯಿಕಾ = ಭೀಮಭೀಷಣನಾಯಕವು ಕರಾಲಾ = ಕರಾಳವು ವಿಕರಾಲಾ ಚ = ವಿಕರಾಳವು ವಜ್ರಾ = ವಜ್ರವೆಂಬ ನರಕವು ವಿಂಶತಿಕಾ = ಇಪ್ಪನೆಯದೆಂದು ಸ್ಮೃತಾ = ಹೇಳಲುಪಟ್ಟಿತ್ತು. ||೧೦೪||

---

1 ನಾಯಕಾ (ಚ). 2 ಕರಾಲವಿಕರಾಲೇ (ಘ).

ತ್ರಿಕೋಣಾ ಪಂಚಕೋಣಾ ಚ ಸುದೀರ್ಘಾ ಪರಿವರ್ತುಲಾ
ಸಪ್ತಭೌಮಾಽಷ್ಟಭೌಮಾ ಚ ದೀಪ್ತಾ ಮಾಯೇತಿ ಚಾಷ್ಟಮೀ||೧೦೫||

ಇತ್ಯೇತೇ ನಾಮತಃ ಪ್ರೋಕ್ತಾ ಘೋರಾ ನರಕಕೋಟಯಃ
ಅಷ್ಟಾವಿಂಶತಿರೇವೈತಾಃ ಪಾಪಾನಾಂ ಯಾತನಾತ್ಮನಾಮ್ ||೧೦೬||

ತಾಸಾಂ ಕ್ರಮೇಣ ವಿಜ್ಞೇಯಾಃ ಪಂಚ ಪಂಚೈವ ನಾಯಕಾಃ
ಪ್ರತ್ಯೇಕಂ ಸರ್ವಕೋಟೀನಾಂ ನಾಮತಸ್ತಾನ್ನಿಬೋಧತ ||೧೦೭||

ರೌರವಂ ಪ್ರಥಮಸ್ತೇಷಾಂ ರುದಂತೇ ಯತ್ರ ದೇಹಿನಃ
ಮಹಾರೌರವಪೀಡಾಭಿಃ ಮಹಾಂತೋಽಪಿ ರುದಂತಿ ಚ ||೧೦೮||

ತ್ರಿಕೋಣಾ = ತ್ರಿಕೋಣವು ಪಂಚಕೋಣಾ = ಪಂಚಕೋಣವು ಸುದೀರ್ಘಾ = ಸುದೀರ್ಘವು ಪರಿವರ್ತುಲಾ = ಪರಿವರ್ತುಲವು ಸಪ್ತಭೌಮಾ = ಸಪ್ತಭೌಮವೆಂಬ ನರಕವು ಅಷ್ಟಭೌಮಾ ಚ = ಅಷ್ಟಭೌಮವು ದೀಪ್ತಾ = ದೀಪ್ತವು ಮಾಯಾ = ಮಾಯೆಯೆಂಬ ನರಕವು ಇತಿ ಚ = ಈ ಪ್ರಕಾರದಲ್ಲಿಯೂ ಅಷ್ಟಮೀ = ಇವೆಂಟು ನರಕವು. ||೧೦೫||

ಇತಿ = ಈ ಪ್ರಕಾರದಲ್ಲಿ ನಾಮತಃ = ಹೆಸರಿನಿಂದ ಘೋರಾಃ = ಘೋರವಹಂಥಾ ನರಕಕೋಟಯಃ = ನರಕಕೋಟಿಗಳು ಅಷ್ಟಾವಿಂಶತಿರೇವ = ಇಪ್ಪತ್ತೆಂಟು ಕೋಟಿಯೇ. ಯಾತನಾತ್ಮನಾಂ = ಯಾತನಾಶರೀರಗಳಹಂಥಾ ಪಾಪಾನಾಂ = ಪಾಪಿಗಳಿಗೆ ಏತಾಃ = ಈ ನರಕಂಗಳು ಪ್ರೋಕ್ತಾಃ = ಹೇಳಲುಪಟ್ಟವು. ||೧೦೬||

ತಾಸಾಂ ಸರ್ವಕೋಟೀನಾಂ = ಆ ಸಮಸ್ತ ಕೋಟಿ ನರಕಂಗಳಿಗೆ ಪ್ರತ್ಯೇಕಂ = ಬೇಱೆ ಬೇಱೆ ಕ್ರಮೇಣ = ಕ್ರಮದಿಂದ ಪಂಚ ಪಂಚೈವ = ಐದೈದು ನಾಯಕಾಃ = ಮುಖ್ಯ ನರಕಂಗಳು ವಿಜ್ಞೇಯಾಃ = ಅಱಿಯಲು ಯೋಗ್ಯಂಗಳು. ನಾಮತಃ = ಹೆಸರಿಂದ ತಾನ್ = ಆ ನರಕಂಗಳನು ನಿಬೋಧತ = ಅಱಿ. ||೧೦೭||

ತೇಷಾಂ = ಆ ನರಕಂಗಳಿಗೆ[1] ಪ್ರಥಮಃ = ಮೊದಲದು ರೌರವಃ = ರೌರವವೆನಿಸೂದು ಯತ್ರ = ಆವುದಾನೊಂದು ರೌರವವೆಂಬ ನರಕದಲ್ಲಿ ದೇಹಿನಃ = ಪ್ರಾಣಿಗಳು ರುದಂತೇ = ಅಳುತ್ತಿಹರು ಅದು ನಿಮಿತ್ತಂ ರೌರವವೆಂಬ ಹೆಸರಾಯಿತ್ತು. ಮಹಾರೌರವಪೀಡಾಭಿಃ = ಅತ್ಯಂತ ಅಳುವ ಬಾಧೆಗಳಿಂದ [2]ಮಹಾಂತೋಽಪಿ = ದೊಡ್ಡಿಯವರುಗಳಾಯಿತ್ತಾದರೂ[2] ರುದಂತಿ ಚ = ಅಳುತ್ತಿಹರು. ಅದು ನಿಮಿತ್ತ ಮಹಾರೌರವವೆಂಬ ಹೆಸರಾಯಿತ್ತು. ||೧೦೮||

---

[1] ಗಳ ಮಧ್ಯೆ (ಕ). [2] ಲುಪ್ತ (ಕ).

ತಮಶ್ಶೀತಂ ತಥಾ ಚೋಷ್ಣಂ ಪಂಚಾದ್ಯಾ ನಾಯಕಾಃ ಸ್ಮೃತಾಃ ॥

ಸುಘೋರಸ್ಸುತಪಸ್ತೀಕ್ಷ್ಣಃ ಪದ್ಮಸ್ಸಂಜೀವಕಶ್ಶರಃ
ಮಹಾಮಾಂಸೋ ವಿಲೋಮಶ್ಚ ಸುಭೀಮ[1]ಶ್ಚ ಕಟಂಕಟಃ[1] ॥೧೧೦॥

ತೀವ್ರವೇಗೀ ಕರಾಲಶ್ಚ ವಿಕರಾಲಃ ಪ್ರಕಂಪನಃ
ಮಹಾಪದ್ಮಸ್ಸುಪದ್ಮಶ್ಚ ಕಾಲವಕ್ತ್ರಶ್ಚ ಗರ್ಜನಃ ॥೧೧೧॥

ಸೂಚೀಮುಖಸ್ಸುನೇಮಿಶ್ಚ ಖಾದಕಸ್ಸುಪ್ರಪೀಡನಃ
ಕುಂಭೀಪಾಕಃ ಸುಪಾಕಶ್ಚ ಕ್ರಕಚಶ್ಚಾತಿದಾರುಣಃ ॥೧೧೨॥

ತಮಃ = ಕತ್ತಲೆಯನುಳ್ಳದಾಗಿ ತಮವೆಂಬ ನರಕವು ಶೀತಂ = ಚಳಿಯನುಳ್ಳದಾಗಿ ಶೀತವೆಂಬ ನರಕ ತಥಾ = ಹಾಂಗೆ ಉಷ್ಣಂ ಚ = ಸೆಖಿಯನುಳ್ಳದಾಗಿ ಉಷ್ಣವೆಂಬ ನರಕವು. ಪಂಚ = ಐದು ಆದ್ಯಾಃ = ಮೊದಲಹಂಥಾ ನಾಯಕಾಃ = ಮುಖ್ಯನರಕಂಗಳೆಂದು ಸ್ಮೃತಾಃ = ಹೇಳಲುಪಟ್ಟವು. ॥೧೦೯॥

ಸುಘೋರಃ = ಸುಘೋರವು ಸುತಪಃ = ಸುತಪವು ತೀಕ್ಷ್ಣಃ = ತೀಕ್ಷ್ಣವು ಪದ್ಮಃ = ಪದ್ಮವು ಸಂಜೀವಕಃ = ಸಂಜೀವಕವು ಶರಃ = ಶರವೆಂಬ ನರಕವು ಮಹಾಮಾಂಸಃ = ಮಹಾಮಾಂಸವೆಂಬ ನರಕವು ವಿಲೋಮಶ್ಚ = ವಿಲೋಮವೆಂಬ ನರಕವು ಸುಭೀಮಶ್ಚ = ಸುಭೀಮ ನರಕವು [2]ಕಟಂಕಟಃ = ಕಟಂಕಟವೆಂಬ[2] ನರಕವು. ॥೧೧೦॥

ತೀವ್ರವೇಗೀ = ತೀವ್ರವೇಗಿಯೆಂಬ ನರಕವು ಕರಾಲಶ್ಚ = ಕರಾಳನರಕವು ವಿಕರಾಳಃ = ವಿಕರಾಳ ನರಕವು ಪ್ರಕಂಪನಃ = ಪ್ರಕಂಪನ ನರಕವು ಮಹಾಪದ್ಮಃ = ಮಹಾಪದ್ಮನರಕವು ಸುಪದ್ಮಶ್ಚ = ಸುಪದ್ಮನರಕವು ಕಾಲವಕ್ತ್ರಶ್ಚ = ಕಾಲವಕ್ತ್ರ-ನರಕವು ಗರ್ಜನಃ = ಗರ್ಜನವೆಂಬ ನರಕವು. ॥೧೧೧॥

ಸೂಚೀಮುಖಃ = ಸೂಚೀಮುಖವೆಂಬ ನರಕವು ಸುನೇಮಿಶ್ಚ = ಸುನೇಮಿ-ಯೆಂಬ ನರಕವು ಖಾದಕಃ = ಖಾದಕನರಕವು ಸುಪ್ರಪೀಡನಃ = ಸುಪ್ರಪೀಡನ ನರಕವು ಕುಂಭೀಪಾಕಃ = ಕುಂಭೀಪಾಕವೆಂಬ ನರಕವು ಸುಪಾಕಶ್ಚ = ಸುಪಾಕವೆಂಬ ನರಕವು ಕ್ರಕಚಶ್ಚ = ಕ್ರಕಚವೆಂಬ ನರಕವು ಅತಿದಾರುಣಃ = ಅತಿಭಯಂಕರವೆಂಬ ನರಕವು. ॥೧೧೨॥

---

[1] ಶ್ಚಾಪಿಕಂಟಕಃ (ಕ). [2] ಕಂಟಕಃ = ಕಂಟಕವೆಂಬ (ಕ).

ಅಂಗಾರರಾಶೀಭವನಮಸೃಕ್ಪೂಯಹ್ರದ[1]ಸ್ತತಃ[1]
ತೀಕ್ಷ್ಣಾಯಸ್ತುಂಡಶಕುನಿರ್ಮಹಾಸಂವರ್ತಕಃ ಕ್ರತುಃ ||೧೧೩||

ಸುತಪ್ತಃ [2]ಜತು[2]ಲೇಪಶ್ಚ ಪೂತಿಮಾಂಸೋದ್ರವಸ್ತ್ರಪುಃ
ಉಚ್ಛ್ವಾಸಶ್ಚ ನಿರುಚ್ಛ್ವಾಸಃ ಸುದೀರ್ಘಃ ಕೋಟಿಶಾಲ್ಮಲಿಃ ||೧೧೪||

ದುರಿಷ್ಟಸ್ಸುಮಹಾನಾದಃ [3]ಪ್ರಭಾವಸ್ಸುಪ್ರಭಾವನಃ[3]
ಋಕ್ಷಮೇಷ[4]ವೃಕಾಸ್ಯಾಶ್ಚ[4]ಸಿಂಹವ್ಯಾಘ್ರಗಜಾನನಾಃ ||೧೧೫||

ಅಂಗಾರರಾಶೀಭವನಂ = ಅಂಗಾರರಾಶಿಭವನವೆಂಬ ನರಕವು ಅಸೃಕ್ಪೂಯಹ್ರದಃ = ಅಸೃಕ್‌ಪೂಯಹ್ರದವೆಂಬ ನರಕವು ನೆತ್ತರು ಕೀವಿನ ಮಡುಗಳನುಳ್ಳದಾಗಿಹುದು. ತತಃ = ಅನಂತರದಲ್ಲಿ ತೀಕ್ಷ್ಣಾಯಸ್ತುಂಡಶಕುನಿಃ = ತೀಕ್ಷ್ಣಾಯಸ್ತುಂಡಶಕುನಿಯೆಂಬ ನರಕವು. ಆ ನರಕ ಕೂರಿತ್ತಾಗಿದ್ದ ಕಬ್ಬುನದ ಮೂಗನುಳ್ಳ ಕಾಗೆಗಳನುಳ್ಳದಾಗಿಹದು. ಮಹಾಸಂವರ್ತಕಃ = ಮಹಾಸಂವರ್ತಕವೆಂಬ ನರಕವು ಕ್ರತುಃ = ಕ್ರತುವೆಂಬ ನರಕವು. ||೧೧೩||

ಸುತಪ್ತಃ = ಸುತಪ್ತವೆಂಬ ನರಕವು ಜತುಲೇಪಶ್ಚ = ಜತುಲೇಪವೆಂಬ ನರಕವು ಪೂತಿಮಾಂಸಃ = ಪೂತಿಮಾಂಸವೆಂಬ ನರಕವು. ಅದು ನಾಱುವ ಮಾಂಸವನುಳ್ಳದಾಗಿಹದು. ದ್ರವಃ = ದ್ರವವೆಂಬ ನರಕವು ತ್ರಪುಃ = ತ್ರಪುವೆಂಬ ನರಕವು ಉಚ್ಛ್ವಾಸಶ್ಚ = ಉಚ್ಛ್ವಾಸವೆಂಬ ನರಕವು ನಿರುಚ್ಛ್ವಾಸಃ = ನಿರುಚ್ಛ್ವಾಸವೆಂಬ ನರಕವು ಸುದೀರ್ಘಃ = ಸುದೀರ್ಘವೆಂಬ ನರಕವು ಕೂಟಶಾಲ್ಮಲಿಃ = ಕೂಟಶಾಲ್ಮಲಿಯೆಂಬ ನರಕವು. ||೧೧೪||

ದುರಿಷ್ಟಃ = ದುರಿಷ್ಟವೆಂಬ ನರಕವು ಸುಮಹಾನಾದಃ = ಸುಮಹಾನಾದವೆಂಬ ನರಕವು ಪ್ರಭಾವಃ = ಪ್ರಭಾವವೆಂಬ ನರಕವು ಸುಪ್ರಭಾವನಃ = ಸುಪ್ರಭಾವನ ನರಕವು ಋಕ್ಷ-ಮೇಷ-ವೃಕಾಸ್ಯಾಶ್ಚ-ಸಿಂಹ-ವ್ಯಾಘ್ರ-ಗಜಾನನಾಃ = ಋಕ್ಷಮುಖವು ಮೇಷಮುಖವು ವೃಕಮುಖವು ಸಿಂಹಮುಖವು ವ್ಯಾಘ್ರಮುಖವು ಗಜಮುಖವೆಂಬ ನರಕಂಗಳೂ ||೧೧೫||

---

1 ಸ್ತಥಾ (ಕ) ಮೂಲಮಾತ್ರ. 2 ಜಂತು (ಕ).
3 ಪ್ರವಾಹಸ್ಸುಪ್ರವಾಹನಃ (ಘ). 4 ವೃಕಾಶಲ್ಯ (ಖ.ಗ.ಚ.). ಶಲ್ಯಮುಖವು (ಕ) ವ್ಯಾಖ್ಯಾನಪಾಠ. ವೃಕಾಸ್ಯಾಶ್ಚ ಎಂಬುದು (ಕ) ಮೂಲಪಾಠ.

ಶ್ವಸೂಕರಾಜಮಹಿಷವೃಷ[1]ಶಲ್ಯಾ[1] ಹಯಾನನಾಃ
ಗ್ರಾಹಕುಂಭೀರನಕ್ರಾಸ್ಯಾಃ ಸರ್ಪಕೂರ್ಮಾಸ್ಯವಾಯಸಾಃ ||೧೧೬||

ಗೃಧ್ರೋಲೂಕಜಲೂಕಾಶ್ಚ ಶಾರ್ದೂಲಕಪಿಕರ್ಕಟಾಃ
ಗಂಡಕಃ ಪೂತಿವಕ್ತ್ರಶ್ಚ ರಕ್ತಾಕ್ಷಃ ಪೂತಿಮೃತ್ತಿಕಃ ||೧೧೭||

ಕಣಧೂಮಸ್ತುಷಾಗ್ನಿಶ್ಚ [2]ಕೃ[2]ಮೀಣಾಂ ನಿಚಯಸ್ತಥಾ
ಅಮೇಧ್ಯಶ್ಚಾಪ್ರತೀಕಾರೋ ರುಧಿರಾನ್ನಸ್ಯ ಭೋಜನಮ್ ||೧೧೮||

ಲಾಲಾಭಕ್ಷಾತ್ಮಭಕ್ಷೌ ಚ ಸರ್ವಭಕ್ಷಸ್ಸುದಾರುಣಃ
ಸಂಕಟಸ್ಸುವಿಶಾಲಶ್ಚ ವಿಕಟಃ ಕಟಪೂತನಃ ||೧೧೯||

ಶ್ವಸೂಕರಾಜಮಹಿಷವೃಷಮೇಷಹಯಾನನಾಃ = ಶುನಕಮುಖ ಸೂಕರಮುಖ ಅಜಮುಖ ಮಹಿಷಮುಖ ವೃಷಮುಖ ಶಲ್ಯಮುಖ ಹಯಮುಖವೆಂಬ ನರಕಂಗಳೂ ಗ್ರಾಹಕುಂಭೀರನಕ್ರಾಸ್ಯಾಃ = ಗ್ರಾಹಮುಖ ಕುಂಭೀರಮುಖ ನಕ್ರಮುಖವೆಂಬ ನರಕಂಗಳೂ ಸರ್ಪಕೂರ್ಮಾಸ್ಯ ವಾಯಸಾಃ = ಸರ್ಪಮುಖ ಕೂರ್ಮಮುಖ ವಾಯಸಮುಖವೆಂಬ ನರಕಂಗಳೂ, ||೧೧೬||

ಗೃಧ್ರಃ = ಗೃಧ್ರಮುಖವೆಂಬ ನರಕವು ಉಲೂಕಃ = ಉಲೂಕ ಮುಖನರಕವು ಜಲೂಕಾಶ್ಚ = ಜಲೂಕಮುಖವೆಂಬ ನರಕಂಗಳು ಶಾರ್ದೂಲಕಪಿಕರ್ಕಟಾಃ = ಶಾರ್ದೂಲಮುಖ ನರಕವೂ ಕಪಿಮುಖ ಕರ್ಕಟಮುಖವೆಂಬ ನರಕಂಗಳೂ ಗಂಡಕಃ = ಗಂಡಕವೆಂಬ ನರಕವೂ ಪೂತಿವಕ್ತ್ರಶ್ಚ = ಪೂತಿವಕ್ತ್ರವೆಂಬ ನರಕವು ರಕ್ತಾಕ್ಷಃ = ರಕ್ತಾಕ್ಷವೆಂಬ ನರಕವು ಪೂತಿಮೃತ್ತಿಕಃ = ಪೂತಿಮೃತ್ತಿಕೆಯೆಂಬ ನರಕವು. ಅದು ದುರ್ಗಂಧವಹ ಮಣ್ಣನುಳ್ಳದಾಗಿಹದು. ||೧೧೭||

ಕಣಧೂಮಃ = ಕಣಧೂಮವೆಂಬ ನರಕವು ತುಷಾಗ್ನಿಶ್ಚ = ತುಷಾಗ್ನಿಯೆಂಬ ನರಕವು ಉಯ್ಯಕ್ಕಿಚ್ಚನುಳ್ಳದಾಗಿಹುದು. ಕೃಮೀಣಾಂ ನಿಚಯಃ = ಕ್ರಿಮಿಗಳ ಮೊತ್ತವನುಳ್ಳದಾಗಿ ಕೃಮಿನಿಚಯವೆಂಬ ನರಕವು ತಥಾ = ಹಾಂಗೆ ಅಮೇಧ್ಯಶ್ಚ = ಅಮೇಧ್ಯವೆಂಬ ನರಕವು ಅಪ್ರತೀಕಾರಃ = ಅಪ್ರತೀಕಾರವೆಂಬ ನರಕವು ರುಧಿರಾನ್ನಸ್ಯ ಭೋಜನಂ = ನೆತ್ತರುಕೂಳನುಂಬಂಥಾ ರುಧಿರಾನ್ನಭೋಜನವೆಂಬ ನರಕವು. ||೧೧೮||

ಲಾಲಾಭಕ್ಷಾತ್ಮಭಕ್ಷೌ ಚ = ಲಾಲಾಭಕ್ಷ ಆತ್ಮಭಕ್ಷವೆಂಬ ಎರಡು ನರಕಂಗಳು,

---

[1] ಶಲ್ಯ(ಕ) ಮೂಲ. ವ್ಯಾಖ್ಯಾನದಲ್ಲಿ ಮೇಷಮುಖ ಎಂದಿದೆಯಾದರೂ ಹಿಂದಿನ ಶ್ಲೋಕದಲ್ಲಿ 'ಮೇಷ' ಪದಬಂದಿರುವುದರಿಂದಲೂ ಖ.ಗ.ಚ. ಪ್ರತಿಗಳ ಪಾಠ 'ಶಲ್ಯ'ವೆಂದಿರುವುದರಿಂದಲೂ ಇಲ್ಲಿ ಶಲ್ಯಪಾಠವನ್ನು ಕೊಡಲಾಗಿದೆ. ಶಲ್ಯ (ಘ). [2] ಕ್ರಿ (ಗ.ಚ.)

ಅಂಬರೀಷಃ ಕಟಾಹಶ್ಚ ಕಷ್ಟಾ ವೈತರಣೀ ನದೀ
ಸುತಪ್ತಲೋಹಶಯನ¹ಮೇಕಪಾದ¹ಪ್ರತಪ್ತಕಃ ||೧೨೦||

ಅಸಿತಾಲವನಂ ಘೋರಮಸ್ಥಿಭಂಗಪ್ರಪೀಡನಮ್
ತಿಲಾತಸೀಕ್ಷುಯಂತ್ರಾಣಿ ಕೂಟಪಾಶಪ್ರಮರ್ದ²ನಮ್² ||೧೨೧||

ಮಹಾಚುಲ್ಲೀ ಸುಚುಲ್ಲೀ ಚ ತಪ್ತಲೋಹಮಯೀ ಶಿಲಾ
ಪರ್ವತಃ ಕ್ಷುರಧಾರಾ³ಖ್ಯಸ್ತ³ಥಾ ಚ ಮಲಪರ್ವ⁴ತಃ⁴ ||೧೨೨||

ಲೋಳೆಯ ಭಕ್ಷಿಸುವರಾಗಿ ಲಾಲಾಭಕ್ಷವೆಂಬ ಹೆಸರಾಯಿತ್ತು. ತಮ್ಮ ತಾವೇ ತಿಂಬರಾಗಿ ಆತ್ಮಭಕ್ಷವೆಂಬ ಹೆಸರಾಯಿತ್ತು. ಸರ್ವಭಕ್ಷಃ = ಸರ್ವಭಕ್ಷವೆಂಬ ನರಕವೂ ಸುದಾರುಣಃ = ಅತಿ ಭಯಂಕರವನುಳ್ಳದಾಗಿ ಸುದಾರುಣವೆಂಬ ನರಕವು, ಸಂಕಟಃ = ಹಿರಿದಾಗಿ ಬಳಲಿಸುತ್ತಿಹುದಾಗಿ ಸಂಕಟವೆಂಬ ನರಕವು ಸುವಿಶಾಲಶ್ಚ = ಬಹಳ ಹರಹನುಳ್ಳದ್ದಾಗಿ ಸುವಿಶಾಲವೆಂಬ ನರಕವೂ ವಿಕಟಃ = ರೌದ್ರವನುಳ್ಳದಾಗಿ ವಿಕಟವೆಂಬ ನರಕವು ಕಟಘಾತನಃ = ಗಲ್ಲವನಿಱಿವುತ್ತಿಹುದಾಗಿ ಕಟಘಾತನವೆಂಬ ನರಕವೂ, ||೧೧೯||

ಅಂಬರೀಷಃ = ಅಂಬರೀಷವೆಂಬ ನರಕವೂ ಕಟಾಹಶ್ಚ = ಕೊಪ್ಪರಿಗೆಯಹಾಗೆ ಇಹುದಾಗಿ ಕಟಾಹವೆಂಬ ನರಕವೂ ಕಷ್ಟಾ = ಕಷ್ಟವೆಂಬ ನರಕವೂ ವೈತರಣೀನದೀ = ದಾಟಬಾರದೆ ಇಹುದಾಗಿ ವೈತರಣಿನದಿಯೆಂಬ ನರಕವೂ ಸುತಪ್ತಲೋಹಶಯನಂ = ಕಾಸಿದ ಕಬ್ಬುನದ ಹಳಿಯಮೇಲೆ ಮಲಗಿಸುವರಾಗಿ ಸುತಪ್ತಲೋಹಶಯನವೆಂಬ ನರಕವು ಏಕಪಾದಪ್ರತಪ್ತಕಃ = ಒಂದೇಕಾಲ ಕಾಸುತ್ತಿಹೆರಾಗಿ ಏಕಪಾದ ಪ್ರತಪ್ತಕವೆಂಬ ನರಕವೂ, ||೧೨೦||

ಅಸಿತಾಳವನಂ = ಅಡ್ಡಾಯುಧದೋಪಾದಿ ಎಲೆಯನುಳ್ಳ ತಾಳೆಮರಂಗಳನುಳ್ಳದಾಗಿ ಅಸಿತಾಳವೆಂಬ ನರಕವೂ ಘೋರಂ = ಘೋರವೆಂಬ ನರಕವೂ ಅಸ್ಥಿಭಂಗ ಪ್ರಪೀಡನಂ = ಎಲುವ ಮುಱಿದು ಭಂಗಿಸುತ್ತಿಹುದಾಗಿ ಅಸ್ಥಿಭಂಗ ಪ್ರಪೀಡನವೆಂಬ ನರಕವು ತಿಲಾತಸೀಕ್ಷುಯಂತ್ರಾಣಿ = ತಿಲಯಂತ್ರ, ಅತಸೀಯಂತ್ರ-ಅತಸಿಯೆಂದರೆ ಎಳ್ಳುಗಸೆಯ ಹೆಸರು. ಇಕ್ಷುಯಂತ್ರಾಣಿ = ಇಕ್ಷುಯಂತ್ರವೆಂಬ ನರಕಂಗಳೂ-ಯಂತ್ರವೆಂದರೆ ಗಾಣದ ಹೆಸರು. ಕೂಟಪಾಶಪ್ರಮರ್ದನಂ = ನೇಣುಗಳ ಮೊತ್ತದಿಂದ ಕೊಱುವುತ್ತಿಹುದಾಗಿ ಕೂಟಪಾಶ ಪ್ರಮರ್ದನವೆಂಬ ನರಕವೂ ||೧೨೧||

ಮಹಾಚುಲ್ಲೀ = ಒಲೆಯೊಳಗಿಕ್ಕಿ ಊದುತ್ತಿಹರಾಗಿ ಮಹಾಚುಲ್ಲಿಯೆಂಬ

---

1 ಮೇಕಪಾದಃ (ಘ) ² ನಃ (ಘ) ³ ಖ್ಯಾತ (ಘ) ⁴ ತಾಃ (ಘ)

ಮೂತ್ರವಿಷ್ಠಾಂಧಕೂಪಶ್ಚ [1]ಕ್ಷಾರ[1]ಕೂಪಶ್ಚ ಶಾತನಃ
ಮುಸಲೋಲೂಖಲಂ ಯಂತ್ರಂ [2]ಶಿಲಾಶಕಲಲಾಂಗಲಮ್[2] ||೧೨೩||

ತಾಳಪತ್ರಾಸಿಹನನಂ ಮಹಾಮಶಕಮಂಟಪಮ್
[3]ಸಮ್ಮೋಹನೋಽಸ್ಥಿ[3]ಭಂಗಶ್ಚ ತಪ್ತಶೂಲಮಯೋಗುಡಃ ||೧೨೪||

ಬಹುದುಃಖಂ ಮಹಾದುಃಖಂ ಕಶ್ಮಲಂ ಶಮಲಂ ಮಲಂ
ಹಾಲಾಹಲೋ ವಿರೂಪಶ್ಚ ಸುರೂಪಶ್ಚ ತಮೋಽನುಗಃ ||೧೨೫||

ನರಕವೂ ಸುಚುಲ್ಲೀ ಚ = ಸುಚುಲ್ಲಿಯೆಂಬ ನರಕವೂ ತಪ್ತಲೋಹಮಯೀ = ಕಾಸಿದ ಲೋಹವನುಳ್ಳದಾಗಿ ತಪ್ತಲೋಹಮಯಿಯೆಂಬ ನರಕವೂ ಶಿಲಾ = ಕಲ್ಲುಗಳನುಳ್ಳದಾಗಿ ಶಿಲಾಯೆಂಬ ನರಕವೂ, ಪರ್ವತಃ = ಪರ್ವತವು ಮೇಲೆ ಬಿದ್ದು ಅಜಿಗಿಜಿ ಮಾಡುತ್ತಿಹುದಾಗಿ ಪರ್ವತವೆಂಬ ನರಕವೂ ಕ್ಷುರಧಾರಾಖ್ಯಃ = ಕೂರುವಿನ ಧಾರೆಯೋಪಾದಿ ಇಹುದಾಗಿ ಕ್ಷುರಧಾರಾಖ್ಯವೆಂಬ ನರಕವೂ ತಥಾ ಚ = ಹಾಂಗೆಯೂ ಮಲಪರ್ವತಃ = ಅಮೇಧ್ಯವು ಪರ್ವತಾಕಾರವಾಗಿ ಇಹುದಾಗಿ ಮಲಪರ್ವತವೆಂಬ ನರಕವೂ, ||೧೨೨||

ಮೂತ್ರವಿಷ್ಠಾಂಧಕೂಪಶ್ಚ = ಮಲಮೂತ್ರವು ಕತ್ತಲೆಯು ಬಾವಿಯೊಳಗೆ ತುಂಬಿಕೊಂಡಿಹವಾಗಿ ಮೂತ್ರವಿಷ್ಠಾಂಧಕೂಪವೆಂಬ ನರಕವು ಕ್ಷಾರಕೂಪಶ್ಚ = ಸುಣ್ಣದ ಬಾವಿಯನುಳ್ಳದಾಗಿ ಕ್ಷಾರಕೂಪವೆಂಬ ನರಕವೂ ಶಾತನಃ = ಶಾತನವೆಂಬ ನರಕವೂ ಶಾತನವೆಂದರೆ ಛೇದಿಸುತ್ತಿಹಣವೆಂಬುದರ್ಥ. 'ಶೋ–ತನೂಕರಣೇ' ಎಂಬ ಧಾತುವಿನಲ್ಲಿ ಹುಟ್ಟಿದ ಪದವು. ಮುಸಲೋಲೂಖಲಂ ಯಂತ್ರಂ = ಒರಳಿನಲ್ಲಿಕ್ಕಿ ಒನಕೆಯಲ್ಲಿ ತಿರುಹುತ್ತಿಹುದಾಗಿ ಮುಸಲೋಲೂಖಲಯಂತ್ರವು ಎಂಬ ನರಕವೂ ಶಿಲಾಶಕಲಲಾಂಗಲಂ = ಶಿಲಾಶಕಲಲಾಂಗಲವು–ಕಲ್ಲನೇಗಿಲಲ್ಲಿ ಹೂಡುಹ–ವೆಂಬುದರ್ಥ. ||೧೨೩||

ತಾಳಪತ್ರಾಸಿಹನನಂ = ತಾಳೆಯೆಲೆಯೋಪಾದಿಯ ಅಡಾಯುಧದಲ್ಲಿ ಕೊಲು–ತ್ತಿಹುದಾಗಿ ತಾಳಪತ್ರಾಸಿಹನನವೆಂಬ ನರಕವು. ಮಹಾಮಶಕಮಂಟಪಂ = ಮಹಾಮಶಕಮಂಟಪವೆಂಬ ನರಕವು ಸಮ್ಮೋಹನಃ = ಸಮ್ಮೋಹನವೆಂಬ ನರಕವು–ಮೂರ್ಛೆಯ ಮಾಡೊದೆಂಬುದರ್ಥ. ಅಸ್ಥಿಭಂಗಶ್ಚ = ಅಸ್ಥಿಭಂಗವೆಂಬ ನರಕವೂ ತಪ್ತಶೂಲಂ = ತಪ್ತಶೂಲವೆಂಬ ನರಕವೂ ಅಯೋಗುಡಃ = ಕಬ್ಬುನದ ಕಾಸಿದ ರಸವನುಳ್ಳದಾಗಿ ಅಯೋಗುಡವೆಂಬ ನರಕವು, ||೧೨೪||

ಬಹುದುಃಖಂ = ಬಹುದುಃಖವೆಂಬ ನರಕವೂ ಮಹಾದುಃಖಂ = ಮಹಾ

---

1 ಕ್ಷುರ(ಘ) 2 ಶಿಲಾಸನಲಲಾಂಗಕಂ (ಘ) 3 ಸಂಮೋಹೋಽಸ್ಯಸ್ಥಿ (ಕ) ಮೂಲಮಾತ್ರ.

ಏಕಪಾದಸ್ತ್ರಿಪಾದಶ್ಚ ತೀವ್ರಶ್ಚಾವೀಚಿರಂತಿಮಃ ||೧೨೬||

ಅಷ್ಟಾವಿಂಶತಿರಿತ್ಯೇತೇ ಕ್ರಮಶಃ ಪಂಚ[1]ಕಾಸ್ಸ್ಮೃತಾಃ[1]
ಕೋಟೀನಾ[2]ಮಾನುಪೂರ್ವ್ಯೇಣ[2] ಪಂಚ ಪಂಚೈವ ನಾಯಕಾಃ ||

ರೌರವಾದ್ಯಮವೀಚ್ಯಂತಂ [3]ಶತಮೇಕಂ ತು ಸರ್ವತಃ[3]
[4]ಚತ್ವಾರಿಂಶತ್ಸಮಧಿಕಂ ಮಹಾನರಕಮಂಡಲಮ್[4,5] ||೧೨೮||

ದುಃಖವೆಂಬ ನರಕವೂ ಕಶ್ಮಲಂ = ಕಶ್ಮಲವೆಂಬ ನರಕವೂ ಶಮಲಂ = ಶಮಲವೆಂಬ ನರಕವೂ ಮಲಂ = ಮಲವೆಂಬ ನರಕವೂ ಹಾಲಾಹಲಃ = ಹಾಲಾಹಲವೆಂಬ ನರಕವೂ ವಿರೂಪಶ್ಚ = ವಿರೂಪವೆಂಬ ನರಕವೂ ಸುರೂಪಶ್ಚ = ಸುರೂಪವೆಂಬ ನರಕವೂ ತಮೋಽನುಗಃ = ಕತ್ತಲೆ ಯಿಂದೊಡಗೂಡಿದಾಗಿ ತಮೋಽನುಗವೆಂಬ ನರಕವೂ. ||೧೨೫||

ಏಕಪಾದಃ = ಏಕಪಾದವೆಂಬ ನರಕವೂ ತ್ರಿಪಾದಶ್ಚ = ತ್ರಿಪಾದ ನರಕವೂ ತೀವ್ರಶ್ಚ = ತೀವ್ರನರಕವೂ ಅಂತಿಮಃ = ಕಟ್ಟಕಡೆಯದು ಅವೀಚಿಃ = ಅವೀಚಿಯೆಂಬ ನರಕವು. ಆ ನರಕಸಮುದ್ರವು ತೆರೆಗಳಿಲ್ಲದೆ ಮಡುಗಟ್ಟಿ ಇಹುದಾಗಿ ಆ ಹೆಸರಾಯಿತ್ತು. ||೧೨೬||

ಅಷ್ಟಾವಿಂಶತಿಃ = ಇಪ್ಪತ್ತೆಂಟು ಕೋಟೀನಾಂ = ಕೋಟಿನರಕಂಗಳಿಗೆ ಏತೇ = ಈ ನರಕಂಗಳು ಕ್ರಮಶಃ = ತಱುವಾಯಿಂದ ಇತಿ = ಈ ಪ್ರಕಾರದಲ್ಲಿ ಪಂಚಕಾಃ = ವಿಸ್ತರವಹಂಥಾವೆಂದು ಸ್ಮೃತಾಃ = ಹೇಳಲುಪಟ್ಟವು. ಪಚಿ ವಿಸ್ತಾರೇ ಎಂಬ ಧಾತುವಿನಲ್ಲಿ ಪಂಚಕವೆಂಬ ಶಬ್ದ ಹುಟ್ಟಿತ್ತು. ಆನುಪೂರ್ವ್ಯೇಣ = ಅನುಕ್ರಮದಿಂದ ಪಂಚಪಂಚೈವ = ಐದೈದೇ ನಾಯಕಾಃ = ಮುಖ್ಯನರಕಂಗಳು. ||೧೨೭||

ರೌರವಾದ್ಯಂ = ರೌರವ ಮೊದಲಹಂಥಾ ಅವೀಚ್ಯಂತಂ = ಅವೀಚಿಕಡೆಯಹಂಥಾ ಏಕಶತಂ = ಒಂದು ಶತಕವು ಚತ್ವಾರಿಂಶತ್ = ನಾಲ್ವತ್ತು ಮಹಾನರಕಮಡಲಂ = ಮಹಾನರಕ ಸಮೂಹವು ಸರ್ವತಃ = ಎಲ್ಲಾ ಶಾಸ್ತ್ರಂಗಳಲ್ಲಿಯೂ ಸಮಧಿಕಂ = ವಿಶೇಷವೆಂದು ಹೇಳಲ್ಪಟ್ಟಿತ್ತು. [5]ನರಕನಾಮಗಳಲ್ಲಿ ಗೂಢಪದಕ್ಕೆ ನಿರ್ವಚನವು ಹೇಳಲ್ಪಟ್ಟಿತ್ತು. ಮಿಕ್ಕಿದವಕ್ಕೆ ಯೋಚಿಸಿಕೊಂಬುದು. ||೧೨೮||

---

[1] ಯಂತ್ರಕಂ (ಘ) [2] ಮನುಪೂರ್ವೇಣ (ಘ)

[3] ನರಕಾಣಾಂ ಶತಂಸ್ಮೃತಂ (ಘ)

[4] ಚತ್ವಾರಿಂಶಚ್ಛತಂ ಪ್ರೋಕ್ತಂ ಮಹಾನಾರಕಮಂಡಲಂ (ಘ) [5] (ಕ) ಲುಪ್ತಭಾಗ

[1]ಏಷು[1]ಪಾಪಾಃ ಪ್ರಪಚ್ಯಂತೇ ನರಾಃ ಕರ್ಮಾನು[2]ರೂಪತಃ[2]
ಯಾತನಾಭಿರ್ವಿಚಿತ್ರಾಭಿರಾಕರ್ಮಪ್ರಕ್ಷಯಾತ್ ಭೃಶಮ್ ||೧೨೯||

[3]ಆ[3]ಮಲಪ್ರಕ್ಷಯಾದ್ಯದ್ವದಗ್ನೌ ಧಾಮ್ಯಂತಿ ಧಾತವಃ
ಆಪಾಪಸಂಕ್ಷಯಾತ್ತದ್ವತ್ಪಚ್ಯಂತೇ ನರಕಾಗ್ನಿಷು ||೧೩೦||

ಸುಗಾಢಂ ಹಸ್ತಯೋರ್ಬಧ್ವಾ ತಪ್ತಶೃಂಖಲಯಾ ನರಾಃ
ಮಹಾವೃಕ್ಷಾಗ್ರಶಾಖಾಸು ಲಂಬ್ಯಂತೇ ಯಮಕಿಂಕರೈಃ ||೧೩೧||

ತತಸ್ತೇ ಸರ್ವಯತ್ನೇನ ಕ್ಷಿಪ್ತಾ [4]ಡೋಲ್ಯಂತಿ[4] ಕಿಂಕರೈಃ
[5]ಡೋಲಿತಾ[5]ಶ್ಚಾತಿವೇಗೇನ [6]ನಿಸ್ಸಂಜ್ಞಾ[6] ಯಾಂತಿ ಯೋಜನಮ್ ||

ಏಷು = ಈ ನರಕಂಗಳಲ್ಲಿ ಪಾಪಾಃ = ಪಾಪವಮಾಡಿದಂಥಾ ನರಾಃ = ಮನುಷ್ಯರುಗಳು ಕರ್ಮಾನುರೂಪತಃ = ಕರ್ಮಾನುಸಾರದಿಂದ ಆಕರ್ಮ-ಪ್ರಕ್ಷಯಾತ್ = ಕರ್ಮಕ್ಷಯವಹಲ್ಲಿ ಪರ್ಯಂತವು ವಿಚಿತ್ರಾಭಿಃ = ವಿಚಿತ್ರವಹಂಥಾ ಯಾತನಾಭಿಃ = ಯಾತನೆಗಳಿಂದ ಭೃಶಂ = ಅತ್ಯಂತ ಪ್ರಪಚ್ಯಂತೇ = ಬೇಯುತ್ತಿಹರು. ||೧೨೯||

ಧಾತವಃ = ಮಣಿಶಿಲೆ ಮೊದಲಾದ ಧಾತುಗಳು ಆಮಲಪ್ರಕ್ಷಯಾತ್ = ಕಲ್ಮಷಹೋಹಲ್ಲಿ ಪರ್ಯಂತವು ಅಗ್ನೌ = ಅಗ್ನಿಯಲ್ಲಿ ಯದ್ವತ್ = ಎಹಗೆ ಧಾಮ್ಯಂತಿ = ಊದಿಸಿಕೊಳ್ಳಲು ಪಡುತ್ತಿಹವು ತದ್ವತ್ = ಹಾಂಗೆ ಆಪಾಪಸಂಕ್ಷಯಾತ್ = ಪಾಪಕ್ಷಯುವಹಲ್ಲಿ ಪರ್ಯಂತವು ನರಕಾಗ್ನಿಷು = ನರಕಾಗ್ನಿಗಳಲ್ಲಿ ಪಚ್ಯಂತೇ = ಬೇಯುತ್ತಿಹರು. ||೧೩೦||

ಹಸ್ತಯೋಃ = ಎರಡು ಕೈಗಳ ತಪ್ತಶೃಂಖಲಯಾ = ಕಾಸಿದ ಸಂಕಲೆಯಿಂದ ಸುಗಾಢಂ = ಅತಿ ಬಲಿಷ್ಠವಾಗಿ ಬಧ್ವಾ = ಬಂಧಿಸಿ ಮಹಾವೃಕ್ಷಾಗ್ರಶಾಖಾಸು = ದೊಡ್ಡಿಯ ಮರನ ತುದಿಗೊಂಬುಗಳಲ್ಲಿ ನರಾಃ = ಮನುಷ್ಯರುಗಳು ಯಮಕಿಂಕರೈಃ ಯಮದೂತರುಗಳಿಂದ ಲಂಬ್ಯಂತೇ = ನೇಱಿಸಿಕೊಳಲುಪಡುತ್ತಿಹರು. ||೧೩೧||

ತತಃ = ಅಷ್ಟರಮೇಲೆ ಕ್ಷಿಪ್ತಾಃ = ನೇಲುತ್ತಿದ್ದಂಥಾ ತೇ = ಆ ನರರುಗಳು ಸರ್ವಯತ್ನೇನ = ಸರ್ವಪ್ರಯತ್ನದಿಂದವೂ ಕಿಂಕರೈಃ = ಯಮದೂತರುಗಳಿಂದ ಡೋಲ್ಯಂತಿ = ತೂಗಿಸಿಕೊಳುತ್ತಿಹೆರು. ಅತಿವೇಗೇನ = ಅತಿವೇಗದಿಂದ ಡೋಲಿತಾಃ

---

[1] ಯೇಷು (ಕ) [2] ಸಾರತಃ (ಕ) ಮೂಲಪಾಠಮಾತ್ರ. [3] ಸ್ವ (ಘ).
[4] ದೋಲ್ಯಂತಿ (ಘ) [5] ಧೋಲಂತ (ಘ) [6] ವಿಸಂಜ್ಞಾ (ಘ).

ಅಂತರಿಕ್ಷಸ್ಥಿತಾನಾಂ ಚ ಲೋಹಭಾರಶತಂ ತತಃ
ಪಾದಯೋರ್ಬಧ್ಯತೇ ತೇಷಾಂ ಯಮದೂತೈರ್ಮಹಾಬಲೈಃ ||೧೩೩||

ತೇನ ಭಾರೇಣ ಮಹತಾ ಭೃಶಂ ಸಂಪೀಡಿತಾ ನರಾಃ
ಧ್ಯಾಯಂತಃ ಸ್ವಾನಿ ಕರ್ಮಾಣಿ ತೂಷ್ಣೀಂ ತಿಷ್ಠಂತಿ ನಿಶ್ಚಲಾಃ ||೧೩೪||

[1]ತತಃ *ಕಶೈ[1]ರಗ್ನಿವರ್ಣೈರ್ಲೋಹದಂಡೈಸ್ಸಕಂಟಕೈಃ
ಹನ್ಯಂತೇ ಕಿಂಕರೈರ್ಘೋರೈಃ ಸಮಂತಾತ್ಪಾಪಕಾರಿಣಃ ||೧೩೫||

ತತಃ ಕ್ಷಾರೇಣ ದೀಪ್ತೇನ [2]ವಹ್ನೇರಪಿ[2] ವಿಶೇಷತಃ
ಸಮಂತತಃ ಪ್ರಲಿಪ್ಯಂತೇ ತಾಮ್ರೇಣ ಚ ಪುನಃ ಪುನಃ
ದ್ರುತೇನಾತ್ಯಂತಲಿಪ್ತೇನ ಕ್ಷತಾಂಗಾ ಜರ್ಝರೀಕೃತಾಃ ||೧೩೬||

= ತೂಗಿಸಿಕೊಳಲುಪಟ್ಟಂಥಾ ನಿಸ್ಸಂಜ್ಞಾಃ = ಚೈತನ್ಯಮಾತ್ರವಿಲ್ಲದವರುಗಳಾಗಿ ಯೋಜನಂ = ಗಾವುದವನು ಯಾಂತಿ = ಎಯ್ದುತ್ತಿಹರು. ||೧೩೨||

ತತಃ = ಅನಂತರದಲ್ಲಿ ಅಂತರಿಕ್ಷಸ್ಥಿತಾನಾಂ = ಗಗನದಲ್ಲಿಯಿದ್ದಂಥಾ ತೇಷಾಂ = ಆ ನರರುಗಳ ಪಾದಯೋಃ = ಕಾಲುಗಳಲ್ಲಿ ಮಹಾಬಲೈಃ = ಸತ್ವಾಧಿಕರಹಂಥಾ ಯಮದೂತೈಃ = ಯಮದೂತರುಗಳಿಂದ ಲೋಹಭಾರಶತಂ ಚ = ಲೋಹದ ನೂರು ಭಾರ ತೂಕದ ಗುಂಡು ಬಧ್ಯತೇ = ಕಟ್ಟಲುಪಡುತ್ತಿಹುದು. ||೧೩೩||

ಮಹತಾ = ದೊಡ್ಡಿತ್ತಹಂಥಾ ತೇನ ಭಾರೇಣ = ಆ ಲೋಹದ ಗುಂಡಿನ ಭಾರದಿಂದ ಭೃಶಂ = ಅತ್ಯಂತ ಸಂಪೀಡಿತಾಃ = ದುಃಖಿತರಹಂಥಾ ನರಾಃ = ಮನುಷ್ಯರುಗಳು ಸ್ವಾನಿ ಕರ್ಮಾಣಿ = ತಮ್ಮ ಸಂಬಂಧವಹಂಥಾ ಕರ್ಮಂಗಳನು ಧ್ಯಾಯಂತಃ = ಧ್ಯಾನಿಸುತ್ತಿಹಂಥಾ ನಿಶ್ಚಲಾಃ = ಚಲನೆಮಾತ್ರವಿಲ್ಲದವರುಗಳಾಗಿ ತೂಷ್ಣೀಂ = ಸುಮ್ಮನೆ ತಿಷ್ಠಂತಿ = ಇರುತ್ತಿಹರು. ||೧೩೪||

ತತಃ = ಅಷ್ಟರಮೇಲೆ ಕಶೈಃ = ಚಮ್ಮಟಿಗೆಗಳಿಂದ ಅಗ್ನಿವರ್ಣೈಃ = ಅಗ್ನಿಯೋಪಾದಿ ವರ್ಣವನುಳ್ಳಂಥಾ ಸಕಂಟಕೈಃ = ಮೊಳೆಗಳಿಂದ ಸಹಿತವಹಂಥಾ ಲೋಹದಂಡೈಃ = ಕಬ್ಬಿನದ ಡಾಣೆಗಳಿಂದ ಪಾಪಕಾರಿಣಃ = ಪಾಪವ ಮಾಡಿದವರುಗಳು ಘೋರೈಃ = ಭಯಂಕರವಹಂಥಾ ಕಿಂಕರೈಃ = ಯಮದೂತರುಗಳಿಂದ ಸಮಂತಾತ್ = ಎಲ್ಲಾ ಕಡೆಯಲೂ ಹನ್ಯಂತೇ = ಹೊಯಿಸಿಕೊಳ್ಳುತ್ತಿಹರು. ||೧೩೫||

ತತಃ = ಅನಂತರದಲ್ಲಿ ಕ್ಷತಾಂಗಾಃ = ಘಾಯವಾದ ಅವಯವಂಗಳನುಳ್ಳಂಥಾ

---

1 ತತೋಂಕುಶೈ (ಘ) 2 ವಹ್ನಿನಾಪಿ (ಘ) * 'ಕಶಾ' ಶಬ್ದವು ಸ್ತ್ರೀಲಿಂಗವಾದ್ದರಿಂದ ಅಂಕುಶೈಃ ಎಂಬ ಪಾಠವೇ ಯುಕ್ತವಾಗಿ ತೋರುತ್ತದೆ.

ಪುನರ್ವಿದಾರ್ಯ ಚಾಂಗಾನಿ ಶಿರಸಃ ಪ್ರಭೃತಿ ಕ್ರಮಾತ್
ವೃಂತಾಕವತ್ಪ್ರ[1]ಪಚ್ಯಂತೇ[1] ತಪ್ತತೈಲಕಟಾಹಕೈಃ ||೧೩೭||

ವಿಷ್ಠಾಪೂರ್ಣೇ ತತಃ ಕೂಪೇ ಕೃಮೀಣಾಂ ನಿಚಯೇ ಪುನಃ
ಮೇದೋಽಸೃಕ್ಪೂಯಪೂರ್ಣಾಯಾಂ ವಾಪ್ಯಾಂ ಕ್ಷಿಪ್ಯಂತಿ ತೇ ಪುನಃ||

ಭಕ್ಷ್ಯಂತೇ ಕೃಮಿಭಿಸ್ತೀಕ್ಷ್ಣೈಃ ಲೋಹತುಂಡೈಶ್ಚ ವಾಯಸೈಃ
ಶ್ವಭಿರ್ದಂಶೈರ್ವೃಕೈರುಗ್ರೈರ್ವ್ಯಾಘ್ರೈಶ್ಚ ವಿಕೃತಾನನೈಃ ||೧೩೯||

ಪಾಪಕರ್ಮಿಗಳು ವಹ್ನೇರಪಿ = ಅಗ್ನಿಯ ದೆಸೆಯಿಂದ ವಿಶೇಷತಃ = ಅತ್ಯಂತವಾಗಿ ದೀಪ್ತೇನ = ಕಾಸಿದಂಥಾ ಕ್ಷಾರೇಣ = ಉಪ್ಪಿನಿಂದ ಸಮಂತತಃ = ಎಲ್ಲಾ ಕಡೆಯಲೂ ಪ್ರಲಿಪ್ಯಂತೇ = ಲೇಪನವ ಮಾಡಿಸಿಕೊಳ್ಳುತ್ತಿಹರು. ದ್ರುತೇನ = ಕರಗಿದಂಥಾ ಅತ್ಯಂತಲಿಪ್ತೇನ = ಅತ್ಯಂತ ಲೇಪಿಸಲುಪಟ್ಟಂಥಾ ತಾಮ್ರೇಣ ಚ = ತಾಮ್ರದಿಂದವೂ ಪುನಃ ಪುನಃ = ಅಡಿಗಡಿಗೆ ಜರ್ಝರೀಕೃತಾಃ = ಜರ್ಝರಿತವಾಗಿ ಮಾಡಲುಪಟ್ಟವರುಗಳಾಗಿ ಮಾಡುತ್ತಿಹರು. (ದ್ರುತಶಬ್ದವು [2]ಕರಗುವಿಕೆಯಲ್ಲಿ[2] ವರ್ತಿಸೂದು.) ||೧೩೬||

ಪುನಃ = ಮರಳಿ ಶಿರಸಃ ಪ್ರಭೃತಿ = ಶಿರಸ್ಸು ಮೊದಲಾಗಿ ಅಂಗಾನಿ = ಅವಯವಂಗಳನು ಕ್ರಮಾತ್ = ತಲುವಾಯಿಂದ ವಿದಾರ್ಯ = ಕಡಿದು ತಪ್ತತೈಲಕಟಾಹಕೈಃ = ಕಾದ ಎಣ್ಣೆಯ ಕೊಪ್ಪರಿಗೆಗಳಿಂದ ವೃಂತಾಕವತ್ = [3]ಬದನೆಯ[3] ಕಾಯ ಮರ್ಯಾದೆಯಲ್ಲಿ ಪ್ರಪಚ್ಯಂತೇ = ಬೇಯಿಸಿಕೊಳುತ್ತಿಹರು. ||೧೩೭||

ತತಃ = ಅನಂತರದಲ್ಲಿ ತೇ = ಆ ಪ್ರಾಣಿಗಳು ಕೃಮೀಣಾಂ = ಕ್ರಿಮಿಗಳ ನಿಚಯೇ = ಮೊತ್ತವನುಳ್ಳಂಥಾ ವಿಷ್ಠಾಪೂರ್ಣೇ = ಮಲದಿಂದ ತುಂಬಿದಂಥಾ ಕೂಪೇ = ಬಾವಿಯಲ್ಲಿ ಕ್ಷಿಪ್ಯಂತಿ = ಹಾಯಿಕಿಸಿಕೊಂಬರು. ಮೇದೋಽಸೃಕ್ಪೂಯಪೂರ್ಣಾಯಾಂ = ನೆಣ ನೆತ್ತರು ಕೀಟಕಗಳಿಂದ ತುಂಬಿದಂಥಾ ವಾಪ್ಯಾಂ = ಬಾವಿಯಲ್ಲಿ ಪುನಃ ಪುನಃ = ಮರಳಿ ಮರಳಿ ಕ್ಷಿಪ್ಯಂತಿ = ಹಾಯಿಕಿಸಿಕೊಂಬರು. ||೧೩೮||

ತೀಕ್ಷ್ಣೈಃ = ಉಗ್ರವಹೆಂಥಾ ಕ್ರಿಮಿಭಿಃ = ಕ್ರಿಮಿಗಳಿಂದ ಲೋಹತುಂಡೈಃ = ಕಬ್ಬಿನದೋಪಾದಿಯ ಚಂಚುಪುಟವನುಳ್ಳಂಥಾ ವಾಯಸೈಶ್ಚ = ಕಾಗೆಗಳಿಂದವೂ ಶ್ವಭಿಃ = ನಾಯಿಗಳಿಂದವೂ ದಂಶೈಃ = ಕಾಡುನೊಣಗಳಿಂದವೂ ವಿಕೃತಾನನೈಃ = ಭಯಂಕರವಹೆ ಮುಖವನುಳ್ಳಂಥಾ ವ್ಯಾಘ್ರೈಶ್ಚ = ಹುಲಿಗಳಿಂದವೂ ಉಗ್ರೈಃ = ಉಗ್ರವಹೆಂಥಾ ವೃಕೈಃ = ತೋಳಗಳಿಂದವೂ ಭಕ್ಷ್ಯಂತೇ = ಹೆಚ್ಚು ತಿನಿಸಿಕೊಳುತ್ತಿಹರು. ||೧೩೯||

[1] ತಪ್ಯಂತೇ (ಕ) ಮೂಲಮಾತ್ರ [2] ಕರಗಿದಲ್ಲಿ (ವ್ಯಾಖ್ಯಾ). [3] ಬದನೆಯ (ಕ).

ಪಚ್ಯಂತೇ ಮತ್ಸ್ಯವಚ್ಚಾ[1]ಪಿ[1] ಪ್ರದೀಪ್ತಾಂಗಾರರಾಶಿಷು
ಪ್ರೋತಾಸ್ತೀಕ್ಷ್ಣೇಷು ಶೂಲೇಷು ನರಾಃ ಪಾಪೇನ ಕರ್ಮಣಾ ||೧೪೦||

[2]ತೈಲಪೀಡೈರಥಾ[2]ಕ್ರಮ್ಯ ಘೋರೈಃ ಕರ್ಮಭಿರಾತ್ಮಜೈಃ
ತಿಲವತ್ಸಂಪ್ರಪೀಡ್ಯಂತೇ ಚಕ್ರಾಖ್ಯೇ ನರಕೇ ನರಾಃ ||೧೪೧||

[3]ಪಚ್ಯಂತೇ ಚಾತಿ[3] ತಪ್ತೇಷು ಲೋಹಭಾಂಡೇಷ್ವನೇಕಧಾ
ತೈಲಪೂರ್ಣಕಟಾಹೇಷು ಸುತಪ್ತೇಷು ಪುನಃ ಪುನಃ ||೧೪೨||

ಸರ್ವೇಂದ್ರಿಯಾಣಾಮಪ್ಯೇವಂ ಕ್ರಮಾತ್ ಪಾಪೇನ ಯಾತನಾಃ
ಭವಂತಿ ಘೋರಾಃ ಪ್ರತ್ಯೇಕಂ ಶರೀರೇ ತತ್ಕೃತೇನ ಚ ||೧೪೩||

ಅಪಿಚ = ಮತ್ತೂ ನರಾಃ = ನರರುಗಳು ಪಾಪೇನ ಕರ್ಮಣಾ = ಪಾಪಕರ್ಮದಿಂದ ಪ್ರದೀಪ್ತಾಂಗಾರರಾಶಿಷು = ಉರಿವುತ್ತಿದ್ದ ಕೆಂಡದ ರಾಶಿಗಳಲ್ಲಿ ಮತ್ಸ್ಯವತ್ = ಮೀನಿನೋಪಾದಿಯಲ್ಲಿ ಪಚ್ಯಂತೇ = ಬೇವುತ್ತಿಹರು. ತೀಕ್ಷ್ಣೇಷು = ಬಸಿ [ಮಸೆ]ದಂಥಾ ಶೂಲೇಷು = ಶೂಲಂಗಳಲ್ಲಿ ಪ್ರೋತಾಃ = ಸೆಳೆಸಿಕೊಳುತ್ತಿಹರು ||೧೪೦||

ಅಥ = ಅನಂತರದಲ್ಲಿ ನರಾಃ = ಮನುಷ್ಯರುಗಳು ಆತ್ಮಜೈಃ = ತಮ್ಮಿಂದಲಾದಂಥಾ ಕರ್ಮಭಿಃ = ಪಾಪಂಗಳಿಂದ ಚಕ್ರಾಖ್ಯೇ ನರಕೇ = ಚಕ್ರವೆಂಬ ಹೆಸರನುಳ್ಳ ನರಕದಲ್ಲಿ ಘೋರೈಃ = ಭಯಂಕರವಹಂಥಾ ತೈಲಪೀಡೈಃ = ಗಾಣಗಳಿಂದ ಆಕ್ರಮ್ಯ = ಹಾಯಿಕಿಸಿಕೊಂಡು ತಿಲವತ್ = ಎಳ್ಳಿನೋಪಾದಿ ಪ್ರಪೀಡ್ಯಂತೇ = ತಿರಿಹಿಸಿಕೊಳುತ್ತಿಹರು. ಗಾಣವಾಡಿಸಿಕೊಂಬರೆಂಬುದರ್ಥ ||೧೪೧||

ಅತಿತಪ್ತೇಷು = ಅತ್ಯಂತ ಕಾದಂಥಾ ಲೋಹಭಾಂಡೇಷು = ಕಬ್ಬುನದ ಹರವಿಗಳಲ್ಲಿ ಅನೇಕಧಾ = ಹಲವು ಬಾರಿ ಪಚ್ಯಂತೇ = ಬೇವುತ್ತಿಹರು. ಸುತಪ್ತೇಷು = ಅತ್ಯಂತ ಕಾದಂಥಾ ತೈಲಪೂರ್ಣಕಟಾಹೇಷು = ಎಣ್ಣೆ ತುಂಬಿದಂಥಾ ಕೊಪ್ಪರಿಗೆಗಳಲ್ಲಿ ಪುನಃ ಪುನಃ = ಅಡಿಗಡಿಗೆ ಪಚ್ಯಂತೇ ಚ = ಬೇವುತ್ತಿಹರು. ||೧೪೨||

ತತ್ಕೃತೇನ = ಅವರುಗಳು ಮಾಡಿದಂಥಾ ಪಾಪೇನ ಚ = ಪಾಪದಿಂದವೂ ಏವಂ = ಈ ಪ್ರಕಾರದಲ್ಲಿ ಶರೀರೇ = ಶರೀರದಲ್ಲಿಯ ಸರ್ವೇಂದ್ರಿಯಾಣಾಮಪಿ = ಸಮಸ್ತ ಅವಯವಂಗಳಿಗೆಯೂ ಪ್ರತ್ಯೇಕಂ = ಬೇಱೆ ಬೇಱೆ ಘೋರಾಃ = ಭಯಂಕರವಹಂಥಾ ಯಾತನಾಃ = ಬಾಧೆಗಳು ಕ್ರಮಾತ್ = ತಱುವಾಯಿಂದ ಭವಂತಿ = ಆಗುತ್ತಿಹವು. ||೧೪೩||

---

1 ತಿ (ಘ) 2 ತೈಲಪಿಂಡೈಸ್ತಥಾ (ಕ) ಮೂಲ ಮತ್ತು ವ್ಯಾಖ್ಯಾಪಾಠ. ತಿಲಪಿಂಡೈರಿವಾ (ಘ) 3 ಪ್ರಪಚ್ಯಂತ್ಯೇತಿ (ಕ) ಮೂಲಮಾತ್ರ.

ಯೇ ಶೃಣ್ವಂತಿ ಗುರೋರ್ನಿಂದಾಂ ತೇಷಾಂ [1]ಕರ್ಣೇ *ಪ್ರಪೂರ್ಯತೇ‡
ಅಗ್ನಿವರ್ಣೈರಯಃಕೀಲೈ[2]ಸ್ತಪ್ತತಾ[2]ಮ್ರಾದಿಭಿರ್ದ್ರುತೈಃ ||೧೪೩||

ತ್ರಪುಸೀಸಾರಕೂಟಾದ್ಯೈಃ ಕ್ಷಾರೇಣ ಚ ಪುನಃ ಪುನಃ
ಸುತಪ್ತತೀಕ್ಷ್ಣತೈಲೇನ ವಜ್ರಲೇಪೇನ [3]ಚಾಂತತಃ[3] ||೧೪೪||

ಕ್ರಮಾದಾಪೂರ್ಯತೇ [4]ಕರ್ಣೇ[4] §ನರಕೇಷು ಚ ಯಾತನಾಃ
ಅನುಕ್ರಮೇಣ ಸರ್ವೇಷು ಭವಂತ್ಯೇತೇಷು ಯಾತನಾಃ ||೧೪೫||

ಪರದಾರಾಂಶ್ಚ ಪಶ್ಯಂತಿ ಲುಬ್ಧಾಃ ಸ್ನಿಗ್ಧೇನ ಚಕ್ಷುಷಾ
ಗುರೋಃ ಕುರ್ವಂತಿ ಭ್ರುಕುಟಿಂ ಕ್ರೂರನೇತ್ರಾಶ್ಚ ಯೇ ನರಾಃ ||

ಯೇ = ಆರು ಕೆಲಬರು ಗುರೋಃ = ಶ್ರೀಗುರುವಿನ ನಿಂದಾಂ = ನಿಂದೆಯನು ಶೃಣ್ವಂತಿ = ಕೇಳುತ್ತಿಹರು ತೇಷಾಂ = ಅವರುಗಳ ಕರ್ಣೇ = ಕಿವಿಯಲ್ಲಿ ಅಗ್ನಿವರ್ಣೈಃ = ಅಗ್ನಿಯೋಪಾದಿವರ್ಣವನುಳ್ಳಂಥಾ ಅಯಃಕೀಲೈಃ = ಕಬ್ಬುನದ ಮೊಳೆಗಳಿಂದ ಪ್ರಪೂರ್ಯತೇ = ಹೆಟ್ಟಲುಪಡುತ್ತಿಹುದು. ತಪ್ತ-ತಾಮ್ರಾದಿಭಿಃ = ಕಾಸಿದ ತಾಮ್ರ ಮೊದಲಾದಂಥಾ ದ್ರುತೈಃ = ಕರಗಿದ ರಸಂಗಳಿಂದ ಪ್ರಪೂರ್ಯತೇ = ಎಱೆಯಲ್ಪಡುತ್ತಿಹುದು. ||೧೪೪||

ತ್ರಪುಸೀಸಾರಕೂಟಾದ್ಯೈಃ = ತವರ ಸೀಸ ಹಿತ್ತಾಳೆ ಸುಣ್ಣ ಮೊದಲಾದಂಥಾ ರಸಂಗಳಿಂದ ಕ್ಷಾರೇಣ ಚ = ಉಪ್ಪಿನ ರಸದಿಂದವೂ ವಜ್ರಲೇಪೇನ = ವಜ್ರಲೇಪವಾದಂಥಾ ಸುತಪ್ತತೀಕ್ಷ್ಣತೈಲೇನ ಚ = ಅತ್ಯಂತ ಕಾದುಕ್ಕುವೆಣ್ಣೆಯಿಂದ ಪುನಃ ಪುನಃ = ಅಡಿಗಡಿಗೆ ಅಂತತಃ = †ಕಿವಿಯೊಳಗೆ (ಈ ಶ್ಲೋಕ ಕುಳಕವು.)

ಕ್ರಮಾತ್ = ತರುವಾಯಿಂದ ಕರ್ಣೇ = ಕಿವಿಯಲ್ಲಿ [5]ಆಪೂರ್ಯತೇ = ಎಱೆಯಲುಪಡುತ್ತಿಹುದು. ಸರ್ವೇಷು ನರಕೇಷು ಚ = ಸಮಸ್ತ ನರಕಂಗಳಲ್ಲಿಯೂ ಯಾತನಾಃ = ಯಾತನೆಗಳುಂಟು. ಏತೇಷು = ಈ ತಾಮ್ರಾದಿ ರಸಂಗಳಲ್ಲಿ ಯಾತನಾಃ = ಯಾತನೆಗಳು ಅನುಕ್ರಮೇಣ = ತಱುವಾಯಿಂದ ಭವಂತಿ = ಆಗುತ್ತಿಹವು. ||೧೪೫||

ಯೇ ನರಾಃ = ಆರು ಕೆಲಬರು ಮನುಷ್ಯರುಗಳು ಪರದಾರಾಂಶ್ಚ = ಪರ

---

[1] ಕರ್ಣಃ (ಘ) * ಇದು ಕುಳಕವಲ್ಲ, ಯುಗ್ಮಕವು. [2] ಸ್ತಪ್ತೈಸ್ತಾ (ಗ)
[3] ವಾ ಪುನಃ (ಕ) ಮೂಲ ಮತ್ತು (ಘ) [4] ಕರ್ಣೋಃ (ಗ) [5] (ಕ) ಲುಪ್ತಭಾಗ
‡ ಕರ್ಣಃ ಪ್ರಪೂರ್ಯತೇ ಎಂಬ ಪಾಠವೇ ಸೂಕ್ತವಾದುದು § ಹಿಂದಿನ ಶ್ಲೋಕಗಳಲ್ಲಿ ಹೇಳಿದ ಕರಣಗಳಿಗೆ ಇದು ಕರ್ತೃ ಪದ. ಕರ್ಣಃ ಎನ್ನುವುದು ಸೂಕ್ತ. † ಕಿವಿಯೊಳಗೆ ಅನ್ನುವ ಬದಲು ಕೊನೆಯೊಳಗೆ ಎಂಬರ್ಥ ಯೋಗ್ಯ.

ಸೂಚೀಭಿರಗ್ನಿವರ್ಣಾಭಿಸ್ತೇಷಾಂ ನೇತ್ರಂ ಪ್ರಪೂರ್ಯತೇ
ಕ್ಷಾರಾದ್ಯೈಶ್ಚ ಕ್ರಮಾತ್ [1]ಸರ್ವೈರ್ದೇಹಸ್ಸರ್ವಾಶ್ಚ[1] ಯಾತನಾಃ ||

ಸ್ಪರ್ಶಲೋಭೇನ ಯೇ ಮೂಢಾಃ ಸಂಸ್ಪೃಶಂತಿ ಪರಸ್ತ್ರಿಯಮ್
ತೇಷಾಂ ತಪ್ತಾಗ್ನಿವರ್ಣಾಭಿಃ ಸೂಚಿಭಿಃ ಪೂರ್ಯತೇ ವಪುಃ ||೧೪೯||

ತತಃ ಕ್ಷಾರಾದಿಭಿಸ್ಸರ್ವೈಃ ಶರೀರಮನುಲಿಪ್ಯತೇ
ಯಾತನಾಶ್ಚ ಮಹಾಕಷ್ಟಾಃ ಸರ್ವೇಷು ನರಕೇಷು ಚ ||೧೫೦||

ಸ್ತ್ರೀಯರುಗಳನು ಲುಬ್ಧಾಃ = ಎಚ್ಚಿಕವುಳ್ಳವರುಗಳಾಗಿ ಸ್ನಿಗ್ಧೇನ = ಒಪ್ಪಿತ್ತಿದ್ದಂಥಾ ಚಕ್ಷುಷಾ = ದೃಷ್ಟಿಯಿಂದ ಪಶ್ಯಂತಿ = ನೋಡುತ್ತಿದ್ದಾರು. ಗುರೋಃ = ಶ್ರೀಗುರುವಿಂಗೆ ಕ್ರೂರನೇತ್ರಾಶ್ಚ = ಕ್ರೂರವಹ ಕಣ್ಣನುಳ್ಳವರುಗಳಾಗಿ ಭ್ರುಕುಟಿಂ = ಹುಬ್ಬುಗಂಟಿಕ್ಕುಹವನು ಕುರ್ವಂತಿ = ಮಾಡುತ್ತಿಹರು. ||೧೪೭||

ತೇಷಾಂ = ಅವರುಗಳ ನೇತ್ರಂ = ಕಣ್ಣು ಅಗ್ನಿವರ್ಣಾಭಿಃ = ಅಗ್ನಿಯ ಸಮಾನವಾದ ವರ್ಣವನುಳ್ಳಂಥ ಸೂಚೀಭಿಃ = ಸೂಜಿಗಳಿಂದ ಪ್ರಪೂರ್ಯತೇ = ಚುಚ್ಚಲುಪಡುತ್ತಿಹುದು. [2]ಕ್ಷಾರಾದ್ಯೈಃ = ಉಪ್ಪು ಮೊದಲಾದಂಥಾ ಸರ್ವೈಶ್ಚ = ತಾಮ್ರಾದಿ ರಸಂಗಳಿಂದಲೂ ದೇಹಃ = ದೇಹವು ಸರ್ವಾಃ = ಸಮಸ್ತವಹಂಥಾ ಯಾತನಾಶ್ಚ = ಯಾತನೆಗಳನು ಕ್ರಮಾತ್ = ಕ್ರಮದಿಂದ ಪ್ರಪೂರ್ಯತೇ = ಅನುಭವಿಸಲುಪಡುತ್ತಿಹುದು. ಪ್ರ ಎಂಬ ಉಪಸರ್ಗದಿಂದ ಪೄಪಾಲನ-ಪೂರಣಯೋಃ ಎಂಬ ಧಾತು ಉಚಿತಾರ್ಥವ ನುಡಿವುದು.[2] ||೧೪೮||

ಯೇ ಮೂಢಾಃ = ಆರು ಕೆಲಬರು ಮೂರ್ಖರುಗಳು ಪರಸ್ತ್ರಿಯಂ = ಪರಸ್ತ್ರೀಯನು ಸ್ಪರ್ಶಲೋಭೇನ = ಸೋಂಕುವ ಎಚ್ಚಿಕದಿಂದ ಸಂಸ್ಪೃಶಂತಿ = ಮುಟ್ಟುತ್ತಿಹರು ತೇಷಾಂ = ಅವರುಗಳ ವಪುಃ = ಶರೀರವು ತಪ್ತಾಗ್ನಿ-ವರ್ಣಾಭಿಃ = ಕಾದ ಅಗ್ನಿಯ ವರ್ಣವನುಳ್ಳಂಥಹ ಸೂಚೀಭಿಃ = ಸೂಜಿಗಳಿಂದ ಪೂರ್ಯತೇ = ಚುಚ್ಚಲುವಡುತ್ತಿಹುದು. ||೧೪೯||

ತತಃ = ಅಷ್ಟುಱ ಮೇಲೆ ಕ್ಷಾರಾದಿಭಿಃ = ಕಾದ ಉಪ್ಪು ಮೊದಲಾದಂಥಾ ಸರ್ವೈಃ = ಸಮಸ್ತಂಗಳಿಂದವು ಶರೀರಂ = ಶರೀರವು ಅನುಲಿಪ್ಯತೇ = ಲೇಪಿಸಲುಪಡುತ್ತಿಹುದು. ಸರ್ವೇಷು = ಸಮಸ್ತವಹಂಥಾ ನರಕೇಷು = ನರಕಂಗಳಲ್ಲಿವೂ [ಯೂ] ಮಹಾಕಷ್ಟಾಃ = ಅತಿಕಷ್ಟವಹಂಥಾ ಯಾತನಾಶ್ಚ = ಯಾತನೆಗಳುಂಟು.

---

[1] ಸರ್ವದೇಹೇ ಸರ್ವಾಶ್ಚ (ಕ) ಮೂಲ [2] (ಕ) ಲುಪ್ತ ಭಾಗ

ಪರಿಷ್ವಜಂತಿ ಚಾತ್ಯುಗ್ರಾಂ ಪ್ರದೀಪ್ತಾಂ ಲೋಹಶಾಲ್ಮಲೀಮ್
ಹನ್ಯಂತೇ ಪೃಷ್ಠದೇಶೇ ಚ ಪುನರ್ಭೀಮೈರ್ಮಹಾಬಲೈಃ ||೧೫೧||

ದಂತುರೇಣಾತಿಕುಂಠೇನ ಕ್ರಕಚೇನ ಬಲೀಯಸೈಃ
ಶಿರಃಪ್ರಭೃತಿ ಪಾಟ್ಯಂತೇ ಘೋರೈಃ ಕರ್ಮಭಿರಾತ್ಮಜೈಃ ||೧೫೨||

ತೇನ ತೇನೈವ ರೂಪೇಣ ಹನ್ಯಂತೇ ಪಾರದಾರಿಕಾಃ
[1]ಗಾಢಮಾಲಿಂಗ್ಯ ತೇ ನಾರೀಂ ಜ್ವಲಂತೀಂ ಲೋಹನಿರ್ಮಿತಾಂ[1] ||೧೫೩

[2]ಪೂರ್ವಾಕಾರಂ ಜ್ವಲಂತಂ ತಂ ಪುರುಷಂ ಲೋಹನಿರ್ಮಿತಮ್
ದುಶ್ಚಾರಿಣ್ಯಃ ಸ್ತ್ರಿಯೋ ಗಾಢಮಾಲಿಂಗಂತಿ [3]ವದಂತಿ[3] ಚ[2] ||೧೫೪||

ಅತ್ಯುಗ್ರಾಂ = ಅತ್ಯಂತ ಉಗ್ರವಹಂಥಾ ಪ್ರದೀಪ್ತಾಂ = ಉರಿವುತ್ತಿದ್ದಂಥಾ ಲೋಹಶಾಲ್ಮಲೀಂ = ಲೋಹದ ಎಲವದ ಮರನನು ಪರಿಷ್ವಜಂತಿ = ತಕ್ಕೈಸಿ ಕೊಳ್ಳುತ್ತಿಹರು. ಪುನಃ = ಮರಳಿ ಪೃಷ್ಠದೇಶೇ ಚ = ಹಿಂದಣ ಕಡೆಯಲ್ಲಿಯೂ ಭೀಮೈಃ = ಭಯಂಕರವಹಂಥಾ ಮಹಾಬಲೈಃ = ಅತಿ ಸತ್ವಾಧಿಕರಹಂಥಾ ಯಮದೂತರುಗಳಿಂದ ಹನ್ಯಂತೇ = ನೂಕಿಸಿಕೊಳುತ್ತಿಹರು. ಹನ ಹಿಂಸಾಗತ್ಯೋಃ ಎಂಬ ಧಾತುವಿನಲ್ಲಿ ಹುಟ್ಟಿದ ಪದವು. ||೧೫೧||

ಬಲೀಯಸೈಃ = ಬಲಿಷ್ಠರಹಂಥಾ ದೂತರುಗಳಿಂದ ದಂತುರೇಣ = ಮರ್ಮವನು ಭೇಧಿಸುತ್ತಿದ್ದಂಥಾ ಅತಿಕುಂಠೇನ = ಅತಿಕೂರಿತವಹ ಕಕ್ಕುಗಳನುಳ್ಳಂಥಾ ಕ್ರಕಚೇನ = ಕರಗಸದಿಂದ ಆತ್ಮಜೈಃ = ತಮ್ಮಿಂದಾದಂಥಾ ಘೋರೈಃ = ಉಗ್ರವಹಂಥಾ ಕರ್ಮಭಿಃ = ಕರ್ಮಂಗಳಿಂದ ಶಿರಃಪ್ರಭೃತಿ = ಶಿರಸ್ಸು ಮೊದಲಾಗಿ ಪಾಟ್ಯಂತೇ = ಸೀಳಿಸಿಕೊಳ್ಳುತ್ತಿಹರು. ||೧೫೨||

ಪಾರದಾರಿಕಾಃ = ಪರಸ್ತ್ರೀಗಮನ ಮಾಡಿದಂಥಾ ತೇ = ಅವರುಗಳು ಲೋಹನಿರ್ಮಿತಾಂ = ಲೋಹದಿಂದ ನಿರ್ಮಿಸಲುಪಟ್ಟಂಥಾ ಜ್ವಲಂತೀಂ = ಉರಿವುತ್ತಿದ್ದಂಥಾ ನಾರೀಂ = ಸ್ತ್ರೀಯನು ಗಾಢಂ = ದೃಢವಾಗಿ ತೇನ ತೇನ ರೂಪೇಣೈವ = ಆ ಆ ರೂಪಿನಿಂದವೇ ಆಲಿಂಗ್ಯ = ತಕ್ಕೈಸಿಕೊಂಡು ಹನ್ಯಂತೇ = ಹೊಡಸಿ ಕೊಳ್ಳುತ್ತಿಹರು. ||೧೫೩||

ದುಶ್ಚಾರಿಣ್ಯಃ = ಹಾದರಗಿತ್ತಿಯರಹಂಥಾ ಸ್ತ್ರಿಯಃ = ಸ್ತ್ರೀಯರುಗಳು

---

1 ಗಾಢಮಾಲಿಂಗ್ಯತೇ ನಾರೀ ಜ್ವಲಂತೀ ಲೋಹನಿರ್ಮಿತಾ (ಗ. ಘ)

2 ಪೂರ್ವಾಕಾರಾಶ್ಚ ಪುರುಷಾಃ ಪ್ರಜ್ವಲಂತಿ ಸಮಂತತಃ |
ದುಶ್ಚಾರಿಣೀಂ ಸ್ತ್ರಿಯಂ ಗಾಢಮಾಲಿಂಗಂತಿ ಹಸಂತಿ ಚ ॥ (ಘ) ಪಾಠ.

3 ಹಸಂತಿ (ಕ) ಮೂಲಪಾಠ.

ಕಿಂ ಪ್ರಧಾವಸಿ ವೇಗೇನ ನ ತೇ ಮೋಕ್ಷೋಽಸ್ತಿ ಸಾಂಪ್ರತಮ್
ಲಂಘಿತಸ್ತೇ ಯಥಾ ಭರ್ತಾ ಪಾಪಂ ಭುಂಕ್ಷ್ವ ತಥಾಧುನಾ ||೧೫೫||

ಲೋಹಕುಂಭೇ ವಿನಿಕ್ಷಿಪ್ತಾಃ ಸಾಪಿಧಾನೇ ಶನೈಶ್ಶನೈಃ
ಮೃದ್ವಗ್ನಿನಾ ಪ್ರಪಚ್ಯಂತೇ ಸ್ವಪಾಪೈರೇವ ಮಾನವಾಃ ||೧೫೬||

ಕ್ಷೋದ್ಯಂತ್ಯುಲೂಖಲೈಸ್ಸರ್ವೇ ಪ್ರಪೀಡ್ಯಂತೇ ಶಿಲಾಸು ಚ
ಕ್ಷಿಪ್ಯಂತೇ ಚಾಂಧಕೂಪೇಷು ದಂಶ್ಯಂತೇ ಭ್ರಮರೈರ್ಭೃಶಮ್ ||೧೫೭||

ಕ್ರಿಮಿಭಿರ್ಭಿನ್ನಸರ್ವಾಂಗಾಃ ಶತಶೋ ಜರ್ಝರೀಕೃತಾಃ
ಸುತೀಕ್ಷ್ಣಕ್ಷಾರಕೂಪೇಷು ಕ್ಷಿಪ್ಯಂತೇ ತದನಂತರಮ್ ||೧೫೮||

ಲೋಹನಿರ್ಮಿತಂ = ಲೋಹದಿಂದ ನಿರ್ಮಿಸಲ್ಪಟ್ಟಂಥಾ ಪೂರ್ವಾಕಾರಂ = ಮುನ್ನಿನ ಸ್ವರೂಪವನುಳ್ಳಂಥಾ ಜ್ವಲಂತಂ = ಉರಿವುತ್ತಂವಿದ್ದಂಥಾ ತಂ ಪುರುಷಂ = ಆ ಹಾದರಿಗನಹಂಥಾ ನರನನು ಗಾಢಂ = ಬಿಗಿದು ಆಲಿಂಗಂತಿ = ತಕ್ಕೈಸಿ ಕೊಳುತ್ತಿಹರು ವದಂತಿ ಚ = ನುಡಿವುತ್ತಿಹರು. ||೧೫೪||

ವೇಗೇನ = ವೇಗದಿಂದ ಕಿಂ = ಏನು ಕಾರಣ ಪ್ರಧಾವಸಿ = ಹರಿದಾಡುತ್ತಿದ್ದೆ. ತೇ = ನಿನಗೆ ಮೋಕ್ಷಃ = ಬಿಡುಗಡೆ ಸಾಂಪ್ರತಂ = ಈಗ ನಾಸ್ತಿ = ಇಲ್ಲ ಯಥಾ = ಎಹಗೆ ತೇ = ನಿನ್ನ ಭರ್ತಾ = ಗಂಡನು ಲಂಘಿತಃ = ಮೀರಿಲ್ಪಟ್ಟನು ತಥಾ = ಹಾಂಗೆ ಅಧುನಾ = ಈಗ ಪಾಪಂ = ಪಾಪವನು ಭುಂಕ್ಷ್ವ = ಉಣ್ಣು. ||೧೫೫||

ಸಾಪಿಧಾನೇ = ಮುಚ್ಚುಳಿಂದ ಸಹಿತವಹಂಥಾ ಲೋಹಕುಂಭೇ = ಲೋಹದ ಮಡಿಕೆಯಲ್ಲಿ ವಿನಿಕ್ಷಿಪ್ತಾಃ = ಹಾಯಿಕಿಸಿಕೊಳಲ್ಪಟ್ಟಂಥಾ ಮಾನವಾಃ = ನರರುಗಳು ಸ್ವಪಾಪೈರೇವ = ತನ್ನ ಪಾಪಗಳಿಂದವೇ ಮೃದ್ವಗ್ನಿನಾ = ಅಲ್ಪವಹ ಅಗ್ನಿಯಿಂದ ಶನೈಶ್ಶನೈಃ = ಮೆಲ್ಲಮೆಲ್ಲನೆ ಪ್ರಪಚ್ಯಂತೇ = ಬೇವುತ್ತಿಹರು. ||೧೫೬||

ಸರ್ವೇ = ಸಮಸ್ತ ಪಾತಕಿಗಳು ಉಲೂಖಲೈಃ = ಒರಳುಗಳಿಂದ ಕ್ಷೋದ್ಯಂತಿ = ತುಳಿಸಿಕೊಳುತ್ತಿಹರು ಶಿಲಾಸು ಚ = ಹಾಸಱೆಗಳಲ್ಲಿ ಪ್ರಪೀಡ್ಯಂತೇ = ಅಪ್ಪಳಿಸಿಕೊಳುತ್ತಿಹರು ಅಂಧಕೂಪೇಷು ಚ = ಅಂಧಕಾರವಹ ಬಾವಿಗಳಲ್ಲಿಯೂ ಕ್ಷಿಪ್ಯಂತೇ = ನೂಕಿಸಿಕೊಳುತ್ತಿಹರು. ಭ್ರಮರೈಃ = ತುಂಬಿಗಳಿಂದ ಭೃಶಂ = ಅತ್ಯಂತವಾಗಿ ದಂಶ್ಯಂತೇ = ಊಱಿಸಿಕೊಳುತ್ತಿಹರು. ||೧೫೭||

ಕ್ರಿಮಿಭಿಃ = ಹುಳುಗಳಿಂದ ಭಿನ್ನಸರ್ವಾಂಗಾಃ = ತೂತುಗೊಱೆಯಲುಪಟ್ಟ ಸರ್ವಾಂಗವನುಳ್ಳಂಥಾ ಅವರುಗಳಾಗಿ ಶತಶಃ = ಹಲವು ಬಾರಿ ಜರ್ಝರೀ–

ಮಹಾಜ್ವಾಲೇ ಚ ನರಕೇ ಪಾಪಾಃ [1]ಪಚ್ಯಂತಿ[1] ಸರ್ವತಃ
ಇತಸ್ತತಶ್ಚ ಧಾವಂತಿ ದಹ್ಯಮಾನಾಸ್ತದರ್ಚಿಷಾ ||೧೫೯||

ಪೃಷ್ಠೇನಾನೀಯ ಜಂಘೇ ದ್ವೇ ವಿನ್ಯಸ್ತೇ ಸ್ಕಂಧಯೋಜಿತೇ
ತಯೋರ್ಮಧ್ಯೇನ ಚಾಕೃಷ್ಯ ಬಾಹುಪೃಷ್ಠೇನ ಗಾಢತಃ ||೧೫೯||

ಬಧ್ವಾ ಪರಸ್ಪರಂ [2]ಸರ್ವಂ[2] ಸುದೃಢಂ ಪಾಪರಜ್ಜುಭಿಃ
ಪಿಂಡಬಂಧಂ [3]ದಶಂತ್ಯೇನಂ[3] ಭ್ರಮರಾಸ್ತೀಕ್ಷ್ಣಲೋಹಜಾಃ ||೧೬೦||

ಮಾನಿನಾಂ ಕ್ರೋಧಿನಾಂ ಚ್ಚೈವ ತಸ್ಕರಾಣಾಂ ಚ ದಾರುಣಾಃ
ಪಿಂಡ[4]ಬಂಧಾಃ[4] ಸ್ಮೃತಾ [5]ಯಾಮ್ಯಾ[5] ಮಹಾಜ್ವಾಲೇ ಚ ಯಾತನಾಃ

ಕೃತಾಃ = ಜರ್ಝರಿತವಾಗಿ ಮಾಡಲು ಪಟ್ಟವರುಗಳಹರು. ತದನಂತರಂ = ಆದಟಿ ತರುವಾಯಲ್ಲಿ ಸುತೀಕ್ಷ್ಣಕ್ಷಾರಕೂಪೇಷು = ಅತ್ಯಂತ ಕಾದ ಸುಣ್ಣದ ಬಾವಿಗಳಲ್ಲಿ ಕ್ಷಿಪ್ಯಂತೇ = ನೂಕಿಸಿಕೊಳುತ್ತಿಹರು. ||೧೫೮||

ಮಹಾಜ್ವಾಲೇ = ಅತ್ಯಂತ ಉರಿವುತ್ತಂವಿದ್ದಂಥಾ ನರಕೇ ಚ = ನರಕದಲ್ಲಿಯೂ ಪಾಪಾಃ = ಪಾಪಿಗಳು ಸರ್ವತಃ = ಎಲ್ಲಾ ಕಡೆಯಲ್ಲಿ ಪಚ್ಯಂತಿ = ಬೇವುತ್ತಿಹರು. ತದರ್ಚಿಷಾ = ಆ ನರಕಾಗ್ನಿಜ್ವಾಲೆಯಿಂದ ದಹ್ಯಮಾನಾಃ = ಬೇವುತ್ತಿದ್ದಂಥಾ ಅವರುಗಳಾಗಿ ಇತಸ್ತತಶ್ಚ = ಇತ್ತಲತ್ತಲು ಧಾವಂತಿ = ಓಡುತ್ತಿಹರು. ||೧೫೯||

ಪೃಷ್ಠೇನ = ಹಿಂದುಗಡೆಯಿಂದ ದ್ವೇಜಂಘೇ = ಎರಡು ಕಣಕಾಲುಗಳನು ವಿನ್ಯಸ್ತೇ = ಇರಿಸಲುಪಟ್ಟಂಥಾ ಅವನಾಗಿ ಸ್ಕಂಧಯೋಜಿತೇ = ಹೆಗಲುಗಳಿಂದ ಕೂಡಲುಪಟ್ಟಂಥಾ ಅವನಾಗಿ ಆನೀಯ = ಸಂಬಂಧಿಸಿ ತಯೋಃ = ಆ ಕಾಲುಗಳೆರಡರ ಮಧ್ಯೇನ = ಮಧ್ಯದಿಂದ ಬಾಹುಪೃಷ್ಠೇನ = ತೋಳುಗಳ ಹಿಂದುಗಡೆಯಿಂದ ಗಾಢತಃ = ದೃಢವಾಗಿ ಆಕೃಷ್ಯ = ಸೆಳೆದು ಪರಸ್ಪರಂ = ಬೇಱೆಬೇಱೆಯಹಂಥಾ ಸರ್ವಂ = ಸಮಸ್ತಾಂಗವನು ಪಾಪರಜ್ಜುಭಿಃ = ಪಾಪದ ನೇಣುಗಳಿಂದ ಸುದೃಢಂ = ಬಲುಹಾಗಿ ಬಧ್ವಾ = ಕಟ್ಟಲಾಗಿ ಏನಂ ಪಿಂಡಬಂಧಂ = ಈ ಶರೀರದ ಬಂಧನವನ್ನು ತೀಕ್ಷ್ಣಲೋಹಜಾಃ = ಕ್ರೂರವಹ ಲೋಹದಿಂದ ಹುಟ್ಟಿದಂಥಾ ಭ್ರಮರಾಃ = ದುಂಬಿಗಳು ದಶಂತಿ = ಊಱುತ್ತಿಹವು. ||೧೬೦||

ಮಾನಿನಾಂ = ಗರ್ವಿಗಳಿಗೆ ಕ್ರೋಧಿನಾಂ ಚ್ಚೈವ = ಕ್ರೋಧಿಗಳಿಗೆಯು ತಸ್ಕರಾಣಾಂ ಚ = ಕಳ್ಳರಿಗೆಯು ದಾರುಣಾಃ = ಭಯಂಕರವಹಂಥಾ ಯಾಮ್ಯಾಃ =

---

1 ಪಚ್ಯಂತೇ (ಕ) 2 ಸರ್ವಾನ್ (ಘ) 3 ದಶಂತ್ಯೇವಂ (ಘ).
4 ಬದ್ಧಾಃ (ಘ) 5 ಯಾಮ್ಯ (ಘ)

ರಜ್ಜುಭಿರ್ವೇಷ್ಟಿತಾಂಗಾಶ್ಚ ಪ್ರಲಿಪ್ತಾಃ ಕರ್ದಮೇನ ಚ
[1]ಕರೀಷವಹ್ನೌ[1] ಪಚ್ಯಂತೇ ತಥಾ ತೇ ನ ಮ್ರಿಯಂತಿ ಚ ||೧೬೨||

ಸುತೀಕ್ಷ್ಣಕ್ಷಾರತೋಯೇನ ಕರ್ಕಶಾಸು ಶಿಲಾಸು ಚ
ಆಪಾಪಸಂಕ್ಷಯಾತ್ಪಾಪಾಃ ಘೃಷ್ಯಂತೇ ಚಂದನಂ ಯಥಾ ||೧೬೩||

ಶರೀರಾಭ್ಯಂತರಗತೈಃ [2]ಕ್ರಿ[2]ಮಿಭಿರ್ಬಹುಭಿರ್ನರಾಃ
ಭಕ್ಷ್ಯಂತೇ ತೀಕ್ಷ್ಣವದನೈರಾದೇಹಪ್ರಕ್ಷಯಾದ್ಭೃಶಮ್ ||೧೬೪||

[3]ಕ್ರಿ[3]ಮೀಣಾಂ ನಿಚಯೇ ಕ್ಷಿಪ್ತಾಃ ಪೂತಿಮಾಂಸಸ್ಯ ರಾಶಿಷು
ತಿಷ್ಠಂತ್ಯುದ್ವಿಗ್ನಹೃದಯಾಃ ಪರ್ವತಾಭ್ಯಾಂ ಚ ತಾಡಿತಾಃ ||೧೬೫||

ಯಮನ ಸಂಬಂಧವಹಂಥಾ ಪಿಂಡಬಂಧಾಃ = ಶರೀರದ ಬಂಧನವೆಂಬಂಥಾ ಯಾತನಾಶ್ಚ = ಯಾತನೆಗಳು ಮಹಾಜ್ವಾಲೇ ಚ = ಮಹಾಜ್ವಾಲೆಯೆಂಬ ನರಕದಲ್ಲಿ ಸ್ಮೃತಾಃ = ಹೇಳಲುಪಟ್ಟವು. ||೧೬೧||

ರಜ್ಜುಭಿಃ = ನೇಣುಗಳಿಂದ ವೇಷ್ಟಿತಾಂಗಾಶ್ಚ = ಕಟ್ಟಲುಪಟ್ಟ ಶರೀರವನುಳ್ಳಂಥಾ ಅವರುಗಳು ಕರ್ದಮೇನ ಚ = ಕೆಸರಿನಿಂದವೂ ಪ್ರಲಿಪ್ತಾಃ = ಲೇಪಿಸಲು ಪಟ್ಟವರುಗಳಾಗಿ ಕರೀಷವಹ್ನೌ = ಬೆರಣಿಯ ಕಿಚ್ಚಿನಲ್ಲಿ ತೇ = ಅವರುಗಳು ಪಚ್ಯಂತೇ = ಬೇವುತ್ತಿಹರು. ತಥಾ ಚ = ಹಾಂಗಾಯಿತ್ತಾದರೂ ನ ಮ್ರಿಯಂತಿ = ಸಾವುತ್ತಿರರು. ||೧೬೨||

ಸುತೀಕ್ಷ್ಣಕ್ಷಾರತೋಯೇನ = ಅತ್ಯಂತ ಸೈರಿಸಲು ಬಾರದಿಹ ಉಪ್ಪಿನ ರಸದಿಂದ ಕರ್ಕಶಾಸು ಶಿಲಾಸು ಚ = ಕರ್ಕಶವಹ ಕಲ್ಲುಗಳಲ್ಲಿ ಪಾಪಾಃ = ಪಾಪಿಗಳು ಆಪಾಪಸಂಕ್ಷಯಾತ್ = ಪಾಪಕ್ಷಯವಹಲ್ಲಿ ಪರ್ಯಂತವೂ ಚಂದನಂ ಯಥಾ = ಶ್ರೀಗಂಧದ ಹಾಂಗೆ ಘೃಷ್ಯಂತೇ = ತೇಯಿಸಿಕೊಳ್ಳುತಿಹರು. ||೧೬೩||

ನರಾಃ = ಮನುಷ್ಯರುಗಳು ಶರೀರಾಭ್ಯಂತರಗತೈಃ = ದೇಹದೊಳಗೆ ಹೊಕ್ಕಂಥಾ ತೀಕ್ಷ್ಣವದನೈಃ = ಕೂರಿತಹ ಬಾಯನುಳ್ಳಂಥಾ ಬಹುಭಿಃ = ಬಹಳವಹಂಥಾ ಕ್ರಿಮಿಭಿಃ = ಹುಳುಗಳಿಂದ ಆದೇಹಪ್ರಕ್ಷಯಾತ್ = ದೇಹಹೋಹಲ್ಲಿ ಪರ್ಯಂತವೂ ಭೃಶಂ = ಅತ್ಯಂತವಾಗಿ ಭಕ್ಷ್ಯಂತೇ = ತಿನಿಸಿಕೊಳುತ್ತಿಹರು. ||೧೬೪||

ಪೂತಿಮಾಂಸಸ್ಯ = ನಾರುವ ಮಾಂಸದ ರಾಶಿಷು = ರಾಶಿಗಳಲ್ಲಿ ಕ್ರಿಮೀಣಾಂ-ನಿಚಯೇ = ಹುಳುಗಳ ಸಮೂಹದಲ್ಲಿ ಕ್ಷಿಪ್ತಾಃ = ನೂಕಿಸಿಕೊಳಲುಪಟ್ಟಂಥಾ

1 ಕರೀಷವತ್ತು (ಘ). ಕರೀಷವಹ್ನೌ (ಘ) ಪಾಠಾಂತರ. 2,3 ಕೃ (ಘ)

ಸಂತಪ್ತವಜ್ರಲೇಪೇನ ಶರೀರಮನುಲಿಪ್ಯತೇ
ಅಧೋಮುಖೋರ್ಧ್ವಪಾದಾಶ್ಚ ಧೃತಾಸ್ತಪ್ಯಂ[1]ತಿ[1] ವಹ್ನಿನಾ ||೧೬೭||

ವದನಾಂತಃ ಪ್ರವಿನ್ಯಸ್ತಂ ಸುಪ್ರತಪ್ತಮಯೋ[2]ಗುಡಂ[2]
ತೇ ಖಾದಂತಿ ಪರಾಧೀನಾಃ ಹನ್ಯಮಾನಾಶ್ಚ ಮುದ್ಗರೈಃ ||೧೬೭||

ಯೇ ಶಿವಾರಾಮಪುಷ್ಪಾಣಿ ಲೋಭಾತ್ಸಂಗೃಹ್ಯ ಪಾಣಿನಾ
ಜಿಘ್ರಂತಿ ಮೂಢಮನಸಾ ಶಿರಸಾ ಧಾರಯಂತಿ ವಾ ||೧೬೮||

ಆಪೂರ್ಯಂತೇ ಶಿರಸ್ತೇಷಾಂ ಸುತಪ್ತೈರ್ಲೋಹಶಂಕುಭಿಃ
ನಾಸಿಕಾ ಚಾಪಿ ಬಹುಧಾ ತತಃ ಕ್ಷಾರಾದಿಭಿಃ ಪುನಃ ||೧೬೯||

ಪಾಪಿಗಳು ಉದ್ವಿಗ್ನಹೃದಯಾಃ = ಮುಂದುಗೆಟ್ಟ ಚಿತ್ತವನ್ನುಳ್ಳವರುಗಳಾಗಿ ತಿಷ್ಠಂತಿ = ಇರುತ್ತಿಹರು ಪರ್ವತಾಭ್ಯಾಂ ಚ = ಎರಡು ಪರ್ವತಗಳಿಂದವೂ ತಾಡಿತಾಃ = ತಾಡಿಸಿಕೊಳುತ್ತಿಹರು. ||೧೬೫||

ಸಂತಪ್ತವಜ್ರಲೇಪೇನ = ಅತ್ಯಂತ ಕಾದ ವಜ್ರಲೇಪದಿಂದ ಶರೀರಂ = ದೇಹವು ಅನುಲಿಪ್ಯತೇ = ಹೂಸಲುಪಡುತ್ತಿಹುದು. ಅಧೋಮುಖೋರ್ಧ್ವಪಾದಾಃ = ಕೆಳಗು ಮುಖ [3]ಮೇಲುಕಾಲನುಳ್ಳಂಥಾ[3] ಅವರುಗಳಾಗಿ ಧೃತಾಶ್ಚ = ಹಿಡಿಸಿ-ಕೊಳಲು ಪಟ್ಟವರುಗಳಾಗಿ ವಹ್ನಿನಾ = ಕಿಚ್ಚಿಂದ ತಪ್ಯಂತಿ = ಸೀಯಿಸಿಕೊಳುತ್ತಿಹರು.

ವದನಾಂತಃ = ಬಾಯೊಳಗೆ ಸುಪ್ರತಪ್ತಂ = ಅತಿಕಾದಂಥಾ ಅಯೋಗುಡಂ = ಕಬ್ಬುನದ [4]ಬೆಲ್ಲವು[4] ಪ್ರವಿನ್ಯಸ್ತಂ = [5]ಎಱಿಯ[5]ಲುಪಟ್ಟುತ್ತು. ಪರಾಧೀನಾಃ = ಪರಾಧೀನವಹಂಥಾ ತೇ = ಆ ಪಾಪಿಗಳು ಮುದ್ಗರೈಃ = ಕಬ್ಬುನದ ಡಾಣೆಗಳಿಂದ ಹನ್ಯಮಾನಾಶ್ಚ = ಕೊಲಿಸಿಕೊಳಲುಪಟ್ಟವರುಗಳಾಗಿ ಖಾದಂತಿ = ತಿನುತ್ತಿಹರು.

ಯೇ = ಆರು ಕೆಲಬರು [6]ಶಿವಾರಾಮಪುಷ್ಪಾಣಿ = ಶಿವಸ್ಥಾನದ[6] ತೋಟದ ಪುಷ್ಪಂಗಳನು ಲೋಭಾತ್ = ಅಜ್ಞಾನದ ದೆಸೆಯಿಂದ ಪಾಣಿನಾ = ಹಸ್ತದಿಂದ ಸಂಗೃಹ್ಯ = ಕೊಯಿದು ಮೂಢಮನಸಾ = ಮೂಢಚಿತ್ತದಿಂದ ಜಿಘ್ರಂತಿ = ಮೂಸಿನೋಡುತ್ತಿಹರೂ ಶಿರಸಾ = ಶಿರಸ್ಸಿನಿಂದ ಧಾರಯಂತಿ ವಾ = ಮುಡಿವುತ್ತಿಹರೂ. ||೧೬೮||

ತೇಷಾಂ = ಆ [7]ದುರಾತ್ಮರುಗಳ[7] ಶಿರಃ = ಶಿರಸ್ಸು ಸುತಪ್ತೈಃ = ಅತಿ-ಕಾದಂಥಾ ಲೋಹಶಂಕುಭಿಃ = ಕಬ್ಬುನದ ಮೊಳೆಗಳಿಂದ ಆಪೂರ್ಯಂತೇ = ಬೆಟ್ಟಲು

---

1 ತೇ (ಕ) 2 ರುತಂ (ಗ) 3 ಮೇಲು ಮುಂತಾದ ಕಾಲನುಳ್ಳಂಥಾ (ವ್ಯಾಖ್ಯಾ).
4 ಗುಳವು (ಕ) 5 ಐರಿಸ (ಕ) 6 ಲುಪ್ತ (ಕ) 7 ಲುಪ್ತ (ಕ).

ದೇವಾಗ್ನಿಗುರುವಿಪ್ರಾಣಾಮನಿವೇದ್ಯ ಪ್ರಭುಂಜತಃ
ಲೋಹಕೀಲಶತೈಸ್ತಪ್ತೈಃ ಜಿಹ್ವಾಸ್ಯಂ ಚ ಪ್ರಪೂರ್ಯತೇ ॥೧೭೦॥

ತತಃ ಕ್ಷಾರೇಣ ದೀಪ್ತೇನ ತೈಲತಾಮ್ರಾದಿಭಿಃ ಕ್ರಮಾತ್
ಶರೀರೇ ಚ ಮಹಾಘೋರಾಶ್ಚಿತ್ರಾ ನರಕಯಾತನಾಃ ॥೧೭೧॥

‡ಬಹುಶೋತ್ಪಾಟ್ಯತೇ ಜಿಹ್ವಾ [1]ಯೇಽಸತ್ಯಾಪ್ರಿಯವಾದಿನಃ[1]
ಸಂದಂಶೇನ ಸುತಪ್ತೇನ ಪ್ರಪೀಡ್ಯೋರಸಿ ಪಾದತಃ ॥೧೭೨॥

ಮಿಥ್ಯಾಗಮಪ್ರಕರ್ತುಶ್ಚ ಜಿಹ್ವಾಚಾಸ್ಯ ವಿನಿರ್ಗತಾ
ಜಿಹ್ವಾರ್ಧಕೋಶವಿಸ್ತೀರ್ಣೈಃ ಹಲೈಸ್ತೀಕ್ಷ್ಣೈಃ ಪ್ರಪಾಟ್ಯತೇ ॥೧೭೩॥

ಪಡುತ್ತಿಹುದು. ತತಃ = ಅನಂತರದಲ್ಲಿ ನಾಸಿಕಾ ಚ = ಮೂಗು ಬಹುಧಾ = ಹಲವು ಪ್ರಕಾರವಹಂಥಾ ಕ್ಷಾರಾದಿಭಿರಪಿ = ಉಪ್ಪಿನ ರಸ ಮುಂತಾದವುಗಳಿಂದವೂ ಆಪೂರ್ಯತೇ = ಎಱಯಿಸಿಕೊಳಲುಪಡುತ್ತಿಹುದು. ॥೧೬೯॥

ದೇವಾಗ್ನಿಗುರುವಿಪ್ರಾಣಾಂ = ದೇವರು ಅಗ್ನಿ ಗುರು ಬ್ರಾಹ್ಮಣರುಗಳಿಗೆ ಅನಿವೇದ್ಯ = ಸಮರ್ಪಿಸದೆ ಪ್ರಭುಂಜತಃ = ಉಂಡಾತನ ಜಿಹ್ವಾಸ್ಯಂ ಚ = ನಾಲಗೆಯು ಮುಖವು ತಪ್ತೈಃ = ಕಾಸಿದಂಥಾ ಲೋಹಕೀಲಶತೈಃ = ಲೋಹದ ಮೊಳೆಗಳ ಅಸಂಖ್ಯಾತಗಳಿಂದ ಪ್ರಪೂರ್ಯತೇ = ಬೆಟ್ಟಲುಪಡುತ್ತಿಹುದು. ॥೧೭೦॥

ತತಃ = ಅಷ್ಟಱಮೇಲೆ ದೀಪ್ತೇನ = ಕಾದಂಥಾ ಕ್ಷಾರೇಣ = ಉಪ್ಪಿನಿಂದ ತೈಲತಾಮ್ರಾದಿಭಿಃ = ಕಾಸಿದ ಎಣ್ಣೆ ತಾಮ್ರದರಸ ಮೊದಲಾದವಱಂದ ಕ್ರಮಾತ್ = ತಱುವಾಯಿಂದ ಶರೀರೇ ಚ = ಶರೀರದಲ್ಲಿಯೂ ಮಹಾಘೋರಾಃ = ಅತಿ ಭಯಂಕರವಹಂಥಾ ಚಿತ್ರಾಃ = ಆಶ್ಚರ್ಯವಹಂಥಾ ನರಕಯಾತನಾಃ = ನರಕ-ಯಾತನೆಗಳುಂಟು. ॥೧೭೧॥

ಯೇ = ಆರು ಕೆಲಬರು ಅಸತ್ಯಾಪ್ರಿಯವಾದಿನಃ = ಹುಸಿಯನು ನಿಷ್ಠುರವನು ನುಡಿಯುತ್ತಿಹರು. ಉರಸಿ = ಎದೆಯಲ್ಲಿ ಪಾದತಃ = ಪಾದದಿಂದ ಪ್ರಪೀಡ್ಯ = ಮೆಟ್ಟಿಕೊಂಡು ಸುತಪ್ತೇನ = ಅತಿಕಾಸಿದಂಥಾ ಸಂದಂಶೇನ = ಇಕ್ಕುಳಿಂದ ಬಹುಶಃ = ಹಲವುಬಾರಿ ಜಿಹ್ವಾ = ನಾಲಗೆ ಉತ್ಪಾಟ್ಯತೇ = ಕೀಳಲುಪಡುತ್ತಿಹುದು. ॥೧೭೨॥

ಮಿಥ್ಯಾಗಮಪ್ರಕರ್ತುಶ್ಚ = ಮಿಥ್ಯೆಯಹ ಶಾಸ್ತ್ರವ ಮಾಡಿದಂಥಾ ಅಸ್ಯ = ಈತನ ಜಿಹ್ವಾ ಚ = ನಾಲಗೆಯು ವಿನಿರ್ಗತಾ = ಸುಗಿಯಲುಪಟ್ಟುದಾಗಿ

[1] ಯೇಽಸತ್ಯಪ್ರಿಯವಾದಿನಃ (ಘ). ‡ಇಲ್ಲಿ ಸಂಧಿಯು ಆರ್ಷಪ್ರಯೋಗವೆಂದು ಭಾವಿಸಬೇಕು

ನಿರ್ಭರ್ತ್ಸಯಂತಿ ಯೇ ಕ್ರೂರಾಃ ಮಾತರಂ ಪಿತರಂ ಗುರುಮ್
ತೇಷಾಂ ವಜ್ರಜಲೂಕಾಭಿಃ ಮುಖಮಾಪೂರ್ಯ ಸಿಚ್ಯತೇ ||೧೭೪||

ತತಃ ಕ್ಷಾರೇಣ ತಾಮ್ರೇಣ ತ್ರಪುಣಾಽಽಸಿಚ್ಯತೇ ಪುನಃ
ದ್ರುತೇನಾಪೂರ್ಯತೇಽತ್ಯರ್ಥಂ ತಪ್ತಲೋಹೈಶ್ಚ ತನ್ಮುಖಮ್ ||

ಯತಸ್ತತಃ ಪುನರ್ವಕ್ತ್ರಂ †[1]ವಧ್ಯತೇ[1] ಯಮಕಿಂಕರೈಃ
ವಿಷ್ಠಾಭಿಃ ಕ್ರಿಮಿಮಿಶ್ರಾಭಿಃ ಸೋಪಾನಟ್ಕರಣೈರ್ನರೈಃ ||೧೭೬||

ಜಿಹ್ವಾರ್ಧಕೋಶವಿಸ್ತೀರ್ಣೈಃ = ನಾಲಗೆಯ ಅರ್ಧಪ್ರಮಾಣಿನೋಪಾದಿ ವಿಶಾಲವಹಂಥಾ ತೀಕ್ಷ್ಣೈಃ = ಕೂರಿತಹಂಥಾ ಹಲೈಃ = ನೇಗಿಲುಗಳಿಂದ ಪ್ರಪಾಟ್ಯತೇ = ಹೂಡಲುಪಡುತ್ತಿಹುದು. ||೧೭೩||

ಯೇ ಕ್ರೂರಾಃ = ಆರು ಕೆಲಬರು ಕ್ರೂರರುಗಳು ಮಾತರಂ = ತಾಯನು ಪಿತರಂ = ತಂದೆಯನು ಗುರುಂ = ಶ್ರೀಗುರುವನು ನಿರ್ಭರ್ತ್ಸಯಂತಿ = ಝುಂಕಿಸುತ್ತಿಹರು ತೇಷಾಂ = ಅವರುಗಳ ಮುಖಂ = ಮುಖವು ವಜ್ರಜಲೂಕಾಭಿಃ = ವಜ್ರಮಯವಹಂಥಾ ಜಿಗುಳೆಗಳಿಂದ ಆಪೂರ್ಯ = ಪ್ರವೇಶಿಸಿ ಸಿಚ್ಯತೇ = ಹೀರಲುಪಡುತ್ತಿಹುದು. ||೧೭೪||

ತತಃ = ಅಷ್ಟಱಮೇಲೆ ತನ್ಮುಖಂ = ಅವರುಗಳ ಮುಖವು ದ್ರುತೇನ = ಕರಗಿದಂಥಾ ತಾಮ್ರೇಣ = ತಾಮ್ರದಿಂದ ತ್ರಪುಣಾ = ತವರದಿಂದ ಕ್ಷಾರೇಣ = ಉಪ್ಪಿನಿಂದ ಪುನಃ = ಮರಳಿ ಆಸಿಚ್ಯತೇ = ಎಱಸಿಕೊಲುಪಡುತ್ತಿಹುದು. ತಪ್ತಲೋಹೈಶ್ಚ = ಕಾದಲೋಹದ ರಸಗಳಿಂದವೂ ಅತ್ಯರ್ಥಂ = ಅತ್ಯಂತವಾಗಿ ಆಪೂರ್ಯತೇ = ತುಂಬಲುಪಡುತ್ತಿಹುದು. ||೧೭೫||

ಯತಃ = ಆವುದಾನೊಂದು ಕಾರಣವಾಗಿ ತತಃ = ಅಷ್ಟಱಮೇಲೆ ವಕ್ತ್ರಂ = ಮುಖವು ಪುನಃ = ಮರಳಿ ಯಮಕಿಂಕರೈಃ = ಯಮದೂತರುಗಳಿಂದವು ಕ್ರಿಮಿಮಿಶ್ರಾಭಿಃ = ಕ್ರಿಮಿಗಳು ಮಿಶ್ರವಾದಂಥಾ ವಿಷ್ಠಾಭಿಃ = ಅಮೇಧ್ಯಗಳಿಂದ ಸೋಪಾನಟ್ಕರಣೈಃ = ಕೆರಹುಗಾಲಿಂದ ಸಹಿತರಹಂಥಾ ನರೈಃ = ನರರುಗಳಿಂದವೂ †ವಧ್ಯತೇ = ಬಾಧಿಸಿಕೊಳುತ್ತಿಹುದು. ಯಮದೂತರುಗಳು ನರಕಿಗಳಿಂದ ನರಕಿಗಳ ಬಾಧಿಸುತ್ತಿಹರೆಂಬುದರ್ಥ. ||೧೭೬||

---

1 ಬಧ್ಯತೇ (ಖ.ಗ.ಘ). † ಬಧ್ಯತೇ = ಬಂಧಿಸಿಕೊಳುತ್ತಿಹುದು ಎಂಬುದೇ ಸಂಗತವಾದುದು.

ಯೇ ನಿಂದಂತಿ ಮಹಾತ್ಮಾನಮಾಚಾರ್ಯಂ ಧರ್ಮದೇಶಿಕಂ
ಶಿವಭಕ್ತಾಂಶ್ಚ ಸಮ್ಮೂಢಾಃ ಶಿವಧರ್ಮಂ ಚ ಶಾಶ್ವತಮ್ ||೧೭೭||

ತೇಷಾಮುರಸಿ ಕಂಠೇ ಚ ಜಿಹ್ವಾಯಾಂ ದಂತಸಂಧಿಷು
ತಾಲುನ್ಯೋಷ್ಠೇ ಚ ನಾಸಾಯಾಂ ಮೂರ್ಧ್ನಿ ಸರ್ವಾಂಗಸಂಧಿಷು ||

[1]ಅಗ್ನಿವರ್ಣಾಸ್ಸುತಪ್ತಾಶ್ಚ[1] ತ್ರಿಶಿಖಾ ಲೋಹಶಂಕವಃ
[2]ಆರೋಪ್ಯಂತೇ ಸುಬಹುಶಃ[2] ಸ್ಥಾನೇಷ್ವೇತೇಷು ಮುದ್ಗರೈಃ ||೧೭೯||

ತತಃ ಕ್ಷಾರೇಣ ತಪ್ತೇನ ತಾಮ್ರೇಣ ತ್ರಪುಣಾ ಪುನಃ
ತಪ್ತಲೋಹಾದಿಭಿಸ್ಸರ್ವೈರಾಪೂರ್ಯಂತೇ ಸಮಂತತಃ ||೧೮೦||

ಯೇ = ಆರು ಕೆಲಬರು ಸಮ್ಮೂಢಾಃ = ಮೂರ್ಖರುಗಳು ಮಹಾತ್ಮಾನಂ = ಮಹಾತ್ಮನಹಂಥಾ ಧರ್ಮದೇಶಿಕಂ = ಧರ್ಮವನುಪದೇಶಿಸುತ್ತಿದ್ದಂಥಾ ಆಚಾರ್ಯಂ = ಆಚಾರ್ಯನನು ಶಿವಭಕ್ತಾಂಶ್ಚ = ಶಿವಭಕ್ತರುಗಳನು ಶಾಶ್ವತಂ = ನಿತ್ಯವಹಂಥಾ ಶಿವಧರ್ಮಂ ಚ = ಶಿವಧರ್ಮಶಾಸ್ತ್ರವನು ನಿಂದಂತಿ = ನಿಂದಿಸುತ್ತಿಹರು.

ತೇಷಾಂ = ಅವರುಗಳ ಉರಸಿ = ಎದೆಯಲ್ಲಿ ಕಂಠೇ ಚ = ಕೊರಳಲ್ಲಿಯೂ ಜಿಹ್ವಾಯಾಂ = ನಾಲಗೆಯಲ್ಲಿ ದಂತಸಂಧಿಷು = ಹಲ್ಲುಗಳ ಸಂದುಗಳಲ್ಲಿ ತಾಲುನಿ = ಕಟವಾಯಲ್ಲಿ ಓಷ್ಠೇ ಚ = ತುಟಿಯಲ್ಲಿ ನಾಸಾಯಾಂ = ಮೂಗಿನಲ್ಲಿ ಮೂರ್ಧ್ನಿ = ಮಸ್ತಕದಲ್ಲಿ ಸರ್ವಾಂಗಸಂಧಿಷು = ಸರ್ವಾಂಗಗಳ ಸಂದುಗಳಲ್ಲಿ. ||೧೭೮||

ಏತೇಷು ಸ್ಥಾನೇಷು = ಈ ಸ್ಥಾನಂಗಳಲ್ಲಿ ಅಗ್ನಿವರ್ಣಾಃ = ಅಗ್ನಿಯೋಪಾದಿ ವರ್ಣವನುಳ್ಳಂಥಾ ಸುತಪ್ತಾಃ = ಅತಿಕಾಸಿದಂಥಾ ತ್ರಿಶಿಖಾಃ = ಮೂಱು ಮೊನೆಯನುಳ್ಳಂಥಾ ಲೋಹಶಂಕವಶ್ಚ = ಲೋಹದ ಮೊಳೆಗಳೂ ಮುದ್ಗರೈಃ = ಕಬ್ಬಿನದ ಡಾಣೆಗಳಿಂದ ಸುಬಹುಶಃ = ಹಲವು ಬಾರಿ ಆರೋಪ್ಯಂತೇ = ಬೆಟ್ಟಲುಪಡುತ್ತಿಹವು.

ತತಃ = ಅಷ್ಟಱಮೇಲೆ ತಪ್ತೇನ = ಕಾದಂಥಾ ಕ್ಷಾರೇಣ = ಉಪ್ಪಿನರಸದಿಂದ ತಾಮ್ರೇಣ = ತಾಮ್ರದ ರಸದಿಂದ ತ್ರಪುಣಾ = ತವರದ ರಸದಿಂದ ಪುನಃ = ಮರಳಿ ತಪ್ತಲೋಹಾದಿಭಿಃ = ಕಾಸಿದ ಲೋಹದ ರಸ ಮುಂತಾದಂಥಾ ಸರ್ವೈಃ = ಎಲ್ಲವಱಿಂದವೂ ಸಮಂತತಃ = ಎಲ್ಲಾ ಕಡೆಯಲ್ಲಿಯೂ ಆಪೂರ್ಯಂತೇ = ತುಂಬಲುಪಡುತ್ತಿಹವು. ||೧೮೦||

---

1 ವಹ್ನಿವರ್ಣಾಶ್ಚ ತಪ್ತಾಶ್ಚ (ಘ) 3 ಆವಿಧ್ಯಂತೇ ಚ ಬಹುಶಃ (ಘ)

ಯಾತನಾಶ್ಚ ಮಹಾಚಿತ್ರಾಃ ಶರೀರಸ್ಯಾಪಿ ಸರ್ವಶಃ
ನಿಶ್ಶೇಷನರಕೇಷ್ವೇವಂ ಭ್ರಮಂತಿ ಕ್ರಮಶಃ ಪುನಃ ||೧೮೧||

ಯೇ ಗೃಹ್ಣಂತಿ ಪರದ್ರವ್ಯಂ ಪದ್ಭ್ಯಾಂ ವಿಪ್ರಂ ಸ್ಪೃಶಂತಿ ಚ
ಶಿವೋಪಕರಣಂ ಗಾಶ್ಚ ಜ್ಞಾನಂ ಚ ಲಿಖಿತಂ ಕ್ವಚಿತ್ ||೧೮೨||

ಹಸ್ತಪಾದಾ ಘನೈಸ್ತೇಷಾಮಾಪೂರ್ಯಂತೇ ಸಮಂತತಃ
ಕ್ಷಾರತಾಮ್ರಾದಿಭಿರ್ದೀಪ್ತೈಃ ದಹ್ಯಂತೇ ಕ್ರಮಶಃ ಪುನಃ ||೧೮೩||

ನರಕೇಷು ಚ ಸರ್ವೇಷು ವಿಚಿತ್ರಾ ದೇಹಯಾತನಾಃ
ಭವಂತಿ ಬಹುಶಃ ಕಷ್ಟಾಃ ಪಾಣಿಪಾದಸಮುದ್ಭವಾಃ ||೧೮೪||

ಶರೀರಸ್ಯಾಪಿ = ಶರೀರಕ್ಕೆಯೂ ಮಹಾಚಿತ್ರಾಃ = [1]ಅತಿಚಿತ್ರ[1]ವಹಂಥಾ ಯಾತನಾಶ್ಚ = ಬಾಧೆಗಳು ಸರ್ವಶಃ = ಹಲವು ಬಾರಿ ಉಂಟು. ನಿಶ್ಶೇಷನರಕೇಷು = ಸಮಸ್ತ ನರಕಂಗಳಲ್ಲಿ ಏವಂ = ಈ ಪ್ರಕಾರದಲ್ಲಿ ಕ್ರಮಶಃ = ಕ್ರಮದಿಂದ ಪುನಃ = ಮರಳಿ ಭ್ರಮಂತಿ = ತಿರುಗುತ್ತಿಹರು. ||೧೮೧||

ಯೇ = ಆರು ಕೆಲಬರು ಪರದ್ರವ್ಯಂ = ಪರದ್ರವ್ಯವನು ಗೃಹ್ಣಂತಿ = ತೆಗೆದು-ಕೊಳ್ಳುತ್ತಿಹರು ಪದ್ಭ್ಯಾಂ = ಕಾಲುಗಳಿಂದ ವಿಪ್ರಂ ಚ = ಬ್ರಾಹ್ಮಣನನು ಶಿವೋಪಕರಣಂ = ಶಿವನ ಉಪಕರಣವನು ಗಾಶ್ಚ = ಗೋವುಗಳನು ಲಿಖಿತಂ = ಬರೆದಂಥಾ ಜ್ಞಾನಂ ಚ = ಶಿವಜ್ಞಾನದ ಶಾಸ್ತ್ರದ ಪುಸ್ತಕವನು ಕ್ವಚಿತ್ = ಒಂದು ಬಾರಿಯಾಯಿತಾದರೂ ಸ್ಪೃಶಂತಿ = ಮೆಟ್ಟುತ್ತಿಹರು. ||೧೮೨||

ತೇಷಾಂ = ಅವರುಗಳ ಹಸ್ತಪಾದಾಃ = ಹಸ್ತಪಾದಂಗಳು ದೀಪ್ತೈಃ = ಕಾದಂಥಾ ಘನೈಃ = ಬಹಳವಹಂಥಾ ಕ್ಷಾರತಾಮ್ರಾದಿಭಿಃ = ಉಪ್ಪಿನರಸ ತಾಮ್ರದರಸ ಮೊದಲಾಗಿದ್ದಂಥಾ ಅವಱಿಂದ ಸಮಂತತಃ = ಎಲ್ಲಾ ಕಡೆಯಲೂ ಆಪೂರ್ಯಂತೇ = ಎಱಿಸಿಕೊಳಲುಪಡುತ್ತಿಹವು. ಕ್ರಮಶಃ = ಕ್ರಮದಿಂದ ಪುನಃ = ಮರಳಿ ದಹ್ಯಂತೇ = ಬೇವುತ್ತಿಹವು. ||೧೮೩||

ಸರ್ವೇಷು ನರಕೇಷು ಚ = ಸಮಸ್ತ ನರಕಂಗಳಲ್ಲಿಯೂ ದೇಹಯಾತನಾಃ = ಶರೀರದ ಯಾತನೆಗಳು ವಿಚಿತ್ರಾಃ = ವಿಚಿತ್ರಂಗಳಹವು ಪಾಣಿಪಾದಸಮುದ್ಭವಾಃ = ಹಸ್ತಪಾದಂಗಳಿಂದ ಹುಟ್ಟಿದಹಂಥಾ ಕಷ್ಟಾಃ = ಯಾತನೆಗಳು ಬಹುಶಃ = ಹಲವು ಪ್ರಕಾರಂಗಳು ಭವಂತಿ = ಆಗುತ್ತಿಹವು. ||೧೮೪||

---

[1] ಮಹಾವಿಚಿತ್ರ (ಕ).

ಯೇ ಶಿವಾಯತನಾರಾಮವಾಪೀಕೂಪಮಠಾಂಗಣಮ್
ಉಪದ್ರವಂತಿ ಪಾಪಿಷ್ಠಾ ನೃಪಾಸ್ತತ್ರ ವಸಂತಿ ಚ ||೧೮೫||

ವ್ಯಾಯಾಮೋದ್ವರ್ತನಾಭ್ಯಂಗಸ್ನಾನಪಾನಾನ್ನಭೋಜನಮ್
ಕ್ರೀಡನಂ ಮೈಥುನಂ [1]ದ್ಯೂತಂ ಶೌಚಾದ್ಯಂ ಚಾಚರಂತಿ ಚ ||೧೮೬||

ತೇ ವಧೈರ್ವಿವಿಧೈರ್ಘೋರೈಃ ಇಕ್ಷುಯಂತ್ರಾದಿಪೀಡನೈಃ
ನಿರಯಾಗ್ನಿಷು ಪಚ್ಯಂತೇ ಯಾವದಾಚಂದ್ರತಾರಕಮ್ ||೧೮೭||

ಶಿವಾಯತನಪರ್ಯಂತೇ ಶಿವಾರಾಮೇ ಚ ಕುತ್ರಚಿತ್
ಸಮುತ್ಸೃಜಂತಿ ಯೇ ಮೂಢಾ ಪುರೀಷಂ ಮೂತ್ರಮೇವ ವಾ ||

ಯೇ = ಆರು ಕೆಲಬರು ಪಾಪಿಷ್ಠಾಃ = ಪಾಪಿಗಳಹಂಥಾ ನೃಪಾಃ = ಅರಸುಗಳು ಶಿವಾಯತನಾರಾಮವಾಪೀಕೂಪಮಠಾಂಗಣಂ = ಶಿವಾಲಯ ಶಿವನ ಉದ್ಯಾನವನ ಕೊಣ ಬಾವಿ ಮಠಂಗಳ ಸಮೂಹವನು ಉಪದ್ರವಂತಿ = ಉಪದ್ರವ ಮಾಡುತ್ತಿಹರು. ತತ್ರ = ಅಲ್ಲಿ ವಸಂತ ಚ = ಇರುತ್ತಿಹರು. ||೧೮೫||

ವ್ಯಾಯಾಮೋದ್ವರ್ತನಾಭ್ಯಂಗಸ್ನಾನಪಾನಾನ್ನಭೋಜನಂ = ಹರಿದಾಡುತ್ತಿಹ ತಿಗುರಸಿಕ್ಕಿಸಿಕೊಳುಹ ಎಣ್ಣೆಮಜ್ಜನವ ಮಾಡುಹ ಉದಕವ ಕುಡಿಹ ಊಟವ ಮಾಡುಹವನು ಕ್ರೀಡನಂ = ಕೆಲದಾಡುಹವನು ಮೈಥುನಂ = ಸ್ತ್ರೀಸಂಗವನು ದ್ಯೂತಂ = ಜೂಜನು ಶೌಚಾದ್ಯಂ ಚ = ಶೌಚಮೊದಲಾದಂಥಾ ಅವನು ಆಚರಂತಿ = ಮಾಡುತ್ತಿಹರು. ||೧೮೬||

ತೇ = ಅವರುಗಳು ವಿವಿಧೈಃ = ನಾನಾ ಪ್ರಕಾರವಹಂಥಾ ಘೋರೈಃ = ಭಯಂಕರವಹಂಥಾ ಇಕ್ಷುಯಂತ್ರಾದಿಪೀಡನೈಃ = ಕಬ್ಬಿನಾಲೆ ಮೊದಲಾದ ಬಾಧೆಗಳನುಳ್ಳಂಥಾ ವಧೈಃ ವಧೆಗಳಿಂದ ನಿರಯಾಗ್ನಿಷು = ನರಕಾಗ್ನಿಗಳಲ್ಲಿ ಪಚ್ಯಂತೇ = ಬೇವುತ್ತಿಹರು. ಯಾವತ್ = ಎಲ್ಲಿ ಪರಿಯಂತರವೆಂದರೆ ಆಚಂದ್ರತಾರಕಂ = ಚಂದ್ರ ತಾರೆಕೆ ಉಳ್ಳಲ್ಲಿ ಪರಿಯಂತರವು. ||೧೮೭||

ಯೇ ಮೂಢಾಃ = ಆರು ಕೆಲಬರು ಮೂರ್ಖರುಗಳು ಶಿವಾಯತನಪರ್ಯಂತೇ = ಶಿವಾಲಯದ ಚತುಸ್ಸೀಮೆಯಲ್ಲಿ ಶಿವಾರಾಮೇ ಚ = ಶಿವನ ತೋಟದಲ್ಲಿಯೂ ಕುತ್ರಚಿತ್ = ಒಂದು ಬಾರಿಯಾಯಿತ್ತಾದರೂ ಪುರೀಷಂ = ಮಲವನು ವಾ = ಅಲ್ಲಾ ಮೂತ್ರಮೇವ = ಮೂತ್ರವನೇ ಸಮುತ್ಸೃಜಂತಿ = ಬಿಡುತ್ತಿಹರು. ||೧೮೮||

---

[1] ದ್ಯೌತ್ಯಂ (ಘ).

*ತೇಷಾಂ ಶಿಶ್ನಂ ಸವೃಷಣಂ ಚೂರ್ಣ್ಯತೇ ಲೋಹಮುದ್ಗರೈಃ
ಸೂಚೀಭಿರಗ್ನಿವರ್ಣಾಭಿಸ್ತತಶ್ಚಾಪೂರ್ಯತೇ ಪುನಃ ||೧೮೯||

‡ಲೋಹದಂಡಶ್ಚ ಸುಮಹಾನಗ್ನಿವರ್ಣಃ ಸಕಂಟಕಃ
ಆರೋಪ್ಯತೇ ಗುದೇ ತೇಷಾಂ ಯಾವನ್ಮೂರ್ಧ್ನಿ ವಿನಿರ್ಗತಃ ||೧೯೦||

§ತತಃ ಕ್ಷಾರೇಣ ಮಹತಾ [1]ತಾಮ್ರೇಣ[1] ತ್ರಪುಣಾ ಪುನಃ
[2]ದ್ರುತೇನಾ[2]ಪೂರ್ಯತೇ ಗಾಢಂ ಗುದಂ ಶಿಶ್ನಂ ಚ ದೇಹಿನಾಮ್ ||

ಮನಸ್ಸರ್ವೇಂದ್ರಿಯಾಣಾಂ ಚ ಯಸ್ಮಾದುಕ್ತಂ ಪ್ರವರ್ತಕಮ್
ತಸ್ಮಾದಿಂದ್ರಿಯದುಃಖೇನ ಜಾಯತೇ ತತ್ಸದುಃಖಿತಮ್ ||೧೯೨||

ತೇಷಾಂ = ಆ ದುರಾತ್ಮರುಗಳ ಸವೃಷಣಂ = ವೃಷಣಂಗಳಿಂದ ಸಹಿತವಹಂಥಾ ಶಿಶ್ನಂ = ಶಿಶ್ನೆಯು ಲೋಹಮುದ್ಗರೈಃ = ಕಬ್ಬಿನದ ಡಾಣೆಗಳಿಂದ ಚೂರ್ಣ್ಯತೇ = ಚೂರ್ಣವ ಮಾಡಲುಪಡುತ್ತಿಹುದು. ತತಶ್ಚ = ಅಷ್ಟರ ಮೇಲೆ ಪುನಃ = ಮರಳಿ ಅಗ್ನಿವರ್ಣಾಭಿಃ = ಅಗ್ನಿಯ ವರ್ಣವನುಳ್ಳಂಥಾ ಸೂಚೀಭಿಃ = ಸೂಜಿಗಳಿಂದ ಆಪೂರ್ಯತೇ = ಬೆಟ್ಟಲುಪಡುತ್ತಿಹುದು. ||೧೮೯||

ತೇಷಾಂ = ಆವರುಗಳ ಗುದೇ = ಗುದದಲ್ಲಿ ಅಗ್ನಿವರ್ಣಃ = ಅಗ್ನಿಯೋಪಾದಿ ವರ್ಣವನುಳ್ಳಂಥಾ ಸಕಂಟಕಃ = ಮೊಳೆಗಳಿಂದ ಸಹಿತವಹಂಥಾ ಸುಮಹಾನ್ = ದೊಡ್ಡಿತ್ತಹಂಥಾ ಲೋಹದಂಡಶ್ಚ = ಕಬ್ಬಿನದ ಹಾರೆಯು ಆರೋಪ್ಯತೇ = ಏರಿಸಲುಪಡುತ್ತಿಹುದು. ಯಾವತ್ = ಎಲ್ಲಿ ಪರಿಯಂತರವೆಂದಡೆ ಮೂರ್ಧ್ನಿ = ನೆತ್ತಿಯಲ್ಲಿ ವಿನಿರ್ಗತಃ = ಮೂಡುವಲ್ಲಿ ಪರಿಯಂತರವವೂ. ||೧೯೦||

ತತಃ = ಅನಂತರದಲ್ಲಿ ದೇಹಿನಾಂ = ದೇಹಿಕರಹಂಥಾ ಪಾಪಿಗಳ ಗುದಂ = ಗುದವು ಶಿಶ್ನಂ = ಶಿಶ್ನವು ದ್ರುತೇನ = ಕರಗಿದಂಥಾ ಕ್ಷಾರೇಣ = ಉಪ್ಪಿನ ರಸದಿಂದ ಮಹತಾ = ಬಹಳವಹಂಥಾ ತಾಮ್ರೇಣ = ತಾಮ್ರದಿಂದ ತ್ರಪುಣಾ = ತವರದಿಂದ ಗಾಢಂ = ಬಹಳವಾಗಿ ಪುನಃ = ಮರಳಿ ಆಪೂರ್ಯತೇ = ತುಂಬಲು ಪಡುತ್ತಿಹುದು. ||೧೯೧||

ಯಸ್ಮಾತ್ = ಆವುದಾನೊಂದು ಕಾರಣದ ದೆಸೆಯಿಂದ ಮನಃ = ಮನಸ್ಸು

---

* ಈ ಶ್ಲೋಕಾನಂತರ (ಘ) ದಲ್ಲಿ 'ತತಃ ಕ್ಷಾರೇಣ ಮಹತಾ' ಎಂಬ ಮುಂದೆ ಉಕ್ತವಾಗಿರುವ ಶ್ಲೋಕ ಬಂದಿದೆ. ‡ ಈ ಶ್ಲೋಕ (ಘ) ದಲ್ಲಿ ಮಾತ್ರ ಇರುವುದಿಲ್ಲ.

§ ಈ ಶ್ಲೋಕ (ಘ)ದಲ್ಲಿ ಹಿಂದಿನ ಶ್ಲೋಕಕ್ಕೆ ಮೊದಲೇ ಬಂದಿದೆ.

1 ತೀವ್ರೇಣ (ಘ) 2 ದ್ರುತೇನ (ಘ)

7

ಅನ್ನಪಾನಮದತ್ತಂ ಯೈರ್ಮೂರ್ಖೈರ್ನಾಪ್ಯನುಮೋದಿತಮ್
ಖಾದಂತಿ ಚ ಸ್ವಮಾಂಸಾನಿ ಪಿಬಂತಃ ಶೋಣಿತಂ ಸ್ವಕಮ್ ||೧೯೩||

ಇಕ್ಷುವತ್ಸಂಪ್ರಪೀಡ್ಯಂತೇ ಜರ್ಜರೀಕೃತ್ಯ ಮುದ್ಗರೈಃ
ಅಸಿತಾಲವನೈರ್ಘೋರೈಃ ಛಿದ್ಯಂತೇ ಖಂಡಖಂಡಶಃ ||೧೯೪||

ಸೂಚೀಭಿರ್ಭಿನ್ನಸರ್ವಾಂಗಾಸ್ತಪ್ತಶೂಲಪ್ರರೋಪಿತಾಃ
ಸಂಜಲ್ಪಮಾನಾ ಬಹುಶಃ [1]ಕ್ಷಿಪ್ರಂ ತೇ[1] ನ ಮ್ರಿಯಂತಿ ಚ ||೧೯೫||

ಸರ್ವೇಂದ್ರಿಯಾಣಾಂ = [2]ಸಮಸ್ತೇಂ[2]ದ್ರಿಯಂಗಳ ಪ್ರವರ್ತಕಂ ಚ = ದುಶ್ಚಾರಿತ್ರವಹಂಥಾ ವರ್ತನೆಯೂ ಉಕ್ತಂ = ಹೇಳಲುಪಟ್ಟಿತ್ತು. ತಸ್ಮಾತ್ = ಅದುಕಾರಣದ ದೆಸೆಯಿಂದ ಇಂದ್ರಿಯದುಃಖೇನ = ಮನಸ್ಸು ಮೊದಲಹಂಥಾ ಇಂದ್ರಿಯಂಗಳ ಕ್ಲೇಶದಿಂದ ಸುದುಃಖಿತಂ = ಅತಿ ದುಃಖವಹಂಥಾ ತತ್ = ಆ ಬಾಧೆಯು ಜಾಯತೇ = ಆಗುತ್ತಿಹುದು. ||೧೯೨||

ಯೈಃ ಮೂರ್ಖೈಃ = ಆರು ಕೆಲಬರು ಮೂರ್ಖರುಗಳಿಂದ ಅನ್ನಪಾನಂ = ಅನ್ನೋದಕವು ಅದತ್ತಂ = ದಾನವ ಮಾಡಲುಪಡದು. [ಅಪಿ] ಅನುಮೋದಿತಂ ನ = ಸಂತೋಷಿಸಲುಪಡದು. ಸ್ವಮಾಂಸಾನಿ ಚ = ತಮ್ಮತಮ್ಮ ಮಾಂಸಂಗಳನು ಖಾದಂತಿ = ಭಕ್ಷಿಸುತ್ತಿಹರು. ಸ್ವಕಂ = ತಮ್ಮ ಸಂಬಂಧವಹಂಥಾ ಶೋಣಿತಂ = ರಕ್ತವನು ಪಿಬಂತಃ = [3]ಕುಡಿವು[3]ತ್ತಿಹರು. ||೧೯೩||

ಇಕ್ಷುವತ್ = ಕಬ್ಬಿನೋಪಾದಿಯಲ್ಲಿ ಸಂಪ್ರಪೀಡ್ಯಂತೇ = ಆಲೆಯಾಡಿಸಿಕೊಳುತ್ತಿಹರು. ಮುದ್ಗರೈಃ = ಕಬ್ಬುನದ ಡಾಣೆಗಳಿಂದ ಜರ್ಜರೀಕೃತ್ಯ = ಜರ್ಜರಿತವಾಗಿ ಮಾಡಿ ಘೋರೈಃ = ಭಯಂಕರವಹಂಥಾ ಅಸಿತಾಲವನೈಃ = ಅಸಿತಾಲವೆಂಬ ನರಕಂಗಳಿಂದ ಖಂಡಖಂಡಶಃ = ತುಂಡುತುಂಡಾಗಿ ಛಿದ್ಯಂತೇ = ಛೇದಿಸಿಕೊಳುತ್ತಿಹರು. ||೧೯೪||

ಸೂಚೀಭಿಃ = ಸೂಜಿಗಳಿಂದ ಭಿನ್ನಸರ್ವಾಂಗಾಃ = ಹೆಟ್ಟಲುಪಟ್ಟ ಸರ್ವಾಂಗವನುಳ್ಳಂಥಾ ಬಹುಶಃ = ಹಲವು ಪ್ರಕಾರವಾಗಿ ಸಂಜಲ್ಪಮಾನಾಃ = ಬೈಸಿಕೊಳುತಿದ್ದಂಥಾ ಅವರುಗಳಾಗಿ ಕ್ಷಿಪ್ರಂ = ಬೇಗ ತಪ್ತಶೂಲಪ್ರರೋಪಿತಾಃ = ಕಾದ ಶೂಲಗಳಲ್ಲಿ ಸೆಳಸಿಕೊಳುತ್ತಿಹರು. ತೇ ಚ = ಅವರುಗಳು ನ ಮ್ರಿಯಂತಿ = ಸಾವುತ್ತಿರರು.

---

[1] ಕ್ಷಿಪಂತೇ (ಕ) ಮೂಲ.

[2] ಸರ್ವೇಂದ್ರಿ (ಕ) [3] ಪಾನಮಾಡು (ಕ).

ದೇಹಾದುತ್ಪಾಟ್ಯತೇ ಮಾಂಸಂ ಭಿದ್ಯಂತೇಽಸ್ಥೀನಿ ಮುದ್ಗರೈಃ
[1]ದೃಷ್ಟಿ[1]ರಾಕೃಷ್ಯತೇ ತೂರ್ಣಂ ಯಮದೂತೈಃ ಬಲೋತ್ಕಟೈಃ ||೧೯೬||

ನಿರುಚ್ಛ್ವಾಸೇ ನಿರುಚ್ಛ್ವಾಸಾಃ ತಿಷ್ಠಂತಿ ನರಕೇ ಚಿರಮ್
ಉಚ್ಛ್ವಸಂತಃ ಸದೋಚ್ಛ್ವಾಸೇ* ವಾಲುಕೈರ್ವದನಾವೃತಾಃ ||೧೯೭||

ರೌರವೇ ರೋದಮಾನಾಶ್ಚ ಪೀಡ್ಯಂತೇ ವಿವಿಧೈರ್ವಧೈಃ
ಮಹಾರೌರವಪೀಡಾಭಿಃ ಮಹಾಂತೋಽಪಿ ರುದಂತಿ ಚ ||೧೯೮||

ಪಾದೇ ಚಾಸ್ಯೇ ಗುದೇ ಚಾಕ್ಷ್ಣೋಃ ಪಾಣ್ಯೋಃ ಶ್ಚೋರಸಿ ಮಸ್ತಕೇ
ನಿಖನ್ಯಂತೇ ಘನಾಸ್ತೀಕ್ಷ್ಣಾಃ ಸುತಪ್ತಾ ಲೋಹಶಂಕವಃ ||೧೯೯||

ಬಲೋತ್ಕಟೈಃ = ಸತ್ತ್ವದಿಂದ ಹೆಚ್ಚಿದಂಥಾ ಯಮದೂತೈಃ = ಯಮದೂತರುಗಳಿಂದ ದೇಹಾತ್ = ದೇಹದ ದೆಸೆಯಿಂದ ಮಾಂಸಂ = ಮಾಂಸವು ಉತ್ಪಾಟ್ಯತೇ = ಕೀಳಲುಪಡುತ್ತಿಹುದು. ಅಸ್ಥೀನಿ = ಎಲುವುಗಳನು ಮುದ್ಗರೈಃ = ಕಬ್ಬಿನದ ಡಾಣೆಗಳಿಂದ ಭಿದ್ಯಂತೇ = ನುಗ್ಗು ಮಾಡಲುಪಡುತ್ತಿಹುದು. ||೧೯೬||

ನಿರುಚ್ಛ್ವಾಸೇ = ನಿರುಚ್ಛ್ವಾಸವೆಂಬಂಥಾ ನರಕೇ = ನರಕದಲ್ಲಿ ನಿರುಚ್ಛ್ವಾಸಾಃ = ಉಸುರಿಕ್ಕದವರುಗಳಾಗಿ ಚಿರಂ = ಹಿರಿದುಕಾಲ ತಿಷ್ಠಂತಿ = ಇರುತ್ತಿಹರು. ಉಚ್ಛ್ವಾಸೇ = ಉಚ್ಛ್ವಾಸವೆಂಬ ನರಕದಲ್ಲಿ ಸದಾ = ಎಲ್ಲಾಗವೂ ಉಚ್ಛ್ವಸಂತಃ = ಉಚ್ಛ್ವಾಸವನುಳ್ಳವರುಗಳಾಗಿ ವಾಲುಕೈಃ = ವಾಳಲುಗಳಿಂದ ವದನಾವೃತಾಃ = ಬಾಯೊಳಗೆ ಹೊಯಿಸಿಕೊಳ್ಳುತ್ತಿಹರು, ||೧೯೭||

ರೌರವೇ = ರೌರವ ನರಕದಲ್ಲಿ ರೋದಮಾನಾಶ್ಚ = ಅಳುತ್ತಿದ್ದಂಥಾ ಅವರುಗಳಾಗಿ ವಿವಿಧೈಃ ವಧೈಃ = ನಾನಾ ಪ್ರಕಾರವಹಂಥಾ ತಾಡನಂಗಳಿಂದ ಪೀಡ್ಯಂತೇ = ಬಾಧಿಸಿಕೊಳ್ಳುತ್ತಿಹರು. ಮಹಾರೌರವಪೀಡಾಭಿಃ = ಮಹಾರೌರವನರಕದ ಬಾಧೆಗಳಿಂದ ಮಹಾಂತೋಽಪಿ = ಮಹಾ ಹಿರಿಯರುಗಳಾಯಿತ್ತಾದರೂ ರುದಂತಿ ಚ = ಮೊಱೆಯಿಡುತ್ತಿಹರು. ||೧೯೮||

ಪಾದೇ ಚ = ಪಾದದಲ್ಲಿಯೂ ಆಸ್ಯೇ = ಮೋಱೆಯಲ್ಲಿಯೂ ಗುದೇ = ಗುದದಲ್ಲಿಯೂ ಅಕ್ಷ್ಣೋಶ್ಚ = ಕಣ್ಣುಗಳಲ್ಲಿಯೂ ಪಾಣ್ಯೋಃ = ಹಸ್ತಂಗಳಲ್ಲಿ ಉರಸಿ ಚ = ಎದೆಯಲ್ಲಿಯು ಮಸ್ತಕೇ = ನೆತ್ತಿಯಲ್ಲಿ ತೀಕ್ಷ್ಣಾಃ = [2]ಕೂರಿ[2]ತ್ತಹಂಥಾ ಸುತಪ್ತಾಃ = ಅತ್ಯಂತ ಕಾಸಿದಂಥಾ ಘನಾಃ = ದೊಡ್ಡಿತ್ತಹಂಥಾ ಲೋಹಶಂಕವಃ = ಲೋಹದ ಮೊಳೆಗಳು ನಿಖನ್ಯಂತೇ = ಹೆಟ್ಟಲುಪಡುತ್ತಿಹವು. ||೧೯೯||

---

[1] ಧೃಷ್ಟ್ಯೈ (ಘ) [2] ಕರಿ (ಕ) * ವಾಲುಕಾ ಸ್ತ್ರೀಲಿಂಗ. ಇಲ್ಲಿ ಪುಲ್ಲಿಂಗ ಆರ್ಷ.

ಸುತಪ್ತವಾಲುಕಾಯಾಂ ಚ ಪ್ರ[1]ಯೋ[1]ಜ್ಯಂತೇ ಮುಹುರ್ಮುಹುಃ
ಜತುಪಂಕೇ ಭೃಶಂ ತಪ್ತೇ ಕ್ಷಿಪ್ತಾಃ ಕ್ರಂದಂತಿ ವಿಸ್ವರಂ ||೨೦೦||

ಧನೇ ಸತ್ಯಪಿ ಯೇ ದಾನಂ ನ ಪ್ರಯಚ್ಛಂತಿ ತೃಷ್ಣಯಾ
ಅತಿಥಿಂ ಚಾವಮನ್ಯಂತೇ [2]ಕಾಲ[2]ಪ್ರಾಪ್ತಂ ಶಿವಾಶ್ರಮೇ ||೨೦೧||

ತೇ ಲೋಹತೋರಣೇ ಬಧ್ವಾ ಹಸ್ತಪಾದಾವದಾರಿತಾಃ
ವಿಸ್ತಾರಿತಾಂಗಾಃ ಶುಷ್ಯಂತಿ ತಿಷ್ಠಂತ್ಯಬ್ದಶತಂ ನರಾಃ ||೨೦೨||

ಹಸ್ತಪಾದಲಲಾಟೇಷು ಕೀಲಿತಾ ಲೋಹಶಂಕುಭಿಃ
ನಿತ್ಯಂ [3]ಚ ವಿವೃತಂ ವಕ್ತ್ರಂ[3] ಕೀಲಕದ್ವಯಘಾಟಿತಮ್ ||೨೦೩||

ಮುಹುರ್ಮುಹುಃ = ಅಡಿಗಡಿಗೆ ಸುತಪ್ತವಾಲುಕಾಯಾಂ ಚ = ಅತ್ಯಂತ ಕಾಸಿದ ಮಳಲಲ್ಲಿಯೂ ಪ್ರಯೋಜ್ಯಂತೇ = ಕೂಡಲುಪಡುತ್ತಿಹರು. ತಪ್ತೇ = ಕುದಿಯುತ್ತಿದ್ದಂಥಾ ಜತುಪಂಕೇ = ಅರಗಿನೋಪಾದಿಯ ಕೆಸಱಿನಲ್ಲಿ ಕ್ಷಿಪ್ತಾಃ = ನೂಕಿಸಿಕೊಳಲುಪಟ್ಟವರುಗಳಾಗಿ ವಿಸ್ವರಂ = ಗಾಱುಧ್ವನಿಯಾಗಿ ಭೃಶಂ = ಅತ್ಯಂತ ಕ್ರಂದಂತಿ = ಮೊಱೆಯಿಡುತ್ತಿಹರು. ||೨೦೦||

ಯೇ = ಆರು ಕೆಲಬರು ಧನೇ ಸತ್ಯಪಿ = ಧನವುಂಟಾಗುತ್ತಂವಿರಲು ಕಾಲಪ್ರಾಪ್ತಂ = ತತ್ಕಾಲದಲ್ಲಿ ಬಂದಂಥಾ ಶಿವಾಶ್ರಮೇ = ಶಿವಾಶ್ರಮದಲ್ಲಿಯ ಅತಿಥಿಂ ಚ = ಅತಿಥಿಯನು ಕುಱಿತು ತೃಷ್ಣಯಾ = ಲೋಭದಿಂದ ದಾನಂ = ದಾನವನು ನ ಪ್ರಯಚ್ಛಂತಿ = ಕೊಡದೆ ಇಹರು ಅವಮನ್ಯಂತೇ = ಅವಮನ್ನಣೆಯು ಮಾಡುತ್ತಿಹರು. ||೨೦೧||

ತೇ ನರಾಃ = ಆ ಮನುಷ್ಯರುಗಳು ಲೋಹತೋರಣೇ = ಕಬ್ಬುನದ ತೋರಣದಲ್ಲಿ ಬಧ್ವಾ = ಕಟ್ಟಿಸಿಕೊಂಡು ಹಸ್ತಪಾದಾವದಾರಿತಾಃ = ಕೈಕಾಲುಗಳ ಕೊಯಿಸಿಕೊಳುತ್ತಿದ್ದಂಥಾ ಅವರುಗಳಾಗುತ್ತವು ವಿಸ್ತಾರಿತಾಂಗಾಃ = ಹರಹಲುಪಟ್ಟವಯವಗಳನುಳ್ಳವರುಗಳಾಗಿ ಶುಷ್ಯಂತಿ = ಆಱಿಸಿಕೊಳುತ್ತಿಹರು. ಅಬ್ದಶತಂ = ನೂಱುವರುಷ ಪರ್ಯಂತ ತಿಷ್ಠಂತಿ = ಇರುತ್ತಿಹರು. ||೨೦೨||

ಹಸ್ತಪಾದಲಲಾಟೇಷು = ಕೈಕಾಲು ಹಣೆಗಳಲ್ಲಿ ಲೋಹಶಂಕುಭಿಃ = ಕಬ್ಬುನದ ಮೊಳೆಗಳಿಂದ ಕೀಲಿತಾಃ = ಕೀಲಿಸಲುಪಟ್ಟವು ನಿತ್ಯಂ ಚ = ಆವಾಗವು ವಿವೃತಂ = ತೆಱೆಯಲುಪಟ್ಟಂಥ ವಕ್ತ್ರಂ = ಬಾಯಿ ಕೀಲಕದ್ವಯಘಾಟಿತಂ = ಕೀಲೆರಡಱಿಂದ ಬೆಟ್ಟಲುಪಟ್ಟಿತ್ತು. ||೨೦೩||

---

1 ಯು (ಕ) ಮೂಲ 2 ಕಾಲೇ (ಖ) 3 ವಿವೃತವಕ್ತ್ರಂ ಚ (ಖ)

ಕ್ರಿಮಿಭಿಃ ಪ್ರಾಣಿಭಿಶ್ಚೋಗ್ರೈಃ ಲೋಹತುಂಡೈಶ್ಚ ವಾಯಸೈಃ
ಉಪದ್ರವೈಃ ಬಹುವಿಧೈಃ ಮುಖಮಂತಃ ಪ್ರಪೀಡ್ಯತೇ ||೨೦೪||

ಜಿಹ್ವಾವೇಧಪ್ರಬದ್ಧಶ್ಚ[1] ಗಾಢಂ ಶೃಂಖಲಯಾ ಪುನಃ
ತಿಷ್ಠತೇ ಲಂಬಮಾನಶ್ಚ ಲೋಹಭಾರೈಃ[2] ಸುವರ್ತುಳೈಃ ||೨೦೫||

ಶಿಶ್ನೇ ಚ ವೃಷಣೇ ತದ್ವತ್ ಲೋಹಭಾರದ್ವಯಂ ಪುನಃ
ತಿಷ್ಠತೇ ಲಂಬಮಾನಶ್ಚ ಬಾಹುಭ್ಯಾಂ ಚ ಚತುರ್ಗುಣಮ್ ||೨೦೬||

ತತಃ ಸ್ವಮಾಂಸಮುತ್ಕೃ[3]ಷ್ಯ[3] ತಿಲಮಾತ್ರಪ್ರಮಾಣತಃ
ಖಾದಿತುಂ ದೀಯತೇ ತೇಷಾಂ ಸೂಚ್ಯಗ್ರೇಣ ತು ಶೋಣಿತಮ್ ||

ಕ್ರಿಮಿಭಿಃ = ಕ್ರಿಮಿಗಳಿಂದ ಉಗ್ರೈಃ = ಉಗ್ರವಹಂಥಾ ಪ್ರಾಣಿಭಿಃ = ವ್ಯಾಘ್ರಾದಿ ಪ್ರಾಣಿಗಳಿಂದ ಲೋಹತುಂಡೈಃ = [4]ಕಬ್ಬಿನ[4]ದೋಪಾದಿಕೊಕ್ಕನುಳ್ಳಂಥಾ ವಾಯಸೈಶ್ಚ = ಕಾಗೆಗಳಿಂದವೂ ಬಹುವಿಧೈಃ = ನಾನಾ ಪ್ರಕಾರವಹಂಥಾ ಉಪದ್ರವೈಃ = ಬಾಧೆಗಳಿಂದ ಮುಖಮಂತಃ = ಬಾಯೊಳಗೂ ಪ್ರಪೀಡ್ಯತೇ = ಬಾಧಿಸಿಕೊಳಲ್ಪಡುತ್ತಿಹುದು. ||೨೦೪||

ಪುನಃ = ಮರಳಿ ಶೃಂಖಲಯಾ ಚ = ಸಂಕಲೆಯಿಂದವೂ ಗಾಢಂ = ದೃಢವಾಗಿ ಜಿಹ್ವಾವೇಧಪ್ರಬದ್ಧಃ = ನಾಲಗೆಯ ಚುಚ್ಚಿ ಕಟ್ಟಿದಂಥಾ ಲಂಬಮಾನಃ = ನೇಲುತ್ತಿದ್ದಂಥಾ ಸುವರ್ತುಳೈಃ = ಅತಿಬಟುವನುಳ್ಳಂಥಾ ಲೋಹಭಾರಶ್ಚ = ಲೋಹದ ಗುಂಡೂ ತಿಷ್ಠ[5]ತೇ[5] = ಇರುತ್ತಿಹುದು. ||೨೦೫||

ಪುನಃ = ಮರಳಿ ಶಿಶ್ನೇ ಚ = ಶಿಶ್ನಯಲ್ಲಿಯೂ ವೃಷಣೇ ಚ = ವೃಷಣದಲ್ಲಿಯೂ ತದ್ವತ್ = ಆ ಮರ್ಯಾದೆಯಲಿ ಲೋಹಭಾರದ್ವಯಂ = ಲೋಹದ ಗುಂಡೆರಡು ಲಂಬಮಾನಶ್ಚ = ನೇಲುತ್ತಿದ್ದದಾಗಿ ತಿಷ್ಠತೇ = ಇರುತ್ತಿಹುದು. ಬಾಹುಭ್ಯಾಂ ಚ = ತೋಳುಗಳೆರಡರಿಂದ ಚತುರ್ಗುಣಂ = ನಾಲ್ಕು ಲೋಹದ ಗುಂಡು ತಿಷ್ಠತೇ = ಇರುತ್ತಿಹುದು. ||೨೦೬||

ತತಃ = ಅಷ್ಟರಮೇಲೆ ಸೂಚ್ಯಗ್ರೇಣ ತು = ಸೂಜಿಯ ಮೊನೆಯಿಂದವೂ ಸ್ವಮಾಂಸಂ = ತಮ್ಮ ಮಾಂಸವನು ತಿಲಮಾತ್ರ ಪ್ರಮಾಣತಃ = ಎಳ್ಳಷ್ಟು ಪ್ರಮಾಣವನು ಶೋಣಿತಂ = ರಕ್ತವನು ಸಮುತ್ಕೃಷ್ಯ = ತೆಗೆದು ತೇಷಾಂ = ಅವರುಗಳಿಗೆ ಖಾದಿತುಂ = ತಿನಿಸಲೋಸ್ಕರ ದೀಯತೇ = ಕೊಡಲುಪಡುತ್ತಿಹುದು. ||೨೦೭||

1 ಪ್ರಬಾಧಾಭಿಃ (ಘ) 2 ರೈ (ಘ) 3 ತ್ಯ (ಘ) ಮಾತ್ರ

4 ಕಬ್ಬಿಣ (ಕ) 5 ತಿ (ಕ)

ಯದಾ ನಿರ್ಮಾಂಸತಾಂ [1]ಪ್ರಾಪ್ತಾಃ ಕಾಲೇನ ಬಹುನಾ [2]ನರಾಃ
ತತಃ ಕ್ಷಾರೇಣ ದೀಪ್ತೇನ ತಚ್ಛರೀರಂ ಪ್ರಲಿಪ್ಯತೇ ||೨೦೮||

ಕ್ಲಿದ್ಯಂತೇ ವರ್ಷಧಾರಾಭಿಃ ಶೋಷ್ಯಂತೇ ವಾಯುನಾ ತತಃ
ಪುನಸ್ಸಿಚ್ಯಂತಿ ತೈಲೇನ ಸುತಪ್ತೇನ ಸಮಂತತಃ ||೨೦೯||

ಪಚ್ಯಂತೇ ವಹ್ನಿನಾ ಭೂಯೋ ದೂರಸ್ಥೇನ ಶನೈಶ್ಶನೈಃ
ಭೃಶಂ ಬುಭುಕ್ಷಯಾ ಪೀಡಾ ಕಷ್ಟಾಚ್ಚೈವ ಪಿಪಾಸಯಾ ||೨೧೦||

ಅತ್ಯುಷ್ಣೇನಾತಿಶೀತೇನ ಪಾಪಾನಾಂ ಮರಣೇನ ಚ
ನಿಶ್ಶೇಷಯಾತನಾಭಿಶ್ಚ ಪೀಡ್ಯಂತೇ ಕ್ರಮಶಃ ಪುನಃ ||೨೧೧||

ಯದಾ = ಎಂದಿಂಗೆ ನರಾಃ = ಮನುಷ್ಯರುಗಳು ಬಹುನಾ ಕಾಲೇನ = ಬಹಳ ಕಾಲದಿಂದ ನಿರ್ಮಾಂಸತಾಂ = ಮಾಂಸವಿಲ್ಲದೆಯಿಹತನವನು ಪ್ರಾಪ್ತಾಃ = ಎಯ್ದುವರು ತತಃ = ಅಷ್ಟರಿಮೇಲೆ ದೀಪ್ತೇನ ಕ್ಷಾರೇಣ = ಕಾದ ಉಪ್ಪಿನಿಂದ ತಚ್ಛರೀರಂ = ಅವರುಗಳ ಶರೀರವು ಪ್ರಲಿಪ್ಯತೇ = ಹೂಸಲುಪಡುತ್ತಿಹುದು. ||೨೦೮||

ತತಃ = ಅಷ್ಟರಿಮೇಲೆ ವರ್ಷಧಾರಾಭಿಃ = ಮಳೆಯ ಸಂತ [ತ]ಧಾರೆಗಳಿಂದ ಕ್ಲಿದ್ಯಂತೇ = ನೆನವುತ್ತಿಹರು. ಪುನಃ = ಮರಳಿ ವಾಯುನಾ = ವಾಯುವಿನಿಂದ ಶೋಷ್ಯಂತೇ = ಆರುತ್ತಿಹರು. ತತಃ = ಅಷ್ಟರಿಮೇಲೆ ಸುತಪ್ತೇನ ತೈಲೇನ = ಕಾದ ಎಣ್ಣೆಯಿಂದ ಸಿಚ್ಯಂತೇ = ಚೆಲ್ಲಿಸಿಕೊಳುತ್ತಿಹರು. ||೨೦೯||

ಭೂಯಃ = ಮರಳಿ ದೂರಸ್ಥೇನ = ದೂರದಲ್ಲಿ ಇದ್ದಂಥಾ ವಹ್ನಿನಾ = ಕಿಚ್ಚಿನಿಂದ ಶನೈಃ ಶನೈಃ = ಮೆಲ್ಲಮೆಲ್ಲನೆ ಪಚ್ಯಂತೇ = ಬೇವುತ್ತಿಹರು. ಬುಭುಕ್ಷಯಾ = ಹಸಿವಿನಿಂದ ಭೃಶಂ = ಅತ್ಯಂತ ಪೀಡಾ ಚ = ಬಾಧೆಯುಹುದು. ಪಿಪಾಸಯಾ = ನೀರಡಿಕೆಯಿಂದ ಕಷ್ಟಾಚ್ಚೈವ = ಬಾಧೆಯುಹುದು. ಅವ್ಯಯ ಪದವು ಉಚಿತಾರ್ಥವನುಡಿವುದು. ||೨೧೦||

ಮರಣೇನ = ಕೊಲುವಂಥಾ [3]ಅತ್ಯುಷ್ಣೇನ = ಅತಿಉಷ್ಣದಿಂದ ಅತಿಶೀತೇನ ಚ = ಅತಿಚಳಿಯಿಂದವೂ ನಿಶ್ಶೇಷಯಾತನಾಭಿಶ್ಚ = ಸಮಸ್ತ ಯಾತನೆಗಳಿಂದವೂ ಕ್ರಮಶಃ = ತಱುವಾಯಿಂದ ಪುನಃ = ಮರಳಿ ಪಾಪಾನಾಂ = ಪಾಪಿಗಳಿಗೆ ಪೀಡ್ಯಂತೇ = ಬಾಧೆಗಳಾಗುತ್ತಿಹವು. ||೨೧೧||

---

1 ಪ್ರಾಪ್ತಃ (ಘ) 2 ನರಃ (ಘ) 3 ಲುಪ್ತ (ಕ).

ಇತಿ ಚಿತ್ರವಧೈರ್ಘೋರೈಃ ಬಾಧ್ಯಮಾನಾಃ ಸ್ವಕರ್ಮಭಿಃ
[1]ಮ್ರಿ[1]ಯಂತೇ ನೈವ ಪಾಪಿಷ್ಠಾಃ ಯಾವತ್ಪಾಪಸ್ಯ ಸಂಕ್ಷಯಃ ||೨೧೨||

ಪುತ್ರಮಿತ್ರಕಳತ್ರಾರ್ಥಂ ಯದಪುಣ್ಯಂ ಕೃತಂ ತ್ವಯಾ
ಏಕಾಕೀ ದಹ್ಯಸೇ ತೇನ ನ ತು ಪಶ್ಯಸಿ ತಾನಿಹ ||೨೧೩||

ಆತ್ಮನೈವ ಕೃತಂ ಪಾಪಂ ಭೋಕ್ತವ್ಯಂ ಧ್ರುವಮಾತ್ಮನಾ
[2]ತ[2]ತ್ಕಿಮಾತ್ಮೋಪಘಾತಾರ್ಥಂ ಮೂಢ ಪಾಪಂ ಕೃತಂ ತ್ವಯಾ ||

ಪಾಪೇನ ಹಿ ಧ್ರುವಂ ಯಾಂತಿ ನರಕೇಷು ಸ್ವಯಂ ನರಾಃ
ಯಃ ಕರೋತಿ ನರಃ ಪಾಪಂ [3]ತಸ್ಯಾತ್ಮಾ ಧ್ರುವಮಪ್ರಿಯಃ[3] ||೨೧೫||

ಇತಿ = [4]ಈ ಪ್ರಕಾರದಲ್ಲಿ ಘೋರೈಃ = ಭಯಂಕರವಹಂಥಾ[4] ಚಿತ್ರವಧೈಃ = ನಾನಾ ಪ್ರಕಾರವಹಂಥಾ ಕೊಲೆಗಳಿಂದ ಪಾಪಿಷ್ಠಾಃ = ಪಾಪವ ಮಾಡಿದವರುಗಳು ಯಾವತ್ = ಎಲ್ಲಿ ಪರ್ಯಂತರ ಪಾಪಸ್ಯ = ಪಾಪದ ಸಂಕ್ಷಯಃ = ಲಯವು ತಾವತ್ = ಅಲ್ಲಿ ಪರ್ಯಂತವು ಸ್ವಕರ್ಮಭಿಃ = ತಮ್ಮ ಕರ್ಮಂಗಳಿಂದ ಬಾಧ್ಯಮಾನಾಃ = ಬಾಧಿಸಿಕೊಳುತ್ತಿಹರು [5][ನೈವ][5]ಮ್ರಿಯಂತೇ = ಸಾಯರು. ||೨೧೨||

ಅನೂಚಾನಃ = ಷಡಂಗಸಹಿತವಾಗಿ ಓದಿದ್ದಂಥಾ ಪ್ರಸನ್ನಾತ್ಮಾ = ನಿರ್ಮಲಚಿತ್ತವನುಳ್ಳಂಥಾ ಶಿವದೀಕ್ಷಾಭಿಷೇಚಿತಃ = ಶಿವದೀಕ್ಷೆಯಲ್ಲಿ ಅಭಿಷೇಕವಾದಂಥಾ ಶಿವಾಗಮಜ್ಞಃ = ಶಿವಾಗಮಂಗಳನು ಬಲ್ಲಂಥಾ ಮತಿಮಾನ್ = ಮತಿಯನುಳ್ಳಂಥಾ ಶಿವಪೂಜಾಪರಾಯಣಃ = ಶಿವಪೂಜೆಯಲ್ಲಿ ತತ್ಪರನಹಂಥಾ. ||೮||

ರುದ್ರಾಕ್ಷಮಾಲಾಂ = ರುದ್ರಾಕ್ಷಿಗಳ ಮಾಲೆಯನು ಬಿಭ್ರಾಣಃ = ಧರಿಸುತ್ತಂವಿದ್ದಂಥಾ ತ್ರಿಪುಂಡ್ರಾಂಕಿತಮಸ್ತಕಃ = ತ್ರಿಪುಂಡ್ರದಿಂದ ಅಂಕಿಸಲುಪಟ್ಟ ಮಸ್ತಕವನುಳ್ಳಂಥಾ ವಿಶುದ್ಧದೇಹಃ = ಅತ್ಯಂತ ಶುದ್ಧ ದೇಹವನುಳ್ಳಂಥಾ ಕುಲಜಃ = ಸತ್ಕುಲಜನಹಂಥಾ ಶಿವಾಚಾರಸಮನ್ವಿತಃ = ಶಿವಾಚಾರಂಗಳಿಂದ ಕೂಡಲ್ಪಟ್ಟಂಥಾ, ವೇದಶಾಸ್ತ್ರಾರ್ಥತತ್ತ್ವಜ್ಞಃ = ವೇದಶಾಸ್ತ್ರಾರ್ಥಂಗಳ ನಿಶ್ಚಯವನುಳ್ಳಂಥಾ ಜ್ಞಾನವಾನ್ = ಜ್ಞಾನವನುಳ್ಳಾತನು ಗುರುಃ = ಶ್ರೀಗುರುವೆಂದು ಉಚ್ಯತೇ = ಹೇಳಲ್ಪಡುತ್ತಿಹನು. ||೯||

ಗುಣವಾನ್ = ಗುಣವಾನ್ನುವಹಂಥಾ ಪ್ರಾಜ್ಞಃ = ಪ್ರಾಜ್ಞನಹಂಥಾ ಪರಮಾನಂದಭಾಸಕಃ = ಪರಮಾನಂದದಿಂದ ಒಪ್ಪುತ್ತಂವಿದ್ದಂಥಾ ತತ್ತ್ವವಿತ್ =

---

[1] ಬಿಭ್ರಚ್ಚತ್ರಿ (ಖ.ಗ.ಚ). [2] ಪರಾನಂದಾವಭಾಸಕಃ (ಘ)

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶಿನಮ್
ಗುರುಂ ತಮೇವ ಪ್ರಣಮೇನ್ನಾಪರಂ ಮತಿಮಾನ್ನರಃ ||೧೧||

ಗುರುಶ್ಚ [1]ಸ್ವಾಶ್ರಮೇ[1] ಶಿಷ್ಯಂ ವರ್ಷಮೇಕಂ ಪರೀಕ್ಷಯೇತ್
[2]ಪ್ರಾಣದ್ರವ್ಯಪ್ರದಾ[2]ನಾದ್ಯೈರಾದೇಶೈಶ್ಚ ಸಮಾಸತಃ ||೧೨||

ಉತ್ತಮಾಂಶ್ಚಾಧಮೇ ಕೃತ್ವಾ ನೀಚಾನುತ್ತಮಕರ್ಮಣಿ
ಆಕೃಷ್ಟಾಸ್ತಾಡಿತಾ ವಾಪಿ ಯೇ ವಿಷಾದಂ ನ ಯಾಂತ್ಯ[3]ಹೋ[3]
ತೇ ಯೋಗ್ಯಾಸ್ಸಂಯುತಾಶ್ಶುದ್ಧಾಃ ಶಿವಸಂಸ್ಕಾರಕರ್ಮಣಿ ||೧೩||

ಷಟ್ತ್ರಿಂಶತ್ತತ್ತ್ವವನು ಬಲ್ಲಂಥಾ ಶಿವಸಂಯುಕ್ತಃ = ಶಿವನೊಡನೆ ಕೂಡಲ್ಪಟ್ಟಂಥಾ ಗುರುಶ್ಚ = ಆಚಾರ್ಯನು ಮುಕ್ತಿದಃ = ಮುಕ್ತಿಯ ಕೊಡುವಾತನು. ಅಪರಶ್ಚ = ಮತ್ತೊಬ್ಬನು ನ ತು = ಕೊಡಲಱಿಯನು. ||೧೦||

ನಿರಪೇಕ್ಷಂ = ಅಪೇಕ್ಷೆಯಿಲ್ಲದೇ ಇದ್ದಂಥಾ ಮುನಿಂ = ಜ್ಞಾನಿಯಹಂಥಾ ಶಾಂತಂ = ಶಾಂತನಹಂಥಾ ನಿರ್ವೈರಂ = ವೈರವಿಲ್ಲದೇ ಇದ್ದಂಥಾ ಸಮದರ್ಶನಂ = ಶತ್ರುಮಿತ್ರರುಗಳನು [4]ಸಮ[4]ವಾಗಿ ಕಾಣುತ್ತಂವಿದ್ದಂಥಾ ತಂ ಗುರುಮೇವ = ಆ ಗುರುವನೇ ಮತಿಮಾನ್ನರಃ = ಮತಿವಾನ್ನುವಹಂಥಾ ಮನುಷ್ಯನು ಪ್ರಣಮೇತ್ = ನಮಸ್ಕರಿಸೂದು. ಅಪರಂ = ಮತ್ತೊಬ್ಬನನು ಕುಱಿತು ನ ಪ್ರಣಮೇತ್ = ನಮಸ್ಕರಿಸಲಾಗದು. ||೧೧||

ಗುರುಶ್ಚ = ಆಚಾರ್ಯನು ಸ್ವಾಶ್ರಮೇ = ತನ್ನ ಸ್ಥಾನದಲ್ಲಿ ಶಿಷ್ಯಂ = ಶಿಷ್ಯನನು ಪ್ರಾಣದ್ರವ್ಯಪದಾನಾದ್ಯೈಃ = ಪ್ರಾಣ ಅರ್ಥಂಗಳಿಗೆ ಅಳುಪದಿರುಹ ಮೊದಲಾಗಿದ್ದಂಥಾವಱಿಂದ ಆದೇಶೈಶ್ಚ = ಆಜ್ಞೆಗಳಿಂದವೂ ಸಮಾಸತಃ = [ಅ] ವಿಸ್ತರವಾಗಿ ಏಕಂ ವರ್ಷಂ = ಒಂದು ವರ್ಷವು ಪರೀಕ್ಷಯೇತ್ = ಪರೀಕ್ಷಿಸೂದು. ||೧೨||

ಉತ್ತಮಾನ್ = ಉತ್ತಮರುಗಳನು ಅಧಮೇ = ಅಧಮವ್ಯಾಪಾರದಲ್ಲಿ ನೀಚಾನ್ = ನೀಚರುಗಳನು ಉತ್ತಮಕರ್ಮಣಿ = ಉತ್ತಮವಹ ವ್ಯಾಪಾರದಲ್ಲಿ ಕೃತ್ವಾ ಚ = ಮಾಡಿಯು ಯೇ = ಆರು ಕೆಲಬರು ಆಕೃಷ್ಟಾಃ = ಗುರುವಿಂದ ಎಳಸಿಕೊಳಲುಪಟ್ಟವರುಗಳಾಗಿ ತಾಡಿತಾ ವಾಪಿ = ಹೊಡಸಿಕೊಳಲು ಪಟ್ಟವರು

---

[1] ಸ್ವಾಶ್ರಿತಂ (ಘ) ಮೂಲಪಾಠ. ಸ್ವಾಶ್ರಮೇ (ಘ) ಪಾಠಾಂತರ.
[2] ಪ್ರಾಣಪ್ರವ್ಯ ಪ್ರದಾ (ಘ) [3] ಪಿ (ಘ) [4] ಸಮಾನ (ಕ)

ಪುತ್ರಮಾತೃಪಿತೃಭ್ರಾತೃದಾರಾಬಂಧುಜನಾಶ್ಚ ಯೇ
ಏಕ ಏವ ಗುರುಸ್ತೇಷಾಮನ್ಯಥಾ ನರಕಂ ವ್ರಜೇತ್ ||೧೪||

ಪತಿಪತ್ನೀಭ್ರಾತೃಪುತ್ರಾಃ ದಾಸ್ಯೋ ಗೃಹಚರಾಶ್ಚ ಯೇ
ಏಕ ಏವ ಗುರುಸ್ತೇಷಾಂ ದೀಕ್ಷೈಕಾ ತು ವಿಶಿಷ್ಯತೇ ||೧೫||

ಚತ್ವಾರೋ ಋತ್ವಿಜಸ್ತತ್ರ ತಸ್ಯಾಚಾರ್ಯಸ್ಯ ಸಮ್ಮತಾಃ
ಅನಿಂದಿತಚರಿತ್ರಾಸ್ಸ್ಯುಃ ಶಿವಾರಾಧನತತ್ಪರಾಃ ||೧೬||

ಆದಿಷ್ಟೋ ಗುರುಣಾ ಶಿಷ್ಯಃ ಪ್ರಭಾತೇ ಪುಣ್ಯವಾಸರೇ
ವಿಧಾಯ ಮಂಗಳಸ್ನಾನಂ ಧೌತವಸ್ತ್ರಪರಿಚ್ಛದಃ ||೧೭||

ಗಳಾಗಿಯು ವಿಷಾದಂ = ದುಃಖವನು ನ ಯಾಂತಿ = ಎಯ್ದುತ್ತಿರರು. ಅಹೋ ! = ಆಶ್ಚರ್ಯ. ಸಂಯತಾಃ = ನಿಯತರುಗಳಹಂಥಾ ಶುದ್ಧಾಃ = ಶುದ್ಧರುಗಳಹಂಥಾ ತೇ = ಅವರುಗಳು ಶಿವಸಂಸ್ಕಾರಕರ್ಮಣಿ = ಶಿವದೀಕ್ಷೆಯ ವ್ಯಾಪಾರದಲ್ಲಿ ಯೋಗ್ಯಾಃ = ಯೋಗ್ಯರುಗಳಹರು. ||೧೩||

ಪುತ್ರಮಾತೃಪಿತೃಭ್ರಾತೃದಾರಾಬಂಧುಜನಾಃ = ಮಗ ತಾಯಿ ತಂದೆ ಒಡೆಹುಟ್ಟಿದವರು ಹೆಂಡತಿ ಬಾಂಧವರುಗಳು [1]ಯೇ ಚ = ಆರು ಕೆಲಬರುಂಟು. ತೇಷಾಂ = ಅವರುಗಳಿಗೆ[1] ಏಕ ಏವ = ಒಬ್ಬನೇ ಗುರುಃ = ಆಚಾರ್ಯನಾಗಬೇಕು. ಅನ್ಯಥಾ = ಭೇದಿತ ಗುರುವಾದ ಪಕ್ಷದಲ್ಲಿ ನರಕಂ = ನರಕವನು ವ್ರಜೇತ್ = ಎಯ್ದುವನು.

ಪತಿಪತ್ನೀ ಭ್ರಾತೃಪುತ್ರಾಃ = ಗಂಡ ಹೆಂಡತಿ ಒಡೆಹುಟ್ಟಿದವರು ಮಕ್ಕಳುಗಳು ದಾಸ್ಯಃ = ತೊತ್ತಿರುಗಳು ಗೃಹಚರಾಃ = [2]ಬಂಟರುಗಳು[2] ಯೇ ಚ = ಆರು ಕೆಲಂಬರುಗಳುಂಟು ತೇಷಾಂ = ಅವರುಗಳಿಗೆ[3] ಏಕ ಏವ = ಒಬ್ಬನೇ ಗುರುಃ = ಆಚಾರ್ಯನು. ಏಕಾ ದೀಕ್ಷಾ ತು = ಒಂದೇ ದೀಕ್ಷೆಯು ವಿಶಿಷ್ಯತೇ = ವಿಶೇಷವಾಗಲುಪಡುತ್ತಿಹುದು. ||೧೫||

ತತ್ರ = ಆ ದೀಕ್ಷಾ ಕಾಲದಲ್ಲಿ ತಸ್ಯ ಆಚಾರ್ಯಸ್ಯ = ಆ ಆಚಾರ್ಯಂಗೆ ಅನಿಂದಿತಚರಿತ್ರಾಃ = ನಿಂದೆಯಿಲ್ಲದೇ ಇದ್ದ ಚಾರಿತ್ರವನುಳ್ಳಂಥಾ ಶಿವಾರಾಧನತತ್ಪರಾಃ = ಶಿವನನರ್ಚಿಸುವಲ್ಲಿ ತಾತ್ಪರ್ಯವನುಳ್ಳಂಥಾ ಚತ್ವಾರಃ = ನಾಲ್ವರು ಋತ್ವಿಜಃ = ಋತ್ವಿಕ್ಕುಗಳು ಸಮ್ಮತಾಃ = ಬೇಕಾದವರುಗಳುಸ್ಯುಃ = ಅಹರು. ||೧೬||

ಗುರುಣಾ = ಗುರುವಿನಿಂದ ಶಿಷ್ಯಃ = ಶಿಷ್ಯನು ಆದಿಷ್ಟಃ = ಆಜ್ಞಾಪಿಸಲ್ಪಟ್ಟಾತನಾಗಿ ಪುಣ್ಯವಾಸರೇ = ಪುಣ್ಯದಿವಸದಲ್ಲಿ ಪ್ರಭಾತೇ = ಪ್ರಾತಃಕಾಲದಲಿ

---

[1] ಲುಪ್ತ (ಕ) [2] ಲುಪ್ತ (ಕ) [3] ಲುಪ್ತ (ಕ)

ವಿತ್ತಾನುಸಾರಾತ್ಸೌವರ್ಣ್ಯೈರಲಂಕಾರೈರಲಂಕೃತಃ
ಸುಗಂಧಿಭಿರ್ನವೈರ್ಮಾಲ್ಯೈಃ ಪುಷ್ಪೈರ್ವಿಹಿತಶೇಖರಃ ||೧೮||

ಸಮಸ್ತಸಂಪತ್ಸಂಪ್ರಾಪ್ತಿಹೇತುಭಿರ್ಭಸಿತೈಸ್ಸಿತೈಃ
ಲಲಾಟಾದಿಕ್ರಮೇಣೈವ ಕುರ್ಯಾತ್ತ್ರೈಪುಂಡ್ರಕಂ ಮುದಾ ||೧೯||

ಉಪೇತ್ಯಾಚಾರ್ಯಪಾದಾಬ್ಜೇ ಪ್ರಣಮ್ಯ ತದನಂತರಮ್
ಪೂಜಯೇತ್ಸ್ವರ್ಣ[1]ಪುಷ್ಪಾ[1]ದ್ಯೈಃ ಭಕ್ತ್ಯಾ ವಿತ್ತಾನುಸಾರತಃ ||೨೦||

ಸ್ನಾತಾನಲಂಕೃತಾನ್ ಶುದ್ಧವಾಸಸೋ ಋತ್ವಿಜಸ್ತ[2]ತಃ[2]
ಪುಷ್ಪಾಕ್ಷತವಿಭೂತ್ಯಾದ್ಯೈಃ ಚತುರಸ್ತಾನ್ ಪ್ರಪೂಜಯೇತ್ ||೨೧||

ಮಂಗಳಸ್ನಾನಂ = ಮಂಗಳ ಮಜ್ಜನವನು ವಿಧಾಯ = ಮಾಡಿ ಧೌತವಸ್ತ್ರಪರಿಚ್ಛದಃ = [3]ಮಡಿಮಾಡಿದ್ದ ಶುಭ್ರ[3]ವಸ್ತ್ರವನುಟ್ಟುಕೊಂಬುದು. ||೧೭||

ವಿತ್ತಾನುಸಾರಾತ್ = ವಿತ್ತಾನುಸಾರದ ದೆಸೆಯಿಂದ ಸೌವರ್ಣ್ಯೈಃ = ಸುವರ್ಣಮಯವಹಂಥಾ ಅಲಂಕಾರೈಃ = ಆಭರಣಂಗಳಿಂದ ಅಲಂಕೃತಃ = ಅಲಂಕರಿಸಲ್ಪಟ್ಟಾತನಹುದು. ಸುಗಂಧಿಭಿಃ = ಅತ್ಯಂತ ಪರಿಮಳವನುಳ್ಳಂಥಾ ನವೈಃ = ಹೊಸ್ತ [ಹೊಸತ] ಹಂಥಾ ಪುಷ್ಪೈಃ ಮಾಲ್ಯೈಃ = ಪುಷ್ಪಮಾಲೆಗಳಿಂದ ವಿಹಿತಶೆ ಖರಃ = ಧರಿಸಲ್ಪಟ್ಟ [4]ಶಿರಸ್ಸ[4]ನುಳ್ಳಾತನಹುದು. ||೧೮||

ಸಮಸ್ತಸಂಪತ್ಸಂಪ್ರಾಪ್ತಿಹೇತುಭಿಃ = ಸಮಸ್ತ ಐಶ್ವರ್ಯಂಗಳಹುದಕ್ಕೆ ಕಾರಣವಹಂಥಾ ಸಿತೈಃ = ಬಿಳಿದಹಂಥಾ ಭಸಿತೈಃ = ವಿಭೂತಿಗಳಿಂದ ಲಲಾಟಾದಿಕ್ರಮೇಣೈವ = ಲಲಾಟ ಮೊದಲಾದ ಸ್ಥಾನಂಗಳ ಕ್ರಮದಿಂದ ತ್ರೈಪುಂಡ್ರಕಂ = ತ್ರಿಪುಂಡ್ರಧಾರಣವನು ಮುದಾ = ಸಂತೋಷದಿಂದ ಕುರ್ಯಾತ್ = ಮಾಡೂದು.

ಆಚಾರ್ಯಪಾದಾಬ್ಜೇ = ಆಚಾರ್ಯನ ಪದಕಮಲವೆರಡನು ಉಪೇತ್ಯ = ಎಯ್ದಿ, ಪ್ರಣಮ್ಯ = ನಮಸ್ಕರಿಸಿ, ತದನಂತರಂ = ಅನಂತರದಲ್ಲಿ ವಿತ್ತಾನುಸಾರತಃ = ದ್ರವ್ಯವುಂಟಾದ ಹಾಂಗೆ ಸ್ವರ್ಣಪುಷ್ಪಾದ್ಯೈಃ = ಸುವರ್ಣಪುಷ್ಪ ಮೊದಲಾದಂಥಾ ಅವಱಿಂದ ಭಕ್ತ್ಯಾ = ಭಕ್ತಿಯಿಂದ ಪೂಜಯೇತ್ = ಪೂಜಿಸೂದು. ||೨೦||

ತತಃ = ಅನಂತರದಲ್ಲಿ ಸ್ನಾತಾನ್ = ಸ್ನಾನವ ಮಾಡಿದಂಥಾ ಅಲಂಕೃತಾನ್ = ಅಲಂಕಾರವ ಮಾಡಿಕೊಂಡಂಥಾ ಶುದ್ಧವಾಸಸಃ = ಶುದ್ಧವಹ ವಸ್ತ್ರಂಗಳನುಳ್ಳಂಥಾ ತಾನ್ ಚತುರಃ ಋತ್ವಿಜಃ = ಆ ನಾಲ್ವರು ಋತ್ವಿಕ್ಕುಗಳನು ಪುಷ್ಪಾಕ್ಷತವಿಭೂತ್ಯಾ

---

[1] ಪೂಜಾ (ಘ) [2] ಥಾ (ಘ)

[1] ಡಣಿಬವಹ (ಖ.ಚ.) [2] ಶಿರಸ್ಸು ಕಿರೀಟವ (ಕ)

ವಿಭೂತಿಂ ಶಿವಭಕ್ತೇಭ್ಯಃ ಸರ್ವೇಭ್ಯಸ್ತದನಂತರಮ್
ವೃದ್ಧಾನುಕ್ರಮತೋ ದತ್ವಾ ಪುಷ್ಪಾದ್ಯೈಸ್ಸಮ್ಯಗರ್ಚಯೇತ್ ||೨೨||

ಅಥ ತೇಭ್ಯಸ್ಸಮಸ್ತೇಭ್ಯೋ ದೇಶಿಕೇಂದ್ರಪುರಸ್ಸರಮ್
[1]ಯಥಾ[1] ಪ್ರದಕ್ಷಿಣಂ [2]ಭಕ್ತ್ಯಾ[2] ತಾಂಬೂಲಾನಿ ಸಮರ್ಪಯೇತ್ ೨೩||

ತತಃ [3]ಪ್ರ[3]ಕಲ್ಪಿತೇ ಚಾಥ ಮಂಟಪೇ ವರ್ಣಮಂಡಲೇ
ಪಂಚಸ್ವರ್ಣಾದಿಕಲಶಾನಾಚಾರ್ಯಃ ಸ್ಥಾಪಯೇನ್ನವಾನ್ ||೨೪||

ಏಕಂ ಮಧ್ಯೇ ಚತುಷ್ಕೋಣೇಷ್ವಿತರಾಂಸ್ತಾನ್ಪ್ರ[4]ಪೂಜ[4]ಯೇತ್
ಪ್ರತ್ಯೇಕಂ ನವವಸ್ತ್ರೇಣ ವೇಷ್ಟಯೇದ್ದೇಶಿಕೋತ್ತಮಃ ||೨೫||

ದ್ಯೈಃ = ಪುಷ್ಪ ಅಕ್ಷತೆ ವಿಭೂತಿ ಮೊದಲಾದಂಥಾ ಅವಱಿಂದ ಪ್ರಪೂಜಯೇತ್ = ಲೇಸಾಗಿ ಪೂಜಿಸೂದು. ||೨೧||

ತದನಂತರಂ = ಅದಱ ತಱುವಾಯಲ್ಲಿ ಸರ್ವೇಭ್ಯಃ = ಸಮಸ್ತರಹಂಥಾ ಶಿವಭಕ್ತೇಭ್ಯಃ = ಶಿವಭಕ್ತರಿಗೋಸ್ಕರ ವಿಭೂತಿಂ = ಶ್ರೀವಿಭೂತಿಯನು ವೃದ್ಧಾನುಕ್ರಮತಃ = ಹಿರಿಯರುಗಳು ಹಿಡಿದು ಕ್ರಮದಿಂದ ದತ್ವಾ ಕೊಟ್ಟು ಪುಷ್ಪಾದ್ಯೈಃ = ಪುಷ್ಪ ಮೊದಲಾದಂಥಾ ಅವಱಿಂದ [ಸಮ್ಯಕ್ = ಲೇಸಾಗಿ ಅರ್ಚಯೇತ್] = ಅರ್ಚಿಸೂದು. ||೨೨||

ಅಥ = ಅನಂತರದಲ್ಲಿ ದೇಶಿಕೇಂದ್ರ ಪುರಸ್ಸರಂ = ಆಚಾರ್ಯ ಮೊದಲುಗೊಂಡು ಸಮಸ್ತೇಭ್ಯಃ = ಸಮಸ್ತರಹಂಥಾ ತೇಭ್ಯಃ = ಆ ಶಿವಭಕ್ತರುಗಳಿಗೋಸ್ಕರ ಯಥಾ ಪ್ರದಕ್ಷಿಣಂ = ಪ್ರದಕ್ಷಿಣ ತಪ್ಪದೆ ಭಕ್ತ್ಯಾ = ಭಕ್ತಿಯಿಂದ ತಾಂಬೂಲಾನಿ = ತಾಂಬೂಲಂಗಳನು ಸಮರ್ಪಯೇತ್ = ಸಮರ್ಪಿಸೂದು. ||೨೩||

ತತಃ = ಅನಂತರದಲ್ಲಿ ಪ್ರಕಲ್ಪಿತೇ = ಮಾಡಲುಪಟ್ಟಂಥಾ ಮಂಟಪೇ ಚ = ಮಂಟಪದಲ್ಲಿಯೂ ಅಥ = ಅನಂತರದಲ್ಲಿ ವರ್ಣಮಂಡಲೇ = ಪಂಚವರ್ಣಿಗೆಯ ಸಮೂಹದ ಮಂಡಲದಲ್ಲಿ ಆಚಾರ್ಯಃ = ಆಚಾರ್ಯನು ನವಾನ್ = ಹೊಸತಹಂಥಾ ಪಂಚ = ಅಯಿದು ಸ್ವರ್ಣಾದಿ ಕಳಶಾನ್ = ಸುವರ್ಣ ಮೊದಲಾದಂಥಾ ಕಳಶಂಗಳನು ಸ್ಥಾಪಯೇತ್ = ಇರಿಸೂದು. ||೨೪||

ದೇಶಿಕೋತ್ತಮಃ = ಆಚಾರ್ಯನು ಮಧ್ಯೇ = ಮಧ್ಯದಲ್ಲಿ ಏಕಂ = ಒಂದು ಕಳಶವನು ಚತುಷ್ಕೋಣೇಷು = ನಾಲ್ಕು ಕಡೆಯಲ್ಲಿ ಇತರಾನ್ = ಉಳಿ

---

1 ಭಕ್ತ್ಯಾ (ಘ) 2 ಕುರ್ಯಾತ್ (ಘ) 3 ಪ್ರಾ (ಘ) 4 ಕಲ್ಪ (ಘ)

ತೇಷು ಸ್ವರ್ಣಾನಿ ರತ್ನಾನಿ ಕ್ಷಿಪ್ತ್ವಾ ಸಮ್ಯಕ್ ಪ್ರ[1]ಪೂಜ[1]ಯೇತ್
ನವಭಿಸ್ತಂತುಭಿಶ್ಶುದ್ಧೈಃ ಪಂಚ ತಾನ್ ಪರಿವೇಷ್ಟಯೇತ್ ||೨೬||

ಆಚಾರ್ಯೋ ಮಧ್ಯಮಸ್ಯಾರ್ಚಾಂ ಕುರ್ಯಾತ್ಪುಷ್ಪಾಕ್ಷತಾದಿಭಿಃ
ಋತ್ವಿಜಃ ಪ್ರೀತಮನಸೋ [2]ವಿದಧ್ಯಾದಿ[2]ತರಾರ್ಚನಮ್ ||೨೭||

ತೇಷು ತೀರ್ಥಾಂಬುಪೂರ್ಣೇಷು ವಿದಧ್ಯಾದಾಮ್ರಪಲ್ಲವಾನ್
ದೂರ್ವಾಂಕುರಾನ್ಸಪೂಗಾನಿ ನಾಗವಲ್ಲೀದಳಾನ್ಯಪಿ ||೨೮||

ದಂಥಾ ತಾನ್ = ಆ ನಾಲ್ಕು ಕಳಶಂಗಳನು ಪ್ರಪೂಜಯೇತ್ = ಪೂಜಿಸೂದು. ಪ್ರತ್ಯೇಕಂ = ಒಂದೊಂದು ಕಳಶವನು ನವವಸ್ತ್ರೇಣ = ಹೊಸ ವಸ್ತ್ರದಿಂದ ವೇಷ್ಟಯೇತ್ = ಹೊದಿಸೂದು. ||೨೫||

ತೇಷು = ಆ ಕಳಶಂಗಳಲ್ಲಿ ಸ್ವರ್ಣಾನಿ = ಸುವರ್ಣಂಗಳನು ರತ್ನಾನಿ = ರತ್ನಂಗಳನು ಕ್ಷಿಪ್ತ್ವಾ = ಹಾಯಿಕಿ ಸಮ್ಯಕ್ = ಲೇಸಾಗಿ ಪ್ರಪೂಜಯೇತ್ = ಪೂಜಿಸೂದು. ಶುದ್ಧೈಃ = ಶುದ್ಧವಹಂಥಾ ನವಭಿಃ = ಹೊಸ್ತ[ಸತ]ಹಂಥಾ ತಂತುಭಿಃ = ನೂಲುಗಳಿಂದ ತಾನ್ ಪಂಚ = ಆ ಕಳಶಂಗಳಯ್ದನೂ ಪರಿವೇಷ್ಟಯೇತ್ = ಸುತ್ತೂದು. ||೨೬||

ಆಚಾರ್ಯಃ = ಆಚಾರ್ಯನು ಮಧ್ಯಮಸ್ಯ = ನಡುವಣ ಕಳಶವ ಪುಷ್ಪಾಕ್ಷತಾದಿಭಿಃ = ಗಂಧಪುಷ್ಪ ಅಕ್ಷತೆ ಮೊದಲಾದಂಥಾ ಅವಱಿಂದ ಅರ್ಚಾಂ = ಅರ್ಚನೆಯನು ಕುರ್ಯಾತ್ = ಮಾಡೂದು. ಋತ್ವಿಜಃ = ಋತ್ವಿಕ್ಕುಗಳು ಪ್ರೀತಮನಸಃ = ಸಂತೋಷಚಿತ್ತವನುಳ್ಳವರುಗಳಾಗಿ ಇತರಾರ್ಚನಂ = ಮಿಕ್ಕಾದ ಕಳಶಂಗಳ ಅರ್ಚನೆಯನು ವಿದಧ್ಯಾತ್ = ಮಾಡೂದು. ||೨೭||

ತೀರ್ಥಾಂಬುಪೂರ್ಣೇಷು = ತೀರ್ಥೋದಕಂಗಳಿಂದ ತುಂಬಲುಪಟ್ಟಂಥಾ ತೇಷು = ಆ ಪಂಚಕಲಶಂಗಳಲ್ಲಿ ಆಮ್ರಪಲ್ಲವಾನ್ = ಮಾವಿನ ತಳಿರುಗಳನ್ನು ದೂರ್ವಾಂಕುರಾನ್ = ದೂರ್ವಾಂಕುರಂಗಳನು ಸಪೂಗಾನಿ = ಅಡಕೆಯ ಮರದ ಹಿಂಗಾರದಿಂದ ಸಹಿತವಹಂಥಾ ನಾಗವಲ್ಲೀದಳಾನ್ಯಪಿ = ನಾಗವಲ್ಲಿಯ ಎಲೆಗಳನು ವಿದಧ್ಯಾತ್ = ಇರಿಸೂದು. ||೨೮||

---

[1] ಪೂರ (ಘ) ಮೂಲ ಪೂಜ (ಘ) ಪಾಠಾಂತರ

[2] ವಿದಧ್ಯುರಿ (ಘ) ಧ್ಯಾದಿ (ಖ)

ಅಥ ತತ್ಕಲಶಸ್ಥಾನಾಮಂಭಸಾಮಭಿಮಂತ್ರಣಮ್
ಮಮ ಪಂಚಾಕ್ಷರೀಮಂತ್ರೇಣಾಚಾರ್ಯಃ ಪ್ರತಿಪಾದಯೇತ್ ||೨೯||

ತತಸ್ಸಮಸ್ತಭಕ್ತೇಷು ಕುರ್ವನ್ಪೂಜಾಂ ಸಮುತ್ಸುಕಃ
ಪರಿತಸ್ತೂರ್ಯನಿನದೈಃ ಮಂಗಳಾದ್ಯೈರ್ವಿಜೃಂಭಿತೈಃ ||೩೦||

ತತ್ಪಂಚಕಲಶಾಂಭೋಭಿರಾಚಾರ್ಯಃ ಶಿಷ್ಯಮೂರ್ಧನಿ
ಅಭಿಷಿಂಚೇತ್ಸ್ವಯಂ[1] ಪ್ರಾಜ್ಞೋ ನೋದ್ಧೃತ್ಯ[1] ಕಲಶಾನ್ ಗುರುಃ

ಪ್ರೋಕ್ಷಯೇದ್ವಾ ಸಋತ್ವಿಗ್ಭಿಃ ಸ ದೂರ್ವಾಂಕುರಪಲ್ಲವೈಃ
ಕೇಚಿದುದ್ಧೃತ್ಯ ಕಲಶಾನಭಿಷಿಂಚಂತಿ ದೇಶಿಕಾಃ ||೩೧||

ಅಥ–ಅನಂತರದಲ್ಲಿ ಆಚಾರ್ಯಃ=ಆಚಾರ್ಯನು ತತ್ಕಲಶಸ್ಥಾನಾಂ= ಆ ಕಳಶಂಗಳಲ್ಲಿ ಇದ್ದಂಥಾ ಅಂಭಸಾಂ=ಉದಕಂಗಳ, ಮಮ=ಎನ್ನ ಪಂಚಾಕ್ಷರೀ ಮಂತ್ರೇಣ=ಪಂಚಾಕ್ಷರೀ ಮಂತ್ರದಿಂದ ಅಭಿಮಂತ್ರಣಂ=ಅಭಿಮಂತ್ರಿಸುಹವನು ಪ್ರತಿಪಾದಯೇತ್=ಮಾಡೂದು. ||೨೯||

ತತಃ= ಅಷ್ಟರ ಮೇಲೆ ಸಮಸ್ತಭಕ್ತೇಷು = ಸಮಸ್ತ ಭಕ್ತರುಗಳಲ್ಲಿ ಸಮುತ್ಸುಕಃ=ಲವಲವಿಕೆಯನುಳ್ಳಾತನಾಗಿ ಪೂಜಾಂ=ಪೂಜೆಯನು ಕುರ್ವನ್ =ಮಾಡುತವು ಪರಿತಃ = ಎಲ್ಲಾ ಕಡೆಯಲು ವಿಜೃಂಭಿತೈಃ = ಪಸರಿಸುತ್ತಂ ವಿದ್ದಂಥಾ ಮಂಗಳಾದ್ಯೈಃ=ಮಂಗಳಾರ್ಥಕ್ಕೆ ಮೊದಲಹಂಥಾ ತೂರ್ಯನಿನದೈಃ =ವಾದ್ಯಧ್ವನಿಗಳೊಡನೆ, ||೩೦||

ಪ್ರಾಜ್ಞಃ=ಪ್ರಾಜ್ಞನಹಂಥಾ ಆಚಾರ್ಯಃ=ಅಚಾರ್ಯನು ಸ್ವಯಂ= ತಾನೇ ತತ್ಪಂಚಕಲಶಾಂಭೋಭಿಃ= ಆ ಅಯ್ದು ಕಳಶೋದಕಂಗಳಿಂದ ಶಿಷ್ಯ–ಮೂರ್ಧನಿ = ಶಿಷ್ಯನ ಮಸ್ತಕದಲ್ಲಿ ಅಭಿಷಿಂಚೇತ್=ಅಭಿಷೇಕವ ಮಾಡೂದು. ಗುರುಃ=ಶ್ರೀ ಗುರುವು ಕಲಶಾನ್=ಕಳಶಂಗಳನು ನೋದ್ಧೃತ್ಯ=ನೆಗಹಲಾಗದು.

ಸಃ = ಆ ಆಚಾರ್ಯನು ಸಋತ್ವಿಗ್ಭಿಃ = ಋತ್ವಿಕ್ಕುಗಳಿಂದ ಸಹಿತವಾಗಿ ದೂರ್ವಾಂಕುರಪಲ್ಲವೈಃ = ದೂರ್ವೆಯ ಅಂಕುರ ಮಾವಿನ ತಳಿರುಗಳಿಂದ ಪ್ರೋಕ್ಷಯೇತ್ = ಪ್ರೋಕ್ಷಿಸೂದು. ಕೇಚಿದ್ದೇಶಿಕಾಃ = ಕೆಲಂಬರಾಚಾರ್ಯರುಗಳು ಕಲಶಾನ್=ಕಲಶಂಗಳನು ಉದ್ಧೃತ್ಯ=ನೆಗಹಿ ಅಭಿಷಿಂಚಂತಿ = ಅಭಿಷೇಕವ ಮಾಡುತ್ತಿಹರು. ||೩೧||

---

[1] ಪ್ರಾಜ್ಞಶ್ಚೋದ್ಧೃತ್ಯ (ಘ)

ಉದ್ಧೃತ್ಯ ವಾ ತತಃ ಕುರ್ಯಾತ್ ಪ್ರೋಕ್ಷಣಂ ಶಿಷ್ಯಮೂರ್ಧನಿ
ಸಂಪ್ರೋಕ್ಷ್ಯ ಪಂಚಕಲಶಾನ್ ಸದೂರ್ವಾಂಕುರಪಲ್ಲವಾನ್ ||೩೩||

ಸ್ವಸ್ವಸ್ಥಾನೇಷು ಸಕಲಾನ್ನಿಧಾಯಾಥ ಪ್ರಯತ್ನತಃ
[1]ಉದ್ಧೃತ್ಯ ಚ ಯಥಾಪೂರ್ವಂ ಕುರ್ಯಾತ್ತತ್ಪ್ರೋಕ್ಷಣಂ ಪುನಃ

ಸ್ಥಾಪಯಿತ್ವಾ ಪುನಸ್ತಾಂಸ್ತಾನ್ಕಲಶಾನ್ ಸ್ವಸ್ವಭೂಮಿಷು
ಉದ್ಧೃತ್ಯ ಪೂರ್ವವತ್ಕುರ್ಯಾತ್ ಪ್ರೋಕ್ಷಣಂ ಶಿಷ್ಯಮೂರ್ಧನಿ ೩೫||

ಇತ್ಥಂ ತ್ರಿವಾರಮಾಚಾರ್ಯಃ ಕೃತ್ವಾ ತಸ್ಯಾಘಮರ್ಷಣಮ್
ಶಿವಹಸ್ತಂ ವಿಧಾಯಾಥ ಶಿಷ್ಯಸ್ಯ ಶಿರಸಿ ನ್ಯಸೇತ್ ||೩೬||

ತತಃ = ಅಷ್ಟರಮೇಲೆ ಉದ್ಧೃತ್ಯ = ಕಲಶಂಗಳ ನೆಗಹಿ ಶಿಷ್ಯಮೂರ್ಧನಿ = ಶಿಷ್ಯನ ಶಿರಸ್ಸಿನಲ್ಲಿ ಪ್ರೋಕ್ಷಣಂ = ಪ್ರೋಕ್ಷಿಸುಹವನು ಕುರ್ಯಾತ್ = ಮಾಡೂದು ಸದೂರ್ವಾಂಕುರಪಲ್ಲವಾನ್ = ದೂರ್ವಾಂಕುರಂಗಳಿಂದ ಸಹಿತವಹ ಮಾವಿನ ತಳಿರುಗಳನ್ನುಳ್ಳಂಥ ಪಂಚ ಕಲಶಾನ್ = ಅಯ್ದು ಕಲಶಂಗಳನು ಸಂಪ್ರೋಕ್ಷ್ಯ = ಸಂಪ್ರೋಕ್ಷಿಸಿ, ||೩೩||

ಅಥ = ಅನಂತರದಲ್ಲಿ ಪ್ರಯತ್ನತಃ = ಪ್ರಯತ್ನದಿಂದ ಸ್ವಸ್ವಸ್ಥಾನೇಷು = ತಮ್ಮ ತಮ್ಮ ಸ್ಥಾನಂಗಳಲ್ಲಿ ಸಕಲಾನ್ = ಸಮಸ್ತ ಕಲಶಂಗಳನು ನಿಧಾಯ = ಇರಿಸಿ ಯಥಾಪೂರ್ವಂ = ಪೂರ್ವದ ಹಾಂಗೆ ಉದ್ಧೃತ್ಯ ಚ = ನೆಗಹಿ ಪುನಃ = ಮರಳಿ ತತ್ಪ್ರೋಕ್ಷಣಂ = ಆ ಶಿಷ್ಯಂಗೆ ಅಭಿಷೇಕವನು ಕುರ್ಯಾತ್ = ಮಾಡೂದು.

ಪುನಃ = ಮರಳಿ ಸ್ವಸ್ವಭೂಮಿಷು = ನಿಜ ನಿಜ ಸ್ಥಾನಂಗಳಲ್ಲಿ ತಾನ್ ತಾನ್ ಕಲಶಾನ್ = ಆ ಆ ಕಲಶಂಗಳನು ಸ್ಥಾಪಯಿತ್ವಾ = ಇರಿಸಿ ಪೂರ್ವವತ್ = ಮುನ್ನಿನ ಹಾಂಗೆ ಉದ್ಧೃತ್ಯ = ನೆಗಹಿ ಶಿಷ್ಯಮೂರ್ಧನಿ = ಶಿಷ್ಯನ ಮಸ್ತಕದಲ್ಲು ಪ್ರೋಕ್ಷಣಂ ಕುರ್ಯಾತ್ = [2]ಪ್ರೋಕ್ಷಣಂ ಗೈಯುವುದು[2] ||೩೫||

ಇತ್ಥಂ = ಈ ಪ್ರಕಾರದಲ್ಲಿ ಆಚಾರ್ಯಃ = ಆಚಾರ್ಯನು ತಸ್ಯ = ಆ ಶಿಷ್ಯಂಗೆ ಅಘಮರ್ಷಣಂ = ಪಾಪಕ್ಷಯವಹಂಥಾ ಅಭಿಷೇಕವನು ತ್ರಿವಾರಂ = ಮೂಱು ಬಾರಿ ಕೃತ್ವಾ = ಮಾಡಿ ಅಥ = ಅನಂತರದಲ್ಲಿ ಶಿಷ್ಯಸ್ಯ = ಶಿಷ್ಯನ ಶಿರಸಿ = ಶಿರಸ್ಸಿನಲ್ಲಿ ಶಿವಹಸ್ತಂ = ಶಿವನ ಹಸ್ತವನು ವಿಧಾಯ = ಮಾಡಿ ನ್ಯಸೇತ್ = ಇರಿಸೂದು. ಶಿವಧ್ಯಾನವ ಮಾಡುತ ಹಸ್ತವನು ಮಸ್ತಕದಲ್ಲಿ ಇರಿಸುಹವು ಶಿವಹಸ್ತವೆನಿಸುವುದು.

---

[1] ವಿ (ಘ) [2] ತಳಿಹವನು ಮಾಡೂದು (ಖ. ಚ)

ಶಿವತೇಜೋಮಯಂ ಪಾಣಿಂ ಶಿವಮಂತ್ರಮುದೀರಯನ್
ತತಃ ಶಿವಾಸನಂ ಧ್ಯಾತ್ವಾ ಶಿಷ್ಯಮೂರ್ಧನಿ ದೇಶಿಕಃ ||೩೭||

ತತ್ರಾವಾಹ್ಯ ಯಥಾನ್ಯಾಯಂ ಅರ್ಚಯೇನ್ಮನಸಾ ಶಿವಮ್
ಪ್ರಾರ್ಥಯೇತ್ಪ್ರಾಂಜಲಿರ್ದೇವಂ ನಿತ್ಯಮತ್ರ ಸ್ಥಿರೋ ಭವ ||೩೮||

ಇತಿ ವಿಜ್ಞಾಪ್ಯ ತಂ[1]ಶಂಭೋಸ್ತೇಜಸಾ[1] ಭಾಸ್ವರಂ ಸ್ಮರೇತ್
ಮಮ ಪಂಚಾಕ್ಷರೀಮಂತ್ರಮುಪಾಂಶೂಪದಿಶೇದ್ಗುರುಃ ||೩೯||

ಕರ್ಣೇ ಶಿಷ್ಯಸ್ಯ ಶನಕೈಃ ಶಿವಮಂತ್ರಮುದೀರಯೇತ್
ಸ ತು ಬದ್ಧಾಂಜಲಿಃ ಶಿಷ್ಯೋ ಮಂತ್ರತದ್ಗತಮಾನಸಃ ||೪೦||

ದೇಶಿಕಃ=ಶ್ರೀಗುರು, ಶಿವಮಂತ್ರಂ = ಪಂಚಾಕ್ಷರಿಯ ಮಂತ್ರವನ್ನು ಉದೀರಯನ್=ಉಚ್ಚರಿಸುತ್ತವು. ಪಾಣಿಂ=ಹಸ್ತವನು ಶಿವತೇಜೋಮಯಂ =ಶಿವನ ತೇಜೋಮಯವಹಂಥಾದ್ದನ್ನಾಗಿ ಧ್ಯಾತ್ವಾ=ಧ್ಯಾನಿಸಿ ತತಃ=ಅಪ್ಪುಅ ಮೇಲೆ ಶಿಷ್ಯಮೂರ್ಧನಿ=ಶಿಷ್ಯನ ಮಸ್ತಕದಲ್ಲಿ ಶಿವಾಸನಂ=ಶಿವಂಗೆ ಸಿಂಹಾಸನವನು ನ್ಯಸೇತ್=ಇ[2]ಕ್ಕೊ[2]ದು. ||೩೭||

ತತ್ರ=ಆ ಶಿಷ್ಯನ ಮಸ್ತಕದಲ್ಲಿ ಶಿವಂ=ಶಿವನನ್ನು ಆವಾಹ್ಯ=ಆಹ್ವಾನಿಸಿ ಯಥಾ ನ್ಯಾಯಂ = ಕ್ರಮತಪ್ಪದೆ ಮನಸಾ=ಮನಸ್ಸಿನಿಂದ ಅರ್ಚಯೇತ್= ಅರ್ಚಿಸೂದು. ಪ್ರಾಂಜಲಿಃ = ಕೈಮುಗಿದುಕೊಂಡು ದೇವಂ = ಶಿವನನು-ಪ್ರಾರ್ಥಯೇತ್=ಬೇಡಿಕೊಂಬುದು. ನಿತ್ಯಂ=ಆವಾಗಲು ಅತ್ರ=ಈ ಶಿಷ್ಯನ ಮಸ್ತಕದಲ್ಲಿ ಸ್ಥಿರಃ=ಸ್ಥಿರವಾಗಿ ಇಹಾತನು ಭವ=ಆಗು. ||೩೮||

ಇತಿ = ಈ ಪ್ರಕಾರದಲ್ಲಿ ವಿಜ್ಞಾಪ್ಯ = ಬಿನ್ನಪಿಸಿ ತಂ=ಆ ಶಿಷ್ಯನನ್ನು ಶಂಭೋಃ=ಪರಮೇಶ್ವರನ ತೇಜಸಾ=ತೇಜಸ್ಸಿನಿಂದ ಭಾಸ್ವರಂ=ಪ್ರಕಾಶಿಸುತ್ತಂ ವಿದ್ದಂಥಾತನು ಎಂದು ಸ್ಮರೇತ್ = ಸ್ಮರಿಸೂದು. ಗುರುಃ = ಆಚಾರ್ಯನು ಮಮ=ಎನ್ನ ಪಂಚಾಕ್ಷರೀ ಮಂತ್ರಂ=ಪಂಚಾಕ್ಷರೀ ಮಂತ್ರವನು ಉಪಾಂಶು =ಮೆಲ್ಲನೆ ಉಪದಿಶೇತ್=ಉಪದೇಶಿಸುವುದು. ||೩೯||

ಶಿಷ್ಯಸ್ಯ=ಶಿಷ್ಯನ ಕರ್ಣೇ=ಕರ್ಣದಲ್ಲಿ ಶಿವಮಂತ್ರಂ = ಶಿವಪಂಚಾಕ್ಷರೀ ಮಂತ್ರವನು ಶನಕೈಃ=ಮೆಲ್ಲನೆ ಉದೀರಯೇತ್=ಹೇಳೂದು. ಸ ಶಿಷ್ಯಸ್ತು =ಆ ಶಿಷ್ಯನು ಬದ್ಧಾಂಜಲಿಃ=ಕೈಮುಗಿದುಕೊಂಡು ಮಂತ್ರತದ್ಗತ ಮಾನಸಃ =ಮಂತ್ರದಲ್ಲಿ ತತ್ಪರವಹ ಮನಸ್ಸನುಳ್ಳವನಹುದು. ||೪೦||

---

1 ಶಂಭುಂ ತೇಜಸಾ (ಘ) 2 ಕ್ಕುವು (ಖ. ಚ)

ಶನೈಸ್ತಂ ವ್ಯಾಹರೇಚ್ಛಿಷ್ಯಃ [1]ಶಿವಾಚಾರ್ಯಸ್ಯ[1] ಶಾಸನಾತ್
ಪಾಶಾನಶೇಷಾನ್ ಕರ್ತರ್ಯಾ ಛಿತ್ವಾ ಲಿಂಗಂ ಸಮಾದಿಶೇತ್ ||೪೧||

ಕರ್ತರೀ ಜ್ಞಾನಶಕ್ತಿಸ್ಸ್ಯಾತ್ ಯಯಾ ಪಾಶಾನ್ ಛಿನತ್ತ್ಯಸೌ
ಯಾ ಕಲಾ ಪರಮಾ ಸೂಕ್ಷ್ಮಾ ಮಂತ್ರಾಣಾಂ[2] ಬೋಧಿನೀ[2]ಪರಾ||೪೨||

ತಾಮಾಕೃಷ್ಯ ಯಥಾನ್ಯಾಯಂ ಲಿಂಗೇ ಸಮುಪವೇಶಯೇತ್
ತಲ್ಲಿಂಗಂ ಸ್ಥಾಪಯೇಚ್ಛಿಷ್ಯೇ ಪ್ರಾಣಲಿಂಗಮಿದಂ ತವ ||
ಏವಮುಕ್ತಸ್ಸದಾ ಲಿಂಗಂ ನ ಕದಾಚಿದ್ವಿಯೋಜಯೇತ್ ||೪೩||

ಶಿಷ್ಯಃ = ಶಿಷ್ಯನು [2]ಶಿವಾಚಾರ್ಯಸ್ಯ[2] = ಶಿವಾಚಾರ್ಯನ ಶಾಸನಾತ್ = ಆಜ್ಞೆಯ ದೆಸೆಯಿಂದ ತಂ = ಆ ಪಂಚಾಕ್ಷರಿಯ ಮಂತ್ರವನು ಶನೈಃ = ಮೆಲ್ಲನೆ ವ್ಯಾಹರೇತ್ = ಉಚ್ಚರಿಸೂದು. ಕರ್ತರ್ಯಾ = ಜ್ಞಾನಶಕ್ತಿಯೆಂಬ ಕತ್ತರಿಯಿಂದ ಅಶೇಷಾನ್ = ಸಮಸ್ತವಹಂಥಾ ಪಾಶಾನ್ = ಪಾಶಂಗಳನು ಛಿತ್ವಾ = ಛೇದಿಸಿ ಲಿಂಗಂ = ಶಿವಲಿಂಗವನು ಸಮಾದಿಶೇತ್ = ಕೊಡುವುದು. ||೪೧||

ಜ್ಞಾನಶಕ್ತಿಃ = ಜ್ಞಾನಶಕ್ತಿ ಕರ್ತರೀ = ಕತ್ತರಿ ಸ್ಯಾತ್ = ಆದಳು. ಯಯಾ = ಆವಳಾಳೊಬ್ಬ ಜ್ಞಾನಶಕ್ತಿಯಿಂದ ಅಸೌ = ಈ ಶಿವನು ಪಾಶಾನ್ = ಭವ ಪಾಶಂಗಳನು ಛಿನತ್ತಿ = ಛೇದಿಸುತ್ತಂ ಇಹನು. ಪರಮಾ = ಉತ್ಕೃಷ್ಟವಹಂಥಾ ಸೂಕ್ಷ್ಮಾ = ಸೂಕ್ಷ್ಮವಹಂಥಾ ಯಾ = ಆವುದಾನೊಂದು ಕಳಾ = ಕಳೆ ಮಂತ್ರಾಣಾಂ = ಮಂತ್ರಂಗಳ ಪರಾ = ಉತ್ಕೃಷ್ಟವಾಗಿ ಬೋಧಿನೀ = ಪ್ರಕಾಶಿಸೂದು. ||೪೨||

ತಾಂ = ಆ ಕಳೆಯನು ಆಕೃಷ್ಯ = [3]ಆಕರ್ಷಣೆ[3]ಮಾಡಿ ಯಥಾ ನ್ಯಾಯಂ = ಕ್ರಮದಿಂದ ಲಿಂಗೇ = ಶಿವಲಿಂಗದಲ್ಲಿ ಸಮುಪವೇಶಯೇತ್ = ಪ್ರವೇಶಿಸೂದು. ತಲ್ಲಿಂಗಂ = ಆ ಲಿಂಗವನು ಶಿಷ್ಯೇ = ಶಿಷ್ಯನಲ್ಲಿ ಸ್ಥಾಪಯೇತ್ = ಪ್ರತಿಷ್ಠಿಸೂದು. ಇದಂ = ಇದು ತವ = ನಿನ್ನ ಪ್ರಾಣಲಿಂಗಂ = ಪ್ರಾಣಲಿಂಗವು. ಏವಂ = ಈ ಪ್ರಕಾರದಲ್ಲಿ ಉಕ್ತಃ = ನುಡಿದಾತನಾಗಿ ಲಿಂಗಂ = ಲಿಂಗವನು ಸದಾ = ಎಲ್ಲಾಗವೂ ಕದಾಚಿತ್ = ಒಂದು ವೇಳೆಯಲ್ಲಿಯೂ ನ ವಿಯೋಜಯೇತ್ = ಅಗಲಲಾಗದು. ಎಂದು ನಿರೂಪಿಸೂದು. ||೪೩||

---

[1] ಶಿವಾಚಾರಸ್ಯ (ಕ) [2] ಬೋಧನೀ (ಖ.ಗ.ಚ)
[3] ಆಕರುಷಣವ (ಖ.ಚ)

ಉತ್ತಮಾಂಗೇ ಗಲೇ ವಾಽಪಿ ಕಕ್ಷೇ ವಕ್ಷಸ್ಸ್ಥಲೇಽಪಿ ವಾ
ತಥಾ ಹಸ್ತಸ್ಥಲೇ ವಾಽಪಿ ಪ್ರಾಣಲಿಂಗಂ ಧರೇತ್ಸುಧೀಃ ||೪೪||

ನಾಭೌ ಚ ಹೃದಯೇ ಮೂರ್ಧ್ನಿ ಸರ್ವಾವಸ್ಥಾಸು ಸರ್ವದಾ
ಶ್ರೀಲಿಂಗಧಾರಣಂ ಕುರ್ಯಾದ್ದೇವಿ ನಿತ್ಯಂ ಮಮ ಪ್ರಿಯಃ ||೪೫||

ಧಾರಯೇದ್ಯಸ್ತು ಹಸ್ತೇನ ಲಿಂಗಾಕಾರಂ ಶಿವಂ ಸದಾ
ತಸ್ಯ ಹಸ್ತಸ್ಥಿತಂ ವಿದ್ಧಿ ಮತ್ಪದಂ ಸಂಪದಾಂ ಪದಮ್ ||೪೬||

ಅಪವರ್ಗೇಪ್ಸುರೀಶಾನಂ ಗಲೇ ಭಕ್ತಿಪರಾಯಣಃ
[1]ಈಶೇನ [2]ನಿತ್ಯ[2]ಸಂಯೋಗಪರಯಾ ನಿಜನಿಷ್ಠಯಾ ||೪೭||

ಸುಧೀಃ = ಸುಬುದ್ಧಿಯುಳ್ಳಾತನು ಉತ್ತಮಾಂಗೇ= ಶಿರಸ್ಸಿನಲ್ಲಿ ಗಲೇ ವಾಽಪಿ = [3]ಕೊರಳಲ್ಲಿ[3]ಯೂ ಕಕ್ಷೇ= ಕಂಕುಳಲ್ಲಿ ವಕ್ಷಸ್ಥಲೇಽಪಿ ವಾ = ಉರ[4]ಸ್ಥಳದ[4]ಲ್ಲಿಯೂ ತಥಾ = ಹಾಗೆ ಹಸ್ತಸ್ಥಲೇಽಪಿ ವಾ= ಕರಸ್ಥಲದಲ್ಲಿಯೂ ಪ್ರಾಣಲಿಂಗಂ = ಪ್ರಾಣಲಿಂಗವನು ಧರೇತ್ = ಧರಿಸೂದು. ||೪೪||

ಹೇ ದೇವಿ != ಎಲೆ ಪಾರ್ವತಿದೇವಿ ! ನಾಭೌ ಚ= ನಾಭಿಯ ಸ್ಥಾನದಲ್ಲಿಯು ಹೃದಯೇ = ಉರಸ್ಸಿನಲ್ಲಿಯೂ ಮೂರ್ಧ್ನಿ = ಶಿರಸ್ಸಿನಲ್ಲಿ ಸರ್ವದಾ = ಎಲ್ಲಾಗಳೂ ಸರ್ವಾವಸ್ಥಾಸು = ಸಮಸ್ತ (ಸ್ಥಿತಿ) ವ್ಯಾಪ್ತಿಗಳಲ್ಲಿ ಶ್ರೀಲಿಂಗಧಾರಣಂ = ಒಪ್ಪುತ್ತಂ ಇದ್ದಂಥಾ ಶಿವಲಿಂಗಧಾರಣವನು ಕುರ್ಯಾತ್ = ಮಾಡೂದು. ಮಮ = ಎನಗೆ ನಿತ್ಯಂ = ಆವಾಗವು ಪ್ರಿಯಃ = ಪ್ರಿಯನು. ||೪೫||

ಹೇ ದೇವಿ != ಎಲೈ ಪಾರ್ವತೀದೇವಿ ! ಯಸ್ತು = ಆವಾತನು ಹಸ್ತೇನ= ಹಸ್ತದಿಂದ ಸದಾ = ಎಲ್ಲಾಗಳು ಲಿಂಗಾಕಾರಂ = ಲಿಂಗಮೂರ್ತಿಯಾದಂಥಾ ಶಿವಂ = ಪರಮೇಶ್ವರನನು ಧಾರಯೇತ್ = ಧರಿಸುವನು ತಸ್ಯ= ಆತಂಗೆ ಸಂಪದಾಂ= ಐಶ್ವರ್ಯಂಗಳಿಗೆ ಪದಂ = ಸ್ಥಾನವಹಂಥಾ ಮತ್ಪದಂ = ನನ್ನ ಪದವು ಹಸ್ತಸ್ಥಿತಂ = ಅಂಗೈಯಲ್ಲಿ ಇದ್ದಂಥಾದೆಂದು ವಿದ್ಧಿ = ಅರಿ. ||೪೬||

ಭಕ್ತಿಪರಾಯಣಃ = ಭಕ್ತಿಯಲ್ಲಿ ತಾತ್ಪರ್ಯವನುಳ್ಳಂಥಾ ಅಪವರ್ಗೇಪ್ಸುಃ = ಮೋಕ್ಷದಲ್ಲಿ ಇಚ್ಛೆಯನುಳ್ಳಾತನು ಈಶೇನ = ಪರಮೇಶ್ವರನೊಡನೆ ನಿತ್ಯಸಂಯೋಗ ಪರಯಾ = ಆವಾಗವೂ ಕೂಟದಲ್ಲಿ ತಾತ್ಪರ್ಯವನುಳ್ಳಂಥಾ ನಿಜನಿಷ್ಠಯಾ = ತನ್ನ ಸಂಬಂಧವಾದ ವಿಶ್ವಾಸದಿಂದ ಗಲೇ = ಕೊರಳಲ್ಲಿ ಧಾರಯೇತ್ — ಧರಿಸೂದು. ||೪೭||

---

1 ಈಶಾನ (ಖ.ಗ.ಚ) ಈಶಾನಿ (ಘ) 2 ನಿತ್ಯಂ (ಘ) 3 ಕೊರಳಿನಲ್ಲಿ (ಖ.ಚ) 4 ಸ್ಸಿನ (ಕ)

[1]ವಕ್ತ್ರೇ ವಾ ಧಾರಯೇಲ್ಲಿಂಗಂ ಮತ್ಪ್ರಭಾವಾದ್ವಿಭಾವಯೇತ್
ತಸ್ಮಿನ್ ಸನ್ನಿಹಿತೇ ಕಿಂಚಿನ್ನೋಚ್ಛಿಷ್ಟಮಿತಿ ನಿಶ್ಚಿತಮ್ ||೪೮||

ನಾಭೇರಧೋ ಲಿಂಗಧಾರೀ [2]ಪಾಪಾತ್ಮಾ[2] ಚ ಸ ಯುಜ್ಯತೇ
ನಾಭ್ಯೂರ್ಧ್ವಂ ಲಿಂಗಧಾರೀ ಚ ಸೌಭಾಗ್ಯಜ್ಞಾನವರ್ಧನಃ ||೪೯||

ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರನ್ನುನ್ಮಿಷನ್ನಿಮಿಷನ್ನಪಿ
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ||೫೦||

ಮೂತ್ರಾದ್ಯುತ್ಸರ್ಜನೇ ಯಾನೇ ಭೋಜನೇಽಪಿ ಸದಾ ಶುಚಿಃ
ತಸ್ಮಿನ್ ಸನ್ನಿಹಿತೇ ಕಿಂಚಿತ್ ನೋಚ್ಛಿಷ್ಟಮಿತಿ ನಿಶ್ಚಿತಮ್ ||೫೧||

ವಕ್ತ್ರೇ ವಾ = ಅಮಳ್ಳೈಕ್ಯದಲ್ಲಿಯಾದಡೆಯೂ ಲಿಂಗಂ = ಶಿವಲಿಂಗವನು ಧಾರಯೇತ್ = ಧರಿಸೂದು. ತಸ್ಮಿನ್ = ಆ ಶಿವಲಿಂಗವು ಸನ್ನಿಹಿತೇ ಸತಿ = ಸಾನ್ನಿಧ್ಯವಾಗುತ್ತಂವಿರಲು ಮತ್ಪ್ರಭಾವಾತ್ = ನನ್ನ ಸಾಮರ್ಥ್ಯದ ದೆಸೆಯಿಂದ ಕಿಂಚಿತ್ = ಒಪ್ಪಚ್ಚಿ ನೋಚ್ಛಿಷ್ಟಂ = ಎಂಜಲಿಲ್ಲ ಇತಿ = ಹೀಗೆಂದು ನಿಶ್ಚಿತಂ = ನಿಶ್ಚೈಸಲ್ಪಟ್ಟುದೆಂದು ವಿಭಾವಯೇತ್ = ತಿಳಿವುದು. ||೪೮||

ನಾಭೇಃ = ಹೊಕ್ಕುಳ [ದ] ಅಧಃ = ಕೆಳಗೆ ಲಿಂಗಧಾರೀ = ಶಿವಲಿಂಗವ ಧರಿಸುವವನು ಪಾಪಾತ್ಮಾ ಚ = ಪಾಪಶರೀರವನುಳ್ಳಾತನಾಗಿ ಯುಜ್ಯತೇ = ಕೊಡಲ್ಪಡುತ್ತಿಹನು. ನಾಭ್ಯೂರ್ಧ್ವಂ = ನಾಭಿಯಿಂದ ಮೇಲೆ ಲಿಂಗಧಾರೀ = ಲಿಂಗವಧರಿಸಿದಂಥಾ ಸಃ = ಆತನು ಸೌಭಾಗ್ಯಜ್ಞಾನವರ್ಧನಃ = ಸೌಭಾಗ್ಯ ಜ್ಞಾನಂಗಳ ಹೆಚ್ಚುಗೆವುಳ್ಳಾತನು. ||೪೯||

ಗಚ್ಛನ್ = ನಡವುತ್ತವು ತಿಷ್ಠನ್ = ನಿಲ್ಲುತ್ತವು ಸ್ವಪನ್ = ನಿದ್ರೆಗೆಯಿವುತ್ತವು ಜಾಗ್ರನ್ = ಎಚ್ಚತ್ತಿರುತ್ತವು ಉನ್ಮಿಷನ್ = ಎವೆಯಿಕ್ಕುತ್ತವು ನಿಮಿಷನ್ನಪಿ = ಎವೆ ಮುಚ್ಚುತ್ತವು ಶುಚಿರ್ವಾಽಪಿ = ಶುದ್ಧನಾಗುತ್ತವು ಅಶುಚಿರ್ವಾಽಪಿ = ಶುದ್ಧನಲ್ಲದಾತನಾಗುತ್ತವು ಸರ್ವತ್ರ = ಎಲ್ಲಾಗವು ಲಿಂಗಂ = ಶಿವಲಿಂಗವನು ಧಾರಯೇತ್ = ಧರಿಸೂದು. ||೫೦||

ಮೂತ್ರಾದ್ಯುತ್ಸರ್ಜನೇ = ಮೂತ್ರ ಮೊದಲಾದಂಥಾವ ಬಿಡುವಲ್ಲಿ ಯಾನೇ = ನಡವಲ್ಲಿ ಭೋಜನೇಽಪಿ = ಉಂಬಲ್ಲಿಯು ಸದಾ = ಎಲ್ಲಾಗಳೂ ಶುಚಿಃ = ಶುದ್ಧನು ತಸ್ಮಿನ್ = ಆ ಶಿವಲಿಂಗವು ಸನ್ನಿಹಿತೇ ಸತಿ = ಸಮೀಪವಾಗುತ್ತಿರಲು ಕಿಂಚಿತ್ = ಒಂದಿಷ್ಟು ನೋಚ್ಛಿಷ್ಟಂ = ಎಂಜಲಿಲ್ಲ. ಇತಿ = [3]ಹೀಂ[3]ಗೆಂದು ನಿಶ್ಚಿತಂ ನಿಶ್ಚೈಸಲುಪಟ್ಟಿತ್ತು. ||೫೧||

---

[1] ವಸ್ತ್ರೇ (ಘ) [2] ಪಾಪ್ಮನಾ (ಘ) [3] ಹಿಂ (ಖ.ಚ)

ಅಧಮಾಧಮಯುಕ್ತಾನಾಂ ಪಾಪಿನಾಂ ಚಾಭಿಚಾರಿಣಾಮ್
ಯಮಲೋಕೋ ನ ವಿದ್ಯೇತ ಸದಾ ವೈ ಲಿಂಗಧಾರಣಾತ್ ||೫೨||

ಯಥಾಹ್ಯಗ್ನಿಸಮಾವೇಶಾನ್ನಾಯೋ ಭವತಿ ಕೇವಲಮ್
ತಥೈವ ಮಮ ಸಾನ್ನಿಧ್ಯಾತ್ ನ ತೇ ಪ್ರಕೃತಿಮಾನುಷಾಃ ೫೩||

ಭಕ್ತ[1]ಸ್ಯಾ[1]ಬಿಭ್ರತೋ ಲಿಂಗಂ ಯಾವತ್ಪ್ರಾಣವಿದಾರಣಮ್
ಶ್ವಮಾಂಸಭಕ್ಷಣಂ ತಾವದನೇನ ರಚಿತಂ ಭವೇತ್ ||೫೪||

ಬ್ರಹ್ಮವಿಷ್ಣುಸುರೇಶಾದಿದೇವತಾಃ ಪರಯಾ ಮುದಾ
ಶಿರೋಭಿರ್ಧಾರಯಂತ್ಯೇತೇ ಶಿವಲಿಂಗಮಹರ್ನಿಶಮ್ ||೫೫||

ಅಧಮಾಧಮಯುಕ್ತಾನಾಂ = ಅತ್ಯಂತ(ಅಧಮರುಗಳೊಡನೆ ಕೂಡಿದಂಥಾವರಿಗೆ ಪಾಪಿನಾಂ ಚ = ಪಾಪಿಗಳಿಗೆಯು ಅಭಿಚಾರಿಣಾಂ = ಮಾಟ ಕುಟಿಲವ ಮಾಡುವಂಥಾವರುಗಳಿಗೆ ಸದಾ = ಎಲ್ಲಾಗಳೂ ಲಿಂಗಧಾರಣಾತ್ = ಶಿವಲಿಂಗವ ಧರಿಸಿದ್ದರ ದೆಸೆಯಿಂದ ಯಮಲೋಕಃ = ಯಮಲೋಕವು ನ ವಿದ್ಯೇತ = ಇಲ್ಲ. ||೫೨||

ಯಥಾ = ಹೇಂಗೆ ಅಗ್ನಿಸಮಾವೇಶಾತ್ = ಅಗ್ನಿಯನೆಯ್ದುವದರ ದೆಸೆಯಿಂದ ಕೇವಲಂ = ಬರಿಯ ಅಯಃ = ಕಬ್ಬುನವು ನ ಭವತಿ ಹಿ = ಆಗುತ್ತಿರದಲಾ ತಥೈವ = ಹಾಂಗೆ ಮಮ = ನನ್ನ ಸಾನ್ನಿಧ್ಯಾತ್ = ಸಮೀಪದ ದೆಸೆಯಿಂದ = ಅವರುಗಳು ಪ್ರಕೃತಿಮಾನುಷಾಃ = ಸ್ವಭಾವದಿಂದ ಮನುಷ್ಯರು ನ = ಅಲ್ಲ, ಶಿವಲಿಂಗಧಾರಿಗಳು ಶಿವಸ್ವರೂಪರಾಗಿಹರೆಂಬುದರ್ಥ. ||೫೩||

ಲಿಂಗಂ = ಶಿವಲಿಂಗವನು ಅಬಿಭ್ರತಃ = ಧರಿಸದೇಯಿದ್ದಂಥಾ ಭಕ್ತಸ್ಯ = ಭಕ್ತಂಗೆ ಯಾವತ್ = ಎಲ್ಲಿ ಪರಿಯಂತ ಪ್ರಾಣವಿದಾರಣಂ = ಪ್ರಾಣತ್ಯಾಗವುಂಟು ತಾವತ್ = ಅಲ್ಲಿ ಪರಿಯಂತರ ಅನೇನ = ಈ ಶಿವಲಿಂಗವ ಧರಿಸದೇ ಇಹುದರಿಂದ ಶ್ವಮಾಂಸಭಕ್ಷಣಂ = ಶುನಕನ ಮಾಂಸವ ಭಕ್ಷಿಸುಹವು ರಚಿತಂ = ಮಾಡಲ್ಪಟ್ಟುದು ಭವೇತ್ = ಅಹುದು. ಇಂತು ನನ್ನ ಪ್ರಿಯ ವಚನವು. ||೫೪||

ಏತೇ = ಈ ಬ್ರಹ್ಮವಿಷ್ಣುಸುರೇಶಾದಿದೇವತಾಃ = ಬ್ರಹ್ಮ ವಿಷ್ಣು ದೇವೇಂದ್ರಾದಿ ದೇವರ್ಕಳು ಪರಯಾ = ಉತ್ಕೃಷ್ಟವಹಂಥಾ ಮುದಾ = ಸಂತೋಷದೊಡನೆ ಶಿರೋಭಿಃ = ಶಿರಸ್ಸುಗಳಿಂದ ಶಿವಲಿಂಗಂ = ಶಿವಲಿಂಗವನು ಅಹರ್ನಿಶಂ = ದಿವಾರಾತ್ರಿಯೂ ಧಾರಯಂತಿ = ಧರಿಸುತ್ತಿಹರು. ||೫೫||

---

1 ಸ್ಯ (ಘ)

ಅಕ್ಷಪಾದಾದಯಸ್ಸರ್ವಾಃ ಶಕ್ತ್ಯ[1]ಯಸ್ಸರ್ವದಾ[1] ಮುದಾ
ಧಾರಯಂತ್ಯಲಿಕಾಗ್ರೇಷು ಶಿವಲಿಂಗಂ ಚ ಸಾದರಮ್ ||೫೬||

ಕಂಠೇಷು ಹರಕಂಠಾದಿಮುನಯೋ ಮನವಸ್ತಥಾ
ಸರ್ವದಾ ಶಿವಲಿಂಗಂ ತು ಧಾರಯಂತಿ ಯಜಂತಿ ಚ ||೫೭||

ವಿನಿರ್ಭಿದ್ಯ ತಥಾ ಗಾತ್ರಂ ವಿವರೇ ಲೋಹಪಾತ್ರಕೇ
ಶಿವಲಿಂಗಂ ವಿನಿಕ್ಷಿಪ್ಯ ಪೂಜಯಂತಿ ಚ ರಾಕ್ಷಸಾಃ ||೫೮||

ಈಶ್ವರೇಣಾವಿನಾಭಾವಸಂಬಂಧಂ ಕರ್ತುಮಾತ್ಮನಃ
ಉತ್ತಮಾಂಗೇ ಗಲೇ ಕಕ್ಷೇ ಸರ್ವದಾ ಧಾರಯೇಚ್ಛಿವಮ್
ಮೂರ್ಧ್ನಿ ವಾ ಧಾರಯೇಲ್ಲಿಂಗಂ ನ ಕದಾಚಿದ್ವಿಯೋಜಯೇತ್ ||೫೯||

ಅಕ್ಷಪಾದಾದಯಃ = ಗೌತಮ ಮೊದಲಾದಂಥಾ ಋಷಿಗಳು ಸರ್ವಾಃ ಶಕ್ತಯಃ = ಸಮಸ್ತ ಶಕ್ತಿಗಳೂ [ಶಕ್ತಿಯರೂ] ಸರ್ವದಾ = ಎಲ್ಲಾಗಳೂ ಮುದಾ = ಸಂತೋಷದೊಡನೆ ಸಾದರಂ = ಆದರದಿಂದ ಸಹಿತವಾಗಿ ಅಳಿಕಾಗ್ರೇಷು = ಮುಂದಲೆಗಳಲ್ಲಿ ಶಿವಲಿಂಗಂ = ಶಿವಲಿಂಗವನು ಧಾರಯಂತಿ = ಧರಿಸುತ್ತಿಹರು. ||೫೬||

ಹರಕಂಠಾದಿಮುನಯಃ = ಹರಕಂಠ ಮೊದಲಾದಂಥಾ ಮುನೀಶ್ವರರುಗಳು ತಥಾ = ಹಾಂಗೆ ಮನವಃ = ಚತುರ್ದಶ ಮನುಗಳು ಕಂಠೇಷು = ಕೊರಳುಗಳಲ್ಲಿ ಸರ್ವದಾ = ಎಲ್ಲಾ ವೇಳೆಯು ಶಿವಲಿಂಗಂ ತು = ಶಿವಲಿಂಗವನೆ ಧಾರಯಂತಿ = ಧರಿಸುತ್ತಿಹರು. ಯಜಂತಿ ಚ = ಪೂಜಿಸುತ್ತಿಹರು ||೫೭||

ತಥಾ = ಹಾಂಗೆ ರಾಕ್ಷಸಾಃ = ರಾಕ್ಷಸರುಗಳು ಗಾತ್ರಂ = ಒಡಲನು ವಿನಿರ್ಭಿದ್ಯ = ಬಗಿದು ವಿವರೇ = ಛಿದ್ರದಲ್ಲಿ ಲೋಹಪಾತ್ರಕೇ = ಕಬ್ಬಿನದ ಸೆಜ್ಜೆಯಲ್ಲಿ ಶಿವಲಿಂಗಂ = ಶಿವಲಿಂಗವನು ವಿನಿಕ್ಷಿಪ್ಯ = ಇರಿಸಿ ಪೂಜಯಂತಿ ಚ = ಪೂಜಿಸುತ್ತಿಹರು.

ಆತ್ಮನಃ = ತನಗೆ ಈಶ್ವರೇಣ = ಪರಮೇಶ್ವರನೊಡನೆ ಅವಿನಾಭಾವಸಂಬಂಧಂ = ತೊಲಗದೇ ಇಹ ಸಂಬಂಧವನು ಕರ್ತುಂ = ಮಾಡಲು ಉತ್ತಮಾಂಗೇ = ಶಿರಸ್ಸಿನಲ್ಲಿ ಗಲೇ = ಕೊರಳಲ್ಲಿ ಕಕ್ಷೇ = ಕಕ್ಷದಲ್ಲಿ ಶಿವಂ = ಶಿವಲಿಂಗವನು ಸರ್ವದಾ = ಎಲ್ಲಾಗವು ಧಾರಯೇತ್ = ಧರಿಸೂದು. ಮೂರ್ಧ್ನಿವಾ = ಶಿಖೆಯಲ್ಲಿಯೂ ಲಿಂಗಂ = ಶಿವಲಿಂಗವನು ಧಾರಯೇತ್ = ಧರಿಸೂದು. ಕದಾಚಿತ್ = ಒಂದು ವೇಳೆಯೂ ನ ವಿಯೋಜಯೇತ್ = ಅಗಲಲಾಗದು. ||೫೯||

---

[1] ಯಃ ಪರಯಾ (ಗ. ಘ)

ತತಶ್ಶಿಷ್ಯಸ್ಯ ವಿಶ್ವೇಶಧ್ಯಾನಮೇವಂ ಪ್ರಬೋಧಯೇತ್
ಅಮಲಶ್ಲಿಷ್ಟಕೇಶೌಘಮರ್ಧೇಂದೂಪಮಭಾಲಕಮ್ ||೬೦||

ರಾಜೀವಲೋಚನಂ ಮಂದಹಾಸೋಲ್ಲಾಸಮುಖಾಂಬುಜಮ್
ಉನ್ನತಾಂಸದ್ವಯೋಪೇತಂ ಕವಾಟವಿತತೋರಸಮ್ ||೬೧||

ಆಜಾನುಲಂಬದೋಸ್ತಂಭಮಾರಕ್ತಕರಪಲ್ಲವಮ್
ಬೃಹನ್ನಿತಂಬಮರುಣತಲೋನ್ನತಪದಾಂಬುಜಮ್ ||೬೨||

ಕರ್ತಾರಂ ಚಾಖಿಲಜಗನ್ಮನೋನೇತ್ರವಿಮೋಹನಮ್[1]
ಅತಿಸುಂದರಮಾಕಾರಮುದ್ವಹಂತಂ ವಿಲಾಸಿನಮ್ ||೬೩||

ತತಃ = ಅನ್ವರ ಮೇಲೆ ಶಿಷ್ಯಸ್ಯ = ಶಿಷ್ಯಂಗೆ ವಿಶ್ವೇಶಧ್ಯಾನಂ = ವಿಶ್ವೇಶ್ವರನೆ ಹಂಥಾ ಶಿವನ ಧ್ಯಾನವನು ಏವಂ = ಈ ಪ್ರಕಾರದಲ್ಲಿ ಪ್ರಬೋಧಯೇತ್ = ಬೋಧಿಸೂದು. ಅಮಲಶ್ಲಿಷ್ಟಕೇಶೌಘಂ = ನಿರ್ಮಲವಾಗಿ ಸಂಬಂಧಿಸಲುಪಟ್ಟ ಜಡೆಗಳನುಳ್ಳಂಥಾ ಅರ್ಧೇಂದೂಪಮಭಾಲಕಂ = ಅರ್ಧಚಂದ್ರಂಗೆ ಸಮಾನವಹ ಲಲಾಟವನುಳ್ಳಂಥಾ, ||೬೦||

ರಾಜೀವಲೋಚನಂ = ತಾವರೆಯೋಪಾದಿಯ[2]ಕಂ[2]ಗಳನುಳ್ಳಂಥಾ ಮಂದ-ಹಾಸೋಲ್ಲಾಸಮುಖಾಂಬುಜಂ = ಮುಗುಳ್ನಗೆಯಿಂದ ಮನೋಹರಹ ಮುಖಕಮಲವನುಳ್ಳಂಥಾ ಉನ್ನತಾಂಸದ್ವಯೋಪೇತಂ = ಉನ್ನತವಹ ಹೆಗಲೆರಡಱಿಂದ ಕೂಡಲುಪಟ್ಟಂಥಾ ಕವಾಟವಿತತೋರಸಂ = ಕದದೋಪಾದಿಯು ವಿಶಾಲವಹ ವಕ್ಷಃಸ್ಥಲವನುಳ್ಳಂಥಾ, ||೬೧||

ಆಜಾನುಲಂಬದೋಸ್ತಂಭಂ = ಮೊಳಕಾಲು ಪರ್ಯಂತ ನಿಡಿದಹ ಭುಜದಂಡಂಗಳನುಳ್ಳಂಥಾ ಆರಕ್ತಕರಪಲ್ಲವಂ = ಎಲ್ಲಾ ಕಡೆಯಲೂ ಕೆಂಪಹ ಹಸ್ತಂಗಳೆಂಬ ಎಳೆದಳಿರುಗಳನುಳ್ಳಂಥಾ ಬೃಹನ್ನಿತಂಬಂ = ದೊಡ್ಡಿತ್ತಹ ನಿತಂಬಗಳನುಳ್ಳಂಥಾ ಅರುಣತಲೋನ್ನತಪದಾಂಬುಜಂ = ಕೆಂಪಾಗುತ್ತಂವಿದ್ದ ಅಂಗಾಲುಗಳೆಂಬ ಉನ್ನತವಹ ಪದಕಮಲವನುಳ್ಳಂಥಾ, ||೬೨||

ಕರ್ತಾರಂ = ತ್ರೈಲೋಕ್ಯಕರ್ತೃವಹಂಥಾ ಅಖಿಲಜಗನ್ಮನೋನೇತ್ರ-ವಿಮೋಹನಂ = ಸಮಸ್ತಲೋಕಂಗಳಮನಸ್ಸು ಲೋಚನಂಗಳಿಗೆ ಅತಿಮೋಹನವಹಂಥಾ ಅತಿಸುಂದರಂ = ಅತ್ಯಂತ ಚೆಲುವಿಕೆಯನುಳ್ಳಂಥಾ ಆಕಾರಂ = ಮೂರ್ತಿಯನು ಉದ್ವಹಂತಂ = ಧರಿಸುತ್ತಂವಿದ್ದಂಥಾ ವಿಲಾಸಿನಂ = ವಿಲಾಸವನುಳ್ಳಂಥಾ, ||೬೩||

---

[1] ವಿಮೋಹದಂ (ಕ)ವ್ಯಾಖ್ಯಾ ಮನೋಹದಂ (ಘ) [2] ನಯನಂ (ಖ. ಚ)

ಭೋಗೈಕಲಾಲಸಂ ಧ್ಯಾಯೇದ್ದೇವಂ ವಿಶ್ವೇಶಮವ್ಯಯಂ
ಸಂಬೋಧ್ಯ ಧ್ಯಾನರೂಪಂ ತು ಶಿಷ್ಯಸ್ಯಾಮಿತ್ರತೇಜಸಃ ||೬೪||

ಯುಕ್ತೇಷು ನಿಯಮೇಷ್ವೇಕಂ ಕರ್ತುಂ ಶಕ್ಯಂ ಸಮಾದಿಶೇತ್
ಅಕ್ರೋಧೋ ಗುರುಶುಶ್ರೂಷಾ ಶೌಚಮಾಹಾರಲಾಘವಮ್ ||೬೫||

ಅಪ್ರಮಾದಶ್ಚ ಪಂಚೈತೇ ನಿಯಮಾಃ ಸಂಪ್ರಕೀರ್ತಿತಾಃ ||೬೬||

ಅಕ್ರೋಧಸ್ಸತ್ಯವಚನಂ ಸಂವಿಭಾಗೋ ದಮಃ ಕ್ಷಮಾ
ಅನುಗ್ರಹಶ್ಚ ದಾನಂ ಚ ಶೀಲಮೇತತ್ಪ್ರಶಸ್ಯತೇ ||೬೭||

ಗೌರವಂ ಲೈಂಗಿಕಾಚಾರಂ ಪ್ರಸಾದಂ ಚರಣಾಂಬುಕಮ್
[1]ಭಾಕ್ತಿಕಂ ಚ ಮಯಾ ಪ್ರೋಕ್ತಂ ಷಡ್ವಿಧಂ ವ್ರತಮಾಚರೇತ್ ||೬೮||

ಭೋಗೈಕಲಾಲಸಂ = ಭೋಗಂಗಳೊಡನೇ ಮುಖ್ಯವಹ ಲೋಲುಪ್ತಿಯನುಳ್ಳಂಥಾ ಅವ್ಯಯಂ = ಕೇಡಿಲ್ಲದೇ ಇದ್ದಂಥಾ ವಿಶ್ವೇಶಂ — ವಿಶ್ವಕ್ಕೆ ಒಡೆಯನಹಂಥಾ ದೇವಂ — ಪರಮೇಶ್ವರನನು ಧ್ಯಾಯೇತ್ — ಧ್ಯಾನಿಸೂದು. ಅಮಿತ-ತೇಜಸಃ — ಹವಣಿಸಲು ಬಾರದೆ ಇದ್ದ ತೇಜಸ್ಸನುಳ್ಳಂಥಾ ಶಿಷ್ಯಸ್ಯ — ಶಿಷ್ಯಂಗೆ ಧ್ಯಾನರೂಪಂ ತು — ಧ್ಯಾನದ ಸ್ವರೂಪವನು ಸಂಬೋಧ್ಯ — ಲೇಸಾಗಿ ಬೋಧಿಸಿ, ೬೪

ಯುಕ್ತೇಷು = ಕೂಡಲುಪಟ್ಟಂಥಾ ನಿಯಮೇಷು = ನಿಯಮಂಗಳಲ್ಲಿ ಏಕಂ = ಮುಖ್ಯವಹಂಥಾ ಶಕ್ಯಂ = ಸಮರ್ಥವಹಂಥಾ ಆತನಾಗಿ ಕರ್ತುಂ = ಮಾಡಲು ಸಮಾದಿಶೇತ್ = ಆಜ್ಞಾಪಿಸೂದು. ದಿಶ = ಅತಿಸರ್ಜನೇ ಇತಿ ಧಾತುಃ. ಅಕ್ರೋಧಃ = ಕ್ರೋಧವಿಲ್ಲದಿಹಣವು ಗುರುಶುಶ್ರೂಷಾ = ಶ್ರೀಗುರುಸೇವೆಯು ಶೌಚಂ = ಶೌಚವು. ಆಹಾರಲಾಘವಂ = ಅಲ್ಪಾಹಾರವು. ||೬೫||

ಅಪ್ರಮಾದಶ್ಚ = ಮರವೆಯಿಲ್ಲದಿರುಹವು ಏತೇ ಪಂಚ = ಈ ಅಯ್ದು ನಿಯಮಾಃ = ನಿಯಮಂಗಳೆಂದು ಸಂಪ್ರಕೀರ್ತಿತಾಃ = ಹೇಳಲ್ಪಟ್ಟವು. ||೬೬||

ಅಕ್ರೋಧಃ = ಶಾಂತನಾಗಿರುಹವು ಸತ್ಯವಚನಂ = ಸತ್ಯವಾಕ್ಯವು ಸಂವಿಭಾಗಃ = ಹಂಚಿಕೊಂಡುಣುಹವು ದಮಃ = ಇಂದ್ರಿಯ ಜಯವು ಕ್ಷಮಾ = ಸೈರಣೆ ಅನುಗ್ರಹಶ್ಚ = ಪ್ರಸನ್ನನಾಗಿರುಹವು ದಾನಂ ಚ = ದಾನವ ಮಾಡುಹವು ಏತತ್ = ಇದು ಶೀಲಂ = ಶೀಲವೆಂದು ಪ್ರಶಸ್ಯತೇ = ಹೇಳಲುಪಡುತ್ತಿಹುದು. ಪ್ರಪೂರ್ವಕವಹ ಶಂಸು — ಸ್ತುತೌ ಎಂಬ ಧಾತು. ||೬೭||

ಗೌರವಂ = ಗುರುಪೂಜೆಯು ಲೈಂಗಿಕಾಚಾರಂ = ಶಿವಲಿಂಗಪೂಜೆಯು

---

1 ಭ (ಘ)

ಅಕಾರ್ಪಣ್ಯಮನಾಯಾಸಂ ಶೌಚಂ ಶಾಂತಿಂ ದಯಾಂ ತಥಾ
ಅಸ್ಪೃಹಾಮನಸೂಯಾಂ ಚ ಪ್ರಯತ್ನೇನ ವಿಭಾವಯೇತ್ ||೬೯||

ಮಂತ್ರಂ ಜಪನ್[1] ತ್ರಿಸಂಧ್ಯಾಸು ಪೂಜಯೇತ್ಪರಮೇಶ್ವರಮ್
ತಂ ಯಥಾಸಂಭವೈರ್ಗೀತೈರ್ವಾದ್ಯನೃತ್ಯೈಃ ಪ್ರತೋಷಯೇತ್ ||೭೦||

ಪ್ರಾಣೇಶಂ ಲಿಂಗಮಾಕಲ್ಪ್ಯ[2] ಯೋ ಭುಂಕ್ತೇ ಲಿಂಗವರ್ಜಿತಃ
ಸ ಶ್ವಮಾಂಸಂ [3]ಸರುಧಿರಂ ಸಾದರಂ [4]ಭಕ್ಷಿತೋ ಭವೇತ್ ||೭೧||

ಸದಾಚಾರವು ಪ್ರಸಾದಂ = ಪ್ರಸಾದವು ಚರಣಾಂಬುಕಂ = ಪಾದತೀರ್ಥವು ಭಾಕ್ತಿಕಂ ಚ = ಭಕ್ತಿಯಾಗಿರುಹವು ಮಯಾ = ಎನ್ನಿಂದ ಪ್ರೋಕ್ತಂ = ಹೇಳಲು ಪಟ್ಟಿತ್ತು. ಷಡ್ವಿಧಂ = ಆಱುಪ್ರಕಾರವಹಂಥಾ ವ್ರತಂ = ವ್ರತವನು ಆಚರೇತ್ = ಆಚರಿಸೂದು. ||೬೮||

ಅಕಾರ್ಪಣ್ಯಂ = ದೈನ್ಯವಿಲ್ಲದಿರುಹವನು ಅನಾಯಾಸಂ = ಆಯಾಸವಿಲ್ಲದಿರುಹವನು ಶೌಚಂ = ಶೌಚವನು ಶಾಂತಿಂ = ಶಾಂತಿಯನು ತಥಾ = ಹಾಂಗೆ ದಯಾಂ = ಕೃಪೆಯನು ಅಸ್ಪೃಹಾಂ = ಬಯಕೆಯಿಲ್ಲದಿರುಹತನವನು ಅನಸೂಯಾಂ ಚ = ಮತ್ಸರವಿಲ್ಲದಿರುಹತನವನು ಪ್ರಯತ್ನೇನ = ಪ್ರಯತ್ನದಿಂದ ವಿಭಾವಯೇತ್ = ಅಂಗೀಕರಿಸೂದು. ||೬೯||

ತ್ರಿಸಂಧ್ಯಾಸು = ಉದಯ ಮಧ್ಯಾಹ್ನ ಅಸ್ತಮಯ ಕಾಲಂಗಳಲ್ಲಿ ಮಂತ್ರಂ = ಶಿವಮಂತ್ರವನು ಜಪನ್ = ಜಪಿಸುತ್ತವು ಪರಮೇಶ್ವರನನು ಪೂಜಯೇತ್ = ಪೂಜಿಸೂದು. ತಂ = ಆ ಪರಮೇಶ್ವರನನು ಯಥಾಸಂಭವೈಃ = ಎಹಗೆ ಒದಗಿದಂಥಾ ಗೀತೈಃ = ಗೀತಂಗಳಿಂದ ವಾದ್ಯನೃತ್ಯೈಃ = ವಾದ್ಯಂಗಳಿಂದ ನೃತ್ಯಂಗಳಿಂದ ಪ್ರತೋಷಯೇತ್ = ಸಂತೋಷವ ಮಾಡೂದು. ||೭೦||

ಯಃ = ಆವನಾನೊಬ್ಬನು ಲಿಂಗಂ = ಶಿವಲಿಂಗವನು ಪ್ರಾಣೇಶಂ = ಪ್ರಾಣೇಶ್ವರನನಾಗಿ ಆಕಲ್ಪ್ಯ = ಕಲ್ಪಿಸಿ ಲಿಂಗವರ್ಜಿತಃ = ಲಿಂಗವಿರಹಿತನಾಗಿ ಭುಂಕ್ತೇ = ಉಣುತ್ತಿಹನು ಸಃ = ಆತನು ಸರುಧಿರಂ = ರಕ್ತದಿಂದ ಸಹಿತವಹಂಥಾ ಶ್ವಮಾಂಸಂ = ನಾಯಮಾಂಸವನು ಸಾದರಂ = ಆದರದಿಂದ ಸಹಿತವಾಗಿ ಭಕ್ಷಿತಃ = ಭಕ್ಷಿಸಿದಾತನು ಭವೇತ್ = ಅಹನು. ||೭೧||

---

1 ಜಪ್ತ್ವಾ (ಘ). 2 ಮಾಕ್ಷಿಪ್ಯ (ಘ) ಮೂಲಪಾಠ. ಮಾಕಲ್ಪ್ಯ (ಘ) ಪಾಠಾಂತರ
3 ಶ್ವ (ಘ) 4 ಭಕ್ಷಕೋ (ಗ).

ಉಪಭೋಗಾಯ ಪುರತೋ ವಸ್ತು ಯದ್ಯದುಪಸ್ಥಿತವತ್
ತತ್ತತ್ಸಮರ್ಪ್ಯ ದೇವಾಯ ವಿದಧೀತಾತ್ಮಸಾತ್ತತಃ ॥೭೨॥

ಯಾ ಯಾ ಕ್ರಿಯಾ ವಿಧಾತವ್ಯಾ ಪ್ರಸ್ತುತಾ ಜಾಯತೇ ಪುರಾ
ತಾಂ ತಾಂ ಕುರ್ಯಾನ್ಮಹಾದೇವಸಮರ್ಪಣಧಿಯಾ ಸುಧೀಃ ॥೭೩॥

ಅಸಮರ್ಪ್ಯ ಯದೀಶಾಯ ವಸ್ತು ಕಿಂಚಿತ್ಕದಾಚನ
ಕಥಂಚಿನ್ನೋಪಭುಂಜೀತ ಶಿವಭಕ್ತಿಪರೋ ನರಃ ॥೭೪॥

ಯದಿಂದ್ರಿಯಮುಖಾದ್ದೇಯಂ ತದಿಂದ್ರಿಯಮುಖಾಚ್ಚರೇತ್
ಅನ್ಯೇಂದ್ರಿಯೋಪಭುಕ್ತಂ ಚೇದನರ್ಹಂ ಭೂಷಣಾದಿವತ್ ॥೭೫॥

ಉಪಭೋಗಾಯ = ಭೋಗಿಸಲೋಸ್ಕರ ಪುರತಃ = ಮುಂದೆ ಯತ್ ಯತ್ = ಆವಾವ ವಸ್ತು = ವಸ್ತುವು ಉಪಸ್ಥಿತಂ = ಬಂದಿದ್ದೊದು ತತ್ ತತ್ = ಅದನದನು ದೇವಾಯ = ಪರಮೇಶ್ವರಂಗೋಸ್ಕರ ಸಮರ್ಪ್ಯ = ಸಮರ್ಪಿಸಿ ತತಃ = ಅಷ್ಟುಋಮೇಲೆ ಆತ್ಮಸಾತ್ = ತನ್ನಾಧೀನವನು ವಿದಧೀತ = ಮಾಡೂದು ॥೭೨॥

ಪುರಾ = ಮುಂದೆ ಪ್ರಸ್ತುತಾ = ಕಾಲೋಚಿತವಹಂಥಾ ಯಾ ಯಾ = ಆವುದಾವುದು ಕ್ರಿಯಾ = ಕ್ರಿಯೆ ವಿಧಾತವ್ಯಾ = ಮಾಡಲು ಯೋಗ್ಯವಹಂಥಾದು ಜಾಯತೇ = ಆಗುತ್ತಿಹುದು ಸುಧೀಃ = ಬುದ್ಧಿಯನುಳ್ಳಾತನು ತಾಂ ತಾಂ = ಅದನದನು ಮಹಾದೇವಸಮರ್ಪಣಧಿಯಾ = ಪರಮೇಶ್ವರಂಗೆ ಸಮರ್ಪಿಸುವ ಬುದ್ಧಿಯಿಂದ ಕುರ್ಯಾತ್ = ಮಾಡೂದು. ॥೭೩॥

ಶಿವಭಕ್ತಿಪರಃ = ಶಿವಭಕ್ತಿಯಲ್ಲಿ ತತ್ಪರನಹಂಥಾ ನರಃ = ಮನುಷ್ಯನು ಯತ್ಕಿಂಚಿತ್ = ಆವುದಾನೊಂದು ವಸ್ತು = ಪದಾರ್ಥವನು ಈಶಾಯ = ಪರಮೇಶ್ವರಂಗೋಸ್ಕರ ಅಸಮರ್ಪ್ಯ = ಸಮರ್ಪಿಸದೆ ಕದಾಚನ = ಓದಾನೊಂದು ವೇಳೆಯಾದರೂ ಕಥಂಚಿತ್ = ಎಂತಕ್ಕೆಯೂ ನೋಪಭುಂಜೀತ = ಭುಂಜಿಸಲಾಗದು.

ಯದಿಂದ್ರಿಯಮುಖಾತ್ = ಆವುದಾನೊಂದು ಇಂದ್ರಿಯದ ಮುಖದ ದೆಸೆಯಿಂದ ದೇಯಂ = ಕೊಡಬೇಕಾದಂಥಾದ್ದು ತದಿಂದ್ರಿಯಮುಖಾತ್ = ಆ ಇಂದ್ರಿಯದ ಮುಖದ ದೆಸೆಯಿಂದ ಚರೇತ್ = ಮಾಡೂದು. ಅನ್ಯೇಂದ್ರಿಯೋಪಭುಕ್ತಂ ಚೇತ್ = ಮತ್ತೊಂದು ಇಂದ್ರಿಯದ ದೆಸೆಯಿಂದ ಭೋಗಿಸಲುಪಟ್ಟುದಾದ ಪಕ್ಷೇ ಅನರ್ಹಂ = ಯೋಗ್ಯವಲ್ಲ. ಅದು ಹೇಂಗೆಂದರೆ, ಭೂಷಣಾದಿವತ್ = ಆಭರಣ ಮೊದಲಾದವ ಹಾಂಗೆ.

ಶಿವನಿಂದಾಪರಂ ವಾಕ್ಯಂ ಶ್ರುತ್ವಾ ತದ್ವಕ್ತ್ರಶಿಕ್ಷಣಮ್
ಕುರ್ಯಾದನ್ಯತ್ರ ವಾ ಗಚ್ಛೇದಶಕ್ತೋಽಪಿ ಹಿತಾ ಶ್ರುತಿಃ[1] ||೭೬||

ಶಿವಾಲಯಶಿವಾರಾಮಶಿವಗ್ರಾಮಾಭಿರಕ್ಷಣೇ
ತಾತ್ಪರ್ಯಮನಿಶಂ ಕುರ್ಯಾದನ್ಯಾಸ್ತದಪಹಾರಿಣಃ ||೭೭||

ಶಿವದ್ರವ್ಯಾಪಹಾರಾಯ ಪ್ರವೃತ್ತಂ ಮನುಜಾಧಮಮ್
ಜ್ಞಾತ್ವಾ ತನ್ಮಾರಣಂ ಕುರ್ಯಾತ್ ಸ ಯಾತಿ ಪರಮಾಂ ಗತಿಮ್ ||

ಈ ಶ್ಲೋಕದ ತಾತ್ಪರ್ಯವೇನೆಂದಡೆ—ನಯನೇಂದ್ರಿಯದಲ್ಲಿ ಸಮರ್ಪಿಸುವಂಥಾ ವಸ್ತು ನಯನೇಂದ್ರಿಯದಲ್ಲಿ ಸಮರ್ಪಿಸಬೇಕು. ಶ್ರವಣೇಂದ್ರಿಯದಲ್ಲಿ ಸಮರ್ಪಿಸಲಾಗದು. ಆವಾವ ಇಂದ್ರಿಯಂಗಳಲ್ಲಿ ಸಮರ್ಪಿಸಬೇಕಾದಂಥಾ ವಸ್ತು ಆ ಆ ಇಂದ್ರಿಯಂಗಳಲ್ಲಿಯೆ ಸಮರ್ಪಿಸಬೇಕು. ಅದು ಹೇಂಗೆಂದಡೆ ಕಿವಿಯಲ್ಲಿ ಇಕ್ಕುವ ಆಭರಣ ಕಿವಿಗೆ ಯೋಗ್ಯವಲ್ಲದೆ ತೋಳಿಂಗೆ ಯೋಗ್ಯವಲ್ಲ. ಆವಾವ ಸ್ಥಾನದ ಆಭರಣ ಆ ಆಸ್ಥಾನಂಗಳಿಗೆ ಯೋಗ್ಯವು. ಆ ಪರಿಯಿಂದಱಿವುದು. ||೭೫||

ಶಿವನಿಂದಾಪರಂ = ಶಿವನಿಂದೆಯಲ್ಲಿ ತಾತ್ಪರ್ಯವಹಂಥಾ ವಾಕ್ಯಂ = ವಾಕ್ಯವನು ಶ್ರುತ್ವಾ = ಕೇಳಿ ತದ್ವಕ್ತ್ರಶಿಕ್ಷಣಂ = ಆ ನಿಂದಿಸುವ ಬಾಯಿಗೆ ಶಿಕ್ಷೆಯನು ಕುರ್ಯಾತ್ = [2]ಮಾಡುವುದು.[2] ವಾ = ಅಲ್ಲದಿದ್ದಪಕ್ಷೇ ಅಶಕ್ತೋಽಪಿ = ಸಾಮರ್ಥ್ಯವಿಲ್ಲದಿದ್ದರೂ ಅನ್ಯತ್ರ = ಮತ್ತೊಂದು ಠಾವಿಂಗೆ ಗಚ್ಛೇತ್ = ಹೋಹುದು. ಶ್ರುತಿಃ = ವೇದವು ಹಿತಾ = ಹಿತವಾಗಿ ಹೇಳಿತ್ತು. ೭೬

ಶಿವಾಲಯಶಿವಾರಾಮಶಿವಗ್ರಾಮಾಭಿರಕ್ಷಣೇ = ಶಿವಾಲಯವು [3]ಶಿವೋದ್ಯಾನ[3]ವನವು ಶಿವಗ್ರಾಮಂಗಳ ರಕ್ಷಿಸುವಲ್ಲಿ ತಾತ್ಪರ್ಯಂ = ತಾತ್ಪರ್ಯವನು ಅನಿಶಂ = ಅನವರತವು ಕುರ್ಯಾತ್ = ಮಾಡೂದು. ತದಪಹಾರಿಣಃ = ಆ ಶಿವಗ್ರಾಮ ಮೊದಲಾದಂಥಾವ ಅಪಹರಿಸುವಂಥಾವರುಗಳು ಅನ್ಯಾಃ = [4]ಕೆಲಂಬರುಗಳುಂಟು[4]. ಅದಕ್ಕೆ ನಿರ್ಣಯವ ಹೇಳುತ್ತಿದ್ದಾನು ; ||೭೭||

ಶಿವದ್ರವ್ಯಾಪಹಾರಾಯ = ಶಿವಸ್ಥಾನದ ಒಡವೆಯನು ಅಪಹರಿಸಲೋಸ್ಕರ ಪ್ರವೃತ್ತಂ = ವರ್ತಿಸುತ್ತಿದ್ದಂಥಾ ಮನುಜಾಧಮಂ = ನರಾಧಮನನು ಜ್ಞಾತ್ವಾ = ಅಱಿದು ತನ್ಮಾರಣಂ = ಅವನ ಸಂಹಾರವನು ಕುರ್ಯಾತ್ = ಮಾಡೂದು ಸಃ = ಆತನು ಪರಮಾಂ ಉತ್ಕೃಷ್ಟವಹಂಥಾ ಗತಿಂ = ಗತಿಯಹಂಥಾ ಶಿವಲೋಕವನು ಯಾತಿ = ಎಯ್ದುವನು. ||೭೮||

---

[1] [ವಿಹಿತಾ ಶ್ರುತಿಃ ?] [2] ಮಾಡೂದು (ಕ).
[3] ಶಿವನ ಉದ್ಯಾನ (ಕ) [4] ಕೆಲಂಬರುಂಟು (ಕ)

ಶಿವಚಿಹ್ನಾಂಕಿತಂ ವತ್ಸಂ ಹಂತಿ ಯೋ ದುರ್ಜನೋ ಜನಃ
[1]ತಂ ಹನ್ಯಾತ್[1] ಸ್ವೇನ ಹಸ್ತೇನ [2]ವೀರಮಾಹೇಶ್ವರವ್ರತೀ[2] ॥೭೯॥

ಶಿವಭಕ್ತಜನದ್ರೋಹವಿಧಾಯಿನಿ ದುರಾತ್ಮನಿ
ನ ಕದಾಚಿದ್ದಯಾಂ ಕುರ್ಯಾತ್ತನ್ಮರ್ದನಪರೋ ಭವೇತ್ ॥೮೦॥

ಶಿವಾರ್ಥಂ ಯಸ್ತ್ಯಜೇತ್ಪ್ರಾಣಾನ್ ಶಿವಭಕ್ತಾರ್ಥಮೇವ ವಾ
ಶಿವಾಗಮಾರ್ಥಮಥವಾ ಶಿವಾಚಾರಾರ್ಥಮೇವ ವಾ ॥
ನ ತೇನ ಸದೃಶಃ ಕಶ್ಚಿನ್ಮುಕ್ತಿಮಾರ್ಗಸ್ಥಿತೋ ನರಃ ॥೮೧॥

ಶಿವಚಿಹ್ನಾಂಕಿತಂ = ಲಿಂಗಮುದ್ರೆಯ ಕುರುಹಿನಿಂದ ಅಂಕಿತವಾದಂಥಾ ವತ್ಸಂ = ಹೋರಿಯನು ಯಃ = ಆವನಾನೊಬ್ಬ ದುರ್ಜನಃ = ದುರಾತ್ಮನಹಂಥಾ ಜನಃ = ಮನುಷ್ಯನು ಹಂತಿ = ಕೊಲ್ಲುತ್ತಿಹನು. ಹನ = ಹಿಂಸಾಗತ್ಯೋಃ ಎಂಬ ಧಾತು. ತಂ = ಆ ದುರಾತ್ಮನನು ವೀರಮಾಹೇಶ್ವರವ್ರತೀ = ವೀರಮಾಹೇಶ್ವರನಹಂಥಾ ವ್ರತಿ ಸ್ವೇನ ಹಸ್ತೇನ = ತನ್ನ ಹಸ್ತದಿಂದ ಹನ್ಯಾತ್ = ಕೊಲುವುದು. ॥೭೯॥

ಶಿವಭಕ್ತಜನದ್ರೋಹವಿಧಾಯಿನಿ = ಶಿವಭಕ್ತಜನಕ್ಕೆ ದ್ರೋಹವ ಮಾಡಿದಂಥಾ ದುರಾತ್ಮನಿ = ದುರಾತ್ಮನಲ್ಲಿ ದಯಾಂ = ಕೃಪೆಯನು ಕದಾಚಿತ್ = ಒಮ್ಮೆಯು ನ ಕುರ್ಯಾತ್ = ಮಾಡಲಾಗದು. ತನ್ಮರ್ದನಪರಃ = ಆ ದುರಾತ್ಮನ ಕೊಲುವಲ್ಲಿ ತಾತ್ಪರ್ಯವನುಳ್ಳಾತನು ಭವೇತ್ = ಅಹುದು. ॥೮೦॥

ಯಃ = ಆವನಾನೊಬ್ಬನು ಶಿವಾರ್ಥಂ = ಶಿವನಿಮಿತ್ತವಾಗಿ ವಾ = ಅಲ್ಲಾ ಶಿವಭಕ್ತಾರ್ಥಮೇವ = ಶಿವಭಕ್ತರು ನಿಮಿತ್ತವಾಗಿಯೇ ಅಥವಾ = ಅಲ್ಲದಿದ್ದ [3]ಪಕ್ಷದಲ್ಲಿ[3] ಶಿವಾಗಮಾರ್ಥಂ = ಶಿವಾಗಮ ನಿಮಿತ್ತವಾಗಿ ವಾ = ಅಲ್ಲಾ ಶಿವಾಚಾರಾರ್ಥಮೇವ ವಾ = ಶಿವಾಚಾರಕ್ಕೋಸ್ಕರವೇ ಪ್ರಾಣಾನ್ = ಪ್ರಾಣಂಗಳನು ತ್ಯಜೇತ್ = ಬಿಡುವನು, ತೇನ = ಆತನೊಡನೆ ಸದೃಶಃ = ಸಮಾನವಹಂಥಾ ಮುಕ್ತಿಮಾರ್ಗಸ್ಥಿತಃ = ಮುಕ್ತಿ ಮಾರ್ಗದಲ್ಲಿ ಇದ್ದಂಥಾ ಕಶ್ಚಿತ್ = ಒಬ್ಬಾನೊಬ್ಬ ನರಃ = ಮನುಷ್ಯನು ನ = ಇಲ್ಲ. ॥೮೧॥

---

[1] ಹನ್ಯಾತ್ತಂ (ಘ) [2] ವೀರಮಾಹೇಶ್ವರೋ ವ್ರತೀ (ಘ)
[3] ಪಕ್ಷೇ (ಖ. ಚ.)

ಶಿವಭಕ್ತಂ ಸಮಾಲೋಕ್ಯ ದೂರಾದೇವಾತಿಭಕ್ತಿತಃ
ಪ್ರಾಂಜಲಿಃ ಪ್ರಣತೋ ಭೂತ್ವಾ ತೋಷಯೇನ್ಮೃದುಭಾಷಯಾ ||೮೨||

ಸ್ವಶಕ್ತ್ಯಾ ಶಿವಭಕ್ತಸ್ಯ ಜನಸ್ಯಾಭ್ಯಾಗತಸ್ಯ ಚ
ಸಂತೋಷಂ ಸತತಂ ಕುರ್ಯಾತ್ ಭೋಜನಾಚ್ಛಾದನಾದಿಭಿಃ ||೮೩||

ಶಿವಕಿಂಕರಭೂತೋಽಹಮಿತಿ ನಿತ್ಯಂ ವಿಭಾವಯೇತ್
ತತ್ಕಾರ್ಯಮನಿಶಂ ಕುರ್ಯಾತ್ತತ್ಕರ್ತವ್ಯಮಿತಿ ಬ್ರುವನ್ ||೮೪||

ಏವಂ ನಿರ್ವಹತೇ ಯಸ್ತು ಯಾವಜ್ಜೀವಂ ಪ್ರತಿಜ್ಞಯಾ
ಮನುಷ್ಯಚರ್ಮಣಾ ಬದ್ಧಃ ಸ ರುದ್ರೋ ನಾತ್ರ ಸಂಶಯಃ ||೮೫||

ಶಿವಭಕ್ತಂ = ಶಿವಭಕ್ತನನು ಸಮಾಲೋಕ್ಯ = ಕಂಡು ದೂರಾದೇವ = ದೂರದ ದೆಸೆಯಿಂದವೇ ಅತಿಭಕ್ತಿತಃ = ಅತ್ಯಂತ ಭಕ್ತಿಯಿಂದ ಪ್ರಾಂಜಲಿಃ = ಕೈಮುಗಿದುಕೊಂಡು ಪ್ರಣತಃ = ನಮಸ್ಕರಿಸಿದಾತನು ಭೂತ್ವಾ = ಆಗಿ ಮೃದುಭಾಷಯಾ = ಮೃದು ವಾಕ್ಯದಿಂದ ತೋಷಯೇತ್ = ಸಂತೋಷಿಸೂದು. ತುಷ-ತುಷ್ಟೌ ಇತಿ ಧಾತುಃ ||೮೨||

ಅಭ್ಯಾಗತಸ್ಯ = ಬಂದಂಥಾ ಶಿವಭಕ್ತಸ್ಯ ಜನಸ್ಯ = ಶಿವಭಕ್ತ ಜನಕ್ಕೆ ಸ್ವಶಕ್ತ್ಯಾ = ತನ್ನ ಶಕ್ತಿಯಿಂದ ಭೋಜನಾಚ್ಛಾದನಾದಿಭಿಃ = ಅನ್ನ ವಸ್ತ್ರ ಮೊದಲಾಗಿದ್ದಂಥಾ ಅವಪ್ರಿಂದ ಸತತಂ = ಆವಾಗವು ಸಂತೋಷಂ = ಸಂತೋಷವನು ಕುರ್ಯಾತ್ = ಮಾಡೂದು. ||೮೩||

ಅಹಂ = ನಾನು ಶಿವಕಿಂಕರಭೂತಃ = ಶಿವನ ಕಿಂಕರನಹಂಥಾ ಆತನು ಇತಿ = ಹೀಗೆಂದು ನಿತ್ಯಂ = ಆವಾಗವು ವಿಭಾವಯೇತ್ = ವಿಶೇಷವಾಗಿ ಭಾವಿಸೂದು. ತತ್ಕಾರ್ಯಂ = ಆ ಶಿವನ ಕಾರ್ಯವನು ಅನಿಶಂ = ಆವಾಗವು ಕುರ್ಯಾತ್ = ಮಾಡೂದು. ತತ್ = ಅದು ಕರ್ತವ್ಯಂ = ಮಾಡಬೇಕಾದ್ದು ಇತಿ = ಹೀಗೆಂದು ಬ್ರುವನ್ = ಆಚಾರ್ಯನು ಹೇಳೂದು. ||೮೪||

ಏವಂ = ಈ ಪ್ರಕಾರದಲ್ಲಿ ಯಸ್ತು = ಆವನಾನೊಬ್ಬನು ಪ್ರತಿಜ್ಞಯಾ = ಪ್ರತಿಜ್ಞೆಯಿಂದ ಯಾವಜ್ಜೀವಂ = ಪ್ರಾಣವುಳ್ಳಲ್ಲಿ ಪರಿಯಂತವು ನಿರ್ವಹತೇ = ನಿರ್ವಹಿಸುತ್ತಿಹನು ಸಃ = ಆತನು ಮನುಷ್ಯಚರ್ಮಣಾ = ಮನುಷ್ಯಚರ್ಮದಿಂದ ಬದ್ಧಃ = ಸಂಬಂಧಿಸಲುಪಟ್ಟಂಥಾ ರುದ್ರಃ = ರುದ್ರನು. ಅತ್ರ = ಈ ಅರ್ಥದಲ್ಲಿ ಸಂಶಯಃ = ಸಂದೇಹವು ನ = ಇಲ್ಲ. ||೮೫||

ಉಕ್ತೇಷು ನಿಯಮೇಷ್ವೇಕಂ ಕರ್ತುಂ ಶಕ್ಯಂ ಸಮಾಚರೇತ್
ಶಿಷ್ಯಸ್ತು ದಕ್ಷಿಣಾಂ ದದ್ಯಾದಾಚಾರ್ಯಾಯ ಸ್ವಶಕ್ತಿತಃ ||೮೬||

ಗುರೂಪದೇಶಮಾರ್ಗೇಣ ಕುರ್ಯಾತ್ಸನ್ಮಾನಮೃತ್ವಿಜಾಮ್
ತದಾ ಪ್ರಭೃತಿ ಗುರ್ವಂಘ್ರಿಪದ್ಮಯೋರ್ದಂಡವತ್ಪತೇತ್ ||೮೭||

ಅಭಿಮಾನೋ ನ ಕರ್ತವ್ಯೋ ಜಾತಿವಿದ್ಯಾಧನಾದಿಭಿಃ
ನ ಲಂಘಯೇದ್ಗುರೋರ್ವಾಕ್ಯಂ ತಸ್ಯಾಗ್ರೇ ಪ್ರಾಂಜಲಿರ್ಭವೇತ್ ||೮೮||

ನಿತ್ಯಂ ಭವೇದ್ಗುರುಶಿವಶ್ರೀಪಾದಾಬ್ಜಪರಾಯಣಃ
ಸ ಏವ ಜನಕೋ ಮಾತಾ ಭ್ರಾತಾ ಬಂಧುರ್ಧನಂ ಸುಖಮ್ ||೮೯||

ಉಕ್ತೇಷು = ಹೇಳಿದಂಥಾ ನಿಯಮೇಷು = ನಿಯಮಂಗಳಲ್ಲಿ ಏಕಂ = ಮುಖ್ಯವಹಂಥಾ ಶಕ್ಯಂ = ಸಮರ್ಥನಾಗಿ ಕರ್ತುಂ = ಮಾಡಲು ಸಮಾಚರೇತ್ = ಆಚರಿಸೂದು. ಶಿಷ್ಯಸ್ತು = ಶಿಷ್ಯನು ಸ್ವಶಕ್ತಿತಃ = ತನ್ನ ಶಕ್ತಿಯಿಂದ ಆಚಾರ್ಯಾಯ = ಆಚಾರ್ಯಂಗೋಸ್ಕರ ದಕ್ಷಿಣಾಂ = ದಕ್ಷಿಣೆಯನು ದದ್ಯಾತ್ = ಕೊಡುವುದು. ದಾಞ್ ದಾನೇ ಎಂಬ ಧಾತು. ||೮೬||

ಗುರೂಪದೇಶಮಾರ್ಗೇಣ = ಶ್ರೀಗುರುವಿನ ಉಪದೇಶ ಮಾರ್ಗದಿಂದ ಋತ್ವಿಜಾಂ = ನಾಲ್ವರು ಋತ್ವಿಕ್ಕುಗಳಹಂಥಾ ಕಳಶಾಚಾರ್ಯರುಗಳಿಗೆ ಸನ್ಮಾನಂ = ಸತ್ಕಾರ ವನು ಕುರ್ಯಾತ್ = ಮಾಡೂದು. ತದಾಪ್ರಭೃತಿ = ಅಂದು ಮೊದಲಾಗಿ ಗುರ್ವಂಘ್ರಿಪದ್ಮಯೋಃ = ಗುರುಚರಣಕಮಲಂಗಳಿಗೆ ದಂಡವತ್ = ದಂಡದೋಪಾದಿ ಪತೇತ್ = ಬಿದ್ದು ನಮಸ್ಕರಿಸೂದು. ||೮೭||

ಜಾತಿವಿದ್ಯಾಧನಾದಿಭಿಃ = ಜಾತಿ ವಿದ್ಯೆ ಧನ ಮೊದಲಾದಚಿಂದ ಅಭಿಮಾನಃ = ಗರ್ವವು ನ ಕರ್ತವ್ಯಃ = ಮಾಡಲು ಯೋಗ್ಯ ಅಲ್ಲ. ಗುರೋಃ = ಶ್ರೀ ಗುರುವಿನ ವಾಕ್ಯಂ = ವಾಕ್ಯವನು ನ ಲಂಘಯೇತ್ = ಮೀಱಲಾಗದು. ತಸ್ಯ = ಆ ಶ್ರೀಗುರುವಿನ ಅಗ್ರೇ = ಇದಿರಿನಲ್ಲಿ ಪ್ರಾಂಜಲಿಃ = ಕೈ ಮುಗಿದುಕೊಂಡು ಇಹಾತನು ಭವೇತ್ = ಅಹುದು. ||೮೮||

ನಿತ್ಯಂ = ಅನಾಗವು ಗುರುಶಿವಶ್ರೀಪಾದಾಬ್ಜಪರಾಯಣಃ = ಗುರುವಿನ ಶಿವನ ಶ್ರೀಚರಣಕಮಲಂಗಳಲ್ಲಿ ತಾತ್ಪರ್ಯವುಳ್ಳಾತನು ಭವೇತ್ = ಅಹುದು. ಸ ಏವ = ಆ ಶ್ರೀಗುರುವೇ ಜನಕಃ = ತಂದೆ ಮಾತಾ = ತಾಯಿ ಭ್ರಾತಾ = ಒಡಹುಟ್ಟಿವನು ಬಂಧುಃ = ಬಾಂಧವನು ಧನಂ ಚ = ಧನವು ಸುಖಂ = ಸುಖವು. ||೮೯||

ಸಖಾ ಮಿತ್ರಂ ಚ ಯತ್ತಸ್ಮಾತ್ತಸ್ಮೈ ಸರ್ವಂ ನಿವೇದಯೇತ್
ನಿವೇದ್ಯ ಪಶ್ಚಾತ್ ಸ್ವಾತ್ಮಾನಂ ಸಾನ್ವಯಂ ಸಪರಿಗ್ರಹವತ್ ||೯೦||

ಸಮರ್ಪ್ಯ ಸೋದಕಂ ತಸ್ಮೈ ನಿತ್ಯಂ ತದ್ವಶಗೋ ಭವೇತ್ ||೯೧||
ಯದಾ ಶಿವಾಯ ಸ್ವಾತ್ಮಾನಂ ದತ್ತವಾನ್ ದೇಶಿಕಾತ್ಮನೇ
ತದಾ ಶಿವೋ ಭವೇದ್ದೇವಿ ನ ತತೋಽಸ್ತಿ ಪುನರ್ಭವಃ ||೯೧||

ಏವಮಾಚರತೋ ದೇವಿ ಸೌಭಾಗ್ಯಮಭಿವರ್ಧತೇ
ಸಮಸ್ತಭೋಗಸಂಪತ್ತಿಸ್ಸಮ್ಯಕ್ಸಮುಪಜಾಯತೇ ||೯೨||

ಆಯುರಾರೋಗ್ಯತಾಂ ಯಾತಿ ಯಶೋ ಯಾತಿ ವಿಶುದ್ಧತಾವತ್
ವಿದ್ಯಾಽನವದ್ಯತಾಂ ಯಾತಿ ಭೂತಿಮೇತಿ ಪ್ರಭೂತತಾವತ್ ||೯೩||

ಸಖಾ = ಸಂಗಡಿಗನು ಮಿತ್ರಂ ಚ = ಮಿತ್ರನು. ತಸ್ಮಾತ್ = ಅದುಕಾರಣವಾಗಿ ಯತ್ = ಅವುದಾನೊಂದು ಸರ್ವಂ = ಸಮಸ್ತ ವಸ್ತುವನು ತಸ್ಮೈ = ಆ ಶ್ರೀ ಗುರುವಿಂಗೋಸ್ಕರ ನಿವೇದಯೇತ್ = ಸಮರ್ಪಿಸೂದು ಪಶ್ಚಾತ್ = ಬಳಿಕ ಸಪರಿಗ್ರಹಂ = ಸ್ತ್ರೀಯಿಂದ ಸಹಿತನಹಂಥಾ ಸಾನ್ವಯಂ = ವಂಶದಿಂದ ಸಹಿತನಾದಂಥಾ ಸ್ವಾತ್ಮಾನಂ = ತನ್ನ ಶರೀರವನು ನಿವೇದ್ಯ = ಸಮರ್ಪಿಸಿ. ||೯೦||

ಸೋದಕಂ = ಉದಕದಿಂದ ಸಹಿತವಾಗಿ ತಸ್ಮೈ = ಆ ಗುರುವಿಂಗೋಸ್ಕರ ಸಮರ್ಪ್ಯ = ಸಮರ್ಪಿಸಿ ನಿತ್ಯಂ = ಆವಾಗವು ತದ್ವಶಗಃ = ಗುರುವಿನ ವಶವನೈದಿದಾತನು ಭವೇತ್ = ಅಹುದು. ||೯೧||

ಯದಾ = ಆವಾಗ ದೇಶಿಕಾತ್ಮನೇ = ಆಚಾರ್ಯನ ರೂಪನುಳ್ಳಂಥಾ ಶಿವಾಯ = ಶಿವಂಗೋಸ್ಕರ ಸ್ವಾತ್ಮಾನಂ = ತನ್ನ ಶರೀರವನು ದತ್ತವಾನ್ = ಕೊಡುವನು ತದಾ = ಆಗ ಶಿವಃ = ಶಿವನು ಭವೇತ್ = ಅಹನು. ಭೋ ದೇವಿ ! = ಎಲೆ ಪಾರ್ವತೀದೇವಿ ! ತತಃ = ಅದು ಕಾರಣವಾಗಿ ಪುನರ್ಭವಃ = ಮರಳಿ ಹುಟ್ಟುಹವು ನಾಸ್ತಿ = ಇಲ್ಲ. ||೯೧||

ಹೇ ದೇವಿ ! = ಎಲೆ ಪಾರ್ವ[1]ತೀ ದೇವಿ ! ಏವಂ = ಈ ಪ್ರಕಾರದಲ್ಲಿ ಆಚರತಃ = ಆಚರಿಸುವಂಗೆ ಸೌಭಾಗ್ಯಂ = ಸೌಭಾಗ್ಯವು ಅಭಿವರ್ಧತೇ = ಹೆಚ್ಚುತ್ತಿಹುದು. ವೃಧು—ವರ್ಧನೇ ಇತಿ ಧಾತುಃ. ಸಮಸ್ತಭೋಗಸಂಪತ್ತಿಃ = ಸಮಸ್ತ ಭೋಗಂಗಳ ಸಮೃದ್ಧಿಯು ಸಮ್ಯಕ್ = ಲೇಸಾಗಿ ಸಮುಪಜಾಯತೇ = [2]ಅಗುತ್ತಿಹುದು.[2] ||೯೨||

ಆಯುಃ = ಆಯುಷ್ಯವನು ಆರೋಗ್ಯತಾಂ = ಆರೋಗ್ಯತೆಯನು ಯಾತಿ =

---

[1] ತಾ (ಕ). [2] ಆಗೂದು (ಕ)

ಅನೇಕಜನ್ಮಸಮ್ಬನ್ಧಾದ್ದೂರಂ ಯಾನ್ತ್ಯಘಸಙ್ಘಯಾಃ
ಭೂತಪ್ರೇತಪಿಶಾಚಾದ್ಯಾಃ ಪಲಾಯನ್ತೇ ಭಯಾತುರಾಃ ||೯೪||

ವೀರಮಾಹೇಶ್ವರಃ ಸೌಖ್ಯಾನ್ಯೈಹಿಕಾನ್ಯಖಿಲಾನ್ಯಪಿ
ಭುಕ್ತ್ವಾ ಯಥೇಷ್ಟಂ ವಿಶ್ವೇಶಪ್ರಸಾದಾನ್ಮುಕ್ತಿಮಾಶ್ರಯೇತ್ ||೯೫||

ಇತಿ ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಸುಧಾರ್ಣವಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಮಲ್ಲಿಕಾರ್ಜುನಾಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾವಿವರಣೇ "ವೀರಮಾಹೇಶ್ವರದೀಕ್ಷಾವಿಧಾನಂ" ನಾಮ ಷಷ್ಠೋಽಧ್ಯಾಯಃ ||

ಎಯ್ದುತ್ತಿಹನು. ಯಶಃ = ಕೀರ್ತಿಯನು ವಿಶುದ್ಧತಾಂ = ಶುದ್ಧತ್ವವನು ಯಾತಿ = ಎಯ್ದುತ್ತಿಹನು. ವಿದ್ಯಾನವದ್ಯತಾಂ = ವಿದ್ಯೆಂಗಳ ಸಂಪೂರ್ಣತ್ವವನು ಯಾತಿ = ಎಯ್ದುತ್ತಿಹನು. ಭೂತಿಂ = ಐಶ್ವರ್ಯವನು ಪ್ರಭೂತತಾಂ = ಬಹಳವಹೆತನವನು ಏತಿ = ಎಯ್ದುತ್ತಿಹನು. ||೯೩||

ಅನೇಕಜನ್ಮಸಮ್ಬನ್ಧಾತ್ = ಹಲವು ಜನ್ಮಂಗಳ ಸಂಬಂಧವಹಂಥಾ ಅಘಸಙ್ಘಯಾಃ = ಪಾಪಂಗಳ ಸಮೂಹಂಗಳು ದೂರಂ = ದೂರವನು ಯಾನ್ತಿ = ಎಯ್ದುತ್ತಿಹವು. ಭೂತಪ್ರೇತಪಿಶಾಚಾದ್ಯಾಃ = ಭೂತ ಪ್ರೇತಪಿಶಾಚಾದಿಗಳು ಮೊದಲಾದಂಥಾ ಅವು ಭಯಾತುರಾಃ = ಭೀತಿಯಿಂದ ಮುಂದುಗೆಟ್ಟಂಥಾವಾಗಿ ಪಲಾಯನ್ತೇ = ಓಡುತ್ತಿಹವು. ||೯೪||

ವೀರಮಾಹೇಶ್ವರಃ = ವೀರಮಾಹೇಶ್ವರನು ಐಹಿಕಾನಿ = ಇಹಲೋಕ ಸಂಬಂಧವಹಂಥಾ ಅಖಿಲಾನಿ = ಸಮಸ್ತವಹಂಥಾ ಸೌಖ್ಯಾನಿ ಅಪಿ = ಸುಖಂಗಳನೂ ಯಥೇಷ್ಟಂ = ಬಯಕೆ ಎಹಗಹುದಹಗೆ ಭುಕ್ತ್ವಾ = ಭೋಗಿಸಿ ವಿಶ್ವೇಶಪ್ರಸಾದಾತ್ = ವಿಶ್ವಕ್ಕೊಡೆಯನಹಂಥಾ ಪರಮೇಶ್ವರನ ಪ್ರಸನ್ನತಿಕೆಯ ದೆಸೆಯಿಂದ ಮುಕ್ತಿಂ = ಮುಕ್ತಿಯನು ಆಶ್ರಯೇತ್ = ಆಶ್ರೈಸುವನು. ||೯೫||

ಸಪ್ತಮೋಽಧ್ಯಾಯಃ

(ಗುರುಶುಶ್ರೂಷಾಕ್ರಮಃ)

ಕ್ರಿಯಾಸಾರೇ

ಈಶ್ವರ ಉವಾಚ

ತತಃ ಕುರ್ವೀತ ಶುಶ್ರೂಷಾಂ ಸದ್ಭಕ್ತ್ಯಾಽಹರಹರ್ಗುರೋಃ
ಶುಶ್ರೂಷಾಯಾಃ ಕ್ರಮಂ ಚಾಥ ಶೃಣುಷ್ವ ಚತುರಾನನ ॥೧॥

ಮನಸ್ಯನಾರತಂ ಸಮ್ಯಗ್ಗುರೋರಾಕಾರಚಿಂತನಮ್
ಶುಶ್ರೂಷೋಪಾಯಚಿಂತಾಚ ಹೃಚ್ಛುಶ್ರೂಷೇತ್ಯುದಾಹೃತಾ ॥೨॥

ದೇವ ಕಿಂ ಕರ್ಮ ಕರ್ತವ್ಯಂ ತಥ್ಯೈವೇತ್ಯುತ್ತರಂ ಪುನಃ
[1]ಏವಮಾದಿ[1]ಪ್ರಿಯೋಕ್ತಿಶ್ಚ ಸಾ ವಾಕ್‌ಶುಶ್ರೂಷಿಕಾ[2]ಸ್ಮೃತಾ[2] ॥೩॥

ಕ್ರಿಯಾಸಾರೇ = ಕ್ರಿಯಾಸಾರದಲ್ಲಿ ಹೇಳುತ್ತಿದ್ದುದು.

ಈಶ್ವರ ಉವಾಚ = ಪರಮೇಶ್ವರನು ನಿರೂಪವ ಕೊಡುತ್ತಿದ್ದಾನು.

ತತಃ = ಅನಂತರದಲ್ಲಿ ಗುರೋಃ = ಶ್ರೀಗುರುವಿಗೆ ಸದ್ಭಕ್ತ್ಯಾ = ಒಪ್ಪುತ್ತಂ ವಿದ್ದಂಥಾ ಭಕ್ತಿಯಿಂದ ಅಹರಹಃ = ಹಗಲಿರುಳು ಶುಶ್ರೂಷಾಂ = ಸೇವೆಯನು ಕುರ್ವೀತ = ಮಾಡೂದು ಅಥ = ಅನಂತರದಲ್ಲಿ ಭೋ ಚತುರಾನನ ! = ಎಲೆ ಚತುರ್ಮುಖನಹಂಥಾ ಬ್ರಹ್ಮನೆ ! ಶುಶ್ರೂಷಾಯಾಃ = ಸೇವೆಯ ಕ್ರಮಂ ಚ = ಕ್ರಮವನು ಶೃಣುಷ್ವ = ಕೇಳು. ಶ್ರು-ಶ್ರವಣೇ ಇತಿ ಧಾತುಃ.

ಮನಸಿ = ಮನಸ್ಸಿನಲ್ಲಿ ಅನಾರತಂ = ಅವಾಗವು ಸಮ್ಯಕ್ = ಲೇಸಾಗಿ ಗುರೋಃ = ಶ್ರೀ ಗುರುವಿನ ಆಕಾರಚಿಂತನಂ = ಸ್ವರೂಪವ ನೆನಹವು ಶುಶ್ರೂಷೋಪಾಯಚಿಂತಾ ಚ = ಸೇವೆಯ ಉಪಾಯವ ನೆನಹವೂ ಹೃಚ್ಛುಶ್ರೂಷಾ ಇತಿ = ಮನಸ್ಸಿನಲ್ಲಿಯ ಸೇವೆಯೆಂದಿಹಗೆ ಉದಾಹೃತಾ = ಹೇಳಲುಪಟ್ಟಿತ್ತು. ॥೨॥

ಭೋ ದೇವ = ಎಲೆ ಶ್ರೀಗುರುವೆ ಕಿಂ ಕರ್ಮ = ಆವ ಕಾರ್ಯವು ಕರ್ತವ್ಯಂ = ಮಾಡಬೇಕಾದುದು. ಪುನಃ = ಮರಳಿ ತಥ್ಯೈವ = ಆ ಪ್ರಕಾರದಲೆ ಇತ್ಯುತ್ತರಂ

---

[1] ಏವಮಾದಿಃ (ಘ) [2] ಮತಾ (ಘ)

ಸಮೀಪೇ ವಾತಿದೂರೇ ವಾ ಸ್ವಶರೀರನಿವೇದನಮ್
[1]ಗತ್ಯಾಗತ್ಯಾದಿಕಾ[1]ಯಾಸೈಃ ಸ್ವಭಾವಾನಂದನೈಸ್ತಥಾ ||೪||

ಪ್ರದಕ್ಷಿಣನಮಸ್ಕಾರಂ ಸಮ್ಯಕ್ಪಾದಾವನೇಜನಮ್
ಪಯಸಾಜ್ಯೇನ ದಧ್ನಾ ವಾ ಲಬ್ಧೇನಾಂ[2]ಘ್ರಿಪ್ರ[2]ಲೇಪನಮ್ ||೫||

ತತಃ ಶ್ಲಕ್ಷ್ಣೈರ್ಮುದ್ಗಚೂರ್ಣೈಃ ಕೋಷ್ಣೇನ ಸಲಿಲೇನ ಚ
ಸಂಪ್ರಕ್ಷಾಲ್ಯಾಥ ವಸ್ತ್ರೇಣ ತದಾರ್ದ್ರತ್ವಪ್ರಮಾರ್ಜನಮ್ ||೬||

ಶಯ್ಯಾಸಂಸ್ತರಣಂ ಸಮ್ಯಕ್ ಕೇಶಸಮ್ಮಾರ್ಜನಂ ನಖೈಃ
ತೈಲಾಭ್ಯಂಗಕ್ರಿಯಾ ಚಾಥ ಸ್ನಾನಕರ್ಮ ಯಥಾಶುಭಮ್ ||೭||

=ಹೇಂಗೆಂಬಂಥಾ ಉತ್ತರವನ್ನೂ ಏವಮಾದಿಪ್ರಿಯೋಕ್ತಿಶ್ಚ=ಇದು ಮೊದಲಾಗಿದ್ದಂಥಾ ಪ್ರಿಯದ ನುಡಿಯುಂಟು ಸಾ = ಅದು ವಾಕ್‌ಶುಶ್ರೂಷಿಕಾ= ವಾಕ್ಯದ ದೆಸೆಯಿಂದ ಸೇವೆಯೆಂದು ಸ್ಮೃತಾ=ಹೇಳಲುಪಟ್ಟಿತ್ತು. ||೩||

ಸಮೀಪೇ ವಾ= ಸಮೀಪದಲ್ಲಿಯಾಯಿತ್ತಾದರೂ ಅತಿದೂರೇ ವಾ = ಅತಿ ದೂರದಲ್ಲಿ ಆಯಿತ್ತಾದರೂ ಸ್ವಶರೀರನಿವೇದನಂ= ತನ್ನ ಶರೀರವ ಸಮರ್ಪಿಸುಹಣವು ಗತ್ಯಾಗತ್ಯಾದಿಕಾಯಾಸೈಃ = ಹೋಗುಹ ಬರುಹ ಮೊದಲಾಗಿದ್ದಂಥಾ ಆಯಾಸಂಗಳಿಂದ ತಥಾ = ಹಾಂಗೆ ಸ್ವಭಾವಾನಂದನೈಃ = ಸ್ವಭಾವವಹಂಥಾ ಆನಂದಗಳಿಂದವೂ, ||೪||

ಪ್ರದಕ್ಷಿಣನಮಸ್ಕಾರಂ=ಪ್ರದಕ್ಷಿಣ ನಮಸ್ಕಾರವ ಮಾಡೂದು. ಸಮ್ಯಕ್ = ಲೇಸಾಗಿ ಪಾದಾವನೇಜನಂ=ಪಾದಪ್ರಕ್ಷಾಲನೆಯ ಮಾಡುಹಣವು. ಪಯಸಾ= ಕ್ಷೀರದಿಂದ ಆಜ್ಯೇನ=ತುಪ್ಪದಿಂದ ದಧ್ನಾ ವಾ=ಮೊಸರಿನಿಂದಾದರೂ ಲಬ್ಧೇನ =ದೊರಕಿದಂಥಾದರಿಂದ ಅಂಘ್ರಿಪ್ರಲೇಪನಂ=ಪಾದಕ್ಕೆ[3]ಪೂ[3]ಸೂದು. ||೫||

ತತಃ=ಅಷ್ಟರ ಮೇಲೆ ಶ್ಲಕ್ಷ್ಣೈಃ=ಸಣ್ಣವಾಗಿದ್ದಂಥಾ ಮುದ್ಗಚೂರ್ಣೈಃ =ಹೆಸರ ಚೂರ್ಣಂಗಳಿಂದ ಕೋಷ್ಣೇನ=ಒಂದಿಷ್ಟು ಬಿಸಿಯಾದಂಥಾ ಸಲಿಲೇನ ಚ = ಉದಕದಿಂದವು ಸಂಪ್ರಕ್ಷಾಲ್ಯ = ತೊಳದು ಅಥ = ಅನಂತರದಲ್ಲಿ ವಸ್ತ್ರೇಣ = ವಸ್ತ್ರದಿಂದ ತದಾರ್ದ್ರತ್ವಪ್ರಮಾರ್ಜನಂ = ಆ ಪಾದದ ಒದ್ದೆಯ ನೊರಸೂದು. ||೬||

ಸಮ್ಯಕ್ = ಲೇಸಾಗಿ ಶಯ್ಯಾಸಂಸ್ತರಣಂ = ಹಾಸಿಕೆಯ ಹಚ್ಚಡಿಸೂದು ನಖೈಃ=ಉಗುರುಗಳಿಂದ ಕೇಶಸಮ್ಮಾರ್ಜನಂ=ಮಂಡೆಯ ಕೂದಲುಗಳ ಉಗುರಿ

---

[1] ಗಮನಾಗಮನಾ(ಘ) [2] ಘ್ರಿಪ್ರ (ಘ) [3] ಹೂ (ಖ. ಚ)

ಶ್ರೀಖಂಡ[1]ಘರ್ಷಣಂ ಪುಷ್ಪಮಾಲಿಕಾಚಾರುಬಂಧನಮ್
ಶೌಚಾರ್ಥಂ ಮೃಜ್ಜಲಾ[2]ನೀತಿ[2] ದಂತಕಾಷ್ಠಪ್ರದೇಶನಮ್ ||೮||

ಪೂಜಾಸ್ಥಾನಾನುಲೇಪಂ ಚ ಗೋಮಯೇನ ಸವಾರಿಣಾ
†ಪೂಜಾಪುಷ್ಪಜಲಾನೀತಿ ತತ್ರ ಯೋಗ್ಯಪ್ರದೇಶನಮ್ ||೯||

ಏವಮಾದೀನಿ ಚಾನ್ಯಾನಿ ಗೃಹಕರ್ಮಾಣಿ ಯಾನಿ ವೈ
ತೇಷಾಮಹರಹಃ ಕರ್ಮ ಕಾಯಶುಶ್ರೂಷಿಕಾ[3]ಸ್ಮೃತಾ[3] ||೧೦||

ಧಾನ್ಯಸ್ವರ್ಣಪಶುಕ್ಷೇತ್ರದಾಸೀದಾಸಾಂಬರಾಣಿ ಚ
ಪರ್ಯಂಕಭೂಷಣಾನ್ಯತ್ರ ತ್ರಿಪಾದ[4]ಚಷಕಾದಯಃ ||೧೧||

ಸೂದು ತೈಲಾಭಂಗಕ್ರಿಯಾ = ತೈಲಾಭ್ಯಂಗನವ ಮಾಡೂದು ಅಥ = ಅನಂತರದಲ್ಲಿ ಯಥಾಶುಭಂ = ಮಂಗಳವಹ ಹಾಂಗೆ ಸ್ನಾನಕರ್ಮ = ಮಜ್ಜನವ ಮಾಡಿಸೂದು.

ಶ್ರೀಖಂಡಘರ್ಷಣಂ = ಶ್ರೀಗಂಧವ ಹೊಸೂದು ಪುಷ್ಪಮಾಲಿಕಾಚಾರು ಬಂಧನಮ್ = ಪುಷ್ಪ ಮಾಲೆಗಳ ಮನೋಹರವಾಗಿ ಸಂಬಂಧಿಸೂದು ಇತಿ = ಈ ಪ್ರಕಾರದಲ್ಲಿ ಶೌಚಾರ್ಥಂ = ಶೌಚನಿಮಿತ್ತವಾಗಿ ಮೃಜ್ಜಲಾನಿ = ಮೃತ್ತಿಕೆ ಜಲಂಗಳನು ದಂತಕಾಷ್ಠಪ್ರದೇಶನಂ = ದಂತಕಾಷ್ಠಂಗಳನು ಕೊಡುವುದು. ||೮||

ಸವಾರಿಣಾ = ಉದಕದಿಂದ ಸಹಿತವಹಂಥಾ ಗೋಮಯೇನ = ಗೋಮಯದಿಂದ ಪೂಜಾಸ್ಥಾನಾನುಲೇಪಂ ಚ = ಶಿವಪೂಜೆಯ ಮಾಡುವ ಸ್ಥಾನವ ಸಾರಿಸೂದು ತತ್ರ = ಆ ಶಿವಪೂಜೆಯ ಸ್ಥಾನದಲ್ಲಿ ಪೂಜಾಪುಷ್ಪಜಲಾನಿ = ಪೂಜಾರ್ಥವಹ ಪುಷ್ಪಜಲಂಗಳನು ಇತಿ = ಈ ಪ್ರಕಾರದಲ್ಲಿ ಯೋಗ್ಯಪ್ರದೇಶನಂ = ಯೋಗ್ಯವಹ ದ್ರವ್ಯಂಗಳನಿರಿಸೂದು. ||೯||

ಏವಮಾದೀನಿ = ಇವು ಮೊದಲಾಗಿದ್ದಂಥಾ ಅನ್ಯಾನಿ = ಮತ್ತೆ ಕೆಲವು ಗೃಹಕರ್ಮಾಣಿ ಚ = ಗೃಹಕೃತ್ಯಂಗಳು ಯಾನಿ ವೈ = ಆವವು ಕೆಲವುಂಟು ತೇಷಾಂ = ಆ ಕಾರ್ಯಂಗಳ ಅಹರಹಃ = ಹಗಲಿರುಳೂ ಕರ್ಮ = ಮಾಡುವಂಥಾದ್ದು ಕಾಯಶುಶ್ರೂಷಿಕಾ = ಕಾಯದ ದೆಸೆಯಿಂದಾದ ಸೇವೆಯೆಂದು ಸ್ಮೃತಾ = ಹೇಳಲ್ಪಟ್ಟಿತ್ತು. ||೧೦||

ಧಾನ್ಯಸ್ವರ್ಣಪಶುಕ್ಷೇತ್ರದಾಸೀದಾಸಾಂಬರಾಣಿ ಚ = ಧಾನ್ಯ ಸುವರ್ಣ ಗೋವು

---

[1] ಲೇಪನಂ (ಘ) [2] ದೀನಿ (ಘ) [3] ಮತಾ (ಘ) [4] ಶಕಟಾ (ಘ)

† ಪೂಜಾಯೈ ಜಲಪುಷ್ಪಾಣಿ ತತ್ರ ಯೋಗ್ಯಾನಿ ವಿನ್ಯಸೇತ್ । ||೯|| (ಘ)

ಚಂದನಾದ್ಯನುಲೇಪೋಕ್ತದ್ರವ್ಯಾಣಿ ಸುರಭೀಣಿ ಚ
ಕೇಶಾನುಲೇಪದ್ರವ್ಯಾಣಿ ಕಸ್ತೂರ್ಯಾ[1]ದೀನಿ[1] ಯಾನಿ ಚ ||೧೨||

ತುರಂಗಮಗಜಾಂದೋಲಸ್ಯಂದನಾನಿ ಶುಭಾನಿ ಚ
ತೇಷಾಂ ಪ್ರದಾನಂ ಸದ್ಭಕ್ತ್ಯಾ ಧನಶುಶ್ರೂಷಿಕಾ [2]ಸ್ಮೃತಾ[2] ||೧೩||

ದ್ರವ್ಯಸಾಮರ್ಥ್ಯಸಂಪನ್ನೋ ಯಃಕಶ್ಚಿಚ್ಛಿಷ್ಯಕಸ್ಸದಾ
ಸರ್ವಶುಶ್ರೂಷಿಕಾಂ ಕುರ್ಯಾತ್ ಸ್ವಗುರೋರೇವ ಭಕ್ತಿತಃ ||೧೪||

ನ್ಯಾಯೋಪಾರ್ಜಿತಂ ಸ್ಥಿತಂ ಸ್ವರ್ಣಮುಖ್ಯಂ ಯದ್ವ್ಯವಹಾರತಃ
ತದೇವ ದೇಯಂ ಗುರವೇ ದದ್ಯಾದ್ವಾನೇಽಪಿ ತದ್ವರವತ್ ||೧೫||

ಭೂಮಿ ತೋಟ ಬಂಟರು ವಸ್ತ್ರಂಗಳು ಅತ್ರ = ಈ ಪ್ರಕಾರದಲ್ಲಿ ಪರ್ಯಂಕ ಭೂಷಣಾನಿ = ಮಂಚ ಆಭರಣಂಗಳು ತ್ರಿಪಾದಚಷಕಾದಯಃ = ಅಡ್ಡಣಿಗೆ ಹಾಲು ಬಟ್ಟಲು ಮೊದಲಾದಂಥಾವು. ||೧೧||

ಸುರಭೀಣಿ = ಪರಿಮಳವನುಳ್ಳಂಥಾ ಚಂದನಾದ್ಯನುಲೇಪೋಕ್ತದ್ರವ್ಯಾಣಿ ಚ = ಶ್ರೀಗಂಧ ಮೊದಲಾಗಿ ಅನುಲೇಪಕ್ಕೆ ಹೇಳಲ್ಪಂಟ್ಟಂಥಾ ದ್ರವ್ಯಂಗಳು, ಕಸ್ತೂರ್ಯಾದೀನಿ = ಕಸ್ತೂರಿ ಮೊದಲಾಗಿದ್ದಂಥಾ ಯಾನಿ = ಆವವು ಕೆಲವು ಕೇಶಾನುಲೇಪದ್ರವ್ಯಾಣಿ ಚ = ಕೇಶಂಗಳಿಗೆ ಅನುಲೇಪವಹ ದ್ರವ್ಯಂಗಳು. ||೧೨||

ಶುಭಾನಿ = ಒಪ್ಪುತ್ತಿದ್ದಂಥಾ ತುರಂಗಮ = ಕುದುರೆ ಗಜ = ಆನೆ ಆಂದೋಳ = ದಂಡಿಗೆ ಸ್ಯಂದನಾನಿ ಚ = ರಥಂಗಳು ತೇಷಾಂ = ಹೇಳಲ್ಪಟ್ಟಂಥಾ ಸದ್ಭಕ್ತ್ಯಾ = ಸದ್ಭಕ್ತಿಯಿಂದ ಪ್ರದಾನಂ = ಕೊಡುಹಣವು ಧನಶುಶ್ರೂಷಿಕಾ = ಧನಸೇವೆಯೆಂದು ಸ್ಮೃತಾ = ಹೇಳಲ್ಪಟ್ಟಿತ್ತು. ||೧೩||

ದ್ರವ್ಯಸಾಮರ್ಥ್ಯಸಂಪನ್ನಃ = ದ್ರವ್ಯಸಾಮರ್ಥ್ಯದಿಂದ ಸಂಪನ್ನನಹಂಥಾ ಯಃಕಶ್ಚಿತ್ = ಆವನಾನೊಬ್ಬ ಶಿಷ್ಯಕಃ = ಶಿಷ್ಯನು ಸದಾ = ಎಲ್ಲಾಗವೂ ಭಕ್ತಿತಃ ಏವ = ಭಕ್ತಿಯಿಂದವೇ ಸ್ವಗುರೋಃ = ತನ್ನ ಶ್ರೀಗುರುವಿಂಗೆ ಸರ್ವಶುಶ್ರೂಷಿಕಾಂ = ಸಮಸ್ತ ಸೇವೆಯನು ಕುರ್ಯಾತ್ = ಮಾಡೂದು. ||೧೪||

ವ್ಯವಹಾರತಃ = ವ್ಯವಹಾರದ ದೆಸೆಯಿಂದ ನ್ಯಾಯೋಪಾರ್ಜಿತಂ = ನ್ಯಾಯದಿಂದ ಘಳಿಸಿದಂಥಾ ಸ್ವರ್ಣಮುಖ್ಯಂ = ಸುವರ್ಣ ಮೊದಲಾದಂಥಾ ಯತ್ = ಆವುದಾನೊಂದು ವಸ್ತು ಸ್ಥಿತಂ = ಇದ್ದೂದು ತದೇವ = ಆ ವಸ್ತುವೇ ದೇಯಂ =

---

[1] ದ್ಯಾ (ಖ.ಘ.ಚ) [2] ಮತಾ (ಘ)

ಯೇನ್ನ್ಯೂನಂ ವ್ಯವಹಾರೇ ತು ತಚ್ಚ ಸ್ವರ್ಣಂ ಕದಾಚನ
ನ ದದ್ಯಾದ್ಗುರವೇ ದಾನಂ ಮನುಷ್ಯಃ ಫಲವಾಂಛಕಃ ||೧೬||

ನೂತನಂ[1]ಸುದೃಢಂ[1] ಸ್ನಿಗ್ಧಂ ಧವಲಂ ನೇತ್ರವಲ್ಲಭವತ್
ದದ್ಯಾದಾಚ್ಛಾದನಂ ಭಕ್ತ್ಯಾ ಗುರವೇ ಸರ್ವದಾ ಬುಧಃ ||೧೭||

ವಿಶೀರ್ಣಂ ಸ್ಫುಟಿತಂ ದಗ್ಧಂ ಪ್ರಾಕ್ತನಂ ಸ್ವಧೃತಂ ಪುರಾ
[2]ದಷ್ಟಮಾಖ್ವಾ[2]ದಿಭಿರ್ವಸ್ತ್ರಂ ನ ದದ್ಯಾದ್ಗುರವೇ ಬುಧಃ ||೧೮||

ಕೊಡಬೇಕಾದುದು ಗುರವೇ = ಶ್ರೀ ಗುರುವಿಂಗೋಸ್ಕರ ದದ್ಯಾತ್ = ಈಯಬೇಕು-ದಾನೇಽಪಿ = ದಾನದಲ್ಲಿಯೂ ತತ್ = ಅದು ವರಂ = ಶ್ರೇಷ್ಠವು. ||೧೫||

ವ್ಯವಹಾರೇ ತು = ವ್ಯವಹಾರದಲ್ಲಿಯೂ ಯತ್ = ಆವುದಾನೊಂದು ಸ್ವರ್ಣಂ = ಸುವರ್ಣವು ನ್ಯೂನಂ = ಹೀನವಾದಂಥಾದ್ದು. ಅನ್ಯಾಯದಿಂದ ಬಂದುದೆಂಬುದರ್ಥ. ತಚ್ಚ = ಆ ಅನ್ಯಾಯದಿಂದ ಬಂದಂಥಾ ಸುವರ್ಣವನು ಫಲವಾಂಛಕಃ = ಫಲವನು ಬಯಸುತಿದ್ದಂಥಾ ಮನುಷ್ಯಃ = ಮನುಷ್ಯನು ಕದಾಚನ = ಒಂದು ಬಾರಿಯೂ ಗುರವೇ = ಗುರುವಿಗೋಸ್ಕರ ದಾನಂ = ದಾನವನು ನ ದದ್ಯಾತ್ = ಕೊಡಲಾಗದು. ||೧೬||

ಬುಧಃ = ಬಲ್ಲಂಥಾತನು ಗುರವೇ = ಶೀಗುರುವಿಂಗೋಸ್ಕರ ಸುದೃಢಂ = ಬಲ್ಲಿತ್ತಹಂಥಾ ಸ್ನಿಗ್ಧಂ ಮೃದುವಹಂಥಾ ನೇತ್ರವಲ್ಲಭಂ = ಕಣ್ಣಿಂಗೆ ಮನೋಹರವಹಂಥಾ ಧವಲಂ = ಬಿಳಿದಹಂಥಾ ನೂತನಂ = ಹೊಸತಹಂಥಾ ಆಚ್ಛಾದನಂ = ವಸ್ತ್ರವನು ಭಕ್ತ್ಯಾ = ಭಕ್ತಿಯಿಂದ ಸರ್ವದಾ = ಎಲ್ಲಾಗವೂ ದದ್ಯಾತ್ = ಕೊಡುವುದು. ||೧೭||

ಬುಧಃ = ಬಲ್ಲಂಥಾ ಆತನು ಗುರವೇ = ಶೀಗುರುವಿಂಗೋಸ್ಕರ ವಿಶೀರ್ಣಂ = ಜೀರ್ಣವಾದಂಥಾ ಸ್ಫುಟಿತಂ = ಹರಿದಂಥಾ ದಗ್ಧಂ = ಕಿಡಿತಾಗಿದಂಥಾ ಪ್ರಾಕ್ತನಂ = ಹಳೆದಾದಂಥಾ ಪುರಾ = ಮುನ್ನ ಸ್ವಧೃತಂ = ತಾನು ಹೊದ್ದಂಥಾ ಆಖ್ವಾದಿಭಿಃ = ಇಲಿ ಮುಂತಾದ ಪ್ರಾಣಿಗಳಿಂದ ದಷ್ಟಂ = ಕಡಿದಂಥಾ ವಸ್ತ್ರಂ = ವಸ್ತ್ರವನು ನ ದದ್ಯಾತ್ = ಕೊಡಲಾಗದು. ||೧೮||

---

[1] ಸದೃಢಂ (ಖ.ಗ) [2] ದಷ್ಟಂ ಕೀಟಾ (ಘ)

ಪರುಷಂ ದುಷ್ಕ್ರಿಯಾಯುಕ್ತಂ ನೀಲಸೂತ್ರವಿನಿರ್ಮಿತಮ್
ಪಟ್ಟವಸ್ತ್ರೇತರಂ ವಸ್ತ್ರಂ [1]ವಿರಲಂ[1] ನ ಪ್ರದಾಪಯೇತ್ ||೧೯||

ಪಟ್ಟದೇವಾಂಗಚೀನಾನಿ ವಾಸಾಂಸ್ಯನ್ಯಾನಿ ಯಾನಿ ಚ
ಚಿತ್ರಾಣಿ ದದ್ಯಾನ್ನೃಪತಿಃ ಇತರೋ ವಾ ಧನಾಧಿಪಃ ||೨೦||

ಗುರೋಃ ಪ್ರಿಯಾಣಿ ದ್ರವ್ಯಾಣಿ ಯಾನಿ ಕಾನಿಚಿದನ್ವಹಮ್
ತಾನಿ ಭಕ್ತ್ಯಾ ಪ್ರದೇಯಾನಿ ಶಿಷ್ಯೇಣ ಸುಲಭಾನಿ ಚ ||೨೧||

ದರಿದ್ರಶ್ಚೇತ್ಸ್ವಯಂ ಶಿಷ್ಯಃ ಪ್ರತಿಸಂವತ್ಸರಂ ಯಜೇತ್
ವಾಸಃ ಪ್ರಾವರಣಂ ದದ್ಯಾದವಶ್ಯಂ ನೇತ್ರವಲ್ಲಭಮ್ ||೨೨||

ಪರುಷಂ = ಬಿಱುಸಾದಂಥಾ ದುಷ್ಕ್ರಿಯಾಯುಕ್ತಂ = ದುರ್ವ್ಯಾಪಾರದಿಂದ ಕೂಡಿದಂಥಾ ನೀಲಸೂತ್ರನಿರ್ಮಿತಂ = ನೀಲವರ್ಣವಹ ಎಳೆಗಳಿಂದ ನೆಯ್ದಂಥಾ ಪಟ್ಟವಸ್ತ್ರೇತರಂ = ಪಟ್ಟಾವಳಿಯ ವಸ್ತ್ರವಲ್ಲದಂಥಾ ವಿರಳಂ = ಛಿದ್ರವಾದಂಥಾ ವಸ್ತ್ರಂ = ವಸ್ತ್ರವನು ನ ಪ್ರದಾಪಯೇತ್ — ಕೊಡಲಾಗದು. ||೧೯||

ನೃಪತಿಃ = ಅರಸು ವಾ = ಅಲ್ಲಾ ಧನಾಧಿಪಃ = ಧನಪತಿಯಹಂಥಾ ಇತರಃ = ಮತ್ತಾವಾತನಾದರೂ ಪಟ್ಟದೇವಾಂಗಚೀನಾನಿ = ಪಟ್ಟಾವಳಿ ದೇವಾಂಗ ಚೀನಿಯಹಂಥಾ ವಾಸಾಂಸಿ ಚ = ವಸ್ತ್ರಂಗಳನು ಅನ್ಯಾನಿ = ಮತ್ತೆ ಕೆಲವಹಂಥಾ ಯಾನಿ = ಆವವು ಕೆಲವು ಚಿತ್ರಾಣಿ ಚ = ಚಿತ್ರವಹಂಥಾ ವಸ್ತ್ರಂಗಳನು ದದ್ಯಾತ್ — ಕೊಡುವುದು. ||೨೦||

ಗುರೋಃ = ಶ್ರೀಗುರುವಿಂಗೆ ಪ್ರಿಯಾಣಿ = ಪ್ರಿಯವಹಂಥಾ ಯಾನಿ ಕಾನಿಚಿತ್ = ಆವವು ಕೆಲವು ದ್ರವ್ಯಾಣಿ = ದ್ರವ್ಯಂಗಳುಂಟು ಸುಲಭಾನಿ = ಒದಗಿದಂಥಾ ತಾನಿ ಚ = ಆ ದ್ರವ್ಯಂಗಳನು ಅನ್ವಹಂ = ದಿನಂ ಪ್ರತಿ ಶಿಷ್ಯೇಣ = ಶಿಷ್ಯನಿಂದ ಭಕ್ತ್ಯಾ = ಭಕ್ತಿಯಿಂದ ಪ್ರದೇಯಾನಿ = ಕೊಡಲು ಯೋಗ್ಯಂಗಳು ||೨೧||

ದರಿದ್ರಃ = ದರಿದ್ರನಹಂಥಾ ಶಿಷ್ಯಶ್ಚೇತ್ = ಶಿಷ್ಯನಾದಪಕ್ಷೇ ಸ್ವಯಂ = ತಾನೇ ಪ್ರತಿಸಂವತ್ಸರಂ = ವರುಷಂ ಪ್ರತಿ ಯಜೇತ್ = ಅರ್ಚಿಸೂದು ಯಜ-ದೇವಪೂಜಾಸಂಗತಿಕರಣದಾನೇಷು ಇತಿ ಧಾತುಃ ನೇತ್ರವಲ್ಲಭಂ = ದೃಷ್ಟಿಗೆ ಮನೋಹರವಹಂಥಾ ಪ್ರಾವರಣಂ = ಹೊದೆವಂಥಾ ವಾಸಃ = ವಸ್ತ್ರವನು ಅವಶ್ಯಂ = ನಿಶ್ಚಯವಾಗಿ ದದ್ಯಾತ್ = ಕೊಡುವುದು. ||೨೨||

---

[1] ಸುಜೀರ್ಣಂ (ಖ)

ಗುರುಂ ಸ್ವಗೃಹಮಾಯಾಂತಂ ದೃಷ್ಟ್ವಾ ಭಕ್ತಿಯುತೋ ನೃಪಃ
ನತ್ವಾ ತದಾಸನಂ ದತ್ವಾ ಚಾಸೀತ ತದನುಜ್ಞಯಾ ||೨೩||

ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಲಿತಜಲಂ ಸದಾ
ಯಃ ಪಿಬೇದ್ಧಾರಯೇದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ ||೨೪||

ಚಂದನಂ ಚಾಕ್ಷತಂ ಪುಷ್ಪಂ ಸ್ವರ್ಣಂ ತಾಂಬೂಲಮಂಬರಮ್
ಪಾತ್ರೇ ನಿಧಾಯ ಗುರವೇ ಶಿಷ್ಯೋ ದದ್ಯಾನ್ನ ಪಾಣಿನಾ ||೨೫||

ಸಂಭೋಜಯಿತ್ವಾ ಸ್ವಗುರುಂ ಪಶ್ಚಾದ್ಭುಂಜೀತ ಬುದ್ಧಿಮಾನ್
ಗುರೋಃ ಪುರಸ್ತಾದ್ಯೋ ಭುಂಕ್ತೇ ಗುರುದ್ರೋಹೀ ಸ ಉಚ್ಯತೇ||೨೬

ಭಕ್ತಿಯುತಃ = ಭಕ್ತಿಯಿಂದ ಕೂಡಲ್ಪಟ್ಟಂಥಾ ನೃಪಃ = ಅರಸು ಸ್ವಗೃಹಂ = ತನ್ನ ಗೃಹವನು ಕುರಿತು ಆಯಾಂತಂ = ಬಂದಂಥಾ ಗುರುಂ = ಶ್ರೀಗುರುವನ ದೃಷ್ಟ್ವಾ = ಕಂಡು ನತ್ವಾ = ನಮಸ್ಕರಿಸಿ ತದಾಸನಂ = ಆ ಗುರುವಿಂಗೆ ಗದ್ದಿಗೆಯನು ದತ್ವಾ ಚ = ಕೊಟ್ಟು ತದನುಜ್ಞಯಾ = ಆ ಶ್ರೀಗುರುವಿನ ಅನುಜ್ಞೆಯಿಂದ ಆಸೀತ = ಕುಳ್ಳಿಹದು. ||೨೩||

ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಳಿತಜಲಂ = ತನ್ನ ಶ್ರೀಗುರುವಿನ ಚರಣವೆರು ಪ್ರಕ್ಷಾಲಿಸಿದಂಥಾ ಜಲವನು ಯಃ = ಆವನಾನೊಬ್ಬ ಶಿಷ್ಯನು ಭಕ್ತ್ಯಾ = ಭಕ್ತಿಯಿಂದ ಸದಾ = ಎಲ್ಲಾಗವೂ ಧಾರಯೇತ್ = ಧರಿಸುವನು ಪಿಬೇತ್ = ಪಾನವ ಮಾಡುವನು ಸರ್ವಪಾಪೈಃ = ಸಮಸ್ತ ಪಾಪಂಗಳಿಂದ ಪ್ರಮುಚ್ಯತೇ = ಬಿಡಲ್ಪಡುತ್ತಿಹನು. ||೨೪||

ಶಿಷ್ಯಃ = ಶಿಷ್ಯನು ಚಂದನಂ = ಗಂಧವನು ಅಕ್ಷತಂ ಚ = ಅಕ್ಷತೆಯನು ಪುಷ್ಪಂ = ಪುಷ್ಪವನು ಸ್ವರ್ಣಂ = ಸುವರ್ಣವನು ತಾಂಬೂಲಂ = ವೀಳೆಯವನು ಅಂಬರಂ = [1]ಬಟ್ಟೆಯನು[1] ಪಾತ್ರೇ = ಪಾತ್ರೆಯಲ್ಲಿ ನಿಧಾಯ = ಇರಿಸಿ ಗುರವೇ = ಶ್ರೀಗುರುವಿಂಗೋಸ್ಕರ ದದ್ಯಾತ್ = ಕೊಡುವುದು. ಪಾಣಿನಾ = ಹಸ್ತದಿಂದ ನ = ಕೊಡಲಾಗದು. ||೨೫||

ಬುದ್ಧಿಮಾನ್ = ಬುದ್ಧಿಯನುಳ್ಳಾತನು ಸ್ವಗುರುಂ = ತನ್ನ ಶ್ರೀಗುರುವನು ಸಂಭೋಜಯಿತ್ವಾ = ಆರೋಗಣೆಯ ಮಾಡಿಸಿ ಪಶ್ಚಾತ್ = ಬಳಿಕ ಭುಂಜೀತ =

---

[1] ವಸ್ತ್ರ (ಖ. ಚ)

ಯಾನಿ ಭಕ್ಷ್ಯಾಣಿ ನವ್ಯಾನಿ ಕಂದಮೂಲಫಲಾನಿ ಚ
ಅಪೂಪಾನ್ಯುಪದಂಶಾನಿ ಗುರೋಃ ಪೂರ್ವಂ ನ ಭಕ್ಷಯೇತ್ ॥೨೭॥

ಶಿಷ್ಯೇಣ ಭೋಜನಾತ್ಪೂರ್ವಂ ನ ಭೋಕ್ತವ್ಯಂ ಕದಾಚನ
ಭೋಜನಾನಂತರೇಽಶ್ನೀಯಾತ್ ಸ್ವಗುರೋರ್ಯಸ್ಸ ಪುಣ್ಯಭಾಕ್

ಯೋ ಭಕ್ತ್ಯಾ ಸ್ವಗುರೋರ್ಭಕ್ತಃ[1] ಶಿಷ್ಯಃ ಪಾತ್ರೇಽನ್ನಮುಜ್ಝಿತಮ್
ಭುಂಕ್ತೇ ಸ ಸರ್ವದುರಿತೈರ್ಮುಚ್ಯತೇ ನಾತ್ರ ಸಂಶಯಃ ॥೨೯॥

ಭೋಜನವ ಮಾಡೂದು. ಯಃ = ಆವನಾನೊಬ್ಬಾತನು[2] ಗುರೋಃ = ಶ್ರೀಗುರು ವಿನ ಪುರಸ್ತಾತ್ = ಮುಂದೆ ಭುಂಕ್ತೇ = ಉಣುತ್ತಿಹನು ಸಃ = ಆತನು ಗುರುದ್ರೋಹೀ = ಗುರುದ್ರೋಹಿ ಎಂದು ಉಚ್ಯತೇ = ಹೇಳಲ್ಪಡುತ್ತಿಹನು. ॥೨೬॥

ನವ್ಯಾನಿ = ಹೊಸ್ತಹಂಥಾ ಯಾನಿ = ಆವವು ಕೆಲವು ಭಕ್ಷ್ಯಾಣಿ = ಭಕ್ಷ್ಯ ಗಳನು ಕಂದಮೂಲಫಲಾನಿಚ = ಕಂದ ಮೂಲಫಲಂಗಳನು ಅಪೂಪಾನಿ = ಓಗು ಗಳನು ಉಪದಂಶಾನಿ = ಉಪ್ಪಿನಕಾಯಿ ಶಾಕಂಗಳನು ಗುರೋಃ = ಶ್ರೀಗುರುವಿನ ದೆಸೆಯಿಂದವು ಪುರ್ವಂ = ಮೊದಲು ನ ಭಕ್ಷಯೇತ್ = ಮೆಲಲಾಗದು, ॥೨೭॥

ಸ್ವಗುರೋಃ = ತನ್ನ ಶ್ರೀಗುರುವಿನ ಭೋಜನಾತ್ = ಆರೋಗಣೆಯ ದೆಸೆಯಿಂದ ಪೂರ್ವಂ = ಮೊದಲು ಕದಾಚನ = ಒಂದು ವೇಳೆಯೂ ಶಿಷ್ಯೇಣ = ಶಿಷ್ಯನಿಂದ ನ ಭೋಕ್ತವ್ಯಂ = ಉಣಲಾಗದು. ಶಿಷ್ಯನು ಮೊದಲುಣಲಾಗದೆಂಬುದರ್ಥ. ಭೋಜನಾನಂತರೇ = ಶ್ರೀಗುರುವಿನ ಆರೋಗಣೆಯ ಅನಂತರದಲ್ಲಿ ಯಃ = ಆವನಾ ನೊಬ್ಬನು ಅಶ್ನೀಯಾತ್ = ಉಂಬನು ಸಃ = ಅತನು ಪುಣ್ಯಭಾಕ್ = ಪುಣ್ಯವ ಭಜಿಸುವಾತನು. ಪುಣ್ಯಾತ್ಮನೆಂಬುದರ್ಥ. ॥೨೮॥

ಭಕ್ತಃ = ಭಕ್ತಿಯನುಳ್ಳಂಥಾ ಯಃ = ಆವನಾನೊಬ್ಬ ಶಿಷ್ಯಃ = ಶಿಷ್ಯನು ಸ್ವಗುರೋಃ = ತನ್ನ ಶ್ರೀಗುರುವಿನ ಪಾತ್ರೇ = ಆರೋಗಣೆಯ ಮಾಡಿದಂಥಾ ಪಾತ್ರೆ ಯಲ್ಲಿ ಉಜ್ಝಿತಂ = ಬಿಡಲ್ಪಟ್ಟಂಥಾ ಅನ್ನಂ = ಅನ್ನವನು ಭಕ್ತ್ಯಾ = ಭಕ್ತಿಯಿಂದ ಭುಂಕ್ತೇ = ಭುಂಜಿಸುತ್ತಿಹನು. ಸಃ = ಆತನು ಸರ್ವದುರಿತೈಃ = ಸಮಸ್ತಪಾತಕಂ ಗಳಿಂದ ಮುಚ್ಯತೇ = ಬಿಡಲ್ಪಡುತ್ತಿಹನು. ಅತ್ರ = ಈ ಅರ್ಥದಲ್ಲಿ ಸಂಶಯಃ = ಸಂದೇಹವು ನ = ಇಲ್ಲ. ॥೨೯॥

---

1 ಭರ್ಕ್ತಂ (ಘ) 2 ನೊಬ್ಬನು (ಕ.ಖ.ಗ)

ತಾಂಬೂಲಮುತ್ತಮಂ ತಸ್ಮೈ ತತಃ ಪಾತ್ರೇಣ ದಾಪಯೇತ್
ಪಶ್ಚಾದಿಷ್ಟಾನಿ ವಸ್ತೂನಿ ದತ್ವಾ ನತ್ವಾ ಕ್ಷಮಾಪಯೇತ್ ||೩೦||

ಪ್ರದತ್ತಂ ಯತ್ಸ್ವಗುರುಣಾ ತಾಂಬೂಲಂ ಪರಿಚರ್ವಿತಮ್
ಶಿಷ್ಯಸ್ತದ್ಭಕ್ಷಯೇದ್ಭಕ್ತ್ಯಾ ಶುದ್ಧಾಂತಃಕರಣೋ ಭವೇತ್ ||೩೧||

ಶುಭಕಾರ್ಯೇಷು ಸರ್ವೇಷು ವಿವಾಹಾದಿಷು ಭಕ್ತಿತಃ
ಗುರುಮಭ್ಯರ್ಚಯೇಚ್ಛಿಷ್ಯೋ [1]ವಸ್ತ್ರಹೇ[1]ಮಾಂಗುಲೀಯಕೈಃ ||೩೨||

ತತ್ರಾಪಿ ಚ ಸಭಾಪೂಜಾವಿಧೇಃ ಪೂರ್ವಂ ಗುರುಂ ಯಜೇತ್
ತತಸ್ಸಭಾಂ ಯಜೇದ್ಯೋ[2]ಗ್ಯಂ[2] ಕ್ರಮೇಣೈವ ಯಥಾಶುಭಮ್ ||೩೩||

ತತಃ = ಆಸ್ವರಮೇಲೆ ಉತ್ತಮಂ = ಒಳ್ಳೆತ್ತಹಂಥಾ ತಾಂಬೂಲಂ = ವೀಳೆಯುವನು ತಸ್ಮೈ = ಆ ಶ್ರೀಗುರುವಿಂಗೋಸ್ಕರ ಪಾತ್ರೇಣ = ಬಟ್ಟಲಿಂದ ದಾಪಯೇತ್ = ಕೊಡುವುದು. ಪಶ್ಚಾತ್ = ಬಳಿಕ ಇಷ್ಟಾನಿ = ಬಯಸಿದಂಥಾ ವಸ್ತೂನಿ = ವಸ್ತುಗಳನು ದತ್ವಾ = ಕೊಟ್ಟು ನತ್ವಾ = ನಮಸ್ಕರಿಸಿ ಕ್ಷಮಾಪಯೇತ್ = ಪ್ರಸನ್ನನ ಮಾಡಿಕೊಂಬುದು. ||೩೦||

ಪ್ರದತ್ತಂ = ಕೊಡಲ್ಪಟ್ಟಂಥಾ ಯತ್ = ಆವುದಾನೊಂದು ತಾಂಬೂಲಂ = ತಾಂಬೂಲವು ಸ್ವಗುರುಣಾ = ತನ್ನ ಗುರುವಿಂದ ಪರಿಚರ್ವಿತಂ = ಸವಿಯಲ್ಪಟ್ಟಿತ್ತು. ತತ್ = ಆ ಶ್ರೀಗುರು ಸವಿದಂಥಾ ತಾಂಬೂಲ ಪ್ರಸಾದವನು ಶಿಷ್ಯಃ = ಶಿಷ್ಯನು ಭಕ್ತ್ಯಾ = ಭಕ್ತಿಯಿಂದ ಭಕ್ಷಯೇತ್ = ಮೆಲುವುದು. ಶುದ್ಧಾಂತಃಕರಣಃ = ನಿರ್ಮಲವಹ ಚಿತ್ತವನುಳ್ಳಾತನು ಭವೇತ್ = ಅಹನು. ||೩೧||

ವಿವಾಹಾದಿಷು = ವಿವಾಹ ಮೊದಲಾದಂಥಾ ಸರ್ವೇಷು = ಸಮಸ್ತವಹಂಥಾ ಶುಭಕಾರ್ಯೇಷು = ಶುಭಕಾರ್ಯಂಗಳಲ್ಲಿ ಶಿಷ್ಯಃ — ಶಿಷ್ಯನು ಭಕ್ತಿತಃ — ಭಕ್ತಿಯಿಂದ ವಸ್ತ್ರಹೇಮಾಂಗುಲೀಯಕೈಃ .... ವಸ್ತ್ರ ಸುವರ್ಣ ಉಂಗುರಂಗಳಿಂದ ಗುರುಂ = ಶ್ರೀಗುರುವನು ಅಭ್ಯರ್ಚಯೇತ್ — ಪೂಜಿಸೂದು. ||೩೨||

ತತ್ರಾಪಿ ಚ = ಆ ವಿವಾಹ ಮೊದಲಾದ ಶುಭಕರ್ಮದಲ್ಲಿಯೂ ಸಭಾಪೂಜಾವಿಧೇಃ = ಸಭಾಪೂಜೆಯ ವಿಧಾನದ ದೆಸೆಯಿಂದವೂ ಪೂರ್ವಂ = ಮೊದಲು ಗುರುಂ = ಶ್ರೀಗುರುವನು ಯಜೇತ್ = ಪೂಜಿಸೂದು. ತತಃ = ಆ ಶ್ರೀಗುರುವಿನ ಪೂಜೆಯ ಮಾಡಿದ ಅನಂತರದಲ್ಲಿ ಸಭಾಂ = ಸಭೆಯನು ಯೋಗ್ಯಂ = ಯೋಗ್ಯವಹನನು

---

[1] ವಸ್ತ್ರೈರ್ಹೇ (ಘ) [2] ಗ್ಯ (ಘ)

ಸಭಾಂತರೇ ಗುರುಂ ಧೀಮಾನ್ ಕದಾಚಿದಪಿ ನಾರ್ಚಯೇತ್
ಆಸನಸ್ಥಂ ವಿಶೋಧ್ಯಾಂ[1]ಘ್ರಿಂ[1] ಗಂಧಪುಷ್ಪಾಕ್ಷತೈರ್ಯಜೇತ್ ||೩೪||

ತತೋಽರ್ಪಯೇತ್ಸ್ವಗುರವೇ ವಸ್ತ್ರಹೇಮಾಂಗುಲೀಯ[2]ಕಾನ್[2]
ದರಿದ್ರಶ್ಚೋದಿತೇಷ್ವೇಷು ನಿಜಶಕ್ತಿಮವಂಚಯನ್ ||
ಅವಶ್ಯಮರ್ಚಯೇಚ್ಛಿಷ್ಯೋ ಗುರುಂ ಲಬ್ಧಧನೇನ ವಾ ||೩೫||

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ ||೩೬||

ಕ್ರಮೇಣೈವ = ಕ್ರಮದಿಂದವೆ ಯಥಾಶುಭಂ = ಮಂಗಳವಹ ಹಾಂಗೆ ಯಜೇತ್ = ಪೂಜಿಸೂದು. ||೩೩||

ಧೀಮಾನ್ = ಬುದ್ಧಿ[3]ಯುಳ್ಳಾ[3]ತನು ಗುರುಂ = ಶ್ರೀಗುರುವನು ಸಭಾಂತರೇ = ಸಭಾಪೂಜೆಯ ಅನಂತರದಲ್ಲಿ ಕದಾಚಿದಪಿ = ಒಂದು ವೇಳೆಯಲಾದರೂ ನಾರ್ಚಯೇತ್ = ಅರ್ಚಿಸಲಾಗದು. ಆಸನಸ್ಥಂ = ಗದ್ದುಗೆಯಲ್ಲಿ ಕುಳ್ಳಿರ್ದಂಥಾ ಶ್ರೀಗುರುವನು ಕುರಿತು ಅಂಘ್ರಿಂ = ಪಾದವನು ವಿಶೋಧ್ಯ = ತೊಳದು ಗಂಧಪುಷ್ಪಾಕ್ಷತೈಃ = ಗಂಧ ಪುಷ್ಪ ಅಕ್ಷತೆಗಳಿಂದ ಯಜೇತ್ = ಅರ್ಚಿಸೂದು. ||೩೪||

ತತಃ = ಅಷ್ಟರ ಮೇಲೆ ಸ್ವಗುರವೇ = ತನ್ನ ಗುರುವಿಂಗೋಸ್ಕರ ವಸ್ತ್ರಹೇಮಾಂಗುಲೀಯಕಾನ್ = ವಸ್ತ್ರ ಸುವರ್ಣ ಉಂಗುರಂಗಳನು ಅರ್ಪಯೇತ್ = ಸಮರ್ಪಿಸೂದು. ದರಿದ್ರಶ್ಚ = ದರಿದ್ರನಾದರೂ ಉದಿತೇಷು ಏಷು = ಒದಗಿದಂಥಾ ಈ ನುಡಿದಂಥಾ ವಸ್ತುಗಳಲ್ಲಿ ನಿಜಶಕ್ತಿಂ = ತನ್ನ ಶಕ್ತಿಯನು ಅವಂಚಯನ್ = ವಂಚಿಸದೇ ಅರ್ಪಯೇತ್ = ಸಮರ್ಪಿಸೂದು.

ಶಿಷ್ಯಃ = ಶಿಷ್ಯನು ಲಬ್ಧಧನೇನ ವಾ = ಒದಗಿದಷ್ಟು ಧನದಿಂದಲಾದರೂ ಗುರುಂ = ಶ್ರೀಗುರುವನು ಅವಶ್ಯಂ = ನಿಶ್ಚಯವಾಗಿ ಅರ್ಚಯೇತ್ = ಅರ್ಚಿಸೂದು. ||೩೫||

ಗುರುಯಾತ್ರಾ = ಗುರುವಿನ ಸಮೀಪಕ್ಕೆ ಹೋಗುಹ, ದೇವಯಾತ್ರಾ = ಶಿವಸ್ಥಾನಕ್ಕೆ ಹೋಗುಹ, ತೀರ್ಥಯಾತ್ರಾ = ತೀರ್ಥಕ್ಕೆ ಹೋಗುಹ ಇತಿ ಚ = ಈ ಪ್ರಕಾರದಲ್ಲಿ ತ್ರಿಧಾ = ಮೂರು ಪ್ರಕಾರವಹ ಯಾತ್ರೆಯುಂಟು. ಆಸಾಂ = ಈ

---

[1] ಘ್ರೀ (ಘ) [2] ಕಂ (ಘ) [3] ಯು (ಕ)

ಗುರುಸಂದರ್ಶನಾ[1]ರ್ಥಂ ತು[1] ಭಕ್ತ್ಯಾ ಯಾತ್ರಾಂ ಕರೋತಿ ಯಃ
ಪುಣ್ಯದೇಹೀ ಸ ವಿಜ್ಞೇಯಃ ಸಮಸ್ತಾಮರವಲ್ಲಭಃ ||೩೭||

ಶಿಷ್ಯೋ ಗುರುಸ್ಥಿತಗ್ರಾಮಂ ಪ್ರವಿಶನ್ವಾಹನಾದಿಕಮ್
ವರ್ಜಯೇದ್ಗೃಹಸಾಮೀಪ್ಯೇ ತಥಾ ವೈ ಪಾದುಕಾನಿ ಚ ||೩೮||

ಗುರುಂ ದಿದೃಕ್ಷುರ್ಯಃ ಶಿಷ್ಯಃ ಸದ್ಭಕ್ತ್ಯಾಽನುದಿನಂ ಸದಾ
ರಿಕ್ತಪಾಣಿರ್ನ ಸಂಪಶ್ಯೇದ್ಯಥಾ ರಾಜಾ ತಥಾ ಗುರುಃ ||೩೯||

ಫಲಂ ಪ್ರಸೂನಂ ತಾಂಬೂಲಮನ್ಯತ್ಕಿಮಪಿ ವಸ್ತು ಚ
[2]ಏ[2]ಷ್ವೇಕಂ ಗುರವೇ ದತ್ವಾ ನಮಸ್ಕುರ್ಯಾತ್ತತೋ ಗುರುಮ್ ||೪೦||

ತ್ರಿವಿಧಯಾತ್ರಾಣಾಂ = ಮೂರು ಯಾತ್ರೆಗ[3][ಳೊಳಗೆ][3] ಗುರುಯಾತ್ರಾ = ಶ್ರೀಗುರುಯಾತ್ರೆ ಅಧಿಕಾ = ಅಧಿಕವಹಂಥಾ ಫಲಾ = ಫಲವನುಳ್ಳದು ||೩೬||

ಯಃ = ಆವನಾನೊಬ್ಬನು ಗುರುಸಂದರ್ಶನಾರ್ಥಂ = ಶ್ರೀಗುರುವಿನ ಸಂದರ್ಶನಕ್ಕೋಸ್ಕರ ಭಕ್ತ್ಯಾ = ಭಕ್ತಿಯಿಂದ ಯಾತ್ರಾಂ ತು = ಯಾತ್ರೆಯನು ಕರೋತಿ = ಮಾಡುತ್ತಿಹನು ಸಃ = ಆತನು ಪುಣ್ಯದೇಹೀ = ಪುಣ್ಯಾತ್ಮನೆಂದು ವಿಜ್ಞೇಯಃ = ಅರಿಯಲು ಯೋಗ್ಯನು. ಸಮಸ್ತಾಮರವಲ್ಲಭಃ = ಸಮಸ್ತ ದೇವಶ್ರೇಷ್ಠನಹನು.

ಶಿಷ್ಯಃ = ಶಿಷ್ಯನು ಗುರುಸ್ಥಿತಗ್ರಾಮಂ = ಗುರುವಿಹಂಥಾ ಗ್ರಾಮವನು ಪ್ರವಿಶನ್ = ಪ್ರವೇಶಿಸುತ್ತವು ಗೃಹಸಾಮೀಪ್ಯೇ = ಶ್ರೀಗುರುವಿನ ಗೃಹಸಮೀಪದಲ್ಲಿ ವಾಹನಾದಿಕಂ = ವಾಹನ ಮೊದಲಾಗಿದ್ದಂಥಾವನು ತಥಾ ವೈ = ಹಾಂಗೆ ಪಾದುಕಾನಿ ಚ = ಹಾವುಗೆಗಳನು ವರ್ಜಯೇತ್ = ವರ್ಜಿಸೂದು. ||೩೮||

ಗುರುಂ = ಶ್ರೀಗುರುವನು ದಿದೃಕ್ಷುಃ = ನೋಡಲಿಚ್ಛೆಯನುಳ್ಳಂಥಾ ಯಃ = ಆವನಾನೊಬ್ಬ ಶಿಷ್ಯಃ = ಶಿಷ್ಯನು ಸದ್ಭಕ್ತ್ಯಾ = ಸದ್ಭಕ್ತಿಯಿಂದ ಅನುದಿನಂ = ಅನುದಿನವು ಸದಾ = ಎಲ್ಲಾಗಳೂ ರಿಕ್ತಪಾಣಿಃ = ಬರಿಯ ಹಸ್ತನಾಗಿ ನ ಸಂಪಶ್ಯೇತ್ ದರ್ಶನ ಮಾಡಲಾಗದು. ರಾಜಾ ಯಥಾ = ಅರಸೆಹಗಹಗೆ ತಥಾ ಗುರುಃ = ಆ ಮರಿಯಾದಿಯಲೇ ಆಚಾರ್ಯನು. ||೩೯||

ಫಲಂ = ಫಲವು ಪ್ರಸೂನಂ = ಪುಷ್ಪವು ತಾಂಬೂಲಂ = ವೀಳಯವು ಅನ್ಯತ್ = ಮತ್ತೊಂದು ಕಿಮಪಿ = ಆವುದಾನೊಂದು ವಸ್ತು ಚ = ವಸ್ತುವುಂಟು ಏಷು = ಇವರಲ್ಲಿ ಏಕಂ = ಒಂದನು ಗುರವೇ = ಗುರುವಿಂಗೋಸ್ಕರ ದತ್ವಾ = ಕೊಟ್ಟು

---

[1] ರ್ಥಾಯ (ಘ) [2] ತೇ (ಘ) [3] ಗಳಿಗೆ.

ಶ್ರೀಮಾನಪಿ [1]ತಪಸ್ವೀ ಚ[1] ಶಾಸ್ತ್ರಜ್ಞಃ ಕುಲ[2]ಶೌಚ[2]ವಾನ್
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ ||೪೧||

ಉಪಚಾರೇಷು ಸರ್ವೇಷು ದ್ವಾವೇವಾತ್ಯಂತಶೋಭನೌ
ಪ್ರಿಯವಾ[3]ಕ್ಚ[3] ಪ್ರಣಾಮಶ್ಚ ತೌ ವಿನಾಽನ್ಯೇ ವೃಥಾ ಸ್ಮೃತಾಃ ||೪೨||

ಅಗ್ರೇ ದೃಷ್ಟ್ವಾ ನಮಸ್ಕೃತ್ವಾ ಪ್ರದಕ್ಷಿಣಮನು[4]ವ್ರಜೇತ್[4]
[5]ಪ್ರಥಮದ್ವಾರಮಾರಭ್ಯ ದ್ವಾರಾವಧಿ ಪರಿಕ್ರಮೇತ್[5] ||೪೩||

ತತಃ=ಅನಂತರದಲ್ಲಿ ಗುರುಂ=ಶ್ರೀಗುರುವನು ನಮಸ್ಕುರ್ಯಾತ್=ನಮಸ್ಕಾರವ ಮಾಡೂದು. ||೪೦||

ಶ್ರೀಮಾನಪಿ=ಐಶ್ವರ್ಯವನುಳ್ಳಾತನಾದರೂ ತಪಸ್ವೀಚ=ತಪಸ್ವಿಯಾದರೂ ಶಾಸ್ತ್ರಜ್ಞಃ=ಶಾಸ್ತ್ರಜ್ಞನು ಕುಲಶೌಚವಾನ್ = ಕುಲಶೌಚವುಳ್ಳಾತನು ಗುರುಸನ್ನಿಧೌ=ಗುರುವಿನ ಸಮೀಪದಲ್ಲಿ ನಿರ್ಲಜ್ಜಃ=ಲಜ್ಜೆಯಿಲ್ಲದೆ ದಂಡನಮಸ್ಕಾರಂ=ದಂಡನಮಸ್ಕಾರವನು ಕುರ್ಯಾತ್=ಮಾಡೂದು. ||೪೧||

ಸರ್ವೇಷು= ಸಮಸ್ತವಹಂಥಾ ಉಪಚಾರೇಷು=ಉಪಚಾರಂಗಳಲ್ಲಿ ದ್ವಾವೇವ=ಎರಡೇ ಅತ್ಯಂತಶೋಭನೌ=ಅತ್ಯಂತ ಒಪ್ಪುವಂಥಾವು. ಪ್ರಿಯವಾಕ್‌ಚ=ಪ್ರಿಯವಾಕ್ಯವು ಪ್ರಣಾಮಶ್ಚ=ನಮಸ್ಕಾರವು ತೌ ವಿನಾ=ಅವೆರಡಿಲ್ಲದೇ ಅನ್ಯೇ=ಉಳಿದ ಉಪಚಾರಂಗಳು ವೃಥಾ=ವ್ಯರ್ಥವೆಂದು ಸ್ಮೃತಾಃ=ಹೇಳಲ್ಪಟ್ಟವು. ||೪೨||

ದೃಷ್ಟ್ವಾ=ಕಂಡು ಅಗ್ರೇ=ಇದಿರಿನಲ್ಲಿ ನಮಸ್ಕೃತ್ವಾ=ನಮಸ್ಕಾರವನು ಮಾಡಿ ಪ್ರದಕ್ಷಿಣಂ=ಪ್ರದಕ್ಷಿಣವನು ಅನುವ್ರಜೇತ್=ಮಾಡುವುದು ಅನು ಎಂಬ ಉಪಸರ್ಗದಿಂದ ಧಾತ್ವರ್ಥವ ಕೆಡಿಸಿತ್ತು. ಪ್ರಥಮದ್ವಾರಂ=ಮೊದಲ ಬಾಗಿಲು ಆರಭ್ಯ=ತೊಡಗಿ ದ್ವಾರಾವಧಿ=ಮನೆಯ ಬಾಗಿಲು ಪರ್ಯಂತ ಪರಿಕ್ರಮೇತ್=ಪ್ರದಕ್ಷಿಣವ ಮಾಡುವದು. ||೪೩||

---

1 ತಪೋವೇಷೀ (ಖ.ಗ.ಚ). ತಪಸ್ವೀ ಚ (ಕ) ವ್ಯಾಖ್ಯಾಪಾಠ.

2 ಶೀಲ (ಘ). 3 ಜೀ (ಘ) 4 ಸ್ಮರನ್ (ಘ)

5 ಪ್ರದಕ್ಷಿಣಂ ಚ ಕುರ್ವೀತ ಯಥಾ ಶಕ್ತ್ಯನುಸಾರತಃ (ಘ)

ಪ್ರದಕ್ಷಿಣ[1]ಕೃತೋ[1] ಧೀಮಾನ್ ನ ತು ದೀರ್ಘಪದಂ ನ್ಯಸೇತ್
ನ ಗಚ್ಛೇತ್ತ್ವರಿತೋ ಯಚ್ಛ ನ ಜಲ್ಪೇದಿತರೈಸ್ಸಹ ||೪೪||

ಪದೇ ಪದಾಂತರಂ ನ್ಯಸ್ಯ ಕರೌ ಚಲನವರ್ಜಿತೌ
[2]ಸ್ತುತಿರ್ವಾಚಾ ಹೃದಿ[3] ಧ್ಯಾನಂ [3]ಚತುರಂಗಂ[3] ಪ್ರದಕ್ಷಿಣಮ್ ||೪೫||

[4]ಏವಂ ಶಿಷ್ಯಃ ಶುಚಿರ್ಭಕ್ತ್ಯಾ ಸಹ ಕುರ್ಯಾತ್ಪರಿಕ್ರಮಮ್[4]
ಸ್ವಗುರೋಃ ಪುರತಶ್ಶಿಷ್ಯೋ ನೇತರಾನ್ ಕೀರ್ತಯೇಜ್ಜನಾನ್ ||೪೬||

ಪ್ರದಕ್ಷಿಣಕೃತಃ = ಪ್ರದಕ್ಷಿಣವ ಮಾಡಿದಂಥಾ ಧೀಮಾನ್ = ಬಲ್ಲಾತನು ದೀರ್ಘಪದಂ ತು = ನಿಡಿದಾಗಿ ಹೆಜ್ಜೆಯನು ನ್ಯಸೇನ್ನ = [5]ಇಕ್ಕ[5]ಲಾಗದು ತ್ವರಿತಃ = ಬೇಗದಲು ನ ಗಚ್ಛೇತ್ = ನಡೆಯುಲಾಗದು ಯಚ್ಛ = ಆವುದಾನೊಂದು ಕಾರಣವಾಗಿಯೂ ಇತರೈಸ್ಸಹ = [6]ಉಳಿದವರು[6]ಗಳೊಡನೆ ನ ಜಲ್ಪೇತ್ = ಮಾತನಾಡಲಾಗದು. ||೪೪||

ಪದೇ = ಹಜ್ಜೆಯಲ್ಲಿ ಪದಾಂತರಂ = ಹಜ್ಜೆಯನು ನ್ಯಸ್ಯ = ಇರಿಸಿ ಕರೌ = ಹಸ್ತಂಗಳು ಚಲನವರ್ಜಿತೌ = ಚಲನೆಯಿಲ್ಲದ[7]ವಾಗಿ[7] ವಾಚಾ = ವಾಕ್ಯದಿಂದ ಸ್ತುತಿಃ = ಸ್ತೋತ್ರವ ಮಾಡುತ್ತಲು ಹೃದಿ = ಚಿತ್ತದಲ್ಲಿ ಧ್ಯಾನವ ಮಾಡುತ್ತಲು ಚತುರಂಗಂ = ಈ ನಾಲ್ಕಂಗವನುಳ್ಳಂಥಾ ಪ್ರದಕ್ಷಿಣಂ = ಪ್ರದಕ್ಷಿಣವನು ಮಾಡುವುದು. ||೪೫||

ಏವಂ = ಈ ಪ್ರಕಾರದಲ್ಲಿ ಶಿಷ್ಯಃ = ಶಿಷ್ಯನು ಶುಚಿಃ = ಶುಚಿಯಾಗಿ ಭಕ್ತ್ಯಾ ಸಹ = ಭಕ್ತಿಯೊಡನೆ ಪರಿಕ್ರಮಂ = ಪ್ರದಕ್ಷಿಣವನು ಕುರ್ಯಾತ್ = ಮಾಡುವುದು. ಸ್ವಗುರೋಃ = ತನ್ನ ಶ್ರೀಗುರುವಿನ ಪುರತಃ = ಮುಂದೆ ಶಿಷ್ಯಃ = ಶಿಷ್ಯನು ಇತರಾನ್ = ಉಳಿದಂಥಾ ಜನಾನ್ = ಜನರುಗಳನು ನ ಕೀರ್ತಯೇತ್ = ಕೊಂಡಾಡಲಾಗದು. ||೪೬||

---

1 ಜ್ಞೋಯೋಃ (ಘ) 2 ಸ್ತುತಿಂವಾಚಾ ಹೃದಾ (ಘ)

3 ಏವಂ ಕುರ್ಯಾತ್ (ಘ)

4 ಏವಂ ಶಿಷ್ಯಃ ಶುಚಿಃ ಕುರ್ಯಾತ್ ಭಕ್ತ್ಯಾ ಸಹ ಪರಿಕ್ರಮಮ್ (ಘ)

5 ಇಡ (ಖ. ಚ) 6 ಇತರರು (ಖ. ಚ)

7 ದಾತನಾಗಿ (ಖ. ಚ.)

[1]ಅಸಹ್ಯಭಾಷಣಂ ಚೈವ[1] ನ ವದೇದಿತರೇತರವ್
ನಾನೃತಂ ನಾಪ್ರಿಯಂ ವಾಕ್ಯಂ ನ [2]ಗುಹ್ಯಂ[2] ಚಾಪಿ ಭಾಷಯೇತ್ ||

ನಾಪೃಚ್ಛನ್ನಮುಖೋ ಬ್ರೂಯಾದ್ಗುರೋರಗ್ರೇ ಕದಾಚನ
ಸ್ವಾಮಿಭಟ್ಟಾರಕಾಚಾರ್ಯದೇವಶ್ರೀಗುರುನಾಮಭಿಃ ||೪೮||

ವಾಚ್ಯಃ ಸದಾ ಗುರುಃ ಶಿಷ್ಯೈಃ ಜಾತುಚಿನ್ನಾನ್ಯನಾಮಭಿಃ
ತ್ವಂ ಶಬ್ದಂ ನ ಪ್ರಯುಂಜೀತ ಗುರೌ ಶಿಷ್ಯಃ ಕದಾಚನ ||೪೯||

ಆಜ್ಞಾಂ ನ ಲಂಘಯೇತ್ತಸ್ಯ [3]ಸಮಂ ನೋ[3]ಪವಿಶೇತ್ತಥಾ
ಆಸನಂ ವಾಹನಂ ವಸ್ತ್ರಂ ಭೂಷಣಂ ಶಯನಂ ತಥಾ
ನ ಕುರ್ಯಾದ್ಗುರುಸಾದೃಶ್ಯಂ [4]ಗತಿಸಿದ್ಧೇರಪೇಕ್ಷಕಃ[4] ||೫೦||

ಅಸಹ್ಯಭಾಷಣಂ = ಸೊಗಸದಂಥಾ[5]ಮಾತನು[5] ನ ವದೇತ್ = ನುಡಿಯಲಾಗದು ಇತರೇತರಂ = ಅನ್ಯವ್ಯಾಪಾರವನು ನ ವದೇತ್ = ನುಡಿಯಲಾಗದು. ಅನೃತಂ = ಹುಸಿಯನು ನ = ನುಡಿಯಲಾಗದು. ಅಪ್ರಿಯಂ = ಪ್ರಿಯವಲ್ಲದೇ ಇದ್ದಂಥಾ ವಾಕ್ಯಂ = ವಾಕ್ಯವನು ನ = ನುಡಿಯಲಾಗದು. ಗುಹ್ಯಂ ಚಾಪಿ = ಗೋಪ್ಯವಹಂಥಾ ಮಾತನು ನ ಭಾಷಯೇತ್ = ಆಡಲಾಗದು. ||೪೭||

ಗುರೋಃ = ಶ್ರೀಗುರುವಿನ ಅಗ್ರೇ = ಇದಿರಿನಲ್ಲಿ ಕದಾಚನ = ಒಂದು ಬಾರಿಯೂ ಅಮುಖಃ = ತಿರಿಗಿದ ಮುಖವನುಳ್ಳಾತನಾಗಿ ನ ಬ್ರೂಯಾತ್ = ನುಡಿಯಲಾಗದು. ಅಪೃಚ್ಛನ್ = ಬೆಸಗೊಳ್ಳದಾತನಾಗಿ ನ = ನುಡಿಯಲಾಗದು ಸ್ವಾಮಿಭಟ್ಟಾರಕಾಚಾರ್ಯದೇವ ಶ್ರೀಗುರುನಾಮಭಿಃ = ಸ್ವಾಮೀ ಒಡೆಯರು ಭಟ್ಟಾರಕಃ = ಭಟ್ಟಾರಕರು ಆಚಾರ್ಯಃ = ಆಚಾರ್ಯರು ದೇವಃ = ದೇವರು ಶ್ರೀ ಗುರುಃ = ಶ್ರೀಗುರುಃವೆಂಬಂಥಾ ನಾಮಭಿಃ = ನಾಮಂಗಳಿಂದವು, ||೪೮||

ಗುರುಃ = ಶ್ರೀಗುರುವು ಶಿಷ್ಯೈಃ = ಶಿಷ್ಯರುಗಳಿಂದ ಸದಾ = ಎಲ್ಲಾಗವೂ ವಾಚ್ಯಃ = ನುಡಿಯಲು ಯೋಗ್ಯನು. ಜಾತುಚಿತ್ = ಒಮ್ಮೆಯೂ ಅನ್ಯನಾಮಭಿಃ = ಉಳಿದ ಹೆಸರುಗಳಿಂದ ನ ವಾಚ್ಯಃ = ನುಡಿಯಲು ಯೋಗ್ಯನಲ್ಲ. ಶಿಷ್ಯಃ = ಶಿಷ್ಯನು ಗುರೌ = ಗುರುವಿನಲ್ಲಿ ಕದಾಚನ = ಒಂದು ಬಾರಿಯೂ ತ್ವಂ ಶಬ್ದಂ = ನೀನು ಎಂಬ ಶಬ್ದವನು ನ ಪ್ರಯುಂಜೀತ = ಪ್ರಯೋಗಿಸಲಾಗದು. ||೪೯||

ತಸ್ಯ = ಆ ಶ್ರೀಗುರುವಿನ ಆಜ್ಞಾಂ = ಆಜ್ಞೆಯನು ನ ಲಂಘಯೇತ್ =

---

1 ಅಸಹ್ಯಭಾವಂ ನ ವದೇತ್ (ಖ.ಗ.ಚ) 2 ಗುಪ್ತಂ (ಗ) 3 ಸಮೋನೋ (ಖ.ಗ.ಚ)
4 ಗತಿಸಿದ್ಧಿಹಿತೇಚ್ಛುಕಃ (ಘ) 5 ಕಾರ್ಯವನು (ಖ. ಚ)

=ಇಹಾತನು. ತ್ವಮೇವ=ನೀನೇ ಅಹಂ=ನಾನು ತ್ವಂ ವೈ=ನೀನೇ ಅಹಂ =ನಾನು ಆವಯೋಃ=ನಮ್ಮಿಬ್ಬರಿಗೆ ಭೇದಃ=ಭೇದವು ಸದಾ=ಎಲ್ಲಾಗವೂ ನಾಸ್ತಿ=ಇಲ್ಲ. ||೩೯||

ಶಕ್ತಿಪ್ರಭಾವಾಭ್ಯಾಂ= ಸತ್ತ್ವಸಾಮರ್ಥ್ಯಂಗಳಿಂದ ಮಯಾ=ಎನ್ನೊಡನೆ ಸಮಃ=ಸಮಾನನಾಗಿ ಇಹ=ಈ ಲೋಕದಲ್ಲಿ ಸುಖಂ=ಸುಖವಾಗಿ ಆವಸ= ಇರು. ವಸ—ನಿವಾಸೇ ಇತಿ ಧಾತುಃ ಏವಂ=ಈ ಪ್ರಕಾರದಲ್ಲಿ ಸೋಮಃ = ಉಮೆಯಿಂದ ಸಹಿತನಹಂಥಾ ಈಶಃ=ಪರಮೇಶ್ವರನು ಗಣನಾಯಕಂ=ಗಣೇಶ್ವರನಹಂಥಾ ತಂ=ಆ ಸಾನಂದಂ=ಸಾನಂದ ಋಷೀಶ್ವರನನು ಅನುಗೃಹ್ಯ = ಪತಿಕರಿಸಿ ಗಣೇಶ್ವರೈಸ್ಸಾರ್ಧಂ= ಗಣೇಶ್ವರರುಗಳಿಂದ ಸಹಿತವಾಗಿ ತತ್ರೈವ = ಅಲ್ಲಿಯೇ ಅಂತರಧೀಯತ=ಮಾಯವಾದನು. ||೪೦||

ತತಃಪ್ರಭೃತಿ=ಅಂದು ಮೊದಲುಗೊಂಡು ಮಹಾನ್=ಮಹಾನ್ನವಹಂಥಾ ಪೂರ್ಣವಿತ್ತಸುತಃ = ಪೂರ್ಣವಿತ್ತಋಷಿಯ ಪುತ್ರನಹಂಥಾ ಸಾನಂದಮುನಿ ದೇವೇಶಂ=ದೇವರ್ಕಳಿಗೊಡೆಯನಹಂಥಾ ಶಶಿಭೂಷಣಂ=ಚಂದ್ರಭೂಷಣನಹಂಥಾ ಶಂಕರಂ = ಸುಖವನು ಮಾಡುತ್ತಿದ್ದಂಥಾ ಶಿವನನು ಸತತಂ = ಆವಾಗವೂ ಅರ್ಚಯಾಮಾಸ=ಅರ್ಚಿಸಿದನು. ಅರ್ಚ–ಪೂಜಾಯಾಂ ಇತಿ ಧಾತುಃ. ||೪೧||

ಪ್ರಾತಃ=ಉದಯದಲ್ಲಿ ಸ್ನಾತ್ವಾ=ಸ್ನಾನವ ಮಾಡಿ ಶಿವಂ = ಶಿವನನು ಪೂಜ್ಯ=ಪೂಜಿಸಿ ಸರ್ವಶಿವಾಗಮಾನ್= ಸಮಸ್ತಶಿವಾಗಮಂಗಳನು ಶ್ರುತ್ವಾ= ಕೇಳಿ ಮಧ್ಯಾಹ್ನೇ = ಮಧ್ಯಾಹ್ನದಲ್ಲಿ ಶಿವಭಕ್ತಾಂಸ್ತು = ಶಿವಭಕ್ತರುಗಳನು ಶ್ರುತ್ವಾ=ಕೇಳಿ ಮಧ್ಯಾಹ್ನೇ=ಮಧ್ಯಾಹ್ನದಲ್ಲಿ ಶಿವಭಕ್ತಾಂಸ್ತು = ಶಿವಭಕ್ತರು

---

[1] ಶಿವಭಕ್ತಾಂಶ್ಚ (ಘ) [2] ಪ್ರಣವಂ ಪೀತ್ವಾ (ಗ)

ಸಾನಂದಂ ಸಾರ್ಥನಾಮಾನಂ ಪ್ರಣತಂ ಪರಮೇಶ್ವರಃ
ಆನಂದಕ್ಲಿನ್ನಸರ್ವಾಂಗಂ ದೃಷ್ಟ್ವಾ ತುಷ್ಟಮನಾ ಹ್ಯಭೂತ್ ||೩೬||

ಕರಾಭ್ಯಾಂ ಸುಶುಭಾಭ್ಯಾಂ ವೈ ದೇವದೇವ ಉಮಾಪತಿಃ
ಉತ್ಥಾಪ್ಯ ಮುನಿಮಾಘ್ರಾಯ[1]ಮೂರ್ಧನ್ಯೇವಮುವಾಚ ಹ ||೩೭||

ಜನ್ಮನಾ ಜರಯಾ ತ್ಯಕ್ತಃ ಸರ್ವದುಃಖವಿವರ್ಜಿತಃ
ಗಣೇಶ್ವರೋ ಮೇ ಸುರಪಸ್ಕಂದನಂದಿಸಮೋ ಭವ ||೩೮||

ಯತ್ರಾಹಂ ಸಂಸ್ಥಿತೋ ನಿತ್ಯಂ ಭವಾನ್ ತತ್ರಾಪಿ ಸಂಸ್ಥಿತಃ
ತ್ವಮೇವಾಹಮಹಂ ತ್ವಂ ವೈ ಭೇದೋ ನಾಸ್ತಿ ಸದಾಽಽವಯೋಃ ||

ಆನಂದಾಶ್ರುಗಳಿಂದ ಕದಡಲ್ಪಟ್ಟಂಥಾ ನಯನಂಗಳನುಳ್ಳಾತನಾಗಿ ಶಂಭೋಃ = ಪರಮೇಶ್ವರನ ಪಾದಾಂಬುಜದ್ವಂದ್ವೇ = ಪದಕಮಲವೆರಡರಲ್ಲಿ ನಿಪಪಾತ = ಬಿದ್ದನು. ||೩೫||

ಪರಮೇಶ್ವರಃ = ಪರಮೇಶ್ವರನು ಪ್ರಣತಂ = ನಮಸ್ಕರಿಸಿದಂಥಾ ಆನಂದ-ಕ್ಲಿನ್ನಸರ್ವಾಂಗಂ = ಆನಂದದಿಂದ ನೆನೆಯಲ್ಪಟ್ಟ ಸರ್ವಾಂಗವನುಳ್ಳಂಥಾ ಸಾರ್ಥ-ನಾಮಾನಂ = ಸಾರ್ಥಕವಹ ನಾಮವನುಳ್ಳಂಥಾ ಸಾನಂದಂ = ಸಾನಂದ ಮುನಿ-ಯನು ದೃಷ್ಟ್ವಾ = ಕಂಡು ತುಷ್ಟಮನಾಃ = ಸಂತುಷ್ಟವಹಂಥಾ ಮನಸ್ಸನುಳ್ಳಾತನು ಅಭೂತ್ ಹಿ = ಆದನಲಾ. ||೩೬||

ದೇವದೇವಃ = ದೇವರ್ಕಳಿಗೆ ಒಡೆಯ (ದೇವ) ನಹಂಥಾ ಉಮಾಪತಿಃ = ಪಾರ್ವತೀಪತಿಯಹಂಥಾ ಶಿವನು ಸುಶುಭಾಭ್ಯಾಂ = ಅತ್ಯಂತ ಒಪ್ಪುತ್ತಂವಿದ್ದಂಥಾ ಕರಾಭ್ಯಾಂ ವೈ = ಹಸ್ತಂಗಳಿಂದವೇ ಮುನಿಂ = ಸಾನಂದಋಷಿಯನು ಉತ್ಥಾಪ್ಯ = ನೆಗಹಿ ಮೂರ್ಧನಿ = ಶಿರಸ್ಸಿನಲ್ಲಿ ಆಘ್ರಾಯ = ಆಘ್ರಾಣಿಸಿ ಏವಂ = ಈ ಪ್ರಕಾರದಲ್ಲಿ ಉವಾಚ ಹ = ನುಡಿದನು. ||೩೭||

ಜನ್ಮನಾ = ಉತ್ಪತ್ತಿಯಿಂದ ಜರಯಾ = ವೃದ್ಧಾಪ್ಯದಿಂದ ತ್ಯಕ್ತಃ = ಬಿಡಲುಪಟ್ಟಂಥಾ ಸರ್ವದುಃಖವಿವರ್ಜಿತಃ = ಸಮಸ್ತ ದುಃಖಂಗಳಿಂದ ಬಿಡಲುಪಟ್ಟಂಥಾ ಆತನಾಗಿ ಸುರಪ-ಸ್ಕಂದ-ನಂದಿಸಮಃ = ಸುರಪಸ್ಕಂದ ನಂದಿಕೇಶ್ವರಂಗೆ ಸಮಾನಹಂಥಾ ಮೇ = ಎನ್ನ ಗಣೇಶ್ವರಃ = ಗಣೇಶ್ವರನು ಭವ = ಆಗು. ||೩೮||

ಯತ್ರ = ಆವುದಾನೊಂದು ಠಾವಿನಲ್ಲಿ ಅಹಂ = ನಾನು ಸಂಸ್ಥಿತಃ = ಇಹೆನು ಭವಾನ್ = ನೀನು ತತ್ರಾಪಿ = ಆ ಠಾವಿನಲ್ಲಿಯೂ ನಿತ್ಯಂ = ಆವಾಗವು ಸಂಸ್ಥಿತಃ

---

1 ಮೂರ್ಧ್ನಿ ಚೈವಮುವಾಚ ಹ (ಘ)

ರುದ್ರಕನ್ಯಾಗಣೈಸ್ಸರ್ವೈರಪ್ಸರೋಭಿಶ್ಚ ಸರ್ವಶಃ
ಗೀಯಮಾನಃ ಸ ಪುಣ್ಯಾತ್ಮಾ [1]ಧೂಯಮಾನ[1]ಸ್ಸ ಚಾಮರೈಃ ||೪೬||

ವಿಮಾನೈಃ ಸೇವ್ಯಮಾನಶ್ಚ ದೇವದೇವ ಇವಾಪರಃ
ಧರ್ಮರಾಜಪುರಂ[2]ಪ್ರಾಪ್ತಃ[2] ಧರ್ಮವೃದ್ಧ್ಯರ್ಥಮವ್ಯಯಃ ||೪೭||

ಧರ್ಮರಾಜೋಽಪಿ ತಂ ದೃಷ್ಟ್ವಾ ಧರ್ಮವೃದ್ಧಂ ಗಣೇಶ್ವರಮ್
ಅಭ್ಯುತ್ಥಾಯ ನಮಸ್ಕೃತ್ಯ ಪಾದ್ಯಾರ್ಘ್ಯೈರಭ್ಯಪೂಜಯತ್ ||೪೮||

= ವೇಗದಿಂದ ಸಹಿತ ಹೇಗಹುದು ಹಾಂಗೆ (ಸಹಿತವೇಹಗಹುದಹಗೆ) ಜಗಾಮ = ಎಯ್ದಿದನು. ಗಮ್ಲೃ-ಗತೌ ಎಂಬ ಧಾತು. ||೪೫||

ಸಚಾಮರೈಃ = ಚಾಮರಂಗಳಿಂದ ಸಹಿತವಹಂಥಾ ಸರ್ವೈಃ = ಸಮಸ್ತವ-ಹಂಥಾ ರುದ್ರಕನ್ಯಾಗಣೈಃ = ರುದ್ರಕನ್ನಿಕೆಯರುಗಳ ಮೊತ್ತಂಗಳಿಂದ ಧೂಯ-ಮಾನಃ = ಚಾಮರವನಿಕ್ಕಿಸಿಕೊಳುತ್ತಿದ್ದಂಥಾ ಸರ್ವಶಃ ಅಪ್ಸರೋಭಿಶ್ಚ = ಸಮಸ್ತ ಅಪ್ಸರ ಸ್ತ್ರೀಯರುಗಳಿಂದವೂ ಗೀಯಮಾನಃ = ಹಾಡಿಸಿಕೊಳುತ್ತಿದ್ದಂಥಾ ಪುಣ್ಯಾತ್ಮಾ = ಪುಣ್ಯಶರೀರಿಯಹಂಥಾ ಸಃ = ಆ ಸಾನಂದ ಮಹಾ ಋಷಿಯು, ||೪೬||

ವಿಮಾನೈಃ = ಪುಷ್ಪಕಂಗಳಿಂದ ಸೇವ್ಯಮಾನಃ = ಓಲೈಸಿಕೊಳಲುಪಟ್ಟಂಥಾತನಾಗಿ ಅಪರಃ = ಎರಡನೆಯ ದೇವದೇವ ಇವ = ಶಿವನಕ್ಕೈ ಎಂಬ ಹಾಂಗಿದ್ದಂಥಾ ಅವ್ಯಯಶ್ಚ = ನಿತ್ಯನಹಂಥಾ ಸಾನಂದಋಷೀಶ್ವರನು ಧರ್ಮವೃದ್ಧ್ಯರ್ಥಂ = ಧರ್ಮದ ಬೆಳವಿಗೆಗೋಸ್ಕರ ಧರ್ಮರಾಜಪುರಂ = ಯಮನ ಪಟ್ಟಣವನು- ಪ್ರಾಪ್ತಃ = ಎಯ್ದಿದನು. ||೪೭||

ಧರ್ಮರಾಜೋಽಪಿ = ಧರ್ಮರಾಜನು ಧರ್ಮವೃದ್ಧಂ = ಧರ್ಮದಿಂದ ವೃದ್ಧನಹಂಥಾ ಗಣೇಶ್ವರಂ = ಗಣಂಗಳಿಗೆ ಒಡೆಯನಹಂಥಾ ತಂ = ಆ ಸಾನಂದ-ಋಷೀಶ್ವರನನು ದೃಷ್ಟ್ವಾ = ಕಂಡು ಅಭ್ಯುತ್ಥಾಯ = ಇದಿರೆದ್ದು ನಮಸ್ಕೃತ್ಯ = ನಮಸ್ಕರಿಸಿ ಪಾದ್ಯಾರ್ಘ್ಯೈಃ = ಪಾದ್ಯ ಅರ್ಘ್ಯಂಗಳಿಂದ ಅಭ್ಯಪೂಜಯತ್ = ಪೂಜಿಸಿದನು. ||೪೮||

---

[1] ದೋಯಮಾನ (ಘ)

[2] ಪ್ರಾಪ (ಗ)

ರುದ್ರಾವತಾರಕ್ರೀಡಾದಿವಾರ್ತಾಮೃತರಸೋತ್ತಮಮ್
[1]ಅಪರಾಹ್ಣೇ[1] ಶಿವಂ ಪೀತ್ವಾ ಕಾಲಯಾತ್ರಾಮಥಾಕರೋತ್ ||೪೩||

ಕದಾಚಿಚ್ಛಿವಧರ್ಮಾದಿಶಾಸ್ತ್ರಾಖ್ಯಾನಕಥಾಸು ಚ
ನರಕಾನ್ನರಕಸ್ಥಾಂಶ್ಚ ನರಕೇಷು ಚ ಯಾತನಾಃ ||
ಶ್ರುತವಾನ್ ಶ್ರುತಿಸಾರಜ್ಞಃ ಶ್ರುತ್ವಾ ದ್ರಷ್ಟುಮನಾಹ್ಯಭೂತ್ ||೪೪||

* ವಿಮಾನಮಾರುಹ್ಯ ಮುನಿಃ ಪ್ರಭಾಸುರಂ
ಮುನೀಶ್ವರೈಃ ಕಿನ್ನರಸಾಧ್ಯಚಾರಣೈಃ ||
ಗಣೇಶ್ವರೈಃ ರುದ್ರಗಣೈಸ್ಸಮಾವೃತೋ
ಗಣೇಶ್ವರಸ್ಸತ್ವರಿತಂ ಜಗಾಮ ಸಃ ||೪೫||

ಗಳನು ಭೋಜಯಿತ್ವಾ = ಭೋಜನವ ಮಾಡಿಸಿ ಸಮಶ್ನುತೇ = ಆರೋಗಣೆಯ ಮಾಡುತ್ತಿಹನು. ||೪೨||

ಅಪರಾಹ್ಣೇ = ಸಾಯಂಕಾಲದಲ್ಲಿ ಶಿವಂ = ಮಂಗಳವಹಂಥಾ, ರುದ್ರಾವತಾರ ಕ್ರೀಡಾದಿವಾರ್ತಾಮೃತರಸೋತ್ತಮಂ = ಪರಮೇಶ್ವರನ ಅವತಾರ ಕ್ರೀಡೆ ಮೊದಲ-ಹಂಥಾ ಕಥಾಮೃತರಸದ ಅತಿಶಯವನು ಪೀತ್ವಾ = ಪಾನವ ಮಾಡಿ ಅಥ = ಅನಂತರದಲ್ಲಿ ಕಾಲಯಾತ್ರಾಂ = ಕಾಲವ ಕಳಿಹವನು ಅಕರೋತ್ = ಮಾಡಿದನು ||೪೩||

ಕದಾಚಿತ್ = ಒಂದಾನೊಂದು ವೇಳೆಯಲ್ಲಿ ಶಿವಧರ್ಮಾದಿಶಾಸ್ತ್ರಾಖ್ಯಾನ-ಕಥಾಸು ಚ = ಶಿವಧರ್ಮ ಮೊದಲಾಗಿದ್ದಂಥಾ ಶಾಸ್ತ್ರಂಗಳಲ್ಲಿ ಹೇಳಲ್ಪಟ್ಟ ಕಥೆಗಳಲ್ಲಿಯೂ ನರಕಾನ್ = ನರಕಂಗಳನು ನರಕಸ್ಥಾಂಶ್ಚ = ನರಕದಲ್ಲಿ ಇದ್ದವರುಗಳನು ನರಕೇಷು = ನರಕಂಗಳಲ್ಲಿಯ ಯಾತನಾಶ್ಚ = ಯಾತನೆಗಳನು ಶ್ರುತ್ವಾ = ಕೇಳಿ ಶ್ರುತವಾನ್ = ಶಾಸ್ತ್ರವನುಳ್ಳಂಥಾ ಶ್ರುತಿಸಾರಜ್ಞಃ = ವೇದದ ಸಾರವನು ಬಲ್ಲಂಥಾ ಸಾನಂದ ಋಷೀಶ್ವರನು ದ್ರಷ್ಟುಮನಾಃ = ನೋಡಲಿಚ್ಛೆಯನುಳ್ಳಾತನು ಅಭೂದ್ಧಿ = ಆದನಲಾ

ಗಣೇಶ್ವರಃ = ಗಣೇಶ್ವರನಹಂಥಾ ಸಃ ಮುನಿಃ = ಆ ಸಾನಂದ ಮಹಾಋಷಿ ಪ್ರಭಾಸುರಂ = ಅತ್ಯಂತ ಒಪ್ಪುತ್ತಂವಿದ್ದಂಥಾ ವಿಮಾನಂ = ಪುಷ್ಪಕವನು ಆರುಹ್ಯ = ಏರಿ ಮುನೀಶ್ವರೈಃ = ಋಷೀಶ್ವರರುಗಳಿಂದ ಕಿನ್ನರಸಿದ್ಧಚಾರಣೈಃ = ಕಿನ್ನರರು ಸಿದ್ಧರು ಚಾರಣರುಗಳಿಂದ ಗಣೇಶ್ವರೈಃ = ಗಣೇಶ್ವರರುಗಳಿಂದ ರುದ್ರಗಣೈಃ = ರುದ್ರಗಣಂಗಳಿಂದ ಸಮಾವೃತಃ = ಲೇಸಾಗಿ ಮುಸುಕಲ್ಪಟ್ಟಾತನಾಗಿ ಸತ್ವರಿತಂ

---

[1] ಅಪ ಏವ (ಗ) * ಅನುಷ್ಟುಪ್‌ಛಂದದಲ್ಲಿಯ ಉಪೇಂದ್ರವಜ್ರಾವೃತ್ತಂ ||

*ಕೃತಂ ಪುಣ್ಯಂ ಕರಿಷ್ಯಾಮಿ ಕ್ರಿಯತೇ ವಾಽಧುನಾ ತಥಾ
ಅಪುಣ್ಯಕೃದ್ಭಿರಪ್ರಾಪ್ಯೋ ಯಸ್ಮಾತ್ತ್ವಂ ಸಮುಪೇಯಿವಾನ್ ||೫೨||

ಶರೀರಸ್ಥೋಽಪ್ಯಹಂ ಜಾತೋ ಭವದಾನಂದದರ್ಶನಾತ್
ಸಾಕ್ಷಾತ್ತ್ರೈಲೋಕ್ಯನಾಥಸ್ಯ ಶಂಭೋರಿವ ಸಮಾಗಮಃ ||೫೩||

ಕಿಂ ಕರ್ತವ್ಯಂ ಮಯಾ ನಾಥ ತ್ವದಾಜ್ಞಾವಶವರ್ತಿನಾ
[1]ನಿಗದ ತ್ವಂ[1] ತಮೇವಂ ವೈ [2]ಜಗದಾನಂದಕಾರಣಮ್[2] ||೫೪||

ಸಾನಂದೋ ವಚನಂ ಪ್ರಾಹ ವಚಸಾಽಽನಂದಯನ್ನಿವ ||೫೫||

ಯಸ್ಮಾತ್ = ಆವುದಾನೊಂದು ಕಾರಣವಾಗಿ ಸಮುಪೇಯಿವಾನ್ = ಬಿಜಯಂಗೆಯ್ದಂಥಾ ತ್ವಂ = ನೀನು ಅಪುಣ್ಯಕೃದ್ಭಿಃ = ಪಾಪವ ಮಾಡಿದವರುಗಳಿಂದ ಅಪ್ರಾಪ್ಯಃ = ಹಡೆಯಲು ಬಾರದಾತನಾಗಿ ಕ್ರಿಯತೇ = ಮಾಡಲ್ಪಟ್ಟಾತನು. ತಥಾ = ಹಾಂಗೆ ಅಧುನಾ = ಈಗಳು ಪುಣ್ಯಂ = ಪುಣ್ಯವನು ಕೃತಂ = ಮಾಡಲ್ಪಟ್ಟಾತನಾಗಿ ಕರಿಷ್ಯಾಮಿ = ಮಾಡೇನು. ||೫೨||

ಅಹಂ = ನಾನು ಶರೀರಸ್ಥೋಽಪಿ = ಶರೀರದಲ್ಲಿದ್ದಾತನಾಯಿತ್ತಾದರೂ ಭವದಾನಂದದರ್ಶನಾತ್ = ನಿನ್ನ ಆನಂದವಹ ದರ್ಶನದ ದೆಸೆಯಿಂದ ಜಾತಃ = ಹುಟ್ಟಿದಾತನು. ತ್ರೈಲೋಕ್ಯನಾಥಸ್ಯ = ತ್ರೈಲೋಕಕ್ಕೆ ಒಡೆಯನಹಂಥಾ ಸಾಕ್ಷಾತ್ = ಪ್ರತ್ಯಕ್ಷವಹ ಶಂಭೋಃ = ಪರಮೇಶ್ವರನ ಸಮಾಗಮು ಇವ = ಬರವಕ್ಕೈ ಎಂಬ ಹಾಂಗಾಯಿತ್ತು. ||೫೩||

ಭೋ ನಾಥ = ಎಲೈ ಒಡೆಯನೇ! ತ್ವದಾಜ್ಞಾವಶವರ್ತಿನಾ = ನಿನ್ನಾಜ್ಞೆಯ ವಶವರ್ತಿಯಹಂಥಾ ಮಯಾ = ಎನ್ನಿಂದ ಕರ್ತವ್ಯಂ = ಮಾಡಬೇಕಾದಂಥಾದು ಕಿಂ = ಏನು? ಜಗದಾನಂದಕಾರಣಂ = ಲೋಕಕ್ಕೆ ಆನಂದವ ಮಾಡುತ್ತಂವಿದ್ದಂಥಾ ತಂ ವೈ = ಆ ಕಾರ್ಯವನೆ ತ್ವಂ = ನೀನು ಏವಂ = ಈ ಪ್ರಕಾರವೆಂದು ನಿಗದ = ಹೇಳು. ಗದ–ವ್ಯಕ್ತಾಯಾಂ ವಾಚಿ ಇತಿ ಧಾತುಃ ||೫೪||

ಸಾನಂದಃ = ಸಾನಂದ ಋಷಿಯು ವಚಸಾ = ವಾಕ್ಯದಿಂದ ಆನಂದಯನ್ನಿವ = ಸಂತೋಷವಹ ಹಾಂಗೆ ವಚನಂ = ವಾಕ್ಯವನು ಪ್ರಾಹ = ನುಡಿದನು. ||೫೫||

---

* "ಪುಣ್ಯವಮಾಡದವರಿಗೆ ಅಲಭ್ಯರಾದ ನೀವು ಇಲ್ಲಿಗೆ ದಯಮಾಡಿಸಿರುವುದರಿಂದ ನನ್ನಿಂದ ಪುಣ್ಯ ಮಾಡಲ್ಪಟ್ಟಿತ್ತು ಅಥವಾ ಪುಣ್ಯವನ್ನು ಮುಂದಾದರೂ ಮಾಡತಕ್ಕವನು. ಅಥವಾ ಈಗ ಪುಣ್ಯವನ್ನು ಮಾಡುತ್ತಿದ್ದೇನೆ ಎಂಬ ಅಭಿಪ್ರಾಯ ಸೂಕ್ತವೆನಿಸುತ್ತದೆ.

[1] ನಿಗದ್ಯತಾಂ (ಘ) ನಿಗದತ್ವಂ ತದೇವಂ (ಗ)   [2] ಜಗದಾನಂದಕಾರಣ (ಘ)

ಪೂಜಯಿತ್ವಾ ಸುಖಾಸೀನಂ ಗಣೇಶಾನಂ [1]ಗಣಾಗ್ರಣೀಂ[2]
ವಿನಯಪ್ರತಿಪತ್ತ್ಯರ್ಥಮಿದಂ ವಾಕ್ಯಮುವಾಚ ಹ ||೪೯||

ಯಮ ಉವಾಚ

ಅಹಂ ಪುಣ್ಯಕೃತಾಂ ಮಧ್ಯೇ ಗಣಿತೋ ಗಣನಾಯಕ !
ತವ ದೃಷ್ಟಿನಿಪಾತೇನ ಪೂತೋ ಭೂತಿವಿಭೂಷಣ ! ||೫೦||

ಅಹಂ ಹಿ ಪರಮೇಶೇನ ಲೋಕಕರ್ತ್ರಾ ಪಿನಾಕಿನಾ
ಪ್ರಾಯೇಣಾನುಗೃಹೀತೋ ವೈ ಭವಾನ್ಯಸ್ಮಾತ್ಸಮಾಗತಃ ||೫೧||

ಪೂಜಯಿತ್ವಾ = ಪೂಜಿಸಿ ಸುಖಾಸೀನಂ = ಸುಖದಲ್ಲಿ ಕುಳ್ಳಿದ್ದಂಥಾ ಗಣೇಶಾನಂ = ಗಣೇಶ್ವರನಹಂಥಾ [2]ಗಣಾಗ್ರಣೀಂ[2] = ಗಣಂಗಳಿಗೆ ಮುಖ್ಯನಹಂಥಾ ಸಾನಂದ ಋಷಿಯನು ಕುರಿತು ವಿನಯಪ್ರತಿಪತ್ತ್ಯರ್ಥಂ = ವಿನಯದ ವರ್ತನೆಗೋಸ್ಕರ ಇದಂ ವಾಕ್ಯಂ = ಈ ವಾಕ್ಯವನು ಉವಾಚ ಹ = ನುಡಿದನು. ||೪೯||

ಪ್ರತಿಪತ್ತಿ ಶಬ್ದವು ವರ್ತನೆಯಲ್ಲಿ ವರ್ತಿಸುವುದು 'ಪ್ರತಿಪತ್ತಿಃ ಪದಪ್ರಾಪ್ತೌ ಪ್ರವೃತ್ತೌ ಗೌರವೇಽಪಿ ಚ' ಇತಿ ವಿಶ್ವಪ್ರಕಾಶಃ

ಯಮ ಉವಾಚ—ಯಮನು ನುಡಿವುತ್ತಿದ್ದಾನು.

ಭೂತಿವಿಭೂಷಣ! = ವಿಭೂತಿಭೂಷಣನಹಂಥಾ ಭೋ ಗಣನಾಯಕ ! = ಎಲೈ ಗಣಶ್ರೇಷ್ಠನಹಂಥಾ ಸಾನಂದ ಮಹಾಋಷಿಯೆ ! ತವ = ನಿನ್ನ ದೃಷ್ಟಿನಿಪಾತೇನ = ದೃಷ್ಟಿ ಬಿದ್ದದ್ದರಿಂದ ಅಹಂ = ನಾನು ಪೂತಃ = ಪಾವನನು. ಪುಣ್ಯಕೃತಾಂ = ಪುಣ್ಯವನು ಮಾಡಿದಂಥಾವರುಗಳ ಮಧ್ಯೇ = ಮಧ್ಯದಲ್ಲಿ ಗಣಿತಃ = ಯೋಗ್ಯನಹಂಥಾ ಆತನು. ||೫೦||

ಯಸ್ಮಾತ್ = ಆವುದಾನೊಂದು ಕಾರಣವಾಗಿ ಭವಾನ್ = ನೀನು ಸಮಾಗತಃ = ಬಿಜಯಂಗೆಯ್ದೆ. ಲೋಕಕರ್ತ್ರಾ = ಲೋಕಕ್ಕೆ ಒಡೆಯನಂಥಾ ಪಿನಾಕಿನಾ = ಪಿನಾಕವನುಳ್ಳಂಥಾ ಪರಮೇಶೇನ = ಪರಮೇಶ್ವರನಿಂದ ಅಹಂ = ನಾನು ಪ್ರಾಯೇಣ = ಸ್ವಭಾವದಿಂದ ಅನುಗೃಹೀತೋ ವೈಹಿ = ಅನುಗ್ರಹಿಸಲುಪಟ್ಟಾತನಲಾ ಪತಿಕರಿಸಲ್ಪಟ್ಟೆನೆಂಬುದರ್ಥ. ||೫೧||

[1,2] ಗಣಾಗ್ರಣೀಃ (ಖ.ಗ) ಆರ್ಷೇಯಪ್ರಯೋಗಃ ಗ್ರಣಾಗ್ರಣೀಂ (ಕ)

ದರ್ಶನೇನ ಕೃತಾರ್ಥೋಽಹಂ ಕೃತಃ ಕೃತಿಮತಾಂ ವರ
ತಥಾಽಪಿ ನಿಃಸ್ಪೃಹಸ್ಯೇಹ ಕಿಂ ತವಾಸ್ತಿ ಪ್ರಯೋಜನಮ್ ||೬೦||

ಸಾನಂದ ಉವಾಚ

ಶೈವೇ ಪುರಾಣೇಽಥ ಮಯಾ ನರಕಾಖ್ಯಾನವರ್ಣನೇ
[1]ನರಕಾನ್[1] ನರಕಸ್ಥಾಂಶ್ಚ ಶ್ರುತ್ವಾ ತತ್ರ ಕುತೂಹಲೀ ||೬೧||

ದ್ರಷ್ಟುಮಾಗತವಾನಸ್ಮಿ ನರಕಾನ್ ನರಕಾಲಯಾನ್
ತ್ವನ್ಮುಖೇನ ಮಹಾಬಾಹೋ ಕ್ಷಿಪ್ರಮೇವ ಪ್ರದರ್ಶಯ ||೬೨||

ಸೂನೃತಂ=ಮೃದುವಾಕ್ಯವನು ಭಾಷಿತುಂ=ನುಡಿಯಲು ಕ್ಷಮಾಃ=ಸಮರ್ಥರಹಂಥಾ ತ್ವಾದೃಶಾಃ=ನಿನ್ನೋಪಾದಿಯಹಂಥಾ ಯೋಗೀಂದ್ರಾಃ=ಯೋಗೀಶ್ವರರುಗಳು ನಹಿ=ಇಲ್ಲವಲಾ. ||೫೯||

ಕೃತಿಮತಾಂ=[2]ಸುಕೃತವ ಮಾಡಿದಂಥಾ[2]ವರುಗಳಿಗೆ ವರಃ=ಶ್ರೇಷ್ಠನಹಂಥಾ ಸಾನಂದಮುನೀಶ್ವರನೆ! ತವ=ನಿನ್ನ ದರ್ಶನೇನ = ದರ್ಶನದಿಂದ ಅಹಂ = ನಾನು ಕೃತಾರ್ಥಃ=ಕೃತಾರ್ಥನಾಗಿ ಕೃತಃ=ಮಾಡಲ್ಪಟ್ಟಾತನು. ತಥಾಽಪಿ=ಹಾಂಗಾಯಿತ್ತಾದರೂ ನಿಸ್ಪೃಹಸ್ಯ=ನಿಸ್ಪೃಹನಹಂಥಾ ತವ=ನಿನಗೆ ಇಹ=ಈ ನನ್ನ ಲೋಕದಲ್ಲಿ ಪ್ರಯೋಜನಂ=ಪ್ರಯೋಜನವು ಕಿಮಸ್ತಿ=ಏನುಂಟು? ಸಾನಂದ ಉವಾಚ—ಸಾನಂದಮಹಾ ಋಷಿ ನುಡಿವುತ್ತಿದ್ದಾನು.

ಅಥ=ಅನಂತರದಲ್ಲಿ ಶೈವೇ ಪುರಾಣೇ=ಶಿವಪುರಾಣದಲ್ಲಿ ನರಕಾಖ್ಯಾನ-ವರ್ಣನೇ=ನರಕಂಗಳ ಹೆಸರ ವರ್ಣಿಸುವಲ್ಲಿ ನರಕಾನ್=ನರಕಂಗಳನು ನರಕ-ಸ್ಥಾಂಶ್ಚ=ನರಕದಲ್ಲಿ ಇದ್ದಂಥಾವರುಗಳನು ಮಯಾ=ಎನ್ನಿಂದ ಶ್ರುತ್ವಾ=ಕೇಳಿ ತತ್ರ=ಅಲ್ಲಿ ಕುತೂಹಲೀ=ಆಶ್ಚರ್ಯವನುಳ್ಳಾತನಾಗಿ, ||೬೧||

ನರಕಾನ್=ನರಕಂಗಳನು ನರಕಾಲಯಾನ್=ನರಕದಲ್ಲಿ ಇದ್ದಂಥಾವರುಗಳನು ದ್ರಷ್ಟುಂ=ನೋಡಲು ಆಗತವಾನ್ = ಬಂದಾತನು ಅಸ್ಮಿ= ಆಗುತ್ತಿದ್ದೇನು. ಮಹಾಬಾಹೋ!=ಎಲೈ ದೊಡ್ಡಿಹ ಭುಜಂಗಳನುಳ್ಳಾತನೆ! ತ್ವನ್ಮುಖೇನ=ನಿನ್ನ ಮುಖದಿಂದ ಕ್ಷಿಪ್ರಮೇವ=ಬೇಗವೇ ಪ್ರದರ್ಶಯ=ತೋರಿಸು. ||೬೨||

---

[1] ನಾರಕಾನ್ (ಘ) [2] ಲುಪ್ತ (ಕ)

ಸಾನಂದ ಉವಾಚ

ತ್ವಮೇವ ಧರ್ಮರಾಜೋ[1]ವೈ[1] ದಕ್ಷಃ ಪಾಪವಿಶೋಧನೇ
[2]ಲಬ್ಧಪ್ರಸಾದೋ ಭಗವನ್[2] ಶಿವಾತ್ಸರ್ವಸುರಾಧಿಪಾತ್ ||೫೬||

ತ್ವತ್ತೋऽನ್ಯಃ ಕಃ ಪುಮಾನ್ ಲೋಕೇ ಧರ್ಮಸ್ಥಿತಿಮಥಾಚರೇತ್

ಯಮ ಉವಾಚ

ನೂನಂ ಭಗವತಾ ತೇನ ಲೋಕಕರ್ತ್ರಾ ಪಿನಾಕಿನಾ
ಕೃತಾನುಗ್ರಹ ಏವಾಹಂ ಯತ್ತ್ವಯೈವಂ ಪ್ರಭಾಷಿತಃ ||೫೮||

ತ್ವಾದೃಶಾ ನ ಹಿ ಯೋಗೀಂದ್ರಾಃ ಸತ್ಯಧರ್ಮಪರಾಯಣಾಃ
ಶಿವಾಗಮಾರ್ಥಸಾರಜ್ಞಾಃ [3]ಸೂನೃತಂ ಭಾಷಿತುಂ[3] ಕ್ಷಮಾಃ ||೫೯||

ಸಾನಂದ ಉವಾಚ—ಸಾನಂದ ಮಹಾಋಷಿ ನುಡಿವುತ್ತಿದ್ದಾನು.

ಹೇ ಭಗವನ್ = ಎಲೆ ಸಾಮರ್ಥ್ಯವನುಳ್ಳಂಥಾ ಆತನೆ. ತ್ವಮೇವ = ನೀನೇ ಧರ್ಮರಾಜೋ ವೈ = ಧರ್ಮರಾಯನು. ಪಾಪವಿಶೋಧನೇ = ಪಾಪಂಗಳ ಶುದ್ಧವ ಮಾಡುವಲ್ಲಿ ಸರ್ವಸುರಾಧಿಪಾತ್ = ಸಮಸ್ತ ದೇವರ್ಕಳಿಗೆ ಒಡೆಯನಹಂಥಾ ಶಿವಾತ್ = ಪರಮೇಶ್ವರನ ದೆಸೆಯಿಂದ ಲಬ್ಧಪ್ರಸಾದಃ = ಹಡೆಯಲ್ಪಟ್ಟ ಪ್ರಸನ್ನತೆಕೆಯನುಳ್ಳಂಥಾ ದಕ್ಷಃ = ಸಮರ್ಥನು. ||೫೬||

ಅಥ = ಅನಂತರದಲ್ಲಿ ಲೋಕೇ = ಲೋಕದಲ್ಲಿ ಧರ್ಮಸ್ಥಿತಿಂ = ಧರ್ಮದ ನಿರ್ಣಯವನು ತ್ವತ್ತಃ = ನಿನ್ನಿಂದಲು ಅನ್ಯಃ ಪುಮಾನ್ = ಮತ್ತೊಬ್ಬ ಪುರುಷನು ಕಃ = ಆವಾತನು ಆಚರೇತ್ = ಆಚರಿಸುವನು? ನೀನೇ ಆಚರಿಸುವನೆಂಬುದರ್ಥ. ||೫೭||

ಯಮ ಉವಾಚ—ಯಮನು ನುಡಿವುತ್ತಿದ್ದಾನು.

ಯತ್ = ಆವುದಾನೊಂದು ಕಾರಣವಾಗಿ ತ್ವಯಾ = ನಿನ್ನಿಂದ ಏವಂ = ಈ ಪ್ರಕಾರದಲ್ಲಿ ಪ್ರಭಾಷಿತಃ = ನುಡಿಯಲುಪಟ್ಟಂಥಾ ಅಹಂ ಏವ = ನಾನೇ ಭಗವತಾ = ಷಡ್ಗುಣೈಶ್ವರ್ಯಸಂಪನ್ನನಹಂಥಾ ಲೋಕಕರ್ತ್ರಾ = ಲೋಕಕ್ಕೆ ಒಡೆಯನಹಂಥಾ ತೇನ ಪಿನಾಕಿನಾ = ಆ ಪರಮೇಶ್ವರನಿಂದ ನೂನಂ = ಅತ್ಯಂತವಾಗಿ ಕೃತಾನುಗ್ರಹಃ = ಮಾಡಲ್ಪಟ್ಟ ಪತಿಕರಣೆಯನುಳ್ಳಾತನು. ||೫೮||

ಸತ್ಯಧರ್ಮಪರಾಯಣಾಃ = ಸತ್ಯ ಧರ್ಮಂಗಳಲ್ಲಿ ತಾತ್ಪರ್ಯವನುಳ್ಳಂಥಾ ಶಿವಾಗಮಾರ್ಥಸಾರಜ್ಞಾಃ = ಶಿವಾಗಮಂಗಳ ಅರ್ಥದ ಸಾರವನ್ನು ಬಲ್ಲಂಥಾ

---

1 ಹಿ (ಘ) 2 ಲಬ್ಧಪ್ರಸಾದೋಹಿ ಭವಾನ್ (ಘ) 3 ಸೂನೃತಾಭಾಷಣ (ಘ)

ಸಾನಂದ ಉವಾಚ

ನ ಜಾನೇ ಕಾರಣಂ ತತ್ರ [1]ಸುರೇತರನಿಷೂದನ[1]
ಔತ್ಸುಕ್ಯಂ ಮಮ ಸಂಜಾತಂ ನರಕಾಣಾಂ ನಿದರ್ಶನೇ ||೬೭||

ಯದಿ ಶಕ್ಯಂ ಮಯಾ ದ್ರಷ್ಟುಂ ತ್ವಯಾ ದರ್ಶಯಿತುಂ ತಥಾ
ನ ರಹಸ್ಯಂ ನ ದುಷ್ಕಾರ್ಯಂ ಕ್ಷಿಪ್ರಮೇವ ಪ್ರದರ್ಶಯ ||೬೮||

ಯಮ ಉವಾಚ

ನ ಚ ಲಂಘಯಿತುಂ ಶಕ್ತಿಸ್ತ್ವದೀಯಂ ವಚನಂ ಮಮ
ಅಲಂಘ್ಯಮಖಿಲೈರ್ದೇವೈಃ ಶಿವಸ್ಯ ವಚನಂ ಯಥಾ ||೬೯||

ಸಾನಂದ ಉವಾಚ — ಸಾನಂದಮುನಿ ನುಡಿಯುತ್ತಿದ್ದಾನು.

ಸುರೇತರನಿಷೂದನ = ದೇವರ್ಕಳಿಗೆ ಅನ್ಯರಹ ಮನುಷ್ಯರ ಮರ್ದಿಸುತ್ತಿರ್ದ್ದಂಥಾ ಆತನೆ ತತ್ರ = ಆ ನರಕದಲ್ಲಿ ಕಾರಣಂ = ಕಾರಣವನು ನ ಜಾನೇ = ಅರಿಯೆನು. ನರಕಾಣಾಂ = ನರಕಂಗಳ ನಿದರ್ಶನೇ = ನೋಡುವಲ್ಲಿ ಮಮ = ಎನಗೆ ಔತ್ಸುಕ್ಯಂ = *ಅರ್ಥಿ (ಆರ್ತಿ) ಸಂಜಾತಂ = ಆಯಿತ್ತು. ||೬೭||

ಯದಿ = ಎತ್ತಲಾದನ ಮಯಾ = ಎನ್ನಿಂದ ದ್ರಷ್ಟುಂ = ನೋಡಲೋಸ್ಕರ ತ್ವಯಾ = ನಿನ್ನಿಂದೆ ತಥಾ = ಹಾಂಗೆ ದರ್ಶಯಿತುಂ = ತೋರಿಸಲು ಶಕ್ಯಂ = ಸಮರ್ಥವು. ರಹಸ್ಯಂ = ಏಕಾಂತವು ನ = ಅಲ್ಲ. ದುಷ್ಕಾರ್ಯಂ = ಮಾಡಬಾರದೆಂಥಾದ್ದು ನ = [2]ಅಲ್ಲ[2] ಕ್ಷಿಪ್ರಮೇವ = ಬೇಗವೇ ಪ್ರದರ್ಶಯ = ತೋರಿಸು. ||೬೮||

ಯಮಃ ಉವಾಚ — ಯಮನು ನುಡಿಯುತ್ತಿದ್ದಾನು.

ತ್ವದೀಯಂ = ನಿನ್ನ ಸಂಬಂಧವಹಂಥಾ ವಚನಂ = ವಾಕ್ಯವು ಲಂಘಯಿತುಂ = ಮೀರಲು ಶಕ್ತಿಶ್ಚ = ಶಕ್ತಿಯೂ ಮಮ = ಎನಗೆ ನ = ಇಲ್ಲ. ಶಿವಸ್ಯ = ಶಿವನ ವಚನಂ ಯಥಾ = ವಾಕ್ಯವೆಹೆಗೊ ಹಾಗೆ ಅಖಿಲೈಃ = ಸಮಸ್ತವಹಂಥಾ ದೇವೈಃ = ದೇವರ್ಕಳಿಂದವು ಅಲಂಘ್ಯಂ = ಮೀರಬಾರದು. ||೬೯||

---

[1] ಸುರಾರಿವರಸೂದನ (ಘ) [1] ಇಲ್ಲ (ಕ)

* ಅರ್ಥಿಪದದ ತದ್ಭವ ಆರ್ತಿ. ಆರ್ತಿ ಎಂದರೆ ಬಯಕೆ, ಆಶೆ ಎಂದೂ, ಅಚ್ಚು ಆರ್ತಿ ಎಂದರೆ ಪ್ರೀತಿ ಎಂದೂ ಕಿಟೆಲ್ ನಿಘಂಟು.

ಯಮ ಉವಾಚ

ತ್ವಂ ಶಿವಾಗಮತತ್ತ್ವಜ್ಞಃ ಪರಮೇಶಗಣೇಶ್ವರಃ
ಕಿಮರ್ಥಂ ನರಕಾನ್ ದ್ರಷ್ಟುಮತ್ರೈವಾಗತವಾನಸಿ ||೬೩||

ಪಾಪಿನಃ ಕ್ರೂರಕರ್ಮಾಣಃ ಶಿವನಿಂದಾಪರಾಯಣಾಃ
ಪಶ್ಯಂತಿ ನರಕಾನ್ ಘೋರಾನ್ ತ್ವಾದೃಶಾ ನ ತು ಯೋಗಿನಃ ||೬೪||

ಯೇ ಮನಾಗಪಿ ದೇವೇಶಂ ಪ್ರತಿಪನ್ನಾ ಮಹೇಶ್ವರಮ್
ತೇ ನ ಪಶ್ಯಂತಿ ನರಕಾನ್ನರಕಸ್ಥಾನ್ನ ಸಂಶಯಃ ||೬೫||

ಕಿಂ ಪುನಶ್ಶಿವಭಕ್ತಸ್ಯ ಶಿವಾಚಾರಪ್ರವರ್ತಿನಃ
ನರಾಣಾಂ ನರಕಸ್ಥಾನಾಂ ದರ್ಶನಂ ತವ ಯುಜ್ಯತೇ ||೬೬||

ಯಮ ಉವಾಚ = ಯಮನು ನುಡಿವುತ್ತಿದ್ದಾನು.

ತ್ವಂ = ನೀನು ಶಿವಾಗಮತತ್ತ್ವಜ್ಞಃ = ಶಿವಾಗಮಂಗಳ ನಿಶ್ಚಯವ ಬಲ್ಲಾತನು ಪರಮೇಶಗಣೇಶ್ವರಃ = ಪರಮೇಶ್ವರನ ಗಣೇಶ್ವರನಹಂಥಾ ಆತನು. ಕಿಮರ್ಥಂ = ಏನು ಕಾರಣ ನರಕಾನ್ = ನರಕಂಗಳನು ದ್ರಷ್ಟುಂ = ನೋಡಲು ಅತ್ರೈವ = ಇಲ್ಲಿಗೇ ಆಗತವಾನ್ = ಬಂದಾತನು ಅಸಿ = ಅಹೆ. ||೬೩||

ಕ್ರೂರಕರ್ಮಾಣಃ = ಕ್ರೂರವಹ ಕರ್ಮವ ಮಾಡಿದಂಥಾ ಶಿವನಿಂದಾಪರಾಯಣಾಃ = ಶಿವನ ನಿಂದಿಸುವಲ್ಲಿ ತತ್ಪರರಹಂಥಾ ಪಾಪಿನಃ = ಪಾಪಿಗಳು ಘೋರಾನ್ = ಭಯಂಕರವಹಂಥಾ ನರಕಾನ್ = ನರಕಂಗಳನು ಪಶ್ಯಂತಿ = ಕಾಣುತ್ತಿಹರು. ತ್ವಾದೃಶಾಃ = ನಿನ್ನಂಥಾ ಯೋಗಿನಸ್ತು = ಯೋಗಿಗಳು ನ ಪಶ್ಯಂತಿ = ಕಾಣರು.

ಯೇ = ಆರು ಕೆಲಂಬರು ದೇವೇಶಂ = ದೇವರ್ಕಳಿಗೊಡೆಯನಹಂಥಾ ಮಹೇಶ್ವರಂ = ಪರಮೇಶ್ವರನನು ಮನಾಗಪಿ = ಒಂದು ಬಾರಿ ಆಯಿತಾದರೂ ಪ್ರತಿಪನ್ನಾಃ = ಮರೆಯೊಗುವರು, ತೇ = ಅವರುಗಳು ನರಕಾನ್ = ನರಕಂಗಳನು ನರಕಸ್ಥಾನ್ = ನರಕದಲ್ಲಿ ಇದ್ದಂಥಾವರುಗಳನು ನ ಪಶ್ಯಂತಿ = ಕಾಣುತ್ತಿರರು. ಸಂಶಯಃ = ಸಂದೇಹವು ನ = ಇಲ್ಲ. ||೬೫||

ಶಿವಭಕ್ತಸ್ಯ = ಶಿವಭಕ್ತನಹಂಥಾ ಶಿವಾಚಾರಪ್ರವರ್ತಿನಃ = ಶಿವಾಚಾರದಲ್ಲಿ ಪ್ರವರ್ತಿಸುತ್ತಂವಿದ್ದಂಥಾ ತವ = ನಿನಗೆ ನರಕಸ್ಥಾನಾಂ = ನರಕಂಗಳಲ್ಲಿ ಇದ್ದಂಥಾ ನರಾಣಾಂ = ನರರುಗಳ ದರ್ಶನಂ = ನೋಡುಹವು ಕಿಂ ಪುನಃ ಯುಜ್ಯತೇ = ಹೇಗೆ ಕೂಡಲ್ಪಡುವುದು? ಅವ್ಯಯಪದ, ಉಚಿತಾರ್ಥವ ನುಡಿವುತ್ತಿದ್ದಾನು. ||೬೬||

ದರ್ಶಯಾಮಾಸ ಸರ್ವಾಣಿ ಗಣೇಶಾಯ ಮಹಾತ್ಮನೇ
ಪಾತಾಳಾನಾಮಧೋಭಾಗೇ ಹ್ಯಷ್ಟಾವಿಂಶತಿಕೋಟಯಃ ||೭೩||

ತಾಸ್ಸರ್ವಾ ದರ್ಶಯಾಮಾಸ ಯಥಾವದ್ಧರ್ಮರಾಟ್ ಸ್ವಯಮ್
ಕರ್ಮಾಣಿ ನರಕಸ್ಥಾನಾಂ ಪ್ರಾಣಿನಾಂ ಯಾತನಾಸ್ತಥಾ ||೭೪||

ಕಾಲಮಾತ್ರಪ್ರಭೇದಂ ಚ ದರ್ಶಯಿತ್ವಾ[1] ಜಗಾಮ[1] ಸಃ
ರೌರವಾದಿಷು ದೃಷ್ಟೇಷು ನರಕೇಷು ಸುದಾರುಣಮ್ ||೭೫||

ಅತಿಘೋರಾಹ್ವಯಂ ಘೋರಂ ನರಕಂ ಚಾಪ್ಯದರ್ಶಯತ್ ||೭೬||

ತತ್ರ ಯಾ ಯಾತನಾ ದೃಷ್ಟ್ವಾ ಹ್ಯತಿಘೋರಾ ಭಯಂಕರಾಃ
ವಕ್ತುಂ ನ ಶಕ್ಯಮಃ ಶ್ರುತ್ವಾ ಮೃತಿಂ ಯಾಂತಿ [2]ಮೃದೀಯಸಃ[2]||೭೭||

ಪಾತಾಳಾನಾಂ = ಪಾತಾಳಂಗಳ ಅಧೋಭಾಗೇ = ಕೆಳಗಣ ಭಾಗದಲ್ಲಿ ಅಷ್ಟಾವಿಂಶತಿ ಕೋಟಯಃ = ಇಪ್ಪತ್ತೆಂಟು ಕೋಟಿ ನರಕಂಗಳುಂಟು. ಸರ್ವಾಣಿ = ಎಲ್ಲವನು ಮಹಾತ್ಮನೇ = ಮಹಾತ್ಮನಹಂಥಾ ಗಣೇಶಾಯ = ಗಣೇಶ್ವರಂಗೋಸ್ಕರ ದರ್ಶಯಾಮಾಸ ಹಿ = ತೋರಿದನಲಾ. ||೭೩||

ಧರ್ಮರಾಟ್ = ಯಮಧರ್ಮರಾಜನು ಸ್ವಯಂ = ತಾನೇ ಸರ್ವಾಃ = ಸಮಸ್ತವಹಂಥಾ ತಾಃ = ಆ ನರಕಂಗಳನು ನರಕಸ್ಥಾನಾಂ = ನರಕಂಗಳಲ್ಲಿದ್ದಂಥಾ ಪ್ರಾಣಿನಾಂ = ಪ್ರಾಣಿಗಳ ಕರ್ಮಾಣಿ = ಕರ್ಮಂಗಳನು ತಥಾ = ಹಾಂಗೆ ಯಾತನಾಃ = ಯಾತನೆಗಳನು ಯಥಾವತ್ = ತಪ್ಪದೆ ದರ್ಶಯಾಮಾಸ = ತೋರಿಸಿದನು. ||೭೪||

ಕಾಲಮಾತ್ರ ಪ್ರಭೇದಂ ಚ = ಕಾಲದ ಕಟ್ಟಳೆಯ ಭೇಧವನು ದರ್ಶಯಿತ್ವಾ = ತೋರಿಸಿ ಸಃ = ಆ ಯಮನು ಜಗಾಮ = ಎಯ್ದಿದನು. ||೭೫||

ರೌರವಾದಿಷು = ರೌರವ ಮೊದಲಾಗಿದ್ದಂಥಾ ನರಕೇಷು = ನರಕಂಗಳು ದೃಷ್ಟೇಷು ಸತ್ಸು = ಕಾಣಲುಪಡುತ್ತಂಇರಲು ಸುದಾರುಣಂ = ಸುದಾರುಣವೆಂಬಂಥಾ ನರಕವನು ಅತಿಘೋರಾಹ್ವಯಂ ಚ = ಅತಿ ಘೋರವೆಂಬಂಥಾ ಹೆಸರನುಳ್ಳ ನರಕವನು ಘೋರಂ = ಘೋರವೆಂಬಂಥಾ ನರಕಮಪಿ = ನರಕವನೂ ಅದರ್ಶಯತ್ = ತೋರಿಸಿದನು. ||೭೬||

ತತ್ರ = ಅಲ್ಲಿ ಯಾಃ = ಆವವು ಕೆಲವು ಅತಿಘೋರಾಃ = ಅತ್ಯಂತ ಜುಗುಪ್ಸೆ

---

[1] ಜಗಾದ (ಘ) [2] ಮೃದೀಯಸಾಃ (ಘ) ಸುಕೋಮಲಾಃ (ಘ) ಪಾಠಾಂತರ. ಮ್ರದೀಯಾಂಸಃ ಎಂಬ ಪಾಠ ಉಚಿತ.

ಪುರಾ ಮೃಕಂಡುತನಯಮವಮತ್ಯ ಪುರಂ ಮಮ
ದಗ್ಧಮಾಸೀತ್ ಕ್ಷಣೇನೈವ ಸಂಭ್ರಾಂತಾ ವಿವಶಾ ವಯಮ್ ||೭೦||

ಭಗ್ನಕಾಯೋ ಮೃತಃ ಕಾಲಃ ಪಾದಾಘಾತೇನ ಶೂಲಿನಃ
ಅಹಂ ಬದ್ಧೋ ದೃಢಂ ಪಾಶೈಃ ಪುನಸ್ತೇನೈವ ರಕ್ಷಿತಃ ||೭೧||

ತಸ್ಮಾದ್ಬಿಭೇಮಿ ಸತತಂ ಶಂಭೋಃ ಕಿಂಕರವರ್ಗತಃ
ದರ್ಶಯಿಷ್ಯೇ ಕ್ಷಣಾದೇವ ನರಾನ್ನರಕವಾಸಿನಃ ||೭೨||

ನಂದೀಶ್ವರ ಉವಾಚ—

ಪುರಾ = ಪೂರ್ವದಲ್ಲಿ ಮೃಕಂಡುತನಯಂ = ಮೃಕಂಡುಋಷಿಯ ಪುತ್ರನಹಂಥಾ ಮಾರ್ಕಂಡೇಯ ಮುನಿಯನು ಅವಮತ್ಯ = ಅವಮನ್ನಣೆಯು ಮಾಡಿ ಮಮ = ಎನ್ನ ಪುರಂ = ಪಟ್ಟಣವು ಕ್ಷಣೇನೈವ = ಕ್ಷಣಮಾತ್ರದಿಂದವೇ ದಗ್ಧಂ = ದಹಿಸಲುಟ್ಟುದು ಆಸೀತ್ = ಆಯಿತ್ತು. ವಯಂ = ನಾವು ವಿವಶಾಃ = ಮುಂದುಗೆಟ್ಟವರುಗಳಾಗಿ ಸಂಭ್ರಾಂತಾಃ = ಸ್ಥಾನಭ್ರಷ್ಟರಾದೆವು. ಭ್ರಮು — ಅನವಸ್ಥಾನೇ ಎಂಬ ಧಾತುವಿನಲ್ಲಿ ಹುಟ್ಟಿದ ಕಾರಕಪದವು. ||೭೦||

ಕಾಲಃ = ಕಾಲನು ಶೂಲಿನಃ = ಪರಮೇಶ್ವರನ ಪಾದಾಘಾತೇನ = ಪಾದದ ಒದೆತದಿಂದ ಭಗ್ನಕಾಯಃ = ಜರ್ಝರಿತವಾದ ಶರೀರವನುಳ್ಳಾತನಾಗಿ ಮೃತಃ = ಸತ್ತನು. ಅಹಂ = ನಾನು ಪಾಶೈಃ = ನೇಣುಗಳಿಂದ ದೃಢಂ = ಬಲುಹಾಗಿ ಬದ್ಧಃ = ಕಟ್ಟಿಸಿಕೊಳಲ್ಪಟ್ಟಾತನಾಗಿ ಪುನಃ = ಮರಳಿ ತೇನೈವ = ಆ ಶಿವನಿಂದವೇ ರಕ್ಷಿತಃ = ಪಾಲಿಸಿಕೊಳಲ್ಪಟ್ಟಾ[1]ತನು.[1] ||೭೧||

ತಸ್ಮಾತ್ = ಅದು ಕಾರಣವಾಗಿ ಶಂಭೋಃ = ಪರಮೇಶ್ವರನ ಕಿಂಕರವರ್ಗತಃ = ಭಕ್ತಸಮೂಹಕ್ಕೆ ಸತತಂ = ಆವಾಗವೂ ಬಿಭೇಮಿ = ಅಂಜುತ್ತಂವಿಹೆನು. ಞಿಭೀ-ಭಯಚಲನಯೋಃ ಎಂಬ ಧಾತು. ಕ್ಷಣಾದೇವ = ಒಂದು ಕ್ಷಣದ ದೆಸೆಯಿಂದವೇ ನರಕವಾಸಿನಃ = ನರಕಂಗಳಲ್ಲಿರುತ್ತಿದ್ದಂಥಾ ನರಾನ್ = ಮನುಷ್ಯರುಗಳನು ದರ್ಶಯಿಷ್ಯೇ = ತೋರಿ[2]ಸುವೆನು.[2] ದೃಶಿರ್—ಪ್ರೇಕ್ಷಣೇ ಎಂಬ ಧಾತು. ||೭೨||

ನಂದೀಶ್ವರಉವಾಚ = ನಂದೀಶ್ವರನು ನುಡಿವುತ್ತಿದ್ದಾನು

---

[2] ನಾಗಿ (ಕ) [3] ಸೇನು (ಖ. ಚ)

ಯಮ ಉವಾಚ

ಏಷಾಂ [1]ದುಷ್ಕೃತರೂಪಾಣಿ ನ ವಕ್ತುಂ ಶಕ್ನುಮೋ ವಯಮ್
ತಥಾಽಪಿ ಖಲು ಪಾಪಸ್ಯ ಸ್ಮೃತಿರಶ್ರೇಯಸೇ ಯತಃ ||೮೧||

ಸಾನಂದ ಉವಾಚ

ರಹಸ್ಯಮಪಿ [2]ನಾ[3]ಚ್ಛಾದ್ಯಂ ಯಥಾ ಜ್ಞಾತಂ ತ್ವಯಾ [3]ಯದಿ[3]
ಆಖ್ಯೇಯಮಾಖ್ಯಾಕುಶಲ! ಮಮ ಪ್ರೀತೋ ಭವಾನ್ ಯತಃ||೮೨

ಮುಕ್ತಿಃ = [4]ಬಿಡುಗಡೆಯು[4] ಮಹಾತ್ಮನಾ = ಮಹಾಬುದ್ಧಿಯನುಳ್ಳಂಥಾ ನಿನ್ನಿಂದ ಉಕ್ತಾ = ನುಡಿಯಲ್ಪಟ್ಟಿತ್ತು. ಏಷಾಂ = ಈ ನರಕದಲ್ಲಿ ಇದ್ದವರುಗಳಿಗೆ ಮುಕ್ತಿಃ = ಬಿಡುಗಡೆ ಕೇನ ಹೇತುನ್ಯೈವ = ಆವ ಕಾರಣದಿಂದವೆ ಅನುದ್ದಿಷ್ಟಾ = ಹೇಳು ಲ್ಪಟ್ಟುದಿಲ್ಲ. ವದ = ಹೇಳು. ||೮೦||

ಯಮ ಉವಾಚ—ಯಮನು ನುಡಿವುತ್ತಿದ್ದಾನು.

ಏಷಾಂ = ಈ ಪಾಪಿಗಳ ದುಷ್ಕೃತರೂಪಾಣಿ = ದುಷ್ಕರ್ಮಂಗಳ ಸ್ವರೂಪುಗಳನು (ದುಷ್ಕೃತರೂಪಗಳನ್ನು) ವಕ್ತುಂ = ನುಡಿಯಲು ವಯಂ = ನಾವು ನ ಶಕ್ನುಮಃ = ಸಮರ್ಥರಾಗೆವು. ತಥಾಽಪಿ = ಹಾಗಾಯಿತಾದರೂ ಪಾಪಸ್ಯ = ಪಾಪದ ಸ್ಮೃತಿಃ = ಸ್ಮರಣೆ ಯತಃ = ಆವುದಾನೊಂದು ಕಾರಣವಾಗಿ ಅಶ್ರೇಯಸೇ = ಲೇಸಿಂಗೋಸ್ಕರವಲ್ಲವಲಾ. ಯಮನ ಪಾರುಪತ್ಯಕ್ಕೆ ವಿಘ್ನವಹುದೆಂಬುದರ್ಥ. ೮೧

ಸಾನಂದ ಉವಾಚ—ಸಾನಂದ ಯೋಗೀಶ್ವರನು ನುಡಿವುತ್ತಿದ್ದಾನು.

ತ್ವಯಾ = ನಿನ್ನಿಂದ ಯಥಾ = ಹೇಂಗೆ ಜ್ಞಾತಂ = ಅರಿಯಲ್ಪಟ್ಟಿತ್ತು ರಹಸ್ಯಮಪಿ = ರಹಸ್ಯವಹಂಥಾದ್ದು ಯದಿ = ಎತ್ತಲಾನು ನಾಚ್ಛಾದ್ಯಂ = [5][ಮರೆಸಲ್ಪಡಬಾರದು][5] ಆಖ್ಯಾಕುಶಲ ! = ಹೇಳುವಲ್ಲಿ ಕುಶಲನಹಂಥಾ ಆತನೇ ಭವಾನ್ = ನೀನು ಯತಃ = ಆವುದಾನೊಂದು ಕಾರಣವಾಗಿ ಮಮ = ಎನಗೆ ಪ್ರೀತಃ = ಪ್ರಿಯನಹಂಥಾ ಆತನು. ತತಃ = ಆದು ಕಾರಣವಾಗಿ ಆಖ್ಯೇಯಂ = ಹೇಳಬೇಕು.* ||೮೨||

---

[1] ದುಷ್ಕೃತಕರ್ಮಾಣಿ (ಘ) [2] ಮಾ (ಖ). ನಾ (ಕ ಘ) ಮ (ಗ)
[3] ತಥಾ (ಘ) [4] ಮುಕ್ತಿಯು (ಕ)
[5] ಆಚ್ಛಾದ್ಯಂ = ಮುಚ್ಚಿಸಲ್ಪಟ್ಟಿತ್ತು ಎಂದು ವ್ಯಾಖ್ಯಾನ. 'ನ' ಎಂಬುದು ವ್ಯಾಖ್ಯಾನದಲ್ಲಿಲ್ಲ.
* ನನಗೆ ನೀನು ಪ್ರಿಯನಾದುದರಿಂದ, ನಿನ್ನಿಂದ ರಹಸ್ಯವು ಹೇಗೆ ತಿಳಿಯಲ್ಪಟ್ಟಿರುವುದೋ

ತತ್ತದಾ ದರ್ಶಯನ್ ಘೋರಮತಿಘೋರಸಮಾಹ್ವಯಮ್
ನರಕಂ [1]ಧರ್ಮರಾಜೋऽಸೌ[1] ಪುನರಾಹ ಗಣೇಶ್ವರಮ್ ||೭೮||

ಯಮಉವಾಚ

ಅತ್ರ ಯೇ [2]ನಾರಕಾಃ[2] ದೃಷ್ಟಾ ಪಾಪಾತ್ಮಾನೋ ನರಾಧಮಾಃ
ನ ಹಿ ತೇಷಾಂ ಭವೇನ್ಮುಕ್ತಿಃ ಕೇನಾಪಿ ಸುದುರಾತ್ಮನಾಮ್ ||೭೯||

ಸಾನಂದ ಉವಾಚ

ಅನ್ಯೇಷಾಂ ನರಕಸ್ಥಾನಾಂ ಮುಕ್ತಿರುಕ್ತಾ ಮಹಾತ್ಮನಾ
ಏಷಾಂ ಮುಕ್ತಿರನುದ್ದಿಷ್ಟಾ ವದ ಕೇನೈವ ಹೇತುನಾ ||೮೦||

ಯುನ್ನುಳ್ಳಂಥಾ ಭಯಂಕರಾಃ = ಭಯಂಕರವಹಂಥಾ ಯಾತನಾಃ = ಬಾಧೆಗಳು ದೃಷ್ಟ್ವಾ ಹಿ = ಕಾಣಲುಪಟ್ಟವಲ್ಲಾ. ವಕ್ತುಂ = ನುಡಿಯಲು ನ ಶಕ್ನುಮಃ = ಸಮರ್ಥರಾಗೆವು. ಶಕಲೃ-ಶಕ್ತೌ ಇತಿ ಧಾತುಃ. ಶ್ರುತ್ವಾ = ಕೇಳಿ ಮೃದೀಯಸಃ = ಮೃದುಚಿತ್ತವನುಳ್ಳವರುಗಳು ಮೃತಿಂ = ಮರಣವನು ಯಾಂತಿ = ಎಯ್ದುತ್ತಿಹರು. ||೭೭||

ಅಸೌ ಧರ್ಮರಾಜಃ = ಈ ಧರ್ಮರಾಜನು ತತ್ = ಆ ಘೋರಂ = ಘೋರವೆಂಬಂಥಾ ನರಕಂ = ನರಕವನು ಅತಿಘೋರಸಮಾಹ್ವಯಂ = ಅತಿಘೋರವೆಂಬ ಹೆಸರನುಳ್ಳಂಥಾ ನರಕಂ = ನರಕವನು ದರ್ಶಯನ್ = ತೋರಿಸುತ್ತವು ತದಾ = ಆಗ ಗಣೇಶ್ವರಂ = ಗಣೇಶ್ವರನಹಂಥಾ ಸಾನಂದಋಷಿಯನು ಕುರಿತು ಪುನಃ = ಮರಳಿ ಆಹ = ನುಡಿದನು. ||೭೮||

ಯಮ ಉವಾಚ—ಯಮನು ನುಡಿವುತ್ತಿದ್ದಾನು.

ಅತ್ರ = ಈ ನರಕದಲ್ಲಿ ಪಾಪಾತ್ಮಾನಃ = ಪಾಪಬುದ್ಧಿಯನುಳ್ಳಂಥಾ ನರಾಧಮಾಃ = ಮನುಷ್ಯರೊಳಗೆ [3]ಅಧಮ[3]ರಹಂಥಾ ಯೇ = ಆರು ಕೆಲಂಬರು ನಾರಕಾಃ = ನರಕಿಗಳು ದೃಷ್ಟಾಃ = ಕಾಣಲುಪಟ್ಟರು ಸುದುರಾತ್ಮನಾಂ = ಅತ್ಯಂತ ದುರಾತ್ಮರಹಂಥಾ ತೇಷಾಂ = ಅವರುಗಳಿಗೆ ಕೇನಾಪಿ = ಆವುದರಿಂದವು ಮುಕ್ತಿಃ = ಬಿಡುಗಡೆ ನ ಭವೇದ್ಧಿ = ಆಗದಲಾ. ||೭೯||

ಸಾನಂದ ಉವಾಚ—ಸಾನಂದ ಮಹಾಋಷಿ ನುಡಿವುತ್ತಿದ್ದಾನು.

ಅನ್ಯೇಷಾಂ = ಉಳಿದಂಥಾ ನರಕಸ್ಥಾನಾಂ = ನರಕದಲ್ಲಿ ಇದ್ದವರುಗಳಿಗೆ

---

[1] ಧರ್ಮರಾಜಾऽಸೌ (ಘ) [2] ನರಕಾ (ಘ) [3] ಅಯೋಗ್ಯ (ಕ)

ತವ ದೃಷ್ಟಿನಿಪಾತೇನ ಮುಕ್ತಾ ಏವ ನ ಸಂಶಯಃ
ತಸ್ಮಾದ್ವಕ್ಷ್ಯಾಮಿ ಸಕಲಂ ಮುಕ್ತಾಸ್ಸ್ಯುರ್ನರಕಾಲಯಾಃ ||೮೬||

ಸಕೃನ್ನಮಃ ಶಿವಾಯೇತಿ ನ ಶ್ರುತಂ ನ ಚ ಜಲ್ಪಿತಮ್
ಏತೈಃ ಪಾಪಾತ್ಮಭಿರ್ಘೋರೈರನೇಕೇಷ್ವಪಿ ಜನ್ಮಸು ||೮೭||

ಏತೇಷಾಂ ಕಥನಂ ಪಾಪಂ ಭವತೋ ವಾಕ್ಯಗೌರವಾತ್
ಕಥಿತಂ ಕರುಣಾರಾಶೇ ಯಥೇಷ್ಟಂ ಕರ್ತುಮರ್ಹಸಿ ||೮೮||

ಏವಮುಕ್ತ್ವಾ ಸ್ಥಿತೇ ತಸ್ಮಿನ್ ಧರ್ಮರಾಜೇ ಮಹಾತ್ಮನಿ
ಚಿಂತಯಾಮಾಸ ಗಣಪಶ್ಚೇತಸಾ ಶಿವನಂದನಃ ||೮೯||

ಪ್ರಸಾದಾತ್ = ಪ್ರಸನ್ನತಿಕೆಯ ದೆಸೆಯಿಂದ ಏತೇಷಾಂ = ಈ ನರಕಿಗಳಿಗೆ ಮುಕ್ತಿಃ = ಮುಕ್ತಿ ಭವಿತಾ = ಆಗಲುಳ್ಳುದು. ಭೂ = ಸತ್ತಾಯಾಂ ಎಂಬ ಧಾತು ಲುಟ್-ಪರಸ್ಮೈಪದವು. ಕರ್ಮಣಾಂ = ಕರ್ಮಂಗಳ ಕ್ಷಯಕಾಲೋ ವಾ = ಕ್ಷಯವಹ ಕಾಲವೊ ಶಿವಾಜ್ಞಾ ವಾ = ಶಿವನ ಆಜ್ಞೆಯೋ ಇಯಂ = ಇದು ಭವೇತ್ = ಅಹುದು. ||೮೫||

ತವ = ನಿನ್ನ ದೃಷ್ಟಿನಿಪಾತೇನ = ನೋಟದಿಂದ ಮುಕ್ತಾ ಏವ = ಮುಕ್ತರುಗಳೇ. ನ ಸಂಶಯಃ = ಸಂದೇಹವಿಲ್ಲ. ತಸ್ಮಾತ್ = ಅದು ಕಾರಣವಾಗಿ ಸಕಲಂ = ಸಮಸ್ತವನು ವಕ್ಷ್ಯಾಮಿ = ಹೇಳಿಹೆನು. ನರಕಾಲಯಾಃ = ನರಕದಲ್ಲಿ ಇಹವರುಗಳು ಮುಕ್ತಾಃ = ಮುಕ್ತರುಗಳು ಸ್ಯುಃ = ಅಹರು. ಅಸ-ಭುವಿ ಇತಿ ಧಾತುಃ.

ಘೋರೈಃ = ಭಯಂಕರವಹಂಥಾ ಏತೈಃ ಪಾಪಾತ್ಮಭಿಃ = ಈ ಪಾಪಶರೀರಿಗಳಿಂದ ಅನೇಕೇಷು ಜನ್ಮಸ್ವಪಿ = ಅನೇಕ ಜನ್ಮಂಗಳಲ್ಲಿಯೂ ನಮಃಶಿವಾಯೇತಿ = ನಮಃ ಶಿವಾಯ ಎಂಬ ಮಂತ್ರವು ಸಕೃತ್ = ಒಂದು ಬಾರಿಯೂ ನ ಶ್ರುತಂ = ಕೇಳಲುಪಟ್ಟುದಿಲ್ಲ. ನ ಜಲ್ಪಿತಂ = ನುಡಿಯಲುಪಟ್ಟುದಿಲ್ಲವು. ||೮೭||

ಏತೇಷಾಂ = ಈ ನರಕಿಗಳ ಕಥನಂ = ಕಥೆಯಹಂಥಾ ಪಾಪಂ = ಪಾಪವು ಭವತಃ = ನಿನ್ನ ವಾಕ್ಯಗೌರವಾತ್ = ವಾಕ್ಯದ ಗುರುತ್ವದ ದೆಸೆಯಿಂದ ಕಥಿತ = ಹೇಳಲ್ಪಟ್ಟಿತ್ತು. ಭೋ ಕರುಣಾರಾಶೇ ! = ಎಲೈ ಕರುಣಕ್ಕೆ ರಾಸಿಯಹಂಥಾ ಯೋಗೀಶ್ವರನೇ ! ಯಥೇಷ್ಟಂ = ಇಷ್ಟವು ಹೇಗಹುದೋ ಹಾಗೆ (ಹೇಗಹುದಹಗೆ) ಕರ್ತುಂ = ಮಾಡಲು ಅರ್ಹಸಿ = ಯೋಗ್ಯನಾಗುತ್ತಿಹೆ. ||೮೮||

ಏವಂ = ಈ ಪ್ರಕಾರದಲ್ಲಿ ಉಕ್ತ್ವಾ = ನುಡಿದು ಮಹಾತ್ಮನಿ = ಮಹಾತ್ಮನಹಂಥಾ ತಸ್ಮಿನ್ ಧರ್ಮರಾಜೇ = ಆ ಧರ್ಮರಾಜನು ಸ್ಥಿತೇ ಸತಿ = ಇರುತ್ತಂ

ಯಮ ಉವಾಚ

ಏತೇಷಾಂ ಪಾಪಕಥನೇ ಮುಕ್ತಿಸ್ಸ್ಯಾನ್ನರಕಾದತಃ
ನ ವಚ್ಮಿ ಭವತೋಽತ್ರಾಪಿ ಕಿಂ ಕರ್ತವ್ಯಂ [1]ಮಯಾ ವದ[1] ||೮೩||

ಸಾನಂದ ಉವಾಚ

ಮುಕ್ತಿ[2]ವಾನ್ ಭವತಾತ್ತೇಷಾಂ[2] ದುಃಖಂ ವಾ ದ್ವಿಗುಣೀಕೃತಮ್
ಏಷಾಂ ಪಾಪಾತ್ಮನಾಂ ಕರ್ಮ ಶೀಘ್ರಂ ವಕ್ತುಮಿಹಾರ್ಹಸಿ ||೮೪||

ಯಮ ಉವಾಚ

ಏತೇಷಾಂ ಭವಿತಾ ಮುಕ್ತಿಃ ಪ್ರಸಾದಾತ್ತವ ಸುವ್ರತ
ಕರ್ಮಣಾಂ ಕ್ಷಯಕಾಲೋ ವಾ ಶಿವಾಜ್ಞಾ ವಾ ಭವೇದಿಯಮ್|| ೮೫

[3]ಯಮ ಉವಾಚ—ಯಮ ನುಡಿವುತ್ತಿದ್ದಾನು.[3]

ಏತೇಷಾಂ=ಈ ನರಕಿಗಳ ಪಾಪಕಥನೇ=ಪಾಪವ ಹೇಳುವಲ್ಲಿ ನರಕಾತ್ =ನರಕದ ದೆಸೆಯಿಂದ ಮುಕ್ತಿಃ=ಬಿಡುಗಡೆ ಸ್ಯಾತ್=ಅಹುದು, ಅತಃ=ಅದು ಕಾರಣವಾಗಿ ನ ವಚ್ಮಿ=ಹೇಳೆನು. ವಚ=ಪರಿಭಾಷಣೇ ಎಂಬ ಧಾತು. ಭವತಃ= ನಿನಗೆ ಅತ್ರಾಪಿ=ಇಲ್ಲಿಯೂ ಮಯಾ=ಎನ್ನಿಂದ ಕಿಂಕರ್ತವ್ಯಂ=ಏನನ್ನಿ ಮಾಡ ಬೇಕು ? ವದ=ಹೇಳು. ||೮೩||

ಸಾನಂದ ಉವಾಚ—ಸಾನಂದ[4]ಮುನೀ[4]ಶ್ವರನು ನುಡಿವುತ್ತಿದ್ದಾನು.

ತೇಷಾಂ=ಅವರುಗಳಿಗೆ ಮುಕ್ತಿವಾನ್= ಮುಕ್ತಿಯಾದರೂ ಭವತಾತ್ = ಆಗಲಿ. 'ಭೂ-ಸತ್ತಾಯಾಂ' ಎಂಬ ಧಾತು. ದುಃಖಂ ವಾ = ದುಃಖವಾದರೂ ದ್ವಿಗುಣೀಕೃತಂ=ಇಮ್ಮಡಿಯಾಗಿ ಮಾಡಲ್ಪಟ್ಟದು ಭವತಾತ್=ಆಗಲಿ. ಏಷಾಂ =ಈ ಪಾಪಾತ್ಮನಾಂ=ಪಾಪಶರೀರಿಗಳ ಕರ್ಮ=ಕರ್ಮವನು ಶೀಘ್ರಂ=ಬೇಗ ಇಹ=ಇಲ್ಲಿ ವಕ್ತುಂ=ನುಡಿಯಲು ಅರ್ಹಸಿ= [5]ಅರ್ಹನಾಗಿರುವೆ.[5] ಅರ್ಹ- ಪೂಜಾಯಾಂ ಎಂಬ ಧಾತು. ||೮೪||

ಯಮ ಉವಾಚ=ಯಮ[6]ನು ನುಡಿವುತ್ತಿದ್ದಾನು.[6]

ಭೋ ಸುವ್ರತ=ಎಲೈ ಒಪ್ಪುತ್ತಂವಿದ್ದಂಥಾ ವ್ರತವನುಳ್ಳಾತನೆ! ತವ=ನಿನ್ನ

ಹಾಗೆಯೇ ಆ ರಹಸ್ಯವು ನನಗೆ ಬಚ್ಚಿಡದೇ ಹೇಳಲ್ಪಡತಕ್ಕದ್ದು' ಎಂಬುದು ಈ ಶ್ಲೋಕದ ತಾತ್ಪರ್ಯ]. 1 ಮಯಾಽಧುನಾ (ಘ) 2 ವಾಽಪಿ ಭವೇತ್ತೇಷಾಂ (ಘ)
3 ಲುಪ್ತ (ಕ) 4 ಯೋಗೀ (ಕ) 5 ಯೋಗ್ಯನಾಗುತ್ತಿಹೆ (ಖ) 6 ಸ ವಾಕ್ಯವು (ಖ)

ಹರ ಹರ ಇತಿ ಶಬ್ದಮಾದಿತೋ ವೈ
ಮುಹುರಭಿಧಾಯ ಮುನೀಂದ್ರವೃಂದವಂದ್ಯಃ
ಅಪಠದಖಿಲಮೋಘಘೋಷಸಾಮ್ಯಂ
ಸಕಲಹಿತಾಯ ನಮಃಶಿವಾಯಮಂತ್ರಮ್ ||೯೩||

ಪಠಿತಂ ಶಿವಮಂತ್ರಂ ತಂ ಶ್ರುತ್ವಾ ನರಕವಾಸಿನಃ
ಸಮುತ್ತೇರುಃ ಕ್ಷಣಾತ್ತಸ್ಮಾನ್ನರಕಾತ್ ನಾರಕಾ ಜನಾಃ ||೯೪||

ಕ್ಷುದ್ರಪಾಪಯುತಾಃ ಕ್ಷುದ್ರಾ ಮಹಾಪಾಪಯುತಾಶ್ಚ ಯೇ
ಅನಾಚಾರಾ ದುರಾಚಾರಾಸ್ಸದಾಚಾರವಿವರ್ಜಿತಾಃ ||೯೫||

ಅವಿಚಾರಪ್ರಚಾರಾಶ್ಚ ಶಿವಾಚಾರಬಹಿಷ್ಕೃತಾಃ
ವೇದನಿಂದಾಪರಾ ಯೇಚ ದೇವನಿಂದಾಪರಾಶ್ಚ ಯೇ ||೯೬||

ಮುನೀಂದ್ರವೃಂದವಂದ್ಯಃ = ಋಷಿಸಮೂಹದಿಂದ ವಂದಿಸಿಕೊಳಲುಪಟ್ಟ ಸಾನಂದಯೋಗೀಂದ್ರನು ಆದಿತಃ = ಮೊದಲು ಹರ ಹರ ಇತಿ = ಹರ ಹರ ಎಂಬಂಥಾ ಶಬ್ದಂ = ಶಬ್ದವನು ಮುಹುರ್ಮುಃ = ಅಡಿಗಡಿಗೆ ಅಭಿಧಾಯ = ಉಚ್ಚರಿಸಿ ಅಖಿಲಮೋಘಘೋಷಸಾಮ್ಯಂ = ಸಮಸ್ತ ಮೇಘಧ್ವನಿಗೆ ಸಮಾನವಹಂಥಾ ನಮಃಶಿವಾಯ ಮಂತ್ರಂ = ನಮಃಶಿವಾಯ ಎಂಬ ಮಂತ್ರವನು ಸಕಲಹಿತಾಯ = ಸಮಸ್ತರ ಹಿತಕ್ಕೋಸ್ಕರ ಅಪಠತ್ = ಪಠಿಸಿದನು. ||೯೩||

ಪಠಿತಂ = ನುಡಿಯಲ್ಪಟ್ಟಂಥಾ ತಂ ಶಿವಮಂತ್ರಂ = ಆ ಶಿವಮಂತ್ರವನು ಶ್ರುತ್ವಾ = ಕೇಳಿ ನರಕವಾಸಿನಃ = ನರಕದಲ್ಲಿ ಇದ್ದಂಥಾ ನಾರಕಾಃ = ನರಕಿಗಳಹಂಥಾ ಜನಾಃ = ಜನರುಗಳು ತಸ್ಮಾನ್ನರಕಾತ್ = ಆ ನರಕದ ದೆಸೆಯಿಂದ ಕ್ಷಣಾತ್ = ಒಂದು ಕ್ಷಣಮಾತ್ರದ ದೆಸೆಯಿಂದ ಸಮುತ್ತೇರುಃ = ಎದ್ದರು. ಸಮ್‌ಪೂರ್ವಕ ವಹ ತೃ–ಪ್ಲವನತರಣಯೋಃ ಎಂಬ ಧಾತು. ||೯೪||

ಕ್ಷುದ್ರಪಾಪಯುತಾಃ = ಅಲ್ಪ ಪಾಪದಿಂದ ಕೂಡಿದಂಥಾ ಕ್ಷುದ್ರಾಃ = ಕಿರುಕುಳರು, ಮಹಾಪಾಪಯುತಾಃ = ಮಹಾಪಾಪಂಗಳಿಂದ ಕೂಡಲುಪಟ್ಟಂಥಾವರುಗಳು ಯೇ ಚ = ಆರು ಕೆಲಂಬರು ಅನಾಚಾರಾಃ = ಅನಾಚಾರಿಗಳು ದುರಾಚಾರಾಃ = ದುರಾಚಾರಿಗಳು ಸದಾಚಾರವಿವರ್ಜಿತಾಃ = ಸದಾಚಾರವಿಲ್ಲದವರುಗಳೂ. ||೯೫||

ಅವಿಚಾರಪ್ರಚಾರಾಶ್ಚ = ಅವಿಚಾರದಲ್ಲಿ ನಡೆದ ಅವರುಗಳು ಶಿವಾಚಾರಬಹಿಷ್ಕೃತಾಃ = ಶಿವಾಚಾರಕ್ಕೆ ಹೊರಗಾದವರುಗಳು ಯೇ = ಆರು ಕೆಲಬರುಗಳು

ನರಕೇಷ್ವೇಷು ಸರ್ವೇಷು [2]ಯಾತ್ಯಮಾನಾನ್ ಸುದುಃಖಿತಾನ್
ಶಿವಮಂತ್ರಪ್ರಭಾವೇಣ ಮೋಚಯಿಷ್ಯಾಮ್ಯಯತ್ನತಃ ||೯೦||

ಇತ್ಥಂ ಸುನಿಶ್ಚಿತಂ ಕೃತ್ವಾ ಸಾನಂದೋ ಗಣನಾಯಕಃ
ಅನಿವೇದ್ಯ ಯಮಸ್ಯಾಪಿ ತಾನ್ಮೋಕ್ತುಂ ಮತಿಮಾದಧೇ ||೯೧||

* ನಮಃ ಶಿವಾಯೇತಿ ಪುನಃ ಪುನರ್ಮುಹು-
ರ್ನಮಃ ಶಿವಾಯೇತಿ ಪುನಃ ಪುನರ್ಮುಹುಃ ||
ನಮಃ ಶಿವಾಯೇತಿ ಪುನಃ ಪುನರ್ಮುಹು-
ರ್ಗಣೇಶ್ವರೋ ಮಂತ್ರಮಥೋಽಪಠಚ್ಚ ಸಃ ||೯೨||

ಇರಲು, ಶಿವನಂದನಃ = ಶಿವನ ಕುಮಾರನಹಂಥಾ ಗಣಪಃ = ಗಣೇಶ್ವರನಹಂಥಾ ಸಾನಂದ ಯೋಗೀಶ್ವರನು ಚೇತಸಾ = ಚಿತ್ತದಿಂದ ಚಿಂತಯಾಮಾಸ = ಚಿಂತಿಸಿದನು ಚಿತಿ = ಚಿಂತಾಯಾಮ್ ಇತಿ ಧಾತುಃ ||೮೯||

ಸರ್ವೇಷು = ಸಮಸ್ತವಹಂಥಾ ಏಷು ಸರ್ವೇಷು ನರಕೇಷು = ಈ ಸಮಸ್ತ ನರಕಂಗಳಲ್ಲಿ ಯಾತ್ಯಮಾನಾನ್ = ಎಯ್ದಿದಂಥಾ ಸುದುಃಖಿತಾನ್ = ಅತ್ಯಂತ ದುಃಖಿತರಹಂಥಾ ನರಕಿಗಳನು ಶಿವಮಂತ್ರ ಪ್ರಭಾವೇಣ = ಶಿವಮಂತ್ರದ ಸಾಮರ್ಥ್ಯ ದಿಂದ ಅಯತ್ನತಃ = ಸಾಯಸವಿಲ್ಲದೆ ಮೋಚಯಿಷ್ಯಾಮಿ = ಬಿಡಿಸುವೆನು ಮುಚಲ್ಬ ಮೋಕ್ಷಣೇ ಇತಿ ಧಾತುಃ ||೯೦||

ಗಣನಾಯಕಃ = ಗಣಶ್ರೇಷ್ಠನಹಂಥಾ ಸಾನಂದಃ = ಸಾನಂದಯೋಗೀಶ್ವರನು ಇತ್ಥಂ = ಈ ಪ್ರಕಾರದಲ್ಲಿ ಸುನಿಶ್ಚಿತಂ = ಅತ್ಯಂತ ನಿಶ್ಚಯವನು ಕೃತ್ವಾ = ಮಾಡಿ ಯಮಸ್ಯಾಪಿ = ಯಮಗಂಗೆಯೂ ಅನಿವೇದ್ಯ = ಅರಿಹಿಸದೆ ತಾನ್ = ಆ ಪಾಪಿ ಗಳನು ಮೋಕ್ತುಂ = ಬಿಡಲೋಸ್ಕರ ಮತಿಂ = ಮತಿಯನು ಆದಧೇ = ಅಂಗೀ ಕರಿಸಿದನು. ||೯೧||

ಅಥ = ಅನಂತರದಲ್ಲಿ ಗಣೇಶ್ವರಃ = ಗಣೇಶ್ವರನಹಂಥಾ ಸಃ = ಆ ಸಾನಂದ ಯೋಗೀಂದ್ರನು ಪುನಃ ಪುನಃ = ಮರಳಿ ಮರಳಿ ಮುಹುಃ = ಅಡಿಗಡಿಗೆ ನಮಃ ಶಿವಾಯೇತಿ = ನಮಃಶಿವಾಯ ಎಂದು ಹಾಂಗೆ ಪುನಃಪುನಶ್ಚ = ಮತ್ತೆ ಮತ್ತೆ (ಮರಳಿ ಮರಳಿ) ಮುಹುಃ = ಅಡಿಗಡಿಗೆ ನಮಃ ಶಿವಾಯೇತಿ = ನಮಃಶಿವಾಯ ಎಂದು ಈ ಪ್ರಕಾರದಲ್ಲಿ ಮಂತ್ರಂ = ಮಂತ್ರವನು ಅಪಠತ್ = ಪಠಿಸಿದನು. ಪಠ — ಪಾಠನೇ ಇತಿ ಧಾತುಃ. ||೯೨||

---

[1] ಪಾ (ಘ) * ಜಗತೀಛಂದದಲ್ಲಿಯ ವೃತ್ತ

ನರಕಾಣಿ ವಿನಷ್ಟಾನಿ ನರೈರ್ನರಕವಾಸಿಭಿಃ
ದೃಷ್ಟ್ವಾ ಭೀತಿಯುತೋ ರಾಜಾ ಸಾನಂದಮಿದಮಬ್ರವೀತ್ |೧೦೧||

ಯಮ ಉವಾಚ

ಕಿಂ ಕೃತಂ ಗಣನಾಥೇನ ತ್ವಯಾ ಸರ್ವಾರ್ಥದರ್ಶಿನಾ
ವಿಮೋಚಿತಾ ವೈ ಪಾಪಿಷ್ಠಾ ನರಕೇಭ್ಯಃ ಪ್ರಸಹ್ಯ ಮಾಮ್ ||೧೦೨||

ನರಕೇಷು ವಿನಷ್ಟೇಷು ಸರ್ವೇ ಸ್ಯುಃ ಪಾಪಕಾರಿಣಃ
ದೇವತಿರ್ಯಙ್ಮನುಷ್ಯಾಣಾಂ [1][ನರಕಾದ್ಭೀರ್ಹಿ ನೇಷ್ಯತೇ][1] ||೧೦೩||

ಮಂಡಲಂ = ನರಕದ ಮೊತ್ತವು ಶೈವಪ್ರಭಾವವಿಲಸದ್ಗಣಪುಂಗವೇನ = ಶಿವಮಂತ್ರದ ಸಾಮರ್ಥ್ಯದಿಂದ ಒಪ್ಪುತ್ತಲಿದ್ದ ಗಣಶ್ರೇಷ್ಠನಿಂದ ಸಾನಂದನಿಂದ ಆಶು = ಬೇಗ ಶೂನ್ಯಂ = ಹಾಳಾಗಿ ಕೃತಂ = ಮಾಡಲುಪಟ್ಟಿತ್ತು. ||೧೦೦||

ನರಕವಾಸಿಭಿಃ = ನರಕದಲ್ಲಿ ಇದ್ದಂಥಾ ನರೈಃ = ನರರುಗ[2]ಳೊಡನೆ[2] ವಿನಷ್ಟಾನಿ = ಹಾಳಾದಂಥಾ ನರಕಾಣಿ = ನರಕಂಗಳನು ದೃಷ್ಟ್ವಾ = ಕಂಡು ರಾಜಾ = ಧರ್ಮರಾಜನು ಭೀತಿಯುತಃ = ಭೀತಿಯಿಂದ ಕೂಡಲ್ಪಟ್ಟಾತನಾಗಿ ಸಾನಂದಂ = ಸಾನಂದಖುಷಿಯನು ಕುರಿತು ಇದಂ = ಈ ವಾಕ್ಯವನು ಅಬ್ರವೀತ್ = ನುಡಿದನು. ||೧೦೧||

ಯಮ ಉವಾಚ = ಯಮನು ನುಡಿವುತ್ತಿದ್ದಾನು.

ಗಣನಾಥೇನ = ಗಣೇಶ್ವರನಹಂಥಾ ಸರ್ವಾರ್ಥದರ್ಶಿನಾ = ಸಮಸ್ತ ಶಾಸ್ತ್ರಾರ್ಥವ ಕಂಡಂಥಾ ತ್ವಯಾ = ನಿನ್ನಿಂದ ಕಿಂ ಕೃತಂ = ಇದೇನು ಮಾಡಲ್ಪಟ್ಟುದು? ಪಾಪಿಷ್ಠಾಃ = ಪಾಪಿಗಳು ಮಾಂ = ಎನ್ನನು ಪ್ರಸಹ್ಯ ವೈ = ಲೆಕ್ಕಿಸದೆ ನರಕೇಭ್ಯಃ = ನರಕಂಗಳ ದೆಸೆಯಿಂದ ವಿಮೋಚಿತಾಃ = ಮುಕ್ತರಾದರು. ||೧೦೨||

ನರಕೇಷು = ನರಕಂಗಳು ವಿನಷ್ಟೇಷು ಸತ್ಸು = ಹಾಳಾಗುತ್ತಲಿರಲು ಸರ್ವೇ = ಎಲ್ಲರೂ ಪಾಪಕಾರಿಣಃ = ಪಾಪಂಗಳ ಮಾಡುವವರುಗಳು ಸ್ಯುಃ = ಆಹರು. ದೇವತಿರ್ಯಙ್ಮನುಷ್ಯಾಣಾಂ = ದೇವರ್ಕಳು ತಿರ್ಯಕ್ ಜಾತಿಗಳು ಮಾನವರ

---

[1] ನರಕಾದ್ಭೀತಿರಿಷ್ಯತೇ (ಕ. ಘ) ನರಕಾದ್ಭೀತಿ ನೇಷ್ಯತೇ (ಖ.ಗ.ಚ). ವ್ಯಾಖ್ಯಾನದಲ್ಲಿ 'ನರಕಾತ್-ನರಕದ ದಿಸೆಯಿಂದ ಭೀತಿಃ-ಭಯವು ನೇಷ್ಯತೇ = ಇಚ್ಛಿಸಲ್ಪಡುತ್ತಿರದು. ಭೀತಿ ಹುಟ್ಟುತ್ತಿರದೆಂಬುದರ್ಥ' ಎಂದಿದೆಯಾಗಿ ಮೇಲೆ ಬಿಟ್ಟಿರುವ ಪಾಠವು ಅರ್ಥಾನುಸಾರಿಯಾಗಿರುತ್ತದೆ [2] ಳಿಂದ (ಕ)

ಬ್ರಹ್ಮಹತ್ಯಾದಿಭಿಃ ಪಾಪೈರಖಿಲೈರಪಿ ಸಂಯುತಾಃ
ಅಷ್ಟಾವಿಂಶತಿಕೋಟೀಷು ನರಕೇಷು ನರಾಧಮಾಃ ||೯೭||

[1]ಯಾತ್ಯಮಾನಾಃ ಸುದುಃಖಾರ್ತಾ ಮೋಚಿತಾಸ್ತೇನ ತತ್ಕ್ಷಣಾತ್
ಶಿವಮಂತ್ರಪ್ರಭಾವೇಣ ಯಮಸ್ಯಾಪ್ಯಸ್ಯ ಸನ್ನಿಧೌ ||೯೮||

ನರಕಸ್ಥಾ ವಿಮಾನಸ್ಥಾಸ್ಸರ್ವೇ ಸಂದೀಪ್ತತೇಜಸಃ ||೯೯||

*ಸರ್ವೇ ನರಾ ನರಕಯಾತನಯಾ ಕೃಶಾಂಗಾಃ
ಶುದ್ಧಾಃ ಸಮೃದ್ಧತನವಃ ಶುಭತೇಜಸಶ್ಚ ।
ಶೂನ್ಯಂ ಕೃತಂ ನರಕಮಂಡಲಮಾಶು ಸರ್ವಂ
ಶೈವಪ್ರಭಾವವಿಲಸದ್ಗಣಪುಂಗವೇನ ||೧೦೦||

ವೇದನಿಂದಾಪರಾಶ್ಚ = ವೇದವ ನಿಂದಿಸುವಲ್ಲಿಯೇ ಎರಕವನುಳ್ಳ (ಆಸಕ್ತಿಯುಳ್ಳ)ವರುಗಳು ಯೇ ಚ = ಆರು ಕೆಲಂಬರು ದೇವನಿಂದಾಪರಾಃ = ದೇವರ್ಕಳ ನಿಂದಿಸುವರುಗಳು

ಬ್ರಹ್ಮಹತ್ಯಾದಿಭಿಃ = ಬ್ರಹ್ಮಹತ್ಯ ಮೊದಲಾಗಿದ್ದಂಥಾ ಅಖಿಲೈಃ = ಸಮಸ್ತವಹಂಥಾ ಪಾಪೈರಪಿ = ಪಾಪಂಗಳಿಂದವೂ ಸಂಯುತಾಃ = ಕೂಡಲುಪಟ್ಟಂಥಾ ನರಾಧಮಾಃ = ನರಾಧಮರುಗಳು ಅಷ್ಟಾವಿಂಶತಿಕೋಟೀಷು = ಇಪ್ಪತ್ತೆಂಟು ಕೋಟಿಗಳಹಂಥಾ ನರಕೇಷು = ನರಕಂಗಳಲ್ಲಿ, ||೯೭||

ಯಾತ್ಯಮಾನಾಃ = ಎಯ್ದಿದಂಥಾ ಸುದುಃಖಾರ್ತಾಃ = ಅತ್ಯಂತ ದುಃಖದಿಂದ ಪೀಡಿತರಹಂಥಾ ನರಕಿಗಳು ತತ್ಕ್ಷಣಾತ್ = ಆ ಕ್ಷಣದ ದೆಸೆಯಿಂದ ತೇನ ಶಿವಮಂತ್ರ-ಪ್ರಭಾವೇಣ = ಆ ಶಿವಮಂತ್ರದ ಸಾಮರ್ಥ್ಯದಿಂದ ಅಸ್ಯ ಯಮಸ್ಯ = ಈ ಯಮನ ಸನ್ನಿಧಾವಪಿ = ಸಮೀಪದಲ್ಲಿಯೇ ಮೋಚಿತಾಃ = ಬಿಡಲುಪಟ್ಟರು. ||೯೮||

ನರಕಸ್ಥಾಃ = ನರಕದಲ್ಲಿ ಇದ್ದಂಥಾ ಸರ್ವೇ = ಸಮಸ್ತ ಪ್ರಾಣಿಗಳು ಸಂದೀಪ್ತತೇಜಸಃ = ಅತ್ಯಂತ ಪ್ರಕಾಶಿಸಲುಪಟ್ಟ ತೇಜಸ್ಸನುಳ್ಳವರುಗಳಾಗಿ ವಿಮಾನಸ್ಥಾಃ = ಪುಷ್ಪಕಂಗಳಲ್ಲಿ ಇದ್ದರು. ||೯೯||

ನರಕಯಾತನಯಾ = ನರಕದ ಬಾಧೆಯಿಂದ ಕೃಶಾಂಗಾಃ = ಬಡವಾದ ಶರೀರವನುಳ್ಳಂಥಾ ಸರ್ವೇ ನರಾಃ = ಸಮಸ್ತ ನರರುಗಳು ಶುದ್ಧಾಃ = ಶುದ್ಧರುಗಳಾಗಿ ಸಮೃದ್ಧತನವಃ = ಪುಷ್ಟಿಯಾದ ಶರೀರವನುಳ್ಳಂಥಾ ಶುಭತೇಜಸಃ = ಒಪ್ಪುತ್ತಿಂವಿದ್ದಂಥಾ ತೇಜಸ್ಸನುಳ್ಳವರಾದರು. ಸರ್ವಂ = ಸಮಸ್ತವಹಂಥಾ ನರಕ-

---

[1] ಪಾ (ಘ) * ವಸಂತತಿಲಕವೃತ್ತಂ

ಬಿಭೇಮಿ ಭವತೋಽಹಂ ವೈ ಪರಮೇಶಗಣೇಶ್ವರ !
ನಿರ್ಭಯೋ [1]ನಾಪರಾಧಶ್ಚ[1] ಕೇನೋಪಾಯೇನ ತದ್ವದ ॥೧೦೭॥

ತಸ್ಯ ತದ್ವಚನಂ ಶ್ರುತ್ವಾ ಗಣೇಶೋ ವಾಕ್ಯಮಬ್ರವೀತ್
ಅಂತರ್ಹಾಸಯುತಃ ಪ್ರೀತ್ಯಾ ಶಿವಮಂತ್ರಸ್ಯ ವೈಭವಾತ್ ॥೧೦೮॥

ಸಾನಂದ ಉವಾಚ—

ಮಂತ್ರಃ ಶಿವಾಜ್ಞಾಸಿದ್ಧೋಽಯಮತಃ ಸರ್ವಾರ್ಥಸಾಧನಃ
ತೇನ ತೇ [2]ನಾರಕಾ[2] ಮುಕ್ತಾ ನಾಪರಾಧಸ್ತ್ವಿಹಾವಯೋಃ ॥೧೦೯॥

ಶ್ರುತ್ವಾಽಪಿ ತಸ್ಯ ವಚನಂ ಗಣೇಶಸ್ಯ ಹಿ ಧರ್ಮರಾಟ್
ಅವಿಜ್ಞಾಪ್ಯ ಮಹೇಶಾಯ ಸ್ಥಾತುಂ ನಾಶಕ್ನುವದ್ಭಯಾತ್ ॥೧೧೦॥

ಭೋ ಪರಮೇಶಗಣೇಶ್ವರ ! = ಎಲೆ ಪರಮೇಶ್ವರನ ಗಣೇಶ್ವರನೇ ! ಭವತಃ = ನಿನಗೆ ಅಹಂ ವೈ = ನಾನು ಬಿಭೇಮಿ = ಅಂಜುವೆನು. ಕೇನ ಉಪಾಯೇನ = ಆವಉಪಾಯದಿಂದ ನಿರ್ಭಯಃ = ಭೀತಿಯಿಲ್ಲದವನು ನಾಪರಾಧಶ್ಚ = ಅಪರಾಧವಿಲ್ಲದವನಹೆನು ? ತತ್ = ಅದನು ವದ = ಹೇಳು. ॥೧೦೭॥

ತಸ್ಯ = ಆ ಯಮನ ತದ್ವಚನಂ = ಆ ವಾಕ್ಯವನು ಶ್ರುತ್ವಾ = ಕೇಳಿ ಗಣೇಶಃ = ಗಣೇಶನಹಂಥಾ ಸಾನಂದನು ಶಿವಮಂತ್ರಸ್ಯ = ಶಿವಮಂತ್ರದ ವೈಭವಾತ್ = ಸಾಮರ್ಥ್ಯದ ದೆಸೆಯಿಂದ ಅಂತಃ = ಚಿತ್ತದಲ್ಲಿ ಹಾಸಯುತಃ = ನಗೆಯಿಂದ ಕೂಡಲುಪಟ್ಟಾತನಾಗಿ ಪ್ರೀತ್ಯಾ = ಸಂತೋಷದಿಂದ ವಾಕ್ಯಂ = ವಾಕ್ಯವನು ಅಬ್ರವೀತ್ = ನುಡಿದನು. ॥೧೦೮॥

ಸಾನಂದ ಉವಾಚ = ಸಾನಂದ ಋಷಿಯು ನುಡಿವುತ್ತಿದ್ದಾನು

ಅಯಂ ಮಂತ್ರಃ = ಈ ಪಂಚಾಕ್ಷರೀಮಂತ್ರವು ಶಿವಾಜ್ಞಾಸಿದ್ಧಃ = ಶಿವನ ಸಾಮರ್ಥ್ಯದ ಸಿದ್ಧಿಯನುಳ್ಳುದು. ಸರ್ವಾರ್ಥಸಾಧನಃ = ಸಮಸ್ತ ಪ್ರಯೋಜನಂಗಳಿಗೆ ಸಾಧನವಹೆಂಥಾದ್ದು. ಅತಃ = ಅದು ಕಾರಣವಾಗಿ ತೇನ = ಆ ಶ್ರೀ ಪಂಚಾಕ್ಷರೀ ಮಂತ್ರದಿಂದ ತೇ ನಾರಕಾಃ = ಆ ನಾರಕಿಗಳು ಮುಕ್ತಾಃ = ಮುಕ್ತರಾದರು ಇಹ = ಇಲ್ಲಿ ಆವಯೋಃ = ನಮ್ಮಿಬ್ಬರಿಗೆ ಅಪರಾಧಃ = ಅಪರಾಧವು ನ = ಇಲ್ಲ.

ಗಣೇಶಸ್ಯ = ಗಣೇಶ್ವರನಹೆಂಥಾ ತಸ್ಯ = ಆ ಸಾನಂದ ಗಣೇಶ್ವರನ ವಚನಂ

---

[1] ನಾಪರಾಧೀ (ಘ) [2] ನರಕಾಃ (ಘ)

ಆಜ್ಞಪ್ತೋಽಹಂ ಭಗವತಾ ಲೋಕಕರ್ತ್ರಾ ಪಿನಾಕಿನಾ
ನರಕೇ ಯಾತನಾಭಿಸ್ತ್ವಂ ಪಾಪಿಷ್ಠಾನ್ ಶೋಧಯೇ[1]ತ್ಯಹಮ್ ೧೦೪

ಅಹಮಾಜ್ಞಾಂ ಮಹೇಶಸ್ಯ ಕಥಂ ಕುರ್ಯಾಂ ಗಣೇಶ್ವರ
ತಸ್ಯಾಜ್ಞಾಮಪ್ಯಕುರ್ವಾಣಃ ಪ್ರಥಮಂ ನರಕಂ ವ್ರಜೇತ್ ॥೧೦೫॥

ಆಜ್ಞಪ್ತಿಮಪ್ಯಕುರ್ವಾಣಃ ಕುರ್ವನ್ ವೈ ತದ್ವಿಪರ್ಯಯಮ್
ಸಮೌ ಹಿ ಶಿಷ್ಟೈರಾಮ್ನಾತೌ [2]ಭೃತ್ಯೌ ಸ್ವೇಚ್ಛಾನುವರ್ತಿನೌ ॥೧೦೬॥

ಗಳಿಗೆ ನರಕಾತ್ = ನರಕದ ದೆಸೆಯಿಂದ ಭೀಃ = ಭಯವು ನೇಷ್ಯತೇ ಹಿ = ಇಚ್ಛಿಸಲುಪಡುತ್ತಿರದು. ಭೀತಿ ಹುಟ್ಟುತ್ತಿರದೆಂಬುದರ್ಥ. ||೧೦೩||

ಅಹಂ = ನಾನು ಭಗವತಾ = ಷಡ್ಗುಣೈಶ್ವರ್ಯಸಂಪನ್ನನಹಂಥಾ ಆ, ಲೋಕಕರ್ತ್ರಾ = ಲೋಕಕ್ಕೆ ಒಡೆಯನಹಂಥಾ ಪಿನಾಕಿನಾ = ಪರಮೇಶ್ವರನಿಂದ ಆಜ್ಞಪ್ತಃ = ಆಜ್ಞಾಪಿಸಲ್ಪಟ್ಟಾತನು. ನರಕೇ = ನರಕದಲ್ಲಿ ಪಾಪಿಷ್ಠಾನ್ = ಪಾಪಿಗಳನು ಯಾತನಾಭಿಃ = ಬಾಧೆಗಳಿಂದ ತ್ವಂ = ನೀನು ಶೋಧಯ = ಶುದ್ಧವಮಾಡು ಇತಿ = ಹೀಗೆಂದು ಅಹಂ = ನಾನು ಆಜ್ಞಪ್ತಃ = ಆಜ್ಞಾಪಿಸಲುಪಟ್ಟಾತನು. ||೧೦೪||

ಭೋ ಗಣೇಶ್ವರ = ಎಲೈ ಗಣೇಶ್ವರನೇ! ಮಹೇಶಸ್ಯ = ಪರಮೇಶ್ವರನ ಆಜ್ಞಾಂ = ಆಜ್ಞೆಯನು ಅಹಂ = ನಾನು ಕಥಂ = ಹೇಂಗೆ ಕುರ್ಯಾಂ = ಮಾಡುವೆನು. ತಸ್ಯ = ಆ ಶಿವನ ಆಜ್ಞಾಮಪಿ = ಆಜ್ಞೆಯನೂ ಅಕುರ್ವಾಣಃ = ಮಾಡದೇ ಇದ್ದಾತನಾಗಿ ಪ್ರಥಮಂ = ಮೊದಲೇ ನರಕಂ = ನರಕವನು ವ್ರಜೇತ್ = ಎಯ್ದುತ್ತಂವಿಹನು. ||೧೦೫||

ಆಜ್ಞಪ್ತಿಮಪಿ = ಆಜ್ಞಾಪಿಸಿದಂಥಾದನು ಅಕುರ್ವಾಣಃ = ಮಾಡದೇ ಇದ್ದಂಥಾ ನಾನು, ತದ್ವಿಪರ್ಯಯಂ = ಆ ಆಜ್ಞೆಗೆ ವಿಪರೀತವಹ ವರ್ತನೆಯನು ಕುರ್ವನ್ ವೈ = ಮಾಡುತ್ತವಿದ್ದಂಥಾ ನೀನು, ಭೃತ್ಯೌ = ಶಿವನ ಭೃತ್ಯರಹಂಥಾ ನೀನು-ನಾನು ಇಬ್ಬರು ಸ್ವೇಚ್ಛಾನುವರ್ತಿನೌ = ತಮ್ಮಿಚ್ಛೆಯಿಂದ ನಡೆದವರುಗಳೆಂದು ಶಿಷ್ಟೈಃ = ಶಿಷ್ಟರುಗಳಿಂದ ಸಮೌ = ಸಮಾನರುಗಳಾಗಿ ಆಮ್ನಾತೌ ಹಿ = ಹೇಳಲ್ಪಟ್ಟವರುಗಳು. ||೧೦೬||

---

[1] ತ್ಯಲಂ (ಕ) ಮೂಲಮಾತ್ರ ಡ್ಯಪಿ (ಗ)
[2] ಭೃತೌ (ಘ)

ತ್ವದೀಯೋಗಣಪೋ ದೇವ ಸಾನಂದ ಇತಿ ವಿಶ್ರುತಃ
ನರಕೇಭ್ಯೋ ನರಾನ್ ಸರ್ವಾನ್ ಮೋಚಯಾಮಾಸ ಪಾಪಿನಃ॥೧೧೪॥

[1]ತಂ[1]ದೃಷ್ಟ್ವಾ[2]ಽಹಂ[2] ಭಯಾವಿಷ್ಟೋ ದೇವ ಸಂಪ್ರಾಪ್ತವಾನಹಮ್
ಪ್ರಸಾದಂ ಕುರು ದೇವೇಶ ಸ್ವಕರ್ಮಪ್ರಚ್ಯುತಸ್ಯ ಮೇ ॥೧೧೫॥

ತಸ್ಯ ತದ್ವಚನಂ ಶ್ರುತ್ವಾ ದೇವದೇವ ಉಮಾಪತಿಃ
ಸಾನಂದಂ ಚ ಸಮಾಲೋಕ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್॥೧೧೬॥

ಈಶ್ವರ ಉವಾಚ

ಮಾಭೈರ್ಮಾಭೈರ್ಮಹಾಬಾಹೋ ಧರ್ಮರಾಜ ಕಥಂ ತವ
ಅಪರಾಧೋ ಭವೇದೇಷಃ ಸಾನಂದಸ್ಯ ಕಥಂ ಭವೇತ್ ॥೧೧೭॥

ಭೋ ದೇವ = ಎಲೈ ದೇವನೆ ತ್ವದೀಯ = ನಿನ್ನ ಸಂಬಂಧನಹಂಥಾ ಗಣಃ = ಗಣೇಶ್ವರನಹಂಥಾ ಸಾನಂದ ಇತಿ = ಸಾನಂದನೆಂಬಂಥಾ ವಿಶ್ರುತಃ = ಪ್ರಖ್ಯಾತನಹಂಥಾತನು ನರಕೇಭ್ಯಃ = ನರಕಂಗಳ ದೆಸೆಯಿಂದ ಪಾಪಿನಃ = ಪಾಪಿಗಳ-ಹಂಥಾ ಸರ್ವಾನ್ = ಸಮಸ್ತ ನರಾನ್ = ನರರುಗಳನು ಮೋಚಯಾಮಾಸ = ಬಿಡಿಸಿದನು. ॥೧೧೪॥

ಭೋ ದೇವ = ಎಲೈ ಪರಮೇಶ್ವರ! ತಂ = ಆ ಸಾನಂದನನು ಅಹಂ = ನಾನು ದೃಷ್ಟ್ವಾ = ಕಂಡು ಭಯಾವಿಷ್ಟಃ = ಭೀತಿಯಿಂದ ಪ್ರವೇಶಿಸಲ್ಪಟ್ಟಾತನಾಗಿ ಅಹಂ = ನಾನು ಸಂಪ್ರಾಪ್ತವಾನ್ = ಬಂದಾತನು. ಭೋ ದೇವೇಶ = ಎಲೈ ದೇವತೆಗಳಿಗೊಡೆಯನಹಂಥಾತನೆ! ಸ್ವಕರ್ಮಪ್ರಚ್ಯುತಸ್ಯ = ನಿಜವಹ ಅಧಿಕಾರದಿಂದ ಕೆಡಲುಪಟ್ಟಂಥಾ ಮೇ = ಎನಗೆ ಪ್ರಸಾದಂ = ಪ್ರಸನ್ನತಿಕೆಯನು ಕುರು = ಮಾಡು. ॥೧೧೫॥

ತಸ್ಯ = ಆ ಯಮನ ತದ್ವಚನಂ = ಆ ವಾಕ್ಯವನು ಶ್ರುತ್ವಾ = ಕೇಳಿ ದೇವದೇವಃ = ದೇವತೆಗಳಿಗೆ ದೇವನಹಂಥಾ ಉಮಾಪತಿಃ = ಪಾರ್ವತೀಪತಿಯಹಂಥಾ ಶಿವನು ಸಾನಂದಂ ಚ = ಸಾನಂದನನು ಸಮಾಲೋಕ್ಯ = ನೋಡಿ ಪ್ರಹೃಷ್ಟಃ = ಸಂತೋಷಿಸಿದಾತನಾಗೆ ವಾಕ್ಯಂ = ವಾಕ್ಯವನು ಅಬ್ರವೀತ್ = ನುಡಿದನು. ॥೧೧೬॥

ಈಶ್ವರ ಉವಾಚ = ಈಶ್ವರನ ವಾಕ್ಯವು.

ಮಹಾಬಾಹೋ = ದೊಡ್ಡಿತ್ತಹ ಭುಜಂಗಳನುಳ್ಳಂಥಾ ಧರ್ಮರಾಜ ! =

---

[1] ತತ್ (ಘ) [2] ಚ (ಘ)

ಮಹೇಶ್ವರದಿದೃಕ್ಷಾರ್ಥಂ ಮಂದರಂ ಚಾರುಕಂದರಮ್
ಧರ್ಮರಾಜೋ ಯಯೌ ಸದ್ಯಃ ಸಹ ತೇನ ಮಹಾತ್ಮನಾ ॥ ॥೧೧೧॥

ತತ್ರ ದೃಷ್ಟ್ವಾ ಮಹಾದೇವಂ ಸರ್ವಜ್ಞಂ ಸಕಲೇಶ್ವರಮ್
ಪಾದೌ ಪ್ರಣಮ್ಯ ಪ್ರೋವಾಚ ಭಯಸಂವಿಗ್ನಮಾನಸಃ ॥೧೧೨॥

ಯಮ ಉವಾಚ

ನಮಸ್ತೇ ಸರ್ವಲೋಕೇಶ ನಮಸ್ತೇ ಕಾಲನಾಶನ
ನರಕಸ್ವರ್ಗಮೋಕ್ಷಾಣಾಂ ವಿಧಾತ್ರೇ ಪಾಲಕಾಯ ಚ ॥೧೧೩॥

= ವಾಕ್ಯವನು ಶ್ರುತ್ವಾಪಿ = ಕೇಳಿಯೂ ಧರ್ಮರಾಟ್ = ಯಮನು ಮಹೇಶಾಯ = ಪರಮೇಶ್ವರಂಗೋಸ್ಕರ ಭಯಾತ್ = ಭೀತಿಯ ದೆಸೆಯಿಂದ ಅವಿಜ್ಞಾಪ್ಯ = ಬಿನ್ನಹಂ ಮಾಡದೇ ಸ್ಥಾತುಂ = ಇರಲು ನಾಶಕ್ನುವತ್ ಹಿ = ಸಮರ್ಥನಾಗಲಿಲ್ಲಲಾ (ಸಮರ್ಥನಾದುದಿಲ್ಲಲಾ). ಶಕಲ್ಲಾ = ಶಕ್ತೌ ಎಂಬ ಧಾತು. ॥೧೧೦॥

ಮಹೇಶ್ವರದಿದೃಕ್ಷಾರ್ಥಂ = ಪರಮೇಶ್ವರನ ದರ್ಶನವಾಗಲೋಸ್ಕರ ಧರ್ಮರಾಜಃ = ಯಮನು ಮಹಾತ್ಮನಾ = ಮಹಾತ್ಮನಹಂಥಾ ತೇನ ಸಹ = ಆ ಸಾನಂದ ಋಷಿಯೊಡನೆ ಸದ್ಯಃ = ಆ ಕ್ಷಣದಲ್ಲಿ ಚಾರುಕಂದರಂ = ಒಪ್ಪುತ್ತಂವಿದ್ದ ಗುಹೆಗಳನುಳ್ಳಂಥಾ ಮಂದರಂ = ಮಂದರಪರ್ವತವನು ಯಯೌ = ಎಯ್ದಿದನು. ॥೧೧೧॥

ತತ್ರ = ಆ ಮಂದರಪರ್ವತದಲ್ಲಿ ಸರ್ವಜ್ಞಂ = ಸರ್ವಜ್ಞನಹಂಥಾ ಸಕಲೇಶ್ವರಂ = ಸಮಸ್ತಕ್ಕೆ ಒಡೆಯನಹಂಥಾ ಮಹಾದೇವಂ = ಪರಮೇಶ್ವರನನು ದೃಷ್ಟ್ವಾ = ಕಂಡು ಪಾದೌ = ಶ್ರೀ ಚರಣಂಗಳನು ಕುರಿತು ಪ್ರಣಮ್ಯ = ನಮಸ್ಕರಿಸಿ ಭಯಸಂವಿಗ್ನಮಾನಸಃ = ಭೀತಿಯಿಂದ ಮುಂದುಗೆಡಲ್ಪಟ್ಟ ಮನಸ್ಸನುಳ್ಳಾತನಾಗಿ ಪ್ರೋವಾಚ = ನುಡಿದನು. ॥೧೧೨॥

ಯಮ ಉವಾಚ = ಯಮನು ನುಡಿವುತ್ತಿದ್ದಾನು.

ಸರ್ವಲೋಕೇಶ = ಸಮಸ್ತ ಲೋಕಂಗಳಿಗೊಡೆಯನಹಂಥಾ ಆತನೇ ತೇ = ನಿನಗೋಸ್ಕರ ನಮಃ = ನಮಸ್ಕಾರವು ಕಾಲನಾಶನ = ಕಾಲನ ಸಂಹರಿಸಿದಾತನೇ ನರಕಸ್ವರ್ಗಮೋಕ್ಷಾಣಾಂ = ನರಕಸ್ವರ್ಗಮೋಕ್ಷಂಗಳಿಗೆ ವಿಧಾತ್ರೇ = ಒಡೆಯನಹಂಥಾ ಪಾಲಕಾಯ = ಪಾಲಕನಹಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು, ॥೧೧೩॥

ಪಾಪಾಚಾರಸಮಾಯುಕ್ತಾಃ ಸದಾಚಾರವಿವರ್ಜಿತಾಃ
ಭೂತಿಶಾಸನಸಂಯುಕ್ತಾಶ್ಚೇತ್ಪೂಜ್ಯಾಸ್ಸರ್ವೈಃ ಸುರಾಸುರೈಃ ||೧೨೧||

ರುದ್ರಾಕ್ಷಮಾಲಾಭರಣಾ ಅಂತ್ಯಜಾ ಅಧಮಾ ಅಪಿ
ಸದಾ ಸರ್ವತ್ರ ಸಂಪೂಜ್ಯಾಃ ಸರ್ವೈರಪಿ ನ ಸಂಶಯಃ ||೧೨೨||

ಯೇ ಚೋಂ ನಮಃ ಶಿವಾಯೇತಿ ಮಂತ್ರಂ ಪಂಚಾಕ್ಷರಂ ಮಮ.
ಶೃಣ್ವಂತಿ ಮನಸಾ ವಾಚಾ ಸ್ಮರಂತಿ ಚ ಪಠಂತಿ ಚ ||೧೨೩||

ತೇ ಸರ್ವೈಃ ಪಾತಕೈರ್ಯುಕ್ತಾ ನಿಯಮಾಚಾರವರ್ಜಿತಾಃ
ಮಾನವಾ ಅಪಿ ಪೂಜ್ಯಾಸ್ತೇ ಸುರಾಸುರಗಣಾಧಿಪೈಃ ||೧೨೪||

ಪಾಪಾಚಾರಸಮಾಯುಕ್ತಾಃ = ಪಾಪವಹಂಥಾ ಆಚಾರದಿಂದ ಕೂಡಲ್ಪಟ್ಟವರುಗಳು ಸದಾಚಾರವಿವರ್ಜಿತಾಃ = ಸದಾಚಾರದಿಂದ ಬಿಡಲ್ಪಟ್ಟವರುಗಳು ಭೂತಿಶಾಸನ-ಸಂಯುಕ್ತಾಶ್ಚೇತ್ = ಶ್ರೀವಿಭೂತಿಧಾರಣದಿಂದ ಮಾಡಲ್ಪಟ್ಟವರುಗಳಾದ ಪಕ್ಷೇ ಸರ್ವೈಃ = ಸಮಸ್ತರಹಂಥಾ ಸುರಾಸುರೈಃ = ದೇವದಾನವರುಗಳಿಂದ ಪೂಜ್ಯಾಃ = ಪೂಜಿಸಿಕೊಳಲು ಯೋಗ್ಯರುಗಳು. ||೧೨೧||

ಅಂತ್ಯಜಾಃ = ಹೊಲೆಯರುಗಳು ಅಧಮಾ ಅಪಿ = ಅಧಮರುಗಳೂ ರುದ್ರಾಕ್ಷ-ಮಾಲಾಭರಣಾಶ್ಚೇತ್ = ಶ್ರೀರುದ್ರಾಕ್ಷ ಮಾಲೆಯ ಆಭರಣವನುಳ್ಳವರುಗಳಾದ ಪಕ್ಷೇ, ಸದಾ = ಎಲ್ಲಾಗಳೂ ಸರ್ವತ್ರ = ಎಲ್ಲಿಯೂ ಸರ್ವೈರಪಿ = ಸಮಸ್ತರಿಂದವೂ ಸಂಪೂಜ್ಯಾಃ = ಪೂಜ್ಯರುಗಳು. ನ ಸಂಶಯಃ = ಸಂದೇಹವಿಲ್ಲವು. ೧೨೨

ಯೇ ಚ = ಆರು ಕೆಲಬರು ಓಂ ನಮಃಶಿವಾಯೇತಿ = ಓಂ ನಮಃಶಿವಾಯ ಎಂಬಂಥಾ ಮಮ = ಎನ್ನ ಪಂಚಾಕ್ಷರಂಮಂತ್ರಂ = ಪಂಚಾಕ್ಷರ ಮಂತ್ರವನು ಶೃಣ್ವಂತಿ = ಕೇಳುತ್ತಿಹರು ಮನಸಾ ಚ = ಮನಸ್ಸಿನಿಂದವು ಸ್ಮರಂತಿ = ನೆನವುತ್ತಿಹರು ವಾಚಾ = ಮಾತಿನಿಂದ (ವಾಕ್ಯದಿಂದ)ವೂ ಪಠಂತಿ ಚ = ಪಠಿಸುತ್ತಿಹರು. ||೧೨೩||

ತೇ = ಅವರುಗಳು ಸರ್ವೈಃಪಾತಕೈಃ = ಸಮಸ್ತ[1]ಪಾಪಂ[1]ಗಳಿಂದ ಯುಕ್ತಾ ಅಪಿ = ಕೂಡಿದಂಥಾವರುಗಳಾದರೂ ಆಗಲಿ, ನಿಯಮಾಚಾರವರ್ಜಿತಾ ಅಪಿ = ನಿಯಮ ಆಚಾರಗಳಿಂದ ಬಿಡಲ್ಪಟ್ಟವರುಗಳಾದರೂ ಆಗಲಿ, ತೇ ಮಾನವಾಃ = ಆ ಮನುಷ್ಯರುಗಳು ಸುರಾಸುರಗಣಾಧಿಪೈಃ = ದೇವರ್ಕಳು ರಾಕ್ಷಸರು ಗಣೇಶ್ವರರುಗಳಿಂದ ಪೂಜ್ಯಾಃ = [2]ಪೂಜಿಸಿಕೊಳಲು ಯೋಗ್ಯರು.[2]

---

1 ಪಾತಕಂ (ಖಚ) 2 ಪೂಜ್ಯರುಗಳು (ಕ)

ಮಯ್ಯೈವ ಕಾರಿತಂ ಸರ್ವಂ ನರಕಾಣಾಂ ವಿಮೋಕ್ಷಣಮ್
ಮಮ [1]ಪಂಚಾಕ್ಷರಂ[1] ಶ್ರುತ್ವಾ ಮುಕ್ತಾ ಯಸ್ಮಾನ್ಮಹಾಭಯಾತ್ ೧೧೮

ಪ್ರಾಯಶ್ಚಿತ್ತಮಭೂತ್ತೇಷಾಂ ಮಮ ಪಂಚಾಕ್ಷರಶ್ರುತಿಃ
ತೇನ ತೇ ನರಕಾನ್ಮುಕ್ತಾಃ ಶುದ್ಧಾತ್ಮಾನಶ್ಚ ತೇಽಪಿ ಚ ||೧೧೯||

ಅನೇನ ಯತ್ಕೃತಂ ಸಾಧೋ ಮತ್ಕೃತಂ ತನ್ನ ಸಂಶಯಃ
ಶುಭಂ ವಾಽಪ್ಯಶುಭಂ ವ್ಯಾಪಿ [2]ನಿರ್ವೃತ[2]ಶ್ಚಾಧುನಾ ಭವ ||೧೨೦||

ಎಲೈ ಯಮರಾಜನೇ! ಮಾಭೈಃ ಮಾಭೈಃ = ಅಂಜದಿರು, ಅಂಜದಿರು. ಞಿಭೀ-ಭಯ ಚಲನಯೋಃ ಇತಿ ಧಾತುಃ. ಲುಙ್. ತವ = ನಿನಗೆ ಅಪರಾಧಃ = ಅಪರಾಧವು ಕಥಂ = ಹೇಗೆ ಭವೇತ್ = ಆಹುದು. ಸಾನಂದಸ್ಯ = ಸಾನಂದನಿಗೆ ಏಷಃ = ಈ ಅಪರಾಧವು ಕಥಂ = ಹೇಗೆ ಭವೇತ್ = ಆಹುದು? ||೧೧೭||

ಮಯ್ಯೈವ = ಎನ್ನಿಂದವೇ ಸರ್ವಂ = ಸಮಸ್ತ ನರಕವು ಕಾರಿತಂ = ಮಾಡಲ್ಪಟ್ಟಿತ್ತು. ನರಕಾಣಾಂ = ನರಕಂಗಳ ವಿಮೋಕ್ಷಣಂ = ಬಿಡುಗಡೆಯು ಕಾರಿತಂ = ಮಾಡಲುಪಟ್ಟಿತ್ತು. ಮಮ = ಎನ್ನ ಪಂಚಾಕ್ಷರಂ = ಪಂಚಾಕ್ಷರಮಂತ್ರವನು ಶ್ರುತ್ವಾ = ಕೇಳಿ ಮಹಾಭಯಾತ್ = ಅತ್ಯಂತ ಭೀತಿಯುಹಂಥಾ ಯಸ್ಮಾತ್ = ಆವುದಾನೊಂದು ನರಕದ ದೆಸೆಯಿಂದ ಮುಕ್ತಾಃ = ಬಿಡಲುಪಟ್ಟರು. ||೧೧೮||

ಮಮ = ಎನ್ನ ಪಂಚಾಕ್ಷರಶ್ರುತಿಃ = ಪಂಚಾಕ್ಷರ ಶ್ರವಣವು ತೇಷಾಂ = ಆ ನರಕಿಗಳಿಗೆ ಪ್ರಾಯಶ್ಚಿತ್ತಂ = ಪ್ರಾಯಶ್ಚಿತ್ತವು ಅಭೂತ್ = ಆಯಿತ್ತು. ತೇನ = ಅದರಿಂದ ತೇ = ಅವರುಗಳು ಶುದ್ಧಾತ್ಮಾನಶ್ಚ = ಶುದ್ಧಾತ್ಮರು. ತೇಽಪಿ ಚ = ಅವರುಗಳು ನರಕಾತ್ = ನರಕದ ದೆಸೆಯಿಂದ ಮುಕ್ತಾಃ = ಮುಕ್ತರುಗಳಾದರು. ||೧೧೯||

ಭೋ ಸಾಧೋಃ = ಎಲೈ ಸತ್ಪುರುಷನಹಂಥಾ ಯಮನೇ! ಅನೇನ = ಈ ಸಾನಂದನಿಂದ ಶುಭಂ ವ್ಯಾಪಿ = ಶುಭವಾಗಲಿ ಅಶುಭಂ ವ್ಯಾಪಿ = ಅಶುಭವಾಗಲಿ ಯತ್ = ಆವುದಾನೊಂದು ಕೃತಂ = ಮಾಡಲುಪಟ್ಟಿತ್ತು ತತ್ = ಅದು ಮತ್ಕೃತಂ = ನನ್ನಿಂದ ಮಾಡಲುಪಟ್ಟುದು. ನ ಸಂಶಯಃ = ಸಂದೇಹವಿಲ್ಲ. ಅಧುನಾ = ಈಗಳು ನಿರ್ವೃತಶ್ಚ = ಸುಖಿಯುಹಂಥಾ ಆತನು ಭವ = ಆಗು. ||೧೨೦||

---

1 ಪಂಚಾಕ್ಷರೀಂ (ಘ) 2 ನಿವೃತ್ತ (ಘ)

ತವಾಜ್ಞಾಭಂಗಭೀರುತ್ವಂ ದೃಷ್ಟ್ವಾ ತುಷ್ಟೋಽಸ್ಮ್ಯಹಂ ಪುನಃ
ವರಾನಿಷ್ಟಾನ್ ವೃಣೀಷ್ವಾದ್ಯ ತಾನ್ಸರ್ವಾಂಸ್ತೇ ದದಾಮ್ಯಹಮ್ ೧೨೯

ಯಮ ಉವಾಚ

ದೇವದೇವ ಮಹಾದೇವ ಜಗತ್ಕಾರಣಕಾರಣ
ತ್ವತ್ಪಾದಪಂಕಜದ್ವಂದ್ವೇ ಭಕ್ತಿರಸ್ತ್ವನಪಾಯಿನೀ ||೧೩೦||

ಏಷ ಏವ ವರಃ ಶ್ಲಾಘ್ಯೋ ವರೋ ವರಸಹಸ್ರತಃ
ಅನುಗೃಹ್ಣೀಷ್ವ ಮಾಂ ನಿತ್ಯಮಪರಾಧಾನ್ ಕ್ಷಮಸ್ವ ಮೇ ||೧೩೧||

ದೇವ ಉವಾಚ

ಆಜ್ಞಾಭಂಗಭೀರುತ್ವಂ = ಆಜ್ಞಾಭಂಗದ ಡೆಸೆಯಿಂದ ಭೀತತ್ವವನು ದೃಷ್ಟ್ವಾ = ಕಂಡು ತವ = ನಿನಗೆ ಅಹಂ = ನಾನು ತುಷ್ಟಃ = ಮೆಚ್ಚಿದಾತನು ಅಸ್ಮಿ = ಆಹೆನು. ಪುನಃ = ಮರಳಿ ಇಷ್ಟಾನ್ = ಬಯಸಿದಂಥಾ ವರಾನ್ = ವರಂಗಳನು ವೃಣೀಷ್ವ = ಬೇಡು. ವೃಞ್-ವರಣೇ ಇತಿ ಧಾತುಃ. ಅದ್ಯ = ಇಂದು ತಾನ್ ಸರ್ವಾನ್ = ಆ ಸಮಸ್ತವರಂಗಳನು ತೇ = ನಿನಗೆ ಅಹಂ = ನಾನು ದದಾಮಿ = ಕೊಡುತ್ತಂಪಿದ್ದೆನು. ||೧೨೯||

ಯಮ ಉವಾಚ = ಯಮನ ವಾಕ್ಯವು.

ದೇವದೇವ = ದೇವರ್ಕಳಿಗೆ ದೇವನಹೆಂಥಾ ಜಗತ್ಕಾರಣಕಾರಣ = ಜಗತ್ತಿನ ಉತ್ಪತ್ತಿಯ ಕಾರಣಕ್ಕೆ ಕಾರಣನಹಂಥಾ ಮಹಾದೇವ = ಎಲೈ ಪರಮೇಶ್ವರನೇ! ತ್ವತ್ಪಾದಪಂಕಜದ್ವಂದ್ವೇ = ನಿನ್ನ ಪದಕಮಲವೆರಡರಲ್ಲಿ ಅನಪಾಯಿನೀ = ಕೇಡಿಲ್ಲದೇ ಇದ್ದಂಥಾ ಭಕ್ತಿಃ = ಭಕ್ತಿಯು ಅಸ್ತು = ಆಗಲಿ. ||೧೩೦||

ಏಷ ಏವ = ಇದೇ ವರಸಹಸ್ರತಃ = ವರಂಗಳ ಸಹಸ್ರದ ದೆಸೆಯಿಂದ ವರಃ ಉತ್ಕೃಷ್ಟವಹಂಥಾ ಶ್ಲಾಘ್ಯಃ = ಶ್ಲಾಘ್ಯವಹಂಥಾ ವರಃ = ವರವು. ಮಾಂ = ಎನ್ನನು ನಿತ್ಯಂ = ಆವಾಗವೂ ಅನುಗೃಹ್ಣೀಷ್ವ = ಅಂಗೀಕರಿಸು. ಮೇ = ಎನ್ನ ಅಪರಾಧಾನ್ = ಅಪರಾಧಂಗಳನ್ನು[1] ಕ್ಷಮಸ್ವ = ಕ್ಷಮಿಸು. ||೧೩೧||

ದೇವ ಉವಾಚ = ಮಹಾದೇವನ ವಾಕ್ಯವು.

---

[1] ಧಂಗಳನು (ಖ ಚ)

[1]ನಿಕೃಷ್ಟ[1]ಲೋಕಜನ್ಮಾನೋ ವಿರುದ್ಧಾ ಲೋಕವೃತ್ತಿಭಿಃ
ಕೋಟಿಭ್ಯೋ ವೇದವಿದುಷಾಂ ಶ್ರೇಷ್ಠಾ ಮದ್ಭಾವಭಾವಿತಾಃ ||೧೨೫||

ಮದ್ಭಕ್ತಜನಮಾಹಾತ್ಮ್ಯಂ ಸರ್ವೇಷಾಮೇವ ಸನ್ನಿಧೌ
ಪೂರ್ವಮೇವ ಮಯಾ ಪ್ರೋಕ್ತಂ ಭವತಾ ವಿಸ್ಮೃತಂ ಕಿಲ ||೧೨೬||

ಇದಾನೀಂ ನರಕಸ್ಥಾ ಯೇ ಸಾನಂದೇನ ವಿಮೋಚಿತಾಃ
ಶಿವಮಂತ್ರಪ್ರಭಾವೇಣ ಮುಕ್ತಾ ಏವ ನ ಸಂಶಯಃ ||೧೨೭||

ಅದ್ಯ ಪ್ರಭೃತಿ ಪಾಪಾನಿ ಯೇ ಕುರ್ವಂತಿ ನರಾಧಮಾಃ
ತಾನ್ಸರ್ವಾನನುರೂಪಾಭಿರ್ಯಾತನಾಭಿರ್ವಿಶೋಧಯ ||೧೨೮||

ನಿಕೃಷ್ಟಲೋಕಜನ್ಮಾನಃ = ಹೀನಕುಲವಹ ಜನ್ಮದಲ್ಲಿ ಉತ್ಪತ್ತಿಯನುಳ್ಳವರುಗಳು ಲೋಕವೃತ್ತಿಭಿಃ = ಲೋಕವರ್ತನೆಗಳಿಂದ ವಿರುದ್ಧಾಃ = ವಿರುದ್ಧವಹಂಥಾ ಮಾರ್ಗವನುಳ್ಳವರುಗಳು ಮದ್ಭಾವಭಾವಿತಾಃ (ಚೇತ್) = ನನ್ನ ಸ್ವರೂಪವನು ನೆನೆಯುತ್ತಿದ್ದವರುಗಳಾದ ಪಕ್ಷೇ, ವೇದವಿದುಷಾಂ = ವೇದವಿತ್ತುಗಳ ಕೋಟಿಭ್ಯಃ = ಕೋಟಿಗಳ ದೆಸೆಯಿಂದವೂ ಶ್ರೇಷ್ಠಾಃ = ಶ್ರೇಷ್ಠರುಗಳು. ||೧೨೫||

ಮದ್ಭಕ್ತಜನಮಾಹಾತ್ಮ್ಯಂ = ನನ್ನ ಭಕ್ತರ ಮಹಿಮೆಯನು ಸರ್ವೇಷಾಂ = ಸಮಸ್ತರುಗಳ ಸನ್ನಿಧಾವೇವ = ಸಮೀಪದಲ್ಲಿಯೇ ಪೂರ್ವಂ = ಮುನ್ನ ಮಯೈವ = ಎನ್ನಿಂದವೇ ಪ್ರೋಕ್ತಂ = ಹೇಳಲುಪಟ್ಟಿತ್ತು. ಭವತಾ = ನಿನ್ನಿಂದ ವಿಸ್ಮೃತಂ = ಮರೆಯಲುಪಟ್ಟಿತ್ತು ಕಿಲ = ಆಶ್ಚರ್ಯವು. ||೧೨೬||

ಇದಾನೀಂ = ಈಗಳು ನರಕಸ್ಥಾಃ = ನರಕದಲ್ಲಿ ಇದ್ದಂಥಾ ಯೇ = ಆರು ಕೆಲಂಬರು ಪ್ರಾಣಿಗಳು ಸಾನಂದೇನ = ಸಾನಂದನಿಂದ ವಿಮೋಚಿತಾಃ = ಮುಕ್ತರಾದರು [ತೇ = ಅವರು] ಶಿವಮಂತ್ರಪ್ರಭಾವೇಣ = ಶ್ರೀ ಪಂಚಾಕ್ಷರಿಮಂತ್ರದ ಸಾಮರ್ಥ್ಯದಿಂದ ಮುಕ್ತಾಏವ = ಮುಕ್ತರುಗಳೇ. ನ ಸಂಶಯಃ = ಸಂದೇಹವಿಲ್ಲ.

ಅದ್ಯಪ್ರಭೃತಿ = ಇಂದು ಮೊದಲಾಗಿ ಯೇ = ಆರು ಕೆಲಂಬರು ನರಾಧಮಾಃ = ಮನುಷ್ಯರೊಳಗಧಮರುಗಳು ಪಾಪಾನಿ = ಪಾಪಂಗಳನು ಕುರ್ವಂತಿ = ಮಾಡುತ್ತಿಹರು ತಾನ್ ಸರ್ವಾನ್ = ಆ ಸಮಸ್ತರುಗಳನು ಅನುರೂಪಾಭಿಃ = ಅನುಗುಣವಹಂಥಾ ಯಾತನಾಭಿಃ = ಬಾಧೆಗಳಿಂದ ವಿಶೋಧಯ = ಶುದ್ಧವ ಮಾಡು. ೧೨೮

---

[1] ನಿಕೃಷ್ಟಾ (ಘ)

ಕರುಣಾಲಂಕೃತಾ ಭಕ್ತಿಃ ಭಕ್ತ್ಯಾ ಚಾಲಂಕೃತಾ ದಯಾ
[1]ತಯೋಃ[1] ಪರಸ್ಪರಾಸಂಗಃ ಶೋಭಾಹೇತುರ್ಭವಿಷ್ಯತಿ ||೧೩೬||

ತುಷ್ಟೋಽಸ್ಮಿ ಕರುಣಾವಿಷ್ಟಚಿತ್ತವೃತ್ತೇ ಮಹಾಮತೇ !
ಕರುಣಾಗರ್ಭಯಾ ಭಕ್ತ್ಯಾ ವರಾನಿಷ್ಟಾನ್ ವೃಣೀಷ್ವ ಮಾಮ್ ||

ಸಾನಂದ ಉವಾಚ

ತ್ವತ್ಪಾದಭೃತ್ಯಭೃತ್ಯಾನಾಂ ಭೃತ್ಯಭೃತ್ಯತ್ವಮಾನಿನಾಮ್
ಕಿಂ ವರೈರಪರೈರ್ಮುಕ್ತ್ವಾ ಭಕ್ತಿಂ ಪಾದಾಂಬುಜದ್ವಯೋಃ ||೧೩೮||

ದವರುಗಳು. ವಿಮತ್ಸರಾಃ = ಮತ್ಸರವಿಲ್ಲದವರುಗಳು. ಮಂತ್ರೀಭೂತಾಃ = ಮಂತ್ರರೂಪವಾದವರುಗಳು. ಶುಭಾಚಾರಾಃ = ಮಂಗಳವಹ ಆಚಾರವನುಳ್ಳವರುಗಳು. ಧರ್ಮತತ್ಪರಾಃ = ಧರ್ಮದಲ್ಲಿ ತಾತ್ಪರ್ಯವನುಳ್ಳವರುಗಳು. ||೧೩೫||

ಭಕ್ತಿಃ = ಭಕ್ತಿಯು ಕರುಣಾಲಂಕೃತಾ = ಕರುಣದಿಂದ ಅಲಂಕರಿಸಲ್ಪಟ್ಟಂಥಾದು. ಭಕ್ತ್ಯಾ ಚ = ಭಕ್ತಿಯಿಂದವು ದಯಾ = ಕರುಣವು ಅಲಂಕೃತಾ = ಅಲಂಕರಿಸಲ್ಪಟ್ಟದು. ತಯೋಃ = ಆ ಕರುಣ-ಭಕ್ತಿಗಳಿಗೆ ಪರಸ್ಪರಾಸಂಗಃ = ಒಂದೊಂದರ ಕೂಟವು ಶೋಭಾಹೇತುಃ = ಮಂಗಳಕ್ಕೆ ಕಾರಣವು ಭವಿಷ್ಯತಿ = ಆದೂದು ||೧೩೬||

ಕರುಣಾವಿಷ್ಟಚಿತ್ತವೃತ್ತೇ = ಕರುಣದಿಂದ ಮುಸುಕಲ್ಪಟ್ಟ ಚಿತ್ತದ ವರ್ತನೆಯನ್ನುಳ್ಳಂಥಾ ಮಹಾಮತೇ = ಬಹಳಮತಿಯುನುಳ್ಳಂಥಾ ಆತನೇ! ತುಷ್ಟೋಽಸ್ಮಿ = ಮೆಚ್ಚಿದಾತನಾದೆನು. ಕರುಣಾಗರ್ಭಯಾ = ಕರುಣದಿಂದ ಗರ್ಭೀಕರಿಸಲ್ಪಟ್ಟಂಥಾ ಭಕ್ತ್ಯಾ ಚ = ಭಕ್ತಿಯಿಂದ ಇಷ್ಟಾನ್ = ಬಯಸಿದಂಥಾ ವರಾನ್ = ವರಗಳನು ಕುರಿತು ಮಾಂ = ಎನ್ನನು ವೃಣೀಷ್ವ = ಬೇಡು. ||೧೩೭||

ಸಾನಂದ ಉವಾಚ = ಸಾನಂದ ವಾಕ್ಯವು

ತ್ವತ್ಪಾದಭೃತ್ಯಭೃತ್ಯಾನಾಂ = ನಿನ್ನ ಶ್ರೀ ಚರಣದಲ್ಲಿಯು ಸೇವಕರ ಸೇವಕರುಗಳ ಭೃತ್ಯಭೃತ್ಯತ್ವಮಾನಿನಾಂ = ಸೇವಕರ ಸೇವಕರಹವನವನು ಅಂಗೀಕರಿಸುತ್ತಂವಿದ್ದಂಥಾವರುಗಳ ಪಾದಾಂಬುಜದ್ವಯೋಃ = ಪಾದಕಮಲವೆರಡರಲ್ಲಿಯು ಭಕ್ತಿಂ = ಭಕ್ತಿಯನು ಮುಕ್ತ್ವಾ = ಬಿಟ್ಟು ಅಪರೈರ್ವರೈಃ = ಉಳಿದ ವರಂಗಳಿಂದ ಕಿಂ = ಏನು ಪ್ರಯೋಜನವು ? ||೧೩೮||

---

1 ಯಯೋಃ (ಕ)

ಏವಂ ಭವತು ಭದ್ರಂ ತೇ[1]ಭವಾನ್ಮೇಽತ್ಯಂತವಲ್ಲಭಃ[1]
ಗಚ್ಛ ಸ್ವನಗರಂ ಶೀಘ್ರಂ ಸ್ವಾಧಿಕಾರಂ ಸದಾ ಕುರು ||೧೩೨||

ಧರ್ಮರಾಜಂ ವಿಸೃಜ್ಯೈವಮುಕ್ತ್ವಾ ಮುಕ್ತಿಪದಪ್ರದಃ
ಸಾನಂದಂ ನಂದಯನ್ ಪ್ರಾಹ ಗಣೇಶಂ ಗಣನಂದಿನಮ್ ||೧೩೩||

ಪರೋಪಕಾರನಿರತೋ ಭವಾನ್ಮೇಽತ್ಯಂತವಲ್ಲಭಃ
ಮದ್ಭಕ್ತಾನಾಮಿದಂ ಚಿಹ್ನಂ ಪರೇಷಾಂ ಹಿತಕಾರಿತಾ ||೧೩೪||

ಅಕಾರ್ಪಣ್ಯಾ ಮಹೋತ್ಸಾಹಾ ದಯಾಧಾರಾ ವಿಮತ್ಸರಾಃ
[2]ಮಂತ್ರ[2]ಭೂತಾಶ್ಶುಭಾಚಾರಾ ಮದ್ಭಕ್ತಾ ಧರ್ಮತತ್ಪರಾಃ ||೧೩೫||

ಏವಂ = ಈ ಪ್ರಕಾರದಲ್ಲಿ ತೇ = ನಿನಗೆ ಭದ್ರಂ = ಮಂಗಳವು ಭವತು = ಆಗಲಿ. ಭವಾನ್ = ನೀನು ಮೇ = ಎನಗೆ ಅತ್ಯಂತವಲ್ಲಭಃ = ಅತ್ಯಂತ ಮನೋಹರನಹಂಥಾತನು. ಸ್ವನಗರಂ = ನಿನ್ನ ಪಟ್ಟಣವನು ಶೀಘ್ರಂ = ಬೇಗ ಗಚ್ಛ = ಎಯ್ದು. ಸ್ವಾಧಿಕಾರಂ = ನಿನ್ನ ಪಾರುಪತ್ಯವನು ಸದಾ = ಎಲ್ಲಾಗಳೂ ಕುರು = ಮಾಡು. ||೧೩೨||

ಮುಕ್ತಿಪದಪ್ರದಃ = ಮುಕ್ತಿಪದವನು ಕೊಡುತ್ತಿದ್ದಂಥಾ ಶಿವನು ಏವಂ = ಈ ಪ್ರಕಾರದಲ್ಲಿ ಉಕ್ತ್ವಾ = ನುಡಿದು ಧರ್ಮರಾಜಂ = ಧರ್ಮರಾಜನನು ವಿಸೃಜ್ಯ = ಕಳುಹಿ ಗಣೇಶಂ = ಗಣೇಶ್ವರನಹಂಥಾ ಗಣನಂದಿನಂ = ಗಣಂಗಳಿಗೆ ಆನಂದವ ಮಾಡುತ್ತಿದ್ದಂಥಾ ಸಾನಂದಂ = ಸಾನಂದನನು ನಂದಯನ್ = ಸಂತೋಷಿಸುತ್ತವು ಪ್ರಾಹ = ನುಡಿದನು. ||೧೩೩||

ಪರೋಪಕಾರನಿರತಃ = ಪರರುಗಳಿಗೆ ಉಪಕಾರವ ಮಾಡುವಲ್ಲಿ ತಾತ್ಪರ್ಯವನುಳ್ಳಂಥಾ ಭವಾನ್ = ನೀನು ಮೇ = ಎನಗೆ ಅತ್ಯಂತವಲ್ಲಭಃ = ಅತ್ಯಂತ ಮನೋಹರನಹಂಥಾತನು. ಪರೇಷಾಂ = ಪರರುಗಳಿಗೆ ಹಿತಕಾರಿತಾ = ಹಿತವ ಮಾಡುವತನವು ಮದ್ಭಕ್ತಾನಾಂ = ಎನ್ನ ಭಕ್ತರುಗಳಿಗೆ ಇದಂ = ಇದು ಚಿಹ್ನಂ = ಕುರುಹು. ||೧೩೪||

ಮದ್ಭಕ್ತಾಃ = ಎನ್ನ ಭಕ್ತರುಗಳು ಅಕಾರ್ಪಣ್ಯಾಃ = ದೈನ್ಯವಿಲ್ಲದವರುಗಳು ಮಹೋತ್ಸಾಹಾಃ = ಅತ್ಯಂತ ಉತ್ಸಾಹಿಗಳು. ದಯಾಧಾರಾಃ = ಕೃಪೆಯ ಧರಿಸಿ

---

[1] ಭಾವಂ ನೇತೀವ ವಲ್ಲಭಃ (ಖ). ಭವಾನ್ಮೇತಿ ಭವಂ ಭವಃ(ಗ)

[2] ಮಂತ್ರೀ (ಕ ಗ ಘ)

ಸಾನಂದಚರಿತಂ ದಿವ್ಯಂ ಶೃಣೋತಿ ಶ್ರಾವಯೇತ ವಾ
ಸರ್ವಪಾಪವಿನಿರ್ಮುಕ್ತಃ ಸಾನಂದಸದೃಶೋ ಭವೇತ್ ||೧೪೨||

ನಾಪುತ್ರಶಿಷ್ಯಯೋಗಿಭ್ಯ ಇದಮಾಖ್ಯೇಯಮುತ್ತಮಮ್
ಶಿವಭಕ್ತಾಯ ದಾತವ್ಯಂ ಶಿವಭಕ್ತಿಪ್ರಬೋಧಕಮ್ ||೧೪೩||

ಶಿವಭಕ್ತಸ್ಯ ಮಾಹಾತ್ಮ್ಯಂ ಶಿವಭಕ್ತಿಪ್ರದಂ ಸದಾ
ಅಸ್ಯಾಧ್ಯಾಯಸ್ಯ ಯೋಽರ್ಥಜ್ಞಃ ಸ ತು ಜ್ಞೇಯಸ್ಸದಾಶಿವಃ||೧೪೪||

ತಂ ಪೂಜಯೇನ್ಮಹಾತ್ಮಾನಂ [1]ಭಕ್ತಿಮುಕ್ತಿ ಪ್ರದಾಯಕಮ್||೧೪೫||

ದಿವ್ಯಂ = ಮನೋಹರವಹಂಥಾ ಸಾನಂದಚರಿತಂ = ಸಾನಂದನ ಚಾರಿತ್ರವನು ಶೃಣೋತಿ = ಕೇಳುತ್ತಿಹನು ವಾ = ಅಲ್ಲಾ ಶ್ರಾವಯೇತ = ಕೇಳಿಸುವನು ಸರ್ವಪಾಪವಿನಿರ್ಮುಕ್ತಃ = ಸಮಸ್ತ ಪಾಪಂಗಳಿಂದ ಬಿಡಲ್ಪಟ್ಟಾತನಾಗಿ ಸಾನಂದ-ಸದೃಶಃ = ಸಾನಂದಂಗೆ ಸಮಾನನು ಭವೇತ್ = ಆಹನು. ||೧೪೨||

ಇದಂ = ಈ ಉತ್ತಮಂ = ಉತ್ತಮವಹಂಥಾ ಶಿವಭಕ್ತಿಪ್ರಬೋಧಕಂ = ಶಿವಭಕ್ತಿಯನು ಬೋಧಿಸುತ್ತಂ ಇದ್ದಂಥಾ ಅಧ್ಯಾಯವು ಶಿವಭಕ್ತಾಯ = ಶಿವ-ಭಕ್ತಂಗೋಸ್ಕರ ದಾತವ್ಯಂ = ಕೊಡಲು ಯೋಗ್ಯವು. ಹೇಳುವುದೆಂಬುದರ್ಥ. ಅಪುತ್ರಶಿಷ್ಯಯೋಗಿಭ್ಯಃ = ಪುತ್ರನು ಶಿಷ್ಯನು (ಶಿವ) ಯೋಗಿಗಳಲ್ಲದಂಥಾವರುಗಳಿಗೋಸ್ಕರ ಆಖ್ಯೇಯಂ ನ = ಹೇಳಲಾಗದು. ||೧೪೩||

ಶಿವಭಕ್ತಸ್ಯ = ಶಿವಭಕ್ತನಹಂಥಾ ಸಾನಂದಯೋಗೀಶ್ವರನ ಮಾಹಾತ್ಮ್ಯಂ = ಮಹಿಮೆಯು ಸದಾ = ಎಲ್ಲಾಗಳೂ ಶಿವಭಕ್ತಿಪ್ರದಂ = ಶಿವಭಕ್ತಿಯ ಕೊಡುವುದು. ಯಃ = ಆವನಾನೊಬ್ಬನು ಅಸ್ಯ = ಈ ಅಧ್ಯಾಯದ ಅರ್ಥಜ್ಞಃ = ಅರ್ಥವನು ಬಲ್ಲನು ಸ ತು = ಆತನು ಸದಾಶಿವಃ = ಶಿವನೆಂದು ಜ್ಞೇಯಃ = ಅರಿಯಲು ಯೋಗ್ಯನು ||೧೪೪||

[1]ಭಕ್ತಿಮುಕ್ತಿಪ್ರದಾಯಕಂ = ಭಕ್ತಿಮುಕ್ತಿಯನು[1] ಕೊಡುತ್ತಿದ್ದಂಥಾ ತಂ = ಆ, ಮಹಾತ್ಮಾನಂ = ಮಹಾತ್ಮನನು ಪೂಜಯೇತ್ = ಪೂಜಿಸೂದು. ||೧೪೫||

---

1 ಭುಕ್ತಿಮುಕ್ತಿಪ್ರವರ್ತಕಂ (ಕ ಮೂಲ, ಗ. ಖ) ಭಕ್ತಿಮುಕ್ತಿಪ್ರದಾಯಕಂ (ಕ ವ್ಯಾ), ಭಕ್ತಿಮುಕ್ತಿ ಪ್ರವರ್ತಕಂ (ಘ)

ತಸ್ಮಾತ್ಪ್ರಸೀದ ಭಕ್ತಿಂ ಮೇ ತ್ವತ್ಪಾದಾಂಬುಜಯೋಸ್ಸದಾ
ಭೂಯೋ ಭೂಯೋ ಮಹಾದೇವ ಭಕ್ತಿಮೇವ [1]ಪ್ರಯಚ್ಛ[1] ಮೇ

ದೇವ ಉವಾಚ

ಏವಂ ಭವತು ಭಕ್ತಿಸ್ತೇ ನಿತ್ಯಮವ್ಯಭಿಚಾರಿಣೀ
[2]ರಮೇಯಂ[2]ಮುಮಯಾ ಸಾರ್ಧಂ ಮಾನಸೇ ತವ ನಿರ್ಮಲೇ ॥೧೪೦॥

ಇತ್ಯುಕ್ತ್ವಾ ದೇವದೇವೇಶಸ್ತತ್ರೈವಾಂತರಧೀಯತ
ಸಾನಂದೋಽಪಿ ನಮಸ್ಕೃತ್ವಾ ಸ್ವಾಶ್ರಮಂ ಪ್ರತಿ ಜಗ್ಮಿವಾನ್ ॥೧೪೧॥

ನಂದಿಕೇಶ್ವರ ಉವಾಚ

ತಸ್ಮಾತ್ = ಆದು ಕಾರಣವಾಗಿ ತ್ವತ್ಪಾದಾಂಬುಜಯೋಃ = ನಿನ್ನ ಪಾದ ಕಮಲವೆರಡರಲ್ಲಿಯು ಭಕ್ತಿಂ = ಭಕ್ತಿಯನು ಮೇ = ಎನಗೆ ಸದಾ = ಎಲ್ಲಾಗಳೂ ಪ್ರಸೀದ = ಕರುಣಿಸು. ಭೋ ಮಹಾದೇವ! = ಎಲೈ ಶಿವನೇ! ಭೂಯೋ ಭೂಯಃ = ಮರಳಿ ಮರಳಿ ಭಕ್ತಿಮೇವ = ಭಕ್ತಿಯನೇ ಮೇ = ಎನಗೆ ಪ್ರಯಚ್ಛ = ಕೃಪೆಮಾಡು. ॥೧೩೯॥

ದೇವ ಉವಾಚ = ಶಿವನು ನುಡಿವುತ್ತಿದ್ದಾನು.

ಏವಂ = ಈ ಪ್ರಕಾರದಲ್ಲಿ ಅವ್ಯಭಿಚಾರಿಣೀ = ಮತ್ತೊಂದು ದೈವದಲ್ಲಿ ವರ್ತಿಸದೇ ಇದ್ದಂಥಾ ಭಕ್ತಿಃ = ಭಕ್ತಿಯು ತೇ = ನಿನಗೆ ನಿತ್ಯಂ = ಅವಾಗವೂ ಭವತು = ಆಗಲಿ. ಉಮಯಾ ಸಾರ್ಧಂ = ಪಾರ್ವತೀದೇವಿಯೊಡನೆಯೂ ತವ = ನಿನ್ನ ನಿರ್ಮಲೇ = ನಿರ್ಮಲವಹಂಥಾ ಮಾನಸೇ = ಮನಸ್ಸಿನಲ್ಲಿಯೂ ರಮೇಯಂ = ಕ್ರೀಡಿಸುವೆನು. ರಮು–ಕ್ರೀಡಾಯಾಂ ಇತಿ ಧಾತುಃ ॥೧೪೦॥

ಇತಿ = ಈ ಪ್ರಕಾರದಲ್ಲಿ ದೇವದೇವೇಶಃ = ದೇವಶ್ರೇಷ್ಠರುಗಳಿಗೆ ಒಡೆಯನ-ಹಂಥಾ ಶಿವನು ಉಕ್ತ್ವಾ = ನುಡಿದು ತತ್ರೈವ = ಅಲ್ಲಿಯೇ ಅಂತರಧೀಯತ = ಮಾಯವಾದನು. ಸಾನಂದೋಽಪಿ = ಸಾನಂದನೂ ನಮಸ್ಕೃತ್ವಾ = ನಮ-ಸ್ಕರಿಸಿ ಸ್ವಾಶ್ರಮಂ ಪ್ರತಿ = ತನ್ನಾಶ್ರಮವನು ಕುರಿತು ಜಗ್ಮಿವಾನ್ = ಎಯ್ದಿದನು ನಂದಿಕೇಶ್ವರ ಉವಾಚ = ನಂದಿಕೇಶ್ವರನು ನುಡಿದನು.

---

[1] ಪ್ರಸೀದ (ಕ) ವ್ಯಾಖ್ಯಾ ಮತ್ತು ಗ. ಪ್ರಯಚ್ಛ (ಕ) ಮೂಲ ಪಾಠ
[2] ರಮೇಽಹ (ಘ)

ದಶಮೋಽಧ್ಯಾಯಃ

(ಮಹಾಲಿಂಗ (ಶಿವಲಿಂಗ) ಪ್ರಾದುರ್ಭಾವಃ)

ಶೈವೇ ಧರ್ಮಸಂಹಿತಾಯಾಂ

ಸನತ್ಕುಮಾರ ಉವಾಚ

ಭಗವನ್ ಸರ್ವಧರ್ಮಜ್ಞ ನಂದೀಶ್ವರ ಗಣೇಶ್ವರ
ಕಥಮಾಸೀತ್ಕಿಮರ್ಥಂ ಚ ಲಿಂಗಂ ಶೈವಂ ಸನಾತನಮ್ ॥೧॥

ಏತತ್ಸರ್ವಮಶೇಷೇಣ ವಕ್ತುಮರ್ಹಸಿ ಸಾಂಪ್ರತಮ್
ತಸ್ಯ ತದ್ವಚನಂ ಶ್ರುತ್ವಾ ನಂದೀ ಸರ್ವಾರ್ಥತತ್ತ್ವವಿತ್ ॥೨॥

ಲಿಂಗೋತ್ಪತ್ತಿಂ ಮಹೇಶಸ್ಯ ಉತ್ಪತ್ತೇಃ ಕಾರಣಂ ಚ ಸಃ
ಪ್ರಾಹ ಗಂಭೀರಯಾ ವಾಚಾ ಜಗತಾಂ ಸಂಭವಂ ವಿಭುಃ ॥೩॥

ಶೈವೇ ಧರ್ಮಸಂಹಿತಾಯಾಂ = ಶೈವ ಪುರಾಣದಲ್ಲಿ ಧರ್ಮಸಂಹಿತೆಯಲ್ಲಿ ಹೇಳುತ್ತಿರುವುದು.

ಸನತ್ಕುಮಾರ ಉವಾಚ = ಸನತ್ಕುಮಾರ ನುಡಿದನು.

ಭಗವನ್ = ಮಹಿಮೆಯನುಳ್ಳಂಥಾ ಸರ್ವಧರ್ಮಜ್ಞ = ಸಮಸ್ತ ಧರ್ಮಂಗಳನು ಬಲ್ಲಂಥಾ ಗಣೇಶ್ವರ = ಗಣೇಶ್ವರನಹಂಥಾ ಭೋ ನಂದೀಶ್ವರ = ಎಲೈ ನಂದಿಕೇಶ್ವರ! ಸನಾತನಂ = ಕೇಡಿಲ್ಲದೇ ಇದ್ದಂಥಾ ಶೈವಂ = ಶಿವಸಂಬಂಧವಹಂಥಾ ಲಿಂಗಂ = ಲಿಂಗವು ಕಿಮರ್ಥಂ ಚ = ಏನು ಕಾರಣವು ಕಥಂ = ಹೇಂಗೆ ಆಸೀತ್ = ಆಯಿತ್ತು? ॥೧॥

ಏತತ್ಸರ್ವಂ = ಈ ಸಮಸ್ತವನು ಅಶೇಷೇಣ = ವಿಸ್ತರದಿಂದ ವಕ್ತುಂ = ನುಡಿಯಲು ಸಾಂಪ್ರತಂ = ಈಗಳೂ ಅರ್ಹಸಿ = ಯೋಗ್ಯವಾಗುತ್ತಿಹೆ. ತಸ್ಯ = ಆ ಸನತ್ಕುಮಾರನ ತದ್ವಚನಂ = ಆ ವಾಕ್ಯವನು ಸರ್ವಾರ್ಥತತ್ತ್ವವಿತ್ = ಸಮಸ್ತ ಶಾಸ್ತ್ರಾರ್ಥಂಗಳ ನಿಶ್ಚಯವನು ಬಲ್ಲಂಥಾ ನಂದೀ = ನಂದಿಕೇಶ್ವರನು ಶ್ರುತ್ವಾ = ಕೇಳಿ, ॥೨॥

ವಿಭುಃ = ಸಮರ್ಥನಹಂಥಾ ಸಃ = ಆ ನಂದಿಕೇಶ್ವರನು ಮಹೇಶಸ್ಯ =

ಸುಕೇಶಸ್ಯ ಸಮಾನಃ ಸ್ಯಾತ್ ಸಾನಂದೋಽಯಂ ಗಣೇಶ್ವರಃ
[1]ಉಪಮನ್ಯುಸ್ಸಮಾನೋಽಸ್ಯ ನಾನ್ಯಃ ಕಶ್ಚನ ವಿದ್ಯತೇ ||೧೪೬||

ಉಪಮನ್ಯುಃ ಸುಕೇಶಶ್ಚ ಸಾನಂದಶ್ಚ [3]ಮಹಾನ್ ಶುಚಿಃ[2]
[3]ಶಿವಭಕ್ತಾಸ್ತ್ರಯ[3]ಸ್ತುಲ್ಯಾಃ ಸತ್ಯಮೇವ ನ ಸಂಶಯಃ ||೧೪೭||

ಇತಿ ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಸುಧಾರ್ಣವ-
ಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಮಲ್ಲಿಕಾರ್ಜುನಾ-
ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾವಿವರಣೇ
ಶ್ರೀಮತ್ಪಂಚಾಕ್ಷರೀಮಹಾತ್ಮ್ಯಕಥನೇ "ಸಾನಂದಚರಿತಂ ನಾಮ"
ನವಮೋಽಧ್ಯಾಯಃ

ಗಣೇಶ್ವರಃ = ಗಣೇಶ್ವರನಹಂಥಾ ಅಯಂ = ಈ ಸಾನಂದಃ = ಸಾನಂದನು ಸುಕೇಶಸ್ಯ = ಸುಕೇಶಂಗೆ ಸಮಾನಃ = ಸಮಾನನು ಸ್ಯಾತ್ = ಆಹನು. ಅಸ್ಯ = ಈ ಸಾನಂದನಿಗೆ ಉಪಮನ್ಯುಃ = ಉಪಮನ್ಯುಮುನೀಶ್ವರನು ಸಮಾನಃ = ಸಮಾನನು ಅನ್ಯಃ ಕಶ್ಚನ = ಮತ್ತಾವಾತನು ನ ವಿದ್ಯತೇ = ಸಮಾನನಿಲ್ಲವು.

ಉಪಮನ್ಯುಃ = ಉಪಮನ್ಯುವು ಸುಕೇಶಶ್ಚ = ಸುಕೇಶನು ಶುಚಿಃ = ಶುಚಿಯಹಂಥಾ ಮಹಾನ್ = ಮಹಾತ್ಮನಹಂಥಾ ಸಾನಂದಶ್ಚ = ಸಾನಂದನು ತ್ರಯಃ = ಮೂವರು ತುಲ್ಯಾಃ = ಸಮಾನವಹಂಥಾ ಶಿವಭಕ್ತಾಃ = ಶಿವಭಕ್ತರುಗಳು. ಸತ್ಯಮೇವ = ಸತ್ಯವೇ ನ ಸಂಶಯಃ = ಸಂದೇಹವಿಲ್ಲ. ||೧೪೭||

---

1 ಉಪಮನ್ಯುಸಮಾನ ಸ್ಯಾನ್ನಾನ್ಯಃ ಕಶ್ಚಿನ್ನ (ಘ)
2 ಮಹಾಶುಚಿಃ (ಘ) 3 ಶಿವಭಕ್ತಾಶ್ರಯ (ಘ)

[1]ಬ್ರಹ್ಮಾಣಸ್ತು ಮರೀಚ್ಯಾದ್ಯಾ[1]ನವಾದ್ಯಾಃ ಸಾಧಕಾಃ ಸ್ಮೃತಾಃ
ತತೋ ದೇವಾಸುರಾನ್ ಪಿತೄನ್ಮನುಷ್ಯಾಂಶ್ಚಾಸೃಜತ್ಪ್ರಭುಃ ||೭||

ತತೋಽಸೃಜಚ್ಚ ಭೂತಾನಿ ಚರಾಣಿ ಸ್ಥಾವರಾಣಿ ಚ
ಸೃಷ್ಟ್ವಾ ಚತುಷ್ಟಯಂ ಸರ್ವಂ ದೇವರ್ಷಿಪಿತೃಮಾನವಮ್ ||೮||

ಸಂವೃತೋಽಥ ತಥಾ ಪುತ್ರೈಃ ಸರ್ವಜ್ಞೋಽಪಿ ಪಿತಾಮಹಃ
ಪ್ರಾಹ ಚೈವಂ [2]ತದಾ[2] ಪ್ರೇಕ್ಷ್ಯ ಪುತ್ರಾನ್ಪುತ್ರವತಾಂ ವರಃ ||೯||

ಅಹಮೇವ ಜಗತ್ಸರ್ವಂ ಮತ್ತೋ ನಾಸ್ತಿ ಪರಸ್ತ್ವಿತಿ
ತತಸ್ತಸ್ಯ ವಚಃ ಶ್ರುತ್ವಾ ಪ್ರಜಾನಾಂ ಪತಯಃ [3]ಪ್ರಭುಃ[3] ||೧೦||

ಮರೀಚ್ಯಾದ್ಯಾಃ = ಮರೀಚಿ ಮೊದಲಾಗಿದ್ದಂಥಾ ನವಬ್ರಹ್ಮಾಣಸ್ತು = ನವ ಬ್ರಹ್ಮರುಗಳು ಆದ್ಯಾಃ = ಮೊದಲಿಗರಹಂಥಾ ಸಾಧಕಾಃ = ಸೃಷ್ಟಿಗೆ ಸಾಧಕರೆಂದು ಸ್ಮೃತಾಃ = ಹೇಳಲ್ಪಟ್ಟರು. ತತಃ = ಅನಂತರದಲ್ಲಿ ಪ್ರಭುಃ = ಸಮರ್ಥನಹಂಥಾ ಬ್ರಹ್ಮನು ದೇವಾಸುರಪಿತೄನ್ = ದೇವರ್ಕಳು ರಾಕ್ಷಸರು ಪಿತೃಗಳನು ಮನುಷ್ಯಾಂಶ್ಚ = ಮನುಷ್ಯರುಗಳನು ಅಸೃಜತ್ = ಸೃಜಿಸಿದನು. ಭೃಗು. ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ, ಮರೀಚಿ, ದಕ್ಷ, ಅತ್ರಿ. ವಸಿಷ್ಠ ಇವರುಗಳು ನವಬ್ರಹ್ಮರು. ||೭||

ತತಃ = ಅಷ್ಟರಮೇಲೆ ಚರಾಣಿ = ಚರಿಸುತ್ತಿದ್ದಂಥಾ, ಸ್ಥಾವರಾಣಿ = ವೃಕ್ಷ ಪರ್ವತ ಮುಂತಾಗಿ ಸ್ಥಾವರಂಗಳಹಂಥಾ, ಭೂತಾನಿ ಚ = ಪ್ರಾಣಿಗಳನೂ ಅಸೃಜತ್ = ಸೃಷ್ಟಿಸಿದನು. ಸರ್ವಂ = ಸಮಸ್ತವಹಂಥಾ ದೇವರ್ಷಿಪಿತೃಮಾನವಂ = ದೇವತೆಗಳು ಪಿತೃಗಳು ಋಷಿಗಳು ಮನುಷ್ಯರುಗಳ ಸಂಬಂಧವಹಂಥಾ ಚತುಷ್ಟಯಂ = ನಾಲ್ಕು ಪ್ರಕಾರವಹಂಥಾ ಜಗತ್ತನು ಸೃಷ್ಟ್ವಾ = ಸೃಷ್ಟಿಮಾಡಿ, ||೮||

ಅಥ = ಅನಂತರದಲ್ಲಿ ಸರ್ವಜ್ಞಃ = ಸರ್ವಜ್ಞನಹಂಥಾ ಪುತ್ರವತಾಂ = ಪುತ್ರರುಗಳನುಳ್ಳವರುಗಳಿಗೆ ವರಃ = ಶ್ರೇಷ್ಠನಹಂಥಾ ಪಿತಾಮಹೋಽಪಿ = ಬ್ರಹ್ಮನು ತಥಾ = ಹಾಗೆ ಪುತ್ರೈಃ = ಪುತ್ರರುಗಳಿಂದ ಸಂವೃತಃ = ಪರಿವೇಷ್ಟಿಸಲುಪಟ್ಟಾತ-ನಾಗಿ ತದಾ = ಆಗ ಪುತ್ರಾನ್ = ಪುತ್ರರುಗಳನು ಪ್ರೇಕ್ಷ್ಯ = ನೋಡಿ ಏವಂ ಚ = ಈ ಪ್ರಕಾರದಲ್ಲಿಯೂ ಪ್ರಾಹ = ನುಡಿದನು. ||೯||

ಅಹಮೇವ = ನಾನೇ ಸರ್ವಂ ಜಗತ್ = [4]ಸಮಸ್ತ[4]ಜಗತ್ತು. ಮತ್ತಃ = ಎನ್ನಿಂದವು ಪರಃ = ಅಧಿಕವಹಂಥಾ ಪ್ರಭುಃ = ಒಡೆಯನಹಂಥಾ ದೇವನು ನಾಸ್ತಿ

---

[1] ಬ್ರಹ್ಮಣಸ್ತು ಮರೀಚಾದ್ಯಾಃ (ಘ) [2] ತಥಾ (ಘ)
[3] ಪ್ರಭುಂ (ಘ) [4] ಸಮಸ್ತವಹಂಥಾ (ಖ. ಚ)

ನಂದಿಕೇಶ್ವರ ಉವಾಚ

ಅಜಾದ್ಯಾನಾಂ ವಿಭುಃ ಸಾಕ್ಷಾತ್ಪಶೂನಾಂ ಪರಮೇಶ್ವರಃ
ಬ್ರಹ್ಮಾಣಂ ಜನಯಾಮಾಸ ರುದ್ರೋ ವಿಶ್ವಾಧಿಕಃ ಶಿವಃ ||೪||

ರಜೋದ್ರಿಕ್ತೋ ಜಗತ್ಸರ್ವಮಸೃಜತ್ಕನಕಾಂಡಜಃ
ಪಂಚಧಾ ವೈ ಕೃತಂ ಸರ್ಗಂ ಕೌಮಾರಂ ಚ ತಥಾಕರೋತ್ ||೫||

[1]ನೈಷ್ಕರ್ಮೇಣ[1] ಗತೇ ದೇವೇ ಸನಂದೇ ಚ ಸನಾತನೇ
ಸನಕೇ ಚ ಜಗತ್ಕರ್ತಾ ಸಾಧಕಾನಸೃಜತ್ಪುನಃ ||೬||

ಪರಮೇಶ್ವರನ ಲಿಂಗೋತ್ಪತ್ತಿಃ=ಲಿಂಗದ ಉತ್ಪತ್ತಿಯನು ಉತ್ಪತ್ತೇಃ=ಉತ್ಪತ್ತಿಗೆ ಕಾರಣಂ ಚ=ಕಾರಣವನು ಜಗತಾಂ=ಲೋಕಂಗಳ ಸಂಭವಂ=ಉತ್ಪತ್ತಿಯನು ಗಂಭೀರಯಾ=ಗಂಭೀರವಹಂಥಾ ವಾಚಾ=ವಾಕ್ಯದಿಂದ ಪ್ರಾಹ=ನುಡಿದನು.

ನಂದಿಕೇಶ್ವರ ಉವಾಚ=ನಂದಿಕೇಶ್ವರನು ನುಡಿದನು.

ಅಜಾದ್ಯಾನಾಂ=ಬ್ರಹ್ಮ ಮೊದಲಾದಂಥಾ ಪಶೂನಾಂ=ಪಶುಗಳಿಗೆ ವಿಭುಃ =ಒಡೆಯನಹಂಥಾ ವಿಶ್ವಾಧಿಕಃ= ವಿಶ್ವಕ್ಕೆ ಅಧಿಕನಹಂಥಾ ಶಿವಃ = ಮಂಗಳ ಸ್ವರೂಪನಹಂಥಾ ರುದ್ರಃ = ದುಃಖವನು ಕೆಡಿಸುತ್ತಂವಿದ್ದಂಥಾ ಸಾಕ್ಷಾತ್ಪರಮೇಶ್ವರಃ = ಪ್ರತ್ಯಕ್ಷನಹಂಥಾ ಪರಮೇಶ್ವರನು ಬ್ರಹ್ಮಾಣಂ=ಬ್ರಹ್ಮನನು ಜನಯಾಮಾಸ=ಸೃಜಿಸಿದನು. ||೪||

ಕನಕಾಂಡಜಃ = ಸುವರ್ಣಮಯುವಹ ಬ್ರಹ್ಮಾಂಡದಿಂದ ಹುಟ್ಟಿದಂಥಾ ಬ್ರಹ್ಮನು, ರಜೋದ್ರಿಕ್ತಃ=ರಜೋಗುಣದ ಆವರಿಸಲ್ಪಟ್ಟಾತನಾಗಿ ಸರ್ವಜಗತ್ =ಸಮಸ್ತ ಲೋಕವನು ಅಸೃಜತ್=ಸೃಜಿಸಿದನು. ತಥಾ=ಹಾಂಗೆ ಕೃತಂ= ಮಾಡಲ್ಪಟ್ಟಂಥಾ ಸರ್ಗಂ ವೈ=ಸೃಷ್ಟಿಯನೇ ಪಂಚಧಾ=ಐವರು ಕೌಮಾರಂ ಚ=ಪುತ್ರರಸಂಬಂಧವಹಂಥಾದನಾಗಿ ಅಕರೋತ್=ಮಾಡಿದನು. ||೫||

ನೈಷ್ಕರ್ಮೇಣ=ಕರ್ಮವಿಲ್ಲದೇ ಇಹದರಿಂದ ಸನಂದೇ ದೇವೇ = ಸನಂದದೇವನು ಸನಾತನೇ=ಸನಾತ[ನ]ನು [2][ಸನಕೇ ಚ= ಸನಕನೂ][2] ಗತೇ ಸತಿ = ಹೋಗುತ್ತಂವಿರಲು, ಜಗತ್ಕರ್ತಾ ಚ=ಲೋಕಕ್ಕೆ ಕರ್ತನಹಂಥಾ ಬ್ರಹ್ಮನು ಪುನಃ =ಮರಳಿ ಸಾಧಕಾನ್ = ಸೃಷ್ಟಿಗೆ ಸಾಧಕರಹಂಥಾವರುಗಳನು ಅಸೃಜತ್ = ನಿರ್ಮಿಸಿದನು. ಸೃಜ—ವಿಸರ್ಗೇ ಇತಿ ಧಾತುಃ. ||೬||

---

[1] ನೈಷ್ಕರ್ಮಣಾ (ಘ) [2] ಲುಪ್ತ (ಕ,ಖ,ಗ,ಚ)

ಏಕಾರ್ಣವಮಭೂತ್ಸರ್ವಂ [1]ನ ಮಯಾ ಸಮ ಇತ್ಯಥ[1]
ಅವಗಮ್ಯ ಹರಿಶ್ಚಾಗಾತ್ ಬ್ರಹ್ಮಣಸ್ತಸ್ಯ ಚಾಂತಿಕಮ್ ||೧೪||

ಮಹಾಮೋಹಂ ಜಗತ್ ಕ್ಷೋಭಂ ಕ್ರೋಧೇನಾದೀಪ್ತಲೋಚನಮ್
ತಂ ದೃಷ್ಟ್ವಾ ಭಗವಾನ್ ಬ್ರಹ್ಮಾ ಕಸ್ತ್ವಮಿತ್ಯಾಹ ಮೋಹಿತಃ ||೧೫||

ನಿಶಮ್ಯ ವಚನಂ ಪ್ರಾಹ ಬ್ರಹ್ಮಣಸ್ತು ಜನಾರ್ದನಃ
[2]ಕೃತ್ಸ್ನಸ್ಯಾಹಂ[2] ಪ್ರಭುಃ ಕರ್ತಾ ಜಗತಶ್ಚೇ*ತ್ಯಜ* ಶೃಣು ||೧೬||

ಜಗತ್ = ಸಮಸ್ತ ಲೋಕವೂ ಏಕಾರ್ಣವಂ=ಏಕಾರ್ಣವವು ಅಭೂತ್ = ಆಯಿತ್ತು. ಅಥ=ಅನಂತರದಲ್ಲಿ ಹರಿಶ್ಚ= ಪುರುಷೋತ್ತಮನೂ ಮಯಾ= ಎನ್ನೊಡನೆ ಸಮಃ=ಸಮಾನನು ನ=ಇಲ್ಲ. ಇತಿ=ಹೀಂಗೆಂದು ಅವಗಮ್ಯ =ನಿಶ್ಚೈಸಿ ತಸ್ಯ ಬ್ರಹ್ಮಣಃ=ಆ ಬ್ರಹ್ಮನ ಅಂತಿಕಂ ಚ=ಸಮೀಪವನು ಅಗಾತ್ =ಎಯ್ದಿದನು. ||೧೩-೧೪||

ಮಹಾಮೋಹಂ = ಮಾಯೆಯಿಂದೆ ಅತ್ಯಂತ ಮೋಹಿತನಾದಂಥಾ ಜಗತ್ ಕ್ಷೋಭಂ=ಲೋಕವನು ನಡುಗಿಸುತ್ತಿದ್ದಂಥಾ ಕ್ರೋಧೇನ=ಕ್ರೋಧದಿಂದ ಆದೀಪ್ತ-ಲೋಚನಂ = ಎಲ್ಲಾ ಕಡೆಯಲು ಜ್ವಲಿಸಲ್ಪಟ್ಟ ಕಣ್ಣುಗಳನುಳ್ಳಂಥಾ ತಂ = ಆ ಮಹಾವಿಷ್ಣುವನು ದೃಷ್ಟ್ವಾ = ಕಂಡು ಭಗವಾನ್ = ಭಗವಾನ್ನುವಹಂಥಾ ಬ್ರಹ್ಮಾ=ಬ್ರಹ್ಮನು ತ್ವಂ=ನೀನು ಕಃ= ಆವಾತನು? ಇತಿ = ಹೀಗೆಂದು ಮೋಹಿತಃ=ಮಾಯಾಮೋಹಿತನಾಗಿ ಆಹ=ನುಡಿದನು. ||೧೫||

ಬ್ರಹ್ಮಣಃ = ಬ್ರಹ್ಮನ ವಚನಂ ತು = ವಾಕ್ಯವನು ನಿಶಮ್ಯ = ಕೇಳಿ ಜನಾರ್ದನಃ =ವಿಷ್ಣು ಪ್ರಾಹ=ನುಡಿದನು. ಕೃತ್ಸ್ನಸ್ಯ = ಸಮಸ್ತವಹಂಥಾ ಜಗತಶ್ಚ=ಲೋಕಕ್ಕೆಯೂ ಅಹಂ=ನಾನು ಕರ್ತಾ = ಒಡೆಯನು. ಪ್ರಭುಃ =ಸಮರ್ಥನು ಇತಿ=ಹೀಂಗೆಂದು ಭೋ ಅಜ= ಎಲೈ ಬ್ರಹ್ಮನೇ ಶೃಣು= ಕೇಳು. ||೧೬||

---

1 ಜಗತ್ಸ್ಥಾವರಜಂಗಮಂ (ಘ)
2 ಕೃಚ್ಛ್ರಸ್ಯಾಹಂ (ಕ,ಖಚ) ಕೃತ್ಸ್ನಸ್ಯ — ಸಮಸ್ತವಹಂಥಾ (ಕ.ಖ.ಚ) ವ್ಯಾಖ್ಯಾ
* ದಜ (ಘ)

ಪ್ರಣಮ್ಯ [1]ತಥ್ಯಮಿತ್ಯೇನಂ[1] ಜಜಲ್ಪುರ್ಮೋಹಿತಾ ಭೃಶಮ್
ಪುತ್ರೈಸ್ಸಂಜಲ್ಪಿತಂ ಶ್ರುತ್ವಾ [2]ಮರೀಚ್ಯಾದ್ಯೈ[2]ರ್ಮಹಾಮುನೇ ! ೧೧

ಮೋಹಿತಃ ಸೋಽಪಿ ಸರ್ವಜ್ಞೋ ನ ವಿವೇದ ಮಹೇಶ್ವರಮ್
ಏವಂ ವೈ ಭಗವಾನ್ ಬ್ರಹ್ಮಾ ಸೋಽಹಂಕಾರೇಣ ಪೀಡಿತಃ ||೧೨||

ಅಮನ್ಯತ ಜಗತ್ಯಸ್ಮಿನ್ ಮಮ ನೈವ ಸಮಸ್ತ್ವಿತಿ
ಬ್ರಹ್ಮಣಶ್ಚೇತಸಿ ಯದಾ ಹ್ಯಸತ್ಯಂ ವರ್ತತೇ [3]ಜಗತ್[3] ||೧೩||

= ಇಲ್ಲ ಇತಿ = [4]ಹೀಗೆಂದೆನಲಾಗಿ[4] ತಸ್ಯ = ಆ ಬ್ರಹ್ಮನ ವಚಃ = ವಾಕ್ಯವನು ಪ್ರಜಾನಾಂ ಪತಯಃ = ಪ್ರಜೆಗಳಿಗೆ ಒಡೆಯರಹ ನವಬ್ರಹ್ಮರುಗಳು ಶ್ರುತ್ವಾ = ಕೇಳಿಯೂ ತತಃ = ಅಪ್ಪರ ಮೇಲೆ. ||೧೦||

ತಥ್ಯಮಿತಿ = ಸತ್ಯವೆಂದು ಹೀಂಗೆ ಪ್ರಣಮ್ಯ = ನಮಸ್ಕರಿಸಿ ಏವಂ = ಈ ಪ್ರಕಾರದಲ್ಲಿ ಭೃಶಂ = ಅತ್ಯಂತ ಮೋಹಿತಾಃ = ಮೋಹಿತರುಗಳಾಗಿ ಜಜಲ್ಪುಃ = ನುಡಿದರು. ಭೋ ಮಹಾಮುನೇ ! = ಎಲೈ ಮಹಾಮುನಿಯಹಂಥಾ ಸನತ್ಕುಮಾರನೇ ! ಮರೀಚ್ಯಾದ್ಯೈಃ = ಮರೀಚಿ ಮೊದಲಾಗಿದ್ದಂಥಾ ಪುತ್ರೈಃ = ಪುತ್ರರುಗಳಿಂದ ಸಂಜಲ್ಪಿತಂ = ನುಡಿದಂಥಾದನು ಶ್ರುತ್ವಾ = ಕೇಳಿ, ||೧೧||

ಸರ್ವಜ್ಞಃ = ಸರ್ವಜ್ಞನಹಂಥಾ ಸೋಽಪಿ = ಆ ಬ್ರಹ್ಮನು ಮೋಹಿತಃ = ಮಾಯೆಯಿಂದ ಮೋಹಿತನಾಗಿ ಮಹೇಶ್ವರಂ = ಪರಮೇಶ್ವರನನು ನ ವಿವೇದ = ಅರಿದುದಿಲ್ಲ. ವಿದ— ಜ್ಞಾನೇ ಇತಿ ಧಾತುಃ. ಏವಂ ವೈ = ಈ ಪ್ರಕಾರದಲ್ಲಿಯೇ ಭಗವಾನ್ = ಭಗವಾನ್ನುವಹಂಥಾ ಸ ಬ್ರಹ್ಮಾ = ಆ ಬ್ರಹ್ಮನು ಅಹಂಕಾರೇಣ = ಗರ್ವದಿಂದ ಪೀಡಿತಃ = ಬಾಧಿಸಲ್ಪಟ್ಟವನಾದನು. ||೧೨||

ಅಸ್ಮಿನ್ ಜಗತಿ = ಈ ಲೋಕದಲ್ಲಿ ಮಮ = ಎನಗೆ ಸಮಸ್ತು = ಸಮಾನನಾದವನು ನೈವ = ಇಲ್ಲ. ಇತಿ = ಹೀಗೆಂದು ಅಮನ್ಯತ = ಬಗೆದನು. ಯದಾ = ಆವಾಗ ಬ್ರಹ್ಮಣಃ = ಬ್ರಹ್ಮನ ಚೇತಸಿ = ಚಿತ್ತದಲ್ಲಿ ಅಸತ್ಯಂ = ಹುಸಿ ವರ್ತತೇ = ವರ್ತಿಸಲುಪಟ್ಟಿತ್ತು, ಹಿ = ಆವುದಾನೊಂದು ಕಾರಣವಾಗಿ ಸರ್ವಂ

---

[1] ತಥ್ಯಮಿತ್ಯೇವ (ಘ) [2] ಮರೀಚಾ (ಕ)
[3] ದ್ವಿಜ (ಘ) [4] ಹೀಂಗೆನಲಾಗಿ (ಕ)

ಶೃಣು ಸತ್ಯಂ ಚತುರ್ವಕ್ತ್ರ ಸರ್ವದೇವವರೋ ಹ್ಯಹಮ್
ಕರ್ತಾ ನೇತಾ ಚ ಹರ್ತಾ ಚ ನ ಮಯಾಽಸ್ತಿ ಸಮೋ ವಿಭುಃ ||೨೦||

ನಿಶಮ್ಯ ವಚನಂ ತಸ್ಯ ಹರೇಃ ಶ್ರೋತ್ರವಿದಾರಣಮ್
ಜಜ್ವಾಲ ಹವಿಷಾ ವಹ್ನಿರ್ಯಥಾ ಪದ್ಮೋದ್ಭವಃ ಸ್ವಯಮ್ ||೨೧||

ತಯೋಸ್ಸಮಭವದ್ಯುದ್ಧಂ ಸುಘೋರಂ ರೋಮಹರ್ಷಣಮ್
ಪ್ರಳಯಾರ್ಣವಮಧ್ಯೇ ತು ಪ್ರಳಯಾರ್ಣವವರ್ಧನಮ್[1] ||೨೨||

ತತ್ತ್ವಪ್ರಬೋಧಾಯ ತಯೋರ್ಯುದ್ಧಪ್ರಶಮನಾಯ ಚ
ಶೈವಂ ತದಾ ಪರಂಜ್ಯೋತಿಃ ಪ್ರಾದುರಾಸೀದ್ಧಿತಾಯ ತತ್ ||೨೩||

ಭೋ ಚತುರ್ವಕ್ತ್ರ = ಎಲೈ ಚತುರ್ಮುಖನಹಂಥಾ ಬ್ರಹ್ಮನೇ! ಸತ್ಯಂ = ಸತ್ಯವಾಕ್ಯವನು ಶೃಣು = ಕೇಳು. ಅಹಂ = ನಾನು ಸರ್ವದೇವವರಃ = ಸಮಸ್ತ ದೇವರ್ಕಳಿಗೆ ಶ್ರೇಷ್ಠನು. ಕರ್ತಾ = ಕರ್ತನು. ನೇತಾ = ನಿಯಾಮಕನಹಂಥಾತನು ಪಾಲಕನೆಂಬುದರ್ಥ. ಹರ್ತಾ ಚ = ಸಂಹರಿಸುವಾತನು. ಹಿ = ಆವುದಾನೊಂದು ಕಾರಣವಾಗಿ ಮಯಾ = ಎನ್ನೊಡನೆ ಸಮಃ = ಸಮಾನನಹಂಥಾ ವಿಭುಃ — ಸಮರ್ಥನಹಂಥಾ ದೇವನು ನಾಸ್ತಿ = ಇಲ್ಲ. ||೨೦||

ಶ್ರೋತ್ರವಿದಾರಣಂ = ಕಿವಿಗಳಿಗೆ ಕರ್ಕಶವಹಂಥಾ ತಸ್ಯ ಹರೇಃ = ಆ ಹರಿಯ ವಚನಂ = ವಾಕ್ಯವನು ನಿಶಮ್ಯ = ಕೇಳಿ ಪದ್ಮೋದ್ಭವಃ ಸ್ವಯಂ = ಬ್ರಹ್ಮ ತಾನೇ ಜಜ್ವಾಲ = ಉರಿದೆದ್ದನು. ಜ್ವಲ-ದೀಪ್ತಾವಿತಿ ಧಾತುಃ. ಕಥಮಿವ = ಆದು ಹೇಂಗೆಯಾ ಎಂದಡೆ, ಹವಿಷಾ = ಘೃತದಿಂದ ವಹ್ನಿರ್ಯಥಾ = ಅಗ್ನಿ ಏಹಗೋ ಅಹಗೆ. ||೨೧||

ತಯೋಃ = ಆ ಬ್ರಹ್ಮವಿಷ್ಣುಗಳಿಗೆ ಪ್ರಳಯಾರ್ಣವಮಧ್ಯೇ ತು = ಪ್ರಳಯ ಕಾಲದ ಸಮುದ್ರಮಧ್ಯದಲ್ಲಿಯೂ ಪ್ರಳಯಾರ್ಣವವರ್ಧನಂ = ಪ್ರಳಯದ ಸಮುದ್ರವ ಹೆಚ್ಚಿಸುತ್ತಂವಿದ್ದಂಥಾ ಸುಘೋರಂ = ಅತಿ ಭಯಂಕರವಹಂಥಾ ರೋಮಹರ್ಷಣಂ = ರೋಮಾಂಚನವಹಂಥಾ ಯುದ್ಧಂ = ಕಾಳಗವು ಸಮಭವತ್ = ಆಯಿತ್ತು. ಸಮ್ ಪೂರ್ವಕವಹ ಭೂ–ಸತ್ತಾಯಾಂ ಎಂಬ ಧಾತು. ಲಙ್ ಪರಸ್ಮೈ ಪದವು. ||೨೨||

ತದಾ = ಅವಾಗ ತಯೋಃ = ಆ ಬ್ರಹ್ಮವಿಷ್ಣುಗಳ ಯುದ್ಧಪ್ರಶಮನಾಯ = ಯುದ್ಧವ ನಿಲಿಸಲೋಸ್ಕರ ತತ್ತ್ವಪ್ರಬೋಧಾಯ ಚ = ತತ್ತ್ವಜ್ಞಾನವ

---

[1] ಸನ್ನಿಭಂ (ಘ)

ವರ್ತತೇಃ ಚೇತಸಿ [1]ಯದಾಽಹ್ಯಸತ್ಯಂ ತವ ಪದ್ಮಜ
ಏಕಾರ್ಣವಮಭೂತ್ಸರ್ವಂ [2]ಜಗಚ್ಚೈತಚ್ಚರಾಚರಮ್ ||೧೭||

ಸತ್ಯೇ ಪ್ರತಿಷ್ಠಿತಾಃ ಲೋಕಾಃ ಸತ್ಯೇ ಧರ್ಮಃ ಪ್ರತಿಷ್ಠಿತಃ
ಸತ್ಯೇ ಪ್ರತಿಷ್ಠಿತಂ ಜ್ಞಾನಂ [3]ಮುಕ್ತಿಸ್ಸತ್ಯೇ ಪ್ರತಿಷ್ಠಿತಾ ||೧೮||

ತಸ್ಮಾತ್ಸತ್ಯೇ ಚತುರ್ವಕ್ತ್ರ ತಿಷ್ಠನ್ನಾರ್ಹಸಿ [4]ಚೇದೃಶಮ್[4]
ಕರ್ತುಂ ನಾರ್ಹಸಿ ಸಮ್ಮೋಹಾದಸತ್ಯೇ ಪ್ರ[5]ವಣಂ[6]ಮನಃ ||೧೯||

ಭೋ ಪದ್ಮಜ = ಎಲೈ ಕಮಲಜನೇ! ಹಿ = ಆವುದಾನೊಂದು ಕಾರಣವಾಗಿ ತವ = ನಿನ್ನ ಚೇತಸಿ = ಚಿತ್ತದಲ್ಲಿ ಯದಾ = ಆವಾಗವೂ ಅಸತ್ಯಂ = ಅಸತ್ಯವು ವರ್ತತೇ = ವರ್ತಿಸುತಿರಲುಪಟ್ಟಿತ್ತು. ವೃತು–ವರ್ತನೇ ಇತಿ ಧಾತುಃ. ತದಾ = ಆವಾಗ (ಆಗ) ಚರಾಚರಂ = ಚರಾಚರಾತ್ಮಕವಹಂಥಾ ಏತತ್ = ಈ ಸರ್ವಂ = ಸಮಸ್ತ ಜಗಚ್ಚ = ಲೋಕವೂ ಏಕಾರ್ಣವಂ = ಏಕಾರ್ಣವವು ಅಭೂತ್ = ಆಯಿತ್ತು. ||೧೭||

ಲೋಕಾಃ = ಲೋಕಂಗಳು ಸತ್ಯೇ = ಸತ್ಯದಲ್ಲಿ ಪ್ರತಿಷ್ಠಿತಾಃ = ಪ್ರತಿಷ್ಠಿಸಲ್ಪಟ್ಟವು. ಧರ್ಮಃ = ಧರ್ಮವು ಸತ್ಯೇ = ಸತ್ಯದಲ್ಲಿ ಪ್ರತಿಷ್ಠಿತಃ = ಪ್ರತಿಷ್ಠಿಸಲ್ಪಟ್ಟಿತ್ತು. ಜ್ಞಾನಂ = ಜ್ಞಾನವು ಸತ್ಯೇ = ಸತ್ಯದಲ್ಲಿ ಪ್ರತಿಷ್ಠಿತಂ = ಪ್ರತಿಷ್ಠಿಸಲ್ಪಟ್ಟಿತ್ತು. ಮುಕ್ತಿಃ = ಮುಕ್ತಿಯು ಸತ್ಯೇ = ಸತ್ಯದಲ್ಲಿ ಪ್ರತಿಷ್ಠಿತಾ = ಪ್ರತಿಷ್ಠಿಸಲ್ಪಟ್ಟಿತ್ತು ||೧೮||

ಭೋ ಚತುರ್ವಕ್ತ್ರ = ನಾಲ್ಕು ಮುಖವನುಳ್ಳ ಎಲೈ ಬ್ರಹ್ಮನೇ! ತಸ್ಮಾತ್ = ಅದು ಕಾರಣವಾಗಿ ಸತ್ಯೇ = ಸತ್ಯದಲ್ಲಿ ತಿಷ್ಠನ್ = ಇಹಂಥಾತನಾಗಿ ನಾರ್ಹಸಿ = ಯೋಗ್ಯನಾಗುತ್ತಿರೆ. ಸಮ್ಮೋಹಾತ್ = ಅಜ್ಞಾನದ ದೆಸೆಯಿಂದ ಅಸತ್ಯೇ ಪ್ರವಣಂ = ಅಸತ್ಯದಲ್ಲಿ ಮುಳುಗಲುಪಟ್ಟಂಥಾ ಮನಃ = ಮನಸ್ಸನು ಈದೃಶಂ ಚ = ಈ ಪ್ರಕಾರವಹ ಸತ್ಯದಲ್ಲಿ ಪ್ರತಿಷ್ಠಾಪಿಸಲುಪಟ್ಟಂಥಾತನಾಗಿ ಕರ್ತುಂ = ಮಾಡಲು ನಾರ್ಹಸಿ = ಯೋಗ್ಯನಾಗುತ್ತಿರೆ. ||೧೯||

---

1 ಯಥಾ (ಘ) 2 ಜಗದೇತ (ಘ)
3 ಸತ್ಯೇ ಮುಕ್ತಿಃ (ಘ) 4 ಈದೃಶಃ (ಘ)
5 ಅಸತ್ಯಪ್ರವಣಂ (ಖ) 6 ಷ್ಠಿ (ಖ)

ಸೋಽಪ್ಯನೇಕೇನ ಕಾಲೇನ [1]ಪಪಾತಾಧಃ ಪಿತಾಮಹಃ
ಪರಂ ವೈರಾಗ್ಯಮಾಪನ್ನಃ ಪದ್ಮನಾಭಸ್ಯ ಸನ್ನಿಧೌ ||೨೭||

ಅದೃಷ್ಟ್ವೈವ ವಿಸ್ಮಯಂ [2]ದೇವೌ ಜಗ್ಮತುಃ ಪರಮಾತ್ಮನಃ
ಆದ್ಯಂತಂ ಪರಮಾತ್ಮಾನೌ ಸ್ವೇಚ್ಛಯಾ ಧೃತವಿಗ್ರಹೌ ||೨೮||

ತತಸ್ತು ತುಷ್ಟುವತು[3]ಶ್ಚೈವ ಲಿಂಗಮೂರ್ತಿಂ ಮಹೇಶ್ವರಮ್
ಶಿವಾಜ್ಞಾಕಾರಿಣಃ = ಶಿವನ ಆಜ್ಞೆಯಲ್ಲಿ ನಡೆವುತ್ತಿದ್ದಂಥಾ ದಾಂತಾಃ = ಇಂದ್ರಿಯ ಜಯವನುಳ್ಳಂಥಾ ಸಚ್ಛಾಸ್ತ್ರರುಚಯಃ = ಒಪ್ಪುತ್ತಂವಿದ್ದ ಶಾಸ್ತ್ರದಲ್ಲಿ ಪ್ರೀತಿಯನುಳ್ಳವರುಗಳಾಗಿ ಯೇ ಚ=ಆರು ಕೆಲಂಬರುಗಳುಂಟು ತೇ=ಅವರುಗಳು ಅಖಿಲೇಷು = ಸಮಸ್ತವಹಂಥಾ ಭುವನೇಷ್ವಪಿ=ಲೋಕಂಗಳಲ್ಲಿಯೂ ಭೂರಿ-ಭೋಗಭುಜಃ= ಬಹಳವಹಂಥಾ ಭೋಗಂಗಳ ಭೋಗಿಸುವವರುಗಳು ಸ್ಯುಃ = ಅಹರು. ಅಸ-ಭುವಿ ಇತಿ ಧಾತುಃ. ||೨೯||

ತಸ್ಮಾತ್=ಅದು ಕಾರಣವಾಗಿ ಅತಂದ್ರಿತಾಃ= ಮರವೆಯಿಲ್ಲದವರುಗಳಾಗಿ ತಂ ಗೌರೀಶಮೇವ=ಆ ಪಾರ್ವತೀಪತಿಯಹಂಥಾ ಶಿವನನ್ನೇ ಸ್ತುತಿಪೂಜೋಪ-ಹಾರಾದ್ಯೈಃ=ಸ್ತೋತ್ರ ಪೂಜೆ ಉಪಹಾರ ಮೊದಲಾದಂಥಾವರಿಂದ ಪೂಜಯಧ್ವಂ =ಪೂಜಿಸಿ. ಕಥಮಿವ=ಅದು ಹೇಂಗೆಯೂ ಎಂದರೆ ಸೇವಕಾಃ=ಸೇವಕರುಗಳು ರಾಜಾನಮಿವ=ಅರಸನಿಗೆ ಹೇಗೆ ಹಾಗೆ (ಎಹಗಹಗೆ). ||೩೦||
ದುರ್ವಾಸಾ ಉವಾಚ=ದುರ್ವಾಸನು ನುಡಿದನು.

ಕೀರ್ತಿಮಾನ್=ಕೀರ್ತಿಯನುಳ್ಳಂಥಾ ಅಸೌ ಪ್ರಜಾಪತಿಃ =ಈ ಬ್ರಹ್ಮನು ಪ್ರಜಾಃ=ಪ್ರಜೆಗಳನು ಸಮುತ್ಪಾದ್ಯ=ಸೃಷ್ಟಿಮಾಡಿ ತದಾ=ಆಗ ಏವಂ =

---

[1] ಸ್ತ (ಫ) [2] ಷು ಚ (ಫ) [3] ಸಮುತ್ಸೃಜ್ಯ (ಫ) * ಇಂದ್ರವಂಶ ವೃತ್ತ॥

[4] ತೇ ಎಂಬ ಪಾಠ (ಕ ಖ ಗಚ) ವ್ಯಾಖ್ಯಾನಗಳಲ್ಲಿ ಬಂದಿದ್ದರೂ ಮೂಲದಲ್ಲಿಲ್ಲ. ಕೇಚಿತ್ ಎಂಬುದೇ ಬಂದಿದೆ. (ಫ)ದಲ್ಲಿ 'ಸ್ತೇಚ' ಎಂದು ಬಂದಿದೆಯಾದರೂ ಕೇಚಿತ್ ಬಿಟ್ಟು ಹೋಗಿದೆ. ಅರ್ಥಕ್ಕೆ 'ತೇ' ಎಂಬ ಪಾಠ ಇರಬೇಕು.

ದೇವರ್ಷಿಭಿರ್ವಂದಿತಪಾದಪಂಕಜೋ
ಜಗಾಮ ವೈರಾಜಮಥಾತ್ಮನಃ [1]ಪದವ್[1] ||೩೧||

*ಕಸ್ತೇನ ದೇವಃ ಸದೃಶೋಽಸ್ತಿ ಜೈಮಿನೇ
ಮಹೇಶ್ವರೇಣೇಂದುಭೃತಾಂಧಕದ್ವಿಷಾ
ಕ್ರುದ್ಧೋಽಪಿ ರಾಜ್ಯಂ ಪ್ರದದಾತಿ ಯೋ ನೃಣಾಂ
[2]ಮಾಹೇಶ್ವರಾಣಾಂ[2] ಸ್ವಪದಂ ಚ ತುಷ್ಟಧೀಃ ||೩೨||

*ತಸ್ಮಿನ್ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ
ಧರ್ಮಾರ್ಥಕಾಮೈರಲಮಲ್ಪಕಾಸ್ತೇ |

ಈ ಪ್ರಕಾರದಲ್ಲಿ ಸಮಾದಿಶ್ಯ ಚ = ಆಜ್ಞಾಪಿಸಿಯೂ ದೇವರ್ಷಿಭಿಃ = ದೇವರ್ಕಳು ಋಷಿಗಳಿಂದ ವಂದಿತಪಾದಪಂಕಜಃ = ನಮಸ್ಕರಿಸಿಕೊಳಲ್ಪಟ್ಟ ಪಾದಕಮಲವನು ಳ್ಳಾತನಾಗಿ ಅಥ = ಅನಂತರದಲ್ಲಿ ವೈರಾಜಂ = ಒಪ್ಪುತ್ತಿಂವಿದ್ದಂಥಾ ಆತ್ಮನಃ = ತನ್ನ ಪದಂ = ಸ್ಥಾನವನು ಜಗಾಮ = ಎಯ್ದಿದನು. ||೩೧||

ಭೋ ಜೈಮಿನೇ! = ಎಲೈ ಜೈಮಿನಿ ಮುನೀಶ್ವರನೇ! ಇಂದುಭೃತಾ = ಚಂದ್ರನ ಧರಿಸಿದಂಥಾ ಅಂಧಕದ್ವಿಷಾ = ಅಂಧಕಾಸುರನ ಶತ್ರುವಹಂಥಾ ತೇನ ಮಹೇಶ್ವರೇಣ = ಆ ಶಿವನೊಡನೆ ಸದೃಶಃ = ಸಮಾನವಹಂಥಾ ದೇವಃ = ದೇವನು ಕಃ = ಆವಾತನು ಅಸ್ತಿ = ಉಂಟು. ಆವದೇವನೂ ಸಮಾನವಿಲ್ಲವೆಂಬುದರ್ಥ. ಯಃ = ಆವನಾನೊಬ್ಬ ಪರಮೇಶ್ವರನು ಕ್ರುದ್ಧೋಽಪಿ = ಕೋಪಿಸಿದವನಾದರೂ ನೃಣಾಂ = ಮನುಷ್ಯರುಗಳಿಗೆ ರಾಜ್ಯಂ = ರಾಜ್ಯವನು ಪ್ರದದಾತಿ = ಕೊಡುತ್ತಿಹನು. ತುಷ್ಟಧೀಶ್ಚ = ಸಂತೋಷಿಸಲುಪಟ್ಟ ಚಿತ್ತವನುಳ್ಳಾತನಾಗಿಯೂ ಮಾಹೇಶ್ವರಾಣಾಂ = ಶಿವಭಕ್ತರುಗಳಿಗೆ ಸ್ವಪದಂ = ತನ್ನ ಸ್ಥಾನವನು ಪ್ರದದಾತಿ = ಕೊಡುತ್ತಿಹನು ಪರಮೇಶ್ವರನು ತನ್ನ ಭಕ್ತರಿಗೆ ಮುನಿದನಾದರೆ ನರಲೋಕದಲ್ಲಿ ರಾಜ್ಯವ ಕೊಡುವನು. ಮೆಚ್ಚಿದನಾದರೆ ತನ್ನ ಲೋಕದಲ್ಲಿ ಪದವಿಯನು ಎಂಬುದರ್ಥ, ||೩೨||

ತಸ್ಮಿನ್ = ಆ ಪರಮೇಶ್ವರನು ಪ್ರಸನ್ನೇ ಸತಿ = ಪ್ರಸನ್ನನಾಗುತ್ತಿರಲು ಇಹ = ಇಲ್ಲಿ ಧರ್ಮಾರ್ಥಕಾಮೈಃ = ಧರ್ಮಾರ್ಥಕಾಮಂಗಳಿಂದ ಅಲಭ್ಯಂ = ಹಡೆಯಲು ಬಾರದೇ ಇದ್ದಂಥಾದ್ದು ಕಿಮಸ್ತಿ = ಏನುಂಟು? ಎಲ್ಲವೂ ಸುಲಭವೆಂಬುದರ್ಥ. ತೇ = ಆ ಚತುರ್ವಿಧಪುರುಷಾರ್ಥಂಗಳು ಅಲ್ಪಕಾಃ = ಅಲ್ಪಂಗಳೆನಿಸು

1 ಪರಂ (ಘ) 2 ಸಮಾಶ್ರಿತಾನಾಂ (ಘ) ಪಾಠಾಂತರ * ಉಪಜಾತಿ ವೃತ್ತ ||

ಸಮಾಶ್ರಿತೋ ದೇವವರಂ [1]ಮಹೇಶಂ[1]
ನಿಸ್ಸಂಶಯಂ ಮುಕ್ತಿಮವಾಪ್ಸ್ಯಸಿ ತ್ವಮ್ ||೩೩||

*ಇತಿ ಮುನಿಜನವೇದ್ಯಂ ನಿರ್ಗುಣಜ್ಞಪ್ತಿಮಾತ್ರಂ
ನಿರುಪಮಮಜಮೀಶಂ ನಿರ್ಗುಣಂ ನಿಷ್ಪ್ರಪಂಚಮ್
[2]ಅಲಮಮರಮಮೇಯಂ[2] ಬ್ರಹ್ಮ ಸದ್ಬೀಜಭೂತಂ
ತ್ರಿಭುವನಗುರುಮಾದ್ಯಂ ಜೈಮಿನೇ ಸಂಶ್ರಯೇಥಾಃ ||೩೪||

ಇತಿ [3]ಶ್ರೀನೀ[3]ಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮಸುಧಾರ್ಣವ-
ಪೂರ್ಣಚಂದ್ರಸ್ಯ ಗೊರಗೋ[4]ಡು[4]ಪುರವರಾಧೀಶ್ವರಮಲ್ಲಿಕಾರ್ಜುನಾ-
ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ನಾಟಭಾಷಾವಿವರಣೇ
ಶಿವಾಧಿಕ್ಯಕಥನೇ 'ಶಿವರಾಜ್ಯಕ್ರಮೋ ನಾಮ' ಏಕಾದಶೋಽಧ್ಯಾಯಃ

ಮವು. ತ್ವಂ=ನೀನು ದೇವವರಂ=ದೇವಶ್ರೇಷ್ಠನಹಂಥಾ ಮಹೇಶಂ=ಪರಮೇಶ್ವರನನು ಅಲಂ=ಲೇಸಾಗಿ ಸಮಾಶ್ರಿತಃ=ಆಶ್ರೈಸಲುಪಟ್ಟಾತನಾಗಿ ಮುಕ್ತಿಂ = ಮೋಕ್ಷವನು ಅವಾಪ್ಸ್ಯಸಿ=ಪಡೆವೆ, ನಿಸ್ಸಂಶಯಂ=ಸಂದೇಹವಿಲ್ಲ. ||೩೩||

ಇತಿ=ಈ ಪ್ರಕಾರದಲ್ಲಿ ಮುನಿಜನವೇದ್ಯಂ=ಋಷಿಜನಂಗಳಿಂದ ಅರಿಯಲು ಯೋಗ್ಯನಹಂಥಾ ನಿರ್ಗುಣಜ್ಞಪ್ತಿಮಾತ್ರಂ=ಗುಣರಹಿತವಹ ಜ್ಞಾನಸ್ವರೂಪವನುಳ್ಳಂಥಾ ನಿರುಪಮಂ=ಉಪಮಾರಹಿತನಾದಂಥಾ ಅಜಂ=ಜನನವಿಲ್ಲದೇ ಇದ್ದಂಥಾ ಈಶಂ=ಐಶ್ವರ್ಯವನುಳ್ಳಂಥಾ ನಿರ್ಗುಣಂ = ಸತ್ವರಜತಮೋಗುಣಂಗಳಿಲ್ಲದಂಥಾ ನಿಷ್ಪ್ರಪಂಚಂ= ಪ್ರಪಂಚವಿಲ್ಲದೇ ಇದ್ದಂಥಾ ಅಮರಂ = ಮರಣವಿಲ್ಲದೇ ಇದ್ದಂಥಾ ಅಮೇಯಂ = ಊಹಿಸಲು ಬಾರದೇ ಇದ್ದಂಥಾ ಬ್ರಹ್ಮ = ಪರಬ್ರಹ್ಮನಹಂಥಾ ಸದ್ಬೀಜಭೂತಂ= ಒಪ್ಪುತ್ತಂವಿದ್ದ ಬೀಜಸ್ವರೂಪನಾದಂಥಾ ಆದ್ಯಂ=ಮೊದಲಿಗನಹಂಥಾ ತ್ರಿಭುವನಗುರುಂ= ಮೂರು ಲೋಕಕ್ಕೆ ಗುರುವಹಂಥಾ ಪರಮೇಶ್ವರನನ್ನು ಭೋ ಜೈಮಿನೇ=ಎಲೈ ಜೈಮಿನಿಋಷೀಶ್ವರನೇ ! ಅಲಂ=ಲೇಸಾಗಿ ಸಂಶ್ರಯೇಥಾಃ =ಆಶ್ರೈಸು. ಶ್ರೀಞ್=ಸೇವಾಯಾಂ ಇತಿ ಧಾತುಃ. ಲಿಙಾತ್ಮನೇಪದ ಮಧ್ಯಮ ಪುರುಷೈಕವಚನ. ||೩೪||

---

[1] ಮಹೇಶ್ವರಂ (ಘ) [2] ಅಮರವರ ಮಮೇಯಂ (ಕ) ಮೂಲ ಮತ್ತು (ಘ)
[3] ಶ್ರೀಮನ್ನೀ (ಘ) [4] ಡ (ಖ) * ಮಾಲಿನೀವೃತ್ತ ||

ದ್ವಾದಶೋಽಧ್ಯಾಯಃ

(ಶಿವಾಜ್ಞಾಪ್ರಭಾವಃ)

*ಶೈವೇ ಧರ್ಮಸಂಹಿತಾಯಾಂ ಉಪಮನ್ಯುರುವಾಚ—

ಅತ್ಯಾಶ್ಚರ್ಯಮಿದಂ ಕೃಷ್ಣ ಶಂಭೋರಮಿತತೇಜಸಃ
[1]ಆಜ್ಞಾಮುಖಂ[1] ಶೃಣುಷ್ವೈತಚ್ಛ್ರುತಂ ಶ್ರುತಿಮುಖೇ ಮಯಾ ॥೧॥

ಬ್ರಹ್ಮಾದ್ಯಾಃ ಸ್ಥಾವರಾಂತಾಶ್ಚ ದೇವದೇವಸ್ಯ ಶೂಲಿನಃ
ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ ॥೨॥

ತೇಷಾಂ ಪತಿತ್ವಾದ್ವಿಶ್ವೇಶಃ ಶಿವಃ ಪಶುಪತಿಃ ಸ್ಮೃತಃ
ಮಲಮಾಯಾದಿಭಿಃ ಪಾಶೈಃ [2]ಸಂಬಧ್ನಾತಿ ಪಶೂನ್ ಪತಿಃ ॥೩॥

---

*ಶೈವೇ ಧರ್ಮಸಂಹಿತಾಯಾಂ ಉಪಮನ್ಯುರುವಾಚ = ಶೈವಪುರಾಣದಲ್ಲಿ ಧರ್ಮಸಂಹಿತೆಯಲ್ಲಿ ಹೇಳುತ್ತಿದ್ದುದು. ಉಪಮನ್ಯು ಮಹಾಋಷಿ ನುಡಿವುತ್ತಿದ್ದಾನು.

ಭೋ ಕೃಷ್ಣ = ಎಲೈ ಕೃಷ್ಣನೇ ! ಅಮಿತತೇಜಸಃ = ಹವಣಿಸಲುಬಾರದೇ ಇದ್ದ ತೇಜಸ್ಸನುಳ್ಳಂಥಾ ಶಂಭೋಃ = ಪರಮೇಶ್ವರನ ಅತ್ಯಾಶ್ಚರ್ಯಂ = ಅತ್ಯಂತ ಆಶ್ಚರ್ಯವಹಂಥಾ ಇದಂ = ಈ ಆಜ್ಞಾಮುಖಂ = ಆಜ್ಞೆಯ ಅತಿಶಯವನು ಶೃಣುಷ್ವ = ಕೇಳು. ಏತತ್ = ಈ ಆಜ್ಞೆಯ ಅತಿಶಯವು ಶ್ರುತಿಮುಖೇ = ವೇದದಲ್ಲಿ ಮಯಾ = ಎನ್ನಿಂದ ಶ್ರುತಂ = ಕೇಳಲ್ಪಟ್ಟಿತ್ತು. ॥೧॥

ಬ್ರಹ್ಮಾದ್ಯಾಃ = ಬ್ರಹ್ಮ ಮೊದಲಾದಂಥಾ[3] ಸ್ಥಾವರಾಂತಾಃ = ಸ್ಥಾವರ ಕಡೆಯಾದಂಥಾ ಸಂಸಾರವಶವರ್ತಿನಃ = ಸಂಸಾರದ ಆಧೀನದಲ್ಲಿ ವರ್ತಿಸುತ್ತಿದ್ದಂಥಾ ಪರುಗಳು ದೇವದೇವಸ್ಯ = ದೇವಶ್ರೇಷ್ಠನಹಂಥಾ ಶೂಲಿನಃ = ಪರಮೇಶ್ವರಗೆ ಪಶವಃ = ಪಶುಗಳೆಂದು ಪರಿಕೀರ್ತ್ಯಂತೇ = ಹೇಳಲ್ಪಡುತ್ತಿಹರು. ॥೨॥

ವಿಶ್ವೇಶಃ = ವಿಶ್ವಕ್ಕೆ ಒಡೆಯನಹಂಥಾ ಶಿವಃ = ಶಿವನು ತೇಷಾಂ = ಆ ಬ್ರಹ್ಮಾದಿಗಳಿಗೆ ಪತಿತ್ವಾತ್ = ಒಡೆಯನಹತನದ ದೆಸೆಯಿಂದ ಪಶುಪತಿಃ = ಪಶುಪತಿಯೆಂದು

---

* ಶೈವೇ ವಾಯುವೀಯಸಂಹಿತಾಯಾಂ (ಘ)

[1] ಆಜ್ಞಾಕೃತಂ (ಘ) ಪಾಠಾಂತರ [2] ಸ ಬಧ್ನಾತಿ (ಘ) [3] ಲಾಗಿದ್ದಂಥಾ (ಖ. ಚ)

ಸ ಏವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ
ಚತುರ್ವಿಂಶತಿತತ್ತ್ವಾನಿ ಮಾಯಾಕರ್ಮಗುಣಾ[1] ಅಪಿ ॥೪॥

ವಿಷಯಾ ಇತಿ ಕಥ್ಯಂತೇ ಪಾಶಾ ಜೀವನಿಬಂಧನಾಃ ॥೫॥

ಬ್ರಹ್ಮಾದಿಸ್ತಂಬಪರ್ಯಂತಾನ್ಪಶೂನ್ಬಧ್ವಾ ಮಹೇಶ್ವರಃ
ಪಾಶೈರೇತೈಃ ಪತಿರ್ದೇವಃ ಕಾರ್ಯಂ ಕಾರಯತಿ [2]ಸ್ವಯಮ್[2] ॥೬॥

ತಸ್ಯಾಜ್ಞಯಾ ಮಹೇಶಸ್ಯ ಪ್ರಕೃತಿಃ ಪುರುಷೋಚಿತಾಮ್
ಬುದ್ಧಿಂ ಪ್ರಸೂತೇ ಸಾ ಬುದ್ಧಿರಹಂಕಾರಮಹಂಕೃತಿಃ ॥೭॥

ಸ್ಮೃತಃ = ಹೇಳಲ್ಪಟ್ಟನು. ಪತಿಃ = ಒಡೆಯನಹಂಥಾ ಶಿವನು ಪಶೂನ್ = ಪಶು-ಪ್ರಾಣಿಗಳನು ಮಲಮಾಯಾದಿಭಿಃ = ಆಣವಮಲ ಮಾಯಾಮಲ ಮೊದಲಾದಂಥಾ ಪಾಶೈಃ = ಪಾಶಂಗಳಿಂದ ಸಂಬಧ್ನಾತಿ = ಲೇಸಾಗಿ ಕಟ್ಟುತ್ತಿಹನು. ಬಂಧ–ಬಂಧನೇ ಇತಿ ಧಾತುಃ. ॥೩॥

ಭಕ್ತ್ಯಾ = ಭಕ್ತಿಯಿಂದ ಸಮ್ಯಗುಪಾಸಿತಃ = ಲೇಸಾಗಿ ಸೇವೆಯ ಮಾಡಿಸಿಕೊಳಲುಪಟ್ಟಂಥಾ ಸ ಏವ = ಆ ಪರಮೇಶ್ವರನೇ ತೇಷಾಂ = ಆ ಪಶುಗಳ ಮೋಚಕಃ = ಬಿಡಿಸುವಾತನು ಚತುರ್ವಿಂಶತಿತತ್ತ್ವಾನಿ = ಇಪ್ಪತ್ತು ನಾಲ್ಕು ತತ್ತ್ವಂಗಳು ಮಾಯಾಕರ್ಮಗುಣಾ ಅಪಿ = ಮಾಯಾ ಸಂಬಂಧವಹ ಕರ್ಮದ ಗುಣಂಗಳು ವಿಷಯಾಃ = ವಿಷಯಂಗಳು ಜೀವನಿಬಂಧನಾಃ = ಜೀವನ ಕಟ್ಟುತ್ತಿದ್ದಂಥಾ ಪಾಶಾಃ – ಪಾಶಂಗಳೆಂದು ಇತಿ = ಈ ಪ್ರಕಾರದಲ್ಲಿ ಕಥ್ಯಂತೇ = ಹೇಳಲ್ಪಡುತ್ತಿಹವು. ॥೪–೫॥

ಪತಿಃ = ಒಡೆಯನಹಂಥಾ ದೇವಃ = ದೇವನಹಂಥಾ ಮಹೇಶ್ವರಃ = ಪರಮೇಶ್ವರನು ಬ್ರಹ್ಮಾದಿಸ್ತಂಬಪರ್ಯಂತಾನ್ = ಬ್ರಹ್ಮಮೊದಲಾಗಿ ತೃಣಕಡೆ-ಯಾದಂಥಾ ಪಶೂನ್ = ಪಶುಗಳನು ಏತೈಃ ಪಾಶೈಃ = ಈ ಪಾಶಂಗಳಿಂದ ಸ್ವಯಂ = ತಾನೇ ಬಧ್ವಾ = ಕಟ್ಟಿ ಕಾರ್ಯಂ = ಕಾರ್ಯವನು ಕಾರಯತಿ = ಮಾಡಿಸು-ತ್ತಿಹನು. ॥೬॥

ತಸ್ಯ ಮಹೇಶಸ್ಯ = ಆ ಪರಮೇಶ್ವರನ ಆಜ್ಞಯಾ = ಆಜ್ಞೆಯಿಂದ ಪ್ರಕೃತಿಃ = ಮಾಯೆ ಪುರುಷೋಚಿತಾಂ = ಆತ್ಮಂಗೆ ಉಚಿತವಹಂಥಾ ಬುದ್ಧಿಂ = ಬುದ್ಧಿಯನು ಪ್ರಸೂತೇ = ಹಡೆದಳು. ಸಾ ಬುದ್ಧಿಃ = ಆ ಬುದ್ಧಿಯು ಅಹಂಕಾರಂ =

---

[1] ಅಮೀ (ಫ) [2] ಸ್ವಕಮ್ (ಫ)

ಇಂದ್ರಿಯಾಣಿ ದಶೈಕಂ ಚ ತನ್ಮಾತ್ರಾಪಂಚಕಂ ತಥಾ
ಶಾಸನಾದ್ದೇವದೇವಸ್ಯ ಶಿವಸ್ಯ ಶಿವದಾಯಿನಃ ||೮||

ತನ್ಮಾತ್ರಾಣ್ಯಪಿ ತಸ್ಯೈವ ಶಾಸನೇನ ಮಹೀಯಸಾ
ಮಹಾಭೂತಾನ್ಯಶೇಷಾಣಿ ಭಾವಯಂತ್ಯನುಪೂರ್ವಶಃ ||೯||

ಬ್ರಹ್ಮಾದೀನಾಂ ತೃಣಾಂತಾನಾಂ ದೇಹಿನಾಂ ದೇಹಸಂಗತಿಮ್
ಮಹಾಭೂತಾನ್ಯಶೇಷಾಣಿ ಜನಯಂತಿ ಶಿವಾಜ್ಞಯಾ ||೧೦||

ಅಧ್ಯವಸ್ಯತಿ ವೈ ಬುದ್ಧಿರಹಂಕಾರೋಽಭಿಮನ್ಯತೇ
ಚಿತ್ತಂ ಚೇತಯತೇ ಚಾಪಿ ಮನಃ ಸಂಕಲ್ಪಯತ್ಯಪಿ ||೧೧||

ಅಹಂಕಾರವನು ಪ್ರಸೂತೇ = ಪಡೆಯಿತ್ತು. ಅಹಂಕೃತಿಃ = ಅಹಂಕಾರವು ದಶೈಕಂ = ಮನಸ್ಸು ಸಹಿತವಾಗಿ ಹನ್ನೊಂದು ಇಂದ್ರಿಯಾಣಿ ಚ = ಇಂದ್ರಿಯಂಗಳನು ತಥಾ = ಹಾಂಗೆ ತನ್ಮಾತ್ರಾಪಂಚಕಂ = ಆ ಇಂದ್ರಿಯಂಗಳಿಗೆ ಸ್ವರೂಪವಹಂಥಾ ವಿಷಯ ಪಂಚಕವನು ದೇವದೇವಸ್ಯ = ದೇವಶ್ರೇಷ್ಠನಹಂಥಾ ಶಿವದಾಯಿನಃ = ಮಂಗಳವನು ಮಾಡುತ್ತಿದ್ದಂಥಾ (ಕೊಡುತ್ತಿದ್ದಂಥಾ) ಶಿವಸ್ಯ = ಶಿವನ ಶಾಸನಾತ್ = ಆಜ್ಞೆಯ ದೆಸೆಯಿಂದ ಪ್ರಸೂತೇ = ಪಡೆಯಿತ್ತು. ||೭-೮||

ತನ್ಮಾತ್ರಾಣಿ = ಆ ಶಬ್ದಾದಿವಿಷಯಂಗಳು ತಸ್ಯ = ಆ ಪರಮೇಶ್ವರನ ಮಹೀಯಸಾ = ದೊಡ್ಡಿತ್ತಹಂಥಾ ಶಾಸನೇನೈವ = ಆಜ್ಞೆಯಿಂದವೇ ಅಶೇಷಾಣಿ = ಬಹಳವಹಂಥಾ ಮಹಾಭೂತಾನಿ ಅಪಿ = ಪಂಚಮಹಾಭೂತಂಗಳನು ಅನುಪೂರ್ವಶಃ = ಕ್ರಮಪೂರ್ವಕವಾಗಿ (ಪೂರ್ವತಪ್ಪದೆ) ಭಾವಯಂತಿ = ಹುಟ್ಟಿಸಿದ[2]ವು[2]. ||೯||

ಅಶೇಷಾಣಿ = ಸಮಸ್ತವಹಂಥಾ ಮಹಾಭೂತಾನಿ = ಪಂಚಮಹಾಭೂತಂಗಳು ವಾಜ್ಞಯಾ = ಶಿವನ ಆಜ್ಞೆಯಿಂದ ಬ್ರಹ್ಮಾದೀನಾಂ = ಬ್ರಹ್ಮ ಮೊದಲಾದಂಥಾ ತೃಣಾಂತಾನಾಂ = ತೃಣಕಡೆಯಾದಂಥಾ ದೇಹಿನಾಂ = ಪ್ರಾಣಿಗಳ ದೇಹಸಂಗತಿಂ ದೇಹಂಗಳ ಸಂಬಂಧವನು ಜನಯಂತಿ = ಹುಟ್ಟಿಸುತ್ತಿಹವು. ||೧೦||

ಬುದ್ಧಿರ್ವೈ = ಬುದ್ಧಿಯೇ ಅಧ್ಯವಸ್ಯತಿ = ನಿಶ್ಚೈಸಲ್ಪಡುತ್ತಿಹುದು. ಅಹಂಕಾರಃ = ಅಹಂಕಾರವು ಅಭಿಮನ್ಯತೇ = ಗರ್ವಿಸುತ್ತಿಹುದು. ಚಿತ್ತಮಪಿ = ಚಿತ್ತವು ಚೇತಯತೇ = ಚಿಂತಿಸುತ್ತಿಹುದು. ಮನೋಽಪಿ = ಮನಸ್ಸು ಸಂಕಲ್ಪಯತಿ = ಸಂಕಲ್ಪಿಸಲ್ಪಡುತ್ತಿಹುದು. ||೧೧||

---

[2] ರು (ಕ)

ಶ್ರೋತ್ರಾದೀನಿ ಚ ಗೃಹ್ಣಂತಿ ಶಬ್ದಾದೀನ್ವಿಷಯಾನ್ಪೃಥಕ್
ಸ್ವಾನೇವ ನಾನ್ಯಾನ್ ದೇವಸ್ಯ ದಿವ್ಯೇನಾಜ್ಞಾಬಲೇನ ವೈ ||೧೨||

ವಾಗಾದೀನ್ಯಪಿ ಯಾನ್ಯಾಸನ್ ತಾನಿ ಕರ್ಮೇಂದ್ರಿಯಾಣಿ ಚ
ಯಥಾ ಸ್ವಂ ಕರ್ಮ ಕುರ್ವಂತಿ ನಾನ್ಯತ್ಕಿಂಚಿಚ್ಛಿವಾಜ್ಞಯಾ ||೧೩||

ಶಬ್ದಾದಯೋಽಪಿ ಗೃಹ್ಯಂತೇ ಕ್ರಿಯಂತೇ ವಚನಾದಯಃ
ಅವಿಲಂಘ್ಯಾ ಹಿ ಸರ್ವೇಷಾಮಾಜ್ಞಾ, [1]ತಸ್ಯ ಗರೀಯಸೀ ||೧೪||

ಅವಕಾಶಮಶೇಷಾಣಾಂ ಭೂತಾನಾಂ ಸಂಪ್ರಯಚ್ಛತಿ
ಆಕಾಶಃ ಪರಮೇಶಸ್ಯ ಶಾಸನಾದೇವ ಸರ್ವಗಃ ||೧೫||

ಶ್ರೋತ್ರಾದೀನಿ=ಶ್ರೋತ್ರ ಮೊದಲಹ ಪಂಚೇಂದ್ರಿಯಂಗಳು ಸ್ವಾನ್ = ತಮ್ಮ ಸಂಬಂಧವಹಂಥಾ ಶಬ್ದಾದೀನ್=ಶಬ್ದ ಮೊದಲಾಗಿ ಇದ್ದಂಥಾ ವಿಷಯಾನೇವ = ವಿಷಯಂಗಳನೇ ದೇವಸ್ಯ = ಪರಮೇಶ್ವರನ ದಿವ್ಯೇನ = ಒಪ್ಪುತ್ತಿದ್ದಂಥಾ ಆಜ್ಞಾಬಲೇನ ವೈ = ಆಜ್ಞೆಯ ಬಲುಮೆಯಿಂದವೂ ಪೃಥಕ್ = ಬೇರೆ ಬೇರೆ ಗೃಹ್ಣಂತಿ=ಗ್ರಹಿಸುತ್ತಿಹವು. ಅನ್ಯಾನ್=ಮಿಕ್ಕಾದವನು ನ=ಗ್ರಹಿಸುವುದಿಲ್ಲ.

ವಾಗಾದೀನಿ=ವಾಕ್ಯ ಮೊದಲಾದಂಥಾ ಯಾನಿ=ಆವವು ಕೆಲವು ಕರ್ಮೇಂದ್ರಿಯಾಣ್ಯಪಿ = ಕರ್ಮೇಂದ್ರಿಯಂಗಳು ಆಸನ್ = ಆದವು ತಾನಿ ಚ = ಅವು ಶಿವಾಜ್ಞಯಾ=ಶಿವಾಜ್ಞೆಯಿಂದವು ಯಥಾ ಸ್ವಂ ಕರ್ಮ=ಕ್ರಮ ತಪ್ಪದೇ ತಮ್ಮ ಕೃತ್ಯವನು ಕುರ್ವಂತಿ =ಮಾಡುತ್ತಿಹವು. ಅನ್ಯತ್ ಕಿಂಚಿತ್=ಮತ್ತೊಂದಿಷ್ಟನ್ನು ನ=ನಾಡವು. ||೧೩||

ಶಬ್ದಾದಯೋಽಪಿ=ಶಬ್ದಸ್ಪರ್ಶರೂಪರಸಗಂಧಂಗಳು ಗೃಹ್ಯಂತೇ=ಗ್ರಹಿಸಲುಪಡುತ್ತಿಹವು. ವಚನಾದಯಃ=ವಾಕ್ಪಾಣಿಪಾದಪಾಯುಉಪಸ್ಥವೆಂಬ ಕರ್ಮೇಂದ್ರಿಯಂಗಳು ಕ್ರಿಯಂತೇ = ಮಾಡಲ್ಪಡುತ್ತಿಹವು. ತಸ್ಯ = ಆ ಪರಮೇಶ್ವರನ ಗರೀಯಸೀ=ಗುರುತ್ವವನುಳ್ಳಂಥಾ ಆಜ್ಞಾ=ಆಜ್ಞೆಯು ಸರ್ವೇಷಾಂ=ಸಮಸ್ತಕ್ಕೆಯೂ ಅವಿಲಂಘ್ಯಾ ಹಿ=ಮೀರಬಾರದಂಥಾದ್ದಲಾ ||೧೪||

ಸರ್ವಗಃ=ಸಮಸ್ತವನು ಎಯ್ದಿದಂಥಾ ಆಕಾಶಃ—ಆಕಾಶವು ಪರಮೇಶಸ್ಯ —ಪರಮೇಶ್ವರನ ಶಾಸನಾದೇವ — ಆಜ್ಞೆಯ ದೆಸೆಯಿಂದವೇ ಅಶೇಷಾಣಾಂ — ಸಮಸ್ತವಹಂಥಾ ಭೂತಾನಾಂ—ಪ್ರಾಣಿಗಳಿಗೆ ಅವಕಾಶಂ—ತೆರಪನು ಸಂಪ್ರಯಚ್ಛತಿ —ಕೊಡುತ್ತಿಹುದು. ||೧೫||

---

[1] ಶಂಭೋರ್ಗರೀಯಸೀ (ಘ)

[1]ಪ್ರಾಣಾದ್ಯೈರಾವಹಾದ್ಯೈಶ್ಚ[1] ಭೇದೈರಂತರ್ಹಿತಂ ಜಗತ್[2]
ಬಿಭರ್ತಿ ಸರ್ವಂ[3]ಶರ್ವಸ್ಯ[3] ಶಾಸನೇನ ಪ್ರಭಂಜನಃ ||೧೬||

ಹವ್ಯಂ ವಹತಿ ದೇವಾನಾಂ ಕವ್ಯಂ ಕವ್ಯಾಶಿನಾಮಪಿ
ಪಾಕಾದ್ಯಂ ಚ ಕರೋತ್ಯಗ್ನಿಃ ಪರಮೇಶ್ವರಶಾಸನಾತ್ ||೧೭||

ಸಂಜೀವನಾದ್ಯಂ ಸರ್ವಸ್ಯ ಕುರ್ವಂತ್ಯಾಪಶ್ಶಿವಾಜ್ಞಯಾ
[4]ವಿಶ್ವಂ ವಿಶ್ವಂಭರಾ ನಿತ್ಯಂ [4]ಧತ್ತೇ ವಿಶ್ವೇಶ್ವರಾಜ್ಞಯಾ ||೧೮||

ಪ್ರಭಂಜನಃ—ವಾಯು ಶರ್ವಸ್ಯ — ಪರಮೇಶ್ವರನ ಶಾಸನೇನ — ಆಜ್ಞೆಯಿಂದ ಪ್ರಾಣ್ಯಾದ್ಯೈಃ— ಪ್ರಾಣವಾಯು ಮೊದಲಾದಂಥಾ ಆವಹಾದ್ಯೈಃ *— ಎಲ್ಲಾ ಕಡೆಯಲು ಧರಿಸುಹ ಮೊದಲಾಗಿದ್ದಂಥಾ ಭೇದೈಶ್ಚ — ಭೇದಂಗಳಿಂದವು [ಆವಹಪ್ರವಹ ಇತ್ಯಾದಿ ವಾಯುಪ್ರಭೇದಂಗಳಿಂದ] ಅಂತರ್ಹಿತಂ — ಆ ಬ್ರಹ್ಮಾಂಡದೊಳಗಿದ್ದಂಥಾ ಸರ್ವಂ—ಸಮಸ್ತವಹಂಥಾ ಜಗತ್—ಲೋಕವನು ಬಿಭರ್ತಿ—ಧರಿಸುತ್ತಿಹನು. ||೧೬||

ಅಗ್ನಿಃ—ಅಗ್ನಿಯು ಪರಮೇಶ್ವರಶಾಸನಾತ್— ಪರಮೇಶ್ವರನ ಆಜ್ಞೆಯ ದೆಸೆಯಿಂದ ದೇವಾನಾಂ—ದೇವತೆಗಳಿಗೆ ಹವ್ಯಂ — ಹವಿಸ್ಸನು ವಹತಿ — ಎಯ್ದಿಸುತ್ತಿಹನು. ಕವ್ಯಾಶಿನಾಂ—ಪಿತೃಗಳಿಗೆ ಕವ್ಯಮಪಿ—ಕವ್ಯಾನ್ನವನು ಎಯ್ದಿಸುತ್ತಿಹನು ಪಾಕಾದ್ಯಂಚ—ಪಾಕ ಪ್ರಯತ್ನ ಮೊದಲಾದಂಥಾದನು ಕರೋತಿ—ಮಾಡುತ್ತಿಹನು.

ಆಪಃ = ಉದಕಂಗಳು ಶಿವಾಜ್ಞಯಾ = ಶಿವಾಜ್ಞೆಯಿಂದ ಸರ್ವಸ್ಯ = ಸಮಸ್ತಲೋಕಕ್ಕೆ ಸಂಜೀವನಾದ್ಯಂ = ಜೀವವನುಳುಹುವ ಮೊದಲಾದಂಥಾದನು ಕುರ್ವಂತಿ = ಮಾಡುತ್ತಿಹವು. ವಿಶ್ವಂಭರಾ = ಭೂಮಿ, ವಿಶ್ವೇಶ್ವರಾಜ್ಞಯಾ = ಪರಮೇಶ್ವರನ ಆಜ್ಞೆಯಿಂದ ವಿಶ್ವಂ = ಸಮಸ್ತವನು ನಿತ್ಯಂ = ಆವಾಗವು ಧತ್ತೇ = ಧರಿಸುತ್ತಿಹುದು. ||೧೮||

---

1 ಪ್ರಾಣಾದ್ಯೈಶ್ಚ ತಥಾನಾಮ (ಘ) 2 ಬರ್ಹಿರ್ಜಗತ್ (ಘ)
3 ಸರ್ವಸ್ಯ (ಘ) 4 ವಿಶ್ವಂಭರಾ ಜಗನ್ನಿತ್ಯಂ (ಘ)
* ಭೂವಾಯುರಾವಹ ಇಹ ಪ್ರವಹಸ್ತದೂರ್ಧ್ವಮ್ । ಸ್ಯಾದುದ್ವಹಸ್ತದನು ಸಂವಹಸಂಜ್ಞಕಶ್ಚ । ಅನ್ಯಸ್ತತೋಽಪಿ ಸುವಹಃ ಪ್ರತಿಪೂರ್ವಕೋಽಸ್ಮಾದ್ಬಾಹ್ಯಃ ಪರಾವಹ ಇಮೇ ಪವನಾಃ ಪ್ರಸಿದ್ಧಾಃ ॥ ಇತಿ ಸಿದ್ಧಾಂತಶಿರೋಮಣೌ.]

ದೇವಾನ್ಪಾತ್ಯಸುರಾನ್ ಹಂತಿ ತ್ರಿಲೋಕಾನಭಿರಕ್ಷತಿ
ಆಜ್ಞಯಾ ತಸ್ಯ ದೇವೇಂದ್ರಃ ಸರ್ವದೇವೈರಲಂಘ್ಯಯಾ ||೧೯||

[1]ಜೀವತಾಂ ವ್ಯಾಧಿಭಿಃ [2]ಪೀಡಾಃ ಮೃತಾನಾಂ ಚೈವ ಯಾತನಾಃ
ಅಧಾರ್ಮಿಕಾಣಾಂ ಧರ್ಮೇಶಃ ಕರೋತಿ ಶಿವಶಾಸನಾತ್ ||೨೦||

ನಿರ್ಋತಿರ್ವಿಧಿಹೀನಾನಾಂ ಫಲಂ ಹರತಿ ಕರ್ಮಣಾಮ್
ನಿಶಾಚರಾಧಿಪತ್ಯಂ ಚ ಕುರುತೇ ಶಂಕರಾಜ್ಞಯಾ ||೨೧||

ಆಧಿಪತ್ಯಮಪಾಂ ನಿತ್ಯಂ ಕುರುತೇ ವರುಣೋ ಮುನೇ
ಪಾಶೈರ್ಬಧ್ನಾತಿ[3]ಪಾಶ್ಯಾಂಶ್ಚ ಪರಮೇಶ್ವರಶಾಸನಾತ್ ||೨೨||

ದೇವೇಂದ್ರಃ = ದೇವೇಂದ್ರನು ಸರ್ವದೇವೈಃ = ಸಮಸ್ತ ದೇವರ್ಕಳಿಂದ ಅಲಂಘ್ಯಯಾ = ಮೀರಬಬಾರದೇ ಇದ್ದಂಥಾ ತಸ್ಯ = ಆ ಪರಮೇಶ್ವರನ ಆಜ್ಞಯಾ = ಆಜ್ಞೆಯಿಂದ ದೇವಾನ್ = ದೇವರ್ಕಳನು ಪಾತಿ = ಪಾಲಿಸುತ್ತಿಹನು. ಅಸುರಾನ್ = ರಾಕ್ಷಸರುಗಳನು ಹಂತಿ = ಕೊಲ್ಲುತ್ತಿಹನು. ಹನ = ಹಿಂಸಾಗತ್ಯೋಃ ಇತಿ ಧಾತುಃ. ತ್ರಿಲೋಕಾನ್ = ಮೂರು ಲೋಕಂಗಳನು ಅಭಿರಕ್ಷತಿ = ರಕ್ಷಿಸುತ್ತಿಹನು. ||೧೯||

ಧರ್ಮೇಶಃ = ಧರ್ಮಕ್ಕೆ ಒಡೆಯನಹಂಥಾ ಯಮನು ಶಿವಶಾಸನಾತ್ = ಶಿವನಾಜ್ಞೆಯ ದೆಸೆಯಿಂದ ಜೀವತಾಂ = ಬದುಕಿದಂಥಾ ಅಧಾರ್ಮಿಕಾಣಾಂ = ಪಾಪಿಗಳಿಗೆ ವ್ಯಾಧಿಭಿಃ = ರೋಗಂಗಳಿಂದ ಪೀಡಾಃ = ಬಾಧೆಗಳನು, ಮೃತಾನಾಂ = ಸತ್ತವರುಗಳಿಗೆ ಯಾತನಾಶ್ಚೈವ = ಯಾತನೆಗಳನೇ ಕರೋತಿ = ಮಾಡುತ್ತಿಹನು. ||೨೦||

ನಿರ್ಋತಿಃ = ನೈಋತ್ಯನು ಶಂಕರಾಜ್ಞಯಾ = ಈಶ್ವರಾಜ್ಞೆಯಿಂದ ವಿಧಿಹೀನಾಂನಾ = ಶಾಸ್ತ್ರ ವಿಧಾನವಿಲ್ಲದೇ ಇದ್ದಂಥಾ ಕರ್ಮಣಾಂ = ಕ್ರಿಯೆಗಳ ಫಲಂ = ಫಲವನು ಹರತಿ = ಅಪಹರಿಸುತ್ತಿಹನು. ನಿಶಾಚರಾಧಿಪತ್ಯಂ ಚ = ರಾಕ್ಷಸರಿಗೊಡೆತನವನು ಕುರುತೇ = ಮಾಡುತ್ತಿಹನು. ||೨೧||

ಭೋ ಮುನೇ ! = ಎಲೈ ಮೌನವ್ರತವನುಳ್ಳಂಥಾ ಕೃಷ್ಣನೇ ! ವರುಣಃ = ವರುಣನು ಪರಮೇಶ್ವರಶಾಸನಾತ್ = ಪರಮೇಶ್ವರನ ಆಜ್ಞೆಯ ದೆಸೆಯಿಂದ

---

1 ಜೀವಾನಾಂ (ಘ) ಜೀವತಾಂ (ಘ) ಪಾಠಾಂತರ
2 ಪೀಡಾಂ (ಘ) 3 ಬಧ್ಯಾಂಶ್ಚ (ಘ)

ದದಾತಿ ನಿತ್ಯಂ ಯಕ್ಷೇಶೋ ದ್ರವಿಣಂ ದ್ರವಿಣೇಶ್ವರಃ
ಪುಣ್ಯಾನುರೂಪಂ ಭೂತೇಭ್ಯಃ ಪುರಶಾಸನಶಾಸನಾತ್ ||೨೩||

ಕರೋತಿ[1]ಸಂಪದಂ ಶಶ್ವತ್[1] ಜ್ಞಾನಂ ಚಾಪಿ ಸುಮೇಧಸಾಂ
ನಿಗ್ರಹಂ ಚಾಪ್ಯಸಾಧೂನಾಮೀಶಾನಃ ಶಿವಶಾಸನಾತ್ ||೨೪||

ಧತ್ತೇ ತು ಧರಣೀಂ ಮೂರ್ಧ್ನಾ ಶೇಷಃ ಶಿವನಿಯೋಗತಃ
ಸೃಜತ್ಯಶೇಷಮೀಶಸ್ಯ ಶಾಸನಾಚ್ಚತುರಾನನಃ ||೨೫||

ಅಪಾಂ=ಉದಕಂಗಳಿಗೆ ನಿತ್ಯಂ=ಆವಾಗವು ಆಧಿಪತ್ಯಂ=ಒಡೆತನವನು ಕುರುತೇ ಮಾಡುತ್ತಿಹನು. ಪಾಶ್ಯಾಂಶ್ಚ=ಪಾಶಕ್ಕೆ ಯೋಗ್ಯರಹಂಥಾವರುಗಳನು ಪಾಶೈಃ =ಹಗ್ಗಂಗಳಿಂದ ಬಧ್ನಾತಿ=ಕಟ್ಟುತ್ತಿಹನು. ||೨೨||

ದ್ರವಿಣೇಶ್ವರಃ=ಧನಕ್ಕೊಡೆಯನಹಂಥಾ ಯಕ್ಷೇಶಃ=ಯಕ್ಷೇಶ್ವರನಹಂಥಾ ಕುಬೇರನು ಪುರಶಾಸನಶಾಸನಾತ್=ತ್ರಿಪುರವ ಶಿಕ್ಷಿಸಿದ ಪರಮೇಶ್ವರನ ಆಜ್ಞೆಯ ದೆಸೆಯಿಂದ ಪುಣ್ಯಾನುರೂಪಂ= ಪುಣ್ಯಕ್ಕೆ ಅನುಗುಣವಹಂಥಾ ದ್ರವಿಣಂ = ಧನವನು ಭೂತೇಭ್ಯಃ=ಮನುಷ್ಯರುಗಳಿಗೋಸ್ಕರ ನಿತ್ಯಂ=ಆವಾಗವು ದದಾತಿ= ಕೊಡುತ್ತಿಹನು. [ಡು] ದಾಞ್-ದಾನೇ ಇತಿ ಧಾತುಃ. ||೨೩||

ಈಶಾನಃ = ಈಶಾನನು ಶಿವಶಾಸನಾತ್ =ಶಿವನ ಆಜ್ಞೆಯ ದೆಸೆಯಿಂದ ಸುಮೇಧಸಾಂ = ಒಪ್ಪುತ್ತಂವಿದ್ದ ಮತಿಯನುಳ್ಳಂಥಾವರುಗಳಿಗೆ ಜ್ಞಾನಂ ಚ = ಜ್ಞಾನವನು ಸಂಪದಮಪಿ=ಐಶ್ವರ್ಯವನು ಶಶ್ವತ್=ಅಡಿಗಡಿಗೆ ಕರೋತಿ= ಮಾಡುತ್ತಿಹನು. ಅಸಾಧೂನಾಂ = ದುರ್ಜನರುಗಳಿಗೆ ನಿಗ್ರಹಂ ಚಾಪಿ = ಶಿಕ್ಷೆಯನು ಕರೋತಿ= ಮಾಡುತ್ತಿಹನು. ||೨೪||

ಶೇಷಃ=ಶೇಷಮಹಾನಾಗನು ಶಿವನಿಯೋಗತಃ = ಶಿವನ ಆಜ್ಞೆಯ ದೆಸೆಯಿಂದ ಧರಣೀಂ ತು=ಭೂಮಿಯನು ಮೂರ್ಧ್ನಾ = ಶಿರಸ್ಸಿನಿಂದ ಧತ್ತೇ = ಧರಿಸುತ್ತಿಹನು. ಡು ಧಾಞ್ ಧಾರಣ ಪೋಷಣಯೋಃ ಇತಿ ಧಾತುಃ. ಚತುರಾನನಃ =ಬ್ರಹ್ಮನು ಈಶಸ್ಯ=ಈಶ್ವರನ ಶಾಸನಾತ್=ಆಜ್ಞೆಯ ದೆಸೆಯಿಂದ ಅಶೇಷಂ =ವಿಶ್ವವನು ಸೃಜತಿ=ಸೃಜಿಸುತ್ತಿಹನು. ಸೃಜ–ವಿಸರ್ಗೇ ಇತಿ ಧಾತುಃ. ||೨೫||

---

1 ಸಂಪದಃ ಶಶ್ವತ್ (ಘ)

ವಿಷ್ಣುಃ ಪಾಲಯತೇ ವಿಶ್ವಂ ವಿಶ್ವೇಶ್ವರನಿಯೋಗತಃ* ||೨೬||

ಕಾಲಃ ಕರೋತಿ ಸಕಲಂ ಕಾಲಃ ಸಂಹರತಿ ಪ್ರಜಾಃ
ಕಾಲಃ ಪಾಲಯತೇ ವಿಶ್ವಂ ಕಾಲಕಾಲಸ್ಯ ಶಾಸನಾತ್ ||೨೭||

ತ್ರಿಭಿರಂಶೈರ್ಜಗದ್ಬಿಭ್ರತ್ತೇಜೋಭಿರ್ವೃಷ್ಟಿಮಾದಿಶನ್
ದಿವಿ ಸರ್ಪತ್ಯಸೌ ಭಾನುರ್ದೇವದೇವಸ್ಯ ಶಾಸನಾತ್ ||೨೮||

ಪುಷ್ಣಾತ್ಯೋಷಧಿಜಾತಾನಿ ಭೂತಾನಿ ಹ್ಲಾದಯತ್ಯಪಿ
[1]ದೇವೈಶ್ಚಾಪೀಯತೇ ಚಂದ್ರಶ್ಚಂದ್ರಭೂಷಣಶಾಸನಾತ್ ||೨೯||

ವಿಷ್ಣುಃ = ಮಹಾವಿಷ್ಣುವು ವಿಶ್ವೇಶ್ವರನಿಯೋಗತಃ = ವಿಶ್ವಕ್ಕೆ ಒಡೆಯನಹಂಥಾ ಶಿವನ ಆಜ್ಞೆಯ ದೆಸೆಯಿಂದ ವಿಶ್ವಂ = ಸಮಸ್ತ ಲೋಕವನ್ನು ಪಾಲಯತೇ = ಪಾಲಿಸುತ್ತಿಹನು. ಪಾಲ-ರಕ್ಷಣೇ ಇತಿ ಧಾತುಃ. ||೨೬||

ಕಾಲಕಾಲಸ್ಯ = ಕಾಲಂಗೆ ಕಾಲನಹಂಥಾ ಶಿವನ ಶಾಸನಾತ್ = ಆಜ್ಞೆಯ ದೆಸೆಯಿಂದ ಕಾಲಃ = ಕಾಲನು ಸಕಲಂ = ಸಮಸ್ತವನು ಕರೋತಿ = ಮಾಡುತ್ತಿಹನು. ಕಾಲಃ = ಕಾಲನು ವಿಶ್ವಂ = ವಿಶ್ವವನು ಪಾಲಯತೇ = ಪಾಲಿಸುತ್ತಿಹನು, ಕಾಲಃ = ಕಾಲನು ಪ್ರಜಾಃ = ಪ್ರಜೆಗಳನು ಸಂಹರತಿ = ಸಂಹರಿಸುತ್ತಿಹನು. ||೨೭||

ಭಾನುಃ = ಸೂರ್ಯನು ದೇವದೇವಸ್ಯ = ದೇವಶ್ರೇಷ್ಠನಹಂಥಾ ಶಿವನ ಶಾಸನಾತ್ = ಆಜ್ಞೆಯ ದೆಸೆಯಿಂದ ಜಗತ್ = ಲೋಕವನು ಅಂಶೈಃ = ಅಂಶವಹಂಥಾ ತ್ರಿಭಿಸ್ತೇಜೋಭಿಶ್ಚ = ತ್ರಿಮೂರ್ತಿಗಳ ತೇಜಸ್ಸುಗಳಿಂದವೂ ಬಿಭ್ರತ್ = ಪರಿಪಾಲಿಸುತ್ತವು ವೃಷ್ಟಿಂ = ಮಳೆಯನು ಆದಿಶನ್ = ಕರವು (ಸು)ತ್ತವು ದಿವಿ = ಆಕಾಶದಲ್ಲಿ ಸರ್ಪತಿ = ನಡಸು(ವು) ತ್ತಿಹನು. [2]ಸೃಪ್ಲೃ-ಗತೌ ಇತಿ ಧಾತುಃ. ಸೂರ್ಯನ ಕಿರಣಂಗಳು ವೃಷ್ಟಿಗೆ ಕಾರಣಭೂತಂಗಳೆಂದು ಸಮಸ್ತಪುರಾಣಂಗಳಲ್ಲಿ ಪ್ರಸಿದ್ಧವು. ||೨೮||

ಚಂದ್ರಃ = ಚಂದ್ರಮನು ಚಂದ್ರಭೂಷಣಶಾಸನಾತ್ = ಚಂದ್ರಚೂಡಾಮಣಿಯಹಂಥಾ ಪರಮೇಶ್ವರನ ಆಜ್ಞೆಯ ದೆಸೆಯಿಂದ ಓಷಧಿಜಾತಾನಿ = ವನಸ್ಪತಿಗಳ ಸಮೂಹಂಗಳನು ಪುಷ್ಣಾತಿ = ಪುಷ್ಟಿಮಾಡುತ್ತಿಹನು. ಭೂತಾನ್ಯಪಿ

---

* 'ತಿಸೃಭಿರ್ಮೂರ್ತಿಭಿಃ ಸ್ವಾಭಿಃ ಪಾತಿ ಚಾಂತೇ ನಿಹಂತಿ ಚ' ಎಂಬ ಉತ್ತರಾರ್ಧವು (ಘ) ದಲ್ಲಿ ಮಾತ್ರವಿದೆ. ಉಳಿದಾವ ಪ್ರತಿಗಳಲ್ಲೂ ಇಲ್ಲ. ವ್ಯಾಖ್ಯಾನವೂ ಇರುವುದಿಲ್ಲ.

1 ದೇವೈಶ್ಚ (ಘ) 2 ಸೃ-ಗತೌ ? (ಕಖಚ)

[1]ಆದಿತ್ಯಾ ವಸವೋ ರುದ್ರಾಃ[1] ಅಶ್ವಿನೌ ಮರುತಸ್ತಥಾ
ಖೇಚರಾ ಋಷಯಃ ಸಿದ್ಧಾ [2]ಯೋಗಿನೋ[2] ಮನುಜಾ ಮೃಗಾಃ||೩೦||

ಪಶವಃ ಪಕ್ಷಿಣಶ್ಚೈವ ಕೀಟಾದ್ಯಾಃ ಸ್ಥಾವರಾಣಿ ಚ
ನದ್ಯಃ ಸಮುದ್ರಾ ಗಿರಯಃ ಕಾನನಾನಿ ಸರಾಂಸಿ ಚ ||೩೧||

ವೇದಾಸ್ಸಾಂಗಾಶ್ಚ ಶಾಸ್ತ್ರಾಣಿ ಮಂತ್ರಸ್ತೋಮಾ ಮಖಾದಯಃ
ಕಾಲಾಗ್ನ್ಯಾದಿಶಿವಾಂತಾನಿ ಭುವನಾನಿ ಸಹಾಧಿಪೈಃ ||೩೨||

ಬ್ರಹ್ಮಾಂಡಾನ್ಯಪ್ಯಸಂಖ್ಯಾನಿ ತೇಷಾಮಾವರಣಾನಿ ಚ
ವರ್ತಮಾನಾನ್ಯತೀತಾನಿ ಭವಿಷ್ಯಂತ್ಯಪಿ ಕೃತ್ಸ್ನಶಃ ||೩೩||

=ಪ್ರಾಣಿಗಳನೂ ಹ್ಲಾದಯತಿ=ಸಂತೋಷಿಸುತ್ತಿಹನು. ದೇವೈಶ್ಚ= ದೇವರ್ಕಳಿಂದವೂ ಆಪೀಯತೇ= ಪಾನವ ಮಾಡಿಸಿಕೊಳಲ್ಪಡುತ್ತಿಹನು. ||೨೯||

ಆದಿತ್ಯಾಃ=ದ್ವಾದಶಾದಿತ್ಯರು ವಸವಃ = ಅಷ್ಟವಸುಗಳು ರುದ್ರಾಃ = ಏಕಾದಶರುದ್ರರು ಅಶ್ವಿನೌ=ಅಶ್ವಿನೀದೇವರ್ಕಳು ತಥಾ = ಹಾಂಗೆ ಮರುತಃ = ದೇವತೆಗಳು ಖೇಚರಾಃ=ಖೇಚರರುಗಳು ಋಷಯಃ=ಋಷಿಗಳು ಸಿದ್ಧಾಃ= ಸಿದ್ಧರುಗಳು ಯೋಗಿನಃ=ಯೋಗಿಗಳು ಮನುಜಾಃ=ಮನುಷ್ಯರುಗಳು ಮೃಗಾಃ =ಮೃಗಂಗಳು ||೩೦||

ಪಶವಃ=ಗೋವುಗಳು ಪಕ್ಷಿಣಶ್ಚೈವ=ಪಕ್ಷಿಗಳು ಕೀಟಾದ್ಯಾಃ = ಹುಳು ಮೊದಲಾದಂಥಾವು ಸ್ಥಾವರಾಣಿ ಚ=ವೃಕ್ಷಾದಿ ಸ್ಥಾವರಂಗಳು ನದ್ಯಃ=ನದಿಗಳು ಸಮುದ್ರಾಃ=ಸಪ್ತಸಮುದ್ರಂಗಳು ಗಿರಯಃ = ಪರ್ವತಂಗಳು ಕಾನನಾನಿ = ಅರಣ್ಯಂಗಳು ಸರಾಂಸಿ ಚ=ಸರೋವರಂಗಳು, ||೩೧||

ಸಾಂಗಾಃ = ಷಡಂಗದಿಂದ ಸಹಿತವಹಂಥಾ ವೇದಾಶ್ಚ = ವೇದಂಗಳು ಶಾಸ್ತ್ರಾಣಿ=ಶಾಸ್ತ್ರಂಗಳು ಮಂತ್ರಸ್ತೋಮಾಃ = ಮಂತ್ರಸ್ತೋಮಂಗಳು, ಮಂತ್ರ ಸಮೂಹಂಗಳೆಂಬುದರ್ಥ. ಮಖಾದಯಃ=ಯಜ್ಞ ಮೊದಲಾದಂಥಾವು ಕಾಲಾ-ಗ್ನ್ಯಾದಿ ಶಿವಾಂತಾನಿ=ಕಾಲಾಗ್ನಿರುದ್ರ ಮೊದಲಾಗಿ ಶಿವನು ಕಡೆಯಾಗಿ ಉಳ್ಳಂಥಾ ಭುವನಾನಿ=ಲೋಕಂಗಳು ಅಧಿಪೈಸ್ಸಹ=ಲೋಕಪಾಲಕರುಗಳಿಂದ ಸಹಿತವಾಗಿ,

ಅಸಂಖ್ಯಾನಿ=ಲೆಕ್ಕವಿಲ್ಲದೇ ಇದ್ದಂಥಾ ಬ್ರಹ್ಮಾಂಡಾನ್ಯಪಿ=ಬ್ರಹ್ಮಾಂಡಂಗಳು, ತೇಷಾಂ=ಆ ಬ್ರಹ್ಮಾಂಡಗಳ ಆವರಣಾನಿ ಚ= ಬಹಿರಾವರಣಂಗಳು ವರ್ತಮಾನಾನಿ

---

[1] ಆದಿತ್ಯೋ ವಸವೋ ರುದ್ರೋ (ಖ) ಮೂಲ [2] ಭೋಗಿನೋ (ಘ)

ದಿಶಶ್ಚ ವಿದಿಶಶ್ಚೈವ ಕಾಲಭೇದಾಃ [1]ಕಲಾದಯಃ[1]
ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ
ತತ್ಸರ್ವಂ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಮ್ ||೩೪||

*ಆಜ್ಞಾಬಲಾತ್ತಸ್ಯ ಧರಾ [2]ಸ್ಥಿತೇಯಂ[2]
ಧರಾಧರಾ ವಾರಿಧರಾಃ ಸಮುದ್ರಾಃ ।
ಜ್ಯೋತಿರ್ಗಣಾಶ್ಶಕ್ರಮುಖಾಶ್ಚ ದೇವಾಃ
[3]ಸ್ಥಿರಂ ಚರಂ ತೇ ವಶಗಾ ಯದಸ್ತಿ[3] ||೩೫||

ಉಪಮನ್ಯುರುವಾಚ

=ವರ್ತಿಸುತ್ತಿದ್ದಂಥಾವು ಅತೀತಾನಿ=ಹಿಂದಾದಂಥಾವು ಕೃತ್ಸ್ನಶಃ= ಬಹಳವಾಗಿ ಭವಿಷ್ಯಂತ್ಯಪಿ—ಮುಂದಾಗಲುಳ್ಳಂಥಾವು. ||೩೩||

ದಿಶಶ್ಚ=ದಿಕ್ಕುಗಳೂ ವಿದಿಶಶ್ಚೈವ=ವಿದಿಕ್ಕುಗಳೂ ಕಲಾದಯಃ=ಕಲೆ, ಕ್ಷಣ, ಮುಹೂರ್ತವೆಂಬುವು ಮೊದಲಾದಂಥಾವು ಕಾಲಭೇದಾಃ= ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿದಂಥಾ ಕಾಲಭೇದಂಗಳು ಅಸ್ಮಿನ್ ಜಗತಿ=ಈ ಲೋಕದಲ್ಲಿ ಯತ್ಕಿಂಚಿತ್ =ಆವುದಾನೊಂದು ವಸ್ತುವು ದೃಶ್ಯತೇ= ಕಾಣಬರುತ್ತಿಹುದು. ಶ್ರೂಯತೇಽಪಿ ಚ=ಕೇಳಲ್ಪಡುತ್ತಿಹುದು ತತ್ಸರ್ವಂ= ಅದೆಲ್ಲವೂ ಶಂಕರಸ್ಯ = ಪರಮೇಶ್ವರನ ಆಜ್ಞಾಬಲೇನ=ಆಜ್ಞೆಯ ಸತ್ತ್ವದಿಂದ ಸಮಧಿಷ್ಠಿತಂ=ಇರುತ್ತಿಹುದು. ||೩೪||

ತಸ್ಯ=ಆ ಪರಮೇಶ್ವರನ ಆಜ್ಞಾಬಲಾತ್=ಆಜ್ಞೆಯ ಸತ್ತ್ವದ ದೆಸೆಯಿಂದ ಇಯಂ ಧರಾ=ಈ ಭೂಮಿ ಸ್ಥಿರಾ=ಇರುತ್ತಿಹುದು. ಧರಾಧರಾಃ = ಪರ್ವತಂಗಳು ವಾರಿಧರಾಃ=ಮೇಘಂಗಳು ಸಮುದ್ರಾಃ = ಸಮುದ್ರಂಗಳು ಜ್ಯೋತಿರ್ಗಣಾಃ= ನಕ್ಷತ್ರಸಮೂಹಂಗಳು ಶಕ್ರಮುಖಾಃ = ಇಂದ್ರ ಮೊದಲಾಗಿದ್ದಂಥಾ ದೇವಾಶ್ಚ=ದೇವರ್ಕಳು ಸ್ಥಿರಂ=ಸ್ಥಾವರವು ಚರಂ= ಜಂಗಮಾತ್ಮಕವು ಯತ್ =ಆವುದಾನೊಂದು ಅಸ್ತಿ=ಉಂಟು ತೇ=ಅವೆಲ್ಲವೂ ತಸ್ಯ=ಆ ಪರಮೇಶ್ವರನ ವಶಗಾಃ=ಅಧೀನನೆಯ್ದಿದಂಥಾವು. ||೩೫||

ಉಪಮನ್ಯುರುವಾಚ—ಉಪಮನ್ಯು ನುಡಿವುತ್ತಿದ್ದಾನು.

---

*ಉಪೇಂದ್ರವಜ್ರವೃತ್ತ

1 ಕಳಾದಯಃ (ಕ) 2 ಸ್ಥಿತೇ ಹ (ಘ)

3 ಸ್ಥಿರಂ ಚರಂ ವಾ ಚಿದಚಿದ್ಯದಸ್ತಿ (ಘ)

ಪುರಾ ಕಿಲ ಸುರಾಃ ಸೇಂದ್ರಾಃ ವಿವದಂತಃ ಪರಸ್ಪರವತ್
ಅಸುರಾನ್ ಸಮರೇ ಜಿತ್ವಾ ಜೇತಾಽಹಮಹಮಿತ್ಯುತ ||೩೬||

ತದಾ ಮಹೇಶ್ವರಸ್ತೇಷಾಂ ಮಧ್ಯತೋ [1]ವರವೇಷಧೃತ್[1]
ಸ್ವಲಕ್ಷಣೈರ್ವಿಹೀನಾಂಗಃ ಸ್ವಯಂ ಯಕ್ಷ ಇವಾಭವತ್ ||೩೭||

ಸ ತಾನಾಹ ಸುರಾನೇಕಂ ತೃಣಮಾದಾಯ ಭೂತಲೇ
ಯ ಏತದ್ದ್ವಿಃಕೃತಂ ಕರ್ತುಂ [2]ಕ್ಷಮತೇ ಸಹಿ[2] ದೈತ್ಯಜಿತ್ ||೩೮||

ಯಕ್ಷಸ್ಯ ವಚನಂ ಶ್ರುತ್ವಾ ವಜ್ರಪಾಣಿಃ ಶಚೀಪತಿಃ
ಕಿಂಚಿತ್ ಕ್ರುದ್ಧೋ ವಿಹಸ್ಯೈತತ್] ತೃಣಮಾದಾತು[3]ಮುದ್ಯಯೌ

ಪುರಾ = ಪೂರ್ವದಲ್ಲಿ ಸೇಂದ್ರಾಃ = ಇಂದ್ರರೊಡನೆ ಸಹಿತರಹಂಥಾ ಸುರಾಃ = ದೇವರ್ಕಳು ಸಮರೇ = ಕಾಳಗದಲ್ಲಿ **ಅಸುರಾನ್** = ರಾಕ್ಷಸರುಗಳನು ಜಿತ್ವಾ = ಗೆದ್ದು ಅಹಂ = ನಾನು ಜೇತಾ ಗೆದ್ದಾತನು ಇತಿ = ಹೀಂಗೆಂದು ಪರಸ್ಪರಂ = ಒಬ್ಬೊಬ್ಬರು ವಿವದಂತಃ ಕಿಲ ಉತ = ವಾದಿಸಿದರು ಕಂಡವಲಾ. ||೩೬||

ತದಾ = ಆಗ ಮಹೇಶ್ವರಃ = ಶಿವನು ಸ್ವಲಕ್ಷಣೈಃ = ತನ್ನ ಪಂಚಮುಖ ಮೊದಲಾದ ಕುರುಹುಗಳಿಂದ ವಿಹೀನಾಂಗಃ = ಇಲ್ಲದೇ ಇದ್ದಂಥಾ ಶರೀರವುಳ್ಳಾತ ನಾಗಿ ವರವೇಷಧೃತ್ = ಒಪ್ಪುತ್ತಂವಿದ್ದ ಅಲಂಕಾರಗಳ ಧರಿಸಿದಾತನಾಗುತ್ತವು ತೇಷಾಂ = ಆ ದೇವರ್ಕಳ ಮಧ್ಯತಃ = ಮಧ್ಯದಲ್ಲಿ ಸ್ವಯಂ = ತಾನು ಯಕ್ಷ ಇವ = ಯಕ್ಷನೇ ಸೈ (ಯಕ್ಷನಕ್ಕೈ) ಎಂಬ ಹಾಂಗೆ ಅಭವತ್ = ಆದನು. ||೩೭||

ಸಃ = ಆ ಯಕ್ಷನು ತಾನ್ ಸುರಾನ್ = ಆ ದೇವರ್ಕಳನು ಕುರಿತು ಏಕಂ ತೃಣಂ = ಒಂದು ತೃಣವನು ಭೂತಲೇ = ಭೂಮಿಯಲ್ಲಿ ಆದಾಯ ಇರಿಸಿ, = ಯಃ = ಯಾವನಾನೊರ್ವನು ಏತತ್ = ಈ ತೃಣವನು ದ್ವಿಃಕೃತಂ = ಎರಡಾಗಿ ಮಾಡುಹ ವನು ಕರ್ತುಂ = ಮಾಡಲೋಸ್ಕರ ಕ್ಷಮತೇ = ಸಮರ್ಥನಾಗುತ್ತಿಹನು ಸಃ = ಆತನು ದೈತ್ಯಜಿತ್ ಹಿ = ರಾಕ್ಷಸರ ಗೆದ್ದಾತನಲಾ ಎಂದು ಆಹ = ನುಡಿದನು. ೩೮

ಯಕ್ಷಸ್ಯ = ಯಕ್ಷನ ವಚನಂ = ವಾಕ್ಯವನು ಶ್ರುತ್ವಾ = ಕೇಳಿ ವಜ್ರಪಾಣಿಃ = ವಜ್ರಹಸ್ತನಹಂಥಾ ಶಚೀಪತಿಃ = ಶಚೀದೇವಿಯ ಪುರುಷನಹಂಥಾ ದೇವೇಂದ್ರನು ಕಿಂಚಿತ್ = ಒಂದಿಷ್ಟು ವಿಹಸ್ಯ = ನಕ್ಕು ಕ್ರುದ್ಧಃ = ಕೋಪಿಸಿದಾತನಾಗುತ್ತವು

---

[1] ವರವೇಷಧೃಕ್ (ಖ) ವ್ಯಾಖ್ಯಾ 'ಽವರವೇಷಧೃಕ್' (ಘ) [2] ಕ್ಷಮೋತ ಸ ತು (ಘ)
[3] ಮುದ್ಯತಃ (ಘ)

[1]ತತಸ್ತೃಣ[1]ಮುಪಾದಾತುಂ ಮನಸಾಪಿ [2]ನ[2] ಶಕ್ಯತೇ
[3]ಯದಾ ತದಾ ತದುಚ್ಛೇತ್ತುಂ[3] ವಜ್ರಂ ವಜ್ರಧರೋಽಸೃಜತ್ ||೪೦||

ತದ್ವಜ್ರಂ ಪ್ರತಿವಜ್ರೇಣ ಸಂಸ್ಪೃಷ್ಟಮಿವ ಸರ್ವತಃ
ತೃಣೇನಾಭಿಹತಂ ತೇನ ತಿರ್ಯ[4]ಗೂರ್ಧ್ವಗಂ[4] ಪಪಾತ ಹ ||೪೧||

ತತಶ್ಚಾನ್ಯೇ [5]ಸುಸಂರುದ್ಧಾಃ[5] ಲೋಕಪಾಲಾ ಮಹಾಬಲಾಃ
ಸಸೃಜುಸ್ತೃಣಮುದ್ದಿಶ್ಯ ಸ್ವಾಯುಧಾನಿ ಸಹಸ್ರಶಃ ||೪೨||

ಪ್ರಜಜ್ವಾಲ ಮಹಾವಹ್ನಿಃ ಪ್ರಚಂಡಃ ಪವನೋ ವವೌ
ಪ್ರವೃದ್ಧೋಽಪಾಂಪತಿರ್ಯದ್ವತ್ಪ್ರಲಯೇ ಸಮುಪಸ್ಥಿತೇ ||೪೩||

ಏತತ್ ತೃಣಂ = ಈ ತೃಣವನು ಅದಾತುಂ = ತೆಗೆದುಕೊಳಲೋಸ್ಕರ ಉದ್ಯಯೌ = ಉನ್ನತವಾಗಿ ಎಯ್ದಿದನು. ||೩೯||

ತತಃ = ಅನ್ನರವೇಲೆ ವಜ್ರಧರಃ = ವಜ್ರಧರನಹಂಥಾ ಇಂದ್ರನು ಯಂದಾ = ಆವಾಗ ತೃಣಂ = ತೃಣವನು ಮನಸಾಽಪಿ = ಮನಸ್ಸಿನಿಂದಾಯಿತ್ತಾದರೂ ಉಪಾದಾತುಂ = ತೆಗೆದುಕೊಳ್ಳಲು ನ ಶಕ್ಯತೇ = ಸಮರ್ಥನಾದುದಿಲ್ಲ. ಶಕ್ಲೃ —ಶಕ್ತೌ ಇತಿ ಧಾತುಃ ತದಾ = ಆಗ ತತ್ = ಆ ತೃಣವನು ಉಚ್ಛೇತ್ತುಂ = ಛೇದಿಸಲೋಸ್ಕರ ವಜ್ರಂ = ವಜ್ರವನು ಅಸೃಜತ್ = ಇಟ್ಟನು. ||೪೦||

ತದ್ವಜ್ರಂ = ಆ ವಜ್ರವು ಪ್ರತಿವಜ್ರೇಣ = ಮತ್ತೊಂದು ವಜ್ರದಿಂದ ಸರ್ವತಃ = ಎಲ್ಲಾ ಕಡೆಯಲ್ಲಿಯು ಸಂಸ್ಪೃಷ್ಟಮಿವ = ಇಡಿಸಿಕೊಳಲುಪಟ್ಟುತಕ್ಕೆ ಎಂಬ ಹಾಂಗೆ ತೇನ ತೃಣೇನ = ಆ ತೃಣದಿಂದ ಅಭಿಹತಂ = ತಾಗಲುಪಟ್ಟುದಾಗುತವು ಊರ್ಧ್ವಗಂ = ಮೇಲು ಮುಂತಾಗಿ ಜಿಗಿದು ತಿರ್ಯಕ್ = ಅಡ್ಡಲಾಗಿ ಪಪಾತ ಹ = ಬಿದ್ದಿತು.

ತತಃ = ಅನ್ನರ ಮೇಲೆ ಮಹಾಬಲಾಃ = ಅತ್ಯಂತ ಸತ್ತ್ವವನುಳ್ಳಂಥಾ ಅನ್ಯೇ ಲೋಕಪಾಲಾಶ್ಚ = ಉಳಿದ ಲೋಕಪಾಲಕರುಗಳು ಸುಸಂರುದ್ಧಾಃ = ಅತ್ಯಂತ ಕ್ರೋಧಿತರುಗಳಾಗಿ ತೃಣಂ = ತೃಣವನು ಉದ್ದಿಶ್ಯ = ಕುರಿತು ಸಹಸ್ರಶಃ = ಸಹಸ್ರ ಸಂಖ್ಯೆಯಹಂಥಾ ಸ್ವಾಯುಧಾನಿ = ತಮ್ಮ ಆಯುಧಂಗಳನು ಸಸೃಜುಃ = ಇಟ್ಟರು. ||೪೨||

ಮಹಾವಹ್ನಿಃ = ಅನಂ (ಉನ್ನ) ತವಹಂಥಾ ಅಗ್ನಿ ಪ್ರಜಜ್ವಾಲ = ಅತ್ಯಂತ ಜ್ವಲಿಸಿದನು. ಪವನಃ = ವಾಯು ಪ್ರಚಂಡಃ = ಅತ್ಯಂತ ಪ್ರಚಂಡವಾಗಿ ವವೌ =

---

1 ನತತ್ತೃಣ (ಘ) 2 ಚ (ಘ) 3 ಯಥಾ ತಥಾಪಿ ತಚ್ಛೇತ್ತುಂ (ಘ)
4 ಗಗ್ರಂ(ಘ) 5 ಸುಸಂರಬ್ಧಾಃ (ಖ)

ಏವಂ ದೇವೈಃ ಸಮಾರಬ್ಧಂ ತೃಣಮುದ್ಧಿಶ್ಯ ಯತ್ನತಃ
ವ್ಯರ್ಥಮಾಸೀದಹೋ ಕೃಷ್ಣ ಯಕ್ಷಸ್ಯಾಜ್ಞಾಬಲೇನ ವೈ ||೪೪||

ತದಾಽಽಹ ಯಕ್ಷಂ ದೇವೇಂದ್ರಃ ಕೋ ಭವಾನಿತ್ಯಮರ್ಷಿತಃ
ತತಃ ಸ ಪಶ್ಯತಾಮೇವ ತೇಷಾಮಂತರಧೀಯತ ||೪೫||

ತದಂತರೇ ಹೈಮವತೀ ದೇವೀ ದಿವ್ಯವಿಭೂಷಣಾ
ಆವಿರಾಸೀನ್ನಭೋರಂಗೇ ಶೋಭಮಾನಾ ಶುಚಿಸ್ಮಿತಾ ||೪೬||

ತಾಂ ದೃಷ್ಟ್ವಾ ವಿಸ್ಮಯಾವಿಷ್ಟಾ ದೇವಾಶ್ಶಕ್ರಪುರೋಗಮಾಃ
ಪ್ರಣಮ್ಯ ಯಕ್ಷಂ ಪಪ್ರಚ್ಛುಃ ಕೋಽಸೌ [1]ಯಕ್ಷಃ ಕ್ಷಣಾದ್ಗತಃ[1] ||೪೭||

ಬೀಸಿದನು. ಅಪಾಂ ಪತಿಃ = ಉದಕಂಗಳಿಗೊಡೆಯನಹಂಥಾ ವರುಣನು ಪ್ರಳಯೇ = ಪ್ರಳಯವು ಸಮುಪಸ್ಥಿತೇ ಸತಿ = ಎಯ್ದುತ್ತಂವಿರಲು ಯದ್ವತ್ = ಎಹಗೆ ಪ್ರವೃದ್ಧಃ = ಹೆಚ್ಚುವನು ತದ್ವತ್ = ಆ ಮರಿಯಾದೆಯಲ್ಲಿಯೇ ಪ್ರಯೋಗಿಸಿದನು.

ಭೋ ಕೃಷ್ಣ = ಎಲೈ ಕೃಷ್ಣನೇ ಏವಂ = ಈ ಪ್ರಕಾರದಲ್ಲಿ ದೇವೈಃ = ದೇವರ್ಕಳಿಂದ ತೃಣಂ = ತೃಣವನು ಉದ್ದಿಶ್ಯ = ಕುರಿತು ಯತ್ನತಃ = ಪ್ರಯತ್ನದಿಂದ ಸಮಾರಬ್ಧಂ = ಪ್ರಯೋಗಿಸಲ್ಪಟ್ಟಂಥಾದು ಯಕ್ಷಸ್ಯ = ಯಕ್ಷನ ಆಜ್ಞಾಬಲೇನ ವೈ = ಆಜ್ಞೆಯ ಸತ್ತ್ವದಿಂದಲೇ ವ್ಯರ್ಥಂ = ವ್ಯರ್ಥವು ಆಸೀತ್ = ಆಯಿತ್ತು. ಅಹೋ = ಆಶ್ಚರ್ಯವು. ||೪೪||

ತದಾ = ಆಗ ದೇವೇಂದ್ರಃ = ದೇವೇಂದ್ರನು ಅಮರ್ಷಿತಃ = ಕ್ರೋಧಿತನಾಗಿ ಯಕ್ಷಂ = ಯಕ್ಷನನು ಕುರಿತು ಭವಾನ್ = ನೀನು ಕಃ = ಆವಾತನು ? ಇತಿ = ಹೀಗೆಂದು ಆಹ = ನುಡಿದನು. ತತಃ = ಅಷ್ಟರ ಮೇಲೆ ಸಃ = ಆ ಯಕ್ಷನು ಪಶ್ಯತಾಂ = ನೋಡುತ್ತಿದ್ದಂಥಾ ತೇಷಾಮೇವ = ಆ ದೇವತೆಗಳೊಳಗೆಯೇ ಅಂತರಧೀಯತ = ಅದೃಶ್ಯವಾದನು. ||೪೫||

ತದಂತರೇ[2] = [ಆ ಮಧ್ಯದಲ್ಲಿ][2] ಶೋಭಮಾನಾ = ಒಪ್ಪುತ್ತಿದ್ದಂಥಾ ಶುಚಿಸ್ಮಿತಾ = ಮನೋಹರವಹ ನಗೆಯುನುಳ್ಳಂಥಾ ದಿವ್ಯವಿಭೂಷಣಾ = ದಿವ್ಯಾಭರಣವನುಳ್ಳಂಥಾ ಹೈಮವತೀ = ಹಿಮವತ್ಪರ್ವತನ ಕುಮಾರಿಯಹಂಥಾ ದೇವೀ = ಪಾರ್ವತೀದೇವಿ, ನಭೋರಂಗೇ = ಆಕಾಶರಂಗಮಂಟಪದಲ್ಲಿ ಆವಿರಾಸೀತ್ = ಪ್ರತ್ಯಕ್ಷವಾದಳು. ||೪೬||

ತಾಂ = ಆ ಪಾರ್ವತೀದೇವಿಯನು ದೃಷ್ಟ್ವಾ = ಕಂಡು ಶಕ್ರಪುರೋಗಮಾಃ = ಇಂದ್ರ ಮೊದಲಾದಂಥಾ ದೇವಾಃ = ದೇವತೆಗಳು ವಿಸ್ಮಯಾವಿಷ್ಟಾಃ =

[1] ಯಕ್ಷೋ ವಿಲಕ್ಷಣಃ (ಘ) ಮೂಲಪಾಠ. ಕ್ಷಣಾದ್ಗತಃ (ಘ) ಪಾಠಾಂತರ.

[2] ಅದರ ಅನಂತರದಲ್ಲಿ ? (ಎಂದು ವ್ಯಾಖ್ಯಾನ ಪಾಠ)

ಸಾಽಬ್ರವೀತ್ ಸಸ್ಮಿತಂ ದೇವೀ ಸ ಯುಷ್ಮಾಕಮಗೋಚರಃ
ತೇನೇದಂ ಭ್ರಾಮ್ಯತೇ ಚಕ್ರಂ ಸಂಸಾರಾಖ್ಯಂ ಚರಾಚರಮ್ ॥೪೮॥

ತೇನಾದೌ ಕ್ರಿಯತೇ ವಿಶ್ವಂ ತೇನ ಸಂಹ್ರಿಯತೇ [1]ಜಗತ್[1]
ನ ತಸ್ಯ ನಿಯಮಃ ಕಶ್ಚಿತ್ ತೇನ ಸರ್ವಂ ನಿಯಮ್ಯತೇ ॥೪೯॥

ಇತ್ಯುಕ್ತ್ವಾ ಸಾ [2]ತದಾ[2]ದೇವೀ ತತ್ರೈವಾಂತರಧೀಯತ
ದೇವಾಶ್ಚ ವಿಸ್ಮಿತಾಸ್ಸರ್ವೇ [3]ತಂ[3] ಪ್ರಣಮ್ಯ ದಿವಂ ಯಯುಃ ॥೫೦॥

ಆಶ್ಚರ್ಯದಿಂದ ಪ್ರವೇಶಿಸಲ್ಪಟ್ಟವರುಗಳಾಗಿ ಪ್ರಣಮ್ಯ=ನಮಸ್ಕರಿಸಿ ಕ್ಷಣಾತ್=ಕ್ಷಣಮಾತ್ರದ ದೆಸೆಯಿಂದ ಗತಃ=ಹೋದಂಥಾ ಅಸೌ ಯಕ್ಷಃ = ಈ ಯಕ್ಷನು ಕಃ=ಆವಾತನೆಂದು ಯಕ್ಷಂ=ಯಕ್ಷನ ನಿಜವನು ಪಪ್ರಚ್ಛುಃ=ಬೆಸಗೊಂಡರು.

ಸಾ ದೇವೀ=ಆ ಪಾರ್ವತೀದೇವಿ ಸಸ್ಮಿತಂ=ನಗೆಯಿಂದ ಸಹಿತವೇಗಹುದೋ ಹಾಂಗೆ ಅಬ್ರವೀತ್=ನುಡಿದಳು. ಸಃ=ಆ ಯಕ್ಷರೂಪಾದಾತನು ಯುಷ್ಮಾಕಂ =ನಿಮಗೆ ಅಗೋಚರಃ=ಗೋಚರನಲ್ಲ. ತೇನ = ಆತನಿಂದ ಚರಾಚರಂ = ಚರಾಚರವಹಂಥಾ ಇದಂ=ಈ ಸಂಸಾರಾಖ್ಯಂ=ಸಂಸಾರವೆಂಬ ಹೆಸರನುಳ್ಳಂಥಾ ಚಕ್ರಂ=ತಿಗುರಿ ಭ್ರಾಮ್ಯತೇ = ತಿರಿಗಿಸಲ್ಪಡುತ್ತಿಹುದು. ಭ್ರಮು–ಅನವಸ್ಥಾನೇ ಎಂಬ ಧಾತು. ॥೪೮॥

ತೇನ= ಆ ಪರಮೇಶ್ವರನಿಂದ ಆದೌ = ಮೊದಲಲ್ಲಿ ವಿಶ್ವಂ = ಸಮಸ್ತ ಲೋಕವು ಕ್ರಿಯತೇ = ಮಾಡಲುಪಟ್ಟಿತ್ತು. ತೇನ=ಆ ಶಿವನಿಂದ ಸರ್ವಂ= ಸಮಸ್ತವೂ ನಿಯಮ್ಯತೇ = ಪಾಲಿಸಲ್ಪಡುತ್ತಿಹುದು. ತೇನ = ಆ ದೇವನಿಂದ ಜಗತ್=ಲೋಕವು ಸಂಹ್ರಿಯತೇ= ಸಂಹಾರವಾಗಲುಪಡುತ್ತಿಹುದು. ತಸ್ಯ=ಆ ಪರಮೇಶ್ವರಂಗೆ ಕಶ್ಚಿತ್=ಒಂದಾನೊಂದು ನಿಯಮಃ=ನಿಯಮವು ನ=ಇಲ್ಲ.

ಇತಿ=ಈ ಪ್ರಕಾರದಲ್ಲಿ ಉಕ್ತ್ವಾ=ನುಡಿದು ಸಾ ದೇವೀ =ಆ ಪಾರ್ವತೀ ದೇವಿ ತದಾ=ಆಗ ತತ್ರೈವ = ಆ ಆಕಾಶಮಂಟಪದಲ್ಲಿಯೇ ಅಂತರಧೀಯತ = ಅದೃಶ್ಯವಾದಳು. ಸರ್ವೇ ದೇವಾಶ್ಚ =ಸಮಸ್ತದೇವರ್ಕಳೂ ವಿಸ್ಮಿತಾಃ=ತೃಣದಿಂದ

---

[1] ಪುನಃ (ಫ) [2] ಮಹಾ (ಫ) [3] ತಾಂ (ಫ)

ಇತಿ [1]ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮಸುಧಾರ್ಣವ-
ಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಮಲ್ಲಿಕಾರ್ಜುನಾ-
ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾವಿವರಣೇ
ಶಿವಾಧಿಕ್ಯಕಥನೇ 'ಶಿವಾಜ್ಞಾಪ್ರಭಾವೋ ನಾಮ'
ದ್ವಾದಶೋಽಧ್ಯಾಯಃ

ಲಘುಗಳಾಗಿ ಬೆರಗಾದಂಥಾವರುಗಳಾಗಿ ತಂ= ಆ ಶಿವನನು ಕುರಿತು ಪ್ರಣಮ್ಯ= ನಮಸ್ಕರಿಸಿ ದಿವಂ= ಸ್ವರ್ಗವನು ಯಯುಃ= ಎಯ್ದಿದರು, ಯಾ = ಪ್ರಾಪಣೇ ಇತಿ ಧಾತುಃ ||೫೦||

---

1 ಶ್ರೀ ಮಣ್ಣೀ (ಘ)

ತ್ರಯೋದಶೋಽಧ್ಯಾಯಃ

(ಬ್ರಹ್ಮಶಿರಚ್ಛೇದನಂ)

ಬ್ರಹ್ಮಾಂಡಪುರಾಣೇ ಮುನಯ ಊಚುಃ

ಕಥಂ ದೇವೇನ ರುದ್ರೇಣ ಶಂಕರೇಣಾತಿತೇಜಸಾ
ಕಥಂ ನಖಾವಲೂನಂ ತದ್ಬ್ರಹ್ಮಣಃ ಪಂಚಮಂ ಶಿರಃ ||೧||

ಸೂತ ಉವಾಚ—

ಶೃಣುಧ್ವಂ ಋಷಯಃ ಪುಣ್ಯಾಂ ಕಥಾಂ ಪಾಪಪ್ರಣಾಶಿನೀಮ್
ಮಾಹಾತ್ಮ್ಯಂ ದೇವದೇವಸ್ಯ ಮಹಾದೇವಸ್ಯ ಧೀಮತಃ ||೨||

ಪುರಾ ಪಿತಾಮಹಂ ದೇವಂ ಮೇರುಶೃಂಗೇ ಮಹರ್ಷಯಃ
ಪ್ರೋಚುಃ ಪ್ರಣಮ್ಯ ದೇವಾದಿಂ ಕಿಮೇಕಂ ತತ್ತ್ವಮವ್ಯಯಮ್ ||೩||

ಬ್ರಹ್ಮಾಂಡಪುರಾಣೇ ಮುನಯ ಊಚುಃ = ಬ್ರಹ್ಮಾಂಡಪುರಾಣದಲ್ಲಿ ನೈಮಿಶಾರಣ್ಯವಾಸಿಗಳಹಂಥಾ ಋಷಿಗಳು ಕೇಳುತ್ತಿದ್ದಾರು.

ರುದ್ರೇಣ = ದುಃಖವನು ಕೆಡಿಸುತ್ತಿದ್ದಂಥಾ ದೇವೇನ = ದೇವನಹಂಥಾ ಅತಿ ತೇಜಸಾ = ಅತ್ಯಂತ ತೇಜಸ್ಸನುಳ್ಳಂಥಾ ಶಂಕರೇಣ = ಪರಮೇಶ್ವರನಿಂದ ಕಥಂ = ಏನು ಕಾರಣ ಬ್ರಹ್ಮಣಃ = ಬ್ರಹ್ಮನ ಪಂಚಮಂ = ಐದನೆಯದಹಂಥಾ ತತ್ ಶಿರಃ = ಆ ಶಿರಸ್ಸು ಕಥಂ = ಹೇಗೆ ನಖಾವಲೂನಂ = ನಖದಿಂದ ಛೇದಿಸಲ್ಪಟ್ಟಿತ್ತು ? ಅವ್ಯಯ ಪದವು ಉಚಿತಾರ್ಥವ ನುಡಿವುದು. ||೧||

ಸೂತ ಉವಾಚ = ಸೂತಮುನಿ ನುಡಿವುತ್ತಿದ್ದಾನು.

ಭೋ ಋಷಯಃ = ಎಲೈ ಋಷಿಗಳಿರಾ ಪಾಪಪ್ರಣಾಶಿನೀಂ = ಪಾಪಂಗಳನು ಕೆಡಿಸುತ್ತಿದ್ದಂಥಾ ಪುಣ್ಯಾಂ = ಪುಣ್ಯವಹಂಥಾ ಕಥಾಂ = ಕಥೆಯನು ದೇವ-ದೇವಸ್ಯ = ದೇವಶ್ರೇಷ್ಠನಹಂಥಾ ಧೀಮತಃ = ವಿದ್ವಾನ್ನುವಹಂಥಾ ಮಹಾದೇವಸ್ಯ = ಮಹಾದೇವನ ಮಾಹಾತ್ಮ್ಯಂ = ಮಹಿಮೆಯನು ಶೃಣುಧ್ವಂ = ಕೇಳಿ. ||೨||

ಪುರಾ = ಪೂರ್ವದಲ್ಲಿ ಮೇರುಶೃಂಗೇ = ಮೇರುಪರ್ವತದ ಶಿಖರದಲ್ಲಿ

ಸ ಮಾಯಯಾ ಮಹೇಶಸ್ಯ ಮೋಹಿತೋ ಲೋಕಸಂಭವಃ
ಅವಿಜ್ಞಾಯ ಪರಂ ಭಾವಂ ಸ್ವಾತ್ಮಾನಂ ಪ್ರಾಹ ಗರ್ವಿತಃ ||೪||

ಬ್ರಹ್ಮೋವಾಚ—

ಅಹಂ [1]ಧಾತಾ[1] ಜಗದ್ಯೋನಿಃ ಸ್ವಯಂಭೂರೇಕ ಈಶ್ವರಃ
ಅನಾದಿಮತ್ಪರಂ ಬ್ರಹ್ಮ ಮಾಮಭ್ಯರ್ಚ್ಯ ವಿಮುಚ್ಯತೇ ||೫||

ಅಹಂ ಹಿ ಸರ್ವಲೋಕಾನಾಂ ಪ್ರವರ್ತಕನಿವರ್ತಕಃ
ನ ವಿದ್ಯತೇ ಚಾಭ್ಯಧಿಕೋ ಮತ್ತೋ ಲೋಕೇಷು ಕಶ್ಚನ ||೬||

ಮಹರ್ಷಯಃ = ಮಹಾಋಷಿಗಳು ದೇವಂ = ಪ್ರಕಾಶಿಸುತ್ತಿದ್ದಂಥಾ ಪಿತಾಮಹಂ = ಬ್ರಹ್ಮನನು ಪ್ರಣಮ್ಯ = ನಮಸ್ಕರಿಸಿ ದೇವಾದಿಂ = ದೇವರ್ಕಳಿಗೆ ಮೊದಲಹಂಥಾ ಏಕಂ = ಏಕವಹಂಥಾ ಅವ್ಯಯಂ = ಕೇಡಿಲ್ಲದೇ ಇದ್ದಂಥಾ ತತ್ತ್ವಂ = ತತ್ತ್ವವು ಕಿಂ = ಆವುದೆಂದು ಪ್ರೋಚುಃ = ಬೆಸಗೊಂಡರು. ||೩||

ಲೋಕಸಂಭವಃ = ಲೋಕಂಗಳನು ಹುಟ್ಟಿಸಿದಂಥಾ ಸಃ = ಆ ಬ್ರಹ್ಮನು ಮಹೇಶಸ್ಯ = ಪರಮೇಶ್ವರನ ಮಾಯಯಾ = ಮಾಯೆಯಿಂದ ಮೋಹಿತಃ = ಮೋಹಿಸಿದಾತನಾಗಿ ಗರ್ವಿತಃ = ಗರ್ವವನುಳ್ಳಾತನಾಗುತ್ತವು ಪರಂ = ಉತ್ಕೃಷ್ಟವಹಂಥಾ ಭಾವಂ = ತತ್ತ್ವಸ್ವರೂಪವನು ಅವಿಜ್ಞಾಯ = ಅರಿಯದೆ ಸ್ವಾತ್ಮಾನಂ = ತನ್ನ ಸ್ವರೂಪವನು ಕುರಿತು ಪ್ರಾಹ = ನುಡಿದನು. ||೪||

ಬ್ರಹ್ಮೋವಾಚ—ಬ್ರಹ್ಮನು ನುಡಿದನು.

ಅಹಂ = ನಾನು ಧಾತಾ = ಒಡೆಯನು ಜಗದ್ಯೋನಿಃ = ಲೋಕಂಗಳಿಗೆ ಉತ್ಪತ್ತಿಸ್ಥಾನವಹಂಥಾ ಆತನು. ಸ್ವಯಂಭೂಃ = ನನ್ನಿಂದ ನಾನೇ ಆದಾತನು. ಏಕಂ = ಏಕವಹಂಥಾ ಈಶ್ವರಃ = ಈಶ್ವರನು ಅನಾದಿಮತ್ = ಅನಾದಿಯಹಂಥಾ ಪರಂ ಬ್ರಹ್ಮ = ಪರಬ್ರಹ್ಮವು. ಮಾಂ = ಎನ್ನನು ಅಭ್ಯರ್ಚ್ಯ = ಪೂಜಿಸಿ ವಿಮುಚ್ಯತೇ = ಆವನಾನೊರ್ವ ಮುಮುಕ್ಷುವಾದಾತನು ಮೋಕ್ಷವನೆಯ್ದುತ್ತಿಹನು. ||೫||

ಅಹಂ = ನಾನು ಸರ್ವಲೋಕಾನಾಂ = ಸಮಸ್ತಲೋಕಂಗಳ ಪ್ರವರ್ತಕಃ = ಸೃಷ್ಟಿಸುವಾತನು ನಿವರ್ತಕಃ = ಸಂಹರಿಸುವಾತನು. ಹಿ = ಆವುದಾನೊಂದು ಕಾರಣವಾಗಿ ಮತ್ತಃ = (ಸಾಕಿದವನಾಗಿ) ಎನ್ನಿಂದವು ಅಭ್ಯಧಿಕಃ = ಅಧಿಕನಹಂಥಾತನು ಲೋಕೇಷು ಚ = ಲೋಕಂಗಳಲ್ಲಿಯೂ ಕಶ್ಚನ = ಒಬ್ಬಾನೊಬ್ಬನು ನ ವಿದ್ಯತೇ = ಇಲ್ಲ. ||೬||

---

1 ಕರ್ತಾ(ಘ). ಧಾತಾ(ಘ) ಪಾಠಾಂತರ

ತಸ್ಯೈವಂ ಮನ್ಯಮಾನಸ್ಯ ಯಜ್ಞೋ ನಾರಾಯಣಾಂಶಜಃ
ಪ್ರೋವಾಚ ಪ್ರಹಸನ್ ರೋಷಾತ್ಪರಿಪಾಟಲಲೋಚನಃ ||೭||

ಕಿಂ ಕಾರಣಮಿದಂ ಬ್ರಹ್ಮನ್ ವರ್ತತೇ ತವ ಸಾಂಪ್ರತಮ್
ಅಜ್ಞಾನಂ ಯೋಗಯುಕ್ತಸ್ಯ ನ ತ್ವೇತದುಚಿತಂ ತವ ||೮||

ಅಹಂ [1]ಧಾತಾ ಹಿ ಲೋಕಾನಾಂ ಯಜ್ಞೋ ನಾರಾಯಣಃ ಪ್ರಭುಃ
[2]ನ ಮಾಮೃತೇಽಸ್ಯ ಜಗತೋ ಜೀವನಂ ಸಂಭವೇತ್ ಕ್ವಚಿತ್ ||೯||

ಅಹಮೇವ ಪರಂ ಜ್ಯೋತಿರಹಮೇವ ಪರಾ ಗತಿಃ
ಮತ್ಪ್ರೇರಿತೇನ ಭವತಾ ಸೃಷ್ಟಂ ಭುವನಮಂಡಲಮ್ ||೧೦||

ಏವಂ = ಈ ಪ್ರಕಾರದಲ್ಲಿ ಮನ್ಯಮಾನಸ್ಯ = ಬಗೆವುತ್ತಿದ್ದಂಥಾ ತಸ್ಯ = ಆ ಬ್ರಹ್ಮನ, ನಾರಾಯಣಾಂಶಜಃ = ವಿಷ್ಣುವಿನ ಅಂಶದಲ್ಲಿ ಹುಟ್ಟಿದಂಥಾ ಯಜ್ಞಃ = ಯಜ್ಞನು ರೋಷಾತ್ = ಕ್ರೋಧದ ದೆಸೆಯಿಂದ ಪರಿಪಾಟಲಲೋಚನಃ = ಕೆಂಪಾದ ಕಣ್ಣುಳ್ಳಂಥಾತನಾಗಿ ಪ್ರಹಸನ್ = ನಗುತ್ತ ಪ್ರೋವಾಚ = ನುಡಿದನು. ||೭||

ಭೋ ಬ್ರಹ್ಮನ್ = ಎಲೈ ಬ್ರಹ್ಮನೇ! ಕಿಂ ಕಾರಣಂ = ಏನು ಕಾರಣವು ಇದಂ = ಈ ಅಜ್ಞಾನಂ = ಅಜ್ಞಾನವು ತವ = ನಿನಗೆ ಸಾಂಪ್ರತಂ = ಈಗ ವರ್ತತೇ = ವರ್ತಿಸುತ್ತಿಹುದು. ಯೋಗಯುಕ್ತಸ್ಯ = ಯೋಗದಿಂದ ಕೂಡಿದಂಥಾ ತವ = ನಿನಗೆ ಏತತ್ = ಈ ಅಜ್ಞಾನವು ಉಚಿತಂ = ಉಚಿತವು ನ ತು = ಇಲ್ಲ. ||೮||

ನಾರಾಯಣಃ = ನಾರಾಯಣನೆಹಂಥಾ ಪ್ರಭುಃ = ಅಧಿಪತಿಯೆಹಂಥಾ ಯಜ್ಞಃ = ಯಜ್ಞಸ್ವರೂಪನಹಂಥಾ ಅಹಂ ಹಿ = ನಾನಲಾ, ಲೋಕಾನಾಂ = ಲೋಕಂಗಳಿಗೆ ಧಾತಾ = ಒಡೆಯನು. ಮಾಂ = ಎನ್ನನು ಋತೇ = ತಪ್ಪಿಸಿ ಅಸ್ಯ ಜಗತಃ = ಈ ಲೋಕಕ್ಕೆ ಜೀವನಂ ಬದುಕು ಕ್ವಚಿತ್ = ಎಲ್ಲಿಯೂ ನ ಸಂಭವೇತ್ = ಸಂಭವಿಸದು. ||೯||

ಅಹಮೇವ = ನಾನೇ ಪರಂ ಜ್ಯೋತಿಃ = ಪರಂಜ್ಯೋತಿ ಸ್ವರೂಪವು ಅಹಮೇವ = ನಾನೇ ಪರಾ = ಉತ್ಕೃಷ್ಟವೆಹಂಥಾ ಗತಿಃ = ಮೋಕ್ಷಮಾರ್ಗವು ಮತ್ಪ್ರೇರಿತೇನ = ಎನ್ನಿಂದ ಪ್ರೇರಿಸಲ್ಪಟ್ಟಂಥಾ ಭವತಾ = ನಿನ್ನಿಂದ ಭುವನಮಂಡಲಂ = ಲೋಕಸಮೂಹವು ಸೃಷ್ಟಂ = ಸೃಷ್ಟಿಸಲುಪಟ್ಟಿತ್ತು. ||೧೦||

---

[1] ದಾತಾ (ಘ) ಧಾತಾ (ಘ) ಪಾಠಾಂತರ. [2] ನ ಚ ಮತ್ತೋಽಸ್ಯ ಜಗತೋ (ಘ)

ಏವಂ ವಿವದತೋರ್ಮೋಹಾತ್ ಪರಸ್ಪರಜಯೈಷಿಣೋಃ
ಆಜಗ್ಮುರ್ಯತ್ರ ತೌ ದೇವೌ ವೇದಾಶ್ಚತ್ವಾರ ಏವ ಹಿ ||೧೧||

ಅನ್ವೀಕ್ಷ್ಯ ದೇವಂ ಬ್ರಹ್ಮಾಣಂ ಯಜ್ಞಾತ್ಮಾನಂ ಚ ಸಂಸ್ಥಿತಮ್
ಪ್ರೋಚುಃ ಸಂವಿಗ್ನಹೃದಯಾ ಯಾಥಾರ್ಥ್ಯಂ ಪರಮೇಷ್ಠಿನಃ ||೧೨||

ಋಗ್ವೇದ ಉವಾಚ—

ಯಸ್ಯಾಂತಃಸ್ಥಾನಿ ಭೂತಾನಿ ಯಸ್ಮಾತ್ಸರ್ವಂ ಪ್ರವರ್ತತೇ
ಯಮಾಹುಸ್ತತ್ಪರಂ ತತ್ತ್ವಂ ಸ ದೇವಸ್ಸ್ಯಾನ್ಮಹೇಶ್ವರಃ ||೧೩||

ಯಜುರ್ವೇದ ಉವಾಚ—

ಯೋ ಯಜ್ಞೈರಖಿಲೈರೀಶೋ ಯೋಗೇನ ಚ ಸಮರ್ಚ್ಯತೇ
ಯಮಾಹುರೀಶ್ವರಂ ದೇವಂ ಸ ದೇವಸ್ಸ್ಯಾತ್ಪಿನಾಕಧೃಕ್ ||೧೪||

ಮೋಹಾತ್ = ಅಜ್ಞಾನದ ದೆಸೆಯಿಂದ ವಿವದತೋಃ = ವಾದಿಸುತ್ತಿದ್ದಂಥಾ ಪರಸ್ಪರಜಯೈಷಿಣೋಃ = ಒಬ್ಬೊಬ್ಬರ ಗೆಲಲಿಚ್ಛೆಯನುಳ್ಳಂಥಾ ಬ್ರಹ್ಮ-ಯಜ್ಞರುಗಳಿಗೆ ಏವಂ = ಈ ಪ್ರಕಾರವಹಂಥಾ ವಾದವಾಯಿತ್ತು. ಯತ್ರ = ಆವುದಾನೊಂದು ಸ್ಥಾನದಲ್ಲಿ ತೌ ದೇವೌ = ಆ ಬ್ರಹ್ಮಯಜ್ಞರುಗಳಿದ್ದಾರು, ತತ್ರ = ಅಲ್ಲಿ ಹಿ = ಆವುದಾನೊಂದು ಕಾರಣ ಚತ್ವಾರಃ = ನಾಲ್ಕು ವೇದಾ ಏವ = ವೇದಂಗಳೇ ಆಜಗ್ಮುಃ = ಎಯ್ದಿದವು. ||೧೧||

ದೇವಂ = ದೇವನಹಂಥಾ ಬ್ರಹ್ಮಾಣಂ = ಬ್ರಹ್ಮನನು ಸಂಸ್ಥಿತಂ = ಇರುತ್ತಿದ್ದಂಥಾ ಯಜ್ಞಾತ್ಮಾನಂ = ಯಜ್ಞಸ್ವರೂಪನಹಂಥಾ ಮಹಾವಿಷ್ಣುವನು ಅನ್ವೀಕ್ಷ್ಯ = ನೋಡಿ ಸಂವಿಗ್ನಹೃದಯಾಃ = ಮರುಗಲ್ಪಟ್ಟ ಚಿತ್ತವನುಳ್ಳಂಥಾವಾಗಿ ಪರಮೇಷ್ಠಿನಃ = ಪರಮೇಶ್ವರನ ಯಾಥಾರ್ಥ್ಯಂ = ಯಥಾರ್ಥತ್ವವನು ಪ್ರೋಚುಃ = ನುಡಿದವು. ||೧೨||

ಋಗ್ವೇದ ಉವಾಚ—ಋಗ್ವೇದ ನುಡಿವುತ್ತಿದ್ದುದು

ಭೂತಾನಿ = ಪ್ರಾಣಿಗಳು ಯಸ್ಯ = ಆವನಾನೋರ್ವ ದೇವನ ಅಂತಃಸ್ಥಾನಿ = ಒಳಗಿರುತ್ತಿಹವು. ಯಸ್ಮಾತ್ = ಆವನ ದೆಸೆಯಿಂದ ಸರ್ವಂ = ಸಮಸ್ತ ಲೋಕವು ಪ್ರವರ್ತತೇ = ವರ್ತಿಸಲುಪಡುತ್ತಿಹುದು. ಯಂ = ಆವನಾನೊಬ್ಬ ದೇವನನು ತತ್ = ಆ ಪರಂ ತತ್ತ್ವಂ = ಪರತತ್ತ್ವವೆಂದು ಆಹುಃ = ಹೇಳುತ್ತಿಹರು, ಸ ದೇವಃ = ಆ ದೇವನು ಮಹೇಶ್ವರಃ = ಶಿವನು ಸ್ಯಾತ್ = ಅಹನು.

ಯಜುರ್ವೇದ ಉವಾಚ—ಯಜುರ್ವೇದ ನುಡಿವುತ್ತಿದ್ದುದು

ಯಃ = ಆವನಾನೊಬ್ಬ ಈಶಃ = ಈಶ್ವರನು ಅಖಿಲೈಃ = ಸಮಸ್ತವಹಂಥಾ

ಸಾಮವೇದ ಉವಾಚ—

ಯೇನೇದಂ ಭ್ರಾಮ್ಯತೇ ಚಕ್ರಂ ಯದಾಕಾಶಾಂತರಂ ಮಹತ್
ಯೋಗಿಭಿರ್ವೇದ್ಯತೇ ತತ್ತ್ವಂ ಮಹಾದೇವಃ ಸ ಶಂಕರಃ ||೧೫||

[1]ಅಥರ್ವವೇದ ಉವಾಚ—

ಯಂ ಪ್ರಪಶ್ಯಂತಿ ದೇವೇಶಂ ಯತಂತೋ ಯತಯಃ ಪರಮ್
ಮಹೇಶಂ ಪುರುಷಂ ರುದ್ರಂ ಸ ದೇವೋ ಭಗವಾನ್ ಭವಃ ||೧೬||

ಯಜ್ಞೈಃ = ಯಾಗಂಗಳಿಂದ ಯೋಗೇನ ಚ = ಯೋಗದಿಂದವು ಸಮಭ್ಯರ್ಚ್ಯತೇ = ಲೇಸಾಗಿ ಅರ್ಚಿಸಿಕೊಳಲು ಪಡುತ್ತಿಹನು, ಯಂ = ಆವನಾನೊಬ್ಬ ದೇವಂ = ದೇವನನು ಈಶ್ವರಂ = ಈಶ್ವರನು ಎಂದು [ಈಶ್ವರನನ್ನಾಗಿ] ಆಹುಃ = ಹೇಳುತ್ತಿಹರು. ಸ ದೇವಃ = ಆ ದೇವನು ಪಿನಾಕಧೃಕ್ = ಪಿನಾಕಪಾಣಿಯಹ ಪರಮೇಶ್ವರನು ಸ್ಯಾತ್ = ಅಹನು. ||೧೪||

ಸಾಮವೇದ ಉವಾಚ—ಸಾಮವೇದ ನುಡಿವುತ್ತಿದ್ದುದು

ಯೇನ = ಆವನಾನೋರ್ವ ದೇವನಿಂದ ಇದಂ ಚಕ್ರಂ = ಈ ಸಂಸಾರವೆಂಬ ತಿಗುರಿ ಭ್ರಾಮ್ಯತೇ = ತಿರುಗಲುಪಡುತ್ತಿಹುದು. ಆಕಾಶಾಂತರಂ— ಆಕಾಶವನು ವ್ಯಾಪಿಸಿಕೊಂಡಿದ್ದಂಥಾ ಮಹತ್ = ಉತ್ಕೃಷ್ಟವಹಂಥಾ ಯತ್ = ಆವುದಾನೊಂದು ತತ್ತ್ವಂ = ತತ್ತ್ವವು ಯೋಗಿಭಿಃ = ಶಿವಯೋಗಿಗಳಿಂದ ವೇದ್ಯತೇ = ಅರಿಯಲುಪಡುತ್ತಿಹುದು, ಸಃ = ಆ ದೇವನು ಶಂಕರಃ = ಸುಖವನು ಮಾಡುತ್ತಿದ್ದಂಥಾ ಮಹಾದೇವಃ = ಪರಮೇಶ್ವರನು. ||೧೫||

ಅಥರ್ವವೇದ ಉವಾಚ—ಅಥರ್ವವೇದ ನುಡಿವುತ್ತಿದ್ದುದು

ಯತಂತಃ = ನಿಯತರಹಂಥಾ ಯತಯಃ = ಯತೀಶ್ವರರುಗಳು ಯಂ = ಆವನಾನೊಬ್ಬ ದೇವನನು ದೇವೇಶಂ = ದೇವಶ್ರೇಷ್ಠನಹಂಥಾ ಪರಂ = ಉತ್ಕೃಷ್ಟವಹಂಥಾ ಮಹೇಶಂ = ಅಧಿಕವಹ ಐಶ್ವರ್ಯವನುಳ್ಳಂಥಾ ಪುರುಷಂ = ಬಹಳವಹ ಸುಖವನು ಕೊಡುತ್ತಿದ್ದಂಥಾ ರುದ್ರಂ = ದುಃಖವನು ಕೆಡಿಸುತ್ತಿದ್ದಾತನನು ಎಂದು ಪ್ರಪಶ್ಯಂತಿ = ಕಾಣುತ್ತಿಹರು, ಸ ದೇವಃ = ಆ ದೇವನು ಭಗವಾನ್ = ಷಡ್ಗುಣೈಶ್ವರ್ಯಸಂಪನ್ನನಹಂಥಾ ಭವಃ = ಪರಮೇಶ್ವರನು. ಪುರುಷಶಬ್ದಕ್ಕೆ ನಿರ್ವಚನವು ಪುರು ಬಹು ಸುಖಂ ಸನೋತಿ ದದಾತೀತಿ ಪುರುಷಃ [ಸನೋತಿ, ಷಣು-ದಾನೇ ಇತಿ ಧಾತುಃ] ||೧೬||

---

1 ಅಥರ್ವಣ ಉವಾಚ (ಘ)

ಏವಂ ಸ ಭಗವಾನ್ ಬ್ರಹ್ಮಾ ವೇದಾನಾಮೀರಿತಂ ಶುಭಮ್
ಶ್ರುತ್ವಾ ವಿಹಸ್ಯ ವಿಶ್ವಾತ್ಮಾ [1]ಯಜ್ಞಶ್ಚಾಹ[1] ವಿಮೋಹಿತಃ ||೧೭||

ಕಥಂ ತತ್ಪರಮಂ ಬ್ರಹ್ಮ ಸರ್ವಸಂಗವಿವರ್ಜಿತಮ್
ರಮತೇ ಭಾರ್ಯಯಾ ಸಾರ್ಧಂ ಪ್ರಮಥೈಶ್ಚಾತಿಗರ್ವಿತೈಃ ||೧೮||

ಇತೀರಿತೇ ಸ ಭಗವಾನ್ ಪ್ರಣವಾತ್ಮಾ ಸನಾತನಃ
ಅಮೂರ್ತೋ ಮೂರ್ತಿಮಾನ್ ಭೂತ್ವಾ ವಚಃ ಪ್ರಾಹ ಪಿತಾಮಹಮ್ ೧೯

ಪ್ರಣವ ಉವಾಚ—

ನ ಹ್ಯೇಷ ಭಗವಾನ್ ಪತ್ನ್ಯಾ ಸ್ವಾತ್ಮನೋ ವ್ಯತಿರಿಕ್ತಯಾ
ಕದಾಚಿದ್ರಮತೇ [2]ರುದ್ರಸ್ತಾದೃಶೋಽಪಿ ಮಹೇಶ್ವರಃ[2] ||೨೦||

ಏವಂ=ಈ ಪ್ರಕಾರದಲ್ಲಿ ವೇದಾನಾಂ=ವೇದಂಗಳ ಶುಭಂ = ಒಪ್ಪುತ್ತಿದ್ದಂಥಾ ಈರಿತಂ=ವಾಕ್ಯವನು ಶ್ರುತ್ವಾ=ಕೇಳಿ, ಭಗವಾನ್=ಭಗವಾನ್ನುವಹಂಥಾ ಸ ಬ್ರಹ್ಮಾ=ಆ ಬ್ರಹ್ಮನು ವಿಹಸ್ಯ=ನೆಕ್ಕು ವಿಮೋಹಿತಃ=ಭ್ರಾಮಕನಾದನು. ವಿಶ್ವಾತ್ಮಾ=ವಿಶ್ವರೂಪನಹಂಥಾ ಯಜ್ಞಶ್ಚ=ಯಜ್ಞನೂ ವಿಮೋಹಿತಃ =ಭ್ರಾಮಕನಾಗಿ ವಿಹಸ್ಯ=ಹಾಸ್ಯವ ಮಾಡಿ ಆಹ=ನುಡಿದನು. ||೧೭||

ಭಾರ್ಯಯಾ ಸಾರ್ಧಂ= ಸ್ತ್ರೀಯಹಂಥಾ ಪಾರ್ವತಿಯೊಡನೆ ರಮತೇ = ಕ್ರೀಡಿಸುತ್ತಿಹನು. ಅತಿಗರ್ವಿತೈಃ = ಅತ್ಯಂತ ಗರ್ವಿಗಳಹಂಥಾ ಪ್ರಮಥೈಶ್ಚ = ಪ್ರಮಥರುಗಳೊಡನೆಯೂ ರಮತೇ = ಆಡುತ್ತಿಹನು ರಮು-ಕ್ರೀಡಾಯಾಂ ಇತಿ ಧಾತುಃ. ಸರ್ವಸಂಗವಿವರ್ಜಿತಂ = ಸರ್ವಸಂಗವಿಲ್ಲದೆ ಇದ್ದಂಥಾ ತತ್ = ಆ ಪರಮಂ ಬ್ರಹ್ಮ=ಪರಬ್ರಹ್ಮವು ಕಥಂ=ಹೇಂಗಹನು ? ||೧೮||

ಭಗವಾನ್ =[3]ಭಗವಾನನ[3]ಹಂಥಾ ಸಃ=ಆ ಬ್ರಹ್ಮನು ಇತಿ=ಈ ಪ್ರಕಾರದಲ್ಲಿ ಈರಿತೇ ಸತಿ=ನುಡಿವುತ್ತಿರಲು, ಸನಾತನಃ=ನಿತ್ಯನಹಂಥಾ, ಅಮೂರ್ತಃ =ಮೂರ್ತಿಯಿಲ್ಲದೇ ಇದ್ದಂಥಾ, ಪ್ರಣವಾತ್ಮಾ = ಪ್ರಣವಸ್ವರೂಪು ಮೂರ್ತಿಮಾನ್=ಮೂರ್ತಿಯನುಳ್ಳಂಥಾದ್ದು ಭೂತ್ವಾ=ಆಗಿ, ಪಿತಾಮಹಂ= ಬ್ರಹ್ಮನನು ಕುರಿತು ವಚಃ=ವಾಕ್ಯವನು ಪ್ರಾಹ=ನುಡಿಯಿತ್ತು. ||೧೯||

ಪ್ರಣವ ಉವಾಚ—ಪ್ರಣವ ನುಡಿವುತ್ತಿದ್ದೂದು

ತಾದೃಶಃ=ಆ ವೇದಂಗಳು ಹೇಳಿದ ಪ್ರಕಾರವಹಂಥಾ ರುದ್ರಃ=ದುಃಖವನು

---

[1] ವೇದಾಂಶ್ಚಾಹ (ಘ) [2] ರುದ್ರಶ್ಚಿದ್ರೂಪಃ ಸ್ವಾತ್ಮಹೇಶ್ವರಃ (ಘ)

[3] ಭಗವಾನ್ನುವೆ (ಘ)

ಅಯಂ ಸ ಭಗವಾನೀಶಃ ಸ್ವಯಂಜ್ಯೋತಿಸ್ಸನಾತನಃ
ಸ್ವಾನಂದಭೂತಾ ಕಥಿತಾ ದೇವೀ ನಾಗಂತುಕೀ ಶಿವಾ ॥೨೦॥

ಇತ್ಯೇವಮುಕ್ತೇಽಪಿ ತದಾ ಯಜ್ಞಮೂರ್ತೇರಜಸ್ಯ ಚ
[1]ನಾಜ್ಞಾನಮಗಮನ್ನಾಶಂ ಈಶ್ವರಸ್ಯೈವ ಮಾಯಯಾ ॥೨೧॥

ತದಂತರೇ ಮಹತ್ ಜ್ಯೋತಿರ್ವಿರಿಂಚೋ ವಿಶ್ವಭಾವನಃ
ಪ್ರಾಪಶ್ಯದದ್ಭುತಂ ದಿವ್ಯಂ ಪೂರಯದ್ಗಗನಾಂತರಮ್ ॥೨೪॥

[2]ಸೂತ ಉವಾಚ[2]—

ಕೆಡಿಸುತ್ತಿದ್ದಂಥಾ ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಏಷಃ = ಈ ಮಹೇಶ್ವರೋಽಪಿ = ಶಿವನು ಸ್ವಾತ್ಮನಃ = ತನಗೆ ವ್ಯತಿರಿಕ್ತಯಾ = ಬೇರಾದಂಥಾ, ಪತ್ನ್ಯಾ = ಸ್ತ್ರೀಯೊಡನೆ ಕದಾಚಿತ್ = ಒಂದು ಬಾರಿಯೂ ನ ರಮತೇ ಹಿ = ಕ್ರೀಡಿಸುತ್ತಿರನಲಾ. ॥೨೦॥

ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಸನಾತನಃ = ಕೇಡಿಲ್ಲದೇ ಇದ್ದಂಥಾ ಸೋಽಯಮೀಶಃ = ಆ ಈ ಈಶ್ವರನು ಸ್ವಯಂ = ತಾನೇ ಜ್ಯೋತಿಃ = ಪರಂಜ್ಯೋತಿಸ್ವರೂಪನು. ಶಿವಾ = ಒಪ್ಪುತ್ತಿದ್ದಂಥಾ ದೇವೀ = ಪಾರ್ವತೀದೇವಿ ಸ್ವಾನಂದಭೂತಾ = ತನ್ನ ಆನಂದವೇ ಸ್ವರೂಪಾದಾಯಕ[ಳೆಂ]ದು ಕಥಿತಾ = ಹೇಳಲ್ಪಟ್ಟಳು. ಆಗಂತುಕೀ = ಬೇರೊಂದು ಸ್ವರೂಪವಹಂಥಾಯಕಳು ನ = ಅಲ್ಲ.

ಇತ್ಯೇವಂ = ಈ ಪ್ರಕಾರದಲ್ಲಿ ಉಕ್ತೇ ಸತ್ಯಪಿ = ನುಡಿವುತ್ತಿರಲು, ತದಾ = ಆಗ ಯಜ್ಞಮೂರ್ತೇಃ = ಯಜ್ಞಸ್ವರೂಪಂಗೆಯೂ ಅಜಸ್ಯ ಚ = ಬ್ರಹ್ಮಂಗೆಯೂ ಈಶ್ವರಸ್ಯ = ಪರಮೇಶ್ವರನ ಮಾಯಯೈವ = ಮಾಯೆಯಿಂದವೇ ಅಜ್ಞಾನಂ = ಅಜ್ಞಾನವು ನಾಶಂ = ಕೆಡುಹವನು ನಾಗಮತ್ = ಎಯ್ದುದುದಿಲ್ಲ. ॥೨೧॥

ತದಂತರೇ = ಅದರ ತರುವಾಯಲ್ಲಿ [ಆ ಮಧ್ಯದಲ್ಲಿ] ವಿಶ್ವಭಾವನಃ = ಹಲವನೆನವುತ್ತಿದ್ದಂಥಾ ವಿರಿಂಚಃ = ಬ್ರಹ್ಮನು ಗಗನಾಂತರಂ = ಆಕಾಶಮಧ್ಯವನು ಪೂರಯತ್ = ತುಂಬುತ್ತಿದ್ದಂಥಾ ಅದ್ಭುತಂ = ಆಶ್ಚರ್ಯವಹಂಥಾ ಮಹತ್ = ಉತ್ಕೃಷ್ಟವಹಂಥಾ ದಿವ್ಯಂ ಜ್ಯೋತಿಃ = ದಿವ್ಯ ತೇಜಸ್ಸನು ಪ್ರಾಪಶ್ಯತ್ = ಕಂಡನು

ಸೂತ ಉವಾಚ = ಸೂತನ ವಾಕ್ಯವು[2]

---

1 ಸುಜ್ಞಾನಂ ನಾಗಮತ್ಕಿಂಚಿತ್ (ಘ)

2 ಈ ಶ್ಲೋಕಾನಂತರ (ಗಖ) ದಲ್ಲಿ ಬಂದಿದೆ.

ತನ್ಮಧ್ಯಸಂಸ್ಥಂ ವಿಮಲಂ ಮಂಡಲಂ ತೇಜಸೋಜ್ಜ್ವಲಮ್
ವ್ಯೋಮಮಧ್ಯಗತಂ ಶುಭ್ರಂ ಪ್ರಾದುರಾಸೀದ್ದ್ವಿಜೋತ್ತಮಾಃ ||೨೪||

ಸ ಸೃಷ್ಟ್ವಾ ವದನಂ ದಿವ್ಯಂ ಮೂರ್ಧ್ನಿ ಲೋಕಪಿತಾಮಹಃ
ತೇನ ತನ್ಮಂಡಲಂ ಘೋರಮಾಲೋಕಯದನಿಂದಿತಮ್ ||೨೫||

ಪ್ರಜಜ್ವಾಲಾತಿಕೋಪೇನ ಬ್ರಹ್ಮಣಃ ಪಂಚಮಂ ಶಿರಃ
[1]ಕ್ಷಣಾದದೃಶ್ಯತ [1]ಮಹಾನ್ ಪುರುಷೋ ನೀಲಲೋಹಿತಃ ||೨೬||

ತ್ರಿಶೂಲೀ ಪಿಂಗಲೋ ದೇವೋ ನಾಗಯಜ್ಞೋಪವೀತವಾನ್
ತಂ ಪ್ರಾಹ ಭಗವಾನ್ ಬ್ರಹ್ಮಾ ಶಂಕರಂ ನೀಲಲೋಹಿತಮ್ ||೨೭||

ಭೋ ದ್ವಿಜೋತ್ತಮಾಃ = ಎಲೈ ಬ್ರಾಹ್ಮಣೋತ್ತಮರುಗಳಿರಾ! ತನ್ಮಧ್ಯಸಂಸ್ಥಂ = ಆ ಪ್ರಕಾಶದ ಮಧ್ಯದಲ್ಲಿ ಇರುತ್ತಿದ್ದಂಥಾ ವಿಮಲಂ = ನಿರ್ಮಲವಹಂಥಾ ತೇಜಸಾ = ತೇಜಸ್ಸಿನಿಂದ ಉಜ್ಜ್ವಲಂ = ಅತ್ಯಂತ ಪ್ರಕಾಶಿಸುತ್ತಿದ್ದಂಥಾ ವ್ಯೋಮ-ಮಧ್ಯಗತಂ = ಆಕಾಶಮಧ್ಯವನೆಯ್ದಿದಂಥಾ ಶುಭ್ರಂ = ಶ್ವೇತವರ್ಣವಹಂಥಾ ಮಂಡಲಂ = ವೃತ್ತಾಕಾರವು ಪ್ರಾದುರಾಸೀತ್ = ಪ್ರತ್ಯಕ್ಷವಾಯಿತ್ತು. ||೨೪||

ಲೋಕಪಿತಾಮಹಃ = ಲೋಕಕ್ಕೆ ಪಿತಾಮಹನಂಥಾ ಸಃ = ಆ ಬ್ರಹ್ಮನು ಮೂರ್ಧ್ನಿ = ಶಿರಸ್ಸಿನಲ್ಲಿ ದಿವ್ಯಂ = ದಿವ್ಯವಹಂಥಾ ವದನಂ = ಮುಖವನು ಸೃಷ್ಟ್ವಾ = ಸೃಜಿಸಿ, ತೇನ = ಆ ಮುಖದಿಂದ ಘೋರಂ = ಭಯಂಕರವಹಂಥಾ ಅನಿಂದಿತಂ = ನಿಂದೆಯಿಲ್ಲದಿದ್ದಂಥಾ ತನ್ಮಂಡಲಂ = ಆ ಜ್ಯೋತಿರ್ಮಂಡಲವನು ಆಲೋಕಯತ್ = ನೋಡಿದನು. ||೨೫||

ಬ್ರಹ್ಮಣಃ = ಬ್ರಹ್ಮನ ಪಂಚಮಂ = ಐದನೆಯದಹಂಥಾ ಶಿರಃ = ಶಿರಸ್ಸು ಅತಿಕೋಪೇನ = ಅತ್ಯಂತ ಕೋಪದಿಂದ ಪ್ರಜಜ್ವಾಲ = ಜ್ವಲಿಸಿತು- ಉರಿದೆದ್ದಿ-ತ್ತೆಂಬರ್ಥ. ಕ್ಷಣಾತ್ = ಕ್ಷಣಮಾತ್ರದ ದೆಸೆಯಿಂದ ಮಹಾನ್ ಪುರುಷಃ = ಮಹಾನ್‌ಪುರುಷನಹಂಥಾ ನೀಲಲೋಹಿತಃ = ಶಿವನು ಅದೃಶ್ಯತ = ಕಾಣಲು-ಪಟ್ಟನು. ದೃಶಿರ್-ಪ್ರೇಕ್ಷಣೇ ಎಂಬ ಧಾತು ಲಙಾತ್ಮನೇಪದಮ್. ||೨೬||

ದೇವಃ = ಪರಮೇಶ್ವರನು ಪಿಂಗಲಃ = ಜಟಾಜೂಟದಲ್ಲಿ ಪಿಂಗಲವರ್ಣವನುಳ್ಳಂಥಾ ತ್ರಿಶೂಲೀ = ತ್ರಿಶೂಲವ ಧರಿಸಿದಂಥಾ ನಾಗಯಜ್ಞೋಪವೀತವಾನ್ = ಸರ್ಪಯಜ್ಞೋಪವೀತವನುಳ್ಳಾತನು. ಶಂಕರಂ = ಸುಖವನು ಮಾಡುತ್ತಿದ್ದಂಥಾ

---

1 ಕ್ಷಣಾದದೃಶ್ಯತ್ (ಘ)

ಜಾನಾಮಿ ಭವತಃ ಪೂರ್ವಂ ಲಲಾಟೇ ಮಮ ಶಂಕರ
ಪ್ರಾದುರ್ಭಾವಂ ಮಹೇಶಾನ ಮಾಮೇವ ಶರಣಂ ವ್ರಜ ||೨೮||

ಶ್ರುತ್ವಾ ಸಗರ್ವಂ ವಚನಂ ಪದ್ಮಯೋನೇರಥೇಶ್ವರಃ
ಸಸರ್ಜ ಸ್ವಾತ್ಮನಃ ಕಂಚಿದ್ಭೈರವಂ ಲೋಕದಾಹಕಮ್ ||೨೯||

ಸ್ವಯಂ ಸಾಕ್ಷಾನ್ಮಹಾದೇವಃ ಕ್ಷಣಾದ್ವೈ ಕಾಲಭೈರವಃ
ಚಕರ್ತ ಕರಜಾಗ್ರೇಣ ಬ್ರಹ್ಮಣಃ ಪಂಚಮಂ ಶಿರಃ ||೩೦||

ನಿಕೃತ್ತವದನೋ ದೇವೋ ಬ್ರಹ್ಮಾ ದೇವೇನ ಶಂಭುನಾ
ಮಮಾರ ಚೇಶಯೋಗೇನ ಜೀವಿತಂ ಪ್ರಾಪ ವಿಶ್ವಸೃಟ್ ||೩೧||

ತಂ = ಆ ನೀಲಲೋಹಿತಂ = ಕೊರಳ ಕಪ್ಪು ಜೆಡೆಯ ಕೆಂಪನುಳ್ಳಂಥಾ ಶಿವನನು ಭಗವಾನ್ = ಸಾಮರ್ಥ್ಯವನುಳ್ಳಂಥಾ ಬ್ರಹ್ಮಾ ಬ್ರಹ್ಮನು ಪ್ರಾಹ = ಗರ್ವದಿಂದ ನುಡಿದನು.

ಶಂಕರ = ಸುಖವನ್ನು ಮಾಡುತ್ತಿದ್ದಂಥಾ ಮಹೇಶಾನ = ಎಲೈ ಈಶ್ವರನೇ ! ಪೂರ್ವಂ = ಪೂರ್ವದಲ್ಲಿ ಮಮ = ಎನ್ನ ಲಲಾಟೇ = ನೊಸಲಲ್ಲಿ ಭವತಃ = ನಿನ್ನ ಪ್ರಾದುರ್ಭಾವಂ = ಉತ್ಪತ್ತಿಯನು ಜಾನಾಮಿ = ಬಲ್ಲೆನು. ಮಾಮೇವ = ಎನ್ನನೇ ಶರಣಂ = ಮೊರೆಯೋಗುಹವನು ವ್ರಜ = ಎಯ್ದು. ||೨೮||

ಅಥ = ಅನಂತರದಲ್ಲಿ ಈಶ್ವರಃ = ಪರಮೇಶ್ವರನು ಪದ್ಮಯೋನೇಃ = ತಾವರೆಯಲ್ಲಿ ಉತ್ಪತ್ತಿಯನುಳ್ಳಂಥಾ ಬ್ರಹ್ಮನ ಸಗರ್ವಂ = ಗರ್ವದಿಂದ ಸಹಿತವಾದಂಥಾ ವಚನಂ = ವಾಕ್ಯವನು ಶ್ರುತ್ವಾ = ಕೇಳಿ, ಲೋಕದಾಹಕಂ = ಲೋಕವನು ಸುಡುವಂಥಾ ಕಂಚಿತ್ = ಒಬ್ಬಾನೊಬ್ಬ ಭೈರವಂ = ಭೈರವನನು ಸ್ವಾತ್ಮನಃ = ತನ್ನ ಶರೀರದ ದೆಸೆಯಿಂದ ಸಸರ್ಜ = ಸೃಜಿಸಿದನು. ||೨೯||

ಸಾಕ್ಷಾತ್ = ಪ್ರತ್ಯಕ್ಷವಹಂಥಾ ಮಹಾದೇವಃ ಸ್ವಯಂ = ಪರಮೇಶ್ವರ ತಾನೇ ಕಾಲಭೈರವಃ = ಕಾಲಭೈರವನಾಗಿ ಕ್ಷಣಾದ್ವೈ = ಕ್ಷಣಮಾತ್ರದ ದೆಸೆಯಿಂದವೇ ಕರಜಾಗ್ರೇಣ = ಉಗುರಿನ ತುದಿಯಿಂದ ಬ್ರಹ್ಮಣಃ = ಬ್ರಹ್ಮನ ಪಂಚಮಂ ಶಿರಃ = ಐದನೆಯ ಶಿರಸ್ಸನು ಚಕರ್ತ = ಛೇದಿಸಿದನು. ಕೃತೀ-ಛೇದನೇ ಎಂಬ ಧಾತು. ||೩೦||

ದೇವೇನ = ಪ್ರಕಾಶಸ್ವರೂಪನಹಂಥಾ ಶಂಭುನಾ = ಪರಮೇಶ್ವರನಿಂದ ನಿಕೃತ್ತವದನಃ = ಛೇದಿಸಲುಪಟ್ಟ ಮುಖವನುಳ್ಳಂಥಾ ದೇವಃ = ದೇವನಹಂಥಾ ಬ್ರಹ್ಮಾ ಚ = ಬ್ರಹ್ಮನು ಮಮಾರ = ಮೃತವಾ(ನಾ)ದನು. ಈಶಯೋಗೇನ =

ತತ್ಕಂಧರಾಂತರ್ಧಮನೀನಿಷ್ಕ್ರಾಂತೈಃ[1] ಶೋಣಿತಸ್ರವೈಃ[1]
ಜಗನ್ಮಗ್ನಂ ತದಾ ದೇವೋ ವಹ್ನಿನೇತ್ರೋದ್ಭವಸ್ಯ ತು ||೩೨||
ಜ್ವರಲೇಶಸ್ಯ ಕೃತವಾನಾಹುತಿಂ ರಕ್ತವಾರಿಧಿಮ್
ಕಪಾಲಗಹ್ವರಗತಂ ರಕ್ತಮಾಂಸಾದಿಕಂ ತಥಾ ||೩೩||

[2]ತೇನೈವಾಶೋಷಯತ್ಸದ್ಯೋ[2] ಜ್ವರಲೇಶೇನ ಭೈರವಃ
ಅಥಾನ್ವಪಶ್ಯದ್ಗಿರಿಶಂ ಮಂಡಲಾಂತರಸಂಸ್ಥಿತಮ್ ||೩೪||

ಸಮಾಸೀನಂ ಮಹಾದೇವ್ಯಾ ಮಹಾದೇವಂ ತ್ರಿಲೋಚನಮ್
ಭುಜಂಗರಾಜವಲಯಂ ಚಂದ್ರಾವಯವಭೂಷಣಮ್ ||೩೫||

ಈಶ್ವರನ ಧ್ಯಾನದಿಂದ ವಿಶ್ವಸೃಟ್ = ಬ್ರಹ್ಮನು ಜೀವಿತಂ = ಸಪ್ರಾಣಿಸಿಕೊಳುಹ ವನು (ಬದುಕುವಿಕೆಯನ್ನು] ಪ್ರಾಪ = ಎಯ್ದಿದನು. ||೩ ||

ತತ್ಕಂಧರಾಂತರ್ಧಮನೀನಿಷ್ಕ್ರಾಂತೈಃ = ಆ ಬ್ರಹ್ಮನ ಶಿರಸ್ಸಿನೊಳಗಣ ನಾಳದಿಂದ ಹೊರಹೊಮ್ಮುತ್ತಿದ್ದಂಥಾ ಶೋಣಿತಸ್ರವೈಃ = ರಕ್ತದ ಪ್ರವಾಹಂಗಳಿಂದ ಜಗತ್ = ಲೋಕವು ಮಗ್ನಂ = ಮುಂಗಲುಪಟ್ಟಿತ್ತು. ತದಾ = ಆಗ ದೇವಃ = ಕಾಲಭೈರವನು ವಹ್ನಿನೇತ್ರೋದ್ಭವಸ್ಯ = ನೊಸಲ ಕಿಚ್ಚುಗಣ್ಣಿನಿಂದ ಹುಟ್ಟಿದಂಥಾ ಜ್ವರಲೇಶಸ್ಯ ತು = ಉರಿಯ ಅಣುಮಾತ್ರಕ್ಕೆ ರಕ್ತವಾರಿಧಿಂ = ರಕ್ತದ ಸಮುದ್ರವನು ತಥಾ = ಹಾಂಗೆ ಕಪಾಲಗಹ್ವರಗತಂ = ಕಪಾಲವೆಂಬ ಗೊಹೆಯ ನೆಯ್ದಿದಂಥಾ ರಕ್ತಮಾಂಸಾದಿಕಂ = ರಕ್ತ ಮಾಂಸ ಮೊದಲಾದಂಥಾದ್ದನು ಆಹುತಿಂ = ಆಹುತಿ ಯನ್ನಾಗಿ ಕೃತವಾನ್ = ಮಾಡಿದನು. ||೩೩||

ಭೈರವಃ = ಕಾಲಭೈರವನು ತೇನ ಜ್ವರಲೇಶೇನೈವ = ಆ ನೊಸಲ ಕಣ್ಣ ಉರಿಯ ಕಿಂಚಿನ್ಮಾತ್ರದಿಂದವೇ ಸದ್ಯಃ = ಆ ಕ್ಷಣದಲ್ಲಿ ಅಶೋಷಯತ್ = ರಕ್ತ ಸಮುದ್ರವ ಬತ್ತಿಸಿದನು. ಅಥ = ಅನಂತರದಲ್ಲಿ ಬ್ರಹ್ಮನು ಮಂಡಲಾಂತರಸಂಸ್ಥಿತಂ = ಜ್ಯೋತಿರ್ಮಂಡಲದ ಮಧ್ಯದಲ್ಲಿ ಇರುತ್ತಿದ್ದಂಥಾ ಗಿರಿಶಂ = [3]ಶಿವನನು[3] ಅನ್ವಪಶ್ಯತ್ = ನೋಡಿದನು (ಕಂಡನು). ||೩೪||

ಮಹಾದೇವ್ಯಾ = ಪಾರ್ವತೀದೇವಿಯೊಡನೆ ಸಮಾಸೀನಂ = [4]ಕುಳ್ಳಿರ್ದಂಥಾ[4] ಮಹಾದೇವಂ = ಉತ್ಕೃಷ್ಟವಹ ದೇವನಹಂಥಾ ತ್ರಿಲೋಚನಂ = ಮೂರು ನಯನಂಗಳ ನುಳ್ಳಂಥಾ ಭುಜಂಗರಾಜವಲಯಂ = ಸರ್ಪರಾಜನಹಂಥಾ ವಾಸುಕಿಯ ಕಂಕಣವ-

---

1 ಶೋಣಿತಪ್ಲವೈಃ (ಖ) ಶೋಣಿತಪಲ್ಲವೈಃ (ಗ) 2 ತೇನೈವ ಶೋಷಯೇತ್ಸದ್ಯೋ (ಘ)
3 ಪರಮೇಶ್ವರನನು (ಖ) 4 ಕುಳಿತಿದ್ದಂಥಾ (ಖ)

ಕೋಟಿಸೂರ್ಯಪ್ರತೀಕಾಶಂ ಜಟಾಜೂಟವಿರಾಜಿತಮ್
ಶಾರ್ದೂಲಚರ್ಮವಸನಂ ದಿವ್ಯಮಾಲಾಸಮನ್ವಿತಮ್ ||೩೬||
ತ್ರಿಶೂಲಪಾಣಿಂ ದುಷ್ಪ್ರೇಕ್ಷ್ಯಂ [1]ಯೋಗಿನಂ[1] ಭೂತಿಭೂಷಣಮ್
[2]ಯಮಂತರಾ ಯೋಗನಿಷ್ಠಾಃ[2] ಪ್ರಪಶ್ಯಂತಿ ಹೃದೀಶ್ವರಮ್ ||೩೭||

ತಮಾದಿಮೇಕಂ ಬ್ರಹ್ಮಾಣಂ ಬ್ರಹ್ಮಾ ದೇವಂ ದದರ್ಶ ಹ ||೩೮||

ಯಸ್ಯ ಸಾ ಪರಮಾ ದೇವೀ ಶಕ್ತಿರಾಕಾಶಸಂಜ್ಞಿತಾ
ಸೋಽನಂತೈಶ್ವರ್ಯಯೋಗಾತ್ಮಾ ಮಹೇಶೋ ದೃಶ್ಯತೇ ಕಿಲ ||೩೯||

ನುಳ್ಳಂಥಾ ಚಂದ್ರಾವಯವಭೂಷಣಂ = ಚಂದ್ರನ ಶರೀರವೇ ಭೂಷಣವಾಗಿ ಉಳ್ಳಂಥಾ, ||೩೫||

ಕೋಟಿಸೂರ್ಯಪ್ರತೀಕಾಶಂ = ಕೋಟಿ ಸೂರ್ಯರ ಪ್ರಕಾಶನಹಂಥಾ ಜಟಾಜೂಟವಿರಾಜಿತಂ = ಜಟಾಮುಕುಟದಿಂದ ಒಪ್ಪುತ್ತಿರ್ದಂಥಾ ಶಾರ್ದೂಲಚರ್ಮವಸನಂ = ಪುಲಿಯ ಚರ್ಮವೇ ವಸ್ತ್ರವಾಗಿ ಉಳ್ಳಂಥಾ ದಿವ್ಯಮಾಲಾಸಮನ್ವಿತಂ = ಸ್ವರ್ಗಲೋಕದ ಪುಷ್ಪಮಾಲೆಯಿಂದ ಕೂಡಲುಪಟ್ಟಂಥಾ ತ್ರಿಶೂಲಪಾಣಿಂ = ತ್ರಿಶೂಲವು ಹಸ್ತದಲ್ಲಿ ಉಳ್ಳಂಥಾ ದುಷ್ಪ್ರೇಕ್ಷ್ಯಂ = ನೋಡಲು ಬಾರದೇ ಇದ್ದಂಥಾ ಯೋಗಿನಂ = ಯೋಗಿಯಹಂಥಾ ಭೂತಿಭೂಷಣಂ = ವಿಭೂತಿಭೂಷಣನಹಂಥಾ ಯಂ = ಆವನಾನೊಬ್ಬ ಈಶ್ವರಂ = ಪರಮೇಶ್ವರನನು ಯೋಗನಿಷ್ಠಾಃ = ಯೋಗನಿಷ್ಠರುಗಳು ಅಂತರಾ = ಅಂತರಂಗವಹಂಥಾ ಹೃದಿ = ಚಿತ್ತದಲ್ಲಿ ಪ್ರಪಶ್ಯಂತಿ = ಕಾಣುತ್ತಿಹರು, ಅಂತರಾ ಎಂಬ ಶಬ್ದ ಅವ್ಯಯವು. ||೩೭||

ತಂ = ಆ ಏಕಂ = ಏಕನಹಂಥಾ ಬ್ರಹ್ಮಾಣಂ = ಪರಬ್ರಹ್ಮವಹಂಥಾ ಆದಿಂ-ದೇವಂ = ಮೊದಲ ದೆ ವನಹಂಥಾ ಪರಮೇಶ್ವರನನು ಬ್ರಹ್ಮಾ = ಬ್ರಹ್ಮನು ದದರ್ಶ ಹ = ಕಂಡನು. ||೩೮||

ಸಾ ದೇವೀ = ಆ ಪಾರ್ವತೀ ದೇವಿಯು ಯಸ್ಯ = ಆವನಾನೊಬ್ಬ ಪರಮೇಶ್ವರಂಗೆ ಆಕಾಶಸಂಜ್ಞಿತಾ = ಆಕಾಶಸ್ವರೂಪಿಣಿಯಹಂಥಾ ಪರಮಾ = ಉತ್ಕೃಷ್ಟ-ವಹಂಥಾ ಶಕ್ತಿಃ = ಶಕ್ತಿ, ಅನಂತೈಶ್ವರ್ಯಯೋಗಾತ್ಮಾ = ಅನಂತೈಶ್ವರ್ಯದೊಡನೆ ಕೂಡಲುಪಟ್ಟ ಸ್ವರೂಪವನುಳ್ಳಂಥಾ ಸ ಮಹೇಶಃ = ಆ ಪರಮೇಶ್ವರನು ದೃಶ್ಯತೇ ಕಿಲ = ಪ್ರತ್ಯಕ್ಷವಾದನು. ||೩೯||

---

[1] ಯೋಗಿನಾಂ (ಘ) [2] ಯಮಂತರ್ಯೋಗನಿಷ್ಠಾಶ್ಚ (ಘ)

ಯಸ್ಯ ಬ್ರಹ್ಮಾದಯೋ ದೇವಾ ಋಷಯೋ ಬ್ರಹ್ಮವಾದಿನಃ
ಅರ್ಚಯಂತಿ ಸದಾ ಲಿಂಗಂ ವಿಶ್ವೇಶಃ ಖಲು ದೃಶ್ಯತೇ ||೪೦||

ಯಸ್ಯಾಶೇಷಜಗತ್ಸೂತಿರ್ವಿಜ್ಞಾನತನುರೀಶ್ವರೀ
ನ ಮುಂಚತಿ ಸದಾ ಪಾರ್ಶ್ವಂ ಶಂಕರೋ ದೃಶ್ಯತೇ ಕಿಲ ||೪೧||

ಪುಷ್ಪಂ ವಾ ಯದಿ ವಾ ಪತ್ರಂ ಯತ್ಪಾದಯುಗಳೇ ನರಃ
ದತ್ವಾ ತರತಿ ಸಂಸಾರಂ ರುದ್ರೋಽಸೌ ದೃಶ್ಯತೇ ಕಿಲ ||೪೨||

ಯತ್ಸನ್ನಿಧಾನೇ ಸಕಲಂ ನಿಯಚ್ಛತಿ ಸನಾತನಃ
ಕಾಲಃ ಕಿಲ ಸ ಯೋಗಾತ್ಮಾ ಕಾಲಕಾಲೋ ಹಿ ದೃಶ್ಯತೇ ||೪೩||

ಯಸ್ಯ = ಆವನಾನೊರ್ವ ಶಿವನ ಲಿಂಗಂ = ಲಿಂಗವನು ಸದಾ = ಎಲ್ಲಾಗಳೂ ಬ್ರಹ್ಮಾದಯಃ = ಬ್ರಹ್ಮಮೊದಲಾಗಿದ್ದಂಥಾ ದೇವಾಃ = ದೇವರ್ಕಳು ಋಷಯಃ = ಋಷಿಗಳು ಬ್ರಹ್ಮವಾದಿನಃ = ವೇದಾಂತಿಗಳು ಅರ್ಚಯಂತಿ = ಅರ್ಚಿಸುತ್ತಿಹರು, [ಅಂತಪ್ಪ] ವಿಶ್ವೇಶಃ = ವಿಶ್ವಕ್ಕೆ ಒಡೆಯನಹಂಥಾ ಶಿವನು ದೃಶ್ಯತೇ ಖಲು = ಕಾಣಲುಪಟ್ಟನಲಾ. ||೪೦||

ಅಶೇಷಜಗತ್ಸೂತಿಃ = ಸಮಸ್ತ ಜಗತ್ತನು ಪಡೆದಂಥಾ ವಿಜ್ಞಾನತನುಃ = ಜ್ಞಾನಶರೀರವನುಳ್ಳಂಥಾ ಈಶ್ವರೀ = ಪಾರ್ವತೀದೇವಿಯು ಯಸ್ಯ = ಆವನಾನೊಬ್ಬ ಪರಮೇಶ್ವರನ ಪಾರ್ಶ್ವಂ = ಸಮೀಪವನು ಸದಾ = ಎಲ್ಲಾಗವೂ ನ ಮುಂಚತಿ = ಬಿಡುತ್ತಿರಳು [ಅಂತಪ್ಪ] ಶಂಕರಃ = ಸುಖವನು ಮಾಡುತ್ತಿದ್ದಂಥಾ ಪರಮ-ಶಿವನು ದೃಶ್ಯತೇ ಕಿಲ = ಪ್ರತ್ಯಕ್ಷವಾದನು. ||೪೧||

ನರಃ = ಮನುಷ್ಯನು ಪುಷ್ಪಂ ವಾ = ಪುಷ್ಪವಾಗಲಿ ಯದಿ ವಾ = ಎತ್ತಲಾನು ಪತ್ರಂ ವಾ = ಪತ್ರೆಯಾಗಲಿ ಯತ್ಪಾದಯುಗಳೇ = ಆವನಾನೊಬ್ಬ ಪರಮೇಶ್ವರನ ಪಾದವೆರಡರಲ್ಲಿ ದತ್ವಾ = ಸಮರ್ಪಿಸಿ ಸಂಸಾರಂ = ಸಂಸಾರವನು ತರತಿ = ದಾಂಟುತ್ತಿಹನು. ತೄ-ಪ್ಲವನ ತರಣಯೋಃ ಇತಿ ಧಾತುಃ| ಅಸೌ ರುದ್ರಃ = ಈ ರುದ್ರನು ದೃಶ್ಯತೇ ಕಿಲ = ಕಾಣಲುಪಟ್ಟನು. ||೪೨||

ಕಾಲಃ = ಕಾಲನು ಹಿ = ಆವುದಾನೊಂದು ಕಾರಣವಾಗಿ ಯತ್ಸನ್ನಿಧಾನೇ = ಆವನಾನೊಬ್ಬ ದೇವನ ಸಮೀಪದಲ್ಲಿ ಸಕಲಂ = ಸಮಸ್ತವನು ನಿಯಚ್ಛತಿ = ಮಾಡುತ್ತಿಹನು, ಸನಾತನಃ = ಕೇಡಿಲ್ಲದೇ ಇದ್ದಂಥಾ ಯೋಗಾತ್ಮಾ = ಯೋಗ-ಶರೀರಿಯಹಂಥಾ ಕಾಲಕಾಲಃ = ಕಾಲಂಗೆ ಕಾಲನಹಂಥಾ ಸಃ = ಆ ಪರಶಿವನ ದೃಶ್ಯತೇ ಕಿಲ = ಕಾಣಲುಪಟ್ಟನು. ||೪೩||

ಜೀವನಂ [1]ಸರ್ವಲೋಕಾನಾಂ[1] ತ್ರಿಲೋಕಸ್ಯೈಕಭೂಷಣಮ್ ॥೪೪
ಸ ಸೋಮೋ ದೃಶ್ಯತೇ ದೇವಃ ಸೋಮೋ ಯಸ್ಯ ವಿಭೂಷಣಮ್

ದೇವ್ಯಾ ಸಹ ಸದಾ ಸಾಕ್ಷಾದ್ಯಸ್ಯ ಯೋಗಃ ಸ್ವಭಾವತಃ
[2]ಗೀಯತೇ[3] ಪರಮಾ ಮುಕ್ತಿಃ ಮಹಾದೇವಸ್ಸ ದೃಶ್ಯತೇ ॥೪೫॥

ಯಸ್ಯ ವೇದವಿದಃ ಶಾಂತಾ ನಿರ್ದ್ವಂದ್ವಾ ಬ್ರಹ್ಮಚಾರಿಣಃ
ವಿದಂತಿ ವಿಮಲಂ ರೂಪಂ ಸ ಶಂಭುರ್ದೃಶ್ಯತೇ ಕಿಲ ॥೪೬॥

ಯೋಽಪ್ಯನಾಚಾರನಿರತಾನ್ ಸ್ವಭಕ್ತಾನೇವ ಕೇವಲಮ್
ವಿ[3]ಮೋಚಯತಿ[3] ಲೋಕಾನಾಂ ನಾಯಕೋ ದೃಶ್ಯತೇ ಕಿಲ ॥೪೭॥

ಸರ್ವಲೋಕಾನಾಂ=ಸಮಸ್ತ ಲೋಕಂಗಳಿಗೆ ಜೀವನಂ=ಜೀವನವಹಂಥಾ ತ್ರಿಲೋಕಸ್ಯ=ಮೂರು ಲೋಕಕ್ಕೆ ಏಕಭೂಷಣಂ=ಒಬ್ಬನೇ ಅಲಂಕಾರವಹಂಥಾ ಸೋಮಃ = ಚಂದ್ರನು ಯಸ್ಯ = ಆವನಾನೊಬ್ಬ ದೇವಂಗೆ ವಿಭೂಷಣಂ = ಆಭರಣವು, ಸೋಮಃ = ಉಮೆಯಿಂದ ಸಹಿತವಹಂಥಾ ಸ ದೇವಃ = ಆ ಪರಮೇಶ್ವರನು ದೃಶ್ಯತೇ=ಪ್ರತ್ಯಕ್ಷವಾದನು. ॥೪೪॥

ಯಸ್ಯ=ಆವನಾನೊಬ್ಬ ದೇವಂಗೆ ಸದಾ = ಎಲ್ಲಾಗವೂ ಸಾಕ್ಷಾತ್ = = ಪ್ರತ್ಯಕ್ಷವಹಂಥಾ ದೇವ್ಯಾ ಸಹ = ಪರಮಶಕ್ತಿಯೊಡನೆ ಸ್ವಭಾವತಃ = ಸ್ವಭಾವದಿಂದ ಯೋಗಃ=ಕೂಟವೆಂದು ಪರಮಾ ಮುಕ್ತಿಃ=ಉತ್ಕೃಷ್ಟವಹಂಥಾ ಮುಕ್ತಿವನಿತೆ ಗೀಯತೇ=ಕೊಂಡಾಡಲ್ಪಡುತ್ತಿಹಳು, ಸ ಮಹಾದೇವಃ=ಆ ಮಹಾದೇವನು ದೃಶ್ಯತೇ=ಪ್ರತ್ಯಕ್ಷವಾದನು. ॥೪೫॥

ವೇದವಿದಃ = ವೇದವಿತ್ತುಗಳಹಂಥಾ ಶಾಂತಾಃ = ಶಾಂತರುಗಳಹಂಥಾ ನಿರ್ದ್ವಂದ್ವಾಃ=ದ್ವಂದ್ವರಹಿತರಹಂಥಾ ಬ್ರಹ್ಮಚಾರಿಣಃ=ಬ್ರಹ್ಮಚಾರಿಗಳು ಯಸ್ಯ =ಆವನಾನೊಬ್ಬ ದೇವನ ವಿಮಲಂ=ನಿರ್ಮಲವಹಂಥಾ ರೂಪಂ=ಸ್ವರೂಪವನು ವಿದಂತಿ=ಅರಿವುತ್ತಿಹರು, ಸ ಶಂಭುಃ = ಆ ಪರಮೇಶ್ವರನು ದೃಶ್ಯತೇ ಕಿಲ = ಪ್ರತ್ಯಕ್ಷವಾದನು. ॥೪೬॥

ಯೋಽಪಿ = ಆವನಾನೊಬ್ಬ ದೇವನು ಕೇವಲಂ = ಬರಿಯ ಅನಾಚಾರ ನಿರತಾನ್ =ಅನಾಚಾರದಲ್ಲಿ ತತ್ಪರರಹಂಥಾ ಸ್ವಭಕ್ತಾನೇವ=ತನ್ನ ಭಕ್ತರುಗಳನೇ ವಿಮೋಚಯತಿ=ಮೋಕ್ಷವನೆಯ್ದಿಸುತ್ತಿಹನು, ಲೋಕಾನಾಂ= ಸಮಸ್ತ ಲೋಕಂ

---

1 ಸರ್ವಭೂತಾನಾ (ಕ) ಮೂಲಮಾತ್ರ 2 ನಿಯತಾ (ಘ) ಮೂಲ. ಗೀಯ್ಯತೇ (ಘ) ಪಾಠಾಂತರ 3 ವಿಮೋಹಯತಿ (ಕ) ಮೂಲ ಮಾತ್ರ

[1]ಸೋಽನುವೀಕ್ಷ್ಯ[1] ಮಹಾದೇವ್ಯಾ ಮಹಾದೇವಂ ಸನಾತನಮ್
ವರಾಸನೇ ಸಮಾಸೀನಮವಾಪ ಪರಮಾಂ ಸ್ಮೃತಿಮ್ ||೪೮||

ಲಬ್ಧ್ವಾ ಮಾಹೇಶ್ವರೀಂ ದಿವ್ಯಾಂ ಸಂಸ್ಮೃತಿಂ ಭಗವಾನಜಃ
ತೋಷಯಾಮಾಸ ವರದಂ ಸೋಮಂ ಸೋಮಾರ್ಧಭೂಷಣಮ್ ೪೯

ಬ್ರಹ್ಮೋವಾಚ—

ನಮೋ ದೇವಾಯ ಮಹತೇ ಮಹಾದೇವ್ಯೈ ನಮೋ ನಮಃ
ನಮಃ ಶಿವಾಯ ಶಾಂತಾಯ ಶಿವಾಯೈ ಶಾಂತಯೇ ನಮಃ ||೫೦||

ಗಳಿಗೆ ನಾಯಕಃ = ಒಡೆಯನಹಂಥಾ [ಆ] ಪರಮಶಿವನು ದೃಶ್ಯತೇಕಿಲ = ಪ್ರತ್ಯಕ್ಷವಾದನು. ||೪೭||

ಸಃ = ಆ ಬ್ರಹ್ಮನು ವರಾಸನೇ = ಸಿಂಹಾಸನದಲ್ಲಿ ಮಹಾದೇವ್ಯಾ = ಪಾರ್ವತೀದೇವಿಯೊಡನೆ ಸಮಾಸೀನಂ = ಕುಳ್ಳಿರ್ದಂಥಾ ಸನಾತನಂ = ನಿತ್ಯನಹಂಥಾ ಮಹಾದೇವಂ = ಪರಮೇಶ್ವರನನು ಅನುವೀಕ್ಷ್ಯ = ಕಂಡು ಪರಮಾಂ = ಉತ್ಕೃಷ್ಟವಹಂಥಾ ಸ್ಮೃತಿಂ = ನೆನಹನು ಅವಾಪ = ಪಡದನು. ||೪೮||

ಭಗವಾನ್ = ಸಾಮರ್ಥ್ಯವನುಳ್ಳಂಥಾ ಅಜಃ = ಬ್ರಹ್ಮನು ಮಾಹೇಶ್ವರೀಂ = ಶಿವಸಂಬಂಧವಹಂಥಾ ದಿವ್ಯಾಂ = ಮನೋಹರವಹಂಥಾ ಸಂಸ್ಮೃತಿಂ = ನೆನಹನು ಲಬ್ಧ್ವಾ = ಪಡದು ವರದಂ = ವರವ ಕೊಡುತ್ತಿದ್ದಂಥಾ ಸೋಮಾರ್ಧಭೂಷಣಂ = ಚಂದ್ರಾರ್ಧಭೂಷಣನಹಂಥಾ ಸೋಮಂ = ಉಮೆಯಿಂದ ಸಹಿತನಹಂಥಾ ಶಿವನನು ತೋಷಯಾಮಾಸ = ಸಂತೋಷಬಡಿಸಿದನು. ||೪೯||

ಬ್ರಹ್ಮೋವಾಚ = ಬ್ರಹ್ಮನ ವಾಕ್ಯವು.

ಮಹತೇ = ಉತ್ಕೃಷ್ಟವಹಂಥಾ ದೇವಾಯ = ದೇವಂಗೋಸ್ಕರ ನಮಃ = ನಮಸ್ಕಾರವು. ಮಹಾದೇವ್ಯೈ = ಮಹಾದೇವಿಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ಶಾಂತಾಯ = ಶಾಂತನಹಂಥಾ ಶಿವಾಯ = ಶಿವಂಗೋಸ್ಕರ ನಮಃ = ನಮಸ್ಕಾರವು. ಶಾಂತಯೇ = ಶಾಂತಿಯಹಂಥಾ ಶಿವಾಯೈ = ಪಾರ್ವತೀದೇವಿಗೋಸ್ಕರ ನಮಃ = ನಮಸ್ಕಾರವು. ||೫೦||

---

[1] ಸೋಮಂ ವೀಕ್ಷ್ಯ (ಘ)

ಓಂ ನಮೋ ಬ್ರಹ್ಮಣೇ ತುಭ್ಯಂ ವಿದ್ಯಾಯೈ ಚ ನಮೋ ನಮಃ
ನಮೋ ನಮಸ್ತೇ ಕಾಲಾಯ[2] ಮಾಯಾಯೈ ಚ ನಮೋ ನಮಃ[2] ೫೧

ನಿಯಂತ್ರೇ ಸರ್ವಕಾರ್ಯಾಣಾಂ ಕ್ಷೋಭಿತಾಯೈ ನಮೋಽಸ್ತು ತೇ
ನಮೋ ಮೂಲಪ್ರಕೃತಯೇ ಮಹೇಶಾಯ ನಮೋ ನಮಃ ||೫೨||

ನಮೋ ವಿಜ್ಞಾನದೇಹಾಯ ಸ್ಮೃತಯೇ ಚ ನಮೋ ನಮಃ
ನಮೋ ನಮೋಽಸ್ತು ರುದ್ರಾಯ ರುದ್ರಾಣ್ಯೈ ಚ ನಮೋ ನಮಃ ೫೩

ನಮೋಽಸ್ತು ತೇ ಪ್ರಕೃತಯೇ ನಮೋ ನಾರಾಯಣಾಯ ಚ
ಯೋಗದಾಯೈ ನಮಸ್ತುಭ್ಯಂ ಯೋಗಿನಾಂ ಗುರವೇ ನಮಃ ||೫೪||

ಬ್ರಹ್ಮಣೇ = ಪರಬ್ರಹ್ಮನಹಂಥಾ ತುಭ್ಯಂ = ನಿನಗೋಸ್ಕರ ಓಂ ನಮಃ = ಪ್ರಣವಸಹಿತವಾಗಿ ನಮಸ್ಕಾರವು. ವಿದ್ಯಾಯೈ ಚ = ವಿದ್ಯಾರೂಪಿಣಿಯಹಂಥಾ ದೇವಿಗೋಸ್ಕರವು ನಮೋ ನಮಃ = ನಮಸ್ಕಾರವು ನಮಸ್ಕಾರವು, ಕಾಲಾಯ = ಕಾಲಸ್ವರೂಪನಹಂಥಾ ತೇ = ನಿನಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. [2]ಮಾಯಾಯೈ ಚ = ಮಾಯೆಯಹಂಥಾ ದೇವಿಗೋಸ್ಕರವು ನಮೋ ನಮಃ = ನಮಸ್ಕಾರವು ನಮಸ್ಕಾರವು.[2] ||೫೧||

ಸರ್ವಕಾರ್ಯಾಣಾಂ = ಸಮಸ್ತ ಕಾರ್ಯಂಗಳ ನಿಯಂತ್ರೇ = ನಿರ್ಮಿಸಿದಂಥಾ ಮಹೇಶಾಯ = ಮಹದೈಶ್ವರ್ಯವನುಳ್ಳಂಥಾ ತೇ = ನಿನಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ಕ್ಷೋಭಿತಾಯೈ = ಸಂಸಾರವನು ನಡುಗಿಸುತ್ತಿದ್ದಂಥಾ ಮೂಲಪ್ರಕೃತಯೇ = ಆದಿಶಕ್ತಿಯಹಂಥಾ ದೇವಿಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು ಅಸ್ತು = ಆಗಲಿ. ||೫೨||

ವಿಜ್ಞಾನದೇಹಾಯ = ಜ್ಞಾನಶರೀರಿಯಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ಸ್ಮೃತಯೇ ಚ = ಧ್ಯಾನರೂಪಿಣಿಯಹಂಥಾ ಪಾರ್ವತೀದೇವಿಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ರುದ್ರಾಯ = ರುದ್ರಂಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು ಅಸ್ತು = ಆಗಲಿ. ರುದ್ರಾಣ್ಯೈ ಚ = ರುದ್ರಾಣಿಯಹಂಥಾ ದೇವಿಗೋಸ್ಕರ ನಮೋನಮಃ = ನಮಸ್ಕಾರವು ನಮಸ್ಕಾರವು. ||೫೩||

ಪ್ರಕೃತಯೇ = ಶಕ್ತಿಯಹಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು ಅಸ್ತು = ಆಗಲಿ. ನಾರಾಯಣಾಯ ಚ = ನಾರಾಯಣನಹಂಥಾ ನಿನಗೋಸ್ಕರವು

---

[2] ಈ ಪಾಠವು (ಖ) ದಲ್ಲಿದೆ. ಆದರೆ ವ್ಯಾಖ್ಯಾನ ಭಾಗ (ಖ) ದಲ್ಲಿ ಬಿಟ್ಟುಹೋಗಿದೆ.

ಭೂತಯೇ ಸರ್ವಭೂತಾನಾಂ ನಮೋ [1]ಯೋ[ಗ]ರ್ದ್ಧಯೇ[1] ನಮಃ
ನಮಃ ಸಂಸಾರನಾಶಾಯ ಸಂಸಾರೋತ್ಪತ್ತಯೇ ನಮಃ ||೫೫||

ನಿತ್ಯಾನಂದಾಯ ವಿಭವೇ ನಮೋಽಸ್ತ್ವಾನಂದಮೂರ್ತಯೇ
ನಮಃ ಕಾರ್ಯವಿಹೀನಾಯ ವಿಶ್ವಪ್ರಕೃತಯೇ ನಮಃ ||೫೬||

ಓಂಕಾರಮೂರ್ತಯೇ ತುಭ್ಯಂ ತದಂತಸ್ಸಂಸ್ಥಿತಾಯ ತೇ
ನಮಸ್ತೇ ವ್ಯೋಮಸಂಸ್ಥಾಯ ವ್ಯೋಮಶಕ್ತ್ಯೈ ನಮೋ ನಮಃ ೫೭

ನಮಃ = ನಮಸ್ಕಾರವು. ಯೋಗದಾಯ್ಯೈ = ಯೋಗವನು ಕೊಡುತ್ತಿದ್ದಂಥಾ ಪಾರ್ವತೀದೇವಿಗೋಸ್ಕರ ನಮಃ = ನಮಸ್ಕಾರವು. ಯೋಗಿನಾಂ = ಯೋಗಿಗಳಿಗೆ ಗುರವೇ = ಗುರುವಹಾಂಥಾ ತುಭ್ಯಂ = ನಿನಗೋಸ್ಕರ ನಮಃ = ನಮಸ್ಕಾರವು. ||೫೪||

ಸರ್ವಭೂತಾನಾಂ = ಸಮಸ್ತ ಪ್ರಾಣಿಗಳ ಭೂತಯೇ = ಉತ್ಪತ್ತಿಯ ಮಾಡುತ್ತಿದ್ದಂಥಾ ನಿನಗೋಸ್ಕರ ನಮಃ = ನಮಸ್ಕಾರವು. ಯೋಗರ್ದ್ಧಯೇ = ಯೋಗವ ಹೆಚ್ಚಿಸುತ್ತಿದ್ದಂಥಾ ಪಾರ್ವತೀದೇವಿಗೋಸ್ಕರ ನಮಃ = ನಮಸ್ಕಾರವು ಅಸ್ತು = ಆಗಲಿ. ಸಂಸಾರನಾಶಾಯ = ಸಂಸಾರವ ನಾಶವ ಮಾಡುವಂಥಾ ನಿನಗೋಸ್ಕರ ನಮಃ = ನಮಸ್ಕಾರವು. ಸಂಸಾರೋತ್ಪತ್ತಯೇ = ಸಂಸಾರವ ಹುಟ್ಟಿಸುವಂಥಾ ದೇವಿಗೋಸ್ಕರ ನಮಃ = ನಮಸ್ಕಾರವು. ||೫೫||

ನಿತ್ಯಾನಂದಾಯ = ಸದಾ ಆನಂದವನುಳ್ಳಂಥಾ ವಿಭವೇ = ಪರಿಪೂರ್ಣನಹಂಥಾ ಆನಂದಮೂರ್ತಯೇ = ಆನಂದವೇ ರೂಪಾದಂಥಾ ನಿನಗೋಸ್ಕರ ನಮಃ = ನಮಸ್ಕಾರವು ಅಸ್ತು = ಆಗಲಿ. ಕಾರ್ಯವಿಹೀನಾಯ = ಕಾರ್ಯವಿಲ್ಲದಾತಂಗೋಸ್ಕರ ನಮಃ = ನಮಸ್ಕಾರವು. ವಿಶ್ವಪ್ರಕೃತಯೇ = ಸಮಸ್ತ ಲೋಕಕ್ಕೆ ಮಾಯೆಯಹಂಥಾ ದೇವಿಗೋಸ್ಕರ ನಮಃ = ನಮಸ್ಕಾರವು. ||೫೬||

ಓಂಕಾರಮೂರ್ತಯೇ = ಪ್ರಣವಸ್ವರೂಪವಹಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು. ತದಂತಃ = ಆ ಪ್ರಣವದೊಳಗೆ ಸಂಸ್ಥಿತಾಯ = ಇರುತ್ತಿದ್ದಂಥಾ ತುಭ್ಯಂ = ನಿನಗೋಸ್ಕರ ನಮಃ = ನಮಸ್ಕಾರವು. ವ್ಯೋಮಸಂಸ್ಥಾಯ = ಆಕಾಶದಲ್ಲಿ ಇರುತ್ತಿದ್ದಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು. ವ್ಯೋಮಶಕ್ತ್ಯೈ = ಆಕಾಶಸ್ವರೂಪವನುಳ್ಳ ಶಕ್ತಿಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ||೫೭||

---

1 ಯೋಗಾರ್ದ್ಧಯೇ (ಕ ಖ ಗ ಚ) ಯೋಗಾರ್ತಯೇ (ಘ) ವ್ಯಾಖ್ಯಾನುಸಾರ ಮೂಲ ಪಾಠವನ್ನು ಇಡಲಾಗಿದೆ.

ಇತಿ 'ಸ್ತೋಮಾಷ್ಟಕೇನೇ'ಶಂ [1]ಪ್ರಣಮ್ಯ[1] ಸ ಪಿತಾಮಹಃ
ಪಪಾತ ದಂಡವದ್ಭೂಮೌ ಗೃಣನ್ ವೈ ಶತರುದ್ರಿಯಮ್ ||೫೮||

ಅಥ ದೇವೋ ಮಹಾದೇವಃ ಪ್ರಣತಾರ್ತಿಹರೋ ಹರಃ
ಪ್ರೋವಾಚೋತ್ಥಾಪ್ಯ ಹಸ್ತಾಭ್ಯಾಂ ಪ್ರೀತೋಽಸ್ಮಿ ತವ ಸಾಂಪ್ರತಮ್

ದತ್ವಾಽಸ್ಮೈ ಪರಮಂ ಯೋಗಮೈಶ್ವರ್ಯಮತುಲಂ ಮಹತ್ ।
ಪ್ರೋವಾಚಾಗ್ರೇ [2]ಸ್ಥಿತಂ[2] ರುದ್ರಂ ನೀಲಲೋಹಿತಮೀಶ್ವರಮ್ ||೬೦||

ಏಷ ಬ್ರಹ್ಮಾ ತು ಜಗತಾಂ ಸಂಪೂಜ್ಯಃ ಪ್ರಥಮಸ್ಸುತಃ
ಸರ್ವದಾ ರಕ್ಷಣೀಯೋಽಯಂ ಭವತಾಽಪಿ ದಯಾಲುನಾ ||೬೧||

ಇತಿ = ಈ ಪ್ರಕಾರದಲ್ಲಿ ಸ್ತೋಮಾಷ್ಟಕೇನ = [3]ಉಮಾಸಹಿತವಹಂಥಾ ಅಷ್ಟಕದಿಂದ[3] ಈಶಂ = [4]ಪರಮೇಶ್ವರನನು[4] ಪ್ರಣಮ್ಯ = ನಮಸ್ಕರಿಸಿ ಸ ಪಿತಾಮಹಃ = ಆ ಬ್ರಹ್ಮನು ಶತರುದ್ರಿಯಂ = ಶ್ರೀರುದ್ರವನು ಗೃಣನ್ ವೈ = ಸ್ತೋತ್ರವ ಮಾಡುತ್ತವೂ ಭೂಮೌ = ಭೂಮಿಯಲ್ಲಿ ದಂಡವತ್ = ದಡಿಯೋಪಾದಿಯಲ್ಲಿ ಪಪಾತ = ಬಿದ್ದನು. ||೫೮||

ಅಥ = ಅನಂತರದಲ್ಲಿ ಪ್ರಣತಾರ್ತಿಹರಃ = ನಮಸ್ಕರಿಸಿದವರ ಪೀಡೆಯನು ತೊಲಗಿಸುತ್ತಿದ್ದಂಥಾ ಹರಃ = ಭವವನಪಹರಿಸುವಂಥಾ ದೇವಃ = ಪ್ರಕಾಶಸ್ವರೂಪನಹಂಥಾ ಮಹಾದೇವಃ = ಪರಮೇಶ್ವರನು ಹಸ್ತಾಭ್ಯಾಂ = ಹಸ್ತವೆರಡರಿಂದ ಉತ್ಥಾಪ್ಯ = ನೆಗಹಿ ತವ = ನಿನಗೆ ಸಾಂಪ್ರತಂ = ಈಗ ಪ್ರೀತೋಽಸ್ಮಿ = ಸಂತುಷ್ಟನಾದೆನು ಎಂದು ಪ್ರೋವಾಚ = ನುಡಿದನು. ||೫೯||

ಅಸ್ಮೈ = ಈ ಬ್ರಹ್ಮಂಗೋಸ್ಕರ ಪರಮಂ = ಉತ್ಕೃಷ್ಟವಹಂಥಾ ಯೋಗಂ = ಯೋಗವನು ಅತುಲಂ = ಸಮಾನವಲ್ಲದೇ ಇದ್ದಂಥಾ ಮಹತ್ = ಅಧಿಕವಹಂಥಾ ಐಶ್ವರ್ಯಂ = ಐಶ್ವರ್ಯವನು ದತ್ವಾ = ಕೊಟ್ಟು ಅಗ್ರೇ = ಇದಿರಿನಲ್ಲಿ ಸ್ಥಿತಂ = ಇರುತ್ತಿದ್ದಂಥಾ ರುದ್ರಂ = ದುಃಖವನು ಕೆಡಿಸುತ್ತಿದ್ದಂಥಾ ಈಶ್ವರಂ = ಐಶ್ವರ್ಯವನುಳ್ಳಂಥಾ ನೀಲಲೋಹಿತಂ = ಕಾಲಭೈರವನನು ಕುರಿತು ಪ್ರೋವಾಚ = ನುಡಿದನು. ||೬೦||

ಏಷಃ = ಈ ಬ್ರಹ್ಮಾ ತು = ಬ್ರಹ್ಮನು ಜಗತಾಂ = ಲೋಕಂಗಳಿಗೆ ಸಂಪೂಜ್ಯಃ = ಪೂಜ್ಯನು ಪ್ರಥಮಃ ಸುತಃ = ಎನ್ನ ಮೊದಲ ಪುತ್ರನು. ದಯಾಲುನಾ = ಕೃಪಾಳುವಹಂಥಾ ಭವತಾಽಪಿ = ನಿನ್ನಿಂದವೂ ಸರ್ವದಾ = ಎಲ್ಲಾಗವೂ ಅಯಂ = ಈ ಬ್ರಹ್ಮನು ರಕ್ಷಣೀಯಃ = ರಕ್ಷಿಸಲು ಯೋಗ್ಯನು. ||೬೧||

---

[1] ಸಂಸ್ತುತ್ಯ (ಘ,) (ಕ) ಮೂಲ ಮಾತ್ರ. [2] ಸ್ಮಿತಂ (ಕ) ಮೂಲ ಮಾತ್ರ
[3] ಸೋಮಾಷ್ಟಕದಿಂದ (ಖ ಚ) [4] ಈಸ್ವರನನು (ಕ)

ಅಯಂ ಪುರಾಣಪುರುಷೋ ನ ಹಂತವ್ಯಸ್ತ್ವಯಾಽನಘ
ಸ್ವಯೋಗೈಶ್ವರ್ಯಮಾಹಾತ್ಮ್ಯಾನ್ಮಾಮೇವ ಶರಣಂ ಗತಃ ||೬೨||

ಅಯಂ ಚ ಯಜ್ಞೋ ಭಗವಾನ್[1] ಸಗರ್ವೋ ಭವತಾಽನಘ
ಶಾಸಿತವ್ಯೋ ವಿರಿಂಚಸ್ಯ ಧಾರಣೀಯಂ [2]ಶಿರಸ್ತ್ವಯಾ ||೬೩||

ಇತ್ಯೇತದುಕ್ತ್ವಾ ವಚನಂ ಭಗವಾನ್ ಪರಮೇಶ್ವರಃ
ಸ್ಥಾನಂ ಸ್ವಾಭಾವಿಕಂ ದಿವ್ಯಂ ಯಯೌ ತತ್ಪರಮಂ ಪದಮ್ ||೬೪||

ಇತಿ ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ
ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮಸುಧಾರ್ಣವ-
ಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಶ್ರೀಮಲ್ಲಿಕಾರ್ಜುನಾ-
ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ನಾಟಭಾಷಾವಿವರಣೇ
ಶಿವಾಧಿಕ್ಯಕಥನೇ 'ಬ್ರಹ್ಮಶಿರಚ್ಛೇದನಂ'
ನಾಮ ತ್ರಯೋದಶೋಽಧ್ಯಾಯಃ

ಭೋ ಅನಘ = ಎಲೈ ನಿರ್ದೋಷಿಯಹಂಥಾತನೇ ! ಅಯಂ = ಈ ಪುರಾಣ— ಪುರುಷಃ = ಪುರಾಣಪುರುಷನಹಂಥಾ ಬ್ರಹ್ಮನು ಸ್ವಯೋಗೈಶ್ವರ್ಯಮಾಹಾತ್ಮ್ಯಾತ್ = ತನ್ನ ಯೋಗೈಶ್ವರ್ಯದ ಸಾಮರ್ಥ್ಯದ ಜೆಸೆಯಿಂದ ಮಾಮೇವ = ಎನ್ನನೇ ಶರಣಂ = ಮರೆಯೊಗುಹವನು ಗತಃ = ಎಯ್ದಿದನು. ತ್ವಯಾ = ನಿನ್ನಿಂದ ನ ಹಂತವ್ಯಃ = ಕೊಲಲು ಯೋಗ್ಯನಲ್ಲ. ||೬೨||

ಭಗವಾನ್ = ಸಾಮರ್ಥ್ಯವನುಳ್ಳಂಥಾ ಅಯಂ ಯಜ್ಞಶ್ಚ = ಈ ಯಜ್ಞನು ಸಗರ್ವಃ = ಗರ್ವದಿಂದ ಸಹಿತವಹಂಥಾತನು. ಭೋ ಅನಘ = ಎಲೈ ನಿರ್ದೋಷಿಯಹಂಥಾತನೇ ! ಭವತಾ = ನಿನ್ನಿಂದ ಶಾಸಿತವ್ಯಃ = ಶಿಕ್ಷಿಸಲು ಯೋಗ್ಯನು. ವಿರಿಂಚಸ್ಯ = ಬ್ರಹ್ಮನ ಶಿರಃ = ಶಿರಸ್ಸು ತ್ವಯಾ = ನಿನ್ನಿಂದ ಧಾರಣೀಯಂ = ಧರಿಸಲು ಯೋಗ್ಯವು. ||೬೩||

ಇತಿ = ಈ ಪ್ರಕಾರದಲ್ಲಿ ಏತತ್ ವಚನಂ = ಈ ವಾಕ್ಯವನು ಉಕ್ತ್ವಾ = ನುಡಿದು ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಪರಮೇಶ್ವರಃ = ಪರಮೇಶ್ವರನು ಸ್ವಾಭಾವಿಕಂ = ತನ್ನ ಸಂಬಂಧವಹಂಥಾ ಪರಮಂ = ಉತ್ಕೃಷ್ಟವಹಂಥಾ ಪದಂ = ಕುರುಹನುಳ್ಳಂಥಾ ದಿವ್ಯಂ = ಪ್ರಕಾಶವಹಂಥಾ ತತ್ = ಆ ಸ್ಥಾನಂ = ಸ್ಥಾನವನು ಯಯೌ = ಎಯ್ದಿದನು. ||೬೪||

---

1 ಭಗವನ್ (ಘ) 2 ಶಿರಸ್ತ್ವಿದಂ (ಘ)

ಚತುರ್ದಶೋ ऽ ಧ್ಯಾಯಃ

(ಭಿಕ್ಷಾಟನಲೀಲಾ)

ಬ್ರಹ್ಮಾಂಡಪುರಾಣೇ ಸೂತ ಉವಾಚ—

ತತಃ ಸ ಭಗವಾನೀಶಃ ಕಪರ್ದೀ ನೀಲಲೋಹಿತಃ
[1]ಗ್ರಾಹಯಾಮಾಸ[1] ವದನಂ ಬ್ರಹ್ಮಣಃ ಕಾಲಭೈರವಃ ॥೧॥

ಸ್ವತಂತ್ರಃ ಪರಿಪೂರ್ಣಶ್ಚ ನಿರವಗ್ರಹವಿಗ್ರಹಃ
ಭೂತಪ್ರಮುಥರುದ್ರಾಣಾಂ ಕೋಟಿಭಿಃ ಪರಿವಾರಿತಃ ॥೨॥

ಬ್ರಹ್ಮಾಂಡಪುರಾಣೇ ಸೂತ ಉವಾಚ — ಬ್ರಹ್ಮಾಂಡಪುರಾಣದಲ್ಲಿ ಸೂತ ಮಹಾಋಷಿ [2]ನುಡಿದನು.[2]

ತತಃ=ಆನಂತರದಲ್ಲಿ ಭಗವಾನ್=ಷಡ್ಗುಣೈಶ್ವರ್ಯವನುಳ್ಳಂಥಾ ಈಶಃ= ಒಡೆಯನಹಂಥಾ ಕಪರ್ದೀ = ಜಟಾಜೂಟವನುಳ್ಳಂಥಾ ನೀಲಲೋಹಿತಃ = ಕೊರಳ ಕಪ್ಪು ಜಡೆಯ ಕೆಂಪುವರ್ಣವನುಳ್ಳಂಥಾ ಸಃ ಕಾಲಭೈರವಃ = ಆ ಕಾಲಭೈರವನು ಬ್ರಹ್ಮಣಃ = ಬ್ರಹ್ಮನ ವದನಂ=ಮುಖವನು ಗ್ರಾಹಯಾಮಾಸ =ಧರಿಸಿದನು. ನೀಲಲೋಹಿತ ಶಬ್ದಕ್ಕೆ ನಿರ್ವಚನವು — ಕಂಠೇ ನೀಲಃ ಕೇಶೇಷು ಲೋಹಿತೋ ಯಸ್ಯ ಸಃ ನೀಲಲೋಹಿತಃ ಈ ನಿರ್ವಚನ ಲಿಂಗಾಭಟ್ಟಿಯಲ್ಲಿ[3] ಹೇಳಲು ಪಟ್ಟಿತ್ತು.

ಸ್ವತಂತ್ರಃ=ಸ್ವತಂತ್ರನಹಂಥಾ ಪರಿಪೂರ್ಣಶ್ಚ=ಪರಿಪೂರ್ಣನಹಂಥಾ ಕಾಲಭೈರವನು[4] ನಿರವಗ್ರಹವಿಗ್ರಹಃ[4]=[5]ತಟ್ಟಯುವ[5]ಮಾಡದೇ ಬ್ರಹ್ಮಕಪಾಲವ ಧರಿಸಿ

---

[1] ಜಗ್ರಾಹ ತಸ್ಯ (ಘ) ಪಾಠಾಂತರ [2] ಹೇಳುತ್ತಿದ್ದಾನು (ಖ)

[3] (O.R.I. ನಲ್ಲಿನ S.586ನೇ ನಂಬರಿನ ಆಂಧ್ರಲಿಪಿಯ ತಾಳಪತ್ರದ ಲಿಂಗಾಭಟ್ಟಿಯಲ್ಲಿ "ನೀಲಶ್ಚಾಸೌ ಲೋಹಿತಶ್ಚ ನೀಲಲೋಹಿತಃ । ನೀಲಃ ಕಂಠೇ ಕೇಶೇಷು ಲೋಹಿತೋ ವಾ" ಎಂದು ನಿರ್ವಚನ ಉಕ್ತವಾಗಿದೆ].

[4] [ಅನಿಂದ್ಯವಾದ ಅರ್ಥಾತ್ ಪಾವನವಾದ ಅಥವಾ ಅವಿಭಕ್ತವಾದ ಶರೀರವುಳ್ಳವನಾಗಿ]

[5] ತಟ್ಟೆಯವ (ಖ) (?) [ತಂಟೆ ?]

ದೇವಾನಾಂ ದಾನವಾನಾಂ ಚ ತಥಾಽನ್ಯೇಷಾಂ ಚ ಮಾದ್ಯತಾಮ್
ರಕ್ತಭಿಕ್ಷಾಚ್ಛಲೇನೈವ ಗರ್ವಕಂಡೂಂ ಹರಾಮ್ಯಹಮ್ ||೩||

ಇತಿ ನಿಶ್ಚಿತ್ಯ ವಿಶ್ವಾತ್ಮಾ ಚಚಾರ ಭುವನತ್ರಯಮ್
ಆಸ್ಥಾಯ ವಿಕೃತಂ ವೇಷಂ ದೀಪ್ಯಮಾನಂ ಸ್ವತೇಜಸಾ
ಶ್ರೀಮತ್ಪವಿತ್ರಂ ರುಚಿರಂ ಲೋಚನತ್ರಯಸಂಯುತಮ್ ||೪||

ಕಾಲಾಗ್ನಿಕೋಟಿಸಂಕಾ[1]ಶ[1]ಪ್ರಜ್ವಲತ್ಕೇಶಸಂಹ[2]ತಿಃ[2]
ದಂಷ್ಟ್ರಾಕರಾಳವದ[3]ನೋ[3] ಮಹಾಜಲದನಿಸ್ಸ್ವ[4]ನಃ[4] ||೫||

ದಾತನಾಗಿ ಭೂತಪ್ರಮಥರುದ್ರಾಣಾಂ= ಭೂತಗಣ ಪ್ರಮಥಗಣ ರುದ್ರಗಣಂಗಳ ಕೋಟಿಭಿಃ=ಕೋಟಿ ಸಂಖ್ಯೆಗಳಿಂದ ಪರಿವಾರಿತಃ=ಮುಸುಕಲುಪಟ್ಟಾತನಾದನು. ವಿಗ್ರಹಶಬ್ದಕ್ಕೆ ನಿರ್ವಚನವು = ವಿಶೇಷೇಣ ಗೃಹ್ಣಾತೀತಿ ವಿಗ್ರಹಃ. ಗ್ರಹ = ಉಪಾದಾನೇ ಎಂಬ ಧಾತು ಪ್ರಯೋಗವು. ||೨||

ರಕ್ತಭಿಕ್ಷಾಚ್ಛಲೇನೈವ=ರಕ್ತಭಿಕ್ಷದ ನೆವದಿಂದವೇ ದೇವಾನಾಂ=ದೇವರ್ಕಳ ದಾನವಾನಾಂ ಚ= ರಾಕ್ಷಸರುಗಳ ತಥಾ = ಹಾಂಗೆ ಅನ್ಯೇಷಾಂ=ಮತ್ತೆ ಕೆಲಂಬರುಗಳ ಮಾದ್ಯತಾಂ =ಮದದ ಸಂಬಂಧವಹಂಥಾ ಗರ್ವಕಂಡೂಂ ಚ = ಗರ್ವದ ತಿಮಿರವನು ಅಹಂ=ನಾನು ಹರಾಮಿ=ತಗ್ಗಿಸುವೆನು. ||೩||

ಇತಿ=ಹೀಗೆಂದು ನಿಶ್ಚಿತ್ಯ=ನಿಶ್ಚೈಸಿ ವಿಶ್ವಾತ್ಮಾ= ವಿಶ್ವರೂಪನಹಂಥಾ ಕಾಲಭೈರವನು ಸ್ವತೇಜಸಾ = ತನ್ನ ತೇಜಸ್ಸಿನಿಂದ ದೀಪ್ಯಮಾನಂ = ಪ್ರಕಾಶಿಸುತ್ತಿದ್ದಂಥಾ ವಿಕೃತಂ = ಭಯಂಕರವಹಂಥಾ ಶ್ರೀಮತ್ = ಒಪ್ಪುತ್ತಿದ್ದಂಥಾ ಪವಿತ್ರಂ—ಪಾವನವಹಂಥಾ ರುಚಿರಂ=ಚೆಲುವಿಕೆಯನುಳ್ಳಂಥಾ ಲೋಚನತ್ರಯಸಂಯುತಂ = ನಯನ ಮೂರರಿಂದ ಕೂಡಲುಪಟ್ಟಂಥಾ ವೇಷಂ = ರೂಪನು ಆಸ್ಥಾಯ = ಮಾಡಿಕೊಂಡು ಭುವನತ್ರಯಂ = ಲೋಕಮೂರನು ಚಚಾರ= ಚರಿಸಿದನು. ||೪||

ಕಾಲಾಗ್ನಿಕೋಟಿಸಂಕಾಶಪ್ರಜ್ವಲತ್ಕೇಶಸಂಹತಿಃ = ಪ್ರಳಯಕಾಲದ ಅಗ್ನಿಕೋಟಿಗಳಿಗೆ ಸಮಾನವಾಗಿ ಹೊಳೆವುತ್ತಿದ್ದ ಜಟಾಮಕುಟವನುಳ್ಳಂಥಾ ದಂಷ್ಟ್ರಾಕರಾಳವದನಃ = ದಾಡೆಗಳಿಂದ ಭಯಂಕರವಹ ಮುಖವನುಳ್ಳಂಥಾ ಮಹಾಜಲದ ನಿಸ್ಸ್ವನಃ=ಬಹಳವಹಮೇಘ ಧ್ವನಿಯನುಳ್ಳಂಥಾ ||೫||

---

[1] ಶಂ (ಘ) [2] ತಂ (ಘ) [3] ನಂ (ಘ) [4] ನಂ (ಘ)

ಮಹಾಡಮರುಕಧ್ವಾನ ದೀರ್ಣವಿಶ್ವಾಂಡಂ ಪಿಂಡ[1]ಕಃ[1]
ತ್ರಿಶೂಲಖಡ್ಗಪರಶುಪ್ರಮುಖಾಯುಧಕೋಟಿಭಿಃ
ಅಲಂಕೃತಮಹಾಬಾಹುಪರಿಘವ್ಯೂಹಶೋಭನಃ[2] ||೬||

ತಂ ದೃಷ್ಟ್ವಾ ಕಾಲವದನಂ ಶಂಕರಂ ಕಾಲಭೈರವಮ್
ರೂಪಲಾವಣ್ಯಸಂಪ[3]ನ್ನಂ ನಾರೀಕುಲಮಗಾದನು ||೭||

ಗಾಯಂತಿ ವಿವಿಧಂ ಗಾನಂ ನೃತ್ಯಂತಿ ಪುರತಃ ಪ್ರಭೋಃ
ಸಸ್ಮಿತಂ ಪ್ರೇಕ್ಷ್ಯ ವದನಂ [4]ಚಕ್ರುರ್ಭ್ರೂಭಂಗಮೇವ[4] ಚ ||೮||

ಸ ದೇವದಾನವಾದೀನಾಂ ದೇಶಾನಭ್ಯೇತ್ಯ ಶೂಲಭೃತ್
ಜಗಾಮ ವಿಷ್ಣುಭವನಂ ಯತ್ರಾಸ್ತೇ ಮಧುಸೂದನಃ ||೯||

ಮಹಾಡಮರುಕಧ್ವಾನದೀರ್ಣವಿಶ್ವಾಂಡಪಿಂಡಕಃ = ಮಹಾಡಮರುಗಧ್ವನಿಯಿಂದ ಒಡೆಯಲ್ಪಟ್ಟ ಸಮಸ್ತಬ್ರಹ್ಮಾಂಡಮಂಡಲವನುಳ್ಳಂಥಾ ತ್ರಿಶೂಲಖಡ್ಗಪರಶುಪ್ರಮುಖಾಯುಧಕೋಟಿಭಿಃ = ತ್ರಿಶೂಲ ಖಡ್ಗಪರಶು ಮುಂತಾದ ಆಯುಧಂಗಳ ಕೋಟಿಗಳಿಂದ ಅಲಂಕೃತಮಹಾಬಾಹುಪರಿಘವ್ಯೂಹಶೋಭನಃ = ಅಲಂಕರಿಸಲ್ಪಟ್ಟ ದೊಡ್ಡಿಹ ಭುಜಂಗಳೆಂಬ ಲಾಳವಿಂಡಿಗೆಗಳ ಮೊತ್ತದಿಂದ ಒಪ್ಪುತ್ತಿದ್ದಂಥಾತನಾದನು.

ಕಾಲವದನಂ = ಮನೋಹರವಹ ಮುಖವನುಳ್ಳಂಥಾ ಶಂಕರಂ = ಸುಖವನು ಮಾಡುತ್ತಿದ್ದಂಥಾ ರೂಪಲಾವಣ್ಯಸಂಪನ್ನಂ = ರೂಪುಲಾವಣ್ಯದಿಂದ ಸಂಪನ್ನವಹಂಥಾ ತಂ ಕಾಲಭೈರವಂ = ಆ ಕಾಲಭೈರವನನು ದೃಷ್ಟ್ವಾ = ಕಂಡು ನಾರೀಕುಲಂ = ಸ್ತ್ರೀಯರ ಸಮೂಹವು ಅನು = ಬಳಿವಿಡಿದು ಅಗಾತ್ = ಎಯ್ದಿತ್ತು. ||೭||

ಪ್ರಭೋಃ = ಪರಮೇಶ್ವರನ ಪುರತಃ = ಮುಂದೆ ವಿವಿಧಂ = ನಾನಾಪ್ರಕಾರವಹಂಥಾ ಗಾನಂ = ಗೀತವನು ಗಾಯಂತಿ = ಹಾಡುತ್ತಿದ್ದರು. ನೃತ್ಯಂತಿ = ನೃತ್ಯವನಾಡುತ್ತಿದ್ದರು. ಸಸ್ಮಿತಂ = ಮುಗುಳುನಗೆಯಿಂದ ಸಹಿತವಹಂಥಾ ವದನಂ = ಮುಖವನು ಪ್ರೇಕ್ಷ್ಯ = ನೋಡಿ ಭ್ರೂಭಂಗಮೇವ ಚ = ಹುಬ್ಬಿನ ವಿಲಾಸವನ್ನು ಚಕ್ರುಃ = ಮಾಡಿದರು. ||೮||

ತ್ರಿಶೂಲಭೃತ್ = ತ್ರಿಶೂಲವ ಧರಿಸಿದಂಥಾ ಸಃ = ಆ ಕಾಲಭೈರವನು ದೇವದಾನವಾದೀನಾಂ = ದೇವರ್ಕಳು ರಾಕ್ಷಸರು ಮೊದಲಾದವರುಗಳ ದೇಶಾನ್ =

---

[1] ಕಂ (ಘ) [2] ೫-೬ನೇ ಶ್ಲೋಕಗಳು (ಘ)ದಲ್ಲಿ ದ್ವಿತೀಯಾಂತವಾಗಿವೆ

[3] ನ್ನಾ (ಘ) [4] ಸಕೃತ್ ಭ್ರೂಭಂಗಮೇವ (ಘ)

ಸಂಪ್ರಾಪ್ಯ ಭವನಂ ದಿವ್ಯಂ ಶಂಕರೋ ಲೋಕಶಂಕರಃ
ಸಹೈವ ಭೂತಪ್ರವರ್ಯೈಃ ಪ್ರವೇಷ್ಟುಮುಪಚಕ್ರಮೇ ||೧೦||

ಅವಿಜ್ಞಾಯ ಪರಂ ಭಾವಂ ದಿವ್ಯಂ ತತ್ಪಾರಮೇಶ್ವರಮ್
ನ್ಯವಾರಯತ್ತ್ರಿಶೂಲಾಂಕಂ ದ್ವಾರಪಾಲೋ ಮಹಾಬಲಃ ||೧೧||

ಶಂಖಚಕ್ರಗದಾಪಾಣಿಃ ಪೀತವಾಸಾ ಮಹಾಭುಜಃ
ವಿಷ್ವಕ್ಸೇನ ಇತಿ ಖ್ಯಾತೋ ವಿಷ್ಣೋರಂಶಸಮುದ್ಭವಃ ||೧೨||

ಅಥ ದೇವೋ ಮಹಾದೇವಸ್ತ್ರಿಪುರಾರಿಸ್ತ್ರಿಶೂಲಭೃತ್
ಶೂಲೇನೋರಸಿ ನಿರ್ಭಿದ್ಯ ಪಾತಯಾಮಾಸ ತಂ [2]ಭುವಿ ||೧೩||

ದೇಶಂಗಳನು ಅಭ್ಯೇತ್ಯ = ಎಯ್ದಿ, ಯತ್ರ = ಆವುದಾನೊಂದು ವೈಕುಂಠದಲ್ಲಿ ಮಧುಸೂದನಃ = ಪುರುಷೋತ್ತಮನು ಆಸ್ತೇ = ಇರುತ್ತಿಹನು, ತತ್ರ = ಅಲ್ಲಿ ವಿಷ್ಣುಭವನಂ = ಮಹಾವಿಷ್ಣುವಿನ ಅರಮನೆಯನು ಜಗಾಮ = ಎಯ್ದಿದನು. ||೯||

ಲೋಕಶಂಕರಃ = ಲೋಕಕ್ಕೆ ಸುಖವನು ಮಾಡುತ್ತಿದ್ದಂಥಾ ಶಂಕರಃ = ಪರಮೇಶ್ವರನು ದಿವ್ಯಂ = ಮನೋಹರವಹಂಥಾ ಭವನಂ = ಅರಮನೆಯನು ಸಂಪ್ರಾಪ್ಯ = ಎಯ್ದಿ ಭೂತ.ಪ್ರವರ್ಯೈಃ ಸಹೈವ = ಭೂತಗಣಶ್ರೇಷ್ಠರುಗಳಿಂದ ಸಹಿತನಾಗಿ ಪ್ರವೇಷ್ಟುಂ = ಪ್ರವೇಶಿಸಲು ಉಪಚಕ್ರಮೇ = ಉಪಕ್ರಮಿಸಿದನು.

ಪಾರಮೇಶ್ವರಂ — ಪರಮೇಶ್ವರನ ಸಂಬಂಧವಹಂಥಾ ದಿವ್ಯಂ = ಒಪ್ಪುತ್ತಿದ್ದಂಥಾ ಪರಂ = ಉನ್ನತವಹಂಥಾ ತತ್ = ಆ ಭಾವಂ = ಸ್ವಭಾವವನು ಅವಿಜ್ಞಾಯ = ಅರಿಯದೇ ಮಹಾಬಲಃ = ಅತ್ಯಂತ ಸತ್ತ್ವವನುಳ್ಳಂಥಾ ದ್ವಾರಪಾಲಃ = ಬಾಗಿಲ ಕಾಯುವವನು ತ್ರಿಶೂಲಾಂಕಂ = ತ್ರಿಶೂಲದ ಕುರುಹನುಳ್ಳಂಥಾ ಕಾಲಭೈರವನನು ನ್ಯವಾರಯತ್ = ತಡೆದನು. ||೧೧||

ಶಂಖಚಕ್ರಗದಾಪಾಣಿಃ = ಶಂಖಚಕ್ರಗದಾಹಸ್ತವನುಳ್ಳಂಥಾ ಪೀತವಾಸಾಃ = ಪೀತಾಂಬರವನುಳ್ಳಂಥಾ ಮಹಾಭುಜಃ = ದೊಡ್ಡಿಹ ಭುಜಂಗಳನುಳ್ಳಂಥಾ ವಿಷ್ವಕ್ಸೇನ ಇತಿ = ಐಷ್ವಕ್ಸೇನನೆಂದು ಖ್ಯಾತಃ = [1]ಪ್ರಸಿದ್ಧನಾದ ಬಾಗಿಲಕಾಯುವಾತನು ವಿಷ್ಣೋಃ = ವಿಷ್ಣುವಿನ ಅಂಶಸಮುದ್ಭವಃ = ಅಂಶದಿಂದ ಹುಟ್ಟಿದಾತನು. ||೧೨||

ಅಥ = ಅನಂತರದಲ್ಲಿ ದೇವಃ = ಪ್ರಕಾಶಿಸುತ್ತಿದ್ದಂಥಾ ತ್ರಿಪುರಾರಿಃ = ತ್ರಿಪುರವೈರಿಯಹಂಥಾ ತ್ರಿಶೂಲಭೃತ್ = ತ್ರಿಶೂಲವ ಧರಿಸಿದಂಥಾ ಮಹಾದೇವಃ

---

[1] ಪ್ರಖ್ಯಾತನಹಂಥಾ (ಖ) [2] ವಿಭುಃ (ಖ,ಗ) ಮೂಲಮಾತ್ರ

ಸ ಶೂಲನಿಹತೋಽತ್ಯರ್ಥಂ ತ್ಯಕ್ತ್ವಾ ಸ್ವಂ ಪರಮಂ ಬಲವತ್
ತತ್ಯಾಜ ಜೀವಿತಂ [1]ದೃಷ್ಟ್ವಾ ಮೃತ್ಯುಂ ವ್ಯಾಧಿಹತೋ ಯಥಾ[1] ||೧೪

ನಿಪಾತ್ಯ ವಿಷ್ವಕ್ಪುರುಷಂ ಸಾರ್ಧಂ ಪ್ರಮಥಪುಂಗವೈಃ
ವಿವೇಶ ಶೂಲೇನಾದಾಯ ತತ್ಕಳೇವರಮೀಶ್ವರಃ ||೧೫||

[2]ವೀಕ್ಷ್ಯ ತಂ ಜಗತೋ ಹೇತು[2]ಮೀಶ್ವರಂ ಭಗವಾನ್ ಹರಿಃ
[3]ಸಿರಾಂ ಲಲಾಟಾನ್ನಿರ್ಭಿದ್ಯ [3]ರಕ್ತಧಾರಾಮಪಾತಯತ್ ||೧೬||

= ಪರಮೇಶ್ವರನು ಶೂಲೇನ = ತ್ರಿಶೂಲದಿಂದ ಉರಸಿ = ಎದೆಯಲ್ಲಿ ನಿರ್ಭಿದ್ಯ = ಇರಿದು ತಂ = ಆ ವಿಷ್ವಕ್ಸೇನಂ = ವಿಷ್ವಕ್ಸೇನನನು ಭುವಿ = ಭೂಮಿಯಲ್ಲಿ ಪಾತಯಾಮಾಸ = ಕೆಡಹಿದನು. ||೧೩||

ಶೂಲನಿಹತಃ = ಶೂಲದಿಂದ ಘಾಯವಡೆಯಲುಪಟ್ಟಂಥಾ ಸಃ = ಆ ವಿಷ್ವಕ್ಸೇನನು ಸ್ವಂ = ತನ್ನ ಸಂಬಂಧವಹಂಥಾ ಪರಮಂ = ಅಧಿಕವಹಂಥಾ ಬಲಂ = ಸತ್ತ್ವವನು ಅತ್ಯರ್ಥಂ = ಅತ್ಯಂತವಾಗಿ ತ್ಯಕ್ತ್ವಾ = ಬಿಟ್ಟು ಜೀವಿತಂ = ಪ್ರಾಣವನು ತತ್ಯಾಜ = ಬಿಟ್ಟನು. ಮೃತ್ಯುಂ = ಮೃತ್ಯುವನು ದೃಷ್ಟ್ವಾ = ಕಂಡು ವ್ಯಾಧಿಹತೋ ಯಥಾ = ವ್ಯಾಧಿಪೀಡಿತನೆಹಗೋ ಅಹಗೆ. ||೧೪||

ಈಶ್ವರಃ = ಪರಮೇಶ್ವರನು ವಿಷ್ವಕ್ಪುರುಷಂ = ವಿಷ್ವಕ್ಸೇನನನು ನಿಪಾತ್ಯ = ಕೆಡಹಿ ತತ್ಕಳೇವರಂ = ಆತನ ಹೆಣನನು ಶೂಲೇನ = ತ್ರಿಶೂಲದಿಂದ ಆದಾಯ = ನೆಗಹಿ ಪ್ರಮಥಪುಂಗವೈಃ ಸಾರ್ಧಂ = ಪ್ರಮಥಶ್ರೇಷ್ಠರುಗಳೊಡನೆ ವಿವೇಶ = ಒಳಹೊಕ್ಕನು. ||೧೫||

ಭಗವಾನ್ = ಸಾಮರ್ಥ್ಯವನುಳ್ಳಂಥಾ ಹರಿಃ = ಮಹಾವಿಷ್ಣು ಜಗತಃ = ಲೋಕಕ್ಕೆ ಹೇತುಂ = ಕಾರಣನಹಂಥಾ ತಂ = ಆ ಈಶ್ವರಂ = ಪರಮೇಶ್ವರನನು ವೀಕ್ಷ್ಯ = ಕಂಡು ಲಲಾಟಾತ್ = ಹಣೆಯ ದೆಸೆಯಿಂದ ಸಿರಾಂ = ಸಿರೆಯನು ನಿರ್ಭಿದ್ಯ = ಬಿಡಿಸಿ ರಕ್ತಧಾರಾಂ = ರಕ್ತಧಾರೆಯನು ಅಪಾತಯತ್ = ಕೆಡಹಿದನು. ||೧೬||

---

[1] ಮತ್ತ್ವೋ ಯಥಾ ವ್ಯಾಧಿಹತೋ ನರಃ (ಘ) ಪಾಠಾಂತರ. ಮೂಲ ಮೇಲಿರುವಂತೆಯೇ

[2] ಸಂಪ್ರವೀಕ್ಷ್ಯ ಜಗದ್ಧೇತು (ಘ).

[3] ಚಕ್ರೇಣೋತ್ಪಾಟ್ಯ ನಿಟಿಲಂ (ಘ)

[1]ಗೃಹಾಣ[1]ಭಗವನ್ ಭಿಕ್ಷಾಂ ಮದೀಯಾಮಮಿತದ್ಯುತೇ
ನ ವಿದ್ಯತೇ[2]ಚಾಪ್ಯುಚಿತಾ[2] ತವ ತ್ರಿಪುರಮರ್ದನ ||೧೭||

[3]ಇತಿ[3] ಪ್ರವರ್ತಿತಾ ಧಾರಾ ರುಧಿರಸ್ಯ ನಿರಂತರಮ್
ದಿವ್ಯ ವರ್ಷಸಹಸ್ರಂ ತು ಕಪಾಲೇ ಭೈರವಸ್ಯ ಸಾ ||೧೮||

[ಸೂತ ಉವಾಚ] —
ತಯಾ ಪತಂತ್ಯಾ ವಿಪ್ರೇಂದ್ರಾಃ ಧಾರಯಾ ಪರಮೇಷ್ಠಿನಃ
ಕಪಾಲಸ್ಯ ವಿಶಾಲಸ್ಯ ನಾರ್ಧಮಪ್ಯಭಿಪೂರಿತಮ್ ||೧೯||

ರಕ್ತಸ್ಯ ವಿರಹಾತ್ ವಿಷ್ಣುಃ ಪಪಾತ ಭುವಿ ಮೋಹಿತಃ

ಅಮಿತದ್ಯುತೇ = ಹವಣಿಸಲು ಬಾರದೇ ಇದ್ದ ಕಾಂತಿಯನುಳ್ಳಂಥಾ ಭಗವನ್ = ಎಲೈ ಷಡುಣೈಶ್ವರ್ಯಸಂಪನ್ನನಹಂಥಾ ದೇವನೇ ! ಮದೀಯಾಂ = ಎನ್ನ ಸಂಬಂಧವಹಂಥಾ ಭಿಕ್ಷಾಂ = ಭಿಕ್ಷೆಯನು ಗೃಹಾಣ = ಗ್ರಹಿಸು. ಭೋ ತ್ರಿಪುರಮರ್ದನ ! = ಎಲೆ ತ್ರಿಪುರಸಂಹಾರಿಯಹಂಥಾ ಶಿವನೇ! ತವಾಪಿ = ನಿನಗೆಯು ಉಚಿತಾ ಚ = ಯೋಗ್ಯವಹಂಥಾದ್ದು ನ ವಿದ್ಯತೇ = ಇಲ್ಲ. ||೧೭||

ಇತಿ = ಈ ಪ್ರಕಾರದಲ್ಲಿ ರುಧಿರಸ್ಯ = ರಕ್ತದ ಸಾ = ಆ ಧಾರಾ = ಧಾರೆ ನಿರಂತರು = ಆವಾಗವು ದಿವ್ಯವರ್ಷಸಹಸ್ರಂ ತು = ದಿವ್ಯ ಸಹಸ್ರವರುಷವು ಭೈರವಸ್ಯ = ಕಾಲಭೈರವನ ಕಪಾಲೇ = ಹಸ್ತದ ಕಪಾಲದಲ್ಲಿ ಪ್ರವರ್ತಿತಾ = ವರ್ತಿಸಲು ಪಟ್ಟಿತ್ತು. ||೧೮||

ಸೂತ ಉವಾಚ — ಸೂತಮುನಿ ನುಡಿವುತ್ತಿದ್ದಾನು.

ಭೋ ವಿಪ್ರೇಂದ್ರಾಃ = ಎಲೈ ಬ್ರಾಹ್ಮಣೋತ್ತಮರುಗಳಿರಾ ! ಪತಂತ್ಯಾ = ಬೀಳುತ್ತಿದ್ದಂಥಾ ತಯಾ ಧಾರಯಾ = ಆ ರಕ್ತದ ಧಾರೆಯಿಂದ ಪರಮೇಷ್ಠಿನಃ = ಪರಮೇಶ್ವರನ ವಿಶಾಲಸ್ಯ = ವಿಶಾಲವಹಂಥಾ ಕಪಾಲಸ್ಯ = ಕಪಾಲದ ಅರ್ಧಮಪಿ = ಅರ್ಧವೂ ಅಭಿಪೂರಿತಂ ನ = ತುಂಬಲುಪಟ್ಟಿದಿಲ್ಲ. ||೧೯||

ರಕ್ತಸ್ಯ = ರಕ್ತದ ವಿರಹಾತ್ = ಅಗಲಿಕೆಯ ದೆಸೆಯಿಂದ ವಿಷ್ಣುಃ = ಮಹಾವಿಷ್ಣು ಮೋಹಿತಃ = ಮೂರ್ಛಿತನಾಗಿ ಭುವಿ = ಭೂಮಿಯಲ್ಲಿ ಪಪಾತ = ಬಿದ್ದನು. ತತಃ = ಅನಂತರದಲ್ಲಿ ಕೃಪಾನಿಧಿಃ = ಕರುಣಕ್ಕೆ ಸ್ಥಾನವಹಂಥಾ

1 ಗ್ರಹಾಣ (ಘ) 2 ಚಾಪ್ಯುಚಿತಂ (ಘ) 3 ಇತ್ಥಂ (ಘ)

ತತಃ ಕೃಪಾನಿಧಿರ್ದೇವಃ ಕಟಾಕ್ಷೇಣಾಮೃತೇನ ತು ||
ಭಕ್ತಮುಜ್ಜೀವಯಾಮಾಸ ಹರಿಂ ಸರ್ವೇಶ್ವರಶ್ಶಿವಃ ||೨೦||

ಅಥಾಬ್ರವೀತ್ಕಾಲರುದ್ರಂ ಹರಿರ್ನಾರಾಯಣಃ [1]ಪ್ರಭುಃ[1]
ಸಂಸ್ತುತ್ಯ ವೈದಿಕೈರ್ಮಂತ್ರೈಃ ಬಹುಮಾನಪುರಸ್ಸರಮ್ ||೨೧||

ಕಿಮರ್ಥಮೇತದ್ವದನಂ ಬ್ರಹ್ಮಣೋ ಭವತಾ ಧೃತಮ್
ಪ್ರೋವಾಚ ವೃತ್ತಮಖಿಲಂ ದೇವದೇವೋ ಮಹೇಶ್ವರಃ ||೨೨||

ವಿಸ್ಮೃತಂ ತೇನ ತತ್ಕಾಲೇ ಪರಮೇಶ್ವರಮಾಯಯಾ
ಏವಂ ತಮನುಗೃಹ್ಯಾಥ ಭಗವಾನ್ ಕಾಲಭೈರವಃ ||೨೩||

ದೇವಃ = ಪ್ರಕಾಶಿಸುತ್ತಿದ್ದಂಥಾ ಸರ್ವೇಶ್ವರಃ = ಸಮಸ್ತಲೋಕಕ್ಕೆ ಒಡೆಯನಹಂಥಾ ಶಿವಃ = ಶಿವನು ಅಮೃತೇನ = ಅಮೃತಮಯವಹಂಥಾ ಕಟಾಕ್ಷೇಣ = ಕಟಾಕ್ಷದಿಂದವು ಭಕ್ತಂ = ಭಕ್ತನಹಂಥಾ ಹರಿಂ = ಪುರುಷೋತ್ತಮನನು ಉಜ್ಜೀವಯಾಮಾಸ = [2]ಪ್ರಾಣಿಸಿದನು[2] [ಬದುಕಿಸಿದನು.] ||೨೦||

ಅಥ = ಅನಂತರದಲ್ಲಿ ಪ್ರಭುಃ = ಸಮರ್ಥನಹಂಥಾ ನಾರಾಯಣಃ = ಜಲಶಯನನಹಂಥಾ ಹರಿಃ = ಮಹಾವಿಷ್ಣುವು ವೈದಿಕೈಃ ಮಂತ್ರೈಃ = ವೇದೋಕ್ತವಹಂಥಾ ಮಂತ್ರಂಗಳಿಂದ ಸಂಸ್ತುತ್ಯ = ಸ್ತೋತ್ರವ ಮಾಡಿ ಬಹುಮಾನಪುರಸ್ಸರಂ = ಬಹಳ ಸತ್ಕಾರ ಮುಂತಾಗಿ ಕಾಲರುದ್ರಂ = ಕಾಲಭೈರವನನು ಕುರಿತು ಅಬ್ರವೀತ್ = ನುಡಿದನು. ||೨೧||

ಕಿಮರ್ಥಂ = ಏನು ಕಾರಣ ಬ್ರಹ್ಮಣಃ = ಬ್ರಹ್ಮನ ಏತದ್ವದನಂ = ಈ ಮುಖವು ಭವತಾ = ನಿನ್ನಿಂದ ಧೃತಂ = ಧರಿಸಲುಪಟ್ಟಿತ್ತು. ದೇವದೇವಃ = ದೇವಶ್ರೇಷ್ಠನಹಂಥಾ ಮಹೇಶ್ವರಃ = ಶಿವನು ಅಖಿಲಂ ವೃತ್ತಂ = ಸಮಸ್ತ ವೃತ್ತಾಂತವನು ಪ್ರೋವಾಚ = ನುಡಿದನು. ||೨೨||

ಪರಮೇಶ್ವರಮಾಯಯಾ — ಪರಮೇಶ್ವರನ ಮಾಯೆಯಿಂದ ತತ್ಕಾಲೇ = ಆ ಕಾಲದಲ್ಲಿ ತೇನ = ಆ ಬ್ರಾಹ್ಮಣನಿಂದ ವಿಸ್ಮೃತಂ = ಮರೆಯಲ್ಪಟ್ಟಿತ್ತು ಎಂದು ಏವಂ = ಈ ಪ್ರಕಾರದಲ್ಲಿ ನುಡಿದು ತಂ = ಆ ಮಹಾವಿಷ್ಣುವನು ಅನುಗೃಹ್ಯ = ಪತಿಕರಿಸಿ ಅಥ = ಅನಂತರದಲ್ಲಿ ಭಗವಾನ್ = ಷಡ್ಗುಣೈಶ್ವರ್ಯವನುಳ್ಳಂಥಾ

---

1 ಸ್ವಯಮ್ (ಘ) 2 ಸಪ್ರಾಣಿಸಿದನು (ಖ)

ಮಹೇಶ್ವರಾಂಶಸಂಭೂತೋ ನಿರ್ಜಗಾಮ ಕಪಾಲವಾನ್
ಭಸ್ಮಸಂದಿಗ್ಧಸರ್ವಾಂಗೋ ಲೋಕಾನಾಂ ಹಿತಕಾಮ್ಯಯಾ ||೨೪||

ಕೈಲಾಸಶಿಖರಾಕಾರಂ ದೇವರಾಜನಿಕೇತನವತ್
ವರ್ಧಮಾನಪುರದ್ವಾರಂ ಯಯೌ ಭಿಕ್ಷಾರ್ಥಮೀಶ್ವರಃ ||೨೫||

ದೇವರಾಜೋऽಪಿ ವಿಮಲೇ [1]ಮಂಡಪೇ[1] ರತ್ನಮಂಡಿತೇ
ಶಚ್ಯಾ ಸಹ ಸಮಾಸೀನಃ ಕಲ್ಪವೃಕ್ಷಸಮೀಪತಃ ||೨೬||

ಅಪ್ಸರೋ ಗಣಿಕಾಶ್ಚೈವ ತತ್ರ ನೃತ್ಯಂತಿ ಕೋವಿದಾಃ
ತತ್ರ ದೇವಗಣಾಃ ಶಕ್ರಂ ಮುನಯಶ್ಚಾಪ್ಯುಪಾಸತೇ ||೨೭||

ಮಹೇಶ್ವರಾಂತಸಂಭೂತಃ = ಶಿವನ ಅಂಶದಿಂದ ಹುಟ್ಟಿದಂಥಾ ಕಪಾಲವಾನ್ = ಬ್ರಹ್ಮಕಪಾಲವನುಳ್ಳಂಥಾ ಭಸ್ಮಸಂದಿಗ್ಧಸರ್ವಾಂಗಃ = ವಿಭೂತಿಯಿಂದ ಉದ್ಧೂಳಿಸಲ್ಪಟ್ಟ ಸರ್ವಾಂಗವನುಳ್ಳಂಥಾ ಕಾಲಭೈರವಃ = ಕಾಲಭೈರವನು ಲೋಕಾನಾಂ = ಲೋಕಂಗಳಿಗೆ ಹಿತಕಾಮ್ಯಯಾ = ಹಿತವನು ಬಯಸುವ ಬಯಕೆಯಿಂದ ನಿರ್ಜಗಾಮ = ಹೊರವಂಟನು. ||೨೪||

ಈಶ್ವರಃ = ಪರಮೇಶ್ವರನು ಭಿಕ್ಷಾರ್ಥಂ — ಭಿಕ್ಷೆಗೋಸ್ಕರ ಕೈಲಾಸಶಿಖರಾ-ಕಾರಂ = ಕೈಲಾಸಪರ್ವತದ ಶಿಖರದೋಪಾದಿ ಆಕಾರವನುಳ್ಳಂಥಾ ದೇವರಾಜನಿಕೇತನಂ = ದೇವೇಂದ್ರಸ್ಥಾನವಹಂಥಾ ವರ್ಧಮಾನಪುರದ್ವಾರಂ = ಉನ್ನತವಹ ಪಟ್ಟಣದ ಬಾಗಿಲನು ಯಯೌ = ಎಯ್ದಿದನು. ||೨೫||

ದೇವರಾಜೋऽಪಿ = ದೇವೇಂದ್ರನು ಕಲ್ಪವೃಕ್ಷಸಮೀಪತಃ = ಕಲ್ಪವೃಕ್ಷದ ಸಮೀಪದಲ್ಲಿ ವಿಮಲೇ = ನಿರ್ಮಲವಹಂಥಾ ರತ್ನಮಂಡಿತೇ = ರತ್ನಂಗಳಿಂದ ಅಲಂಕರಿಸಲುಪಟ್ಟಂಥಾ ಮಂಡಪೇ = ಸಭಾಮಂಟಪದಲ್ಲಿ ಶಚ್ಯಾ ಸಹ = ಶಚೀದೇವಿಯೊಡನೆ ಸಮಾಸೀನಃ = ಕುಳ್ಳಿ[2]ದ್ದಿ[2]ದ್ದನು. ||೨೬||

ತತ್ರ = ಆ ಸಭಾಮಂಡಲದಲ್ಲಿ ಕೋವಿದಾಃ = ಪ್ರೌಢೆಯರಹಂಥಾ ಅಪ್ಸರೋಗಣಿಕಾಶ್ಚೈವ = ಅಪ್ಸರಗಣಿಕೆಯರು ನೃತ್ಯಂತಿ = ನೃತ್ಯವನಾಡುತ್ತಿದ್ದರು. ತತ್ರ = ಅಲ್ಲಿ ದೇವಗಣಾಃ = ದೇವಗಣಂಗಳು ಮುನಯಶ್ಚ = ಋಷಿಗಳೂ ಶಕ್ರಮಪಿ = ಇಂದ್ರನನೂ ಉಪಾಸತೇ = ಓಲೈಸುತ್ತಿದ್ದರು. ||೨೭||

---

1 ಮಂಡಲೇ (ಕ) ಸಭಾಮಂಟಪದಲ್ಲಿ (ಕ) ವ್ಯಾಖ್ಯಾ

2 ದಿ (ಖಚ)

ವರ್ತಮಾನೇ ತದಾ ತಸ್ಮಿನ್ ದ್ವಾರಪಾಲಾಃ ಸಸಂಭ್ರ[1]ಮಾಃ
ಗತ್ವಾ ನತ್ವಾ ತದಾ ಶಕ್ರಮಿದಂ ವಚನಮಬ್ರುವನ್ ॥೨೮॥

ಕಶ್ಚಿತ್ಕಪಾಲಮಾದಾಯ ಚಂದ್ರಮಂಡಲಸನ್ನಿಭಮ್
ಆಯಾತಿ [2]ಭಗವಾನ್ನಾಥ ಭಸ್ಮಭೂಷಿತವಿಗ್ರಹಃ ॥೨೯॥

ತ್ರಿಣೇತ್ರಃ ಸೌಮ್ಯವದನೋ ಜಟಾಮಂಡಲಭೂಷಿತಃ
ನೀಲಕಂಠಶ್ಚತುರ್ಬಾಹುರ್ಹಿಮವಾನಿವ ಚಾಪರಃ ॥೩೦॥

ಆತ್ಮತುಲ್ಯಗಣೋಪೇತಃ ಚಂದ್ರಲೇಖಾವತಂಸಕಃ
ವಯಂ ತಂ ತು ನ ಜಾನೀಮೋ ದೇವರಾಜ! ಶಚೀಪತೇ ॥೩೧॥

ತದಾ = ಆಗ ತಸ್ಮಿನ್ = ಆ ದೇವೇಂದ್ರನು ವರ್ತಮಾನೇ ಸತಿ = ವರ್ತಿಸುತ್ತಿರಲು ದ್ವಾರಪಾಲಾಃ = ಬಾಗಿಲವರುಗಳು ಸಸಂಭ್ರಮಾಃ = ಸಂಭ್ರಮದಿಂದ ಸಹಿತರಾಗಿ ಗತ್ವಾ = ಹೋಗಿ ನತ್ವಾ = ನಮಸ್ಕರಿಸಿ ತದಾ = ಆಗ ಶಕ್ರಂ = ಇಂದ್ರನನು ಕುರಿತು ಇದಂ ವಚನಂ = ಈ ವಾಕ್ಯವನು ಅಬ್ರುವನ್ = ನುಡಿದರು.

ಭೋ ನಾಥ = ಎಲೈ ಒಡೆಯನೇ! ಚಂದ್ರಮಂಡಲಸನ್ನಿಭಂ = ಚಂದ್ರಮಂಡಲಕ್ಕೆ ಸಮಾನವಹಂಥಾ ಕಪಾಲಂ = ಕಪಾಲವನು ಆದಾಯ = ತೆಗೆದುಕೊಂಡು ಭಸ್ಮಭೂಷಿತವಿಗ್ರಹಃ = ವಿಭೂತಿಯಿಂದ ಅಲಂಕರಿಸಲ್ಪಟ್ಟ ಶರೀರವನುಳ್ಳಂಥಾ ಭಗವಾನ್ = ಸಮರ್ಥನಹಂಥಾ ಕಶ್ಚಿತ್ = ಒಬ್ಬಾನೊಬ್ಬನು ಆಯಾತಿ = ಬಂದಿದ್ದಾನು. ॥೨೯॥

ತ್ರಿಣೇತ್ರಃ = ಮೂರು ಕಣ್ಣನುಳ್ಳಂಥಾ ಸೌಮ್ಯವದನಃ = ಒಪ್ಪುತ್ತಿಂವಿದ್ದ (*ಮೂರು?) ಮುಖವನುಳ್ಳಂಥಾ ಜಟಾಮಂಡಲಭೂಷಿತಃ = ಜಟಾಮಂಡಲ ಭೂಷಿತನಹಂಥಾ ನೀಲಕಂಠಃ = ಕರೆಕೊರಳನುಳ್ಳಂಥಾ ಚತುರ್ಬಾಹುಶ್ಚ = ಚತುರ್ಭುಜನಹಂಥಾ ದೇವನು ಅಪರಃ = ಮತ್ತೊಂದು ಹಿಮವಾನಿವ = ಹಿಮವತ್ಪರ್ವತವಕ್ಕೈ ಎಂಬ ಹಾಂಗಿದ್ದಾನು. ॥೩೦॥

ಆತ್ಮತುಲ್ಯಗಣೋಪೇತಃ = ತನಗೆ ಸಮಾನವಹ ಗಣಂಗಳೊಡನೆ ಕೂಡಲುಪಟ್ಟಂಥಾ ಆತನಾಗಿ, ಚಂದ್ರಲೇಖಾವತಂಸಕಃ = ಚಂದ್ರನ ಲೇಖೆಯೇ ಅಲಂಕಾರ

---

[1] ಮಂ (ಘ) [2] ಭಗವನ್ನತ್ರ (ಘ) [* 'ಮೂಜು' ಎಂಬುದು (ಖ) ಪಾಠ. ಕಾಲಭೈರವನಿಗೆ ಮೂರು ಮುಖಗಳುಂಟೇ ? ಎಂಬುದು ವಿಮರ್ಶನೀಯ.]

ಅತೀವ ದರ್ಪಸಂಯುಕ್ತಂ ಪುರುಷಂ ತಂ ಮಹಾಭುಜಮ್
ದ್ವಾರಪಾಲೈಸ್ತಥೋಕ್ತಸ್ತು ಸಹಸ್ರಾಕ್ಷಃ [1]ಸಸಂಭ್ರಮಃ[1] ||೩೨||

[2]ಸಮಂ ಸದಸ್ಯೈಸ್ಸಹಸಾ[2]ನಿರ್ಜಗಾಮ ಪುರಾತ್ತತಃ
ಅಪ್ಸರೋಭಿಃ ಪರಿವೃತಃ ಶಚ್ಯಾ ಸಹ ಪುರಂದರಃ ||
ಶಿರಸ್ಯಂಜಲಿಮಾಧಾಯ ಜೀವಸ್ಯ ವಚನಂ ಸ್ಮರನ್ ||೩೩||

ಅಥಾಯಾಂತಂ ಮಹಾದೇವಂ ತ್ರಿಣೇತ್ರಂ ಸರ್ಪಕುಂಡಲಮ್
ಭೂಮೌ ಪಪಾತ ತಂ ದೃಷ್ಟ್ವಾ ಸಂಭ್ರಾಂತೇಂದ್ರಿಯಮಾನಸಃ ||೩೪||

ವಾಗಿ ಉಳ್ಳಾತನಾಗಿದ್ದಾನು. ಶಚೀಪತೇ = ಶಚೀಪತಿಯಹಂಥಾ ಭೋ ದೇವರಾಜ = ಎಲೈ ಇಂದ್ರನೇ! ತಂ ತು = ಆತನನು ವಯಂ = ನಾವು ನ ಜಾನೀಮಃ = ಅರಿಯೆವು. ||೩೧||

ಅತೀವದರ್ಪಸಂಯುಕ್ತಂ = ಅತ್ಯಂತ ಅದಟಿಂದ ಕೂಡಿದಂಥಾ ಮಹಾಭುಜಂ = ಮಹಾಭುಜಂಗಳನುಳ್ಳಂಥಾ ತಂ ಪುರುಷಂ = ಆ ಮಹಾಪುರುಷನನು ಕುರಿತು ದ್ವಾರಪಾಲೈಃ = ಬಾಗಿಲವರುಗಳಿಂದ ತಥಾ = ಹಾಂಗೆ ಉಕ್ತಃ = ನುಡಿಯಲ್ಪಟ್ಟಂಥಾ ಸಹಸ್ರಾಕ್ಷಃ = ಇಂದ್ರನು ಸಸಂಭ್ರಮಃ = ಸಂಭ್ರಮದಿಂದ ಸಹಿತನಾದನು. ||೩೨||

ತತಃ = ಅನಂತರದಲ್ಲಿ ಪುರಂದರಃ = ಇಂದ್ರನು ಶಚ್ಯಾ ಸಹ = ಶಚೀದೇವಿಯಿಂದ ಸಹಿತವಾಗಿ ಅಪ್ಸರೋಭಿಃ = ಅಪ್ಸರಸ್ತ್ರೀಯರುಗಳಿಂದ ಪರಿವೃತಃ = ಮುಸುಕಲ್ಪಟ್ಟಂಥಾ ಆತನಾಗಿ ಸದಸ್ಯೈಃ ಸಮಂ = ಸಭೆಯ ಜನರುಗಳಿಂದ ಸಹಿತವಾಗಿ ಜೀವಸ್ಯ = ಬೃಹಸ್ಪತಿಯ ವಚನಂ = ವಾಕ್ಯವನು ಸ್ಮರನ್ = ನೆನವುತ್ತವು ಶಿರಸಿ = ಶಿರಸ್ಸಿನಲ್ಲಿ (ಮಸ್ತಕದಲ್ಲಿ) ಅಂಜಲಿಂ = ಕೈಮುಗಿಹವನು ಆಧಾಯ = ಮಾಡಿಕೊಂಡು ಸಹಸಾ = ಆ ಕ್ಷಣದಲ್ಲಿ ಪುರಾತ್ = ಪಟ್ಟಣದ ದೆಸೆಯಿಂದ ನಿರ್ಜಗಾಮ — ಹೊರವಂಟನು. ||೩೩||

ಅಥ = ಅನಂತರದಲ್ಲಿ ಆಯಾಂತಂ = ಬಂದಂಥಾ ತ್ರಿಣೇತ್ರಂ = ತ್ರಿಣೇತ್ರನಹಂಥಾ ಸರ್ಪಕುಂಡಲಂ = ನಾಗಕುಂಡಲನಹಂಥಾ ತಂ ಮಹಾದೇವಂ = ಆ ಪರಮೇಶ್ವರನನು ದೃಷ್ಟ್ವಾ = ಕಂಡು ಸಂಭ್ರಾಂತೇಂದ್ರಿಯಮಾನಸಃ — ಭ್ರಮಿಸಲು ಪಟ್ಟ ಇಂದ್ರಿಯಂಗಳು ಮನಸ್ಸನುಳ್ಳಾತನಾಗಿ ಭೂಮೌ — ಭೂಮಿಯಲ್ಲಿ ಪಪಾತ = ಬಿದ್ದನು. ||೩೪||

---

[1] ಸಸಂಭ್ರಮಂ. (ಖ) [2] ಸಮಂ ಸುರಗಣೈಃ ಸರ್ವೈಃ (ಖ)

[1]ವೇದಾಶ್ಚ[1] ಮುನಯಸ್ಸರ್ವೇ [2]ದೇವಾ[2] ನಾರ್ಯಸ್ತಥೈವ ಚ
ನಿಪೇತುಃ [3]ಪಣಿಪತ್ಯೈನಂ[3] ದೇವರಾಜಸ್ಯ ಪೃಷ್ಠತಃ ||೩೫||

ಉತ್ಥಾಯ ಶಕ್ರಃ ಸುಭಗಾಂ ಪ್ರಿಯಾಮಾಹ ಶಚೀಂ ಪ್ರತಿ
ಪ್ರಿಯೇ ಪಶ್ಯ ವಿಶಾಲಾಕ್ಷಿ ಧನ್ಯಾ ತ್ವಂ ಸುಭಗೇಽನಘೇ ||೩೬||

ಧನ್ಯೋಽಹಂ ದೇವಿ ಸುಶ್ರೋಣಿ ಯತ್ಪಶ್ಯಾಮಿ ಜಗತ್ಪತಿಮ್
ಅಯಂ ಧಾತಾ ವಿಧಾತಾ ಚ ಲೋಕಾನಾಂ ಪ್ರಭುರವ್ಯಯಃ ||೩೭||

ಅನಾದಿಃ ಸರ್ವಗಃ ಶಾಂತಃ ಪರಃ ಷಡ್ವಿಂಶಕಃ ಸ್ಮೃತಃ ||೩೮||

ವೇದಾಶ್ಚ=ವೇದಂಗಳು ಮುನಯಃ = ಋಷಿಗಳು ಸರ್ವೇ ದೇವಾಃ = ಸಮಸ್ತ ದೇವರ್ಕಳು ತಥೈವ ಚ = ಹಾಂಗೆ ನಾರ್ಯಃ ದೇವಸ್ತ್ರೀಯರುಗಳು ದೇವರಾಜಸ್ಯ = ದೇವೇಂದ್ರನ ಪೃಷ್ಠತಃ = ಹಿಂದುಗಡೆಯಲ್ಲಿ ಏನಂ — ಈ ಪರಮೇಶ್ವರನನು ಕುರಿತು ಪ್ರಣಿಪತ್ಯ=ನಮಸ್ಕರಿಸಿ ನಿಪೇತುಃ=ಬಿದ್ದರು. ||೩೫||

ಶಕ್ರಃ—ಇಂದ್ರನು ಉತ್ಥಾಯ=ಎದ್ದು ಸುಭಗಾಂ = ಚೆಲುವೆಯಹಂಥಾ ಪ್ರಿಯಾಂ=ಪ್ರಿಯಳಂಥಾ=ಶಚೀಂ = ಶಚೀದೇವಿಯನು ಪ್ರತಿ=ಕುರಿತು ಆಹ =ನುಡಿದನು. ಸುಭಗೇ = ಸೌಂದರ್ಯವನುಳ್ಳಂಥಾ ಅನಘೇ — ನಿರ್ದೋಷಿಯಹಂಥಾ ವಿಶಾಲಾಕ್ಷಿ ವಿಶಾಲಲೋಚನೆಯಹಂಥಾ ಭೋಃಪ್ರಿಯೇ=ಎಲೈ ಪ್ರಿಯಳೇ! ಪಶ್ಯ=ನೋಡು, ತ್ವಂ=ನೀನು ಧನ್ಯಾ=ಕೃತಾರ್ಥೆ[4]ಯಹಂಥಾಯಕನು.[4] ||೩೬||

ಸುಶ್ರೋಣಿ=ಒಪ್ಪುತ್ತಂವಿದ್ದ ನಿತಂಬಗಳನುಳ್ಳಂಥಾ ಭೋ ದೇವಿ!=ಎಲೈ ಶಚೀದೇವಿ: ಯತ್=ಆವುದಾನೊಂದು ಕಾರಣವಾಗಿ ಜಗತ್ಪತಿಂ = ಲೋಕಕ್ಕೆ ಒಡೆಯನಹಂಥಾ ದೇವನನು ಪಶ್ಯಾಮಿ—ಕಾಣುತ್ತಿದ್ದೆನು. ಅಹಂ=ನಾನು ಧನ್ಯಃ =ಕೃತಾರ್ಥನು. ಅಯಂ=ಈತನು ಲೋಕಾನಾಂ=ಲೋಕಂಗಳಿಗೆ ವಿಧಾತಾ = ಒಡೆಯನು. ಧಾತಾ ಚ—ಸೃಷ್ಟಿಸುವಾತನು. ಪ್ರಭುಃ—ಸಮರ್ಥನು. ಅವ್ಯಯಃ —ನಿತ್ಯನು. ||೩೭||

ಅನಾದಿಃ—ಮೊದಲಿಲ್ಲದಾತನು ಸರ್ವಗಃ—ಸರ್ವಗತನು ಶಾಂತಃ—ಶಾಂತನು ಪರಃ=ಉತ್ಕೃಷ್ಟನು ಷಡ್ವಿಂಶಕಃ—ಇಪ್ಪತ್ತಾರನೆಯ ತತ್ತ್ವಸ್ವರೂಪನೆಂದು ಸ್ಮೃತಃ —ಹೇಳಲುಪಟ್ಟನು. ||೩೮||

---

1 ದೇವಾಶ್ಚ (ಗಘ) 2 ವೇದಾ (ಘ) 3 ಪ್ರಣಿಪತ್ಯೈವಂ (ಘ) 4 (ಖ) ಪಾಠ.

ಯಂ ವಿನಿದ್ರಾ ಜಿತಶ್ವಾಸಾಃ ಶಾಂತಾ ಧ್ಯಾನಪರಾಯಣಾಃ
ಧಿಯಾ ಪಶ್ಯಂತಿ ಹೃದಯೇ ಸೋsಯಮದ್ಯ ಸಮೀಕ್ಷ್ಯತಾಮ್॥೭೯॥

ಅಹೋ ವಿಚಿತ್ರಂ ದೇವಸ್ಯ ಚೇಷ್ಟಿತಂ ಪರಮೇಷ್ಠಿನಃ
ದೇಹೀವ ದೃಶ್ಯತೇ ದೇವೋ ನೀರೂಪಃ ಪರಮೇಶ್ವರಃ ॥೮೦॥

ಯಸ್ಯ ಪ್ರಸಾದಾದ್ಭಗವಾನ್ ಬ್ರಹ್ಮಾ ವಿಷ್ಣುಶ್ಚ ಶಾಶ್ವತಃ
ಕರೋತಿ ಲೋಕಸಂಧಾನಂ ಸೋsಯಮಾಯಾತಿ ಶೋಭನೇ ॥೮೧॥

ಯಂ ದೃಷ್ಟ್ವಾ ನ ಪುನರ್ಜನ್ಮ ಲಭತೇ ಮಾನವೋ ಭುವಿ
ಸೋsಯಮಾಯಾತಿ ಭಗವಾನ್ ಶಂಕರಃ ಶಶಿಭೂಷಣಃ ॥೮೨॥

ಯಂ—ಆವನಾನೊಬ್ಬ ಪರಮೇಶ್ವರನನು ವಿನಿದ್ರಾಃ—ನಿದ್ರೆಯ ತೋರದಂಥಾ ಜಿತಶ್ವಾಸಾಃ — ಗೆಲಲುಪಟ್ಟ ಶ್ವಾಸವನುಳ್ಳಂಥಾ ಶಾಂತಾಃ — ಶಾಂತರಹಂಥಾ ಧ್ಯಾನಪರಾಯಣಾಃ—ಧ್ಯಾನದಲ್ಲಿ ತತ್ಪರರುಗಳು ಹೃದಯೇ—ಹೃದಯದಲ್ಲಿ ಧಿಯಾ —ಬುದ್ಧಿಯಿಂದ ಪಶ್ಯಂತಿ—ಕಾಣುತ್ತಿಹರು. ಸೋsಯಂ—ಅ ಈ ದೇವನು ಅದ್ಯ —ಈಗ ಸಮೀಕ್ಷ್ಯತಾಂ—ನೋಡಲುಪಡಲಿ. ॥೭೯॥

ಪರಮೇಷ್ಠಿನಃ — ಪರಮಪದದಲ್ಲಿ ಇರುತ್ತಿದ್ದಂಥಾ ದೇವಸ್ಯ — ದೇವನ ಚೇಷ್ಟಿತಂ—ವ್ಯಾಪಾರವು ವಿಚಿತ್ರಂ—ವಿಚಿತ್ರವಹಂಥಾದು. ಅಹೋ—ಆಶ್ಚರ್ಯ. ನೀರೂಪಃ—ರೂಪಿಲ್ಲದೇ ಇದ್ದಂಥಾ ದೇವಃ — ಪ್ರಕಾಶನಹಂಥಾ ಪರಮೇಶ್ವರಃ— ಪರಮೇಶ್ವರನು ದೇಹೀವ — ದೇಹವನುಳ್ಳಾತನಕ್ಕೈ ಎಂಬ ಹಾಂಗೆ ದೃಶ್ಯತೇ — ಕಾಣಲುಪಡುತ್ತಿದ್ದಾನು. ॥೮೦॥

ಹೇ ಶೋಭನೇ ;—ಎಲೆ ಒಪ್ಪುತ್ತಿದ್ದಂಥಾ ಶಚೀದೇವಿ! ಯಸ್ಯ—ಆವನಾನೊಬ್ಬ ಪರಮೇಶ್ವರನ ಪ್ರಸಾದಾತ್ — ಪ್ರಸನ್ನತಿಕೆಯ ದೆಸೆಯಿಂದ ಭಗವಾನ್ — ಭಗವಾನ್ನವಹಂಥಾ ಬ್ರಹ್ಮಾ— ಬ್ರಹ್ಮನು ಶಾಶ್ವತಃ — ನಿತ್ಯನಹಂಥಾ ಆತನಾಗಿ ಲೋಕಸಂಧಾನಂ—ಲೋಕದ ಸೃಷ್ಟಿಯನು ಕರೋತಿ— ಮಾಡುತ್ತಿಹನು. ವಿಷ್ಣುಶ್ಚ —ಹರಿಯೂ ಕರೋತಿ—ಪಾಲನೆಯ ಮಾಡುತ್ತಿಹನು ಸೋsಯ—ಅ ಈ ದೇವನು ಆಯಾತಿ—ಬಂದಿದ್ದಾನು. ॥೮೧॥

ಯಂ — ಆವನಾನೊಬ್ಬ ದೇವನನು ದೃಷ್ಟ್ವಾ— ಕಂಡು ಮಾನವಃ — ಮನುಷ್ಯನು ಭುವಿ—ಭೂಮಿಯಲ್ಲಿ ಪುನರ್ಜನ್ಮ—ಪುನರ್ಜನ್ಮವನು ನ ಲಭತೇ— ಪಡುವುತ್ತಿರನು. ಭಗವಾನ್—ಷಡ್ಗುಣೈಶ್ವರ್ಯಸಂಪನ್ನನಹಂಥಾ ಶಂಕರಃ—ಸುಖ

ದೇವತ್ವಾದಶುಭಂ ದೇವಿ ಲೋಕೇ ಕಿಂಚಿನ್ನ ವಿದ್ಯತೇ
ದೃಷ್ಟ್ವಾಽಪಿ ಸರ್ವದೇವೇಶಂ ಗಚ್ಛಾಮೋಽನು ವಯಂ ಪರಮ್ ||೪೩

ಪಶ್ಯ ಚಂದ್ರಾಭವದನಂ ತ್ರಿಣೇತ್ರಂ ಭೂತಿಭೂಷಣಮ್
ಚತುರ್ಬಾಹುಮುದಾರಾಂಗಂ[1]ಜಟಾಮುಕುಟ[1]ಧಾರಿಣಮ್ ||೪೪||

ಸರ್ವಪಾಪಹರಂ ಸೂಕ್ಷ್ಮಂ ಪ್ರಕೃತೇಃ ಪರತಃ ಸ್ಥಿತಮ್
ಕಾರಣಂ ಪುರುಷಸ್ಯಾಪಿ ಪಶ್ಯ ಶೀತಾಂಶುಭೂಷಣಮ್ ||೪೫||

ಏವಮುಕ್ತ್ವಾ ಸಹಸ್ರಾಕ್ಷಃ ಪ್ರಹೃಷ್ಟೇಂದ್ರಿಯಮಾನಸಃ
ಪ್ರಣಿಪತ್ಯ ಮಹಾದೇವಮಿದಮಾಹ ವೃಷಧ್ವಜಮ್ ||೪೬||

ವನು ಮಾಡುತ್ತಿದ್ದಂಥಾ ಶಶಿಭೂಷಣಃ—ಚಂದ್ರಭೂಷಣನಹಂಥಾ ಸೋಽಯಂ—ಆ ಈ ಪರಮೇಶ್ವರನು ಆಯಾತಿ—ಬಂದಿದ್ದಾನು. ||೪೨||

ಭೋ ದೇವಿ !—ಎಲೇ ಶಚೀದೇವಿ ದೇವತ್ವಾತ್—ದೇವನಹತನದ ದೆಸೆಯಿಂದ ಲೋಕೇ—ಲೋಕದಲ್ಲಿ ಕಿಂಚಿತ್—ಒಂದಿಷ್ಟು ಅಶುಭಂ—ಅಶುಭವು ನ ವಿದ್ಯತೇ—ಇಲ್ಲ. ಸರ್ವದೇವೇಶಂ—ಸಮಸ್ತ ದೇವರ್ಕಳಿಗೊಡೆಯನಹಂಥಾ ಪರಂ—ಉನ್ನತನಹಂಥಾ ದೇವನನು ದೃಷ್ಟ್ವಾ—ಕಂಡು ವಯಂ—ನಾವು ಅನು — ಬಳಿವಿಡಿದು ಗಚ್ಛಾಮಃ—ಎಯ್ದುವೆವು. ||೪೩||

ಚಂದ್ರಾಭವದನಂ—ಚಂದ್ರಂಗೆ ಸಮಾನವಹ ಮುಖವನುಳ್ಳಂಥಾ ತ್ರಿಣೇತ್ರಂ—ಮೂರು ನಯನಗಳನುಳ್ಳಂಥಾ ಭೂತಿಭೂಷಣಂ — ವಿಭೂತಿಭೂಷಣನಹಂಥಾ ಚತುರ್ಬಾಹುಂ — ಚತುರ್ಭುಜಂಗಳನುಳ್ಳಂಥಾ ಉದಾರಾಂಗಂ — ಒಪ್ಪುತ್ತಿದ್ದ ಶರೀರವನುಳ್ಳಂಥಾ ಜಟಾಮುಕುಟಧಾರಿಣಂ—ಜಟಾಮುಕುಟವ ಧರಿಸಿದಂಥಾ ಶಿವನನು ಪಶ್ಯ—ನೋಡು. ||೪೪||

ಸರ್ವಪಾಪಹರಂ — ಸಮಸ್ತ ಪಾಪಂಗಳ ಕೆಡಿಸುತ್ತಿದ್ದಂಥಾ ಸೂಕ್ಷ್ಮಂ—ಸೂಕ್ಷ್ಮನಹಂಥಾ ಪ್ರಕೃತೇಃ—ಪ್ರಕೃತಿಯ ದೆಸೆಯಿಂದ ಪರತಃ—ಮೇಲೆ ಸ್ಥಿತಂ—ಇರುತ್ತಿದ್ದಂಥಾ ಪುರುಷಸ್ಯಾಪಿ— ಪುರುಷಂಗೆವೂ (ಯೂ) ಕಾರಣಂ — ಉತ್ಪತ್ತಿ ಕಾರಣನಹಂಥಾ ಶೀತಾಂಶುಭೂಷಣಂ—ಚಂದ್ರಭೂಷಣನಹಂಥಾ ಪರಮೇಶ್ವರನನು ಪಶ್ಯ—ನೋಡು. ಪ್ರಕೃತಿ ಎಂದಡೆ ಮಾಯೆಯ ಪೆಸರು. ಪುರುಷನೆಂದಡೆ ಆತ್ಮನು.

ಏವಂ—ಈ ಪ್ರಕಾರದಲ್ಲಿ ಉಕ್ತ್ವಾ—ನುಡಿದು ಸಹಸ್ರಾಕ್ಷಃ — ಇಂದ್ರನು

---

[1]ಜಟಾಮುಕುಟ (ಘ)

ಕಿಮಿದಂ ದೇವದೇವೇಶ ಸರ್ವಜ್ಞೇನ ತ್ವಯಾ ವಿಭೋ
ಕೃತಂ ಸರ್ವಜಗದ್ಧಾತ್ರಾ ಸರ್ವಪಾಪಹರಾವ್ಯಯ ||೪೭||

ಏವಮುಕ್ತೋ ಮಹಾದೇವಃ ಸ್ಮಯಮಾನೋ ವೃಷಧ್ವಜಃ
ನೋವಾಚ ಕಿಂಚಿದ್ವಿಪ್ರೇಂದ್ರಾ ಭಗವಾನ್ ಭಗನೇತ್ರಹಾ ||೪೮||

ತತೋ ಭೃಂಗಿರಿಟಿಃ ಪ್ರಾಹ ಶತಕ್ರತುಮರಿಂದಮಮ್
ದೇಹಿ ಭಿಕ್ಷಾಂ ಭಗವತೋ ದೇವಸ್ಯಾಸ್ಯ ಶಚೀಪತೇ ||೪೯||

ಏವಮುಕ್ತಸ್ಸಹಸ್ರಾಕ್ಷಃ ಪ್ರಣಿಪತ್ಯ ಪಿನಾಕಿನಮ್
ಯಥಾಶಕ್ತಿ ದದೌ ಭಿಕ್ಷಾಂ ಶಚ್ಯಾ ಸಹ ಪುರಂದರಃ ||೫೦||

ಪ್ರಹೃಷ್ಟೇಂದ್ರಿಯಮಾನಸಃ — ಸಂತೋಷಿಸಲುಪಟ್ಟ ಇಂದ್ರಿಯಂಗಳು ಮನಸ್ಸನುಳ್ಳಾತನಾಗಿ ಪ್ರಣಿಪತ್ಯ — ನಮಸ್ಕರಿಸಿ ವೃಷಧ್ವಜಂ — ವೃಷಭಧ್ವಜನಹಂಥಾ ಮಹಾದೇವಂ—ಪರಮೇಶ್ವರನನು ಕುರಿತು ಇದಂ—ಈ ವಾಕ್ಯವನು ಆಹ—ಬಿನ್ನಹಂ ಮಾಡಿದನು. ||೪೬||

ದೇವದೇವೇಶ — ದೇವಶ್ರೇಷ್ಠರುಗಳಿಗೊಡೆಯನಹಂಥಾ ಸರ್ವಪಾಪಹರ— ಸಮಸ್ತ ಪಾಪಂಗಳ ಕೆಡಿಸುತ್ತಿದ್ದಂಥಾ ಅವ್ಯಯಂ—ಕೇಡಿಲ್ಲದೇ ಇದ್ದಂಥಾ ವಿಭೋ —ಎಲೈ ಒಡೆಯನೇ ಸರ್ವಜ್ಞೇನ — ಸರ್ವಜ್ಞನಹಂಥಾ ಸರ್ವಜಗದ್ಧಾತ್ರಾ — ಸಮಸ್ತ ಲೋಕವನು ಸೃಷ್ಟಿಸುತ್ತಿದ್ದಂಥಾ ತ್ವಯಾ—ನಿನ್ನಿಂದ ಇದಂ ಕಿಂ—ಇದೇನು ಕೃತಂ—ಮಾಡಲುಪಟ್ಟಿತ್ತು. ||೪೭||

ಏವಂ—ಈ ಪ್ರಕಾರದಲ್ಲಿ ಉಕ್ತಃ— ನುಡಿಯಲುಪಟ್ಟಂಥಾ ಭಗವಾನ್ — ಷಡ್ಗುಣೈಶ್ವರ್ಯವನುಳ್ಳಂಥಾ ಭಗನೇತ್ರಹಾ—ಭಗಾದಿತ್ಯನ ನಯನವ ಮೀಂಟಿದಂಥಾ ವೃಷಧ್ವಜಃ— ವೃಷಭಧ್ವಜನಹಂಥಾ ಮಹಾದೇವಃ—ಪರಮೇಶ್ವರನು ಸ್ಮಯಮಾನಃ —ನಗುತ್ತಿದ್ದಾತನಾಗಿ ಭೋ ವಿಪ್ರೇಂದ್ರಾಃ — ಎಲೆ ಬ್ರಾಹ್ಮಣೋತ್ತಮರುಗಳಿರಾ ಕಿಂಚಿತ್—ಒಂದಿಷ್ಟು ನೋವಾಚ —ನುಡಿದುದಿಲ್ಲ. ||೪೮||

ತತಃ—ಅಷ್ಟರಮೇಲೆ ಭೃಂಗಿರಿಟಿಃ—ಭೃಂಗೀಶ್ವರನು ಅರಿಂದಮಂ — ಶತ್ರುಗಳನ್ನು ಕೊಲ್ಲುತ್ತಿದ್ದಂಥಾ ಶತಕ್ರತುಂ—ಇಂದ್ರನನು ಕುರಿತು ಪ್ರಾಹ—ನುಡಿದನು. ಭೋಃ ಶಚೀಪತೇ—ಎಲೆ ಶಚೀವಲ್ಲಭನೇ ; ಭಗವತಃ—ಭಗವಾನ್ನುವಹಂಥಾ ಅಸ್ಯ ದೇವಸ್ಯ—ಈ ಪರಮೇಶ್ವರಂಗೆ ಭಿಕ್ಷಾಂ—ಭಿಕ್ಷೆಯನು ದೇಹಿ—ಕೊಡು. ||೪೯||

ಏವಂ—ಭೃಂಗೀಶ್ವರನಿಂದ ಈ ಪ್ರಕಾರದಲ್ಲಿ ಉಕ್ತಃ— ನುಡಿಯಲುಪಟ್ಟಂಥಾ ಸಹಸ್ರಾಕ್ಷಃ—ಸಾವಿರಕಣ್ಣನುಳ್ಳಂಥಾ ಪುರಂದರಃ—ಇದ್ರಂನು ಶಚ್ಯಾಸಹ — ಶಚೀ

ಸುರಾಂಗನಾ ಭವಂ ದೃಷ್ಟ್ವಾ ಕಾಮಬಾಣಪ್ರಪೀಡಿತಾಃ
ಹಸಂತಿಸ್ಮ ತದಾ ಶಂಭುಮತೀವಮಧುರಾಕೃತಿಮ್ ||೫೧||

ಕಾಶ್ಚಿತ್ಕಪಾಲಿನಂ ದೃಷ್ಟ್ವಾ ಪದ್ಮಪತ್ರನಿಭೇಕ್ಷಣಾಃ
ಸ್ರಸ್ತವಸ್ತ್ರಾ ಬಭೂವುಸ್ತಾ ದೇವರಾಜಸ್ಯ ಸನ್ನಿಧೌ ||೫೨||

ವಿವಶಾ ಸ್ರಸ್ತಚಿಕುರಾಃ ಸ್ರಸ್ತಕಾಂಚೀಗುಣಾ ಜಗುಃ
ಈಷತ್ಸ್ವೇದಾಂಬುಖಚಿತಲಲಾಟಫಲಕೋಜ್ಜ್ವಲಾಃ ||೫೩||

ಆಕರ್ಣಪೂರ್ಣನಯನಾ ರತ್ನನೂಪುರ ಭೂಷಣಾಃ
ಕಾಶ್ಚಿದ್‌ದೃಷ್ಟ್ವಾ ಜಗನ್ನಾಥಂ ಮದನಾಂತಕರಂ ಹರಮ್ ||೫೪||

ದೇವಿಯಿಂದ ಸಹಿತವಾಗಿ ಪಿನಾಕಿನಂ—ಪರಮೇಶ್ವರನನು ಪ್ರಣಿಪತ್ಯ— ನಮಸ್ಕರಿಸಿ ಯಥಾಶಕ್ತಿ — ತನ್ನ ಶಕ್ತಿಯುಂಟಾದ ಹಾಗೆ ಭಿಕ್ಷಾಂ — ಭಿಕ್ಷೆಯನು ದದೌ— ಕೊಟ್ಟನು. ||೫೦||

ಸುರಾಂಗನಾಃ—ದೇವಸ್ತ್ರೀಯರುಗಳು ತದಾ—ಆಗ ಅತೀವ ಮಧುರಾಕೃತಿಂ —ಅತ್ಯಂತ ಮನೋಹರವಹ ರೂಪನುಳ್ಳಂಥಾ ಶಂಭುಂ— ಸುಖವನು ಮಾಡು ತ್ತಿದ್ದಂಥಾ ಭವಂ—ಶಿವನನು ದೃಷ್ಟ್ವಾ — ಕಂಡು ಕಾಮಬಾಣಪ್ರಪೀಡಿತಾಃ— ಕಾಮನ ಬಾಣಗಳಿಂದ ಘಾಸಿಯಾದವರುಗಳಾಗಿ ಹಸಂತಿ ಸ್ಮ—ನಗುತ್ತಿದ್ದರು. ||೫೧||

ಪದ್ಮಪತ್ರನಿಭೇಕ್ಷಣಾಃ — ತಾವರೆಯ ಎಸಳಿಗೆ ಸಮಾನವಹ ನಯನಂಗಳ ನುಳ್ಳಂಥಾ ತಾಃ ಕಾಶ್ಚಿತ್ — ಆ ಕೆಲಬರು ದೇವಸ್ತ್ರೀಯರುಗಳು ಕಪಾಲಿನಂ — ಕಪಾಲವ ಧರಿಸಿದಂಥಾ ಶಿವನನು ದೃಷ್ಟ್ವಾ—ಕಂಡು ದೇವರಾಜಸ್ಯ—ದೇವೇಂದ್ರನ ಸನ್ನಿಧೌ = ಸಮೀಪದಲ್ಲಿ ಸ್ರಸ್ತವಸ್ತ್ರಾಃ = ಸಡಲಿದ ವಸ್ತ್ರಂಗಳನುಳ್ಳಂಥಾವರು ಗಳು ಬಭೂವುಃ = ಆದರು. ||೫೨||

ವಿವಶಾಃ = ಪರವಶರಾದಂಥಾ ಸ್ರಸ್ತಚಿಕುರಾಃ = ಕೆದರಿದ ಕುರುಳು ಗೂದಲುಗಳನುಳ್ಳಂಥಾ ಸ್ರಸ್ತಕಾಂಚೀಗುಣಾಃ = ಸಡಲಿದ ಕಾಂಚೀದಾಮ ವನುಳ್ಳಂಥಾ ಈಷತ್ ಸ್ವೇದಾಂಬುಖಚಿತಲಲಾಟಫಲಕೋಜ್ಜ್ವಲಾಃ = ಒಂದಿಷ್ಟು ಬೆವರಿನುದಕದಿಂದ ಸಂಬಂಧಿಸಲುಪಟ್ಟ ಲಲಾಟವೆಂಬ ಹಲಗೆಯಿಂದ ಒಪ್ಪುತ್ತಿದ್ದಂಥಾ ವರುಗಳಾಗಿ ಜಗುಃ = ಹಾಡಿದರು. ||೫೩||

ಆಕರ್ಣಪೂರ್ಣನಯನಾಃ = ಕಿವಿಪರ್ಯಂತ ತುಂಬಲುಪಟ್ಟ ನಯನಂ ಗಳನುಳ್ಳಂಥಾ ರತ್ನನೂಪುರಭೂಷಣಾಃ = ರತ್ನಮಯವಹ ಅಂದುಗೆಗಳ ಭೂಷಣ

ಭ್ರೂವಿಲಾಸಂ ತದಾ ಚಕ್ರುಃ ಜಗುಃ ಕಾಶ್ಚಿತ್ಸಹಸ್ರಶಃ
ಕಾಶ್ಚಿತ್ಪಶ್ಯಂತ್ಯನಿಮಿ[1]ಷನ್[1] ಕಾಶ್ಚಿದ್ಧಾವಂತಿ ತಂ ಪ್ರತಿ ||೫೫||

ಕಾಶ್ಚಿದ್ವಿವಸ್ತ್ರಾ ಧಾವಂತಿ ದೇವಪಾರ್ಶ್ವಂ ವರಾಂಗನಾಃ
ಆಲಿಂಗನಂ ತದಾ ಕಾಶ್ಚಿತ್ ಕುರ್ವಂತಿ ಮನಸಾ ದ್ವಿಜಾಃ ||೫೬||

[2]ಕಾಶ್ಚಿತ್ತಿಷ್ಠೇತಿ[2] ತಿಷ್ಠೇತಿ ವದಂತಿ ವಿವಿಧಸ್ವರಾಃ
ಕಿಂ ತತ್ರೇತಿ ತದಾ ಕಾಶ್ಚಿಚ್ಛೇರತೇ ಸುರವಲ್ಲಭಾಃ ||೫೭||

ಅನಂಗಬಾಣವಿದ್ಧಾಂಗಾ ನ ಜಾನಂತಿ ಶಚೀಪತೀಮ್

ವನುಳ್ಳಂಥಾ ಕಾಶ್ಚಿತ್ = ಕೆಲಬರು ಸ್ತ್ರೀಯರುಗಳು ಜಗನ್ನಾಥಂ = ಲೋಕಗಳಿಗೆ ಒಡೆಯನಹಂಥಾ ಮದನಾಂತಕರಂ = ಕಾಮನ ನಾಶವ ಮಾಡಿದಂಥಾ ಹರಂ = ಶಿವನನು ದೃಷ್ಟ್ವಾ = ಕಂಡು ತದಾ = ಆಗ ಭ್ರೂವಿಲಾಸಂ = ಹುಬ್ಬಿನ ವಿಲಾಸವನು ಚಕ್ರುಃ = ಮಾಡಿದರು. ಸಹಸ್ರಶಃ = ಸಾವಿರಸಂಖ್ಯೆಯನುಳ್ಳಂಥಾ ಕಾಶ್ಚಿತ್ = ಕೆಲಬರು ಜಗುಃ = ಹಾಡಿದರು. ಕಾಶ್ಚಿತ್ = ಕೆಲಬರು ಅನಿಮಿಷನ್ = ಎವೆಯಿಕ್ಕದೆ ಪಶ್ಯಂತಿ = ನೋಡುತ್ತಿದ್ದರು. ಕಾಶ್ಚಿತ್ = ಕೆಲಬರು ತಂ ಪ್ರತಿ = ಆ ಪರಮೇಶ್ವರನನು ಕುರಿತು ಧಾವಂತಿ = ಎಯ್ದುತ್ತಿದ್ದರು. ||೫೫||

ಭೋದ್ವಿಜಾಃ = ಎಲೆ ಬ್ರಾಹ್ಮಣರುಗಳಿರಾ ಕಾಶ್ಚಿತ್ = ಕೆಲಬರು ವರಾಂಗನಾಃ = ಒಪ್ಪುತ್ತಂವಿದ್ದ ಸ್ತ್ರೀಯರುಗಳೂ ವಿವಸ್ತ್ರಾಃ = ಹೋಗಲುಪಟ್ಟ ವಸ್ತ್ರವನುಳ್ಳವರುಗಳಾಗಿ ದೇವಪಾರ್ಶ್ವಂ = ಶಿವನ ಸಮೀಪವನು ಧಾವಂತಿ = ಎಯ್ದುತ್ತಿಡ್ದರು. ಕಾಶ್ಚಿತ್ = ಕೆಲಬರು ಸ್ತ್ರೀಯರು ತದಾ = ಆಗ ಮನಸಾ = ಮನಸ್ಸಿನಿಂದ ಆಲಿಂಗನಂ = ಆಲಿಂಗನವನು ಕುರ್ವಂತಿ = ಮಾಡುತ್ತಿದ್ದರು. ||೫೬||

ಕಾಶ್ಚಿತ್ = ಕೆಲಬರು ಸ್ತ್ರೀಯರು ತಿಷ್ಠೇತಿ ತಿಷ್ಠೇತಿ = ನಿಲ್ಲು ನಿಲ್ಲೂ ಎಂದು ಹೀಂಗೆ ವಿವಿಧಸ್ವರಾಃ = ನಾನಾಪ್ರಕಾರವಹ ಧ್ವನಿಗಳನು ವದಂತಿ = ನುಡಿವುತ್ತಿದ್ದಾರು. ಕಾಶ್ಚಿತ್ = ಕೆಲಬರು ಸುರವಲ್ಲಭಾಃ = ದೇವಸ್ತ್ರೀಯಗುಗಳು ತತ್ರ = ಅಲ್ಲಿ ಕಿಮಿತಿ = ಏನು ಇದ್ದೊ[3]ದು[3] ಎಂದು ತದಾ = ಆಗ ಶೇರತೆ = ಮಲುಗಿದರು. ||೫೭

ಅನಂಗಬಾಣವಿದ್ಧಾಂಗಾಃ = ಕಾಮನ ಬಾಣಂಗಳಿಂದ ಘಾಯವಡೆಯಲುಪಟ್ಟ ಶರೀರವನುಳ್ಳಂಥವರುಗಳಾಗಿ ಶಚೀಪತಿಂ = ಇಂದ್ರನನು ನ ಜಾನಂತಿ =

---

1 ಷಂ(ಘ) ಈ ಪಾಠವೇ ಯುಕ್ತವಾಗಿದೆ. 2 ಕಾಶ್ಚಿದ್ಬ್ರುವಂತಿ (ಘ) 3 ತ್ಯೈ (ಖ)

ಅಂಗನಾಮಂಡಲಂ ತತ್ರ ಸಂಭ್ರಾಂತಮಭವತ್ತದಾ
[1]ಮಾಯಯಾ ದೇವದೇವಸ್ಯ ಮಹಾದೇವಸ್ಯ ಶೂಲಿನಃ[1] ||೫೮||

ಸ್ಮಯಮಾನೋ ಹರಶ್ಚಾಪಿ ಭಿಕ್ಷಾಮಾದಾಯ ಸತ್ಕೃತಾಮ್
ಜಗಾಮ ತಸ್ಮಾದ್ದೇವೇಶೋ ಧರ್ಮಸ್ಯ ಭವನಂ ಪ್ರತಿ ||೫೯||

ದೇವರಾಜೋಽಪಿ ದೇವೇನ [2]ಸಹಾಗಚ್ಛದಮಿತ್ರಹಾ[2]
ಅಪ್ಸರೋಗಣಸಂಘಾಶ್ಚ ಪ್ರಯಾಣೇ ಪರಮೇಷ್ಠಿನಃ
ನೃತ್ಯಂತಿ ಪುರತೋಽತ್ಯರ್ಥಂ ನಿಯೋಗಾದ್ವಜ್ರಿಣಃ ಪ್ರಭೋಃ ||೬೦||

ಚಕ್ರಮಾರ್ಗೇಣ ನೃತ್ಯಂತಿ ಪೀನಶ್ರೋಣಿಪಯೋಧರಾಃ
ಕಾಶ್ಚಿದ್ಗಾಯಂತಿ ನನೃತುಃ ಕಾಶ್ಚಿದ್ದೇವವರಾಂಗನಾಃ ||೬೧||

ಅರಿಯದಾದರು. ತತ್ರ = ಅಲ್ಲಿ ಅಂಗನಾಮಂಡಲಂ = ಸ್ತ್ರೀಸಮೂಹವು ತದಾ = ಆಗ ದೇವದೇವಸ್ಯ = ದೇವಶ್ರೇಷ್ಠನಹಂಥಾ ಶೂಲಿನಃ = ತ್ರಿಶೂಲವ ಧರಿಸಿದಂಥಾ ಮಹಾದೇವಸ್ಯ = ಪರಮೇಶ್ವರನ ಮಾಯಯಾ = ಮಾಯೆಯಿಂದ ಸಂಭ್ರಾಂತಂ = ಭ್ರಮಿಸಲುಪಟ್ಟಂಥಾದು ಅಭವತ್ = ಆಯಿತ್ತು. ||೫೮||

ದೇವೇಶಃ = ದೇವರ್ಕಳಿಗೊಡೆಯನಹಂಥಾ ಹರಶ್ಚ = ಪರಮೇಶ್ವರನು ಸ್ಮಯಮಾನೋಽಪಿ = ನಗುತ್ತಿದ್ದಾತನಾಗಿ ಸತ್ಕೃತಾಂ = ಸತ್ಕರಿಸಲುಪಟ್ಟಂಥಾ ಭಿಕ್ಷಾಂ = ಭಿಕ್ಷೆಯನು ಆದಾಯ = ತೆಗೆದುಕೊಂಡು ತಸ್ಮಾತ್ = ಆ ಇಂದ್ರನ ಸ್ಥಾನದ ದೆಸೆಯಿಂದ ಧರ್ಮಸ್ಯ = ಯಮನ ಭವನಂ ಪ್ರತಿ = ಗೃಹವನು ಕುರಿತು ಜಗಾಮ = ಎಯ್ದಿದನು. ||೫೯||

ಅಮಿತ್ರಹಾ = ಶತ್ರುಗಳ ಕೊಲ್ಲುತಿದ್ದಂಥಾ ದೇವರಾಜೋಽಪಿ = ದೇವೇಂದ್ರನು ದೇವೇನ ಸಹ = ಶಿವನೊಡನೆ ಅಗಚ್ಛತ್ = ಎಯ್ದಿದನು. ಪರಮೇಷ್ಠಿನಃ = ಪರಮೇಶ್ವರನ ಪ್ರಯಾಣೇ = ಪಯಣದಲ್ಲಿ ಅಪ್ಸರೋಗಣಸಂಘಾಶ್ಚ = ಅಪ್ಸರ ಗಣಿಕೆಯರ ಸಮೂಹಂಗಳು ವಜ್ರಿಣಃ = ಇಂದ್ರನ ನಿಯೋಗಾತ್ = ಆಜ್ಞೆಯ ದೆಸೆಯಿಂದ ಪ್ರಭೋಃ = ಪರಮೇಶ್ವರನ ಪುರತಃ = ಮುಂದೆ ಅತ್ಯರ್ಥಂ = ಅತ್ಯಂತವಾಗಿ ನೃತ್ಯಂತಿ = ನೃತ್ಯವನಾಡುತ್ತಿದ್ದರು. ||೬೦||

ಪೀನಶ್ರೋಣಿಪಯೋಧರಾಃ = ದೊಡ್ಡಿತ್ತಹ ನಿತಂಬಸ್ತನಂಗಳನುಳ್ಳಂಥಾ

---

[1] (ಘ) ದಲ್ಲಿ ಮಾತ್ರ ಇಲ್ಲ. [2] ಸಹಾಗಚ್ಛತ ವೃತ್ರಹಾ (ಘ)

ವಿಧೂಮೋ ನಾಮ ಗಣಪಃ ಶ್ವೇತಚ್ಛತ್ರಂ ಸುಶೋಭನಮ್
ಶತಯೋಜನವಿಸ್ತೀರ್ಣಂ ರತ್ನವೈಡೂರ್ಯಮಂಡಿತಮ್ ||
ರುಕ್ಮದಂಡಂ ಸಮಾದಾಯ [1]ಸಿಷೇವೇ[1] ಪರಮೇಶ್ವರಮ್ ||೬೨||

ಚಾಮರವ್ಯಜನೇ ಚೋಭೇ ಚಂದ್ರಮಂಡಲಸನ್ನಿಭೇ
ಶ್ವೇತಕೇತುಭಗಘ್ನೌ ಚ ಗೃಹೀತ್ವಾಽಗ್ರೇ ಹಿ ಜಗ್ಮತುಃ ||೬೩||

ಮುನಯೋ ದೇವಸಂಘಾಶ್ಚ ಭೂತಸಂಘಾಸ್ತಥೈವ ಚ
ಪರಿವಾರ್ಯ ಮಹಾದೇವಂ ಜಗ್ಮುಃ ಪ್ರಾಂಜಲಯಸ್ತ[2]ಥಾಃ ||೬೪||

ಕಾಶ್ಚಿತ್ = ಕೆಲಬರು ಸ್ತ್ರೀಯರುಗಳು ಚಕ್ರಮಾರ್ಗೇಣ = ಚಕ್ರಾಕಾರದ ತಿರಿಪಿನ ಮಾರ್ಗದಿಂದ ನೃತ್ಯಂತಿ = ನೃತ್ಯವನಾಡುತ್ತಿದ್ದರು. ಕಾಶ್ಚಿತ್ = ಕೆಲಬರು ಸ್ತ್ರೀಯರು ಗಾಯಂತಿ = ಹಾಡುತ್ತಿದ್ದರು. ಕಾಶ್ಚಿದ್ದೇವವರಾಂಗನಾಃ = ಕೆಲಬರು ದೇವಸ್ತ್ರೀಯರುಗಳು ನನೃತುಃ = ಕುಣಿದಾಡಿದರು. ||೬೧||

ವಿಧೂಮೋ ನಾಮ = ವಿಧೂಮನೆಂಬ ಹೆಸರನುಳ್ಳಂಥಾ ಗಣಪಃ = ಗಣೇಶ್ವರನು ಸುಶೋಭನಂ = ಅತ್ಯಂತ ಮನೋಹರವಹಂಥಾ ರತ್ನವೈಡೂರ್ಯಮಂಡಿತಂ = ರತ್ನ ವೈಡೂರ್ಯಂಗಳಿಂದ ಅಲಂಕರಿಸಲ್ಪಟ್ಟಂಥಾ ರುಕ್ಮದಂಡಂ = ಸುವರ್ಣದ ಕಾವನು ಳ್ಳಂಥಾ ಶತಯೋಜನವಿಸ್ತೀರ್ಣಂ = ನೂರುಗಾವುದ ವಿಸ್ತಾರವಹಂಥಾ ಶ್ವೇತಚ್ಛತ್ರಂ = ಬಿಳಿಯ ಸತ್ತಿಗೆಯನು ಸಮಾದಾಯ = ಪಿಡಿದುಕೊಂಡು ಪರಮೇಶ್ವರಂ = ಪರಮೇಶ್ವರನನು ಸಿಷೇವೇ = ಓಲೈಸಿದನು. ||೬೨||

ಶ್ವೇತಕೇತುಭಗಘ್ನೌ ಚ = ಶ್ವೇತಕೇತು ಭಗಘ್ನರೆಂಬ ಇಬ್ಬರು ಗಣೇಶ್ವರರು ಚಂದ್ರಮಂಡಲಸನ್ನಿಭೇ = ಚಂದ್ರಮಂಡಲಕ್ಕೆ ಸಮಾನವಾಗುತ್ತಿದ್ದಂಥಾ ಉಭೇ = ಎರಡು ಚಾಮರವ್ಯಜನೇ ಚ = ಚಾಮರ ಆಲವಟ್ಟಲುಗಳನೂ ಗೃಹೀತ್ವಾ = ಹಿಡಿದು ಅಗ್ರೇ = ಮುಂದುಗಡೆಯಲ್ಲಿ ಜಗ್ಮತುರ್ಹಿ = ಎಯ್ದಿದರಲಾ ||೬೩||

ಮುನಯಃ = ಋಷಿಗಳು ದೇವಸಂಘಾಶ್ಚ = ದೇವರ್ಕಳ ಸಮೂಹಂಗಳು ತಥೈವ = ಹಾಂಗೆ ಭೂತಸಂಘಾಶ್ಚ = ಭೂತಂಗಳ ಸಮೂಹಂಗಳು ಪ್ರಾಂಜಲಯಃ = ಕೈಮುಗಿದುಕೊಳಲುಪಟ್ಟವರುಗಳಾಗಿ ಮಹಾದೇವಂ = ಶಿವನನು ಪರಿವಾರ್ಯ = ಮುಸುಕಿ ತಥಾ = ಹಾಂಗೆ ಜಗ್ಮುಃ = ಎಯ್ದಿದರು. ||೬೪||

---

1 ನಿವೇಶ್ಯ (ಘ) 2 ದಾ (ಘ)

ಶ್ರುತ್ವಾ ಗಾನಂ ಚ ಭಗವಾನ್ [1]ನೃತ್ಯಂ ಚ[1] ಸುರಯೋಷಿತಾಮ್
ದೃಷ್ಟ್ವಾ ಭೂತಪತಿಶ್ಶಂಭುಃ ಯಯೌ ಯಮನಿಕೇತನಮ್ ||೬೫||

ಯಮರಾಜಪುರಂ ದೇವೋ ವಿಶ್ವೇಶಃ ಸಮುಪಾಯಯೌ
ಸೇವ್ಯಮಾನಃ ಸುರಗಣೈಃ ಮುನಿಭಿರ್ವೇದಪಾರಗೈಃ ||೬೬||

ಹೇಮಪ್ರಾಕಾರಸಂಯುಕ್ತಂ ದೀರ್ಘಿಕಾಭಿರಲಂಕೃತಮ್
ಗೋಪುರೈಶ್ಶಿಖರಾಕಾರೈಃ ಧವಳೈರ್ಭೂಷಿತಂ ಶುಭಮ್ ||೬೭||

ಪ್ರಾಸಾದೈರ್ವಿವಿಧಾಕಾರೈರ್ಹಿಮವಚ್ಛಿಖರೋಪಮೈಃ
ಶರದಭ್ರಘನಪ್ರಖ್ಯೈಃ ಸರ್ವತಃ ಸಮಲಂಕೃತಮ್ ||೬೮||

ಭೂತಪತಿಃ = ಭೂತನಾಥನಹಂಥಾ ಭಗವಾನ್ = ಷಡ್ಗುಣೈಶ್ವರ್ಯ-ವನುಳ್ಳಂಥಾ ಶಂಭುಃ = ಪರಮೇಶ್ವರನು ಸುರಯೋಷಿತಾಂ = ದೇವಸ್ತ್ರೀಯರುಗಳ ಗಾನಂ ಚ = ಗಾನವನು ಶ್ರುತ್ವಾ = ಕೇಳಿ, ನೃತ್ಯಂ ಚ = ನೃತ್ಯವನು ದೃಷ್ಟ್ವಾ = ನೋಡಿ ಯಮನಿಕೇತನಂ = ಯಮನ ಸ್ಥಾನವನು ಯಯೌ = ಎಯ್ದಿದನು.

ವಿಶ್ವೇಶಃ = ವಿಶ್ವಕ್ಕೆ ಒಡೆಯನಹಂಥಾ ದೇವಃ = ಪರಮೇಶ್ವರನು ಸುರಗಣೈಃ = ದೇವಗಣಗಳಿಂದ ವೇದಪಾರಗೈಃ = ವೇದಂಗಳ ಕಡೆಯನೆಯ್ದಿದಂಥಾ ಮುನಿಭಿಃ = ಋಷಿಗಳಿಂದ ಸೇವ್ಯಮಾನಃ = ಓಲೈಸಿಕೊಳಲುಪಟ್ಟಾತನಾಗಿ ಯಮರಾಜ-ಪುರಂ = ಯಮನ ಪಟ್ಟಣವನು ಸಮುಪಾಯಯೌ = ಎಯ್ದಿದನು. ||೬೬||

ಹೇಮಪ್ರಾಕಾರಸಂಯುಕ್ತಂ = ಸುವರ್ಣದ ಕೋಟೆಗಳಿಂದ ಕೂಡಲು ಪಟ್ಟಂಥಾ ದೀರ್ಘಿಕಾಭಿಃ = ಕೊಳಂಗಳಿಂದ ಅಲಂಕೃತಂ = ಅಲಂಕರಿಸಲುಪಟ್ಟಂಥಾ ಶಿಖರಾಕಾರೈಃ = ಪರ್ವತದ ಶಿಖರದೋಪಾದಿ ಆಕಾರವನುಳ್ಳಂಥಾ ಧವಳೈಃ = ಶುಭ್ರವಹಂಥಾ ಗೋಪುರೈಃ = ಹೆಬ್ಬಾಗಿಲುಗಳಿಂದ ಭೂಷಿತಂ = ಅಲಂಕರಿಸಲು-ಪಟ್ಟಂಥಾ ಶುಭಂ = ಒಪ್ಪುತ್ತಿದ್ದಂಥಾ, ||೬೭||

ಹಿಮವಚ್ಛಿಖರೋಪಮೈಃ = ಹಿಮವತ್ಪರ್ವತದ ಶಿಖರಂಗಳಿಗೆ ಸಮಾನವಾಗುತ್ತಿದ್ದಂಥಾ ಶರದಭ್ರಘನಪ್ರಖ್ಯೈಃ = ಶರತ್ಕಾಲದ ಮೇಘಗಳೋಪಾದಿ ಬಹಳವಹ ಕಾಂತಿಯನುಳ್ಳಂಥಾ ವಿವಿಧಾಕಾರೈಃ = ನಾನಾಪ್ರಕಾರವಹ ಆಕಾರಂಗಳನುಳ್ಳಂಥಾ ಪ್ರಾಸಾದೈಃ = ಉಪ್ಪರಿಗೆಗಳಿಂದ ಸರ್ವತಃ = ಎಲ್ಲಾ ಕಡೆಯಲ್ಲಿ ಸಮಲಂಕೃತಂ =

---

[1] ನೃತ್ತಂ (ಕ) ಮಾತ್ರ

ಯಮೋಽಪಿ ಭಾರ್ಯಯಾ ಸಾರ್ಧಂ ಶ್ರುತ್ವಾ ದೇವೇಶಮಾಗತಮ್
ಸ್ವಗೃಹಾನ್ನಿರ್ಜಗಾಮಾಶು ಪುಷ್ಪಸಂಭಾರಸಂಭೃತಃ ||೬೯||

ಗತ್ವಾ ದೃಷ್ಟ್ವಾ ಮಹಾದೇವಂ ಸೂರ್ಯಪುತ್ರೋ ಮಹಾಮತಿಃ
ಪ್ರಣಿಪತ್ಯ ಪ್ರಹೃಷ್ಟಾತ್ಮಾ ವಚನಂ ಚೇದಮಬ್ರವೀತ್ ||೭೦||

ಅದ್ಯ ಜಾತೋಽಸ್ಮ್ಯಹಂ ದೇವ ಅದ್ಯ ಮೇ ಸಫಲಂ ತಪಃ
ಧರ್ಮರಾಜೋ ಭವಾಮ್ಯದ್ಯ ತವ ಪಾದಾಬ್ಜದರ್ಶನಾತ್ ||೭೧||

ತ್ವಂ ಕರ್ತಾ ಸರ್ವಲೋಕಾನಾಂ ಹರ್ತಾ ಭರ್ತಾ ತ್ವಮೇವ ಚ
ತ್ವಂ ಗತಿಃ ಸರ್ವಭೂತಾನಾಂ ಅಸ್ಮಾಕಂ ಚ ವಿಶೇಷತಃ ||೭೨||

ಅಲಂಕರಿಸಲ್ಪಟ್ಟಂಥಾ ಯಮರಾಜಪುರಂ = ಯಮರಾಜನ ಪಟ್ಟಣವನು ಸಮುಪಾಯಯೌ = ಎಯ್ದಿದನು. ||೬೮||

ಆಗತಂ = ಬಂದಂಥಾ ದೇವೇಶಂ = ದೇವರ್ಕಳಿಗೊಡೆಯನಹಂಥಾ ಶಿವನನು ಶ್ರುತ್ವಾ = ಕೇಳಿ ಯಮೋಽಪಿ = ಯಮನೂ ಭಾರ್ಯಯಾ ಸಾರ್ಧಂ = ಸ್ತ್ರೀಯಿಂದ ಸಹಿತನಾಗಿ ಪುಷ್ಪಸಂಭಾರಸಂಭೃತಃ = ಪುಷ್ಪ[1]ಸಮೂಹಂಗಳನೊದಗಿಸಲು ಪಟ್ಟಾತನಾಗುತವು ಸ್ವಗೃಹಾತ್ = ತನ್ನ ಅರಮನೆಯ ದೆಸೆಯಿಂದ ಆಶು = ಬೇಗ ನಿರ್ಜಗಾಮ = ಹೊರವಂಟನು. ||೬೯||

ಮಹಾಮತಿಃ = ಬಹಳವಹ ಮತಿಯನುಳ್ಳಂಥಾ ಸೂರ್ಯಪುತ್ರಃ = ಸೂರ್ಯನ ಮಗನಹಂಥಾ ಯಮನು ಗತ್ವಾ = ಹೋಗಿ ಮಹಾದೇವಂ = ಪರಮೇಶ್ವರನನು ದೃಷ್ಟ್ವಾ = ಕಂಡು ಪ್ರಣಿಪತ್ಯ = ನಮಸ್ಕರಿಸಿ ಪ್ರಹೃಷ್ಟಾತ್ಮಾ = ಸಂತೋಷಿಸಲುಪಟ್ಟ ಚಿತ್ತವನುಳ್ಳಾತನಾಗಿ ಇದಂ ವಚನಂ = ಈ ವಾಕ್ಯವನು ಅಬ್ರವೀತ್ = ನುಡಿದನು. ||೭೦||

ಭೋ ದೇವ = ಎಲೈ ದೇವನೇ ಅದ್ಯ = ಇಂದು ಅಹಂ = ನಾನು ಜಾತಃ = ಹುಟ್ಟಿದಾತನು ಅಸ್ಮಿ = ಆಗುತ್ತಿದ್ದೇನು. ಅದ್ಯ = ಇಂದು ಮೇ = ಎನ್ನ ತಪಃ = ತಪಸ್ಸು ಸಫಲಂ = ಸಫಲವು. ಅದ್ಯ = ಇಂದು ತವ = ನಿನ್ನ ಪಾದಾಬ್ಜದರ್ಶನಾತ್ = ಪಾದಕಮಲದರ್ಶನವಾದ ದೆಸೆಯಿಂದ ಧರ್ಮರಾಜಃ = ಧರ್ಮರಾಜನು ಭವಾಮಿ = ಆಗುತ್ತಿದ್ದೇನು. ||೭೧||

ತ್ವಂ = ನೀನು ಸರ್ವಲೋಕಾನಾಂ = ಸಮಸ್ತಲೋಕಂಗಳ ಕರ್ತಾ =

---

[1] ಲುಪ್ತ (ಕ)

ವಿರಿಂಚೋಽಪಿ ನ ಜಾನಾತಿ ತ್ವಾಮಜಂ ಸರ್ವಸಾಕ್ಷಿಣಮ್
ಕಿಮಹಂ ದೇವ ದೇವೇಶ ಸರ್ವಜ್ಞ ತ್ರಿಪುರಾಂತಕ ॥೭೩॥

ತವ ಪ್ರಸಾದಾದ್ಬ್ರಹ್ಮಾಽಪಿ ಜಗತ್ಸೃಷ್ಟಿಂ ಕರೋತಿ [1]ಹಿ।
ತವಾದೇಶಾದಿದಂ ಸರ್ವಂ ವರ್ತತೇ ಸಚರಾಚರಮ್ ॥೭೪॥

ಉಕ್ತ್ವೈವಂ ಚಂದ್ರಮೌಲಿಂ ತು ದದೌ ಭಿಕ್ಷಾಂ [2]ಸ್ವಶಕ್ತಿತಃ[2]
ಸತ್ಕೃತಾಂ [3]ಯಮರಾಡತ್ರ[3] ಭಾರ್ಯಯಾ ಸಹ ಸತ್ತಮಾಃ ॥೭೫॥

ಮಾಡುವಾತನು. ತ್ವಮೇವ ಚ = ನೀನೇ ಭರ್ತಾ = ಪಾಲಿಸುವಾತನು, ಹರ್ತಾ = ಸಂಹರಿಸುವಾತನು. ತ್ವಂ = ನೀನು ಸರ್ವಭೂತಾನಾಂ = ಸಮಸ್ತ ಪ್ರಾಣಿಗಳಿಗೆ ಗತಿಃ = ಗತಿಯಹಂಥಾತನು. ಅಸ್ಮಾಕಂ ಚ = ನಮಗೆಯೂ ವಿಶೇಷತಃ = ವಿಶೇಷವಾಗಿ ಗತಿಃ = ಗತಿಯಹಂಥಾತನು. ॥೭೨॥

ಸರ್ವಜ್ಞ = ಸರ್ವಜ್ಞನಹಂಥಾ ತ್ರಿಪುರಾಂತಕ = ತ್ರಿಪುರವ[4] ಸಂಹರಿಸಿದಂಥಾ[4] ದೇವೇಶ = ದೇವರ್ಕಳಿಗೊಡೆಯನಹಂಥಾ ಭೋ ದೇವ = ಎಲೆ ದೇವನೇ ಸರ್ವಸಾಕ್ಷಿಣಂ = ಸಮಸ್ತಕ್ಕೆ ಸಾಕ್ಷೀಭೂತನಹಂಥಾ ಅಜಂ = ಜನ್ಮವಿಲ್ಲದೇ ಇದ್ದಂಥಾ ತ್ವಾಂ = ನಿನ್ನನು ವಿರಿಂಚೋಽಪಿ = ಬ್ರಹ್ಮನು ನ ಜಾನಾತಿ = ಅರಿಯನು. ಅಹಂ = ನಾನು ಕಿಂ = ಏನ ಬಲ್ಲೆನು. ॥೭೩॥

ತವ = ನಿನ್ನ ಪ್ರಸಾದಾತ್ = ಪ್ರಸನ್ನತೆಕೆಯ ದೆಸೆಯಿಂದ ಬ್ರಹ್ಮಾಽಪಿ = ಬ್ರಹ್ಮನು ಜಗತ್ಸೃಷ್ಟಿಂ = ಲೋಕಂಗಳ ನಿರ್ಮಿಸುಹವನು ಕರೋತಿ ಹಿ = ಮಾಡುತ್ತಿಹನಲಾ. ತವ = ನಿನ್ನ ಆದೇಶಾತ್ = ಆಜ್ಞೆಯ ದೆಸೆಯಿಂದ ಸಚರಾಚರಂ = ಚರಾಚರವಹಂಥಾ ಇದಂ ಸರ್ವಂ = ಈ ಸಮಸ್ತ ಜಗತ್ತು ವರ್ತತೇ = ವರ್ತಿಸುತ್ತಿಹುದು. ॥೭೪॥

ಯಮರಾಟ್ = ಯಮನು ಏವಂ = ಈ ಪ್ರಕಾರದಲ್ಲಿ ಉಕ್ತ್ವಾ = ನುಡಿದು ಸತ್ತಮಾಃ = ಎಲೆ ಒಪ್ಪುತ್ತಂವಿದ್ದ ಋಷಿಗಳಿರಾ! ಭಾರ್ಯಯಾ ಸಹ = ಸ್ತ್ರೀಯಿಂದ ಸಹಿತನಾಗಿ ಸ್ವಶಕ್ತಿತಃ = ತನ್ನ ಶಕ್ತಿಯಿಂದ ಅತ್ರ = ಇಲ್ಲಿ ಚಂದ್ರಮೌಳಿಂ = ಚಂದ್ರಚೂಡಾಮಣಿಯಹ ಶಿವನನು ಕುರಿತು ಸತ್ಕೃತಾಂ = ಮನೋಹರವಾಗಿ ಮಾಡಲುಪಟ್ಟಂಥಾ ಭಿಕ್ಷಾಂ = ಭಿಕ್ಷೆಯುನು ದದೌ = ಕೊಟ್ಟನು. ॥೭೫॥

---

[1] ಚ (ಘ) [2] ಸ್ವಭಕ್ತಿತಃ (ಘ)

[3] ಯಮರಾಟ್ ತತ್ರ (ಘ) [4] ಸಂಹಾರಿಯಹಂಥಾ (ಕ)

ತತಃ ಪಿನಾಕೀ ಭಗವಾನ್ ಯಯೌ ಮೃತ್ಯುನಿಕೇತನಮ್
ದೇವೇಂದ್ರಭವನಾಕಾರಂ ರತ್ನವೈಡೂರ್ಯಮಂಡಿತಮ್ ||೭೬||

ಸ ದ್ವಾರಂ ಸಮತಿಕ್ರಮ್ಯ ಪ್ರಯಯೌ ಚಂದ್ರಶೇಖರಃ
ಉಲುಂಬಲಾ ತತೋ ಹೃಷ್ಟಾ ಪ್ರಣಿಪತ್ಯ ಮಹೇಶ್ವರಮ್ ||೭೭||

ಪೃಷ್ಠತೋ ಯಾತಿ ದೇವಸ್ಯ ವಿಲಸನ್ಮುಖಪಂಕಜಾಃ
ಚಿಕ್ಷಿಪುಃ ಪುಷ್ಪಜಾಲಾನಿ [1]ಭವನಾಂಕಣ[1]ಸಂಸ್ಥಿತಾಃ || ||೭೮||

ವರಾಂಗನಾಃ ಕರೈರ್ಹೃಷ್ಟಾಶ್ಚಂದ್ರ[2]ಭೂಷಣ[2]ಮೂರ್ಧನಿ
ನನೃತುಸ್ತತ್ರ ತತ್ರೈವ ಸಂಭ್ರಾಂತಾ ವರಯೋಷಿತಃ ||೭೯||

ತತಃ = ಅನಂತರದಲ್ಲಿ ಭಗವಾನ್ = ಭಗವಾನ್ನುವಹೆಂಥಾ ಪಿನಾಕೀ = ಪರಮೇಶ್ವರನು ರತ್ನವೈಡೂರ್ಯಮಂಡಿತಂ = ರತ್ನವೈಡೂರ್ಯಂಗಳಿಂದ ಅಲಂಕರಿಸಲುಪಟ್ಟಂಥಾ ದೇವೇಂದ್ರಭವನಾಕಾರಂ = ದೇವೇಂದ್ರನ ಅರಮನೆಯ ಆಕಾರವನುಳ್ಳಂಥಾ ಮೃತ್ಯುನಿಕೇತನಂ = ಮೃತ್ಯುವಿನ ಸ್ಥಾನವನು ಯಯೌ = ಎಯ್ದಿದನು. ||೭೬||

ಚಂದ್ರಶೇಖರಃ = ಚಂದ್ರಚೂಡಾಮಣಿಯುಹಂಥಾ ಸಃ = ಆ ಪರಮೇಶ್ವರನು ದ್ವಾರಂ = ಬಾಗಿಲನು ಸಮತ್ರಿಕಮ್ಯ = ಮೀರಿ ಪ್ರಯಯೌ = ಎಯ್ದಿದನು. ತತಃ = ಅಷ್ಟರಮೇಲೆ ಉಲುಂಬಲಾ = ಉಲುಂಬಲೆ ಹೃಷ್ಟಾ = ಸಂತೋಷಿಸಿ (ದಾಯಕನಾಗಿ) ದವಳಾಗಿ, ಮಹೇಶ್ವರಂ = ಶಿವನನು ಪ್ರಣಿಪತ್ಯ = ನಮಸ್ಕರಿಸಿ, ||೭೭||

ದೇವಸ್ಯ = ದೇವನ ಪೃಷ್ಠತಃ = ಹಿಂದುಗಡೆಯಿಂದ ಯಾತಿ = ಎಯ್ದುತ್ತಿದ್ದಳು. ವಿಲಸನ್ಮುಖಪಂಕಜಾಃ = ವಿಕಸಿತವಾದ ಮುಖಕಮಲವನುಳ್ಳ ಸ್ತ್ರೀಯರುಗಳು ಭವನಾಂಕಣಸಂಸ್ಥಿತಾಃ = ಮನೆಯ ಅಂಕಣದಲ್ಲಿ ಇದ್ದವರುಗಳಾಗಿ ಪುಷ್ಪಜಾಲಾನಿ = ಪುಷ್ಪ ಸಮೂಹಂಗಳನು ಚಿಕ್ಷಿಪುಃ = ಸೂಸಿದರು. ||೭೮||

ವರಾಂಗನಾಃ = ಮನೋಹರವಹ ಸ್ತ್ರೀಯರುಗಳು ಹೃಷ್ಟಾಃ = ಸಂತೋಷಿಸಿದವರುಗಳಾಗಿ ಚಂದ್ರಭೂಷಣಮೂರ್ಧನಿ = ಚಂದ್ರಭೂಷಣನ ಶಿರಸ್ಸಿನಲ್ಲಿ ಪುಷ್ಪಜಾಲಾನಿ = ಪುಷ್ಪಸಮೂಹಂಗಳನು ಕರೈಃ = ಹಸ್ತಂಗಳಿಂದ ಚಿಕ್ಷಿಪುಃ = ಸುರಿದರು.

---

1 ಭವನಾಂಗಣ (ಕ) 2 ಶೇಖರ (ಘ)

[1]ಜಗುಶ್ಚ[1] ದಿವ್ಯಗಾನೇನ ಯಮರಾಜಸ್ಯ ಶಾಸನಾತ್
ಯಮೋ ವಿವೇಶ ಭವನಂ ಸಾರ್ಧಂ ವೈ ವಿಶ್ವಕರ್ಮಣಾ ||೮೦||

ವಿಶ್ವಕರ್ಮಾ [2]ಚಕಾರಾಶು[2] ಭವನಾನಿ ಸಹಸ್ರಶಃ
ಹೈಮಾನಿ ರತ್ನಜುಷ್ಟಾನಿ ದೀರ್ಘಿಕಾ[3]ಸಂವೃತಾನಿ [3]ಚ ||೮೧||

ತತೋ ವಿವೇಶ ತದ್ಧಾಮ ಭಗವಾನಂತಕಾಂತಕಃ
ತತೋ ದೇವೀ ವಿಶಾಲಾಕ್ಷೀ ಪುರತಃ ಪುರಶಾಸಿತುಃ ||೮೨||

ಸಂಸ್ಥಿತಾ ಚಿಂತಯಾಮಾಸ ಕಿಂ ಕರೋಮೀತಿ ಸಾದರಮ್
ಕಿಂ ದದಾಮಿ ಮಹೇಶಸ್ಯ ಕೃತಕೃತ್ಯಸ್ಯ ಶೂಲಿನಃ ||೮೩||

ವರಯೋಷಿತಃ = ಸೌಂದರ್ಯವನ್ನುಳ್ಳಂಥಾ ಸ್ತ್ರೀಯರುಗಳು ಸಂಭ್ರಾಂತಾಃ = ತಿರುಗುತ್ತಿದ್ದವರುಗಳಾಗಿ (ತಿರುಗುತ್ತಂವಿದ್ದವರುಗಳಾಗಿ) ತತ್ರ ತತ್ರೈವ = ಅಲ್ಲಿ ಅಲ್ಲಿಯೇ ನನೃತುಃ = ನೃತ್ಯವನಾಡಿದರು. ||೭೯||

ಯಮರಾಜಸ್ಯ = ಯಮರಾಜನ ಶಾಸನಾತ್ = ಆಜ್ಞೆಯ ದೆಸೆಯಿಂದ ದಿವ್ಯಗಾನೇನ ಚ = ದೇವಗಾನದಿಂದವು ಜಗುಃ = ಹಾಡಿದರು. ಯಮಃ = ಯಮನು ವಿಶ್ವಕರ್ಮಣಾ ಸಾರ್ಧಂ ವೈ = ವಿಶ್ವಕರ್ಮನಿಂದ ಸಹಿತವಾಗಿ ಭವನಂ = ಮೃತ್ಯುವಿನ ಗೃಹವನು ವಿವೇಶ = ಪ್ರವೇಶಿಸಿದನು. ||೮೦||

ವಿಶ್ವಕರ್ಮಾ = ವಿಶ್ವಕರ್ಮನು ದೀರ್ಘಿಕಾಸಂವೃತಾನಿ = ಕೊಳಂಗಳಿಂದ ಮುಸುಕಲುಪಟ್ಟಂಥಾ ರತ್ನಜುಷ್ಟಾನಿ = ರತ್ನಂಗಳಿಂದ ಕೇವಣಿಸಲುಪಟ್ಟಂಥಾ ಹೈಮಾನಿ = ಸುವರ್ಣಮಯವಹಂಥಾ ಸಹಸ್ರಶಃ = ಸಹಸ್ರಸಂಖ್ಯೆಯನುಳ್ಳಂಥಾ ಭವನಾನಿ ಚ = ಗೃಹಂಗಳನು ಆಶು = ಬೇಗ ಚಕಾರ = ಮಾಡಿದನು. ||೮೧||

ತತಃ = ಅನಂತರದಲ್ಲಿ ಭಗವಾನ್ = ಭಗವಾನ್ನುವಹಂಥಾ ಅಂತಕಾಂತಕಃ = ಅಂತಕನಿಗೆ ಅಂತಕನಹಂಥಾ ಶಿವನು ತದ್ಧಾಮ = ಆ ಮೃತ್ಯುವಿನ ಅರಮನೆಯನು ವಿವೇಶ = ಪ್ರವೇಶಿಸಿದನು. ತತಃ = ಅಪ್ಪುರ ಮೇಲೆ ವಿಶಾಲಾಕ್ಷೀ = ವಿಶಾಲಾಕ್ಷಿಯಹಂಥಾ ದೇವೀ = ಮೃತ್ಯುದೇವತೆ ಪುರಶಾಸಿತುಃ = ತ್ರಿಪುರಸಂಹಾರಿಯಹಂಥಾ ಶಿವನ ಪುರತಃ = ಮುಂದೆ, ||೮೨||

ಸಂಸ್ಥಿತಾ = ಇದ್ದಾ[4]ತಳಾಗಿ[4] ಕೃತಕೃತ್ಯಸ್ಯ = ಕೃತಕೃತ್ಯನಹಂಥಾ ಶೂಲಿನಃ

---

1 ಜಗ್ಮುಶ್ಚ (ಘ) 2 ಚಕಾರಾಸೌ (ಘ) 3 ಸಂಯುತಾನಿ (ಘ) ಸಂಭೃತಾನಿ (ಗ)
4 ತನಾಗಿ (ಖ)

ಅಸ್ಯ ಸರ್ವಾತ್ಮಭೂತಸ್ಯ ಜಗತ್ಕರ್ತುಃ ಪಿನಾಕಿನಃ
ಸಂಚಿಂತ್ಯ [1]ಸಾ ತು ಸಂಭ್ರಾಂತಾ[1] ಪ್ರಣಿಪತ್ಯ ಪುನಃ ಪುನಃ ||೮೪||

ನನರ್ತ ವಾಮಂ ಸಾ ಸಾಧ್ವೀ ಪ್ರಸಾರ್ಯ ಕರಪಂಕಜಮ್
[2]ನೃತ್ತ[2]ಪ್ರಿಯಸ್ತತೋ ದೇವೋ [3]ನೃತ್ತಂ[3] ದೃಷ್ಟ್ವಾ ಸುಶೋಭನಮ್

[4]ಪರಿಷ್ವಜ್ಯ ಚ[4] ತಾಂ ಕನ್ಯಾಂ ಸಾಧುಸಾಧ್ವಿ[5]ತ್ಯಥಾಬ್ರವೀತ್[5]
ಪುನಃ ಪ್ರಣಮ್ಯ ದೇವೇಶಂ ಕನ್ಯಾ ಕಮಲಲೋಚನಾ ||೮೬||

= ತ್ರಿಶೂಲವ ಧರಿಸಿದಂಥಾ ಮಹೇಶಸ್ಯ = ಶಿವಂಗೆ ಕಿಂ ದದಾಮಿ ? = ಏನ ಕೊಡುವೆನು ? ಕಿಂ ಕರೋಮಿ ? = ಏನ ಮಾಡುವೆನು ? ಇತಿ = ಹೀಂಗೆಂದು ಸಾದರಂ = ಆದರಣೆಯಿಂದ ಸಹಿತವಾಗಿ ಚಿಂತಯಾಮಾಸ = ಚಿಂತಿಸಿದಳು. ||೮೩||

ಸರ್ವಾತ್ಮಭೂತಸ್ಯ = ವಿಶ್ವಾತ್ಮಕನಾದಂಥಾ ಜಗತ್ಕರ್ತುಃ = ಲೋಕಕ್ಕೆ ಕರ್ತನಹಂಥಾ ಅಸ್ಯ ಪಿನಾಕಿನಃ = ಈ ಈಶ್ವರಂಗೆ ಸಾ ತು = ಆ ಉಲುಂಬಲೆ ಪುನಃಪುನಃ = ಮರಳಿ ಮರಳಿ ಪ್ರಣಿಪತ್ಯ = ನಮಸ್ಕರಿಸಿ ಸಂಚಿಂತ್ಯ = ಏನ ಮಾಡುವೆನೆಂದು ಚಿಂತಿಸಿ ಸಂಭ್ರಾಂತಾ = ಭ್ರಮೆಗೊಂಡಳು. ||೮೪||

ಸಾಧ್ವೀ = ಪತಿವ್ರತೆಯುಹಂಥಾ ಸಾ = ಆ ನೃತ್ಯದೇವತೆ ವಾಮಂ = ಮನೋಹರವಹಂಥಾ ಕರಪಂಕಜಂ = ಕರಕಮಲವನು ಪ್ರಸಾರ್ಯ = ಪಸರಿಸಿ ನನರ್ತ = ನೃತ್ಯವನಾಡಿದಳು. ತತಃ = ಅಷ್ಟರಮೇಲೆ ನೃತ್ತಪ್ರಿಯಃ = ನೃತ್ಯಪ್ರಿಯನಹಂಥಾ ದೇವಃ = ಶಿವನು ಸುಶೋಭನಂ = ಒಪ್ಪುತ್ತಂಯಿದ್ದಂಥಾ ನೃತ್ತಂ = ನೃತ್ಯವನು ದೃಷ್ಟ್ವಾ = ಕಂಡು, ||೮೫||

ತಾಂ ಕನ್ಯಾಂ ಚ = ಆ ಕನ್ನಿಕೆಯನು ಪರಿಷ್ವಜ್ಯ = ತಕ್ಕೈಸಿ ಸಾಧುಸಾಧ್ವಿತಿ = ಲೇಸು ಲೇಸೆಂದು ಈ ಪ್ರಕಾರದಲ್ಲಿ ಅಬ್ರವೀತ್ = ನುಡಿದನು. ಅಥ = ಅನಂತರದಲ್ಲಿ ಕಮಲಲೋಚನಾ ಕನ್ಯಾ = ತಾವರೆಯೋಪಾದಿಯ ನಯನಂಗಳನುಳ್ಳಂಥಾ ನೃತ್ಯದೇವತೆ ದೇವೇಶಂ = ದೇವತೆಗಳಿಗೊಡೆಯನಹಂಥಾ ಶಿವನನು ಪುನಃ = ಮರಳಿ ಪ್ರಣಮ್ಯ = ನಮಸ್ಕರಿಸಿ, ||೮೬||

---

[1] ಸಾಧುಸಂಭ್ರಾಂತಾ (ಘ) [2] ನೃತ್ಯ (ಘ) [3] ನೃತ್ಯಂ (ಘ)
[4] ಪರಿಷ್ವಜ್ಯಾಥ (ಘ) [5] ತಿ ಚಾಬ್ರವೀತ್ (ಘ)

ಶಿರಸ್ಯಂಜಲಿಮಾಧಾಯ ಭಗವಂತಮುವಾಚ ಸಾ
ಕಿಮಿದಂ ದೇವ ದೇವೇಶ ತ್ರಿಯಕ್ಷ ವೃಷಭಧ್ವಜ ||೮೭||

ಅಕಾರಣಂ ಮಹಾದೇವ ಚೇಷ್ಟಿತಂ ಮನ್ಮಥಾರ್ದನ
ಕಿಮರ್ಥಂ ಭಗವನ್ನೀಶ ಭಿಕ್ಷಾಂ ಚರಸಿ ಶಂಕರ! ||೮೮||

ಸಂಶಯೋ ಮೇ ಜಗನ್ನಾಥ ಮಹಾನತ್ರ ಮಹೇಶ್ವರ
ಏವಮುಕ್ತಸ್ತಯಾ ಶರ್ವ ಇದಂ ವಚನಮಬ್ರವೀತ್ ||೮೯||

ಬ್ರಹ್ಮಣಸ್ತು ಶಿರಶ್ಛಿನ್ನಂ ಮಯಾಂಗುಷ್ಠನಖಾಗ್ರತಃ
ಚರಾಮ್ಯೇತದ್ವ್ರತಂ ಪುತ್ರಿ ಲೋಕಾನಾಂ ಹಿತಕಾಮ್ಯಯಾ ||೯೦||

ಶಿರಸಿ = ಮಸ್ತಕದಲ್ಲಿ ಅಂಜಲಿಂ = ಕೈಮುಗಿಹವನು ಆಧಾಯ = ಮಾಡಿಕೊಂಡು ಸಾ = ಆ ಉಲುಂಬಲೆ ಭಗವಂತಂ = ಪರಮೇಶ್ವರನನು ಉವಾಚ = ಬಿನ್ನಹಂ ಮಾಡಿದಳು. ತ್ರಿಯಕ್ಷ = ತ್ರಿಲೋಚನನಹಂಥಾ ವೃಷಭಧ್ವಜ = ವೃಷಭ ಧ್ವಜವನುಳ್ಳಂಥಾ ದೇವೇಶ = ದೇವರ್ಕಳಿಗೊಡೆಯನಹಂಥಾ ಭೋ ದೇವ! = ಎಲೆ ದೇವನೇ! ಇದಂ ಕಿಂ = ಇದೇನು ಮಾಡಲುಪಟ್ಟಿತ್ತು ? ||೮೭||

ಮನ್ಮಥಾರ್ದನ = ಕಾಮನ ಮರ್ದಿಸಿದಂಥಾ ಭಗವನ್ = ಷಡ್ಗುಣೈಶ್ವರ್ಯ ವನುಳ್ಳಂಥಾ ಈಶ = ಐಶ್ವರ್ಯವನುಳ್ಳಂಥಾ ಶಂಕರ = ಸುಖವನು ಮಾಡು- ತ್ತಿದ್ದಂಥಾ ಭೋ ಮಹಾದೇವ = ಎಲೈ ಶಿವನೇ, ಕಿಮರ್ಥಂ = ಏನುಕಾರಣ ಭಿಕ್ಷಾ = ಭಿಕ್ಷೆಯನು ಚರಸಿ = ಚರಿಸುತ್ತಿದ್ದೆ. ಚೇಷ್ಟಿತಂ = ವ್ಯಾಪಾರವು ಅಕಾರಣಂ = ಕಾರಣವಿಲ್ಲದಂಥಾದ್ದಾಯಿತ್ತು. ||೮೮||

ಜಗನ್ನಾಥ = ಲೋಕಕ್ಕೆ ಒಡೆಯನಹಂಥಾ ಮಹೇಶ್ವರ = ಎಲೈ ಶಿವನೇ ಅತ್ರ = ಇಲ್ಲಿ ಮೇ = ಎನಗೆ ಮಹಾನ್ = ದೊಡ್ಡಿತ್ತಹಂಥಾ ಸಂಶಯಃ = ಸಂದೇಹವಾಯಿತ್ತು. ಏವಂ = ಈ ಪ್ರಕಾರದಲ್ಲಿ ತಯಾ = ಆ ಮೃತ್ಯುವಿನಿಂದ ಉಕ್ತಃ = ನುಡಿಯಲುಪಟ್ಟಂಥಾ ಶರ್ವಃ = ಪರಮೇಶ್ವರನು ಇದಂ ವಚನಂ = ಈ ವಾಕ್ಯವನು ಅಬ್ರವೀತ್ = ನುಡಿದನು. ||೮೯||

ಭೋಃ ಪುತ್ರಿ = ಎಲೆ ಮಗಳೇ! ಬ್ರಹ್ಮಣಃ = ಬ್ರಹ್ಮನ ಶಿರಸ್ತು = ಶಿರವು ಮಯಾ = ಎನ್ನಿಂದ ಅಂಗುಷ್ಠನಖಾಗ್ರತಃ = ಹೆಬ್ಬೆರಳ ಉಗುರ ತುದಿಯ ದೆಸೆಯಿಂದ ಛಿನ್ನಂ = ಚಿವುಟಲುಪಟ್ಟಿತ್ತು. ಲೋಕಾನಾಂ = ಲೋಕಂಗಳಿಗೆ ಹಿತಕಾಮ್ಯಯಾ = ಹಿತವ ಬಯಸುವುದರಿಂದ ಏತದ್ವ್ರತಂ = ಈ ಭಿಕ್ಷಾಟನವ್ರತವನು ಚರಾಮಿ = ಚರಿಸುತ್ತಿದ್ದೇನು. ||೯೦||

ಏವಮುಕ್ತ್ವಾ ಮಹೇಶೇನ ಕನ್ಯಾ ಕಮಲಲೋಚನಾ
ಸ್ಮಯಮಾನಾಽಬ್ರವೀದ್ದೇವಂ ಪುನರೇವ ಮಹೇಶ್ವರಮ್ ||೯೧||

ಯಥೇಚ್ಛಸಿ ತಥಾ ಕ್ರೀಡನ್ ಜಗನ್ನಾಥ ಮಹೇಶ್ವರ
ಮಾಯಯಾ ಮಾಂ ಮಹಾದೇವ ಹ್ಯಾಚ್ಛಾದಯಿತುಮರ್ಹಸಿ ||೯೨||

ನಿಯೋಗಾತ್ತವ ದೇವೇಶ [1]ಬ್ರಹ್ಮಣಶ್ಚ[1] ದಿನೇ ದಿನೇ
ಹರಾಮ್ಯಹಮನೇಕಾಂಶ್ಚ ಮಮ ಪಾಪಂ ನ ವಿದ್ಯತೇ ||೯೩||

ತಥೈವ ತವ ಪಾಪಂ ವೈ ನಾಸ್ತ್ಯೇವ ಪರಮೇಶ್ವರ
ದೇವದೇವ ಮಹಾದೇವ ಮಾಯಾವಿತ್ವಮಹೋ ತವ ||೯೪||

ಏವಂ = ಈ ಪ್ರಕಾರದಲ್ಲಿ ಮಹೇಶೇನ = ಶಿವನಿಂದ ಉಕ್ತಾ = ನುಡಿಯಲು ಪಟ್ಟಂಥಾ ಕಮಲಲೋಚನಾ = ಕಮಲಲೋಚನೆಯುಹಂಥಾ ಕನ್ಯಾ = ಮೃತ್ಯುದೇವತೆ ಸ್ಮಯಮಾನಾ = ನಗುತ್ತಿದ್ದಾ(ಯಕನಾಗಿ)ತಳಾಗಿ ಮಹೇಶ್ವರಂ = ಮಹದೈಶ್ವರ್ಯವನುಳ್ಳಂಥಾ ದೇವಂ = ಪರಮೇಶ್ವರನನು ಕುರಿತು ಪುನರೇವ = ಮರಳಿ ಅಬ್ರವೀತ್ = ನುಡಿದಳು.]||೯೧||

ಮಹೇಶ್ವರ = ಮಹದೈಶ್ವರ್ಯವನುಳ್ಳಂಥಾ ಜಗನ್ನಾಥ = ಲೋಕಂಗಳಿಗೆ ಒಡೆಯನಹಂಥಾ ಮಹಾದೇಪ = ಎಲೆ ಪರಮೇಶ್ವರನೇ ಯಥಾ = ಹೇಂಗೆ ಕ್ರೀಡನ್ = ಆಡುತ್ತವು ಇಚ್ಛಸಿ = ಇಚ್ಛೈಸುತ್ತಿದ್ದೆ ತಥಾ = ಹಾಂಗೆ ಮಾಯಯಾ = ಮಾಯೆಯಿಂದ ಮಾಂ = ಎನ್ನನು ಆಚ್ಛಾದಯಿತುಂ = ಮುಸುಕಲು ಅರ್ಹಸಿ ಹಿ = ಯೋಗ್ಯನಾಗುತ್ತಿಹೆ. ||೯೨||

ಭೋ ದೇವೇಶ = ಎಲೆ ದೇವರ್ಕಳಿಗೊಡೆಯನಹಂಥಾ ಶಿವನೇ ! ತವ = ನಿನ್ನ ನಿಯೋಗಾತ್ = ಆಜ್ಞೆಯ ದೆಸೆಯಿಂದ ಬ್ರಹ್ಮಣಃ = ಬ್ರಹ್ಮನ ದಿನೇ ದಿನೇ ಚ = ದಿನ ದಿನದಲ್ಲಿಯೂ ಅನೇಕಾಂಶ್ಚ = ಲೆಕ್ಕವಿಲ್ಲದವರುಗಳನು ಅಹಂ = ನಾನು ಹರಾಮಿ = ಸಂಹರಿಸುತ್ತಿಹೆನು. ಮಮ = ಎನಗೆ ಪಾಪಂ = ಪಾಪವು ನ ವಿದ್ಯತೇ = ಇಲ್ಲವು. ||೯೩||

ಭೋ ಪರಮೇಶ್ವರ = ಎಲೆ ಪರಮೇಶ್ವರನೇ ತಥೈವ = ಹಾಂಗೆ ತವ = ನಿನಗೆ ಪಾಪಂ ವೈ = ಪಾಪವು ನಾಸ್ತ್ಯೇವ = ಇಲ್ಲವು. ದೇವದೇವ = ದೇವರ್ಕಳಿಗೆ

---

[1] ಬ್ರಾಹ್ಮಣಾಂಶ್ಚ (ಘ)

ತ್ಯಜ ಮಾಯಾಮಿಮಾಂ ದೇವ[1] ದುಸ್ತ್ಯಕ್ತಾ[1]ಮಕೃತಾತ್ಮಭಿಃ
ಜಂತವೋ ಜಗತಿ ಹ್ಯಸ್ಮಿನ್ಮಾಯಯಾ ತವ ಮೋಹಿತಾಃ ||೯೫||

ಯಥಾವದೇತಜ್ಜಾನಾಮಿ ಚೇಷ್ಟಿತಂ ಗಿರಿಜಾಪತೇ
ಸಂಹಾರಕಾಲೇ ಸಂಪ್ರಾಪ್ತೇ ಸರ್ವಾನ್ಮುನಿಗಣಾನಪಿ ||೯೬||

ಬ್ರಾಹ್ಮಣಾನ್ ಸಕಲಾನನ್ಯಾನ್ ಹನಿಷ್ಯಸಿ ಜಗನ್ಮಯ
ಬ್ರಹ್ಮಹತ್ಯಾಕೃತಂ ಕಿಂಚಿತ್ ಕ್ವಚಿನ್ನಾಸ್ತಿ ತವಾನಘ ||೯೭||

ತ್ವಯಾ ದಗ್ಧಾ ಜಗದ್ವ್ಯಾಪಿನ್ನಸಂಖ್ಯಾತಾಃ ಪಿತಾಮಹಾಃ
ತತ್ರ ತತ್ರ ಜಗನ್ನಾಥ ಕಿಂಚಿತ್ತೇ ನಾಸ್ತಿ ಪಾತಕಮ್ ||೯೮||

ದೇವನಹಂಥಾ ಭೋ ಮಹಾದೇವ = ಎಲೆ ಶಿವನೇ! ತವ = ನಿನ್ನ ಮಾಯಾವಿತ್ವಂ = ಕಪಟವಹತನವು ಅಹೋ = ಆಶ್ಚರ್ಯವು. ||೯೪||

ಭೋ ದೇವ = ಎಲೆ ದೇವನೆ ಅಕೃತಾತ್ಮಭಿಃ = ಪಾಪಿಗಳಿಂದ ದುಸ್ತ್ಯಕ್ತಾಂ = ಬಿಡಲು ಬಾರದೇ ಇದ್ದಂಥಾ ಇಮಾಂ = ಈ ಮಾಯಾಂ = ಮಾಯೆಯನು ತ್ಯಜ = ಬಿಡು. ಅಸ್ಮಿನ್ = ಈ ಜಗತಿ = ಲೋಕದಲ್ಲಿ ಜಂತವಃ = ಪ್ರಾಣಿಗಳು ತವ = ನಿನ್ನ ಮಾಯಯಾ = ಮಾಯೆಯಿಂದ ಮೋಹಿತಾ ಹಿ = ಮೋಹಿಸಲು ಪಟ್ಟವರುಗಳಲಾ. ||೯೫||

ಭೋ ಗಿರಿಜಾಪತೇ = ಎಲೇ ಪಾರ್ವತೀವಲ್ಲಭನೇ! ಏತಚ್ಚೇಷ್ಟಿತಂ = ಈ ವ್ಯಾಪಾರವನು ಯಥಾವತ್ = ತಾತ್ಪರ್ಯವಾಗಿ ಜಾನಾಮಿ = ಬಲ್ಲೆನು. ಸಂಹಾರ ಕಾಲೇ = ಸಂಹಾರಕಾಲವು ಸಂಪ್ರಾಪ್ತೇ ಸತಿ = ಎಯ್ದುತ್ತಿರಲು ಸರ್ವಾನ್ = ಸಮಸ್ತರುಗಳನು ಮುನಿಗಣಾನಪಿ = ಋಷಿಗಣಂಗಳನು ಬ್ರಾಹ್ಮಣಾನ್ = ಬ್ರಾಹ್ಮಣರುಗಳನು ಸಕಲಾನ್ = ಸಮಸ್ತರಹಂಥಾ ಅನ್ಯಾನ್ = ಮತ್ತೆ ಕೆಲಬರುಗಳನು ಹನಿಷ್ಯಸಿ = ಕೊಲ್ಲುತ್ತಿಹೆ. ಜಗನ್ಮಯ = ಜಗದ್ರೂಪನಹಂಥಾ ಭೋ ಅನಘ = ಎಲೆ ನಿರ್ದೋಷಿಯಹಂಥಾತನೆ ಬ್ರಹ್ಮಹತ್ಯಾಕೃತಂ = ಬ್ರಹ್ಮೆಹತ್ಯದಿಂದ ಮಾಡಲುಪಟ್ಟಂಥಾ ಕಿಂಚಿತ್ = ಒಂದಿಷ್ಟು ಪಾಪಂ = ಪಾಪವು ತವ = ನಿನಗೆ ಕ್ವಚಿತ್ = ಎಲ್ಲಿಯೂ ನಾಸ್ತಿ = ಇಲ್ಲ. ||೯೬-೯೭||

ಜಗದ್ವ್ಯಾಪಿನ್ = ಲೋಕವನು ವ್ಯಾಪಿಸಿಕೊಂಡಿದ್ದಂಥಾ ಭೋ ಜಗನ್ನಾಥ = ಎಲೆ ಲೋಕಕ್ಕೆ ಒಡೆಯನಹಂಥಾ ದೇವನೇ! ತ್ವಯಾ = ನಿನ್ನಿಂದ ಅಸಂಖ್ಯಾತಾಃ

---

[1] ದುಸ್ತ್ಯಾಜ್ಯಾ (ಘ)

ಕೃತ್ವಾಽಪಿ ಸುಮಹತ್ಪಾಪಂ ತ್ವಾಂ ಯಃ ಸ್ಮರತಿ ನಿತ್ಯಶಃ
ಆಧಾರಂ ಜಗತಾಮೀಶಂ ತಸ್ಯ ಪಾಪಂ ನ ವಿದ್ಯತೇ ||೯೯||

ನಾದಿತ್ಯಸನ್ನಿಧೌ ಯದ್ವತ್ತಮಸ್ತಿಷ್ಠತಿ ಕಿಂಚನ
ತದ್ವತ್ತ್ವದ್ಭಾವಯುಕ್ತಸ್ಯ ಪಾಪರಾಶಿರ್ನ ವಿದ್ಯತೇ ||೧೦೦||

ಯಶ್ಚಿಂತಯತ್ಯಪುಣ್ಯಾತ್ಮಾ ತವ ಪಾದಾಬ್ಜಮವ್ಯಯಮ್
ಬ್ರಹ್ಮಹತ್ಯಾಕೃತಂ ಚಾಪಿ ಪಾಪಂ ಜಹ್ಯಾನ್ನ ಸಂಶಯಃ ||೧೦೧||

ತವ ಪಾದಾಬ್ಜಸಂಯುಕ್ತಂ ಮನೋ ಯಸ್ಯ ಜಗತ್ಪತೇ
ಹಿಮವತ್ಪ್ರತಿಮಂ ಚಾಪಿ ಪಾಪಂ ತಸ್ಯ ವಿನಶ್ಯತಿ ||೧೦೨||

=ಲೆಕ್ಕವಿಲ್ಲದೇ ಇದ್ದಂಥಾ ಪಿತಾಮಹಾಃ = ಸಮಸ್ತ ಬ್ರಹ್ಮರುಗಳು ದಗ್ಧಾಃ= ದಗ್ಧವಾಗಲುಪಟ್ಟರು. ತತ್ರ ತತ್ರ=ಅಲ್ಲಿ ಅಲ್ಲಿ ತೇ=ನಿನಗೆ ಕಿಂಚಿತ್ಪಾತಕಂ= ಒಂದಿಷ್ಟು ಪಾಪವು ನಾಸ್ತಿ=ಇಲ್ಲ. ||೯೮||

ಯಃ=ಆವನಾನೊಬ್ಬನು ಸುಮಹತ್= ಅತಿ ಬಹಳವಹಂಥಾ ಪಾಪಂ= ಪಾಪವನು ಕೃತ್ವಾ ಽಪಿ = ಮಾಡಿಯೂ (ಮಾಡಿವೂ) ನಿತ್ಯಶಃ = ಆವಾಗವು ಜಗತಾಂ=ಲೋಕಂಗಳಿಗೆ ಆಧಾರಂ=ಆಧಾರವಹಂಥಾ ಈಶಂ—ಒಡೆಯನಹಂಥಾ ತ್ವಾಂ=ನಿನ್ನನು ಸ್ಮರತಿ=ಸ್ಮರಿಸುತಿಹನು ತಸ್ಯ=ಆತಂಗೆ ಪಾಪಂ=ಪಾಪವು ನ ವಿದ್ಯತೇ—ಇಲ್ಲ. ||೯೯||

ಆದಿತ್ಯಸನ್ನಿಧೌ=ಸೂರ್ಯನ ಸಮೀಪದಲ್ಲಿ ತಮಃ=ಕತ್ತಲೆ ಕಿಂಚನ= ಒಂದಿಷ್ಟು ಯದ್ವತ್=ಹೇಂಗೆ ನ ತಿಷ್ಠತಿ=ಇರುತ್ತಿರದು ತದ್ವತ್ = ಹಾಂಗೆ ತ್ವದ್ಭಾವಯುಕ್ತಸ್ಯ=ನಿನ್ನ ಧ್ಯಾನದಲ್ಲಿ ಕೂಡಿದಾತಂಗೆ ಪಾಪರಾಶಿಃ=ಪಾಪದ ರಾಶಿ ನ ವಿದ್ಯತೇ=ಇಲ್ಲ. ||೧೦೦||

ಯಃ=ಆವನಾನೊಬ್ಬನು ಅಪುಣ್ಯಾತ್ಮಾ= ಪಾಪವ ಮಾಡಿದಾತನು ತವ =ನಿನ್ನ ಅವ್ಯಯಂ=ನಿತ್ಯವಹಂಥಾ ಪಾದಾಬ್ಜಂ=ಪಾದಕಮಲವನು ಚಿಂತಯತಿ =ನೆನವುತ್ತಿಹನು ಬ್ರಹ್ಮಹತ್ಯಾಕೃತಂ = ಬ್ರಹ್ಮಹತ್ಯದಿಂದ ಮಾಡಲುಪಟ್ಟಂಥಾ ಪಾಪಂ ಚಾಪಿ=ಪಾಪವನು ಜಹ್ಯಾತ್=ಬಿಡುವನು. ಓಹಾಕ್=ತ್ಯಾಗೇ ಇತಿ ಧಾತುಃ ನ ಸಂಶಯಃ=ಸಂದೇಹವಿಲ್ಲ. ||೧೦೧||

ಭೋ ಜಗತ್ಪತೇ = ಎಲೆ ಜಗತ್ಪತಿಯಹಂಥಾ ದೇವನೇ ಯಸ್ಯ = ಆವನಾ

---

2 ಚ (ಘ)

ತಥಾಽಪಿ ತವ ಪಾಪೋಽಸ್ತಿ ಸಾಂಪ್ರತಂ [1]ಕಚ್ಚಿದವ್ಯಯ ![1]
ಪರಮಾತ್ಮಾ ಪರಂಧಾಮ [2]ಅಕ್ಷರಂ[2] ಪರಮಂ ಭವಾನ್ ||೧೦೩||

ಧೃತಂ ತ್ವಯೇಚ್ಛಯಾ ದೇವ ರೂಪಮೇತತ್ಸುಶೋಭನಮ್
ಅಹೋ ಧನ್ಯಾಽಸ್ಮಿ ದೇವೇಶ ಯನ್ನ ಪಶ್ಯಂತಿ ಯೋಗಿನಃ ||೧೦೪||

ಪಶ್ಯಾಮಿ ತಂ ಜಗನ್ಮೂಲಂ ಪ್ರತ್ಯಕ್ಷಂ ಪರಮೇಶ್ವರಮ್
ಅನೇಕಯುಗಸಾಹಸ್ರಂ ಧ್ಯಾತ್ವಾ ಶುದ್ಧೇನ ಚೇತಸಾ ||೧೦೫||

ನೊಬ್ಬನ ಮನಃ = ಮನಸ್ಸು ತವ = ನಿನ್ನ ಪಾದಾಬ್ಜ ಸಂಯುಕ್ತಂ = ಪಾದಕಮಲ ದೊಡನೆ ಕೂಡಲುಪಟ್ಟಿದಹುದು, ಹಿಮವತ್ಸ್ರತಿಮಂ = ಹಿಮವತ್ಪರ್ವತಕ್ಕೆ ಸಮಾನ ವಹೆಂಥಾ ತಸ್ಯ ಪಾಪಂ ಚಾಪಿ = ಆತನ ಪಾಪವು ವಿನಶ್ಯತಿ = ಕೆಡುತ್ತಿಹುದು. ನಶ ಅದರ್ಶನೇ ಇತಿ ಧಾತುಃ ||೧೦೨||

ತಥಾಽಪಿ = ಹಾಂಗಾಯಿತ್ತಾದರೂ ತವ = ನಿನಗೆ ಸಾಂಪ್ರತಂ = ಈಗ ಪಾಪಃ = ಪಾಪವು ಅಸ್ತಿ ಕಚ್ಚಿತ್ = ಉಂಟೇ ? ಭೋ ಅವ್ಯಯ = ಎಲೇ ಕೇಡಿಲ್ಲ ದಾತನೇ ! ಭವಾನ್ = ನೀನು ಪರಮಾತ್ಮಾ = ಪರಮಾತ್ಮನು. ಪರಂಧಾಮ = ಉತ್ಕೃಷ್ಟವಹ ತೇಜಸ್ಸು. ಅಕ್ಷರಂ = ಕೇಡಿಲ್ಲದೇ ಇದ್ದಂಥಾ ಪರಮಂ = ಪರಮ ತತ್ತ್ವವು. ||೧೦೩||

ಭೋ ದೇವ = ಎಲೇ ದೇವನೇ ! ಇಚ್ಛಯಾ—ಇಚ್ಛೆಯಿಂದ ಸುಶೋಭನಂ = ಅತ್ಯಂತ ಒಪ್ಪುತ್ತಿದ್ದಂಥಾ ಏತದ್ರೂಪಂ = ಈ ರೂಪು ತ್ವಯಾ = ನಿನ್ನಿಂದ ಧೃತಂ = ಧರಿಸಲುಪಟ್ಟಿತ್ತು. ಯತ್ = ಅವುದಾನೊಂದು ನಿನ್ನ ರೂಪನು ಯೋಗಿನಃ = ಯೋಗಿಗಳು ನ ಪಶ್ಯಂತಿ = ಕಾಣರು, ದೇವೇಶ = ದೇವತೆಗಳಿಗೊಡೆಯನಹಂಥಾ ಶಿವನೇ ! ಧನ್ಯಾಽಸ್ಮಿ = ಧನ್ಯಳಾದೆನು. ಅಹೋ = ಆಶ್ಚರ್ಯ. ||೧೦೪||

ಅನೇಕಯುಗಸಾಹಸ್ರಂ = ಅನೇಕಯುಗಸಹಸ್ರವು ಶುದ್ಧೇನ = ಶುದ್ಧವಹಂಥಾ ಚೇತಸಾ = ಚಿತ್ತದಿಂದ ಧ್ಯಾತ್ವಾ = ಧ್ಯಾನಿಸಿ ಜಗನ್ಮೂಲಂ = ಲೋಕಕ್ಕೆ ಮೊದಲ ಹಂಥಾ ಪ್ರತ್ಯಕ್ಷಂ = ಪ್ರತ್ಯಕ್ಷವಹಂಥಾ ತಂ ಪರಮೇಶ್ವರಂ = ಆ ಪರಮೇಶ್ವರನನು ಪಶ್ಯಾಮಿ = ಕಂಡೆನು. ||೧೦೫||

---

1 ಕಚ್ಚಿದವ್ಯಯ (ಗ) ಕಿಂ ಮಹೇಶ್ವರ (ಘ)

2 ಹ್ಯಕ್ಷರಂ (ಘ)

ಅಸ್ಪಷ್ಟಂ ಯಂ ಪ್ರಪಶ್ಯಂತಿ ತಂ ವೈ ಪಶ್ಯಾಮಿ ಶಂಕರಮ್
ಧನ್ಯಾಽಸ್ಮ್ಯನುಗೃಹೀತಾಽಸ್ಮಿ ಕೃತಾರ್ಥಾಽಸ್ಮೀತ್ಯನೇಕಶಃ ||೧೦೬||

ಉಲ್ಲುಂಬಲಾ ಸಾ ಸಂಭ್ರಾಂತಾ ಪ್ರಣಿಪತ್ಯ ಪುನಃ ಪುನಃ
[1]ಚಂದ್ರಬಿಂಬಮುಖಾ[1] ಹೃಷ್ಟಾ ನನರ್ತ ಚ ಪುನಃ ಪುನಃ ||೧೦೭||

ದೇವಾಶ್ಚ ಸರ್ವೇ ನನೃತುಃ ಮುನಯಶ್ಚ ತಥಾಽಸ್ತುವನ್
ಜಗುಶ್ಚ ಕಿನ್ನರಾಃ ಸಿದ್ಧಾಃ ನನೃತುಶ್ಚಾಪ್ಸರೋಗಣಾಃ ||೧೦೮||

[2]ಮಹೋತ್ಸವ[2]ಮಭೂತ್ತತ್ರ ಮೃತ್ಯುಸದ್ಮನಿ ಶೋಭನೇ
ಅತೀವ ಸುಖದಂ ಪುಣ್ಯಂ ಗಿರಿಜಾಪತಿಸನ್ನಿಧೌ ||೧೦೯||

ಅಸ್ಪಷ್ಟಂ = ಕಾಣಬಾರದೇ ಇದ್ದಂಥಾ ಯಂ = ಆವನಾನೊಬ್ಬ ದೇವನನು, (ಯೋಗಿನಃ = ಯೋಗಿಗಳು) ಪ್ರಪಶ್ಯಂತಿ = ಕಾಣುತ್ತಿಹರು, ತಂ ಶಂಕರಂ ವೈ = ಆ ಶಂಕರನನು ಪಶ್ಯಾಮಿ = ಕಂಡೆನು. ಧನ್ಯಾಽಸ್ಮಿ = ಧನ್ಯಳಾದೆನು. ಅನುಗೃಹೀತಾಽಸ್ಮಿ = ಪರಿಕರಿಸಲುಪಟ್ಟಾತಳಾದೆನು. ಅನೇಕಶಃ = ಹಲವು ಬಾರಿ ಇತಿ = ಈ ಪ್ರಕಾರದಲ್ಲಿ ಕೃತಾರ್ಥಾಽಸ್ಮಿ = ಕೃತಾರ್ಥೆಯಾದೆನು. ||೧೦೬||

ಚಂದ್ರಬಿಂಬಮುಖಾ = ಚಂದ್ರಮಂಡಲದೋಪಾದಿ ಮುಖವನುಳ್ಳಂಥಾ ಸಾ ಉಲುಂಬಲಾ—ಆ ಉಲುಂಬಲೆ ಪುನಃ ಪುನಃ = ಅಡಿಗಡಿಗೆ ಪ್ರಣಿಪತ್ಯ = ನಮಸ್ಕರಿಸಿ ಸಂಭ್ರಾಂತಾ = ಭ್ರಾಮಕವಾದಳು. ಹೃಷ್ಟಾ = ಸಂತೋಷಿಸಲ್ಪಟ್ಟಾಯಕಳಾಗಿ ಪುನಃ ಪುನಶ್ಚ = ಮರಳಿ ಮರಳಿಯೂ ನನರ್ತ = ನೃತ್ಯವಾಡಿದಳು. ||೧೦೭||

ಸರ್ವೇ ದೇವಾಶ್ಚ = ಸಮಸ್ತ ದೇವರ್ಕಳು ನನೃತುಃ = ನೃತ್ಯವನಾಡಿದ್ದರು. ಮುನಯಶ್ಚ = ಋಷಿಗಳು ತಥಾ = ಹಾಂಗೆ ಅಸ್ತುವನ್ = ಸ್ತೋತ್ರವ ಮಾಡಿದರು ಕಿನ್ನರಾಃ = ಕಿನ್ನರರುಗಳು ಸಿದ್ಧಾಃ = ಸಿದ್ಧರುಗಳು ಜಗುಃ = ಹಾಡಿದರು. ಅಪ್ಸರೋಗಣಾಶ್ಚ = ಅಪ್ಸರ ಸ್ತ್ರೀ ಸಮೂಹಂಗಳು ನನೃತುಃ = ನೃತ್ಯವನಾಡಿದರು. ||೧೦೮||

ಶೋಭನೇ = ಒಪ್ಪುತ್ತಿದ್ದಂಥಾ ತತ್ರ ಮೃತ್ಯುಸದ್ಮನಿ = ಆ ಮೃತ್ಯುವಿನ ಗೃಹದಲ್ಲಿ ಗಿರಿಜಾಪತಿಸನ್ನಿಧೌ = ಪಾರ್ವತೀಪತಿಯ ಸಮೀಪದಲ್ಲಿ ಅತೀವಸುಖದಂ = ಅತ್ಯಂತ ಸುಖವನು ಕೊಡುತ್ತಿದ್ದಂಥಾ ಪುಣ್ಯವಹೆಂಥಾ ಮಹೋತ್ಸವಂ — ಅತ್ಯಂತ ಉತ್ಸಾಹವು ಅಭೂತ್ — ಆಯಿತ್ತು. ||೧೦೯||

---

1 ಚಂದ್ರಬಿಂಬಾಗನಾ (ಘ) 2 ಮಹೋತ್ಸಾಹ (ಘ)

ದೇವಾಶ್ಚ ಮುನಯಶ್ಚೈವ ಸಾಧು ಸಾಧ್ವಿತ್ಯಥಾಽಬ್ರುವನ್
ಅಹೋ ತದಂತರೇ ದೇವೋ ನಿರ್ಜಗಾಮ ಸ್ಮರಾಂತಕಃ ||೧೧೦||

ಸೇವ್ಯಮಾನಸ್ಸುರಗಣೈಃ ಮುನಿಭಿರ್ವೇದಪಾರಗೈಃ
ತತಃ ಪಿನಾಕೀ ಭಗವಾನ್ ವರುಣಸ್ಯ ಪುರಂ ಪ್ರತಿ ||೧೧೧||

ಜಗಾಮಾಪ್ಸರಸಾಂ ಸಂಘೈಃ ಕಿನ್ನರೈಸ್ಸಂವೃತಸ್ಸುರೈಃ
ತತಃ ಶ್ರುತ್ವಾ ಜಲೇಶೋಽಪಿ ಭಾರ್ಯಾಭಿಸ್ಸಂವೃತಶ್ಶುಚಿಃ ||೧೧೨||

ಸ್ವಗೃಹಾನ್ನಿರ್ಜಗಾಮಾಶು ಸಂಭೃತ್ಯ [1]ಸುಮನಾಂಸಿ[1] ಸಃ
ಬಭೂವ ಪ್ರೀತಿಸಂಪೂರ್ಣೋ ನಿಧಿಂ[2]ಲಬ್ಧ್ವೇವ[2] ನಿರ್ಧನಃ ||೧೧೩||

ಅಥ—ಅನಂತರದಲ್ಲಿ ದೇವಾಶ್ಚ—ದೇವತೆಗಳು ಮುನಯಶ್ಚೈವ—ಋಷಿಗಳು ಸಾಧು ಸಾಧು—ಲೇಸು ಲೇಸೆಂದು ಇತಿ—ಈ ಪ್ರಕಾರದಲ್ಲಿ ಅಬ್ರುವನ್—ನುಡಿದರು. ಅಹೋ—ಆಶ್ಚರ್ಯವು. ತದಂತರೇ — ಆದರ ತರುವಾಯಲ್ಲಿ ಸ್ಮರಾಂತಕಃ — ಕಾಮಾಂತಕನಹಂಥಾ ದೇವಃ—ಪರಮೇಶ್ವರನು ನಿರ್ಜಗಾಮ—ಹೊರವಂಟನು. ೧೧೦

ತತಃ—ಅನಂತರದಲ್ಲಿ ಸುರಗಣೈಃ—ದೇವರ್ಕಳ ಸಮೂಹಂಗಳಿಂದ ವೇದಪಾರಗೈಃ —ವೇದಂಗಳ ಕಡೆಯನೆಯ್ದಿದಂಥಾ ಮುನಿಭಿಃ—ಋಷಿಗಳಿಂದ ಸೇವ್ಯಮಾನಃ— ಓಲೈಸಿಕೊಳಲುಪಟ್ಟಂಥಾ ಭಗವಾನ್—ಷಡ್ಗುಣೈಶ್ವರ್ಯಸಂಪನ್ನನಹಂಥಾ ಪಿನಾಕೀ ಪರಮೇಶ್ವರನು ವರುಣಸ್ಯ — ವರುಣನ ಪುರಂ ಪ್ರತಿ — ಪಟ್ಟಣವನು ಕುರಿತು,

ಅಪ್ಸರಸಾಂ—ಅಪ್ಸರರುಗಳ ಸಂಘೈಃ — ಸಮೂಹಂಗಳಿಂದ ಕಿನ್ನರೈಃ — ಕಿನ್ನರರುಗಳಿಂದ ಸುರೈಃ—ದೇವರ್ಕಳಿಂದ ಸಂವೃತಃ—ಮುಸುಕಲುಪಟ್ಟಾತನಾಗಿ ಜಗಾಮ—ಎಯ್ದಿದನು. ತತಃ — ಅಷ್ಟರಮೇಲೆ ಭಾರ್ಯಾಭಿಃ — ಸ್ತ್ರೀಯರುಗಳಿಂದ ಸಂವೃತಃ—ಮುಸುಕಲು ಪಟ್ಟಂಥಾ ಶುಚಿಃ—ಶುಚಿಯಹಂಥಾ ಜಲೇಶೋಽಪಿ —ವರುಣನು ಶ್ರುತ್ವಾ—ಕೇಳಿ, ||೧೧೨||

ಸಃ—ಆ ವರುಣನು ಸುಮನಾಂಸಿ—ಪುಷ್ಪಂಗಳನು ಸಂಭೃತ್ಯ—ಒದಗಿಸಿಕೊಂಡು ಸ್ವಗೃಹಾತ್—ತನ್ನ ಅರಮನೆಯ ದೆಸೆಯಿಂದ ಆಶು—ಬೇಗ ನಿರ್ಜಗಾಮ —ಹೊರವಂಟನು. ಪ್ರೀತಿಸಂಪೂರ್ಣಃ—ಸಂತೋಷದಿಂದ ಪರಿಪೂರ್ಣವನುಳ್ಳಾತನು ಬಭೂವ—ಆದನು. ಕಥಮಿವ — ಅದು ಹೇಂಗೆಯಾ ಎಂದಡೆ ನಿರ್ಧನಃ— ನಿರ್ಧನಿಕನು ನಿಧಿಂ—ನಿಕ್ಷೇಪವನು ಲಬ್ಧ್ವೇವ—ಪಡದು ಎಹಗಹಗೆ. ||೧೧೩||

---

[1] ಕುಸುಮಾನಿ (ಘ) [2] ಲಬ್ಧ್ವಾಥ (ಘ)

ನಾರೀಭಿಸ್ಸಹ ಪುಣ್ಯಾತ್ಮಾ ದದರ್ಶ ಪರಮೇಶ್ವರಮ್ ||೧೧೪||

ತ್ವಮಾದಿಸ್ತ್ವಮನಾದಿಸ್ತ್ವಂ ತ್ವಂ ಪ್ರಭುಃ ಸರ್ವತೋಮುಖಃ
ಅಜೇಶ ವಿಷ್ಣ್ವೀಶ ವಿಭೋ ಸಹಸ್ರಾಂಶೋ ಜಗನ್ಮಯ ||೧೧೫||

ಆದ್ಯಂತಶೂನ್ಯ ಸರ್ವೇಶ ಸರ್ವಾಧಾರ ನಮೋಽಸ್ತು ತೇ ||೧೧೬||

ಯಸ್ತ್ವಾಂ ವೇದಯತೇ ನಿತ್ಯಂ ಧ್ರುವಮಕ್ಷರಮವ್ಯಯಮ್
ಪ್ರಭುಂ ಪುರಾಣಂ ಪುರುಷಂ ಹಿತ್ವಾ ಬುದ್ಧಿಂ ಸ ತಿಷ್ಠತಿ ||೧೧೭||

ತ್ವಾಂ ಜ್ಞಾತ್ವಾ ಪಂಚಭೂತಾಖ್ಯಂ ಮಹದ್ಭೂತಮಯೋನಿಜಮ್
ಅಕಾರಣಮಜಂ ಶುದ್ಧಂ ಸ ತಿಷ್ಠತಿ ನಿರೀಶ್ವರಃ ||೧೧೮||

ಪುಣ್ಯಾತ್ಮಾ—ಪುಣ್ಯಶರೀರಿಯುಳ್ಳಂಥಾ ವರುಣನು ನಾರೀಭಿಸ್ಸಹ—ಸ್ತ್ರೀಯರುಗಳಿಂದ ಸಹಿತನಾಗಿ ಪರಮೇಶ್ವರಂ—ಪರಮೇಶ್ವರನನು ದದರ್ಶ—ಕಂಡನು.

ಅಜೇಶ—ಬ್ರಹ್ಮಂಗೆ ಒಡೆಯನಹಂಥಾ ವಿಷ್ಣ್ವೀಶ — ವಿಷ್ಣುವಿಂಗೆ ಒಡೆಯನಹಂಥಾ ವಿಭೋ—ಪರಿಪೂರ್ಣನಹಂಥಾ ಸಹಸ್ರಾಂಶೋ!—ಅಸಂಖ್ಯಾತ ಕಿರಣಂಗಳನುಳ್ಳಂಥಾ ಜಗನ್ಮಯ—ಜಗದ್ರೂಪನಹಂಥಾ ಶಿವನೇ! ತ್ವಂ— ನೀನು ಆದಿಃ —ಮೊದಲಹಂಥಾ ಆತನು. ತ್ವಂ— ನೀನು ಅನಾದಿಃ — ಮೊದಲಿಲ್ಲದಾತನು. ತ್ವಂ—ನೀನು ಪ್ರಭುಃ—ಒಡೆಯನು. ಸರ್ವತೋಮುಖಃ—ವಿಶ್ವತೋಮುಖನು ಸಹಸ್ರಶಬ್ದವು ಸಾವಿರದಲ್ಲಿಯೂ ಅಸಂಖ್ಯಾತದಲ್ಲಿಯೂ ವರ್ತಿಸೂದು. ||೧೧೫||

ಆದ್ಯಂತಶೂನ್ಯ — ಮೊದಲು ಕಡೆ ಇಲ್ಲದಂಥಾ ಸರ್ವೇಶ — ಸಮಸ್ತಲೋಕಕ್ಕೆ ಒಡೆಯನಹಂಥಾ ಸರ್ವಾಧಾರ — ಸಮಸ್ತಕ್ಕೆ ಆಧಾರವಹಂಥಾ ದೇವನೇ ತೇ—ನಿನಗೆ ನಮಃ—ನಮಸ್ಕಾರವು ಅಸ್ತು—ಆಗಲಿ. ||೧೧೬||

ಯಃ—ಆವನಾನೊಬ್ಬನು ನಿತ್ಯಂ—ನಿತ್ಯನಹಂಥಾ ಧ್ರುವಂ—ನಿಶ್ಚಯನಹಂಥಾ ಅಕ್ಷರಂ— ಕೇಡಿಲ್ಲದೇ ಇದ್ದಂಥಾ ಅವ್ಯಯಂ — ನಾಶವಿಲ್ಲದೇ ಇದ್ದಂಥಾ ಪ್ರಭುಂ—ಒಡೆಯನಹಂಥಾ ಪುರಾಣಂ ಪುರುಷಂ—ಪುರಾಣಪುರುಷನಹಂಥಾ ತ್ವಾಂ—ನಿನ್ನನ್ನು ವೇದಯತೇ—ಅರಿವುತ್ತಿಹನು, ಸಃ—ಆತನು ಬುದ್ಧಿಂ—ಬುದ್ಧಿಯ ಸಂಬಂಧವಹ ವಿಕಾರವನು ಹಿತ್ವಾ—ಬಿಟ್ಟು ತಿಷ್ಠತಿ—ಇರುತ್ತಿಹನು. ||೧೧೭||

ಪಂಚಭೂತಾಖ್ಯಂ — ಪಂಚಭೂತಂಗಳ ನಾಮಂಗಳಾಗಿ ಉಳ್ಳಂಥಾ ಮಹದ್ಭೂತಂ—ಉತ್ಕೃಷ್ಟ ಮೂರ್ತಿಯಹಂಥಾ ಅಯೋನಿಜಂ—ಯೋನಿಯಲ್ಲಿ ಹುಟ್ಟದೇ ಇದ್ದಂಥಾ ಅಜಂ—ಜನ್ಮವಿಲ್ಲದೇ ಇದ್ದಂಥಾ ಶುದ್ಧಂ — ಶುದ್ಧನಹಂಥಾ ತ್ವಾಂ

ನಮಸ್ತೇ ಭಗವನ್ ದೇವ ನಮಸ್ತೇ ಸರ್ವಭಾವನ
ಯೋಗೀಶ್ವರ ನಮಸ್ತುಭ್ಯಂ ನಮಸ್ತೇ ಪರತಃ ಪರ ||೧೧೯||

ಏವಂ ಸ್ತುತ್ವಾ ತು ವರುಣಶ್ಚಂದ್ರಲೇಖಾವತಂಸಕಮ್
ವಿಕೀರ್ಯ ಪುಷ್ಪಜಾಲಾನಿ ಪಾದಯೋರ್ವಿರರಾಮ ಸಃ ||೧೨೦||

*ತಸ್ಯ ಭಾರ್ಯಾ ಭವಂ ದೇವಮಭಿತುಷ್ಟಾವ ಸಾದರಾ
ಶಿರಸ್ಯಂಜಲಿಮಾಧಾಯ ಹೃಷ್ಟಾ ಶರ್ವಸ್ಯ ದರ್ಶನಾತ್ ||೧೨೧||

—ನಿನ್ನನು ಜ್ಞಾತ್ವಾ—ಅರಿದು, ಸಃ—ಆತನು ನಿರೀಶ್ವರಃ—ಒಡೆಯನಿಲ್ಲದಾತ-ನಾಗಿ ತಿಷ್ಠತಿ—ಇರುತ್ತಿಹನು. ಶಿವನ ನಿಜವನರಿದಾತನು ಶಿವನೇ ಆಹನೆಂಬುದರ್ಥ.

ಭಗವನ್ — ಭಗವಾನ್ನುವಹಂಥಾ ದೇವ — ಎಲೆ ದೇವನೇ ! ತೇ — ನಿನಗೋಸ್ಕರ ನಮಃ—ನಮಸ್ಕಾರವು. ಸರ್ವಭಾವನ — ಸಮಸ್ತ ಭಾವನೆಯು-ನುಳ್ಳಾತನೇ ! ತೇ—ನಿನಗೋಸ್ಕರ ನಮಃ—ನಮಸ್ಕಾರವು. ಯೋಗೀಶ್ವರ—ಯೋಗೀಶ್ವರನಹಂಥಾ ಪರಮೇಶ್ವರನೇ ! ತುಭ್ಯಂ — ನಿನಗೋಸ್ಕರ ನಮಃ—ನಮಸ್ಕಾರವು. ಪರತಃ—ಪ್ರಕೃತಿಯಿಂದ ಪರ — ಮೇಲಹಂಥಾ ಶಿವನೇ ! ತೇ —ನಿನಗೋಸ್ಕರ ನಮಃ—ನಮಸ್ಕಾರವು. ||೧೧೯||

ಸಃ ವರುಣಃ— ಆ ವರುಣನು ಏವಂ—ಈ ಪ್ರಕಾರದಲ್ಲಿ ಚಂದ್ರಲೇಖಾವ-ತಂಸಕಂ— ಚಂದ್ರನ ರೇಖೆಯೇ ಭೂಷಣವಾಗಿ ಉಳ್ಳಂಥಾ ಶಿವನನು ಸ್ತುತ್ವಾ ತು —ಸ್ತೋತ್ರವ ಮಾಡಿ ಪುಷ್ಪಜಾಲಾನಿ—ಪುಷ್ಪಸಮೂಹಂಗಳನು ವಿಕೀರ್ಯ—ಕೆದರಿ ಪಾದಯೋಃ—ಪಾದಂಗಳಲ್ಲಿ ವಿರರಾಮ—ಬಿದ್ದನು. ವಿ ಎಂಬ ಉಪಸರ್ಗ. ರಮು—ಕ್ರೀಡಾಯಾಮ್ ಎಂಬ ಧಾತು. ಉಪಸರ್ಗದಿಂದ ಉಚಿತಾರ್ಥವ ನುಡಿವುದು.|| ೧೨೦||

ತಸ್ಯ — ಆ ವರುಣನ ಭಾರ್ಯಾ — ಸ್ತ್ರೀ ಶರ್ವಸ್ಯ — ಪರಮೇಶ್ವರನ ದರ್ಶನಾತ್—ದರ್ಶನದ ದೆಸೆಯಿಂದ ಹೃಷ್ಟಾ—[1]ಸಂತೋಷಿಸಿದಾ(ಯಕನಾಗಿ)ತಳಾಗಿ ಶಿರಸಿ—ಮಸ್ತಕದಲ್ಲಿ ಅಂಜಲಿಂ—ಕೈಮುಗಿಹನನು ಆಧಾಯ— ಮಾಡಿಕೊಂಡು ಸಾದರಾ—ತಾತ್ಪರ್ಯದಿಂದ ಸಹಿತೆಯಾಗಿ ದೇವಂ— ದೇವನಹಂಥಾ ಭವಂ — ಶಿವನನು ಅಭಿತುಷ್ಟಾವ—ಸ್ತೋತ್ರವ ಮಾಡಿದಳು. ||೧೨೧||

---

* ಶಂಭೋಶ್ಚ ದರ್ಶನಾದೇವ ಹೃಷ್ಟಾ ಪರಮಹರ್ಷಿತಾ | ಶಿರಸ್ಯಂಜಲಿಮಾಧಾಯ ಸಾ ತುಷ್ಟಾವ ಭವಂ ತದಾ || ಇತಿ (ಖ) ಮಾತೃಕೆಯಲ್ಲಿರುವ ಪಾಠ.

1 ಸಂತೋಷಿಸಿದಾತಳಾಗಿ (ಕ) ಸಂತೋಷಿಸಿದಾಯಕನಾಗಿ (ಖ.ಚ)

ನಮೋ ಭವಾಯ ಭವ್ಯಾಯ ಸರ್ವಜ್ಞಾಯ ಮಹಾತ್ಮನೇ
ಹರಾಯ ಸೂಕ್ಷ್ಮರೂಪಾಯ ಉಮಾಯಾಃ ಪತಯೇ ನಮಃ||೧೨೨||

ತ್ವದ್ದರ್ಶನಮಪುಣ್ಯಾನಾಂ ಸರ್ವಥಾ ನಾಸ್ತಿ ಶಂಕರ
ಇತಿ ಮೇ ನಿಶ್ಚಿತಾ ಬುದ್ಧಿಃ ಪರಮಾತ್ಮನ್ ವೃಷಧ್ವಜ ||೧೨೩||

ತಸ್ಮಾದ್ವಯಂ ನೀಲಕಂಠ ಪುಣ್ಯಾ ಏವ ನ ಸಂಶಯಃ ||೧೨೪||

ತವ ಪಾದಾಬ್ಜಯುಗಲೇ ಮಮ ಭಕ್ತಿಂ ಮಹೇಶ್ವರ
ದೇಹಿ [1]ಸರ್ವಜ್ಞ [1]ಸರ್ವಾತ್ಮನ್ ವಶೀಕೃತಜಗತ್ತ್ರಯ ||೧೨೫||

ಭವಾಯ — ಸೃಷ್ಟಿಯನ್ನು ಮಾಡುತ್ತಿದ್ದಂಥಾ ಭವ್ಯಾಯ — ಮಂಗಳಸ್ವರೂಪನಹಂಥಾ ಸರ್ವಜ್ಞಾಯ—ಸರ್ವಜ್ಞನಹಂಥಾ ಮಹಾತ್ಮನೇ—ಮಹಾತ್ಮನಹಂಥಾ ನಿನಗೋಸ್ಕರ ನಮಃ—ನಮಸ್ಕಾರವು. ಹರಾಯ—ಸಂಹರಿಸುತ್ತಿದ್ದಂಥಾ ಸೂಕ್ಷ್ಮರೂಪಾಯ—ಸೂಕ್ಷ್ಮಸ್ವರೂಪನಹಂಥಾ ಉಮಾಯಾಃ—ಪಾರ್ವತೀದೇವಿಯ ಪತಯೇ—ವಲ್ಲಭನಹಂಥಾ ನಿನಗೋಸ್ಕರ ನಮಃ—ನಮಸ್ಕಾರವು. ||೧೨೨||

ಶಂಕರ—ಸುಖವನು ಮಾಡುತ್ತಿದ್ದಂಥಾ ಪರಮಾತ್ಮನ್—ಪರಮಾತ್ಮನಹಂಥಾ ವೃಷಧ್ವಜ — ವೃಷಭಧ್ವಜನಹಂಥಾ ಶಿವನೇ ತ್ವದ್ದರ್ಶನಂ — ನಿನ್ನ ದರ್ಶನವು ಅಪುಣ್ಯಾನಾಂ—ಪುಣ್ಯವ ಮಾಡದೇ ಇದ್ದಂಥಾವರುಗಳಿಗೆ ಸರ್ವಥಾ—ಸರ್ವಪ್ರಯತ್ನದಿಂದವೂ ನಾಸ್ತಿ—ಇಲ್ಲ. ಇತಿ— ಹೀಂಗೆಂದು ಮೇ — ಎನ್ನ ಬುದ್ಧಿಃ — ಬುದ್ಧಿಯು ನಿಶ್ಚಿತಾ—ನಿಶ್ಚೈಸಲುಪಟ್ಟುದು. ||೧೨೩||

ಭೋ ನೀಲಕಂಠ—ಎಲೇ ನೀಲಕಂಠನೇ ತಸ್ಮಾತ್—ಅದು ಕಾರಣ ವಯಂ —ನಾವು ಪುಣ್ಯಾ ಏವ—ಪುಣ್ಯಾತ್ಮರುಗಳೇ. ನ ಸಂಶಯಃ—ಸಂದೇಹವಿಲ್ಲ. ||೧೨೪||

ಸರ್ವಜ್ಞ — ಸರ್ವಜ್ಞನಹಂಥಾ ಸರ್ವಾತ್ಮನ್ — ಸರ್ವಾತ್ಮಕನಹಂಥಾ ವಶೀಕೃತಜಗತ್ತ್ರಯ—ವಶೀಕರಿಸಲುಪಟ್ಟ ಮೂಲೋಕಗಳನುಳ್ಳಂಥಾ ಮಹೇಶ್ವರ —ಮಹೇಶ್ವರನೇ ತವ— ನಿನ್ನ ಪಾದಾಬ್ಜಯುಗಲೇ — ಪಾದಕಮಲವೆರಡರಲ್ಲಿ ಮಮ—ಎನಗೆ ಭಕ್ತಿಂ—ಭಕ್ತಿಯನು ದೇಹಿ—ಕೊಡು. ||೧೨೫

---

1 ಸರ್ವೇಶ (ಘ)

ಅನಾಥಾನಾಂ ಚ ಪಾಪಾನಾಂ ಸತತಂ ದುಃಖಭಾಗಿನಾಮ್
ತ್ವಮೇವ ಭಗವನ್ನೂನಂ ಗತಿರ್ನಾನ್ಯಾ ವಿಷಾಶನ ||೧೨೬||

ಅಥವಾ ಸಾ ಗಿರೇಃ ಪುತ್ರೀ ಜಗನ್ಮಾತಾ ವರಾಂಗನಾ
ತೀವ್ರತಾಪಾಭಿತಪ್ತಾನಾಂ ಗತಿರತ್ರ ನ ಸಂಶಯಃ ||೧೨೭||

[1]ರಕ್ಷಾಸ್ಮಾನ್ ವೃಷಯಾನೇಶ ಸರ್ವಭೂತನಮಸ್ಕೃತ
ಅಂತಕಾಂತಕ ಸರ್ವಜ್ಞ ಚಂದ್ರಾವಯವಭೂಷಣ ||೧೨೮||

ಇತಿ ಸ್ತುತ್ವಾ ದದೌ ಭಕ್ತ್ಯಾ ಭಿಕ್ಷಾಂ ಸಾ ಪತಿನಾ ಸಹ
ದತ್ವಾ ಪುನರ್ಜಗೌ ಸಾಧ್ವೀ ಪ್ರಹೃಷ್ಟವದನಾ ಭೃಶಮ್ ||೧೨೯||

ಭೋ ವಿಷಾಶನ — ಎಲೇ ವಿಷವೇ ಅಶನವಾಗಿ ಉಳ್ಳಂಥಾ ಭಗವನ್ — ಭಗವಾನ್ನುವಹಂಥಾ ಶಿವನೇ ತ್ವಮೇವ — ನೀನೇ ಅನಾಥಾನಾಂ — ಅನಾಥರುಗಳಿಗೆಯೂ ಪಾಪಾನಾಂ — ಪಾಪಿಗಳಿಗೆಯೂ ಸತತಂ — ಆವಾಗವೂ ದುಃಖಭಾಗಿನಾಂ—ದುಃಖಿಗಳಿಗೆಯೂ ನೂನಂ—ಅತ್ಯಂತ ಗತಿಃ — ಗತಿಯುಹಂಥಾತನು. ನಾನ್ಯಾ—ಮತ್ತೊಂದು ಗತಿಯಿಲ್ಲ. ||೧೨೬||

ಅಥವಾ—ಅಲ್ಲದಿದ್ದ ಪಕ್ಷೇ ಜಗನ್ಮಾತಾ—ಜಗನ್ಮಾತೆಯುಹಂಥಾ ವರಾಂಗನಾ —ಸೌಂದರವಹ ಸ್ತ್ರೀಯುಹಂಥಾ ಗಿರೇಃ—ಹಿಮವತ್ಪರ್ವತನ ಪುತ್ರೀ—ಮಗಳಹಂಥಾ ಸಾ—ಆ ಪಾರ್ವತೀದೇವಿ ತೀವ್ರತಾಪಾಭಿತಪ್ತಾನಾಂ — ಅತ್ಯಂತ ಸಂಸಾರ ತಾಪದಿಂದ ಬೆಂದಂಥಾವರುಗಳಿಗೆ ಗತಿಃ = ಗತಿಯುಹಂಥಾ (ಯುಕನು) ತಳು ಅತ್ರ = ಈ ಯರ್ಥದಲ್ಲಿ ನ ಸಂಶಯಃ—ಸಂದೇಹವಿಲ್ಲ. ||೧೨೭||

ವೃಷಯಾನ — ವೃಷಭವಾಹನನಹಂಥಾ ಈಶ — ಐಶ್ವರ್ಯವನುಳ್ಳಂಥಾ ಸರ್ವಭೂತನಮಸ್ಕೃತ — ಸಮಸ್ತ ಪ್ರಾಣಿಗಳಿಂದ ನಮಸ್ಕರಿಸಲುಪಟ್ಟಂಥಾ ಅಂತಕಾಂತಕ — ಅಂತಕಂಗೆ ಅಂತಕನಹಂಥಾ ಸರ್ವಜ್ಞ — ಸರ್ವಜ್ಞನಹಂಥಾ ಚಂದ್ರಾವಯವಭೂಷಣ—ಚಂದ್ರನ ಅವಯುವವೇ ಭೂಷಣವಾಗಿ ಉಳ್ಳಂಥಾ ಶಿವನೇ ಅಸ್ಮಾನ್—ನಮ್ಮನು ರಕ್ಷ—ರಕ್ಷಿಸು. ||೧೨೮||

ಸಾಧ್ವೀ—ಪತಿವ್ರತೆಯುಹಂಥಾ ಸಾ—ಆ ವರುಣಸ್ತ್ರೀ ಇತಿ—ಈ ಪ್ರಕಾರದಲ್ಲಿ ಸ್ತುತ್ವಾ—ಸ್ತೋತ್ರವ ಮಾಡಿ ಭಕ್ತ್ಯಾ—ಭಕ್ತಿಯಿಂದ ಪತಿನಾ ಸಹ —

---

1 ಇದು (ಘ) ಪಾಠಾಂತರ. ತಸ್ಮಾನ್ಮಾಮವ ಸರ್ವೇಶ (ಘ) ಮೂಲ ಪಾಠ.

ಗಾನಾಮೃತಂ ತದಾ ದೇವೀ ವಕ್ತ್ರಚಂದ್ರೇಣ ಶೋಭನಾ
ಸಸರ್ಜ ಕಮಲಾಭಾಕ್ಷೀ ಜಗತಾಮಂತಕಾರಿಣಃ ||೧೩೦||

[1]ಗಾ[1]ನಾಮೃತಂ ತದಾ ಪೀತ್ವಾ ತಸ್ಯಾ ವದನನಿಃಸೃತಮ್
ಪ್ರಹೃಷ್ಟಾತ್ಮಾಭವಚ್ಛರ್ವೋ ವೃಷಯಾನಪ್ರಿಯೋ ಭವಃ ||೧೩೧||

ಸುಮಾಲಿನೀಂ ತತೋ ದೇವೀಂ ದಿದೇಶ ಕಮಲೇಕ್ಷಣಾಮ್
ಗಾನಂ ಕುರ್ವಿತಿ ದೇವೇಶೋ ದೇವ್ಯಾಃ ಪಾರ್ಶ್ವಾಭಿಗಾಮಿನೀಮ್||೧೩೨||

ಗಂಡನೊಡನೆ ಭಿಕ್ಷಾಂ—ಭಿಕ್ಷೆಯನು ದದೌ—ಕೊಟ್ಟಳು. ದತ್ವಾ—ಕೊಟ್ಟು ಭೃಶಂ—ಅತ್ಯಂತ ಪ್ರಹೃಷ್ಟವದನಾ—ಅತ್ಯಂತ ಸಂತೋಷಿಸಲುಪಟ್ಟ ಮುಖವನುಳ್ಳ (ಯಳಾಗಿ) ತಳಾಗಿ ಪುನಃ—ಮರಳಿ ಜಗೌ—ಹಾಡಿದಳು. ||೧೨೯||

ಕಮಲಾಭಾಕ್ಷೀ—ತಾವರೆಗೆ ಸಮಾನವಹ ನಯನಂಗಳನುಳ್ಳಂಥಾ ಶೋಭನಾ—ಒಪ್ಪುತ್ತಿದ್ದಂಥಾ ದೇವೀ—ವರುಣನ ಸ್ತ್ರೀ ವಕ್ತ್ರಚಂದ್ರೇಣ—ಮುಖಚಂದ್ರನಿಂದ ಗಾನಾಮೃತಂ—ಗಾನಾಮೃತವನು ತದಾ—ಆಗ ಜಗತಾಂ—ಲೋಕಂಗಳ ಅಂತಕಾರಿಣಃ—ನಾಶವನು ಮಾಡುತಿದ್ದಂಥಾ ಶಿವಂಗೆ ಸಸರ್ಜ—ಸೃಜಿಸಿದಳು.

ವೃಷಯಾನಪ್ರಿಯಃ—ವೃಷಭವಾಹನದಲ್ಲಿ ಪ್ರಿಯನಹಂಥಾ ಭವಃ—ಸೃಷ್ಟಿಯನು ಮಾಡುತ್ತಿದ್ದಂಥಾ ಶರ್ವಃ—ಪರಮೇಶ್ವರನು ತಸ್ಯಾಃ—ಆ ವರುಣನ ಸ್ತ್ರೀಯ ವದನನಿಃಸೃತಂ—ಮುಖದಿಂದ ಸುರಿವುತ್ತಿದ್ದಂಥಾ ಗಾನಾಮೃತಂ—ಸಂಗೀತಾಮೃತವನು ತದಾ—ಆಗ ಪೀತ್ವಾ—ಪಾನವ ಮಾಡಿ ಪ್ರಹೃಷ್ಟಾತ್ಮಾ ಸಂತೋಷಿಸಲುಪಟ್ಟ ಚಿತ್ತವನುಳ್ಳಾತನು ಅಭವತ್—ಆದನು. ಗಾನಾಮೃತವನು ಪಾನಮಾಡಿದನೆಂದರೆ ಕೇಳಿದನೆಂಬುದರ್ಥ. ||೧೩೧||

ತತಃ—ಅಷ್ಟರ ಮೇಲೆ ದೇವೇಶಃ—ದೇವರ್ಕಳಿಗೆ ಒಡೆಯನಹಂಥಾ ಶಿವನು ದೇವ್ಯಾಃ—ಪಾರ್ವತೀದೇವಿಯ ಪಾರ್ಶ್ವಾಭಿಗಾಮಿನೀಂ—ಸಮೀಪದಲ್ಲಿ ಇರುತ್ತಿದ್ದಂಥಾ ಕಮಲೇಕ್ಷಣಾಮ್—ತಾವರೆಯೋಪಾದಿಯ ನಯನಂಗಳನುಳ್ಳಂಥಾ ಸುಮಾಲಿನೀಂ ದೇವೀಂ—ಸುಮಾಲಿನಿದೇವಿಯನು ಗಾನಂ—ಗಾನವನು ಕುರು—ಮಾಡು ಇತಿ—ಹೀಂಗೆಂದು ದಿದೇಶ—ಆಜ್ಞಾಪಿಸಿದನು. ||೧೩೨||

---

1 ಜ್ಞಾ ? (ಗ)

ಸುಮಾಲಿನೀ ತತೋ ದೇವೀ ಗಿರಿಜಾನುಚರಾ ಸತೀ
ಕುಬೇರಪುತ್ರೀ ಸಂಹೃಷ್ಟಾ ಜಗೌ ದೇವಸ್ಯ ಪಾರ್ಶ್ವತಃ ॥೧೩೩॥

ಶ್ರುತ್ವಾ ಗೀತಂ ತದಾ ದೇವೀ ವ್ರೀಡಿತಾ ವರುಣಪ್ರಿಯಾ
ಅಭವದ್ದೇವದೇವಸ್ಯ ಸನ್ನಿಧೌ ಪದ್ಮಲೋಚನಾ ॥೧೩೪॥

ತಾಂ ವ್ರೀಡಿತಾಂ ಭವೋ ಜ್ಞಾತ್ವಾ ಪ್ರಸಿದ್ಧಾಂ ಗಾನವಿದ್ಯಯಾ
ಲಜ್ಜಾಂ ತು ಮಾ ಕೃಥಾ ದೇವೀತ್ಯೇವಂ ಪ್ರಾಹ ಚ ಶಂಕರಃ ॥೧೩೫॥

ಪುನರ್ಜಗೌ ತಥಾ ಸಾಽಪಿ ಜಗೌ ಸಾಽಪಿ ಸುಮಾಲಿನೀ
ಗಾನಾಮೃತಮಜಃ ಪೀತ್ವಾ ಪ್ರಹೃಷ್ಟಾತ್ಮಾ ಬಭೂವ ಸಃ ॥೧೩೬॥

ತತಃ—ಆಪ್ಪುರಮೇಲೆ ಕುಬೇರಪುತ್ರೀ — ಕುಬೇರನ ಕುಮಾರಿಯುಹಂಥಾ ಗಿರಿಜಾನುಚರಾ—ಪಾರ್ವತೀದೇವಿಯು ವಿಳಾಸಿನಿಯುಹಂಥಾ ಸತೀ— ಪತಿವ್ರತೆಯು-ಹಂಥಾ ಸುಮಾಲಿನೀದೇವೀ — ಸುಮಾಲಿನೀ ದೇವಿಯೆಂಬಾ (ಯುಕನು)ಕೆಯು ಸಂಹೃಷ್ಟಾ—ಸಂತೋಷಿಸಲುಪಟ್ಟಾ(ಯುಕನಾಗಿ)ತಳಾಗಿ ದೇವಸ್ಯ—ಪರಮೇಶ್ವರನ ಪಾರ್ಶ್ವತಃ—ಸಮೀಪದಲ್ಲಿ ಜಗೌ—ಹಾಡಿದಳು. ॥೧೩೩॥

ವರುಣಪ್ರಿಯಾ—ವರುಣನ ಸ್ತ್ರೀಯುಳಹಂಥಾ ಪದ್ಮಲೋಚನಾ — ಕಮಲ ಲೋಚನೆಯುಹಂಥಾ ದೇವೀ—ರಾಣಿವಾಸವು ಗೀತಂ—ಗಾನವನು ಶ್ರುತ್ವಾ—ಕೇಳಿ ತದಾ—ಆಗ ದೇವದೇವಸ್ಯ—ಪರಮೇಶ್ವರನ ಸನ್ನಿಧೌ — ಸಮೀಪದಲ್ಲಿ ವ್ರೀಡಿತಾ—(ನಾಚಿದಾಯುಕನು) ನಾಚಿದಾತಳು ಅಭವತ್—ಆದಳು. ॥೧೩೪॥

ಶಂಕರಃ—ಸುಖವನು ಮಾಡುತ್ತಿದ್ದಂಥಾ ಭವಃ—ಪರಮೇಶ್ವರನು ಗಾನ-ವಿದ್ಯಯಾ—ಗಾನವಿದ್ಯೆಯಿಂದ ಪ್ರಸಿದ್ಧಾಂ — ಪ್ರಸಿದ್ಧೆಯುಹಂಥಾ ತಾಂ — ಆ ವರುಣನ ಸ್ತ್ರೀಯುನು ಪೀಡಿತಾಂ—ನಾಚ್ಚಿ(ದಾಯುಕನನೆಂದು)ತಳೆಂದು ಜ್ಞಾತ್ವಾ—ಅರಿದು ಭೋ ದೇವಿ— ಎಲೆ ವರುಣನ ಸ್ತ್ರೀಯೆ ಲಜ್ಜಾಂ ತು— ನಾಚಿಕೆಯನು ಮಾಕೃಥಾ—ಮಾಡದಿರು ಇತಿ—ಹೀಂಗೆಂದು ಏವಂ ಚ—ಈ ಪ್ರಕಾರದಲ್ಲಿ ಪ್ರಾಹ —ನುಡಿದನು. ॥೧೩೫॥

ಸಾಽಪಿ—ಆ ವರುಣನ ರಾಣಿವಾಸವೂ ತಥಾ — ಪರಮೇಶ್ವರ ನಿರೂಪವ ಕೊಟ್ಟ ಹಾಂಗೆ ಪುನಃ—ಮರಳಿ ಜಗೌ—ಹಾಡಿದಳು. ಸಾಽಪಿ ಸುಮಾಲಿನೀ—ಆ ಸುಮಾಲಿನೀದೇವಿಯೂ ಜಗೌ—ಹಾಡಿದಳು. ಅಜಃ—ಜನ್ಮವಿಲ್ಲದೇ ಇದ್ದಂಥಾ ಸಃ—ಆ ಶಿವನು ಗಾನಾಮೃತಂ—ಸಂಗೀತವೆಂಬ ಅಮೃತವನು ಪೀತ್ವಾ—ಪಾನವ

ದ್ವಾರಿ ತಿಷ್ಠನ್ ಸಮಾದಾಯ ಭಿಕ್ಷಾಂ ವೈ ನೀಲಲೋಹಿತಃ
ಜಗಾಮ ತಸ್ಮಾದ್ದೇವೇಶಃ ಕುಬೇರಭವನಂ ಪ್ರತಿ ||೧೩೭||

*ಸ ರಾಜರಾಜಸ್ಯ ಪುರಂ ವಿಶಾಲಂ
ಕೈಲಾಸಕೂಟಪ್ರತಿಮೈರ್ವಿಮಾನೈಃ ।
ಸಂಯುಕ್ತಮಗ್ನ್ಯರ್ಕಶಶಿಪ್ರಭಾಭೈ-
ರ್ಯಯೌ ವೃಷಾಂಕಸ್ಸಹ ದೇವಸಂಘೈಃ ||೧೩೮||

‡ಹ್ರದೈರ್ವಿಶಾಲೈರ್ವಿವಿಧೈಶ್ಚ ಜುಷ್ಟಂ
ಹರ್ಮ್ಯೈರ್ವಿಶಾಲೈರ್ವಿವಿಧೈಶ್ಚ ಜುಷ್ಟಮ್ ।
[1]ಪ್ರಾಸಾದಪೂಗೈರ್ಧವಲೈರ್ವಿಚಿತ್ರೈಃ
ಸುವರ್ಣಚಿತ್ರೈರ್ಮಣಿಮಂಟಪೈಶ್ಚ ||೧೩೯||

ಮಾಡಿ ಪ್ರಹೃಷ್ಟಾತ್ಮಾ—ಸಂತೋಷಿಸಲುಪಟ್ಟ ಚಿತ್ತವನುಳ್ಳಾತನು ಬಭೂವ—ಆದನು. ||೧೩೬||

ದೇವೇಶಃ—ದೇವರ್ಕಳಿಗೊಡೆಯನಹಂಥಾ ನೀಲಲೋಹಿತಃ—ಪರಮೇಶ್ವರನು ದ್ವಾರಿ — ಬಾಗಿಲಲ್ಲಿ ತಿಷ್ಠನ್ — ಇರುತ್ತವು ಭಿಕ್ಷಾಂ ವೈ — ಭಿಕ್ಷೆಯನು ಸಮಾದಾಯ — ಈಸಿಕೊಂಡು ತಸ್ಮಾತ್ — ಆ ಠಾವಿನ ದೆಸೆಯಿಂದ ಕುಬೇರ ಭವನಂ ಪ್ರತಿ—ಕುಬೇರನ ಅರಮನೆಯನು ಕುರಿತು ಜಗಾಮ—ಎಯ್ದಿದನು. (೩೭

ವೃಷಾಂಕಃ — ವೃಷಭನ ಕುರುಹನುಳ್ಳಂಥಾ ಸಃ — ಆ ಪರಮೇಶ್ವರನು ದೇವಸಂಘೈಸ್ಸಹ — ದೇವರ್ಕ(ಳುಗ)ಳ ಸಮೂಹಂಗಳಿಂದ ಸಹಿತವಾಗಿ ಕೈಲಾಸಕೂಟ ಪ್ರತಿಮೈಃ—ಕೈಲಾಸಪರ್ವತದ ಶಿಖರಂಗಳಿಗೆ ಸಮಾನವಾಗುತ್ತಿರ್ದಂಥಾ ಅಗ್ನ್ಯರ್ಕ-ಶಶಿಪ್ರಭಾಭೈಃ— ಅಗ್ನಿ) ಸೂರ್ಯ ಚಂದ್ರರುಗಳ ಕಾಂತಿಗೆ ಸಮಾನವಾಗುತ್ತಿದ್ದಂಥಾ ವಿಮಾನೈಃ=ಪುಷ್ಪಕಂಗಳಿಂದ ಸಂಯುಕ್ತಂ—ಕೂಡಲುಪಟ್ಟಂಥಾ ವಿಶಾಲಂ—ವಿಸ್ತಾರವಹಂಥಾ ರಾಜರಾಜಸ್ಯ—ಕುಬೇರನ ಪುರಂ= ಪಟ್ಟಣವನು ಯಯೌ — ಎಯ್ದಿದನು. ||೧೩೮||

ವಿವಿಧೈಃ — ನಾನಾ ಪ್ರಕಾರವಹಂಥಾ ವಿಶಾಲೈಃ — ವಿಸ್ತೀರ್ಣವಹಂಥಾ ಹ್ರದೈಶ್ಚ—ಕೊಳಂಗಳ ಮಡುಗಳಿಂದ(ಲು)ವು ಜುಷ್ಟಂ — ಮನೋಹರವಹಂಥಾ

---

* ಉಪೇಂದ್ರವಜ್ರ ವೃತ್ತಂ ॥ ‡ ಉಪಜಾತಿವೃತ್ತಂ

1 ಪ್ರಾಸಾದಪೂರ್ಣೈ (ಕ)

*ಯಯೌ ಕಪಾಲೀ ಭಗನೇತ್ರಹಂತಾ
ವಿಭೂಷಿತಃ ಪನ್ನಗಭೂಷಣೇನ ।
ದೇವೈಶ್ಚ ಸಾರ್ಧಂ ಗಣಪೈಶ್ಚ ವಂದ್ಯಃ
ಸಹಾಪ್ಸರೋಭಿರ್ಜಗತಾಂ ವಿಧಾತಾ ॥೧೪೦॥

*ಶ್ರುತ್ವಾ ಕುಬೇರಃ ಪರವೀರಹಂತಾ
[1]ಪ್ರಹೃಷ್ಟಚಿತ್ತಃ [1]ಪರಮೇಶ[2]ಭೃತ್ಯಃ[2] ।
ಬಭೂವ ರಕ್ಷೋಭಿರದೀನಸತ್ತ್ವಃ
ಸಸಂಭ್ರಮಂ ಸರ್ವಗತಸ್ಯ ಮಿತ್ರಮ್ ॥೧೪೧॥

ವಿಶಾಲೈಃ—ವಿಸ್ತರವಹಂಥಾ ವಿವಿಧೈಃ—ನಾನಾ ಪ್ರಕಾರವಹಂಥಾ ಹರ್ಮ್ಯೈಶ್ಚ—ಉಪ್ಪರಿಗೆಗಳಿಂದವೂ ವಿಚಿತ್ರೈಃ—ಆಶ್ಚರ್ಯವಹಂಥಾ ಧವಲೈಃ=ಬಿಳಿದಾಗಿದ್ದಂಥಾ ಪ್ರಾಸಾದಪೂಗೈಃ—ಅರಮನೆಯು ಬಹಳಂಗಳಿಂದವು. ಸುವರ್ಣಚಿತ್ರೈಃ—ಸುವರ್ಣಮಯುವಹ ಚಿತ್ರಂಗಳನುಳ್ಳಂಥಾ ಮಣಿಮಂಟಪೈಶ್ಚ — ರತ್ನಮಂಟಪಂಗಳಿಂದವು ಜುಷ್ಟಂ—ಒಪ್ಪುತ್ತಿದ್ದಂಥಾ ಅಳಕಾಪುರಿಯನು,

ಜಗತಾಂ—ಲೋಕಂಗಳಿಗೆ ವಿಧಾತಾ — ಒಡೆಯನಹಂಥಾ ಕಪಾಲೀ — ಕಪಾಲವ ಧರಿಸಿದಂಥಾ ಭಗನೇತ್ರಹಂತಾ — ಭಗಾದಿತ್ಯನ ಕಣ್ಣ ಮೀಂಟಿದಂಥಾ ಪನ್ನಗಭೂಷಣೇನ — ಸರ್ಪಾಭರಣದಿಂದ ವಿಭೂಷಿತಃ — ಅಲಂಕರಿಸಲುಪಟ್ಟಂಥಾ ಪರಮೇಶ್ವರನು ದೇವೈಶ್ಚ—ದೇವರ್ಕಳಿಂದ ಸಾರ್ಧಂ—ಸಹಿತವಾಗಿ ಗಣಪೈಶ್ಚ—ಗಣೇಶ್ವರರುಗಳಿಂದವೂ ಅಪ್ಸರೋಭಿಸ್ಸಹ—ಅಪ್ಸರರುಗಳಿಂದ ಸಹಿತವಾಗಿ ವಂದ್ಯಃ —ನಮಸ್ಕರಿಸಿಕೊಳಲುಪಟ್ಟಾತನಾಗಿ ಯಯೌ—ಎಯ್ದಿದನು. ॥೧೪೦॥

ಪರವೀರಹಂತಾ — ವೈರಿಭಟರುಗಳ ಕೊಲುತಿದ್ದಂಥಾ ಪರಮೇಶಭೃತ್ಯಃ—ಪರಮೇಶ್ವರನ ಸೇವಕನಹಂಥಾ ಸರ್ವಗತಸ್ಯ—ಪರಿಪೂರ್ಣನಹಂಥಾ ಮಿತ್ರಂ = ಶಿವನ ಸಂಗಡಿಗನಹಂಥಾ ರಕ್ಷೋಭಿಃ—ರಾಕ್ಷಸರುಗಳೊಡನೆ ಅದೀನಸತ್ತ್ವಃ — ದೈನ್ಯವಿಲ್ಲದ ಸತ್ತ್ವವನುಳ್ಳಂಥಾ ಕುಬೇರಃ — ಕುಬೇರನು ಶ್ರುತ್ವಾ — ಕೇಳಿ ಪ್ರಹೃಷ್ಟಚಿತ್ತಃ— ಅತಿ ಸಂತೋಷಿಸಲುಪಟ್ಟ ಚಿತ್ತವನುಳ್ಳಾತನಾಗಿ ಸಸಂಭ್ರಮಂ — ಸಂಭ್ರಮದಿಂದ ಸಹಿತವಹಗೋಅಹಗೆ (ಸಹಿತವಹೆಗಹುದಹಗೆ) ಬಭೂವ —ಆದನು. ॥೧೪೧॥

---

* ಉಪಜಾತಿವೃತ್ತಂ

1 ಪ್ರಹೃಷ್ಟಸತ್ತ್ವಃ (ಗ.ಖ) ಮೂಲ ಮಾತ್ರ. 2 ಭಕ್ತಃ (ಘ)

*ಅಲಂಚಕಾರಾಶು ಪುರಂ ವಿಚಿತ್ರಂ
ಧ್ವಜೈಶ್ಚ ರತ್ನೈರ್ವಿವಿಧೈಶ್ಚ ಚಿತ್ರೈಃ ।
ಹೈಮೈಃ ಸತೋಯೈಶ್ಚ ತಥೈವ ಕುಂಭೈಃ
ಕಲ್ಪಪ್ರಸೂನೈಶ್ಚ ತದಂಶುಕೈಶ್ಚ ॥೧೪೨॥

*ಅಶ್ವತ್ಥಪತ್ರೈಶ್ಚ ತಥೈವ [1]ಹೈಮೈಃ
ಸ್ಥೂಲೈಶ್ಚ ಧೂಪೈರ್ವಿವಿಧೈರ್ವಿಧೂಮೈಃ ।
ಅಲಂಚಕಾರ ದ್ರವಿಣಾಧಿಪಸ್ತ-
ತ್ಪುರಂ ಲಸತ್ಕಾಂಚನರತ್ನಜುಷ್ಟವತ್ ॥೧೪೩॥

*ವಿವೇಶ ದೇವೋऽಪಿ ಪುರಂ ತದಾನೀಂ
ದೇವೇಂದ್ರಮುಖ್ಯೈಃ ಸುರಸಿದ್ಧಸಂಘೈಃ
ಸಾರ್ಧಂ ಕುಬೇರಸ್ಯ ಯಥಾ ಗಿರೀಂದ್ರಂ
ಕೈಲಾಸಮದ್ರೀಂದ್ರಸುತಾಪತಿಸ್ತವತ್ ॥೧೪೪॥

ರತ್ನೈಃ —ರತ್ನಮಯುವಹಂಥಾ ಧ್ವಜೈಶ್ಚ—ಧ್ವಜಂಗಳಿಂದಲೂ ವಿವಿಧೈಃ— ನಾನಾಪ್ರಕಾರವಹಂಥಾ ಚಿತ್ರೈಶ್ಚ — ಚಿತ್ರಂಗಳಿಂದಲು ತಥೈವ — ಹಾಂಗೆ ಸತೋಯೈಃ—ಉದಕಂಗಳಿಂದ ಸಹಿತವಹಂಥಾ ಹೈಮೈಃ–ಸುವರ್ಣಮಯುವಹಂಥಾ ಕುಂಭೈಶ್ಚ—ಕಳಸಂಗಳಿಂದವೂ ತಥಾ—ಹಾಂಗೆ ಕಲ್ಪಪ್ರಸೂನೈಶ್ಚ — ಕಲ್ಪವೃಕ್ಷದ ಹೂಗಳಿಂದಲು ತದಂಶುಕೈಶ್ಚ — ಆ ಕಲ್ಪವೃಕ್ಷದ ವಸ್ತ್ರಂಗಳಿಂದಲು ಪುರಂ — ಪಟ್ಟಣವನು ಆಶು — ಬೇಗ ವಿಚಿತ್ರಂ — ಆಶ್ಚರ್ಯವಾಗಿ ಅಲಂಚಕಾರ = ಅಲಂಕರಿಸಿದನು. ॥೧೪೨॥

ದ್ರವಿಣಾಧಿಪಃ—ಧನಪತಿಯುಹಂಥಾ ಕುಬೇರನು ಲಸತ್ಕಾಂಚನರತ್ನಜುಷ್ಟಂ —ಒಪ್ಪುತ್ತಂ ಇರ್ದ ಸುವರ್ಣರತ್ನಂಗಳಿಂದ [2]ಕೆತ್ತಿಸಿದಂಥಾ ತತ್ಪುರಂ—ಆ ಅಳಕಾ- ಪುರಿಯನು ತಥೈವ — ಆ ಪ್ರಕಾರದಲೇ ಹೈಮೈಃ — ಸುವರ್ಣಮಯುವಹಂಥಾ ಸ್ಥೂಲೈಃ — ದೊಡ್ಡಿತ್ತಹಂಥಾ ಅಶ್ವತ್ಥಪತ್ರೈಶ್ಚ — ಅರಳಿಯ ಎಲೆಗಳಿಂದಲೂ ವಿಧೂಮೈಃ — ಹೊಗೆ ಇಲ್ಲದೇ ಇದ್ದಂಥಾ ವಿವಿಧೈಃ — ಹಲವು ಪ್ರಕಾರವಹಂಥಾ ಧೂಪೈಶ್ಚ = ಧೂಪಂಗಳಿಂದವೂ ಅಲಂಚಕಾರ = ಅಲಂಕಾರವ ಮಾಡಿದನು. ॥೧೪೩॥

ಅದ್ರೀಂದ್ರಸುತಾಪತಿಃ = ಗಿರಿರಾಜನ ಕುಮಾರಿಯಹ ಪಾರ್ವತೀಪತಿಯುಹಂಥಾ ದೇವೋऽಪಿ = ಪರಮೇಶ್ವರನು ತದಾನೀಂ = ಆಗ ದೇವೇಂದ್ರಮುಖ್ಯೈಃ =

---

* ಉಪಜಾತಿವೃತ್ತಂ [1] ಹೇಮೈಃ (ಘ) [2] ತೆತ್ತಿಸಿ (ಖ)

ನಿರ್ಗತ್ಯ ಗೇಹಾದ್ಧನದಃ ಪ್ರಣಿಪತ್ಯ ಮಹೇಶ್ವರಮ್
ಸಸ್ವಜೇ ಭಗವಾನೀಶಂ ಬಾಹುಭ್ಯಾಮಾರ್ತಿಹಾರಿಣಮ್ ||೧೪೫||

ತತಃ ಪತ್ನೀ ಕುಬೇರಸ್ಯ ದೃಷ್ಟ್ವಾ ನತ್ವಾ ಮಹೇಶ್ವರಮ್
ಅತೀವ ಹೃಷ್ಟಚಿತ್ತಾಽಭೂತ್ಕಿಂಚಿಲ್ಲಜ್ಜಾವೃತಾನನಾ ||೧೪೬||

ಅಂಗನಾಶ್ಚ [1]ತಥಾ[1] ನತ್ವಾ ಮುಹುರ್ದೇವೇಶಮಾಗತಮ್
ಜಗುಶ್ಚ ನನೃತುಶ್ಚೈವ ಸಂಭ್ರಾಂತಾ ಭವದರ್ಶನಾತ್ ||೧೪೭||

ದೇವೇಂದ್ರ ಮೊದಲಾದಂಥಾ ಸುರಸಿದ್ಧಸಂಘೈಃ = ದೇವರ್ಕಳ ಸಿದ್ಧರ ಸಮೂಹಂ-ಗಳಿಂದ ಸಾರ್ಧಂ = ಸಹಿತವಾಗಿ ಕುಬೇರಸ್ಯ = ಕುಬೇರನ ಪುರಂ = ಪಟ್ಟಣವನ್ನು ವಿವೇಶ = ಹೊಕ್ಕನು. ತದ್ಯಥಾ = ಅದು ಹೇಂಗೆಂದರೆ ಗಿರೀಂದ್ರಂ = ಪರ್ವತಂ ಗಳಿಗೊಡೆಯನಹಂಥಾ ತಂ ಕೈಲಾಸಂ ಯಥಾ = ಆ ಕೈಲಾಸವನೆಹಗಹಗೆ. ||೧೪೪||

ಭಗವಾನ್ = ಐಶ್ವರ್ಯವನುಳ್ಳಂಥಾ ಧನದಃ = ಕುಬೇರನು ಗೇಹಾತ್ = ಅರಮನೆಯ ದೆಸೆಯಿಂದ ನಿರ್ಗತ್ಯ = ಹೊರವಂಟು (ಹೊರಬಂದು) ಆರ್ತಿಹಾರಿಣಂ = ಕ್ಲೇಶವನು ಕೆಡಿಸುತ್ತಿದ್ದಂಥಾ ಈಶಂ = ಒಡೆಯನಹಂಥಾ ಮಹೇಶ್ವರಂ = ಪರಮೇಶ್ವರನನು ಪ್ರಣಿಪತ್ಯ = ನಮಸ್ಕರಿಸಿ ಬಾಹುಭ್ಯಾಂ = ತೋಳುಗಳಿಂದ ಸಸ್ವಜೇ = ತಕ್ಕೈಸಿಕೊಂಡನು. ಷ್ವಜ–ಪರಿಷ್ವಂಗೇ ಇತಿ ಧಾತುಃ. ||೧೪೫||

ತತಃ = ಅನ್ನರ ಮೇಲೆ ಕುಬೇರಸ್ಯ = ಕುಬೇರನ ಪತ್ನೀ = ಹೆಂಡತಿಯು (ರಾಣಿವಾಸವು) ಮಹೇಶ್ವರಂ = ಪರಮೇಶ್ವರನನು ದೃಷ್ಟ್ವಾ = ಕಂಡು ನತ್ವಾ = ನಮಸ್ಕರಿಸಿ ಕಿಂಚಿಲ್ಲಜ್ಜಾವೃತಾನನಾ = ಒಂದಿಷ್ಟು ನಾಚಿಕೆಯಿಂದ ಮುಸುಕಲು ಪಟ್ಟ ಮುಖವನುಳ್ಳಾತಳಾಗಿ ಅತೀವ ಹೃಷ್ಟಚಿತ್ತಾ = ಅತ್ಯಂತ ಸಂತೋಷಿಸಲುಪಟ್ಟ ಚಿತ್ತವನುಳ್ಳ (ಯುಕ್ತನು) ತಳು ಅಭೂತ್ = ಆದಳು. ||೧೪೬||

ಆಗತಂ = ಬಂದಂಥಾ ದೇವೇಶಂ = ಪರಮೇಶ್ವರನನು ಕುರಿತು ಅಂಗನಾಶ್ಚ = ಸ್ತ್ರೀಯರುಗಳು ತಥಾ = ಆ ಮರಿಯಾದೆಯುಲಿ ನತ್ವಾ = ನಮಸ್ಕರಿಸಿ ಭವದರ್ಶನಾತ್ = ಪರಮೇಶ್ವರನ ದರ್ಶನದ ದೆಸೆಯಿಂದ ಸಂಭ್ರಾಂತಾಃ = ಸಂಭ್ರಮ ವನುಳ್ಳವರುಗಳಾಗಿ ಮುಹುಃ = ಅಡಿಗಡಿಗೆ ಜಗುಶ್ಚ = ಹಾಡಿದರು. ನನೃತುಶ್ಚೈವ = ನೃತ್ಯವನಾಡಿದರು. ||೧೪೭||

---

1 ತದಾ (ಘ)

[1]ನರನಾರೀ[1]ಸಮಾಕೀರ್ಣಂ ರಾಜಮಾರ್ಗಮಭೂತ್ತದಾ
ಸಸೃಜುಃ ಪುಷ್ಪವರ್ಷಾಣಿ ರಾಜಮಾರ್ಗೇ ವರಾಂಗನಾಃ ||೧೪೮||

ಭ್ರಮರಾವಲಿಯುಕ್ತಾನಿ ಪ್ರಾಸಾದೋಪರಿ ಸಂಸ್ಥಿತಾಃ
ಅಕ್ಷತಾಂಶ್ಚ ತಥಾ ಕಾಶ್ಚಿದಂಬುಮಿಶ್ರಾಂಶ್ಚ ಚಿಕ್ಷಿಪುಃ ||೧೪೯||

* ಸೂತ ಉವಾಚ

ಹರಮೂರ್ಧ್ನಿ ತಥಾ ವಿಪ್ರಾಃ [2]ಗಂಗಾಚಂದ್ರಾಂಕಿತೇ[2] ಶಿವೇ
ನಿರ್ಯೂಹಸ್ಥಾಸ್ತದಾ ಕಾಶ್ಚಿನ್ನನೃತುಃ ಪದ್ಮಲೋಚನಾಃ ||೧೫೯||

ತದಾ = ಆಗ ರಾಜಮಾರ್ಗಂ = ರಾಜಬೀದಿ ನರನಾರೀಸಮಾಕೀರ್ಣಂ = ಪುರುಷರು ಸ್ತ್ರೀಯರುಗಳಿಂದ ಮುಸುಕಲುಪಟ್ಟಂಥಾದ್ದು ಅಭೂತ್ = ಆಯಿತ್ತು. ವರಾಂಗನಾಃ = ಸೌಂದರ್ಯವನುಳ್ಳಂಥಾ ಸ್ತ್ರೀಯರುಗಳು ರಾಜಮಾರ್ಗೇ = ರಾಜಬೀದಿಯಲ್ಲಿ ಭ್ರಮರಾವಲಿಯುಕ್ತಾನಿ = ತುಂಬಿಗಳ ಸಮೂಹದಿಂದ ಕೂಡಲುಪಟ್ಟಂಥಾ ಪುಷ್ಪವರ್ಷಾಣಿ = ಹೂಮಳೆಗಳನು ಸಸೃಜುಃ = ಸುರಿದರು. ಪ್ರಾಸಾದೋಪರಿ = ಉಪ್ಪರಿಗೆಯ ಮೇಲೆ ಸಂಸ್ಥಿತಾಃ = ಇದ್ದಂಥಾ ಕಾಶ್ಚಿತ್ = ಕೆಲಬರು ಸ್ತ್ರೀಯರು ತಥಾ = ಹಾಂಗೆ ಅಂಬುಮಿಶ್ರಾಣಿ = ಉದಕಮಿಶ್ರವಹಂಥಾ ಅಕ್ಷತಾಂಶ್ಚ = ಅಕ್ಷತೆಗಳನು ಚಿಕ್ಷಿಪುಃ = ತಳಿದರು (ಸುರಿದರು). ||೧೪೮–೧೪೯||

ಸೂತ ಉವಾಚ = ಸೂತ್ರ ಮುನೀಶ್ವರನ ವಾಕ್ಯವು

ಭೋ ವಿಪ್ರಾಃ ! = ಎಲೈ ನೈಮಿಷಾರಣ್ಯವಾಸಿಗಳಹ ಋಷಿಗಳಿರಾ ! ತಥಾ = ಹಾಂಗೆ ನಿರ್ಯೂಹಸ್ಥಾಃ = ನೆಲೆ ನೆಲೆಗಳಲ್ಲಿದ್ದಂಥಾ ಕಾಶ್ಚಿತ್ = ಕೆಲವರು ಪದ್ಮಲೋಚನಾಃ = ಕಮಲಲೋಚನೆಯರಹಂಥಾ ಸ್ತ್ರೀಯರುಗಳು ಗಂಗಾಚಂದ್ರಾಂಕಿತೇ = ಗಂಗೆ ಚಂದ್ರರಿಂದಂಕಿಸಲುಪಟ್ಟಂಥಾ ಶಿವೇ = ಒಪ್ಪುತ್ತಿದ್ದಂಥಾ ಹರಮೂರ್ಧ್ನಿ = ಪರಮೇಶ್ವರನ ಶಿರಸ್ಸಿನಲ್ಲಿ ತದಾ = ಆಗ ಅಂಬುಮಿಶ್ರಾಣಿ = ಉದಕಮಿಶ್ರವಹಂಥಾ ಅಕ್ಷತಾಂಶ್ಚ = ಸೇಸೆಗಳನು ಚಿಕ್ಷಿಪುಃ = ತಳಿದರು. ಅಂಬುಮಿಶ್ರಿತಗಳಾದ ಅಕ್ಷತೆಗಳನ್ನು ತಳಿದರು. ನನೃತುಃ = ನೃತ್ಯವನಾಡಿದರು. ||೧೫೦||

---

[1] ಸುರನಾರೀ (ಘ)

* ಇಲ್ಲಿ ಮೂರು ಶ್ಲೋಕಗಳಿದ್ದು ಕುಳಕವೆನಿಸುವುದಿಲ್ಲ. ಕಲಾಪಕವೇ (?)

[2] ಚಂದ್ರಗಂಗಾಂಕಿತೇ (ಘ) ಮೂಲಪಾಠ ಗಂಗಾಚಂದ್ರಾಂಕಿತೇ (ಘ) ಪಾಠಾಂತರ.

*ಕಾಶ್ಚಿದ್ವೀಣಾಂ ವಾದಯಂತಿ ಕಾಶ್ಚಿತ್ತೂರ್ಯಾಣಿ ಕೋಪನಾಃ
ತತ್ರ ಕಾಚಿತ್ ಭವಂ ದೃಷ್ಟ್ವಾ [1]ಸಂಭ್ರಾಂತಾ[1] ವಿವಶಾ ಸತೀ ||೧೫೧||

*ಅತಿಷ್ಠತ ಗತಪ್ರಾಣಾ ನಿಶ್ಚಲಾ ಕಮಲಾನನಾ
[2]ತಸ್ಯಾ ಭಾವಂ ಭವೋ ಜ್ಞಾತ್ವಾ[2] ಪ್ರಸನ್ನೋಽಭವದವ್ಯಯಃ ||೧೫೨||

ತತಸ್ತಸ್ಮಿನ್ಗತೇ ಸಾಧ್ವೀ ತ್ಯಕ್ತ್ವಾ ದೇಹಂ ವರಾಂಗನಾ
ವಿವೇಶ ಶರ್ವಂ ಸರ್ವಜ್ಞಂ ಸರ್ವಕಾರಣಕಾರಣಮ್ ||೧೫೩||

ಸ್ವಶಕ್ತಿಂ ದರ್ಶಯಂತೀಷು ನಾರೀಷು ಪರಮೇಶ್ವರಃ
ವಿವೇಶ ಪರಮಂ ಗೇಹಂ ಕುಬೇರಸ್ಯ ಶಶಿಪ್ರಭಮ್ ||೧೫೪||

ತತ್—ಆ ತೇಜಸ್ಸು ಹಿರಣ್ಮಯಂ — ಸುವರ್ಣಮಯವು ನ — ಅಲ್ಲ. ರೌಪ್ಯಂ—ಬೆಳ್ಳಿಯ ವರ್ಣವು ನ—ಅಲ್ಲ. ಅಗ್ನಿಸನ್ನಿಭಂ — ಅಗ್ನಿಗೆ ಸಮಾನವ ಹಂಥಾದು ನ—ಅಲ್ಲ. ತಟಿಚ್ಚಂದ್ರಸದೃಶಂ—ಮಿಂಚುಚಂದ್ರರುಗಳಿಗೆ ಸಮಾನ ವಹಂಥಾದು ನ—ಅಲ್ಲ. ಐಶ್ವರಂ — ಈಶ್ವರನ ಸಂಬಂಧವಹಂಥಾ ತೇಜಸ್ಸು ಅಭೂತೋಪಮಂ — ಹುಟ್ಟಲುಪಡದೇ ಇದ್ದ ಉಪಮಾನವನುಳ್ಳಂಥಾದಾಯಿತು-ತದಾ—ಆಗ ಸರ್ವಾಣಿ ತೇಜಾಂಸಿ—ಸಮಸ್ತ ತೇಜಸ್ಸುಗಳು ಶಾಂಕರೇ—ಶಿವ-ಸಂಬಂಧವಹಂಥಾ ತಸ್ಮಿನ್—ಆ ತೇಜಸ್ಸಿನಲ್ಲಿ ಲೀನಾನಿ—ಅಡಗಿದವು. ॥೮೦॥

ನೃಸಿಂಹವಕ್ತ್ರನೇತ್ರಾಭ್ಯಾಂ—ನರಸಿಂಹನ ಮುಖನಯನಂಗಳಿಂದ ವಿನಿರ್ಗತಂ —ಹೊರವಂಟಂಥಾ ತೇಜಃ — ತೇಜಸ್ಸು ಸೂಕ್ಷ್ಮವಹಂಥಾದಾಗಿ ಶಿವಾತ್ಮಕೇ —ಶಿವಸ್ವರೂಪವಹಂಥಾ ತೇಜಸ್ಸಿನಲ್ಲಿ ಕ್ಷಣಾಚ್ಚ — ಕ್ಷಣಮಾತ್ರದ ದೆಸೆಯಿಂದ

ತದವ್ಯಕ್ತಂ ಮಹತ್ತೇಜೋ ವ್ಯಕ್ತಂ ಸಮಭವತ್ತತಃ
ರುದ್ರಸಾಧಾರಣೈಶ್ಚಿಹ್ನೈಃ ಚಿಹ್ನಿತಂ ವಿಕೃತಾಕೃತಿ ||೮೨||

ತತಶ್ಶರಭರೂಪೇಣ ಸುವ್ಯಕ್ತಃ ಪರಮೇಶ್ವರಃ
ಪಶ್ಯತಾಂ ಸರ್ವದೇವಾನಾಂ ಜಯಶಬ್ದಾದಿಮಂಗಳೈಃ ||೮೩||

ಸಹಸ್ರಬಾಹುರ್ಜಟಿಲಃ ಚಂದ್ರಾರ್ಧಕೃತಶೇಖರಃ
ಮೃಗಸ್ತ್ವರ್ಧಶರೀರೇಣ ಪಕ್ಷಾಭ್ಯಾಂ ಚಂಚುನಾ ದ್ವಿಜಃ ||೮೪||

ಅತಿತೀಕ್ಷ್ಣಮಹಾದಂಷ್ಟ್ರೋ ವಜ್ರತುಲ್ಯನಖಾಯುಧಃ
ಕಂಠೇ ಕಾಲೋ ಮಹಾಪುಚ್ಛಃ ಚತುಷ್ಪಾದ್ವಹ್ನಿಸನ್ನಿಭಃ ||೮೫||

ಲೀನಂ—ಅಡಗಿತ್ತು. ಕಥಮಿವ — ಅದು ಹೇಂಗೆ ಸೂ ಎಂದಡೆ ಹುತಾಶನೇ — ಯಜ್ಞಪುರುಷನಲ್ಲಿ ರಕ್ತ ಇವ—ರಕ್ತವರ್ಣವೆಹಗಹಗೆ. ||೮೧||

ಅವ್ಯಕ್ತಂ — ಅರಿಯಬಾರದೇ ಇದ್ದಂಥಾ ಮಹತ್ — ಉತ್ಕೃಷ್ಟವಹಂಥಾ ತತ್ತೇಜಃ—ಆ ತೇಜಸ್ಸು ತತಃ—ಅಷ್ಟರಮೇಲೆ ರುದ್ರಸಾಧಾರಣೈಃ — ರುದ್ರಂಗೆ ಸಮಾನವಹಂಥಾ ಚಿಹ್ನೈಃ—ಕುರುಹುಗಳಿಂದ ಚಿಹ್ನಿತಂ— ಅಂಕಿಸಲುಪಟ್ಟಂಥಾ ವಿಕೃತಾಕೃತಿ—ಭಯಂಕರವಹ ಆಕಾರವನುಳ್ಳಂಥಾದಾಗಿ ವ್ಯಕ್ತಂ — ಅರಿಯಬಹಂಥಾದು ಸಮಭವತ್—ಆಯಿತ್ತು. ||೮೨||

ತತಃ—ಅಷ್ಟರ ಮೇಲೆ ಪರಮೇಶ್ವರಃ — ಪರಮೇಶ್ವರನು ಪಶ್ಯತಾಂ — ನೋಡುತ್ತಿದ್ದಂಥಾ ಸರ್ವದೇವಾನಾಂ — ಸಮಸ್ತದೇವರ್ಕಳ ಜಯಶಬ್ದಾದಿಮಂಗಳೈಃ—ಜಯಜಯ ಎಂಬ ಶಬ್ದ ಮೊದಲಾದಂಥಾ ಮಂಗಳಂಗಳೊಡನೆ ಶರಭರೂಪೇಣ—ಶರಭರೂಪಿಂದ ಸುವ್ಯಕ್ತಃ—ಲೇಸಾಗಿ ಕಾಣಲುಪಟ್ಟನು. ||೮೩||

ಸಹಸ್ರಬಾಹುಃ—ಸಾವಿರಭುಜಂಗಳನುಳ್ಳಂಥಾ ಜಟಿಲಃ — ಜಟಾಮಕುಟವನುಳ್ಳಂಥಾ ಚಂದ್ರಾರ್ಧಕೃತಶೇಖರಃ—ಅರ್ಧಚಂದ್ರನಿಂದ ಮಾಡಲುಪಟ್ಟ ಚೂಡಾಮಣಿಯನುಳ್ಳಂಥಾ ಅರ್ಧಶರೀರೇಣ—ಅರ್ಧದೇಹದಿಂದ ಮೃಗಃ—ಮೃಗವಹಂಥಾ ಪಕ್ಷಾಭ್ಯಾಂ—ಪಖ್ಖಂ [ಪಕ್ಷಂ]ಗಳಿಂದ ಚಂಚುನಾ — ಚಂಚುಪುಟದಿಂದ ದ್ವಿಜಃ —ಪಕ್ಷಿಯಹಂಥಾ, ||೮೪||

ಅತಿತೀಕ್ಷ್ಣ ಮಹಾದಂಷ್ಟ್ರಃ — ಅತಿ ಹರಿತವಹ ದೊಡ್ಡಿಹ ದಾಡೆಗಳನುಳ್ಳಂಥಾ ವಜ್ರ ತುಲ್ಯನಖಾಯುಧಃ—ವಜ್ರಕ್ಕೆ ಸಮಾನವಹ ಉಗುರುಗಳೇ ಆಯುಧಂಗಳಾಗಿ ಉಳ್ಳಂಥಾ ಕಂಠೇ—ಕೊರಳಿನಲ್ಲಿ ಕಾಲಃ — ಕಪ್ಪುವರ್ಣವನುಳ್ಳಂಥಾ ಮಹಾ-

ಅಧೋಗತಚತುಷ್ಪಾದಃ ಉಪರಿಷ್ಟಾಚ್ಚತುಷ್ಪದಃ
ಯುಗಾಂತೋದ್ಯತಜೀಮೂತಭೀಮಗಂಭೀರನಿಸ್ವನಃ

ಸಮಸತ್ತ್ವ ಪ್ರವೃತ್ತಾಗ್ನಿವ್ಯಾವೃತ್ತನಯನತ್ರಯಃ
ಸ್ಪಷ್ಟದಂಷ್ಟ್ರಾಧರೋಷ್ಠಶ್ಚ ಹುಂಕಾರಮುಖರೋ ಹರಃ ||೮೬||

ಹರಿಸ್ತದ್ದರ್ಶನಾದೇವ ವಿನಷ್ಟಬಲವಿಕ್ರಮಃ
ಬಭೂವೋದ್ಯತ್ಸಹಸ್ರಾಂಶುಹತಖದ್ಯೋತವದ್ಭೃಶಮ್ ||೮೭||

ಅಥ ಪ್ರಹೃತ್ಯ ಪಕ್ಷಾಭ್ಯಾಂ ನಾಭಿಂ ಪದ್ಭ್ಯಾಂ ವ್ಯದಾರಯತ್
ಪಾದಾವಾಬಧ್ಯ ಪುಚ್ಛೇನ ಬಾಹುಭಿರ್ಬಾಹುಮಂಡಲಮ್ ||೮೯||

ಪುಚ್ಛಃ—ದೊಡ್ಡದಹ ಬಾಲವನುಳ್ಳಂಥಾ ವಹ್ನಿಸನ್ನಿಭಃ—ಅಗ್ನಿಗೆ ಸಮಾನವಹಂಥಾ ಚತುಷ್ಪಾತ್—ನಾಲ್ಕು ಕಾಲುಗಳನುಳ್ಳಂಥಾ ||೮೫||

ಅಧೋಗತಚತುಷ್ಪಾದಃ—ಕೆಳಗೆ ಎಯ್ದಲುಪಟ್ಟ ನಾಲ್ಕು ಪಾದಂಗಳನುಳ್ಳಂಥಾ ಉಪರಿಷ್ಟಾತ್ — ಮೇಲೆ ಚತುಷ್ಪಾದಃ — ನಾಲ್ಕು ಕಾಲುಗಳನುಳ್ಳಂಥಾ ಯುಗಾಂತೋದ್ಯತಜೀಮೂತಭೀಮಗಂಭೀರನಿಸ್ವನಃ— ಯುಗದ ಕಡೆಯಲ್ಲಿ ಉದ್ಯೋಗವನುಳ್ಳ ಮೇಘದೋಪಾದಿ ಭಯಂಕವಹ ಗಂಭೀರಧ್ವನಿಯನುಳ್ಳಂಥಾ,

ಸಮಸತ್ತ್ವಪ್ರವೃತ್ತಾಗ್ನಿವ್ಯಾವೃತ್ತನಯನತ್ರಯಃ—[1]ಸಮಾನವಹ ಸತ್ತ್ವದ[1] ವರ್ತನೆಯನುಳ್ಳ ಅಗ್ನಿಯೋಪಾದಿ ತಿರುಗಲುಪಟ್ಟ ಕಣ್ಣುಗಳು ಮೂರನುಳ್ಳಂಥಾ ಸ್ಪಷ್ಟದಂಷ್ಟ್ರಾಧರೋಷ್ಠಃ—ವ್ಯಕ್ತವಹ ದಾಡೆ ಅಧರ ಓಷ್ಠಂಗಳನ್ನುಳ್ಳಂಥಾ ಹರಶ್ಚ—ಶರಭರೂಪನುಳ್ಳಂಥಾ ಶಿವನು ಹುಂಕಾರಮುಖರಃ — ಹುಂಕಾರದಿಂದ ನಿಷ್ಠುರವ ಹಂಥಾತನಾದನು. ||೮೬||

ಹರಿಃ—ನರಸಿಂಹನು ತದ್ದರ್ಶನಾದೇವ—ಆ ಶರಭನ ಕಂಡುದರ ದೆಸೆಯಿಂದವೇ ವಿನಷ್ಟಬಲವಿಕ್ರಮಃ—ಕೆಡಲುಪಟ್ಟ ಸತ್ತ್ವಪರಾಕ್ರಮವನುಳ್ಳಾತನಾಗಿ ಭೃಶಂ—ಅತ್ಯಂತ ಉದ್ಯತ್ಸಹಸ್ರಾಂಶುಹತಖದ್ಯೋತವತ್—ಉದಯವಾಗುತ್ತಿದ್ದ ಸಹಸ್ರ ಕಿರಣನಹ ಸೂರ್ಯನಿಂದ ಕೆಡಲುಪಟ್ಟ ಮಿಂಚುಬುಳುವಿನೋಪಾದಿ ಬಭೂವ — ಆದನು. ||೮೭||

[2]ಅಥ—ಅನಂತರದಲ್ಲಿ ಪಕ್ಷಾಭ್ಯಾಂ—ಪಕ್ಷಂಗಳಿಂದ ಪ್ರಹೃತ್ಯ—ಹೊಡದು ಪದ್ಭ್ಯಾಂ—ಕಾಲುಗಳಿಂದ[2] ನಾಭಿಂ—ಹೊಕ್ಕಳನು ವ್ಯದಾರಯತ್—ಒದ್ದನು.

---

1 ಸಮಸತ್ತ್ವದ (ಕ) 2 ಲುಪ್ತ (ಕ)

34

ಭಿಂದನ್ನುರಶ್ಚ ಬಾಹುಭ್ಯಾಂ ತಂ ಜಗ್ರಾಹ ಹರೋ ಹರಿಮ್
ತತೋ ಜಗಾಮ ಗಗನಂ ಸಹ ದೇವೈಸ್ಸಹರ್ಷಿಭಿಃ ||
ಸಹಸೈವ ಹರನ್ವಿಷ್ಣುಂ ಹರಶ್ಶ್ಯೇನ ಇವೋರಗಮ್ ||೯೦||

ಉತ್ಕ್ಷಿಪ್ಯೋತ್ಕ್ಷಿಪ್ಯ ತಂ ಗೃಹ್ಯ ನಿಪಾತ್ಯ ಚ ನಿಪಾತ್ಯ ಚ
ಉಡ್ಡೀಯೋಡ್ಡೀಯ ಭಗವಾನ್ ಪಕ್ಷಘಾತವಿಮೋಹಿತಮ್ ||೯೧||

ಬಿಭೇದ ಪದ್ಭ್ಯಾಮಾಕ್ರಮ್ಯ ಹೃದಯಂ ನಖರೈಃ ಖರೈಃ
ಹರಿಂ ಹರಂತಂ ಶರಭಂ ವಿಶ್ವಸ್ಯೇಶಾನಮೀಶ್ವರಮ್
ಅನುಯಾಂತಿ ಸುರಾಸ್ಸರ್ವೇ ನಮೋವಾಕ್ಯೈಸ್ಸಹ ದ್ರುತಮ್ ||೯೨||

ಪುಚ್ಛೇನ—ಬಾಲದಿಂದ ಪಾದೌ—ಕಾಲುಗಳೆರಡನು ಆಬಧ್ಯ—ಕಟ್ಟಿ ಬಾಹುಭಿಃ — ಭುಜಂಗಳಿಂದ ಬಾಹುಮಂಡಲಂ — ಭುಜಂಗಳ ಸಮೂಹವನು ಆಬಧ್ಯ— ಬಿಗಿದು, ||೮೯||

ಬಾಹುಭ್ಯಾಂ—ಕೈಗಳಿಂದ ಉರಶ್ಚ—ಎದೆಯನು ಭಿಂದನ್ —ಸೀಳುತವು ಹರಃ—ಶರಭ ರೂಪವನುಳ್ಳ ಶಿವನು ತಂ ಹರಿಂ—ಆ ನರಸಿಂಹನನು ಜಗ್ರಾಹ— ಹಿಡಿದನು. ತತಃ—ಅಷ್ಟರಮೇಲೆ ಹರಃ—ಶಿವನು ವಿಷ್ಣುಂ—ವಿಷ್ಣುವನು ಹರನ್ —ಕೊಲ್ಲುತ್ತವು ಸಹಸೈವ — ಬೇಗದಿಂದವೇ ದೇವೈಸ್ಸಹ — ದೇವರ್ಕಳೊಡನೆ ಋಷಿಭಿಸ್ಸಹ—ಋಷಿಗಳೊಡನೆ ಗಗನಂ—ಆಕಾಶವನು ಜಗಾಮ—ಎಯ್ದಿದನು ಕಥಮಿವ—ಅದು ಹೇಂಗೆಯಾ ಎಂದಡೆ ಶ್ಯೇನಃ—ಹದ್ದು ಉರಗಂ ಇವ—ಸರ್ಪವ ನೆಹಗಹಗೆ. ||೯೦||

ಭಗವಾನ್ — ಷಡ್ಗುಣೈಶ್ವರ್ಯವನುಳ್ಳಂಥಾ ಶರಭೇಶ್ವರನು ಪಕ್ಷಘಾತ- ವಿಮೋಹಿತಂ—ಪಕ್ಕದ ಹೊಯಿಲಿನಿಂದ ಮೂರ್ಛಿತನಾದಂಥಾ ತಂ—ಆ ನರಸಿಂಹ ನನು ಉತ್ಕ್ಷಿಪ್ಯ ಉತ್ಕ್ಷಿಪ್ಯ — [3]ಮೇಲಕ್ಕೆ[3] [4]ಹಾಕಿಹಾಕಿ[4], ಗೃಹ್ಯ — ಹಿಡಿದು ನಿಪಾತ್ಯ ಚ ನಿಪಾತ್ಯ ಚ — ಕೆಡಹಿ ಕೆಡಹಿಯೂ ಉಡ್ಡೀಯ ಉಡ್ಡೀಯ — ಹಾರಿ ಹಾರಿ. ||೯೧||

ಪದ್ಭ್ಯಾಂ—ಕಾಲುಗಳಿಂದ ಆಕ್ರಮ್ಯ—ಅಪ್ಪಚಿಕೊಂಡು ಖರೈಃ—ಕರ್ಕಶ ವಹಂಥಾ ನಖರೈಃ— ಉಗುರುಗಳಿಂದ ಹೃದಯಂ — ಎದೆಯನು ಬಿಭೇದ— ಬಗಿದನು. ಹರಿಂ—ನರಸಿಂಹನನು ಹರಂತಂ—ಸಂಹರಿಸುತ್ತಿದ್ದಂಥಾ ವಿಶ್ವಸ್ಯ—

---

[3] ನೆಲಕ್ಕೆ (ಕ) [4] ಹಾಯಿಕ್ಕಿ ಹಾಯಿಕ್ಕಿ (ಖ)

ನೀಯಮಾನಃ ಪರವಶೋ ದೀನವಕ್ತ್ರಃ ಕೃತಾಂಜಲಿಃ
ತುಷ್ಟಾವ ಪರಮೇಶಾನಂ ಹರಿಸ್ತಂ ಲಲಿತಾಕ್ಷರವತ್ ||೯೩||

ನೃಸಿಂಹ ಉವಾಚ

ನಮೋ ರುದ್ರಾಯ ರೌದ್ರಾಯ ಮಹಾಗ್ರಾಸಾಯ ಜಿಷ್ಣವೇ
ನಮ ಉಗ್ರಾಯ ಭೀಮಾಯ ನಮಃ ಕ್ರುದ್ಧಾಯ ಮನ್ಯವೇ ||೯೪||

ನಮೋ ಭವಾಯ ಶರ್ವಾಯ ಶಂಕರಾಯ ಶಿವಾಯ ತೇ
ಕಾಲಾಯ ಕಾಲಕಾಲಾಯ ಮಹಾಕಾಲಾಯ ಮೃತ್ಯವೇ ||೯೫||

ಸಮಸ್ತ ಲೋಕಕ್ಕೆ ಈಶಾನಂ — ಒಡೆಯನಹಂಥಾ ಈಶ್ವರಂ — ಪರಮೇಶ್ವರನಹಂಥಾ ಶರಭಂ — ಶರಭಮೂರ್ತಿಯನು ಕುರಿತು ಸರ್ವೇ ಸುರಾಃ — ಸಮಸ್ತ ದೇವರ್ಕಳುಗಳು ನಮೋವಾಕ್ಯೈಸ್ಸಹ—ನಮೋ ನಮಃ ಎಂಬ ವಾಕ್ಯಂಗಳಿಂದ ಸಹಿತವಾಗಿ ದ್ರುತಂ—ಬೇಗ ಅನುಯಾಂತಿ—ಬಳಿವಿಡಿದೆಯ್ದುತ್ತಿದ್ದರು. ||೯೨||

ಪರವಶಃ—ಪರವಶನಾಗಿ ನೀಯಮಾನಃ— ಎಯ್ದುತ್ತಿದ್ದಂಥಾ ಹರಿಃ — ನರಸಿಂಹನು ದೀನವಕ್ತ್ರಃ—ದೈನ್ಯವಹ ಮುಖವನುಳ್ಳಾತನಾಗಿ ಕೃತಾಂಜಲಿಃ — ಕೈಮುಗಿದುಕೊಂಡಾತನಾಗುತ್ತವು ಪರಮೇಶಾನಂ— ಆ ಪರಮೇಶ್ವರನನು ಕುರಿತು ಲಲಿತಾಕ್ಷರಂ—ಗದ್ಗದಾಕ್ಷರವೆಹಗಹುದಹಗೆ ತುಷ್ಟಾವ—ಸ್ತೋತ್ರವ ಮಾಡಿದನು

ನೃಸಿಂಹಉವಾಚ—ನೃಸಿಂಹನ ವಾಕ್ಯವು

ರುದ್ರಾಯ—ದುಃಖವನು ಕೆಡಿಸುತ್ತಿದ್ದಂಥಾ ರೌದ್ರಾಯ — ರೌದ್ರರೂಪನಹಂಥಾ ಮಹಾಗ್ರಾಸಾಯ — ಬಹಳವಹ ಗ್ರಾಸವನುಳ್ಳಂಥಾ ಜಿಷ್ಣವೇ — ಜಯಶೀಲನಹಂಥಾ ಶಿವಂಗೋಸ್ಕರ ನಮಃ — ನಮಸ್ಕಾರವು. ಕ್ರುದ್ಧಾಯ — ಕ್ರೋಧಿಸುವಂಥಾ ಮನ್ಯವೇ— ಕೋಪವನುಳ್ಳಂಥಾ ನಿನಗೋಸ್ಕರ ನಮಃ— ನಮಸ್ಕಾರವು. ||೯೪||

ಭವಾಯ—ಸೃಷ್ಟಿಯನು ಮಾಡುತ್ತಿದ್ದಂಥಾ ಶರ್ವಾಯ — ಸಂಹಾರವನು ಮಾಡುತ್ತಿದ್ದಂಥಾ ಶಂಕರಾಯ — ಸುಖವನು ಮಾಡುತ್ತಿದ್ದಂಥಾ ಶಿವಾಯ— ಮಂಗಳಸ್ವರೂಪನಹಂಥಾ ಕಾಲಾಯ—ಕಾಲರೂಪನಹಂಥಾ ಕಾಲಕಾಲಾಯ— ಕಾಲಂಗೆ ಕಾಲನಹಂಥಾ ಮಹಾಕಾಲಾಯ — ಮಹಾಕಾಲನಹಂಥಾ ಮೃತ್ಯವೇ — ಮೃತ್ಯುರೂಪನಹಂಥಾ ತೇ — ನಿನಗೋಸ್ಕರ ನಮಃ — ನಮಸ್ಕಾರವು. 'ಶೃಣಾತಿ ಸರ್ವಮಿತಿ ಶರ್ವಃ' ಸರ್ವಂ—ಸಮಸ್ತಲೋಕವನು ಶೃಣಾತಿ—ಸಂಹರಿಸುತ್ತಿಹನು ಇತಿ—ಹಿಂಗೆಂಬ ಅರ್ಥದಲ್ಲಿ ಶರ್ವನಾಮವು ವರ್ತಿಸಲುಪಟ್ಟಿತ್ತು. ಶೄ-ಹಿಂಸಾಯಾಂ ಎಂಬ ಧಾತು. ಈ ನಿರ್ವಚನ [1]ಲಿಂಗಾಭಟ್ಟೀಯಲ್ಲಿ' ಹೇಳಿ ಇದ್ದುದು.

ವೀರಾಯ ವೀರಭದ್ರಾಯ ಕ್ಷಯದ್ವೀರಾಯ ಶೂಲಿನೇ
ಮಹಾದೇವಾಯ ಮಹತೇ ಪಶೂನಾಂ ಪತಯೇ ನಮಃ ||೯೬||

ಏಕಾಯ ನೀಲಕಂಠಾಯ ಶ್ರೀಕಂಠಾಯ ಪಿನಾಕಿನೇ
ನಮೋಽನಂತಾಯ ಸೂಕ್ಷ್ಮಾಯ ನಮಸ್ತೇ ಮೃತ್ಯುಮೃತ್ಯವೇ ||೯೭||

ಪರಾಯ ಪರಮೇಶಾಯ ಪರಾತ್ಪರತರಾಯ ತೇ
ಪರಾಪರಾಯ ವಿಶ್ವಾಯ ನಮಸ್ತೇ ವಿಶ್ವಮೂರ್ತಯೇ ||೯೮||

ನಮೋ ವಿಷ್ಣುಕಲತ್ರಾಯ ವಿಷ್ಣುಕ್ಷೇತ್ರಾಯ ಭಾನವೇ
ಕೈವರ್ತಾಯ ಕಿರಾತಾಯ ಮಹಾವ್ಯಾಧಾಯ ತೇ ನಮಃ ||೯೯||

ವೀರಾಯ—ವೀರನಹಂಥಾ ವೀರಭದ್ರಾಯ—ವೀರದಿಂದ ಒಪ್ಪುತ್ತಿರುವಿದ್ದಂಥಾ ಕ್ಷಯದ್ವೀರಾಯ—ಸಂಹರಿಸಲುಪಟ್ಟ ವೀರರುಗಳನುಳ್ಳಂಥಾ ಶೂಲಿನೇ—ತ್ರಿಶೂಲವನುಳ್ಳಂಥಾ ಮಹಾದೇವಾಯ—ಅಧಿಕವಹ ದೇವನಹಂಥಾ ಮಹತೇ—ಮಹತ್ತ್ವವನುಳ್ಳಂಥಾ ಪಶೂನಾಂ—ಪಶುಗಳಿಗೆ ಪತಯೇ—ಒಡೆಯನಹಂಥಾ ನಿನಗೋಸ್ಕರ ನಮಃ—ನಮಸ್ಕಾರವು. ||೯೬||

ಏಕಾಯ — ಏಕಮೂರ್ತಿಯಹಂಥಾ ನೀಲಕಂಠಾಯ — ನೀಲವರ್ಣವಹ ಕೊರಳನುಳ್ಳಂಥಾ ಶ್ರೀಕಂಠಾಯ—ಒಪ್ಪುತ್ತಿರುವಿದ್ದ ಕಂಠವನುಳ್ಳಂಥಾ ಪಿನಾಕಿನೇ — ಪಿನಾಕವೆಂಬ ಬಿಲ್ಲನುಳ್ಳಂಥಾ ಅನಂತಾಯ — ಕಡೆಯಿಲ್ಲದೇ ಇದ್ದಂಥಾ ನಿನಗೋಸ್ಕರ ನಮಃ—ನಮಸ್ಕಾರವು. ಸೂಕ್ಷ್ಮಾಯ — ಸೂಕ್ಷ್ಮರೂಪನಹಂಥಾ ಮೃತ್ಯುಮೃತ್ಯವೇ—ಮೃತ್ಯುವಿಂಗೆ ಮೃತ್ಯುವಹಂಥಾ ತೇ—ನಿನಗೋಸ್ಕರ ನಮಃ —ನಮಸ್ಕಾರವು. ||೯೭||

ಪರಾಯ—ಉತ್ಕೃಷ್ಟನಹಂಥಾ ಪರಾತ್—ಪ್ರಕೃತಿಯ ದೆಸೆಯಿಂದ ಪರತರಾಯ —ಅತ್ಯಂತ ಮೇಲಹಂಥಾ ಪರಮೇಶಾಯ — ಪರಮೇಶ್ವರನಹಂಥಾ ತೇ— ನಿನಗೋಸ್ಕರ ನಮಃ — ನಮಸ್ಕಾರವು. ಪರಾಪರಾಯ — ಪರಾಪರನಹಂಥಾ ವಿಶ್ವಾಯ—ವಿಶ್ವನಹಂಥಾ ವಿಶ್ವಮೂರ್ತಯೇ— ವಿಶ್ವಮೂರ್ತಿಯಾಗಿ ಉಳ್ಳಂಥಾ ತೇ—ನಿನಗೋಸ್ಕರ ನಮಃ—ನಮಸ್ಕಾರವು. ||೯೮||

ವಿಷ್ಣುಕಳತ್ರಾಯ—ವಿಷ್ಣುವೇ ಸ್ತ್ರೀಯಾಗಿ ಉಳ್ಳಂಥಾ ವಿಷ್ಣುಕ್ಷೇತ್ರಾಯ— ವಿಷ್ಣುವೇ ಶರೀರವಾಗಿ ಉಳ್ಳಂಥಾ ಭಾನವೇ — ಪ್ರಕಾಶರೂಪನಹಂಥಾ ತೇ — ನಿನಗೋಸ್ಕರ ನಮಃ — ನಮಸ್ಕಾರವು. ಕೈವರ್ತಾಯ — ಮತ್ಸ್ಯಾವತಾರವ

ಭೈರವಾಯ ಶರಣ್ಯಾಯ ಮಹಾಭೈರವರೂಪಿಣೇ
ನಮೋ ನೃಸಿಂಹಸಂಹರ್ತ್ರೇ ಕಾಲಕಾಲ! ಪುರಾರಯೇ ||೧೦೦||

ನಮಃ ಪಾಶೌಘಸಂಹರ್ತ್ರೇ ವಿಷ್ಣುಮಾಯಾಂತಕಾರಿಣೇ
ತ್ರ್ಯಂಬಕಾಯ ತ್ರಿಯಕ್ಷಾಯ ಶಿಪಿವಿಷ್ಟಾಯ ಮೀಢುಷೇ ||೧೦೧||

ಮೃತ್ಯುಂಜಯಾಯ ಸರ್ವಾಯ ಸರ್ವಜ್ಞಾಯ ಮಖಾರಯೇ
ಖ [ಶೋ][1]ಲ್ಕಾಯ ವರೇಣ್ಯಾಯ ನಮಸ್ತೇ ವಹ್ನಿರೇತಸೇ ||೧೦೨||

ಸಂಹರಿಸುವಲ್ಲಿ ಜಾಲಗಾರನಾದಂಥಾ ಕಿರಾತಾಯ — ಯುಗಯುಗಂಗಳಲ್ಲಿ ಅರ್ಜುನಂಗೆ ವರವ ಕೊಡುವ ನಿಮಿತ್ತ ಕಿರಾತವೇಷವನಾಳ್ವಂಥಾ ಮಹಾವ್ಯಾಧಾಯ —ನಿಜಪುತ್ರಿಯ ರಮಿಸುವ ಇಚ್ಛೆಯಿಂದ ಮೃಗರೂಪವಾದ ಬ್ರಹ್ಮನನು ಸಂಹರಿಸುವಲ್ಲಿ ಮಹಾವ್ಯಾಧನಾದಂಥಾ ತೇ—ನಿನಗೋಸ್ಕರ ನಮಃ — ನಮಸ್ಕಾರವು. ಕ್ಷೇತ್ರ ಶಬ್ದ ಶರೀರದಲ್ಲಿ ವರ್ತಿಸೂದು. ಅದು ಹೇಂಗೆಯಾ [2]ಎಂದೊಡೆ "ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ" ಇದು ಮಹಾಭಾರತದಲ್ಲಿ **ಭಗವದ್ಗೀತೆಯಲ್ಲಿ** ಕೃಷ್ಣನು ಅರ್ಜುನನಿಗೆ ಬೋಧಿಸಿದ ವಾಕ್ಯವು. ||೯೯||

ಭೋಃ ಕಾಲಕಾಲ!—ಎಲೆ ಕಾಲಂಗೆ ಕಾಲನಹಂಥಾ ಶಿವನೇ! ಭೈರವಾಯ —ಭಯಂಕರನಹಂಥಾ ಶರಣ್ಯಾಯ — ಮರೆಹೊಗಿಸಿಕೊಳ್ಳಲು ಯೋಗ್ಯನಹಂಥಾ ಮಹಾಭೈರವರೂಪಿಣೇ— ಮಹಾಭೈರವರೂಪನುಳ್ಳಂಥಾ ನೃಸಿಂಹಸಂಹರ್ತ್ರೇ — ನರಸಿಂಹನ ಸಂಹರಿಸಿದಂಥಾ ಪುರಾರಯೇ — ತ್ರಿಪುರವೈರಿಯಹಂಥಾ ನಿನಗೋಸ್ಕರ ನಮಃ—ನಮಸ್ಕಾರವು. ||೧೦೦||

ಪಾಶೌಘಸಂಹರ್ತ್ರೇ — ಮಾಯಾಪಾಶಂಗಳ ಸಮೂಹವ ಸಂಹರಿಸುವ ಥಾ ವಿಷ್ಣುಮಾಯಾಂತಕಾರಿಣೇ — ವಿಷ್ಣುಮಾಯೆಯನು ನಾಶವನು ಮಾಡುತ್ತಿದ್ದಂಥಾ ತ್ರ್ಯಂಬಕಾಯ—ತ್ರಿಗುಣ ತ್ರಿವೇದ ತ್ರಿಲೋಕ ತ್ರಿಮೂರ್ತಿ ಮೊದಲಾದಂಥಾವಕ್ಕೆ ತಂದೆಯಹಂಥಾ ತ್ರಿಯಕ್ಷಾಯ—ಮೂರು ನಯನಂಗಳನುಳ್ಳಂಥಾ ಶಿಪಿವಿಷ್ಟಾಯ —ಪ್ರಾಣಿಗಳಲ್ಲಿ ಪ್ರವೇಶಿಸಿ ಅಂತರ್ಯಾಮಿಯಾಗಿದ್ದಂಥಾ ಮೀಢುಷೇ—ಸ್ತೋತ್ರವ ಮಾಡಿಸಿಕೊಳಲುಪಟ್ಟಂಥಾ ನಿನಗೋಸ್ಕರ ನಮಃ — ನಮಸ್ಕಾರವು. ಮೀಡುಷೇ ಎಂಬ ಶಬ್ದವು* ಮೀಡ+ಸ್ತುತೌ ಎಂಬ ಧಾತುವಿನಲ್ಲಿ ಹುಟ್ಟಿದ ಪದವು. 'ಶಿಪಿಷು ಪ್ರಾಣಿಷು ವಿಶತೀತಿ ಶಿಪಿವಿಷ್ಟಃ'—ಇದು ಶಿಪಿವಿಷ್ಟಪದ ಶಬ್ದಕ್ಕೆ ನಿರ್ವಚನವು. ||೧೦೧||

ಮೃತ್ಯುಂಜಯಾಯ—ಮೃತ್ಯುವನು ಗೆದ್ದಂಥಾ ಸರ್ವಾಯ — ಸರ್ವರೂಪ

---

1 ಶೋಃ (ಕ.ಖ.ಗ.ಘ) 2 ಎಂದರೆ (ಕ)

* 'ಈಡಸ್ತುತೌ' ಎಂಬ ಧಾತುವೇ ಪ್ರಸಿದ್ಧವಾಗಿದೆ (ಸಂ)

ಮಹಾಪ್ರಾಣಾಯ ಜೀವಾಯ ಪ್ರಾಣಾಪಾನಪ್ರವರ್ತಿನೇ
ತ್ರಿಗುಣಾಯ ತ್ರಿಶೂಲಾಯ ಗುಣಾತೀತಾಯ ಯೋಗಿನೇ ||೧೦೩||

ಸಂಸಾರಯಂತ್ರವಾಹಾಯ ಮಹಾಯಂತ್ರಪ್ರವರ್ತಿನೇ
ಚಿದ್ವ್ಯೋಮಸೂರ್ಯಾಯ ಮೂರ್ತಿವೈಚಿತ್ರ್ಯಹೇತವೇ ||೧೦೪||

ವರದಾಯ ವಿಕಾರಾಯ ಸರ್ವಕಾರಣಹೇತವೇ
ಕಪಾಲಿನೇ ಕರಾಲಾಯ ಪತಯೇ ಪುಣ್ಯ[1]ಕೀರ್ತಯೇ ||೧೦೫||

ನುಳ್ಳಂಥಾ ಸರ್ವಜ್ಞಾಯ—ಸರ್ವವನು ಬಲ್ಲಂಥಾ ಮಖಾರಯೇ—ದಕ್ಷನ ಯಾಗ ವೈರಿಯಹಂಥಾ ಖಷೋಲ್ಕಾಯ — ಗಗನದಲ್ಲಿಯ ಉಳುಕಿನೋಪಾದಿಯ ರೂಪನುಳ್ಳಂಥಾ ವರೇಣ್ಯಾಯ—ಶ್ರೇಷ್ಠನಹಂಥಾ ವಹ್ನಿರೇತಸೇ—ಅಗ್ನಿಯೇ ರೇತಸ್ಸಾಗಿ ಉಳ್ಳಂಥಾ ತೇ—ನಿನಗೋಸ್ಕರ ನಮಃ—ನಮಸ್ಕಾರವು. ||೧೦೨||

ಮಹಾಪ್ರಾಣಾಯ = ಮಹಾಪ್ರಾಣರೂಪನಹಂಥಾ ಜೀವಾಯ = ಜೀವರೂಪನಹಂಥಾ ಪ್ರಾಣಾಪಾನಪ್ರವರ್ತಿನೇ = ಪ್ರಾಣಾಪಾನವಾಯುಗಳ ವರ್ತಿಸುವ ಶೀಲವನುಳ್ಳಂಥಾ ತ್ರಿಗುಣಾಯ = ಸತ್ತ್ವರಜಸ್ತಮೋಗುಣಂಗಳನುಳ್ಳಂಥಾ ತ್ರಿಶೂಲಾಯ = ತ್ರಿಶೂಲವನುಳ್ಳಂಥಾ ಗುಣಾತೀತಾಯ = ಗುಣತ್ರಯಂಗಳ ಮೀರಿದಂಥಾ ಯೋಗಿನೇ = ಯೋಗಿಯಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ||೧೦೩||

ಸಂಸಾರಯಂತ್ರವಾಹಾಯ = ಸಂಸಾರವೆಂಬ ಸೂತ್ರವ ಧರಿಸಿದಂಥಾ ಮಹಾಯಂತ್ರಪ್ರವರ್ತಿನೇ = ಸಂಸಾರವೆಂಬ ಮಹಾಯಂತ್ರವನು ಮಾಡಿದಂಥಾ ಚಿದ್ವ್ಯೋಮಸೂರ್ಯಾಯ = ಚಿದ್ಗಗನಕ್ಕೆ ಸೂರ್ಯನಹಂಥಾ ಮೂರ್ತಿವೈಚಿತ್ರ್ಯಹೇತವೇ = ಮೂರ್ತಿಗಳ ವಿಚಿತ್ರಕ್ಕೆ ಕಾರಣನಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ||೧೦೪||

ವರದಾಯ = ವರವ ಕೊಡುತ್ತಿದ್ದಂಥಾ ವಿಕಾರಾಯ = ವಿಕಾರರೂಪನಹಂಥಾ ಸರ್ವಕಾರಣಹೇತವೇ = ಸಮಸ್ತ ಕಾರಣಕ್ಕೆ ಕಾರಣನಹಂಥಾ ಕಪಾಲಿನೇ = ಕಪಾಲವನುಳ್ಳಂಥಾ ಕರಾಳಾಯ = ಭಯಂಕರವಹಂಥಾ ಪುಣ್ಯಕೀರ್ತಯೇ = ಪುಣ್ಯವಹ ಕೀರ್ತಿಯನುಳ್ಳಂಥಾ ಪತಯೇ = ಒಡೆಯನಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ||೧೦೫||

---

1 ಈ (ಮೂಲಪಾಠ)

[1] ಅವೋಘಾ'ಯಾಗ್ನಿನೇತ್ರಾಯ ಅಕುಲೀಶಾಯ ಶಂಭವೇ
ಭಿಷಕ್ತಮಾಯ ಚಂಡಾಯ ದಂಡಿನೇ ಘೋರರೂಪಿಣೇ ||೧೦೬||

ಮೇಘವಾಹಾಯ ದೇವಾಯ ಪಾರ್ವತೀಪತಯೇ ನಮಃ
ಅವ್ಯಕ್ತಾಯ ವಿಶೋಕಾಯ ಸ್ಥಿರಾಯ ಸ್ಥಿರಧನ್ವನೇ ||೧೦೭||

ಸ್ಥಾಣವೇ ಕೃತ್ತಿವಾಸಾಯ ನಮಃ ಪಂಚಾರ್ಥಹೇತವೇ
ವಿರಜಾಯೈಕಪಾದಾಯ ನಮಶ್ಚಂದ್ರಾರ್ಧಮೌಲಯೇ ||೧೦೮||

ನಮಸ್ತೇಽಧ್ವರರಾಜಾಯ ವಚಸಾಂ ಪತಯೇ ನಮಃ
ಯೋಗೀಶ್ವರಾಯ ಸತ್ಯಾಯ ನಿತ್ಯಾಯ ಪರಮಾತ್ಮನೇ ||೧೦೯||

ಅವೋಘಾಯ = [2]ಸಾಮರ್ಥ್ಯವನುಳ್ಳಂಥಾ[2] ಅಗ್ನಿನೇತ್ರಾಯ = ಅಗ್ನಿಯೇ ನಯನವಾಗಿ ಉಳ್ಳಂಥಾ ಅಕುಲೀಶಾಯ = ಕುಲರಹಿತರಹ ಯೋಗೀಶ್ವರರಿಗೊಡೆಯನಹಂಥಾ ಶಂಭವೇ = ಸುಖವನು ಹುಟ್ಟಿಸುತ್ತಿದ್ದಂಥಾ ಭಿಷಕ್ತಮಾಯ = ಸಂಸಾರಕ್ಕೆ ಉತ್ಕೃಷ್ಟವಹ ವೈದ್ಯನಹಂಥಾ ಚಂಡಾಯ = ಪ್ರಚಂಡನಹಂಥಾ ದಂಡಿನೇ = ದಂಡಾಯುಧವನುಳ್ಳಂಥಾ ಘೋರರೂಪಿಣೇ = ಭಯಂಕರವಹ ರೂಪವುಳ್ಳಂಥಾ ಮೇಘವಾಹಾಯ = ಮೇಘವಾಹನನಹಂಥಾ ದೇವಾಯ = ಪ್ರಕಾಶಸ್ವರೂಪ (ದೇವ) ನಹಂಥಾ ಪಾರ್ವತೀಪತಯೇ = ಪಾರ್ವತೀವಲ್ಲಭನಹಂಥಾ ಅವ್ಯಕ್ತಾಯ = ಅರಿಯಬಾರದೇ ಇದ್ದಂಥಾ ವಿಶೋಕಾಯ = ದುಃಖರಹಿತನಹಂಥಾ ಸ್ಥಿರಾಯ = ಸ್ಥಿರನಹಂಥಾ ಸ್ಥಿರಧನ್ವನೇ = ನಿತ್ಯವಹ ಬಿಲ್ಲನುಳ್ಳಂಥಾ ನಿನಗೋಸ್ಕರ ನಮಃ = ನಮಸ್ಕಾರವು. ||೧೦೬||

[3]ಸ್ಥಾಣವೇ = ತ್ರೈಲೋಕ್ಯವೆಂಬ ಪಟ್ಟಣಕ್ಕೆ ಮೂಲಸ್ತಂಭವಹಂಥಾ ಕೃತ್ತಿವಾಸಾಯ = ಚರ್ಮಾಂಬರನಹಂಥಾ[3] ಪಂಚಾರ್ಥಹೇತವೇ = [4]ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ[4]ಅನುಗ್ರಹವೆಂಬ ಪಂಚಾರ್ಥಂಗಳಿಗೆ ಕಾರಣನಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ವಿರಜಾಯ = ರಜೋಗುಣವಿಲ್ಲದೇ ಇದ್ದಂಥಾ ಏಕಪಾದಾಯ = ಒಂದೇ ಪಾದುವನುಳ್ಳಂಥಾ ಚಂದ್ರಾರ್ಧಮೌಳಯೇ = ಚಂದ್ರಾರ್ಧಮೌಳಿಯಹಂಥಾ ನಿನಗೋಸ್ಕರ ನಮಃ = ನಮಸ್ಕಾರವು. ||೧೦೮||

ಅಧ್ವರರಾಜಾಯ = ಯಾಗಕ್ಕೆ ಒಡೆಯನಹಂಥಾ ವಚಸಾಂ ಪತಯೇ = [5]ವಾಕ್ಯಂಗಳಿಗೆ ಒಡೆಯನಹಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು. ಯೋಗೀಶ್ವರಾಯ = ಯೋಗಿಗಳಿಗೆ ಒಡೆಯ[5]ನಹಂಥಾ ಸತ್ಯಾಯ = ಸತ್ಯರೂಪನ

---

[1] ಅಘೋರಾ (ಘ) [2,3] ಲುಪ್ತ (ಕ) [4] ರೋಭಾವಾ (ಖ) [5] ಲುಪ್ತ (ಕ)

ಸರ್ವಾತ್ಮನೇ ನಮಸ್ತುಭ್ಯಂ ನಮಸ್ಸರ್ವೇಶ್ವರಾಯ ತೇ
ಏಕದ್ವಿತ್ರಿಚತುಃಪಂಚಕೃತ್ವಸ್ತೇ ಚ ನಮೋ ನಮಃ ||೧೧೦||

ದಶಕೃತ್ವಃ ಶತಕೃತ್ವ ಆಸಹಸ್ರಂ ನಮೋ ನಮಃ
ನಮೋಽಪರಿಮಿತಕೃತ್ವೋಽನಂತಕೃತ್ವೋ ನಮೋ ನಮಃ ||೧೧೧||

ನಮೋ ನಮೋ ನಮೋ ಭೂಯಃ ಪುನರ್ಭೂಯೋ ನಮೋ ನಮಃ ||

ಸೂತ ಉವಾಚ

ನಾಮಾಷ್ಟಕಶತೇನೈವಂ ಸ್ತುತ್ವಾಽಮೃತಮಯೇನ ತು
ಪುರಸ್ತಂ ಪ್ರಾರ್ಥಯಾಮಾಸ ನೃಸಿಂಹಶ್ಶರಭೇಶ್ವರಮ್ ||೧೧೩||

ಹಂಥಾ ನಿತ್ಯಾಯ = ನಿತ್ಯನಹಂಥಾ ಪರಮಾತ್ಮನೇ = ಪರಮಾತ್ಮನಹಂಥಾ ನಿನಗೋಸ್ಕರ ನಮಃ = ನಮಸ್ಕಾರವು ||೧೦೯||

ಸರ್ವಾತ್ಮನೇ = ವಿಶ್ವರೂಪನಹಂಥಾ ತುಭ್ಯಂ = ನಿನಗೋಸ್ಕರ ನಮಃ = ನಮಸ್ಕಾರವು. ಸರ್ವೇಶ್ವರಾಯ = ಸರ್ವಕ್ಕೆ ಒಡೆಯನಹಂಥಾ ತೇ = ನಿನಗೋಸ್ಕರ ನಮಃ = ನಮಸ್ಕಾರವು. ಏಕದ್ವಿತ್ರಿಚತುಃಪಂಚಕೃತ್ವಃ = ಒಂದೆರಡು ಮೂರು ನಾಲ್ಕೈದೆಂದು ಸಂಖ್ಯೆಯನು ಮಾಡಿದಂಥಾ ತೇ ಚ = ನಿನಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ||೧೧೦||

ದಶಕೃತ್ವಃ = ದಶಸಂಖ್ಯೆಯ ಮಾಡಿದಂಥಾ ಶತಕೃತ್ವಃ = ಶತಸಂಖ್ಯೆಯ ಮಾಡಿದಂಥಾ ಆಸಹಸ್ರಂ = ಸಹಸ್ರಸಂಖ್ಯೆ ಪರಿಯಂತರ ಮಾಡಿದಂಥಾ ನಿನಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು. ಅಪರಿಮಿತಕೃತ್ವಃ = ಲೆಕ್ಕವಿಲ್ಲದ್ದ ಮಾಡಿದಂಥಾ ನಿನಗೋಸ್ಕರ ನಮಃ = ನಮಸ್ಕಾರವು. ಅನಂತಕೃತ್ವಃ = ತಡೆಯಿಲ್ಲದಂಥಾದ ಮಾಡಿದ ನಿನಗೋಸ್ಕರ ನಮೋ ನಮಃ = ನಮಸ್ಕಾರವು ನಮಸ್ಕಾರವು.

ನಮಃ = ನಮಃ ನಮಃ = ನಮಸ್ಕಾರವು ಭೂಯಃ = ಮರಳಿಯೂ ನಮಃ = ನಮಸ್ಕಾರವು. ಪುನರ್ಭೂಯಃ = ಮತ್ತೆ ಮರಳಿಯೂ ನಮಃ = ನಮಸ್ಕಾರವು. ನಮಃ = ನಮಸ್ಕಾರವು. ಕೃತ್ವಶಬ್ದವು ಭೂಯಶ್ಶಬ್ದವೂ ಅವ್ಯಯವಾದ ನಿಮಿತ್ತವಾಗಿ ಉಚಿತಾರ್ಥವ ನುಡಿದುಕೊಂಬುದು. ||೧೧೨||

ಸೂತ ಉವಾಚ = ಸೂತಮಹಾಋಷಿಯ ವಾಕ್ಯವು.

ಏವಂ = ಈ ಪ್ರಕಾರದಲ್ಲಿ ಅಮೃತಮಯೇನ = ಅಮೃತಮಯವಹಂಥಾ

---

[1] ತಂ (ಖ.ಗ.ಘ) [2] ಮುನಿ (ಖ)

ನೃಸಿಂಹ ಉವಾಚ

ಯದಾ ಯದಾ ಮಮಾಜ್ಞಾನಮತ್ಯಹಂಕಾರದೂಷಿತಮ್
ತದಾ ತದಾಪನೋತ್ತವ್ಯಂ ತ್ವಯೈವ ಪರಮೇಶ್ವರ ||೧೧೪||

ಏವಂ ವಿಜ್ಞಾಪ್ಯ[2] ಸವ್ರೀಲಃ[2] ಶಂಕರಂ ನರಕೇಸರೀ
ತತಸ್ಸಂತ್ಯಕ್ತವಾನ್ ವಿಷ್ಣುಃ ಜೀವಿತಂ ಸ್ವಾಪರಾಧತಃ ||೧೧೫||

ತದ್ವಕ್ತ್ರಶೇಷಂ ತದಾತ್ರಂ ಹೃತ್ವಾ ಶರಭವಿಗ್ರಹಃ
ಅತೀಂದ್ರಿಯತ್ವಮಗಮತ್ ವೀರಭದ್ರಃ ಕ್ಷಣಾತ್ತತಃ ||೧೧೬||

ನಾಮಾಷ್ಟಕಶತೇನ ತು = ಅಷ್ಟೋತ್ತರ ಶತನಾಮದಿಂದವು ಸ್ತುತ್ವಾ = ಸ್ತೋತ್ರವ ಮಾಡಿ ನೃಸಿಂಹಃ — ನರಸಿಂಹನು ತಂ = ಆ ಶರಭೇಶ್ವರಂ = ಶರಭೇಶ್ವರನನು ಕುರಿತು ಪುನಃ = ಮತ್ತೆಯೂ ಪ್ರಾರ್ಥಯಾಮಾಸ = ಬೇಡಿಕೊಂಡನು.||೧೧೩||
ನೃಸಿಂಹ ಉವಾಚ = ನೃಸಿಂಹನು ಬಿನ್ನಹ ಮಾಡುತ್ತಿದ್ದಾನು.

ಯದಾ ಯದಾ = ಆವಾಗ ಆವಾಗ ಮಮ = ಎನಗೆ ಅತ್ಯಹಂಕಾರ ದೂಷಿತಮ್ = ಅತ್ಯಂತ ಅಹಂಕಾರದಿಂದ ನಿಂದಿತವಹಂಥಾ ಅಜ್ಞಾನಂ = ಅಜ್ಞಾನವಾಗುತ್ತಿಹುದು. ತದಾ ತದಾ = ಆಗಾಗ ಭೋ ಪರಮೇಶ್ವರನೇ! ತ್ವಯೈವ = ನಿನ್ನಿಂದವೇ ಅಪನೋತ್ತವ್ಯಂ = ತೊಲಗಿಸಲು ಬೇಕಾದುದು. ||೧೧೪||

ಏವಂ = ಈ ಪ್ರಕಾರದಲ್ಲಿ ಸವ್ರೀಳಃ = ನಾಚಿಕೆಯಿಂದ ಸಹಿತನಹಂಥಾ ನರಕೇಸರೀ = ನರಸಿಂಹನು ಶಂಕರಂ = ಪರಮೇಶ್ವರನನು ಕುರಿತು ವಿಜ್ಞಾಪ್ಯ = ಬಿನ್ನಹಂ ಮಾಡಿ ತತಃ = ಅಷ್ಟರಮೇಲೆ ವಿಷ್ಣುಃ = ಮಹಾವಿಷ್ಣು ಸ್ವಾಪರಾಧತಃ = ತನ್ನ ಅಪರಾಧದ ದೆಸೆಯಿಂದ ಜೀವಿತಂ = ಪ್ರಾಣವನು ಸಂತ್ಯಕ್ತವಾನ್ = ಬಿಟ್ಟನು. ||೧೧೫||

ತತಃ — ಅಷ್ಟರ ಮೇಲೆ ಶರಭವಿಗ್ರಹಃ = ಶರಭಮೂರ್ತಿಯನುಳ್ಳಂಥಾ ವೀರಭದ್ರಃ = ವೀರಭದ್ರನು ತದ್ವಕ್ತ್ರಶೇಷಂ = ಆ ನರಸಿಂಹನ ಮುಖದ ಶೇಷವನ್ನು ತದ್ಗಾತ್ರಂ — ಆ ಶರೀರವನು ಹೃತ್ವಾ = ತೊಲಗಿಸಿ ಕ್ಷಣಾತ್ = ಕ್ಷಣಮಾತ್ರದ ದೆಸೆಯಿಂದ ಅತೀಂದ್ರಿಯತ್ವಂ = ನಯನ ಮೊದಲಾದ ಇಂದ್ರಿಯಗಳ ಮೀರುವ ತನವನು ಅಗಮತ್ = ಎಯ್ದಿದನು. ||೧೧೬||

---

[2] ಸವ್ರೀಡಃ (ಘ)

ದೇವಾ ಊಚುಃ

ಅದ್ಯ ಬ್ರಹ್ಮಾದಯಸ್ಸರ್ವೇ ವೀರಭದ್ರ! [3]ತ್ವದೋಜಸಾ[3]
ಜೀವಿತಾಃ ಸ್ಮೋ ವಯಂ ದೇವ ಪರ್ಜನ್ಯೇನೇವ ಪಾದಪಾಃ ||೧೧೭||

ಯಸ್ಮಾದ್ಭೀಷಾ ದಹತ್ಯಗ್ನಿರುದೇತಿ ಚ ರವಿಶ್ಶಶೀ
ವಾತೋ ವಾತಿ ತು ಸೋಽಸಿ ತ್ವಂ ಮೃತ್ಯುರ್ಧಾವತಿ ಪಂಚಮಃ ||

ಯದವ್ಯಕ್ತಂ ಪರಂ ವ್ಯೋಮ ಕಾಲಾತೀತಂ ಸದಾ ಶಿವಮ್
ಭವಂತಮೇವ ಭಗವನ್ ವದಂತಿ ಬ್ರಹ್ಮವಾದಿನಃ ||೧೧೯||

ದೇವಾ ಊಚುಃ = ದೇವರ್ಕಳು ನುಡಿವುತ್ತಿದ್ದಾರು.

ದೇವ = ದೇವನಹಂಥಾ ಭೋ ವೀರಭದ್ರ = ಎಲೇ ವೀರಭದ್ರನೇ ಅದ್ಯ = ಇಂದು ಬ್ರಹ್ಮಾದಯಃ = ಬ್ರಹ್ಮ ಮೊದಲಾದಂಥಾ ವಯಂ ಸರ್ವೇ = ನಾವೆಲ್ಲರು ತ್ವದೋಜಸಾ = ನಿನ್ನ ಸಾಮರ್ಥ್ಯದಿಂದ ಜೀವಿತಾಃ = ಬದುಕಿದವರುಗಳು ಸ್ಮಃ = ಆದೆವು. ಅಸ + ಭುವಿ ಎಂಬ ಧಾತು. ಬಹುವಚನವು. ಕಥಮಿವ = ಅದು ಹೇಂಗೆಯಾ ಎಂದಡೆ ಪಾದಪಾಃ = ವೃಕ್ಷಂಗಳು ಪರ್ಜನ್ಯೇನೇವ = ಮೇಘದಿಂದ ವೆಹಗಹಗೆ, ||೧೧೭||

ಯಸ್ಮಾತ್ = ಆವನಾನೊಬ್ಬ ದೇವನ ದೆಸೆಯಿಂದ ಭೀಷಾ = ಭೀತಿಯಿಂದ ಅಗ್ನಿಃ = ಅಗ್ನಿಯು ದಹತಿ = ಸುಡುತ್ತಿಹನು ರವಿಃ = ಸೂರ್ಯನು ಉದೇತಿ = ಉದಯವಾಗುತ್ತಿಹನು ಶಶೀ ಚ = ಚಂದ್ರನು ಉದೇತಿ = ಉದಯವಾಗುತ್ತಿಹನು ವಾತಸ್ತು = ವಾಯು ವಾತಿ = ಬೀಸುತ್ತಿಹನು. ಪಂಚಮಃ = ಐದನೆಯದಹಂಥಾ ಮೃತ್ಯುಃ = ಮೃತ್ಯು ಧಾವತಿ = ಎಯ್ದುತ್ತಿಹುದು, ಆ ದೇವನು ತ್ವಂ = ನೀನು ಅಸಿ = ಅಹೆ. ||೧೧೮||

ಭೋ ಭಗವನ್ = ಎಲೆ ಷಡ್ಗುಣೈಶ್ವರ್ಯಸಂಪನ್ನನಹಂಥಾ ದೇವನೇ ಸದಾ ಶಿವಂ = ಎಲ್ಲಾಗಳೂ ಮಂಗಳ ಸ್ವರೂಪನಹಂಥಾ ಭವಂತಮೇವ = ನಿನ್ನನೇ ಬ್ರಹ್ಮವಾದಿನಃ = ಬ್ರಹ್ಮವ ನುಡಿವಂಥಾ ವೇದಾಂತಿಗಳು ಅವ್ಯಕ್ತಂ = ಅರಿಯಬಾರದೆ ಇದ್ದಂಥಾ ವ್ಯೋಮಕಾಲಾತೀತಂ = ಆಕಾಶವನೂ ಕಾಲವನೂ ಮೀರಿದಂಥಾ ಯತ್ ಪರಂ = ಆವುದಾನೊಂದು ಪರಂಬ್ರಹ್ಮವೆಂದು ವದಂತಿ = ಹೇಳುತ್ತಿಹರು ||೧೧೯||

---

[3] ತ್ವದಾಜಸಃ (ಘ)

ಕೇ ವಯಂ ತವ ಮಾಹಾತ್ಮ್ಯವೇದನೇ [1]ಪರಮೇಶ್ವರ।
ನಾಧಿಕ್ರಿಯೇರನ್ ಜಾತ್ಯಂಧಾ ರೂಪಲಾವಣ್ಯವರ್ಣನೇ ॥೧೨೦॥

ಉಪಸರ್ಗೇಷು ಸರ್ವೇಷು ತ್ರಾತುಮಸ್ಮಾನ್ ಗಣಾಧಿಪ
ಏಕಾದಶಾತ್ಮಾ ಭಗವನ್! ವರ್ತಸೇ ಕೃಪಯಾ [2]ಹರ। ॥೧೨೦॥

ಈದೃಶಾನ್ಯವತಾರಾಣಿ ದೃಷ್ಟ್ವಾಽಪಿ ಬಹುಶಸ್ತವ
ಕದಾಚಿತ್ತ್ವಾಂ ನ ಜಾನೀಮೋ ವಞ್ಚಿತಾಸ್ತವ ಮಾಯಯಾ ॥

ಗುಞ್ಜಾಭಿರಿವ ರತ್ನಾನಿ ತವ ರೂಪಾಣಿ ಸರ್ವದಾ
ಅಸ್ಮಾಭಿಸ್ಸಹ ಗಣ್ಯಂತೇ ತತ್ಕ್ಷಂತವ್ಯಂ ಪರಾತ್ಪರ ॥೧೨೩॥

ಭೋ ಪರಮೇಶ್ವರ=ಎಲೇ ಪರಮೇಶ್ವರನೇ ತವ= ನಿನ್ನ ಮಾಹಾತ್ಮ್ಯ-ವೇದನೇ = ಮಹಿಮೆಯನರಿವಲ್ಲಿ ವಯಂ = ನಾವು ಕೇ = ಏತರವರು? ಜಾಂತ್ಯಧಾಃ=ಹುಟ್ಟುಗುರುಡರು ರೂಪಲಾವಣ್ಯವರ್ಣನೇ=ರೂಪು ಶೃಂಗಾರಂಗಳ ವರ್ಣಿಸುವಲ್ಲಿ ಅಧಿಕ್ರಿಯೇರನ್ ನ=ಅಧಿಕಾರಿಗಳಲ್ಲಾ. ಸಮರ್ಥರಲ್ಲವೆಂಬುದರ್ಥ.

ಭೋ ಭಗವನ್=ಎಲೈ ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಗಣಾಧಿಪ= ಗಣೇಶ್ವರನಹಂಥಾ ಹರ = ಎಲೆ ಪರಮೇಶ್ವರನೇ ಸರ್ವೇಷು ಉಪಸರ್ಗೇಷು = ಸಮಸ್ತ ಸೃಷ್ಟಿಗಳಲ್ಲಿ ಅಸ್ಮಾನ್ = ನಮ್ಮನು ತ್ರಾತುಂ — ರಕ್ಷಿಸಲೋಸ್ಕರ ಕೃಪಯಾ = ಕರುಣದಿಂದ ಏಕಾದಶಾತ್ಮಾ = ಏಕಾದಶರುದ್ರಸ್ವರೂಪನಾಗಿ ವರ್ತಸೇ=ವರ್ತಿಸುತ್ತಿಹೆ. ೧೨೧॥

ತವ=ನಿನ್ನ ಈದೃಶಾನಿ = ಈಪ್ರಕಾ[3]ರಂಗಳಹಂಥಾ ಅವತಾರಾಣಿ = ಅವತಾರಂಗಳನು ಬಹುಶಃ=ಹಲವನು ದೃಷ್ಟ್ವಾಽಪಿ=ಕಂಡೂ ತವ=ನಿನ್ನ ಮಾಯಯಾ = ಮಾಯೆಯಿಂದ ವಂಚಿತಾಃ = ಮರೆಯಲುಪಟ್ಟವರುಗಳಾಗಿ ಕದಾಚಿತ್=ಒಮ್ಮೆಯೂ ತ್ವಾಂ=ನಿನ್ನನು ನ ಜಾನೀಮಃ=ಅರಿಯೆವು. ೧೨೨

ಪರಾತ್=ಪ್ರಕೃತಿಯ ದೆಸೆಯಿಂದವೂ ಪರ=ಮೇಲೆ ಇಹಂಥಾ ದೇವನೇ! ತವ=ನಿನ್ನ ರೂಪಾಣಿ=ರೂಪುಗಳು ಸರ್ವದಾ=ಎಲ್ಲಾಗಳೂ ಅಸ್ಮಾಭಿಃ ಸಹ = ನಮ್ಮೊಡನೆ ಗಣ್ಯಂತೇ = ಲೆಕ್ಕಿಸಲು ಪಡುತ್ತಿಹವು. ಕಥಮಿವ = ಅದು

---

[1] ಪರಮೇಶ್ವರೇ (ಗ) [2] ಹರಂ (ಗ) [3] ರವ (ಖ)

ದ್ವೇ ತನೂ ತವ ರೂಪಸ್ಯ ವೇದಜ್ಞಾ ಬ್ರಾಹ್ಮಣಾ ವಿದುಃ
ಘೋರಾಽಪ್ಯನ್ಯಾ ಶಿವಾಽಪ್ಯನ್ಯಾ [1]ತೇ ಪ್ರತ್ಯೇಕಮನೇಕಧಾ ||೧೨೪||

ಘೋರಾ ತನೂಸ್ತವ ಬ್ರಹ್ಮಾ ಸೂರ್ಯೋ ವಿಷ್ಣುರ್ಹುತಾಶನಃ
ತಥೇತರಾ ತನುಃ ಶಂಭೋ ಆಪೋ ಧರ್ಮಶ್ಚ ಚಂದ್ರಮಾಃ ||೧೨೫||

ಉಭಾಭ್ಯಾಂ ಪಾಹಿ ಭಗವನ್ ಭೀತಿಭ್ಯೋಽಸ್ಮಾನ್ ಮಹಾಬಲ !
ಭವತಾ ಹಿ ಜಗತ್ಸರ್ವಂ ವ್ಯಾಪ್ತಂ ಸ್ವೇನೈವ ತೇಜಸಾ ||೧೨೬||

ಬ್ರಹ್ಮವಿಷ್ಣ್ವರ್ಕಶಕ್ರಾಗ್ನಿಜಲಧರ್ಮಪುರೋಗಮಾಃ
ಸುರಾಸುರಾಸ್ಸಂಪ್ರಸೂತಾಃ ತ್ವತ್ತಸ್ಸರ್ವೇ ಮಹೇಶ್ವರ ||೧೨೭||

ಹೇಂಗೆಯಾ ಎಂದೊಡೆ ರತ್ನಾನಿ = ರತ್ನಂಗಳು ಗುಂಜಾಭಿರಿವ = ಗುರುಗುಂಜಿಗಳೊಡನೆಹೆಗಹಗೆ. ತತ್ = ಅದು ಕ್ಷಂತವ್ಯಂ = ಸೈರಿಸಲು ಯೋಗ್ಯವು. ||೧೨೩||

ವೇದಜ್ಞಾಃ = ವೇದಂಗಳನು ಬಲ್ಲಂಥಾ ಬ್ರಾಹ್ಮಣಾಃ = ಬ್ರಾಹ್ಮಣರುಗಳು ತವ = ನಿನ್ನ ರೂಪಸ್ಯ = ರೂಪಿಂಗೆ ದ್ವೇ ತನೂ = ಎರಡು ಮೂರ್ತಿಗಳೆಂದು ವಿದುಃ = ಹೇಳುವರು. ಅನ್ಯಾ = ಒಂದು ಮೂರ್ತಿ ಘೋರ್‍ಯಾಪಿ = ಭಯಂಕರವಹಂಥಾದು. ಅನ್ಯಾಽಪಿ = ಮತ್ತೊಂದು ಮೂರ್ತಿ ಶಿವಾ = ಮಂಗಳವಹಂಥಾದು ತೇ = ಆ ಎರಡು ಮೂರ್ತಿಗಳು ಪ್ರತ್ಯೇಕಂ = ಬೇರೆ ಬೇರೆ ಅನೇಕಧಾ = ಹಲವು ಪ್ರಕಾರಗಳಾದವು. ||೧೨೪||

ಬ್ರಹ್ಮಾ = ಬ್ರಹ್ಮನು ಸೂರ್ಯಃ = ಸೂರ್ಯನು ವಿಷ್ಣುಃ = ಹರಿ ಹುತಾಶನಃ = ಅಗ್ನಿ ತವ = ನಿನ್ನ ಘೋರಾ = ಭಯಂಕರವಹಂಥಾ ತನೂಃ — ಮೂರ್ತಿಯು. ಭೋ ಶಂಭೋ = ಎಲೆ ಪರಮೇಶ್ವರನೇ ಆಪಃ = ಉದಕಂಗಳು ಧರ್ಮಶ್ಚ = ಧರ್ಮವೂ ಚಂದ್ರಮಾಃ = ಚಂದ್ರನು ತಥೇತರಾ = ಆ ಭಯಂಕರಕ್ಕೆ ಬೇರಾಗುತ್ತಂ. ವಿದ್ದ ಶಾಂತವಹಂಥಾ ತನುಃ = ಸ್ವರೂಪವು. ||೧೨೫||

ಭಗವನ್ = ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಮಹಾಬಲ — ಅತಿಸತ್ತ್ವವನ್ನುಳ್ಳಂಥಾ ದೇವನೇ! ಸರ್ವಂ ಜಗತ್ = ಸಮಸ್ತ ಲೋಕವು ಸ್ವೇನ = ನಿನ್ನ ಸಂಬಂಧವಹಂಥಾ ತೇಜಸಾ ಏವ — ತೇಜಸ್ಸಿಂದವು ಭವತಾ = ನಿನ್ನಿಂದವು ವ್ಯಾಪ್ತಂ ಹಿ — ವ್ಯಾಪಿಸಲುಪಟ್ಟುದಲಾ. ಉಭಾಭ್ಯಾಂ = ಎರಡು ಮೂರ್ತಿಗಳಿಂದ ಅಸ್ಮಾನ್ = ನಮ್ಮನು ಭೀತಿಭ್ಯಃ = ಭೀತಿಗಳ ದೆಸೆಯಿಂದ ಪಾಹಿ = ರಕ್ಷಿಸು.

ಭೋ ಮಹೇಶ್ವರ = ಎಲೆ ಶಿವನೇ! ಬ್ರಹ್ಮವಿಷ್ಣ್ವರ್ಕಶಕ್ರಾಗ್ನಿಜಲಧರ್ಮ–

[1] ಸ್ಯಾಽನ್ಯಾ ಶಿವಾಸ್ಯಾನ್ಯಾ (ಗ)

ಬ್ರಹ್ಮಾಣಮಿಂದ್ರಂ ವಿಷ್ಣುಂ ಚ ಯಮಮನ್ಯಾನ್ಸುರಾಸುರಾನ್
ಯತೋ ನಿಗೃಹ್ಯ ಹರಸಿ ಹರ ಇತ್ಯುಚ್ಯಸೇ ತತಃ ||೧೨೮||

ಯತೋ ಬಿಭರ್ಷಿ ಸಕಲಂ ವಿಭಜ್ಯ ತನುಮಷ್ಟಧಾ
ಅತೋಽಸ್ಮಾನ್ ಪಾಹಿ ಭಗವನ್ ಪ್ರಸೀದ ಚ ಪುನಃ ಪುನಃ ||೧೨೯||

ಸೂತ ಉವಾಚ

ಇತಿ ಸ್ತುತೋ ಮಹಾದೇವಃ ಪ್ರಸನ್ನೋ[1]ಭಕ್ತಿವತ್ಸಲಃ
ಸುರಾನಾಹ್ಲಾದಯಾಮಾಸ ವರದಾನೈರಭೀಪ್ಸಿತೈಃ ||೧೩೦||

ಪುರೋಗಮಾಃ = ಬ್ರಹ್ಮ ವಿಷ್ಣು ಸೂರ್ಯ ಇಂದ್ರ ಅಗ್ನಿ ಜಲಧರ್ಮ ಮೊದಲಾದಂಥಾ ಸುರಾಸುರಾಃ = ದೇವಾಸುರರುಗಳು ಸರ್ವೇ = ಸಮಸ್ತರೂ ತ್ವತ್ತಃ = ನಿನ್ನ ದೆಸೆಯಿಂದ ಸಂಪ್ರಸೂತಾಃ = ಹುಟ್ಟಿದರು. ||೧೨೭||

ಬ್ರಹ್ಮಾಣಂ = ಬ್ರಹ್ಮನನು ಇಂದ್ರಂ = ಇಂದ್ರನನು ವಿಷ್ಣುಂ ಚ = ವಿಷ್ಣುವನು ಯಮಂ = ಯಮನನು ಸುರಾಸುರಾನ್ = ದೇವರ್ಕಳನು ರಾಕ್ಷಸರುಗಳನು ಅನ್ಯಾನ್ = ಉಳಿದಂಥಾವರುಗಳನು ಯತಃ = ಆವುದಾನೊಂದು ಕಾರಣವಾಗಿ ನಿಗೃಹ್ಯ—ನಿಗ್ರಹಿಸಿ ಹರಸಿ = ಸಂಹರಿಸುತ್ತಿಹೆ. ತತಃ = ಅದು ಕಾರಣವಾಗಿ ಹರ ಇತಿ = ಹರನೆಂದು ಹೀಗೆ ಉಚ್ಯಸೇ = ಹೇಳಲುಪಡುತ್ತಿಹೆ. ||೧೨೮||

ಭೋ ಭಗವನ್ = ಎಲೇ ಷಡ್ಗುಣೈಶ್ವರ್ಯಸಂಪನ್ನನಹಂಥಾ ಪರಮೇಶ್ವರನೇ ಯತಃ = ಆವುದಾನೊಂದು ಕಾರಣವಾಗಿ ತನುಂ = ಶರೀರವನು ಅಷ್ಟಧಾ = ಎಂಟು ಪ್ರಕಾರವಾಗಿ ವಿಭಜ್ಯ = ವಿಭಾಗಿಸಿ ಸಕಲಂ = ಸಮಸ್ತ ಲೋಕವನು ಬಿಭರ್ಷಿ = ಧರಿಸುತ್ತಿಹೆ. ಅತಃ = ಅದುಕಾರಣವಾಗಿ ಅಸ್ಮಾನ್ = ನಮ್ಮನು ಪಾಹಿ = ರಕ್ಷಿಸು ಪುನಃಪುನಶ್ಚ = ಅಡಿಗಡಿಗೆಯೂ ಪ್ರಸೀದ = ಪ್ರಸನ್ನನಾಗು. ||೧೨೯||

ಸೂತಉವಾಚ = ಸೂತಮುನಿಯ ವಾಕ್ಯವು.

ಇತಿ = ಈ ಪ್ರಕಾರದಿಂದ ಸ್ತುತಃ = ಸ್ತೋತ್ರವ ಮಾಡಿಸಿಕೊಳಲುಪಟ್ಟಂಥಾ ಭಕ್ತಿವತ್ಸಲಃ = ಭಕ್ತಿಯಲ್ಲಿ ಎರಕವನುಳ್ಳಂಥಾ ಪರಮೇಶ್ವರನು ಪ್ರಸನ್ನಃ = ಪ್ರಸನ್ನನಾಗಿ ಅಭೀಪ್ಸಿತೈಃ = ಬಯಸಿದಂಥಾ ವರದಾನೈಃ = ವರವ ಕೊಡುಹಂಗಳಿಂದ ಸುರಾನ್ = ದೇವತೆಗಳನು ಆಹ್ಲಾದಯಾಮಾಸ = ಸಂತೋಷಿಸಿದನು. ||೧೩೦||

---

[1] ಭಕ್ತ (ಘ)

ಉವಾಚ ಸ ಸುರಾನ್ ದೇವೋ ಮಹರ್ಷೀಂಶ್ಚ ಸನಾತನಃ
ಏಷ ವಿಷ್ಣುರ್ನೃಸಿಂಹಾಖ್ಯಃ ಸದರ್ಪಶ್ಚ ಮಹಾಬಲಃ ||೧೩೧||

ಜಗತ್ಸಂಹಾರ[2]ಕಾರೇಣ[3] ಪ್ರವೃತ್ತೋ ಲೋಕಭೀಷಣಃ
ಸಂಹೃತಃ ಶಂಕರಾಂಶೇನ ರುದ್ರೇಣ ಶರಭಾತ್ಮನಾ ||
ವೀರಭದ್ರೇಣ ಜಗತಾಂ ಹಿತಾರ್ಥಂ ನಾಪರೇಣ ಚ ||೧೩೨||

ಏತಾವದುಕ್ತ್ವಾ ಭಗವಾನ್ ವೀರಭದ್ರೋ ಮಹಾಬಲಃ
ಪಶ್ಯತಾಂ ಸರ್ವದೇವಾನಾಂ ತತ್ರೈವಾಂತರಧೀಯತ ||೧೩೩||

ನೃಸಿಂಹಕೃತ್ತಿವಸನಸ್ತದಾಪ್ರಭೃತಿ ಶಂಕರಃ
ವಕ್ತ್ರಂ ತಸ್ಯ ಮುಂಡಮಾಲಾಯಾಂ ನಾಯಕತ್ವೇನ ಕಲ್ಪಿತಮ್ ||೧೩೪||

ಸನಾತನಃ = ನಿತ್ಯನಹಂಥಾ ದೇವಃ = ದೇವನಹಂಥಾ ಸಃ = ಆ ಪರಮೇಶ್ವರನು ಸುರಾನ್ = ದೇವರ್ಕಳನು ಮಹರ್ಷೀಂಶ್ಚ = ಮಹಾಋಷಿಗಳನು ಕುರಿತು ಉವಾಚ = ನುಡಿದನು. ಸದರ್ಪಶ್ಚ = ದರ್ಪಸಹಿತನಹಂಥಾ ಮಹಾಬಲಃ = ಮಹಾಪರಾಕ್ರಮವನುಳ್ಳಂಥಾ ನೃಸಿಂಹಾಖ್ಯಃ = ನೃಸಿಂಹನೆಂಬ ಹೆಸರನುಳ್ಳಂಥಾ ಏಷ ವಿಷ್ಣುಃ = ಈ ವಿಷ್ಣು, ||೧೩೧||

ಲೋಕಭೀಷಣಃ = ಲೋಕಕ್ಕೆ ಭಯಂಕರ[3]ಮೂರ್ತಿ[3]ಯಾಗಿ ಪ್ರವೃತ್ತಃ = ವರ್ತಿಸಲುಪಟ್ಟನು.[3] ಜಗತ್ಸಂಹಾರಕಾರೇಣ = ಲೋಕವ ಸಂಹರಿಸುವುದಕ್ಕೆ ಕಾರಣವಹಂಥಾ ಶಂಕರಾಂಶೇನ = ಪರಮೇಶ್ವರನ ಅಂಶವಹಂಥಾ ಶರಭಾತ್ಮನಾ = ಶರಭರೂಪನುಳ್ಳಂಥಾ ವೀರಭದ್ರೇಣ = ವೀರಭದ್ರನೆಂಬ ರುದ್ರನಿಂದ ಜಗತಾಂ = ಲೋಕಂಗಳ ಹಿತಾರ್ಥಂ = ಹಿತಕ್ಕೋಸ್ಕರ ಸಂಹೃತಃ = ಸಂಹರಿಸಲುಪಟ್ಟನು. ಅಪರೇಣ ಚ = ಮತ್ತೊಬ್ಬ ದೇವನಿಂದವು ನ ಸಂಹೃತಃ = ಸಂಹರಿಸಲುಪಟ್ಟುದಿಲ್ಲ.

[4]ಏತಾವತ್ = ಇಷ್ಟನು[4] ಉಕ್ತ್ವಾ = ನುಡಿದು ಭಗವಾನ್ = ಭಗವಾನ್ನವಹಂಥಾ ಮಹಾಬಲಃ = ಮಹಾಪರಾಕ್ರಮಿಯುಹಂಥಾ ವೀರಭದ್ರಃ = ವೀರಭದ್ರನು ಪಶ್ಯತಾಂ = ನೋಡುತ್ತಿದ್ದಂಥಾ ಸರ್ವದೇವಾನಾಂ = ಸಮಸ್ತದೇವರ್ಕಳ ತತ್ರೈವ ಆ ಮಧ್ಯದಲ್ಲಿಯೇ ಅಂತರಧೀಯತ = ಅದೃಶ್ಯವಾದನು. ||೧೩೩||

[5]ಶಂಕರಃ = ಪರಮೇಶ್ವರನು ತದಾಪ್ರಭೃತಿ = ಅಂದು ಮೊದಲಾಗಿ ನೃಸಿಂಹ-ಕೃತ್ತಿವಸನಃ = ನರಸಿಂಹನ[5] ಚರ್ಮಾಂಬರನಾದನು. ತದ್ವಕ್ತ್ರಂ = ಆ ನರಸಿಂಹನ

---

[2] ಕರಣೇ (ಘ) [3] ಲುಪ್ತ (ಕ) [4] ಲುಪ್ತ (ಕ) [5] ಲುಪ್ತ (ಕ)

ತತೋ ದೇವಾ ನಿರಾತಂಕಾಃ ಕೀರ್ತಯಂತಃ ಕಥಾಮಿಮಾಮ್
ವಿಸ್ಮಯೋತ್ಫುಲ್ಲವದನಾ ಜಗ್ಮುಸ್ಸರ್ವೇ ಯಥಾಕ್ರಮಮ್ ||೧೩೫||

ಸೂತ ಉವಾಚ

*** ಶೂಲಾಯುಧಾಯ ಸುರವೃಂದಕಮೌಲಿಮಾಲಾ-**
ಲೀಲಾಯಮಾನಚರಣಾಂಬುಜಪಲ್ಲವಾಯ ।
ಹೇಲಾವಲೇಪಪರಿಭೂಷ್ಣುನೃಸಿಂಹರಂಹೋ-
ಲೀಲಾಪಹಾರಶರಭಾಕೃತಯೇ ನಮೋಽಸ್ತು ||೧೩೬||

ಇದಂ ತು ಶರಭಾಖ್ಯಾನಂ ನ ಪ್ರಕಾಶ್ಯಂ ಯತಸ್ತತಃ
ಪ್ರಕಾಶ್ಯಂ ಶಿವಭಕ್ತೇಷು ಧೀರೇಷು ನಿಯತೇಷು ಚ ||೧೩೭||

ಮುಖವು ಮುಂಡಮಾಲಾಯಾಂ = ರುಂಡಮಾಲೆಯಲ್ಲಿ ನಾಯಕತ್ವೇನ = [1]ಶ್ರೇಷ್ಠವಹಿತನದಿಂದ ಕಲ್ಪಿತಂ = ಮಾಡಲುಪಟ್ಟಿತ್ತು. ||೧೩೪||

ತತಃ = ಅಷ್ಟರಮೇಲೆ ಸರ್ವೇ ದೇವಾಃ = ಸಮಸ್ತದೇವರ್ಕಳು ನಿರಾತಂಕಾಃ = ನಿರ್ಭೀತರುಗಳಾಗಿ [2]ಇಮಾಂ ಕಥಾಂ = ಈ ಕಥೆಯನು ಕೀರ್ತಯಂತಃ = ಕೊಂಡಾಡುತಂವಿದ್ದವರುಗಳಾಗಿ [2] ವಿಸ್ಮಯೋತ್ಫುಲ್ಲವದನಾಃ = ಆಶ್ಚರ್ಯದಿಂದ ವಿಕಸಿತವಾದ ಮುಖವನುಳ್ಳಂಥಾವರುಗಳಾಗುತವು ಯಥಾಕ್ರಮಂ = ಕ್ರಮತಪ್ಪದೆ ಜಗ್ಮುಃ = ಎಯ್ದಿದರು. ||೧೩೫||

ಸೂತ ಉವಾಚ = ಸೂತಮುನಿ ನುಡಿವುತ್ತಿದ್ದಾನು.

[3] ಶೂಲಾಯುಧಾಯ = ತ್ರಿಶೂಲಾಯುಧವನುಳ್ಳಂಥಾ [3] ಸುರವೃಂದಕಮೌಳಿಮಾಲಾಲೀಲಾಯಮಾನಚರಣಾಂಬುಜಪಲ್ಲವಾಯ = ದೇವರ್ಕಳ ಸಮೂಹದ ಮಕುಟಂಗಳ ಪಂಙ್ತಿಯಲ್ಲಿ ಒಪ್ಪುತ್ತಂವಿದ್ದ ಚರಣಕಮಲವೆಂಬ ಎಳೆದಳಿರನುಳ್ಳಂಥಾ ಹೇಲಾವಲೇಪಪರಿಭೂಷ್ಣುನೃಸಿಂಹರಂಹೋಲೀಲಾಪಹಾರಶರಭಾಕೃತಯೇ = ವಿಲಾಸವಹ ಗರ್ವದಿಂದ ಹೆಚ್ಚಿದ ನೃಸಿಂಹನ, ಬೇಗದಲ್ಲಿ ಲೀಲೆಯಿಂದ ಅಪಹರಿಸಲುಪಟ್ಟ ಶರಭಮೂರ್ತಿಯನುಳ್ಳಂಥಾ ಪರಮೇಶ್ವರಂಗೋಸ್ಕರ ನಮಃ = ನಮಸ್ಕಾರವು ಅಸ್ತು = [4]ಇರಲಿ.[4] ||೧೩೬||

ಇದಂ = ಈ ಶರಭಾಖ್ಯಾನಂ ತು = ಶರಭಾಧ್ಯಾಯವು ಯತಸ್ತತಃ = ಅತ್ತಿತ್ತಲು ನ ಪ್ರಕಾಶ್ಯಂ = ಪ್ರಕಾಶಿಸಲಾಗದು. ಹೇಳಲಾಗದೆಂಬುದರ್ಥ. ಧೀರೇಷು = ವಿದ್ವಾಂಸ್ನರುಗಳಹಂಥಾ ನಿಯತೇಷು = ಶುದ್ಧರುಗಳಹಂಥಾ ಶಿವಭಕ್ತೇಷು = ಶಿವಭಕ್ತರುಗಳಲ್ಲಿಯು ಪ್ರಕಾಶ್ಯಂ = ಪ್ರಕಾಶಿಸಲು ಯೋಗ್ಯವು. ||೧೩೭||

---

* ವಸಂತತಿಲಕವೃತ್ತಂ [1] ಶ್ರೇಷ್ಠ (ಕ) [2,3] ಲುಪ್ತ (ಕ) [4] ಆಗಲಿ (ಖ)

ತ್ರೈರೇವ ಪಠಿತವ್ಯಂ ಚ ಶ್ರೋತವ್ಯಂ ಚ ಶಿವಾತ್ಮಭಿಃ
ಇದಂ ತು ಶರಭಾಖ್ಯಾನಂ ಪುಣ್ಯಂ ವೇದೈಶ್ಚ ಸಮ್ಮತಮ್ ||೧೩೮||
ಪಠತಾಂ ಶೃಣ್ವತಾಂ ಚೈವ ಸರ್ವದುಃಖವಿನಾಶನಮ್
ಶಿವಲೋಕಸ್ಯ ಸೋಪಾನಂ ವಾಂಛಿತಾರ್ಥೈಕಸಾಧನಮ್ ||೧೩೯||
ಮಂಗಳಾರ್ಥಂ ಪಠೇದ್ವಿದ್ವಾನ್ ಶಿವಭಕ್ತೋ ದೃಢವ್ರತಃ ||೧೪೦||
ಇತಿ ಸೂತಾತ್ಸಮಾಕರ್ಣ್ಯ ಮುನಯಶ್ಶಂಸಿತವ್ರತಾಃ
ಪ್ರಣಮ್ಯ ಹೃಷ್ಟಮನಸಃ ಪ್ರಯಯುಸ್ಸ್ವಂ ಸ್ವಮಾಶ್ರಮಮ್ ||

ಇತಿ ಶ್ರೀನೀಲಕಂಠನಾಗನಾಥಾಚಾರ್ಯವರ್ಯವಿರಚಿತೇ ಶ್ರೀಮದ್ವೀರಮಾಹೇಶ್ವರಾಚಾರಸಂಗ್ರಹೇ ವೀರಶೈವಾಗಮಸುಧಾರ್ಣವ-ಪೂರ್ಣಚಂದ್ರಸ್ಯ ಗೊರಗೋಡಪುರವರಾಧೀಶ್ವರಮಲ್ಲಿಕಾರ್ಜುನಾ-ಚಾರ್ಯಸ್ಯಾನುಜ್ಞಯಾ ಶ್ರೀಧರಾಂಕಪ್ರಣೀತೇ ಕರ್ಣಾಟಭಾಷಾವಿವರಣೇ ಶಿವಾಧಿಕ್ಯಕಥನೇ 'ಶರಭಲೀಲಾನಾಮ'
ಸಪ್ತದಶೋಽಧ್ಯಾಯಃ

ಶಿವಾತ್ಮಭಿಃ = ಶಿವಸ್ವರೂಪರಹಂಥಾ ತ್ರೈರೇವ = ಆ ಶಿವಭಕ್ತರುಗಳಿಂದವೇ ವೇದೈಃ = ವೇದಂಗಳೊಡನೆ ಸಮ್ಮತಂ = ಸಮ್ಮತವಹಂಥಾ ಇದಂ = ಈ ಪುಣ್ಯಂ ಪುಣ್ಯವಹಂಥಾ ಶರಭಾಖ್ಯಾನಂ ತು = ಶರಭಾಧ್ಯಾಯವು ಪಠಿತವ್ಯಂ = ಪಠಿಸಲು ಯೋಗ್ಯವು. ಶ್ರೋತವ್ಯಂ ಚ = ಕೇಳಲು ಯೋಗ್ಯವು. ||೧೩೮||

ಪಠತಾಂ = ಪಠಿಸಿದವರುಗಳಿಗೆ ಶೃಣ್ವತಾಂ ಚೈವ = ಕೇಳಿದವರುಗಳಿಗೆಯೂ ಸರ್ವದುಃಖವಿನಾಶನಂ = ಸಮಸ್ತದುಃಖ ಕೆಡುವುದು. ಶಿವಲೋಕಸ್ಯ = ಶಿವಲೋಕಕ್ಕೆ ಸೋಪಾನಂ = ಸೋಪಾನವಹುದು. ವಾಂಛಿತಾರ್ಥೈಕಸಾಧನಂ = ಇಷ್ಟಾರ್ಥಕ್ಕೆ ಇದೊಂದೇ ಸಾಧನವಹಂಥಾದ್ದು. ||೧೩೯||

ವಿದ್ವಾನ್ = ವಿದ್ವಾಸ್ನುವಹಂಥಾ ಶಿವಭಕ್ತಃ = [2]ಶಿವನಲ್ಲಿ[3] ಭಕ್ತಿಯು-ನುಳ್ಳಂಥಾ ದೃಢವ್ರತಃ = ದೃಢವಹಂಥಾ ವ್ರತವನುಳ್ಳಾತನು ಮಂಗಳಾರ್ಥಂ = ಶುಭನಿಮಿತ್ತವಾಗಿ ಪಠೇತ್ = ಪಠಿಸೂದು. ||೧೪೦||

ಇತಿ = ಈ ಪ್ರಕಾರದಲ್ಲಿ ಸೂತಾತ್ = ಸೂತಮುನೀಶ್ವರನ ದೆಸೆಯಿಂದ ಸಮಾಕರ್ಣ್ಯ = ಲೇಸಾಗಿ ಕೇಳಿ ಶಂಸಿತವ್ರತಾಃ = ಕೊಂಡಾಡಿಸಿಕೊಳಲುಪಟ್ಟ ವ್ರತವನುಳ್ಳಂಥಾ ಮುನಯಃ = ಸಮಸ್ತ ಋಷಿಗಳು ಹೃಷ್ಟಮನಸಃ = ಸಂತೋಷಿಸಲುಪಟ್ಟ ಮನಸ್ಸನುಳ್ಳಂಥಾವರುಗಳಾಗಿ ಪ್ರಣಮ್ಯ = ನಮಸ್ಕರಿಸಿ ಸ್ವಂ ಸ್ವಂ ಆಶ್ರಮಂ = ತಮ್ಮ ತಮ್ಮ ಆಶ್ರಮವನು ಪ್ರಯಯುಃ = ಎಯ್ದಿದರು. ||೧೪೧||

---

[2] ಶಿವಭಕ್ತನಲ್ಲಿ (ಖ)

ಅಥಾಷ್ಟಾದಶೋಽಧ್ಯಾಯಃ

(ಕಾಮದಹನಲೀಲಾ)

ಆದಿತ್ಯಪುರಾಣೇ

ಋಷಯ ಊಚುಃ

ಶ್ರುತಮಸ್ಮಾಭಿರಖಿಲಂ ಜ್ಞಾನಂ ಮಾಹೇಶ್ವರಂ ಮಹತ್
ಇದಾನೀಂ ಶ್ರೋತುಮಿಚ್ಛಾಮೋ ವಿವಾಹಂ ಗಿರಿಜಾಪತೇಃ ||೧||

ಸೂತ ಉವಾಚ

ಯದುವಾಚ ಪುರಾ ದೇವಃ ಪೃಷ್ಟೋ ಮಾರ್ತಂಡಸೂನುನಾ
ತದಹಂ ಸಂಪ್ರವಕ್ಷ್ಯಾಮಿ ಶೃಣುಧ್ವಂ ಮುನಿಸತ್ತಮಾಃ ||೨||

ಆದಿತ್ಯಪುರಾಣೇ = ಆದಿತ್ಯ ಪುರಾಣದಲ್ಲಿ ಹೇಳುತ್ತಿದ್ದೂದು.

ಋಷಯ ಊಚುಃ = [1]ನೈಮಿಷಾರಣ್ಯವಾಸಿಗಳಹಂಥ[1] ಋಷಿಗಳು ನುಡಿವುತ್ತಿದ್ದಾರು.

ಮಾಹೇಶ್ವರಂ = ಶಿವನ ಸಂಬಂಧವಹಂಥಾ ಮಹತ್ = ಉತ್ಕೃಷ್ಟವಹಂಥಾ ಅಖಿಲಂ ಜ್ಞಾನಂ = ಸಮಸ್ತ ಜ್ಞಾನವು ಅಸ್ಮಾಭಿಃ = ನಮ್ಮಿಂದ ಶ್ರುತಂ = ಕೇಳಲು ಪಟ್ಟಿತ್ತು. ಇದಾನೀಂ = ಈಗಳು ಗಿರಿಜಾಪತೇಃ = ಪಾರ್ವತೀಪತಿಯಹಂಥಾ ಶಿವನ ವಿವಾಹಂ = ವಿವಾಹವನು ಶ್ರೋತುಂ = ಕೇಳಲು ಇಚ್ಛಾಮಃ = ಇಚ್ಛೈಸುತ್ತಿದ್ದೇವು.

ಸೂತ ಉವಾಚ = ಸೂತಮುನಿಯು ನುಡಿದನು.

ಪುರಾ = ಪೂರ್ವದಲ್ಲಿ ಮಾರ್ತಂಡಸೂನುನಾ = ಸೂರ್ಯಪುತ್ರನಿಂದ [ಯಮನಿಂದ] ದೇವಃ = ಶಿವನು ಪೃಷ್ಟಃ = ಬೆಸಗೊಳಲುಪಟ್ಟಾತನಾಗಿ ಯತ್ = ಆವುದಾನೊಂದು ವಿವಾಹವನು ಉವಾಚ = ನುಡಿದನು. ತತ್ = ಅದನು ಅಹಂ = ನಾನು ಸಂಪ್ರವಕ್ಷ್ಯಾಮಿ = ಹೇಳಿಹೆನು. ಭೋ ಮುನಿಸತ್ತಮಾಃ = ಎಲೈ ಮುನಿಶ್ರೇಷ್ಠರುಗಳಿರಾ ಶೃಣುಧ್ವಂ = ಕೇಳಿ. ||೨||

---

[1] (ಖ) ಪಾಠ.

ಆಸೀದ್ದಕ್ಷಸುತಾ ದೇವೀ ಸತೀ ತ್ರೈಲೋಕ್ಯಪೂಜಿತಾ
ತ್ಯಕ್ತ್ವಾ ದಾಕ್ಷಂ ಶರೀರಂ ಚ ಬಭೂವಾಚಲಕನ್ಯಕಾ ||೩||

ನಾಮ್ನಾ ಕಾಲೀತಿ ವಿಖ್ಯಾತಾ ವಿಶ್ವರೂಪಾ ಮಹೇಶ್ವರೀ
ಜಗಚ್ಚೈತನ್ಯರೂಪಾ ಯಾ ಜಗಚ್ಚೈತನ್ಯಬೋಧಿನೀ ||೪||

ಅಧಿಷ್ಠಿತಸ್ತಯಾ ಕಾಲ್ಯಾ ಹಿಮವಾನ್ಪರ್ವತೋತ್ತಮಃ
ಪುಣ್ಯಸ್ಥಾನಮಭೂದ್ವಿಪ್ರಾ ಮೋಕ್ಷದಃ ಸರ್ವದೇಹಿನಾಮ್ ||೫||

ಸಿದ್ಧಾನಾಂ ಚ ಮುನೀನಾಂ ಚ ಗಂಧರ್ವಾಣಾಂ ದಿವೌಕಸಾಮ್
ಆವಾಸಃ ಕಿನ್ನರಾಣಾಂ ಚ ಸ್ಮರಣಾತ್ ಪುಣ್ಯದೋ ನೃಣಾಮ್ ||೬||

ದಕ್ಷಸುತಾ = ದಕ್ಷನ ಕುಮಾರಿಯಹಂಥಾ ಸತೀ ದೇವೀ = ಸತೀದೇವಿ ತ್ರೈಲೋಕ್ಯಪೂಜಿತಾ = ಮೂರುಲೋಕದಿಂದಪೂಜಿಸಿಕೊಳಲ್ಪಟ್ಟಾಯಕನು ಆಸೀತ್ = ಆದಳು. ದಾಕ್ಷಂ = ದಕ್ಷನ ಸಂಬಂಧವಹಂಥಾ ಶರೀರಂ ಚ = ದೇಹವನ್ನು ತ್ಯಕ್ತ್ವಾ = ಬಿಟ್ಟು ಅಚಲಕನ್ಯಕಾ = ಗಿರಿರಾಜನ ಮಗಳು ಬಭೂವ = ಆದಳು.

ಜಗಚ್ಚೈತನ್ಯಬೋಧಿನೀ = ಲೋಕಕ್ಕೆ ಜ್ಞಾನವನು ಬೋಧಿಸುವಂಥಾ ಜಗಚ್ಚೈತನ್ಯರೂಪಾ = ಲೋಕದ ಚೈತನ್ಯರೂಪಿಯಹಂಥಾ ವಿಶ್ವರೂಪಾ = ವಿಶ್ವ-ರೂಪಿಯಹಂಥಾ ಯಾ = ಆವಳಾಳೊಬ್ಬಳು ಮಹೇಶ್ವರೀ = ಸಾಕ್ಷಾತ್ಪರಮೇಶ್ವರಿ ನಾಮ್ನಾ-ಹೆಸರಿನಿಂದ ಕಾಳೀತಿ = ಕಾಳಿಯೆಂದು ಹೀಂಗೆ ವಿಖ್ಯಾತಾ = ಪ್ರಖ್ಯಾತೆ ಯಾದಳು. ||೪||

ಭೋ ವಿಪ್ರಾಃ—ಎಲೆ ಬ್ರಾಹ್ಮಣೋತ್ತಮರುಗಳಿರಾ ! ತಯಾ ಕಾಲ್ಯಾ = ಆ ಕಾಳಿಯಿಂದ ಅಧಿಷ್ಠಿತಃ = ಇರಲುಪಟ್ಟಂಥಾ ಪರ್ವತೋತ್ತಮಃ = ಗಿರಿಗಳಿಗೆ ಉತ್ತಮನಹಂಥಾ ಹಿಮವಾನ್ = ಹಿಮವತ್ಪರ್ವತನು ಸರ್ವದೇಹಿನಾಂ = ಸಮಸ್ತ ಪ್ರಾಣಿಗಳಿಗೆ ಮೋಕ್ಷದಃ = ಮೋಕ್ಷವ ಕೊಡುವಾತನಾದನು. ಪುಣ್ಯಸ್ಥಾನಂ = ಪುಣ್ಯಕ್ಷೇತ್ರವು (ಪುಣ್ಯಕ್ಕೆ ಸ್ಥಾನವು) ಅಭೂತ್ = ಆದನು. ||೫||

ಸಿದ್ಧಾನಾಂ ಚ = ಸಿದ್ಧರುಗಳಿಗೆಯು ಮುನೀನಾಂ ಚ = ಮುನಿ (ಋಷಿ) ಗಳಿಗೆಯು ಗಂಧರ್ವಾಣಾಂ = ಗಂಧರ್ವರುಗಳಿಗೆ ದಿವೌಕಸಾಂ = ದೇವರ್ಕಳಿಗೆ ಕಿನ್ನರಾಣಾಂ ಚ = ಕಿನ್ನರರುಗಳಿಗೆಯೂ ನೃಣಾಂ = ಮನುಷ್ಯರುಗಳಿಗೆ ಆವಾಸಃ = ಸ್ಥಾನವಾದನು. ಸ್ಮರಣಾತ್ = ನೆನದ ಮಾತ್ರದ ದೆಸೆಯಿಂದ ಪುಣ್ಯದಃ = ಪುಣ್ಯವನು ಕೊಡುವಾತನಾದನು. ||೬||

ಶಿವಂ ಭರ್ತಾರಮಿಚ್ಛಂತೀ ತಸ್ಮಿನ್ ಗಿರಿವರೋತ್ತಮೇ
ತಪಸ್ತೇಪೇ ಶಿವಾ ಕಾಲೀ ಮಾತಾಪಿತ್ರೋರನುಜ್ಞಯಾ ||೭||

ಅಥಾಸ್ಮಿನ್ನಂತರೇ ದೈತ್ಯಸ್ತಾರಕೋ ಲೋಕಕಂಟಕಃ
ಜಾತೋ ದೈತ್ಯಕುಲೇ ಬಾಲೋ ಮೃತ್ಯುರೂಪೋ ದಿವೌಕಸಾಮ್ ||

ಬ್ರಹ್ಮಾಣಂ ತಪಸಾ ತೋಷ್ಯ ವರಂ ತಸ್ಮಾದವಾಪ್ಯ ಚ
ದೇವಾಃ ಪಲಾಯಿತಾಸ್ತೇನ ತಾರಕೇಣ ಬಲೀಯಸಾ ||೯||

ದೇವಾನಾಂ ಯೋಷಿತೋ ಯಾಶ್ಚ ಬಲಾದಪಹೃತಾಶ್ಚ ತಾಃ
ದುಃಖಾಗ್ನಿನಾ ಸುಸಂತಪ್ತಾಃ ಶಕ್ರಾದ್ಯಾಃ ಪ್ರಥಿತೌಜಸಃ ||೧೦||

ಶಿವಾ = ಮಂಗಳಸ್ವರೂಪಿಯಹಂಥಾ ಕಾಳೀ = ಪಾರ್ವತೀದೇವಿ ಶಿವಂ = ಪರಮೇಶ್ವರನನು ಭರ್ತಾರಂ = ಗಂಡನನ್ನಾಗಿ ಇಚ್ಛಂತೀ = ಬಯಸುತ್ತಿದ್ದಾಯಕನಾಗಿ [ಬಯಸುತ್ತಿದ್ದಾತಳಾಗಿ] ಮಾತಾಪಿತ್ರೋಃ = ತಾಯಿತಂದೆಗಳ ಅನುಜ್ಞಯಾ = ಅನುಜ್ಞೆಯಿಂದ ಗಿರಿವರೋತ್ತಮೇ = ಗಿರಿಗಳಿಗೆ ಅತ್ಯಂತ ಉತ್ತಮವಹಂಥಾ ತಸ್ಮಿನ್ = ಆ ಹಿಮವತ್ಪರ್ವತದಲ್ಲಿ ತಪಃ = ತಪಸ್ಸನು ತೇಪೇ = ತಪಿಸಿದಳು. [1]ಮಾಡಿದಳೆಂಬುದರ್ಥ[1] ತಪ+ಸಂತಾಪೇ ಎಂಬ ಧಾತು. ಲಿಟ್ ಆತ್ಮನೇಪದ ಪ್ರಥಮಪುರುಷೈಕವಚನ. ||೭||

ಅಥ = ಅನಂತರದಲ್ಲಿ ಅಸ್ಮಿನ್ನಂತರೇ = ದೇವಿ ತಪಸ್ಸನು ಮಾಡುವ ಈ ವೇಳೆಯಲ್ಲಿ ದೈತ್ಯಕುಲೇ = ರಾಕ್ಷಸರ ಕುಲದಲ್ಲಿ ಜಾತಃ = ಹುಟ್ಟಿದಂಥಾ ಬಾಲಃ = ಚಿಕ್ಕವನಹಂಥಾ ಲೋಕಕಂಟಕಃ = ಲೋಕಕ್ಕೆ ಕಂಟಕನಹಂಥಾ ದೈತ್ಯಃ = ರಾಕ್ಷಸನಹಂಥಾ ತಾರಕಃ = ತಾರಕನು ದಿವೌಕಸಾಂ = ದೇವರ್ಕಳಿಗೆ ಮೃತ್ಯುರೂಪಃ ಮೃತ್ಯುರೂಪನಾದನು. ||೮||

ತಪಸಾ = ತಪಸ್ಸಿನಿಂದ ಬ್ರಹ್ಮಾಣಂ = ಬ್ರಹ್ಮನನು ತೋಷ್ಯ = ಮೆಚ್ಚಿಸಿ ತಸ್ಮಾತ್ = ಆ ಬ್ರಹ್ಮನ ದೆಸೆಯಿಂದ ವರಂ = ವರವನು ಅವಾಪ್ಯ ಚ = ಪಡದೂ ಬಲೀಯಸಾ = ಬಲಿಷ್ಠನಹಂಥಾ ತೇನ ತಾರಕೇಣ = ಆ ತಾರಕಾಸುರನಿಂದ ದೇವಾಃ = ದೇವರ್ಕಳು ಪಲಾಯಿತಾಃ = ಓಡಿದರು. ||೯||

ದೇವಾನಾಂ = [2]ದೇವರ್ಕಳ[2] ಯಾಃ = [3]ಆರು ಕೆಲಬರು[3] ಯೋಷಿತಃ = [4]ಸ್ತ್ರೀಯರುಗಳುಂಟು[4] ತಾಶ್ಚ = ಆ ದೇವಸ್ತ್ರೀಯರುಗಳು ಬಲಾತ್ = ಬಲುಮೆಯು

---

[1] (ಖ) ಪಾಠಃ. [2], [3], [4], (ಕ) ಲುಪ್ತ.

ಗತಾ ದೇವಾಃ ಶರಣ್ಯಂ ಚ ಬ್ರಹ್ಮಾಣಂ ತ್ರಿದಶೇಶ್ವರಮ್
ಆಗತಾಂಶ್ಚ ಸುರಾನ್ ದೃಷ್ಟ್ವಾ ತತಃ ಪ್ರೋವಾಚ ಪದ್ಮಜಃ ||೧೧||

ಬ್ರಹ್ಮೋವಾಚ

ಕಸ್ಮಾತ್ತ್ರಸ್ತಾ ಸುರಾ ಯೂಯಮಾಗತಾ ವೈ ಮಮಾಂತಿಕಮ್
ಬ್ರೂತ ತತ್ಸಕಲಂ ದೇವಾ ಉಪಾಯಂ ವಚ್ಮಿ ತತ್ಸ್ಫುಟಮ್ ||೧೨||

ದೇವಾ [ಊಚುಃ]

ತಾರಕಾದ್ಭಯಸಂತ್ರಸ್ತಾಃ ಶರಣಂ ವಯಮಾಗತಾಃ
ಯಥಾ ಮೃತ್ಯೋರ್ಭಯಂ ದೇವ ತಸ್ಮಾನ್ನಸ್ತ್ರಾತುಮರ್ಹಸಿ ||೧೩||

ದೆಸೆಯಿಂದ ಅಪಹೃತಾಶ್ಚ = ಸೆರೆಯಾಗಲುಪಟ್ಟರು. ಪ್ರಥಿತೌಜಸಃ = ಬಹಳ ಪರಾಕ್ರಮುವನುಳ್ಳಂಥಾ ಶಕ್ರಾದ್ಯಾಃ = ಇಂದ್ರ ಮೊದಲಾದಂಥಾ ದೇವರ್ಕಳು ದುಃಖಾಗ್ನಿನಾ = ದುಃಖವೆಂಬ ಕಿಚ್ಚಿನಿಂದ ಸುಸಂತಪ್ತಾಃ = ಅತ್ಯಂತ ಬೇವುತ್ತಿದ್ದರು

[1]ತತಃ = ಅಷ್ಟರ ಮೇಲೆ ದೇವಾಃ = ದೇವರ್ಕಳು ಶರಣ್ಯಂ = ಮರೆ-ಹೊಗಿಸಿಕೊಳ್ಳಲು ಯೋಗ್ಯನಹಂಥಾ ತ್ರಿದಶೇಶ್ವರಂ = ದೇವರ್ಕಳಿಗೆ ಒಡೆಯನಹಂಥಾ ಬ್ರಹ್ಮಾಣಂ ಚ = ಬ್ರಹ್ಮನನು ಕುರಿತು ಗತಾಃ = ಎಯ್ದಿದರು. ಆಗತಾನ್ = ಬಂದಂಥಾ ಸುರಾಂಶ್ಚ = ದೇವರ್ಕಳನು ದೃಷ್ಟ್ವಾ = ಕಂಡು ಪದ್ಮಜಃ = ಬ್ರಹ್ಮನು ಪ್ರೋವಾಚ = ನುಡಿದನು. ||೧ ||

ಬ್ರಹ್ಮೋವಾಚ = ಬ್ರಹ್ಮನ ವಾಕ್ಯವು

ಭೋ ಸುರಾಃ = ಎಲೆ ದೇವತೆಗಳಿರಾ ಯೂಯಂ = ನೀವು ಕಸ್ಮಾತ್ = ಆವಾತನ ದೆಸೆಯಿಂದ ತ್ರಸ್ತಾಃ = ಅಂಜಿದವರುಗಳಾಗಿ ಮಮ = ಎನ್ನ ಅಂತಿಕಂ = ಸಮೀಪವನು ಆಗತಾ ವೈ = ಎಯ್ದಿದವರುಗಳು. ಭೋ ದೇವಾಃ = ಎಲೆ ದೇವರ್ಕಳಿರಾ! ತತ್ಸಕಲಂ = ಅದೆಲ್ಲವನು ಬ್ರೂತ = ಹೇಳಿ. ತತ್ = ಆ ಉಪಾಯಂ = ಉಪಾಯವನು ಸ್ಫುಟಂ = ವ್ಯಕ್ತವಾಗಿ ವಚ್ಮಿ = ಹೇಳುತ್ತಿದ್ದೇನು. ವಚ + ಪರಿಭಾಷಣೇ ಎಂಬ ಧಾತು. || ||

ದೇವಾ [ಊಚುಃ] = ದೇವರ್ಕಳ ವಾಕ್ಯವು.

ಮೃತ್ಯೋಃ = ಮೃತ್ಯುವಿನ ದೆಸೆಯಿಂದ ಭಯಂ ಯಥಾ = ಭೀತಿಯೆಹಗ ಹಗೆ ತಾರಕಾತ್ = ತಾರಕಾಸುರನ ದೆಸೆಯಿಂದ ಭಯಸಂತ್ರಸ್ತಾಃ = ಭೀತಿಯಿಂದ

---

[1] (ಖ) ಪಾಠ

ಅಪಿ ಕ್ಷಣಂ ಸುರಶ್ರೇಷ್ಠ ನ ಲಭಾಮೋ ವಯಂ ಸುಖಮ್
ವಿಂಶದ್ವರ್ಷಸಹಸ್ರಾಣಿ ಹರಿತಾರಕಯೋಸ್ತದಾ ||೧೪||

ಅಹರ್ನಿಶಮವಿಶ್ರಾಂತಂ ಯುದ್ಧಮಾಸೀತ್ಸುದಾರುಣಮ್
ತಥಾಪಿ ನ ಜಿತಸ್ತೇನ ದೇವದೇವೇನ ಚಕ್ರಿಣಾ ||೧೫||

ಅವಧ್ಯೋಽಯಮಿತಿ ಜ್ಞಾತ್ವಾ ಯಯೌ ತ್ಯಕ್ತ್ವಾ ಮಹೋದಧಿಮ್
ಭ್ರಾಂತಚಿತ್ತಸ್ತದಾ ಶಂಖೀ ಗತಸ್ತೂರ್ಣಂ ಮಹಾಬಲಃ ||೧೬||

ನಡುಗುತ್ತಿದ್ದವರುಗಳಾಗಿ ವಯಂ = ನಾವು ಶರಣಂ = ಮಹಿಹೋಗುಹೆವನು ಆಗತಾಃ = ಎಯ್ದಿದವರುಗಳು. ಭೋ ದೇವ = ಎಲೆ ದೇವನೇ ತಸ್ಮಾತ್ = ಆ [1]ತಾರಕಾಸುರನ[1]ದೆಸೆಯಿಂದ ನಃ = ನಮ್ಮನು ತ್ರಾತುಂ = ರಕ್ಷಿಸಲು ಅರ್ಹಸಿ = [2]ಯೋಗ್ಯನಾಗುತಿಹೆ.[2] ||೧೩||

ಭೋ ಸುರಶ್ರೇಷ್ಠ = ಎಲೆ ದೇವಶ್ರೇಷ್ಠನಹಂಥಾ ಬ್ರಹ್ಮನೇ! ವಯಮಪಿ = ನಾವು ಕ್ಷಣಂ = ಒಂದು ಕ್ಷಣವೂ ಸುಖಂ = ಸುಖವನು ನ ಲಭಾಮಃ = ಪಡೆವುತ್ತಿರೆವು. ತದಾ = ಆಗ ಹರಿತಾರಕಯೋಃ = ವಿಷ್ಣುತಾರ[3]ಕರಿಬ್ಬರಿಗೂ[3] ವಿಂಶದ್ವರ್ಷ-ಸಹಸ್ರಾಣಿ = [4]ಇಪ್ಪತ್ತುಸಾವಿರ ವರ್ಷಂಗಳು ಅಹರ್ನಿಶಂ = ಹಗಲಿರುಳು[4] ಅವಿಶ್ರಾಂತಂ = ಆವಾಗಪೂ ಸುದಾರುಣಂ = ಅತಿ ಭಯಂಕರವಹಂಥಾ ಯುದ್ಧಂ = ಕಾಳಗವು ಆಸೀತ್ = ಆಯಿತ್ತು. ತಥಾಪಿ = ಹಾಂಗಾಯಿತ್ತಾದರೂ ದೇವದೇವೇನ = ದೇವರ್ಕಳಿಗೊಡೆಯನಹಂಥಾ ತೇನ ಚಕ್ರಿಣಾ = ಆ ಪುರುಷೋತ್ತಮನಿಂದ ನ ಜಿತಃ = ಗೆಲ್ಲಲ್ಪಟ್ಟುದಿಲ್ಲ. ||೧೪–೧೫||

ತದಾ = ಆವಾಗ ಮಹಾಬಲಃ = ಮಹಾಪರಾಕ್ರಮಿಯಹಂಥಾ ಶಂಖೀ = ಶಂಖಧಾರಿಯಹಂಥಾ ವಿಷ್ಣುವು ಅಯಂ = ಈ ತಾರಕಾಸುರನು ಅವಧ್ಯಃ = ಸಾಯನು ಇತಿ = ಹೀಂಗೆಂದು ಜ್ಞಾತ್ವಾ = ಅರಿದು ತ್ಯಕ್ತ್ವಾ = ಯುದ್ಧವನು ಬಿಟ್ಟು ಭ್ರಾಂತಚಿತ್ತಃ = ಭ್ರಾಂತಿಯುಳ್ಳಂಥಾ ಚಿತ್ತವನುಳ್ಳಾತನಾಗುತವು ತೂರ್ಣಂ = ಬೇಗ ಗತಃ = ಹೋದಾತನಾಗಿ ಮಹೋದಧಿಂ = ಕ್ಷೀರಸಮುದ್ರವನು ಯಯೌ = ಎಯ್ದಿದನು. ||೧೬||

---

[1] ಕಾರಣದ (ಖ) [2] ಅರ್ಹನಾಗಿರುತ್ತಿ (ಕ)
[3] ಕಾಸುರ ಇಬ್ಬರಿಗೆ(ಖ) [4] ಲಾಪ್ತ (ಕ)

ವಯಮಪ್ಯೇವಮೇವಂ ಹಿ ಭೀತಾಸ್ತ್ವಾಂ ಶರಣಂ ಪ್ರಭೋ
ಆಗತಾಸ್ತ್ರಾಹಿ ನಸ್ತಸ್ಮಾತ್ ಸುಖದೋ ಭವ ಪದ್ಮಜ ||೧೭||

ಬ್ರಹ್ಮೋವಾಚ

ಶೃಣುಧ್ವಮಮರಾಸ್ಸರ್ವೇ ಯುಷ್ಮಾಕಂ ಸುಖದಂ ಮಹತ್
ಯೋಽಸೌ ದೃಪ್ತಸ್ತಾರಕಾಖ್ಯಸ್ತತಾಪ ಪರಮಂ ತಪಃ ||೧೮||

ತಸ್ಯ ದೈತ್ಯಸ್ಯ ತಪಸಾ ದಹ್ಯಮಾನಂ ಚರಾಚರಮ್
ದೃಷ್ಟ್ವಾ ತದ್ವರದಾನಾರ್ಥಂ ಗತೋಽಹಂ ತಾರಕಾಂತಿಕಮ್ ||೧೯||

ಉಕ್ತಂ ಮಯಾ ವರಂ ವತ್ಸ ವರಯೇತಿ ಮಹಾಸುರಮ್
ಅಬ್ರವೀದ್ದೈತ್ಯರಾಜೋ ಮಾಮಭಿವಂದ್ಯ ಕೃತಾಂಜಲಿಃ ||೨೦||

ಭೋಃ ಪ್ರಭೋ = ಎಲೆ ಒಡೆಯನೆ! ವಯಮಪಿ = ನಾವೂ ಏವಮೇವಂ = ಈ ಪ್ರಕಾರದಲ್ಲಿ ಭೀತಾಃ = ಅಂಜಿದವರುಗಳಾಗಿ [1]ತ್ವಾಂ = ನಿನ್ನನ್ನು ಕುರಿತು ಶರಣಂ = ಮರೆಹೋಗುಹವನ ಆಗತಾ ಹಿ = ಎಯ್ದಿದವರುಗಳಲಾ. ಭೋ ಪದ್ಮಜ = ಎಲೆ ಕಮಲಭವನೇ! ತಸ್ಮಾತ್ = ಆ ತಾರಕಾಸುರನ ದೆಸೆಯಿಂದ ನಃ = ನಮ್ಮನು ತ್ರಾಹಿ = ರಕ್ಷಿಸು. ಸುಖದಃ = ಸುಖವ ಕೊಡುವಾತನು ಭವ = ಆಗು. ||೧೭||

ಬ್ರಹ್ಮೋವಾಚ = ಬ್ರಹ್ಮನವಾಕ್ಯವು.

ಭೋಃ ಸರ್ವೇ ಅಮರಾಃ = ಎಲೆ ಸಮಸ್ತ ದೇವರ್ಕಳಿರಾ ಯುಷ್ಮಾಕಂ = ನಿಮಗೆ ಮಹತ್ = ಅಧಿಕವಹಂಥಾ ಸುಖದಂ = ಸುಖವ ಕೊಡುವಂಥಾ ಉಪಾಯವನು ಶೃಣುಧ್ವಂ = ಕೇಳಿ. ದೃಪ್ತಃ = ಕೊಬ್ಬಿದಂಥಾ ಯಃ = ಆವನಾನೊಬ್ಬ ಅಸೌ = ಈ ತಾರಕಾಖ್ಯಃ = ತಾರಕನೆಂಬ ಹೆಸರನುಳ್ಳ ರಾಕ್ಷಸನು ಪರಮಂ = ಉನ್ನತವಹಂಥಾ ತಪಃ = ತಪಸ್ಸನು ತತಾಪ = ತಪಿಸಿದನು. ಮಾಡಿದನೆಂಬುದರ್ಥ.

ತಸ್ಯ ದೈತ್ಯಸ್ಯ = ಆ ರಾಕ್ಷಸನ ತಪಸಾ = ತಪಸ್ಸಿಂದ ದಹ್ಯಮಾನಂ = ಬೇಯಲುಪಟ್ಟಂಥಾ ಚರಾಚರಂ = ಸಚರಾಚರವನು ದೃಷ್ಟ್ವಾ = ಕಂಡು ತದ್ವರದಾನಾರ್ಥಂ = ಆ ತಾರಕಾಸುರಂಗೆ ವರವಕೊಡಲೋಸ್ಕರ ತಾರಕಾಂತಿಕಂ = ತಾರಕನ ಸಮೀಪವನು ಅಹಂ = ನಾನು ಗತಃ = ಎಯ್ದಿದಾತನು. ||೧೯||

ಭೋ ವತ್ಸ = ಎಲೆ ಮಗನೆ ವರಂ = ವರವನು ವರಯ = ಬೇಡು. ಇತಿ

---

[1] ಲುಪ್ತ (ಕ)

ತಾರಕ ಉವಾಚ

> ಅವಧ್ಯೋ ಹಿ ಸುರೈಸ್ಸರ್ವೈಃ ವಿಷ್ಣ್ವಾದ್ಯೈಃ ಪದ್ಮಸಂಭವ
> ಭವಾಮ್ಯಹಂ ಯಥಾ ದೇವ ತಥಾ ತ್ವಂ ದೇಹಿ ಮೇ ವರಮ್ ||೨೧||

ಬ್ರಹ್ಮೋವಾಚ

> ಏವಮಸ್ತ್ವಿತ್ಯಹಂ ತಸ್ಮೈ ವರಂ ದತ್ವಾ ಸುರೋತ್ತಮಾಃ
> ಅನ್ಯಚ್ಚೋಕ್ತಂ ಹಿತಾರ್ಥಂ ವಃ ಕಸ್ಮಾದ್ವಧ್ಯೋಽಸಿ ತಂ ವದ ||೨೨||

ತಾರಕ ಉವಾಚ

= ಹೀಗೆಂದು ಮಹಾಸುರಃ = ಮಹಾದೈತ್ಯನನು ಕುರಿತು ಮಯಾ = ಎನ್ನಿಂದ ಉಕ್ತಂ = ನುಡಿಯಲುಪಟ್ಟಿತ್ತು. ದೈತ್ಯರಾಜಃ = ರಾಕ್ಷಸರಿಗೆ ರಾಯನಹಂಥಾ ತಾರಕನು ಮಾಂ = ಎನ್ನನು ಅಭಿವಂದ್ಯ = ನಮಸ್ಕರಿಸಿ ಕೃತಾಂಜಲಿಃ = ಕೈಮುಗಿದುಕೊಂಡು ಅಬ್ರವೀತ್ = ನುಡಿದನು. ||೨೦||

ತಾರಕ ಉವಾಚ = [1]ತಾರಕಾಸುರನ ವಾಕ್ಯವು.[1]

ಭೋಃ ಪದ್ಮಸಂಭವ = ಎಲೇ ಕಮಲಭವನೇ ಹಿ = ಆವುದಾನೊಂದು ಕಾರಣ ವಾಗಿ ವಿಷ್ಣ್ವಾದ್ಯೈಃ = ವಿಷ್ಣು ಮೊದಲಾದಂಥಾ ಸರ್ವೈಸ್ಸುರೈಃ = ಸಮಸ್ತ ದೇವರ್ಕಳಿಂದ ಅಹಂ = ನಾನು ಅವಧ್ಯಃ = ಕೊಲಿಸಿಕೊಳದಾತನು, ಯಥಾ = ಹೇಂಗೆ ಭವಾಮಿ = ಆಗುತ್ತಿಹೆನು ತಥಾ = ಹಾಂಗೆ ಭೋ ದೇವ = ಎಲೆ ದೇವನೇ ತ್ವಂ = ನೀನು ಮೇ = ಎನಗೆ ವರಂ = ವರವನು ದೇಹಿ = ಕೊಡು. ||೨೧||

ಬ್ರಹ್ಮೋವಾಚ = ಬ್ರಹ್ಮನು ನುಡಿದನು.

ಏವಂ = ಈ ಪ್ರಕಾರದಲ್ಲಿ ಅಸ್ತು = ಆಗಲಿ ಇತಿ = ಹೀಂಗೆಂದು ಅಹಂ = ನಾನು ತಸ್ಮೈ = ಆ ತಾರಕಂಗೋಸ್ಕರ ವರಂ = ವರವನು ದತ್ವಾ = ಕೊಟ್ಟು ಭೋ ಸುರೋತ್ತಮಾಃ = ಎಲೇ ದೇವಶ್ರೇಷ್ಠರುಗಳಿರಾ ವಃ = ನಿಮ್ಮ ಹಿತಾರ್ಥಂ = ಹಿತಕ್ಕೋಸ್ಕರ ಕಸ್ಮಾತ್ = ಆವಾತನ ದೆಸೆಯಿಂದ ವಧ್ಯಃ = ವಧಿಸಿಕೊಳ್ಳಲು ಯೋಗ್ಯನು ಅಸಿ = ಆಗುತ್ತಿಹೆ. ತಂ = ಅವನು ವದ = ಹೇಳು. ಎಂದು ಅನ್ಯಚ್ಚ = ಮತ್ತೊಂದು ವಾಕ್ಯವು ಉಕ್ತಂ = ನುಡಿಯಲುಪಟ್ಟಿತ್ತು. ||೨೨||

ತಾರಕ ಉವಾಚ = ತಾರಕಾಸುರನು[2] ನುಡಿದನು.[2]

---

[1] (ಖ) ಪಾಠ (ಕ) ಇಲ್ಲ [2] ನ ವಾಕ್ಯವು (ಖ)

ಯೋಽಯಂ ದೇವಾದಿದೇವೇಶಃ ಕಪರ್ದೀ ನೀಲಲೋಹಿತಃ
ತಸ್ಯ ರೇತಃ ಸುರಾಃ ಪೀತ್ವಾ ಸಗರ್ಭಾ ವಿಷ್ಣುನಾ ಸಹ ||೨೩||

ಭವಿಷ್ಯಂತಿ ತತೋ ಜಾತಾನ್ಮೃತ್ಯುರಿಷ್ಟಂ ನ ಚಾನ್ಯತಃ
ತಥಾಸ್ತ್ವಿತಿ ತತಶ್ಚೋಕ್ತ್ವಾ ಗತೋಽಹಂ ಮೇರುಮೂರ್ಧನಿ ||೨೪||

ಗಚ್ಛಧ್ವಂ ಶರಣಂ ತಸ್ಮಾಚ್ಛರಣ್ಯಂ ಸರ್ವದೇಹಿನಾಮ್
ವಿಶ್ವೇಶ್ವರಮುಮಾಕಾಂತಂ ಶಂಕರಂ ಲೋಕಶಂಕರಮ್ ||೨೫||

ಮುಕ್ತ್ವಾ ಹರಾತ್ಮಜಂ ದೇವಂ ತ್ರೈಲೋಕ್ಯೇ ಸಚರಾಚರೇ
ತಂ ನ ಪಶ್ಯಾಮಿ ಭೋ ದೇವಾಃ ತಾರಕಂ ಯೋ ವಧಿಷ್ಯತಿ ||೨೬||

ದೇವಾಧಿದೇವೇಶಃ = ದೇವಶ್ರೇಷ್ಠರುಗಳಿಗೊಡೆಯನಹಂಥಾ ಕಪರ್ದೀ = ಜಟಾಜೂಟವನುಳ್ಳಂಥಾ ಯಃ = ಆವನಾನೊಬ್ಬ ಅಯಂ = ಈ ನೀಲಲೋಹಿತಃ = ಪರಮೇಶ್ವರನಿದ್ದಾನು ತಸ್ಯ = ಆ ಶಿವನ ರೇತಃ = ಇಂದ್ರಿಯವನು ಸುರಾಃ = ಸಮಸ್ತ ದೇವರ್ಕಳು ವಿಷ್ಣುನಾ ಸಹ = ವಿಷ್ಣುವಿನೊಡನೆ ಪೀತ್ವಾ = ಪಾನವಮಾಡಿ ಸಗರ್ಭಾಃ = ಗರ್ಭದೊಡನೆ ಕೂಡಿದಂಥಾವರುಗಳು ಭವಿಷ್ಯಂತಿ = ಆದಾರು. ತತಃ = ಆ ಇಂದ್ರಿಯದ ದೆಸೆಯಿಂದ ಜಾತಾತ್ = ಹುಟ್ಟಿದಾತನ ದೆಸೆಯಿಂದ ಮೃತ್ಯುಃ = ಮರಣವು ಇಷ್ಟಂ = ಬಯಕೆ. ಅನ್ಯತಃ = ಮತ್ತೊಬ್ಬನ ದೆಸೆಯಿಂದ ನ = ಬಯಕೆಯಿಲ್ಲ. ತಥಾಽಸ್ತು = ಹಾಂಗಾಗಲಿ ಇತಿ = ಹೀಂಗೆಂದು ಉಕ್ತ್ವಾ = ನುಡಿದು ತತಃ = ಅಪ್ಪಟರಮೇಲೆ ಅಹಂ ತು = ನಾನು ಮೇರುಮೂರ್ಧನಿ = ಮೇರು ಪರ್ವತದ ಶಿಖರದಲ್ಲಿ ಗತಃ = ಎಯ್ದಿದಾತನು. ||೨೪||

ತಸ್ಮಾತ್ = ಅದು ಕಾರಣವಾಗಿ ಸರ್ವದೇಹಿನಾಂ = ಸಮಸ್ತ ಪ್ರಾಣಿಗಳ ಶರಣ್ಯಂ = ಮರೆಹೋಗಿಸಿಕೊಳಲು ಯೋಗ್ಯನಹಂಥಾ ವಿಶ್ವೇಶ್ವರಂ = ವಿಶ್ವಕ್ಕೊಡೆಯನಹಂಥಾ ಉಮಾಕಾಂತಂ = ಪಾರ್ವತಿಯ ವಲ್ಲಭನಹಂಥಾ ಲೋಕಶಂಕರಂ = ಲೋಕಕ್ಕೆ ಸುಖವನು ಮಾಡುವಂಥಾ ಶಂಕರಂ = ಪರಮೇಶ್ವರನನು ಕುರಿತು ಶರಣಂ = ಮರೆಹೋಗುಹವನು ಗಚ್ಛಧ್ವಂ = ಎಯ್ದಿ. ||೨೫||

ಭೋ ದೇವಾಃ = ಎಲೆ ದೇವರ್ಕಳಿರಾ ! ದೇವಂ = ಪ್ರಕಾಶಸ್ವರೂಪನಹಂಥಾ ಹರಾತ್ಮಜಂ = ಶಿವನ ಕುಮಾರನನು ಮುಕ್ತ್ವಾ = ಬಿಟ್ಟು ಸಚರಾಚರೇ = ಚರಾಚರದೊಡನೆ ಕೂಡಿದಂಥಾ ತ್ರೈಲೋಕ್ಯೇ = ಮೂರು ಲೋಕದಲ್ಲಿ ಯಃ = ಆವನಾನೊಬ್ಬನು ತಾರಕಂ = ತಾರಕಾಸುರನನು ವಧಿಷ್ಯತಿ = ಕೊಂದಾನು ತಂ = ಆ ವಧಿಸುವಾತನನು ನ ಪಶ್ಯಾಮಿ = ಕಾಣೆನು. ||೨೬||

ಬ್ರಹ್ಮಣೋ ವಚನಂ ಶ್ರುತ್ವಾ ಸಹಸ್ರಾಕ್ಷಶ್ಶಚೀಪತಿಃ
ಕಥಂ ಭವಿಷ್ಯತೀತ್ಯೇವಮಾಲೋಚ್ಯ ಮನಸಾ ದ್ವಿಜಾಃ ||೨೭||

ಗುರುಣಾ ದೈವತೈಸ್ಸಾರ್ಧಂ ಪುನರೇವ ಸ ದೇವರಾಟ್
ಹರಸ್ಯೈವ ಸುತೋತ್ಪತ್ತೌ ಉಪಾಯಶ್ಚಿಂತ್ಯತಾಂ ಸುರಾಃ ||೨೮||

ಇತ್ಯುಕ್ತ್ವಾ ಪ್ರಯಯುರ್ದೇವಾಃ ಶಕ್ರಾದ್ಯಾ ಬ್ರಹ್ಮಣಾ ಸಹ
ಮೇರೋರುತ್ತರತಃ ಶೃಂಗಂ ಯತ್ರ ತಿಷ್ಠತಿ ಮಾಧವಃ ||೨೯||

ಗುಪ್ತೋ ಭೀತಸ್ಸ ವಿಶ್ವಾತ್ಮಾ ತಾರಕಸ್ಯ ಭಯಾದ್ದ್ವಿಜಾಃ
ಸಬ್ರಹ್ಮಕಾನ್ಸುರಾನ್ ದೃಷ್ಟ್ವಾ ಹೃಷ್ಟಃ ಪ್ರೋವಾಚ ಮಾಧವಃ ||೩೦||

ಭೋ ದ್ವಿಜಾಃ = ಎಲೈ ನೈಮಿಷಾರಣ್ಯವಾಸಿಗಳಾದಂಥಾ ಬ್ರಾಹ್ಮಣರುಗಳಿರಾ ಶಚೀಪತಿಃ = ಶಚೀವಲ್ಲಭನಹಂಥಾ ಸಹಸ್ರಾಕ್ಷಃ = ಇಂದ್ರನು ಬ್ರಹ್ಮಣಃ = ಬ್ರಹ್ಮನ ವಚನಂ = ವಾಕ್ಯವನು ಶ್ರುತ್ವಾ = ಕೇಳಿ ಕಥಂ = ಹೇಂಗೆ ಭವಿಷ್ಯತಿ ಇತಿ = ಆದೀತೋ (ಆಮದೋ) ಎಂದು ಹೀಂಗೆ ಏವಂ = ಈ ಪ್ರಕಾರದಲ್ಲಿ ಮನಸಾ = ಮನಸ್ಸಿನಿಂದ ಆಲೋಚ್ಯ = ಆಲೋಚನೆಯ ಮಾಡಿ ; ||೨೭||

ಸಃ ದೇವರಾಟ್ = ಆ ಇಂದ್ರನು ಗುರುಣಾ = ಬೃಹಸ್ಪತಿಯೊಡನೆ ದೈವತೈ-ಸ್ಸಾರ್ಧಂ = ದೇವರ್ಕಳೊಡನೆ ಪುನರೇವ = ಮರಳಿ ಆಲೋಚನೆಯ ಮಾಡಿ ಭೋ ಸುರಾಃ = ಎಲೇ ದೇವತೆಗಳಿರಾ ಹರಸ್ಯ = ಶಿವನ ಸುತೋತ್ಪತ್ತಾವೇವ = ಪುತ್ರನ ಉತ್ಪತ್ತಿಯಲ್ಲಿಯೇ ಉಪಾಯಃ = ಉಪಾಯವು ಚಿಂತ್ಯತಾಂ = ಚಿಂತಿಸಲುಪಡಲಿ.

ಇತಿ = ಹೀಂಗೆಂದು ಉಕ್ತ್ವಾ = ನುಡಿದು ಶಕ್ರಾದ್ಯಾಃ = ಇಂದ್ರ ಮೊದಲಾದಂಥಾ ದೇವಾಃ = ದೇವರ್ಕಳು ಬ್ರಹ್ಮಣಾ ಸಹ = ಬ್ರಹ್ಮನಿಂದ ಸಹಿತವಾದವರಾಗಿ ಯತ್ರ = ಯಾವುದಾನೊಂದು ಸ್ಥಾನದಲ್ಲಿ ಮಾಧವಃ = ಮಹಾವಿಷ್ಣು ತಿಷ್ಠತಿ = ಇರುತ್ತಿದ್ದಾನು. ತತ್ರ = ಆ ಠಾವಿನಲ್ಲಿಯೇ ಮೇರೋಃ = ಮೇರು ಪರ್ವತದ ಉತ್ತರತಃ = ಉತ್ತರದಿಕ್ಕಿನಲ್ಲಿಯ ಶೃಂಗಂ = ಶಿಖರವನು ಪ್ರಯಯುಃ = ಎಯ್ದಿದರು. ||೨೯||

ಭೋ ದ್ವಿಜಾಃ = ಎಲೈ [1]ಬ್ರಾಹ್ಮ[1]ಣರುಗಳಿರಾ ತಾರಕಸ್ಯ ಭಯಾತ್ = [2]ತಾರಕಾಸುರನ ಭೀತಿಯ ದೆಸೆಯಿಂ[2]ದ ಭೀತಃ = ಅಂಜುತ್ತಿದ್ದಂಥಾ ಗುಪ್ತಃ =

---

[1] ದ್ವಿಜ (ಕ) [2] ಲುಪ್ತ (ಕ)

ಉಪಾಯಶ್ಚಿಂತಿತಃ ಕೋವಾ ವಧಾರ್ಥಂ ತಾರಕಸ್ಯ ಹಿ
ಅಸ್ತಿ ಚೇದುಚ್ಯತಾಂ ದೇವಾಃ ಶರ್ಮ ನೋ ಜಾಯತೇ ಯಥಾ ||೩೧||

ಸೂತ ಉವಾಚ

ಏವಂ ವಿಷ್ಣೋರ್ವಚಶ್ಶ್ರುತ್ವಾ ಬ್ರಹ್ಮಾದ್ಯಾಸ್ಸುರಸತ್ತಮಾಃ
ಯಥೋಕ್ತಂ ಬ್ರಹ್ಮಣಾ ತಸ್ಮೈ ತಥೋಕ್ತಂ ವಿಷ್ಣವೇ ಸುರೈಃ ||೩೨||

ಕಿಮಿದಾನೀಂ ಚ ಕರ್ತವ್ಯಮಿತಿ ಸಂಚಿಂತ್ಯ ದೇವರಾಟ್
ಸಸ್ಮಾರ ಮನಸಾ ಕಾಮಮಜೇಯಂ ಸಸುರಾಸುರೈಃ ||೩೩||

ಅಡಗಿದ್ದಂಥಾ ವಿಶ್ವಾತ್ಮಾ = ವಿಶ್ವರೂಪನಹಂಥಾ ಮಾಧವಃ = ಲಕ್ಷ್ಮೀವಲ್ಲಭನಹಂಥಾ ಸಃ = ಆ ವಿಷ್ಣು ಸಬ್ರಹ್ಮಕಾನ್ = ಬ್ರಹ್ಮನಿಂದ ಸಹಿತರಹಂಥಾ ಸುರಾನ್ = ದೇವತೆಗಳನು ದೃಷ್ಟ್ವಾ = ಕಂಡು ಹೃಷ್ಟಃ = ಸಂತೋಷಿಸಿದಾತನಾಗಿ ಪ್ರೋವಾಚ = ನುಡಿದನು. ||೩೦||

[1]ಭೋ ದೇವಾಃ = ಎಲೆ ದೇವರ್ಕಳಿರಾ ![1] ಹಿ = ಆವುದಾನೊಂದು ಕಾರಣವಾಗಿ ತಾರಕಸ್ಯ = ತಾರಕಾಸುರನ ವಧಾರ್ಥಂ = ವಧೆಗೋಸ್ಕರ ಕಃ ಉಪಾಯಃ = ಆವ ಉಪಾಯವು ಚಿಂತಿತಃ = ನೆನೆಯಲುಪಟ್ಟಿತ್ತು. ಅಸ್ತಿ ಚೇದ್ವಾ = ಉಂಟಾದ ಪಕ್ಷೇ ನಃ = ನಮಗೆ ಶರ್ಮ = ಸುಖವು ಯಥಾ = [2]ಎಹೆಂಗೆ[2] ಜಾಯತೇ = ಹುಟ್ಟುತ್ತಿಹುದು ತಥಾ = ಹಾಂಗೆ ಉಚ್ಯತಾಂ = ನುಡಿಯಲುಪಡಲಿ. ||೩೧||

ಸೂತ ಉವಾಚ—[3]ಸೂತಮುನಿಯ ವಾಕ್ಯವು.[3]

ಬ್ರಹ್ಮಾದ್ಯಾಃ = ಬ್ರಹ್ಮ ಮೊದಲಾದಂಥಾ ಸುರಸತ್ತಮಾಃ = ದೇವಶ್ರೇಷ್ಠರುಗಳು ಏವಂ = ಈ ಪ್ರಕಾರದಲ್ಲಿ ವಿಷ್ಣೋಃ = ಮಹಾವಿಷ್ಣುವಿನ ವಚಃ = ವಾಕ್ಯವನು ಶ್ರುತ್ವಾ = ಕೇಳಿ ಬ್ರಹ್ಮಣಾ = ಬ್ರಹ್ಮನಿಂದ ಯಥಾ = ಹೇಂಗೆ ಉಕ್ತಂ = ನುಡಿಯಲುಪಟ್ಟಿತ್ತು ತಥಾ = ಹಾಂಗೆ ಸುರೈಃ — ದೇವರ್ಕಳಿಂದ ತಸ್ಮೈ ವಿಷ್ಣವೇ—ಆ ವಿಷ್ಣುವಿಂಗೆ ಉಕ್ತಂ—ಹೇಳಲುಪಟ್ಟಿತ್ತು. ||೩೨||

ಇದಾನೀಂ—ಈಗಳು ಕರ್ತವ್ಯಂ—ಮಾಡಬೇಕಾದಂಥಾದ್ದು ಕಿಂ ಚ—ಏನು ? ಇತಿ—ಹೀಂಗೆಂದು ಸಂಚಿಂತ್ಯ — ನೆನದು ದೇವರಾಟ್ — ದೇವರಾಯನಹಂಥಾ

---

[1] ಲುಪ್ತ (ಕ) [2] ಹೆಂಗೆ (ಖ) [3] (ಖ) ಪಾಠ

ಶಕ್ರಸ್ಯ ಚಿಂತಿತಂ ಜ್ಞಾತ್ವಾ ಕಾಮೋ ರತಿಪತಿಃ ಸ್ವಯಮ್
ಶಚೀಪತಿಂ ಸಮಾಗತ್ಯ ಪ್ರಾಹ ಪುಷ್ಪಧನುರ್ಧರಃ ||೩೪||

ಕಾಮ ಉವಾಚ

ಕಿಂ ಕಾರ್ಯಂ ತ್ರಿದಶಶ್ರೇಷ್ಠ ಕರ್ತವ್ಯಂ ಕಿಂ ಮಯಾ ವಿಭೋ
ತೀವ್ರೇಣ ತಪಸಾ ಕೋ ಹಿ ಸ್ಥಾನಮೀಹತಿ ತಾವಕಮ್ ||೩೫||

ಕಿಂ ವಾ ಕಾಚಿತ್ತವಾದೇಶಂ ಕರ್ತುಂ ನೇಚ್ಛತಿ ಚಾಂಗನಾ
ತಾಂ ಕಾಮಿನೀಂ ಕರೋಮ್ಯದ್ಯ ತವ ಧ್ಯಾನಪರಾಯಣಾಮ್ ||೩೬||

ಇಂದ್ರನು ಸಸುರಾಸುರೈಃ — ದೇವಾಸುರರುಗಳಿಂದ ಸಹಿತವಾಗಿ ಅಜೇಯಂ — ಗೆಲಲುಬಾರದೇ ಇದ್ದಂಥಾ ಕಾಮಂ—[2]ಮನ್ಮಥನನು[2] ಮನಸಾ— ಮನಸ್ಸಿನಿಂದ ಸಸ್ಮಾರ—ನೆನೆದನು. [3]ಸ್ಮೃ+ಆಧ್ಯಾನೇ[3] ಇತಿ ಧಾತುಃ. ||೩೩||

ಶಕ್ರಸ್ಯ ಇಂದ್ರನ ಚಿಂತಿತಂ—ನೆನಹನು ಜ್ಞಾತ್ವಾ —ಅರಿದು ರತಿಪತಿಃ— ರತಿದೇವಿಯ—ಪುರುಷನಹಂಥಾ ಕಾಮಃ—ಪುಷ್ಪಾಯುಧನು ಸ್ವಯಂ — ತಾನೇ ಶಚೀಪತಿಂ — ಶಚೀವಲ್ಲಭನಹಂಥಾ ಇಂದ್ರನನು ಸಮಾಗತ್ಯ — ಎಯ್ದಿ ಪುಷ್ಪ-ಧನುರ್ಧರಃ—ಪುಷ್ಪಚಾಪವ ಧರಿಸಿದಂಥಾ ಮನ್ಮಥನು ಪ್ರಾಹ—ನುಡಿದನು. ೩೪ ಕಾಮ ಉವಾಚ.—[4]ಕಾಮನ ವಾಕ್ಯವು [4]

ತ್ರಿದಶಶ್ರೇಷ್ಠ—ದೇವಶ್ರೇಷ್ಠನಹಂಥಾ ಭೋ ವಿಭೋ — ಎಲೇ ಒಡೆಯನೇ ಕಿಂ ಕಾರ್ಯಂ—ಏನು ಕಾರ್ಯವು ? ಮಯಾ—ಎನ್ನಿಂದ ಕರ್ತವ್ಯಂ—ಮಾಡ ಬೇಕಾದಂಥಾದು ಕಿಂ—ಏನು? ಕಃ = ಆವಾತನು ಹಿ — ಆವುದಾನೊಂದು ಕಾರಣವಾಗಿ ತೀವ್ರೇಣ ತಪಸಾ—ಉಗ್ರತಪಸ್ಸಿನಿಂದ ತಾವಕಂ — ನಿನ್ನ ಸಂಬಂಧ ವಹಂಥಾ ಸ್ಥಾನಂ—ಸ್ಥಾನವನು ಈ ಹತಿ—ಇಚ್ಛೈಸುತ್ತಿದ್ದಾನು.

ಕಿಂವಾ—ಅಲ್ಲಾ ಕಾಚಿದಂಗನಾ ಚ—ಒಬ್ಬಾಳೊಬ್ಬ ಸ್ತ್ರೀಯೂ ತವ— ನಿನ್ನ ಆದೇಶಂ—ಆಜ್ಞೆಯನು ಕರ್ತುಂ—ಮಾಡಲು ನೇಚ್ಛತಿ — ಇಚ್ಛಯಿಸ್ಪತ್ರಿರಳು, ತಾಂ ಕಾಮಿನೀಂ—ಆ ಸ್ತ್ರೀಯನು ಅದ್ಯ—ಈಗ ತವ—ನಿನ್ನ ಧ್ಯಾನ ಪರಾಯಣಾಂ — ನೆನಹಿನಲ್ಲಿ ತಾತ್ಪರ್ಯವನುಳ್ಳಾಯಕನಾಗಿ [ನುಳ್ಳಾತಳನ್ನಾಗಿ] ಕರೋಮಿ—ಮಾಡುವೆನು. ||೩೬||

---

[2] ಪಂಚಶರನನು (ಖ) [3] ಸ್ಮೃಜ್+ಧ್ಯಾನೇ (ಖ) (ಕ) ಲುಪ್ತ
[4] (ಕ.ಖ) ಪಾಠ. [5] ಇಚ್ಛಯಿಸು (ಕ)

ನ ಕಶ್ಚಿದಸ್ತಿ ಮೇ ಶೂರೋ ನ ಮಾನೀ ನ ಚ ಪಂಡಿತಃ
ಚ್ಯಾವಯಾಮಿ ಜಗತ್ಕೃತ್ಸ್ನಂ ಬ್ರಹ್ಮಾದ್ಯಂ ಭವಗೋಚರಮ್ ||೩೭||

ಅಥ ಕಿಂ ಬಹುನೋಕ್ತೇನ ದುರ್ವಾಸಾಶ್ಚ ಮಹಾಮುನಿಃ
ಯೋಽಸೌ ಪಿನಾಕೀ ವಿಶ್ವೇಶಸ್ತಮಪಿ ಚ್ಯಾವಯಾಮ್ಯಹಮ್ ||೩೮||

ಇಂದ್ರ ಉವಾಚ

ಜಾನಾಮ್ಯಹಂ [1]ರತೀನಾಥ[1] ಸಾಮರ್ಥ್ಯಂ ಪುಷ್ಪಧನ್ವನಃ
ನೂನಂ ಹಿ ಸರ್ವಕಾರ್ಯಾಣಿ ತ್ವತ್ತಃ ಸಿದ್ಧ್ಯಂತಿ [2]ನಾನ್ಯತಃ[2] ||೩೯||

ಮೇ—ಎನಗೆ ಕಶ್ಚಿತ್—ಒಬ್ಬಾನೊಬ್ಬ ಶೂರಃ—ವೀರನು ನಾಸ್ತಿ—ಇಲ್ಲ. ಮೇ—ಎನಗೆ ಮಾನೀ— ಗರ್ವಿಯಹಂಥಾತನು ನ—ಇಲ್ಲ. ಮೇ —ಎನಗೆ ಪಂಡಿತೋಽಪಿ—ಬಲ್ಲವನು ನ—ಇಲ್ಲ. ಬ್ರಹ್ಮಾದ್ಯಂ—ಬ್ರಹ್ಮ ಮೊದಲಾದಂಥಾ ಭವಗೋಚರಂ—ಪರಮೇಶ್ವರನೊಡನೆ ಕಾಣಬಹಂಥಾ ಕೃತ್ಸ್ನಂ ಜಗತ್—ಸಮಸ್ತ ಲೋಕವನು ಚ್ಯಾವಯಾಮಿ — ಭಂಗಿಸುವೆನು. [3]ಚ್ಯುತಿರ್ — ರಕ್ಷಣೇ ? ಎಂಬ ಧಾತು. ಚ್ಯು ಸಹನೇ ಹಸನೇ ಚ ಇತ್ಯೇಕೇ |[3] ||೩೭||

ಅಥ—ಅನಂತರದಲ್ಲಿ ಬಹುನಾ ಉಕ್ತೇನ—ಹೇಳುವ ನುಡಿದುದರಿಂದ ಕಿಂ—ಏನು ಪ್ರಯೋಜನವು ? ಮಹಾಮುನಿಃ—ಮಹಾಋಷಿಯಹಂಥಾ ದುರ್ವಾಸಾಶ್ಚ—ದುರ್ವಾಸನಿದ್ದಾನು, ವಿಶ್ವೇಶಃ—ವಿಶ್ವೇಶ್ವರನಹಂಥಾ ಯಃ—ಆವನಾನೊಬ್ಬ ಅಸೌ—ಈ ಪಿನಾಕೀ — ಪರಮೇಶ್ವರನಿದ್ದಾನು, ತಮಪಿ — ಆತ [ನ]ನಾಯಿತ್ತಾದರೂ ಅಹಂ—ನಾನು ಚ್ಯಾವಯಾಮಿ—ಭಂಗಿಸುವೆನು. ||೩೮||
ಇಂದ್ರ ಉವಾಚ—ಇಂದ್ರನ ವಾಕ್ಯವು.

ಭೋ ರತೀನಾಥ — ಎಲೆ ರತಿದೇವಿಯ ವಲ್ಲಭನೆ ಪುಷ್ಪಧನ್ವನಃ —[4][ಪುಷ್ಪ ಚಾಪವನುಳ್ಳ ನಿನ್ನ][4] ಸಾಮರ್ಥ್ಯವನು ಅಹಂ—ನಾನು ಜಾನಾಮಿ—ಬಲ್ಲೆನು. ಸರ್ವಕಾರ್ಯಾಣಿ—ಸಮಸ್ತಕಾರ್ಯಂಗಳು ತ್ವತ್ತಃ—ನಿನ್ನಿಂದ ನೂನಂ—ಅತ್ಯಂತ ಸಿದ್ಧ್ಯಂತಿ ಹಿ—ಸಿದ್ಧಿಸುತ್ತಿಹವಲಾ. ಅನ್ಯತಃ—ಮತ್ತೊಬ್ಬನ ದೆಸೆಯಿಂದ ನ —ಸಿದ್ಧಿಸುತ್ತಿರವು. ||೩೯||

1 ಪುರಾಣಪಾಠಾತ್ ಸಾಧುತ್ವಂ 2 ನಾನ್ಯಥಾ (ಘ)
3 ಚ್ಯುತಿ + ಕ್ಷಣೇ ಎಂಬ ಧಾತು (ಕ) ಚ್ಯುತಿ + ರಕ್ಷಣೇ ಎಂಬ ಧಾತು (ಖ) ಅರ್ಥದೃಷ್ಟ್ಯಾ ಚ್ಯುಙ್ + ಗತೌ ಇತಿ ಧಾತೋಃ ಣಿಜಂತಸ್ಯ ರೂಪಮಿದಮಿದಮಿತಿ ವಕ್ತುಂ ಯುಕ್ತಮ್ 4 ಪುಷ್ಪಚಾಪಸ (ಕ. ಖ. ವ್ಯಾ.)

ಯತ್ರಾಸ್ತೇ ಭಗವಾಂಚ್ಛಂಭುಃ ಧ್ಯಾನದೃಷ್ಟ್ಯಾ ಸಮಾಹಿತಃ
ಗಚ್ಛ ಪಾರ್ಶ್ವಂ ಮಹೇಶಸ್ಯ ಸುರಾಣಾಂ ಹಿತಕಾಮ್ಯಯಾ ||೪೦||

ಚಿತ್ತಂ ಹರಸ್ಯ ಸಂಕ್ಷೋಭ್ಯ ಪಾರ್ವತ್ಯಾ ಸಂಗಮಂ ಕುರು
ಏತದೇವ ಹಿ ಮತ್ಕಾರ್ಯಮೇಷ ಏವ ಮನೋರಥಃ ||೪೧||

ಏತಸ್ಮಾತ್ಕಾರಣಾತ್ತ್ವಂ ಹಿ ಸ್ಮೃತಃ ಪುಷ್ಪಧನುರ್ಧರ
ಏವಂ ಶಕ್ರವಚಃ ಶ್ರುತ್ವಾ ಬಲವಾನ್ ಮಕರಧ್ವಜಃ ||೪೨||

ಮಧೋಸ್ಸಖಾ *ರತೀಯುಕ್ತಃ* ಪಂಚಬಾಣೋ ಮನೋಭವಃ
ಯತ್ರಾಸ್ತೇ ಭಗವಾಂಚ್ಛಂಭುಃ ಧ್ಯಾನದೃಷ್ಟ್ಯಾ ಸಮಾಹಿತಃ ||೪೩||

ಧ್ಯಾನದೃಷ್ಟ್ಯಾ — ಧ್ಯಾನದೃಷ್ಟಿಯಿಂದ ಸಮಾಹಿತಃ — ಇರುತ್ತಿದ್ದಂಥಾ ಭಗವಾನ್ — ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಶಂಭುಃ — ಪರಮೇಶ್ವರನು ಯತ್ರ—ಆವುದಾನೊಂದು ಸ್ಥಾನದಲ್ಲಿ ಆಸ್ತೇ—ಇರುತ್ತಿದ್ದಾನು ತತ್ರ—ಅಲ್ಲಿ ಸುರಾಣಾಂ—ದೇವರ್ಕಳಿಗೆ ಹಿತಕಾಮ್ಯಯಾ—ಹಿತವ ಬಯಸುವುದರಿಂದ ಮಹೇಶಸ್ಯ —ಪರಮೇಶ್ವರನ ಪಾರ್ಶ್ವಂ—ಸಮೀಪವನು ಗಚ್ಛ—ಎಯ್ದು. ||೪೦||

ಹರಸ್ಯ—ಶಿವನ ಚಿತ್ತಂ—ಚಿತ್ತವನು ಸಂಕ್ಷೋಭ್ಯ— ಸಂಚಲವ ಮಾಡಿ ಪಾರ್ವತ್ಯಾ—ಪಾರ್ವತಿಯೊಡನೆ ಸಂಗಮಂ— ಕೂಟವನು ಕುರು — ಮಾಡು. ಏತದೇವ—ಇದೇ ಮತ್ಕಾರ್ಯಂ ಹಿ—ಎನ್ನ ಕಾರ್ಯವಲಾ. ಏಷ ಏವ—ಇದೇ ಮನೋರಥಃ—ಮನಸ್ಸಿನ ಬಯಕೆ. ||೪೧||

ಭೋ ಪುಷ್ಪಧನುರ್ಧರ !—ಎಲೆ ಪುಷ್ಪಚಾಪವ ಧರಿಸಿದಾತನೇ ! ತ್ವಂ — ನೀನು ಏತಸ್ಮಾತ್ ಕಾರಣಾತ್—ಇದು ಕಾರಣದ ದೆಸೆಯಿಂದ ಸ್ಮೃತೋ ಹಿ— ನೆನೆಯಲುಪಟ್ಟಾತನಲಾ. ಏವಂ — ಈ ಪ್ರಕಾರದಲ್ಲಿ ಶಕ್ರವಚಃ — ಇಂದ್ರನ ವಾಕ್ಯವನು ಬಲವಾನ್ — ಸತ್ತ್ವವನುಳ್ಳಂಥಾ ಮಕರಧ್ವಜಃ — ಕಾಮನು ಶ್ರುತ್ವಾ= ಕೇಳಿ. ||೪೨||

ಮಧೋಃ—ವಸಂತನ ಸಖಾ — ಸಂಗಡಿಗನಹಂಥಾ ಪಂಚಬಾಣಃ — ಅಯ್ದು ಬಾಣಂಗಳನುಳ್ಳಂಥಾ ಮನೋಭವಃ — ಮನಸ್ಸಿನಲ್ಲಿ ಹುಟ್ಟಿದಂಥಾ ಮಕರಧ್ವಜಃ— ಕಾಮನು ರತೀಯುಕ್ತಃ — ರತಿದೇವಿಯಿಂದ ಕೂಡಿದಾತನಾಗಿ,

---

* ಪುರಾಣಪಾಠವಾದ್ದರಿಂದ ಸಾಧು

ನಿಷ್ಕಂಪಶ್ಚಾತ್ಮನಾತ್ಮಾನಂ ಚಿಂತ್ಯಮಾನೋ ಮಹೇಶ್ವರಃ
ಪ್ರಾಪ್ಯ ಶಂಭೋಃ ರಾಯತನಮಪಶ್ಯನ್ಮಕರಧ್ವಜಃ ||೪೪||

ಶೈಲಾದಿಂ ದ್ವಾರದೇಶೇ ತು ಮೇರುಶೃಂಗಮಿವೋನ್ನತಮ್
ಸರ್ವಾಭರಣಸಂಯುಕ್ತಂ ಸಹಸ್ರಾದಿತ್ಯವರ್ಚಸಮ್ ||೪೫||

ಶೂಲಹಸ್ತಂ ತ್ರಿಣೇತ್ರಂ ಚ ಚಂದ್ರಾವಯವ ಭೂಷಣಮ್[1]
ವಜ್ರಪಾಣಿಂ ಚತುರ್ಬಾಹುಂ ದ್ವಿತೀಯಮಿವ ಶಂಕರಮ್ ||೪೬||

ತಂ ದೃಷ್ಟ್ವಾ ಮದನೋ ವಿಪ್ರಾಃ ಚಿಂತಾಕ್ರಾಂತಸ್ತದಾಽಭವತ್
ಕಥಂ ಪ್ರವಿಶ್ಯ ದ್ರಕ್ಷ್ಯಾಮಿ ಶಂಭುಂ ತ್ರಿದಶವಂದಿತಮ್ ||೪೭||

ಧ್ಯಾನದೃಷ್ಟ್ಯಾ—ಧ್ಯಾನದೃಷ್ಟಿಯಿಂದ ಸಮಾಹಿತಃ—ಇರಲುಪಟ್ಟಂಥಾ ಭಗವಾನ್—ಸಾಮರ್ಥ್ಯವನುಳ್ಳಂಥಾ ಶಂಭುಃ—ಸುಖವನು ಹುಟ್ಟಿಸುವಂಥಾ ಮಹೇಶ್ವರಃ—ಪರಮೇಶ್ವರನು ನಿಷ್ಕಂಪಃ — ಚಲನೆಯಿಲ್ಲದಾತನಾಗಿ ಆತ್ಮನಾ — ತನ್ನಿಂದ ಆತ್ಮಾನಂ—ತನ್ನನು ಚಿಂತ್ಯಮಾನಃ—ಧ್ಯಾನಿಸುತ್ತಿದ್ದಾತನಾಗುತವು ಯತ್ರ — ಆವ ಠಾವಿನಲ್ಲಿ ಆಸ್ತೇ—ಇರುತ್ತಿದ್ದಾನು, ತತ್ರ — ಅಲ್ಲಿ ಪ್ರಾಪ್ಯ — ಎಯ್ದಿ ಶಂಭೋಃ—ಪರಮೇಶ್ವರನ ಆಯತನಂ ಚ—ಸ್ಥಾನವನು ಅಪಶ್ಯತ್—ಕಂಡನು.

ದ್ವಾರದೇಶೇ ತು—ಬಾಗಿಲ ಸ್ಥಾನದಲ್ಲಿ ಮೇರುಶೃಂಗಮಿವ—ಮೇರುಪರ್ವತದ ಶಿಖರವಕ್ಕೈಯೆಂಬ ಹಾಂಗೆ ಇದ್ದಂಥಾ ಉನ್ನತಂ—ಉನ್ನತನಹಂಥಾ ಸರ್ವಾಭರಣ ಸಂಯುಕ್ತಂ—ಸಮಸ್ತ ಆಭರಣಂಗಳೊಡನೆ ಕೂಡಿದಂಥಾ ಸಹಸ್ರಾದಿತ್ಯವರ್ಚಸಂ—ಸಾವಿರ ಸೂರ್ಯರ ತೇಜಸ್ಸನುಳ್ಳಂಥಾ ಶೂಲಹಸ್ತಂ — ತ್ರಿಶೂಲಹಸ್ತನಹಂಥಾ ತ್ರಿಣೇತ್ರಂ—ಮೂರು ಕಣ್ಣುಗಳನುಳ್ಳಂಥಾ ಚಂದ್ರಾವಯವಭೂಷಣಂ—ಚಂದ್ರನ ಶರೀರವೇ ಅಲಂಕಾರವಾಗಿ ಉಳ್ಳಂಥಾ ವಜ್ರಪಾಣಿಂ — ವಜ್ರಹಸ್ತನಹಂಥಾ ಚತುರ್ಬಾಹುಂ — ನಾಲ್ಕು ಭುಜಂಗಳನುಳ್ಳಂಥಾ ದ್ವಿತೀಯಂ ಶಂಕರಮಿವ — ಎರಡನೆಯ ಶಿವನು ಅಕ್ಕೈಯೆಂಬ ಹಾಂಗೆ ಇದ್ದಂಥಾ ಶೈಲಾದಿಂ—ಶಿಲಾದ ಮುನಿಯ ಪುತ್ರನ ಹಂಥಾ, ||೪೬||

ತಂ—ಆ ನಂದಿಕೇಶ್ವರನನು ಮದನಃ— ಕಾಮನು ದೃಷ್ಟ್ವಾ—ಕಂಡು, ಭೋ ವಿಪ್ರಾಃ—ಎಲೆ ಬ್ರಾಹ್ಮಣರುಗಳಿರಾ! ತದಾ—ಆಗ ಚಿಂತಾಕ್ರಾಂತಃ — ಚಿಂತೆಯಿಂದ ಮುಸುಕಲ್ಪಟ್ಟಂಥಾತನು[2] ಅಭವತ್—ಆದನು. ಕಥಂ—ಹೇಂಗೆ

---

[1] ಭೂಷಣಂ (ಖ.ಘ ಮೂಲ) ಭೂಷಿತಂ (ಖ.ಗ) [2] ಒಟ್ಟಾತನು (ಕ)

ಕಥಂ ಕಾರ್ಯಂ ಕರಿಷ್ಯಾಮಿ ಸುರಾಣಾಂ ಪ್ರೀತಿಕಾರಣಮ್
ಚಿಂತಯಿತ್ವಾ ತು ಬಹುಧಾ ವಂಚನಾರ್ಥಾಯ ನಂದಿನಃ ||೪೮||

ವಾಯುರೂಪಂ ತತಃ ಕೃತ್ವಾ ಸುಗಂಧಮೃದುಶೀತಳಮ್
ಪ್ರವಿಶ್ಯ ಚ ತದಾ ಕಾಮೋ ದಕ್ಷಿಣಾಂ ದಿಶಮಾಶ್ರಯತ್ ||೪೯||

ತೇನ ಯಾಮ್ಯಾಂ ದಿಶಂ ಯೋ ಹಿ ವಾಯುರ್ವಾತಿ ಸುಖಾವಹಃ
ಅದ್ಯಾಪಿ ಕಾರಣಾತ್ಸೋಽಪಿ ಸುಗಂಧೋ ಮೃದುಶೀತಲಃ ||೫೦||

ಅಪಶ್ಯತ್ತತ್ರ ಮದನಃ ಸೂರ್ಯಕೋಟಿಸಮೋದಿತಮ್
ಸಹಸ್ರನಯನಂ ದೇವಂ ಸಹಸ್ರತನುಮೀಶ್ವರಮ್ ||೫೧||

ಪ್ರವಿಶ್ಯ—ಪ್ರವೇಶಿಸಿ ತ್ರಿದಶವಂದಿತಂ — ದೇವರ್ಕಳಿಂದ ವಂದಿಸಿಕೊಳಲುಪಟ್ಟಂಥಾ ಶಂಭುಂ—ಪರಮೇಶ್ವರನನು ದ್ರಕ್ಷ್ಯಾಮಿ—ಕಂಡೇನು ? ||೪೭||

ಸುರಾಣಾಂ—ದೇವರ್ಕಳಿಗೆ ಪ್ರೀತಿಕಾರಣಂ — ಸಂತೋಷವ ಮಾಡುವಂಥಾ ಕಾರ್ಯಂ—ಕಾರ್ಯವನು ಕಥಂ—ಹೇಂಗೆ ಕರಿಷ್ಯಾಮಿ—ಮಾಡೀನು ? ನಂದಿನಃ —ನಂದಿಕೇಶ್ವರನ ವಂಚನಾರ್ಥಾಯ— ಠಕ್ಕಿಸಲೋಸ್ಕರ ಬಹುಧಾ — ಹಲವು ಪ್ರಕಾರದಿಂದ **ಚಿಂತಯಿತ್ವಾ ತು—ಚಿಂತಿಸಿ,** ||೪೮||

ತತಃ—ಅಷ್ಟರಮೇಲೆ ಕಾಮಃ—ಕಾಮನು ತದಾ—ಆಗ ಸುಗಂಧಮೃದು-ಶೀತಳಂ—ಸೌರಭ್ಯ ಮಾಂದ್ಯ ಶೈತ್ಯವನುಳ್ಳಂಥಾ ವಾಯುರೂಪಂ — ವಾಯುವಿನ ರೂಪವನು ಕೃತ್ವಾ—ಮಾಡಿಕೊಂಡು ಪ್ರವಿಶ್ಯ—ಪ್ರವೇಶಿಸಿ ದಕ್ಷಿಣಾಂ ದಿಶಂ ಚ —ತೆಂಕಣ ದಿಕ್ಕನು ಆಶ್ರಯತ್—ಆಶ್ರೈಸಿದನು. ||೪೯||

ಯಃ—ಆವನಾನೊಬ್ಬ ವಾಯು ತೇನ—ಅದು ಕಾರಣದಿಂದ ಸುಖಾವಹಃ ಸೊಗಸ ಧರಿಸಿದಾತನಾಗಿ ಯಾಮ್ಯಾಂ ದಿಶಂ — ತೆಂಕಣದಿಕ್ಕನು ವಾತಿ ಹಿ— ಎಯ್ದುತ್ತಿಹನಲಾ. ವಾ+ಗತಿಗಂಧನಯೋಃ ಇತಿ ಧಾತುಃ. ಅದ್ಯಾಪಿ—ಈಗಲೂ ಕಾರಣಾತ್—ಅದು ಕಾರಣದ ದೆಸೆಯಿಂದ ಸೋಽಪಿ — ಆ ವಾಯು ಸುಗಂಧಃ —ಸುವಾಸನೆಯನುಳ್ಳಾತನಾದನು. ಮೃದುಶೀತಲಃ — ಮಾಂದ್ಯಶೈತ್ಯವನುಳ್ಳಾತನಾದನು. ||೫೦||

ತತ್ರ—ಆ ಠಾವಿನಲ್ಲಿ ಮದನಃ—ಕಾಮನು ಉದಿತಂ — ಉದಯವಾಗುತ್ತಿದ್ದಂಥಾ ಸೂರ್ಯಕೋಟಿಸಮ—ಸೂರ್ಯಕೋಟಿಯುಕ್ಕೈಯೆಂಬ ಹಾಂಗಿದ್ದಂಥಾ ಸಹಸ್ರನಯನಂ—ಸಾವಿರಕಣ್ಣುಗಳನುಳ್ಳಂಥಾ ದೇವಂ— ಪ್ರಕಾಶಸ್ವರೂಪನಹಂಥಾ

ನೀಲಕಂಠಂ ಸುಧಾಭಾಸಂ ಶುಭ್ರಖಂಡೇಂದುಧಾರಿಣಮ್
ಜಗದುತ್ಪತ್ತಿಸಂಹಾರ ಸ್ಥಿತ್ಯನುಗ್ರಹಕಾರಣಮ್ ||೫೨||

ಶುದ್ಧಸ್ಫಟಿಕಸಂಕಾಶಂ ವಿಧೂಮಮಿವ ಪಾವಕಮ್
ಉಡುಮಾಲಾಂಚಿತಂ ದೇವಂ ಸೂರ್ಯಮಾಲಾವಿಭೂಷಿತಮ್ ||೫೩||

ಅನೌಪಮ್ಯಮಸಾದೃಶ್ಯಮಪ್ರಮೇಯಮನಾಕುಲಮ್
ಜಗಚ್ಚಕ್ಷುರ್ಜಗದ್ಬಾಹುಂ ಜಗಚ್ಛೀರ್ಷಂ ಜಗನ್ಮಯಮ್ ||೫೪||

ಜಗತ್ಪಾದಂ ಜಗಚ್ಛ್ರೋತ್ರಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಮ್
ರುದ್ರಂ ಪಶುಪತಿಂ ಘೋರಂ ಭೀಮಂ ಶರ್ವಂ ಭವಂ ದ್ವಿಜಾಃ ||೫೫||

ಸಹಸ್ರತನುಂ — ಸಹಸ್ರಮೂರ್ತಿಯನುಳ್ಳಂಥಾ ಈಶ್ವರಂ — ಪರಮೇಶ್ವರನನು ಅಪಶ್ಯತ್—ಕಂಡನು. ||೫೧||

ನೀಲಕಂಠಂ — ನೀಲಕಂಠನಹಂಥಾ ಸುಧಾಭಾಸಂ — ಅಮೃತದೋಪಾದಿ ಶುಭ್ರವಹ ಕಾಂತಿಯನುಳ್ಳಂಥಾ ಶುಭ್ರಖಂಡೇಂದುಧಾರಿಣಂ—ಒಪ್ಪುತ್ತಂವಿದ್ದ ಅರ್ಧ ಚಂದ್ರನ ಧರಿಸಿದಂಥಾ ಜಗದುತ್ಪತ್ತಿಸಂಹಾರಸ್ಥಿತ್ಯನುಗ್ರಹಕಾರಣಂ — ಲೋಕದ ಸೃಷ್ಟಿ ಸ್ಥಿತಿಸಂಹಾರ ಪಾಲನೆ ಅನುಗ್ರಹಂಗಳಿಗೆ ಕಾರಣನಹಂಥಾ, ||೫೨||

ಶುದ್ಧಸ್ಫಟಿಕಸಂಕಾಶಂ—ನಿರ್ಮಲವಹ ಸ್ಫಟಿಕದೋಪಾದಿ ಕಾಂತಿಯನುಳ್ಳಂಥಾ ವಿಧೂಮಂ—ಹೊಗೆಯಿಲ್ಲದೇ ಇದ್ದಂಥಾ ಪಾವಕಂ ಇವ—ಅಗ್ನಿ[1]ಯೋಪಾದಿಯಲ್ಲಿರ ತಕ್ಕಂಥಾ[1] ಉಡುಮಾಲಾಂಚಿತಂ—ನಕ್ಷತ್ರಮಾಲೆಗಳನು ಧರಿಸಿದಂಥಾ ಸೂರ್ಯ ಮಾಲಾವಿಭೂಷಿತಂ—ಸೂರ್ಯಮಾಲೆಯಿಂದ ಅಲಂಕರಿಸಲುಪಟ್ಟಂಥಾ ದೇವಂ — ದೇವನಹಂಥಾ, ||೫೩||

ಅನೌಪಮ್ಯಂ—ಉಪಮಾನರಹಿತನಹಂಥಾ ಅಸಾದೃಶ್ಯಂ—ಸಮಾನವಿಲ್ಲದೇ ಯಿದ್ದಂಥಾ ಅಪ್ರಮೇಯಂ — [2]ಊಹಿಸಲು ಬಾರದೇಯಿದ್ದಂಥಾ[2] ಅನಾಕುಲಂ —[3] ಚಂಚಲವಿಲ್ಲದೇಯಿದ್ದಂಥಾ[3] ಜಗಚ್ಚಕ್ಷುಃ — ಲೋಕಂಗಳೇ ದೃಷ್ಟಿಗಳಾಗಿ ಉಳ್ಳಂಥಾ ಜಗದ್ಬಾಹುಂ—ಲೋಕಂಗಳೇ ಭುಜಂಗಳಾಗಿ ಉಳ್ಳಂಥಾ ಜಗಚ್ಛೀರ್ಷಂ —ಲೋಕಂಗಳೇ ಶಿರಸ್ಸುಗಳಾಗಿ ಉಳ್ಳಂಥಾ ಜಗನ್ಮಯಂ — ಲೋಕವೇ ಮೂರ್ತಿ ಯಾಗಿ ಉಳ್ಳಂಥಾ, ||೫೪||

ಭೋ ದ್ವಿಜಾಃ—ಎಲೆ ಋಷಿಗಳಿರಾ ಜಗತ್ಪಾದಂ — ಲೋಕಂಗಳೇ ಪಾದಂ

---

1 ಯಕ್ಕೈಯೆಂಬ ಹಾಂಗೆಯಿದ್ದಂಥಾ (ಕ) 2,3 ಲುಪ್ತ (ಕ)

ಮಹಾದೇವಂ ಮಹೇಶಾನಮಷ್ಟಮೂರ್ತಿಂ ಜಗತ್ಪತಿಮ್
ವ್ಯಕ್ತಾವ್ಯಕ್ತಂ ತ್ರಿಲೋಕೇಶಂ ಪೂಜಿತಂ [3]ಸಃಸುರಾಸುರೈಃ ||೫೬||

ಅಥ ದೃಷ್ಟ್ವಾ ಮಹಾದೇವಂ ಪ್ರಹೃಷ್ಟೋ ಮಕರಧ್ವಜಃ
ನಿಷ್ಕೃಷ್ಯ ಚಾಪಮಾಪೂರ್ಯ ಸ್ಥಿತಃ ಪಶ್ಯನ್ ಭವೋದ್ಭವಮ್ ||೫೭||

ಏವಂ ಸ್ಥಿತಸ್ಯ ಕಾಮಸ್ಯ ಸಹಸ್ರಾಣ್ಯಯುತಾನಿ ಷಟ್
ಗತಾನಿ ತಸ್ಯ ವರ್ಷಾಣಿ ಮುನೀಂದ್ರಾಶ್ಚಿತ್ತಜನ್ಮನಃ ||೫೮||

ಗಳಾಗಿ ಉಳ್ಳಂಥಾ ಜಗಚ್ಛ್ರೋತ್ರಂ—ಲೋಕಂಗಳೇ ಕಿವಿಯಾಗಿ ಉಳ್ಳಂಥಾ ಸ್ಥೂಲಂ—ಸ್ಥೂಲರೂಪನಹಂಥಾ ಸೂಕ್ಷ್ಮಂ—ಸೂಕ್ಷ್ಮರೂಪನಹಂಥಾ ಪರಾತ್ಪರಂ—ಪ್ರಕೃತಿಯ ದೆಸೆಯಿಂದವು ಮೇಲೆ ಇಹಂಥಾ ರುದ್ರಂ—ದುಃಖವನು ಕೆಡಿಸುವಂಥಾ ಪಶುಪತಿಂ ಚ—ಬ್ರಹ್ಮಾದಿಪಶುಗಳಿಗೆ ಒಡೆಯನಹಂಥಾ ಉಗ್ರಂ — ಉಗ್ರಮೂರ್ತಿಯಹಂಥಾ ಶರ್ವಂ—ಸಂಹಾರವ ಮಾಡುತ್ತಿದ್ದಂಥಾ ಭವಂ—ಸೃಷ್ಟಿಯನು ಮಾಡುತ್ತಿದ್ದಂಥಾ,

ಮಹಾದೇವಂ—ಅಧಿಕನಹ ದೇವನಹಂಥಾ ಮಹೇಶಾನಂ—ಮಹದೈಶ್ವರ್ಯವನುಳ್ಳಂಥಾ ಅಷ್ಟಮೂರ್ತಿಂ—ಅಷ್ಟಮೂರ್ತಿಯಹಂಥಾ ಜಗತ್ಪತಿಂ—ಲೋಕಂಗಳಿಗೆ ಒಡೆಯನಹಂಥಾ ವ್ಯಕ್ತಾವ್ಯಕ್ತಂ—ಕಾಣಬಹಂಥಾ ಕಾಣಬಾರದೇ ಇದ್ದಂಥಾ ತ್ರಿಲೋಕೇಶಂ—ಮೂರು ಲೋಕಕ್ಕೆ ಅಧಿಪತಿಯಹಂಥಾ ಸಸುರಾಸುರೈಃ—ದೇವಾಸುರರುಗಳಿಂದ ಸಹಿತವಾಗಿ ಪೂಜಿತಂ—ಅರ್ಚಿಸಿಕೊಳಲುಪಟ್ಟಂಥಾ, ||೫೬||

ಮಹಾದೇವಂ—ಪರಮೇಶ್ವರನನು ದೃಷ್ಟ್ವಾ—ಕಂಡು ಮಕರಧ್ವಜಃ—ಕಾಮನು ಪ್ರಹೃಷ್ಟಃ=ಸಂತೋಷಿಸಿದಾತನಾಗಿ ಅಥ=ಅನಂತರದಲ್ಲಿ ಚಾಪಂ=ಬಿಲ್ಲನು ಆಪೂರ್ಯ=ಏರಿಸಿ ನಿಷ್ಕೃಷ್ಯ=ಸೆಳೆದು ಭವೋದ್ಭವಂ=ಸಂಸಾರವ ಹುಟ್ಟಿಸಿದಂಥಾ ಶಿವನನು ಪಶ್ಯನ್=ನೋಡುತವು ಸ್ಥಿತಃ=ಇದ್ದನು. ||೫೭||

ಭೋ ಮುನೀಂದ್ರಾಃ=ಎಲೆ ಮುನೀಶ್ವರರುಗಳಿರಾ! ಏವಂ=ಈ ಪ್ರಕಾರದಲ್ಲಿ ಸ್ಥಿತಸ್ಯ=ಇರುತ್ತಿದ್ದಂಥಾ ಚಿತ್ತಜನ್ಮನಃ=ಚಿತ್ತದಲ್ಲಿ ಉತ್ಪತ್ತಿಯನುಳ್ಳಂಥಾ ತಸ್ಯ ಕಾಮಸ್ಯ=ಆ ಕಾಮಂಗೆ ಷಟ್ ಅಯುತಾನಿ ಸಹಸ್ರಾಣಿ ವರ್ಷಾಣಿ=ಅರುವತ್ತು ಸಾವಿರ ವರ್ಷಂಗಳು ಗತಾನಿ=ಹೋದವು. ಅರುವತ್ತು ಸಾವಿರವರ್ಷಪರ್ಯಂತರ ಕಾಮನು ವೇಳೆಯ ನೋಡುತ್ತಿದ್ದನೆಂಬುದರ್ಥ. ||೫೮||

---

[3] ಚ (ಘ)

ತತಸ್ಸ ಭಗವಾನ್ದೇವೋ ನೇತ್ರೇ ಉನ್ಮೀಲ್ಯ ಶಂಕರಃ
ಅಪಶ್ಯದ್ಗಿರಿಜಾಂ ದೇವೀಮಗ್ರೇ ವಿಶ್ವೇಶ್ವರಃ ಶಿವಃ ||೫೯||

§ ಗಿರೀಂದ್ರಪುತ್ರೀಂ ತಪಸಿ ಪ್ರಸಕ್ತಾಂ
ಲಜ್ಜಾನ್ವಿತಾಂ ಪೂಷರದಾಂತಕಾರೀ ।
ದೃಷ್ಟ್ವಾ ಕಿಮತ್ರೇತಿ ವಿಕಲ್ಪಬುದ್ಧ್ಯಾ
ಕಾಮೋಽಯಮತ್ರೇತಿ ವಿಚಿಂತ್ಯ ಶರ್ವಃ ||೬೦||

ಜ್ಞಾತ್ವಾಽವಲೋಕ್ಯ ಪ್ರತಿಕೃಷ್ಟಚಾಪಂ
ನೇತ್ರಾಗ್ನಿನಾಽಸೌ ಮದನೋಽಪಿ ದಗ್ಧಃ ||೬೧||

ಸೂತ ಉವಾಚ

ತತಃ = ಆಷ್ಟರ ಮೇಲೆ ಭಗವಾನ್ = ಭಗವಾನ್ನುವಹಂಥಾ ದೇವಃ = ದೇವನಹಂಥಾ ಶಂಕರಃ = ಸುಖವನು ಮಾಡುವಂಥಾ ವಿಶ್ವೇಶ್ವರಃ = ವಿಶ್ವಕ್ಕೊಡೆಯನಹಂಥಾ ಸಃ ಶಿವಃ = ಆ ಶಿವನು ನೇತ್ರೇ = ಎರಡು ಕಣ್ಣುಗಳನು ಉನ್ಮೀಲ್ಯ = ತೆರದು ಅಗ್ರೇ = ಇದಿರಲ್ಲಿ ಗಿರಿಜಾಂ ದೇವೀಂ = ಪಾರ್ವತೀದೇವಿಯನು ಅಪಶ್ಯತ್ = ಕಂಡನು. ||೫೯||

ಪೂಷರದಾಂತಕಾರೀ = ಪೂಷನ ದಂತವನು ನಾಶವ ಮಾಡಿದಂಥಾ ಶರ್ವಃ = ಪರಮೇಶ್ವರನು ತಪಸಿ = ತಪಸ್ಸಿನಲ್ಲಿ ಪ್ರಸಕ್ತಾಂ = ತಾತ್ಪರ್ಯವನುಳ್ಳಂಥಾ ಲಜ್ಜಾನ್ವಿತಾಂ = ಲಜ್ಜೆಯೊಡನೆ ಕೂಡಿದಂಥಾ ಗಿರೀಂದ್ರಪುತ್ರೀಂ = ಪಾರ್ವತೀದೇವಿಯನು ದೃಷ್ಟ್ವಾ = ಕಂಡು ಅತ್ರ = ಇಲ್ಲಿ ಕಿಮಿತಿ = ಏನು ನಿಮಿತ್ತವಿದ್ದಾ[1]ಳೋ ಅತ್ರ = ಇಲ್ಲಿ ಅಯಂ ಕಾಮಃ = ಈ ಕಾಮನು ಕಿಮಿತಿ = ಏನು ಕಾರಣವಿದ್ದಾನೋ ಎಂದು ಹೀಂಗೆ ವಿಕಲ್ಪಬುದ್ಧ್ಯಾ = ವಿಕಲ್ಪಬುದ್ಧಿಯಿಂದೆ ವಿಚಿಂತ್ಯ = ಚಿಂತಿಸಿ, ಜ್ಞಾತ್ವಾ = ಅರಿದು, ಪ್ರತಿಕೃಷ್ಟಚಾಪಂ = ಸೆಳೆಯಲುಪಟ್ಟ ಬಿಲ್ಲನುಳ್ಳಂಥಾ ಕಾಮನನು ಅವಲೋಕ್ಯ = ನೋಡಲಾಗಿ ನೇತ್ರಾಗ್ನಿನಾ = ನೊಸಲಕಣ್ಣ ಅಗ್ನಿಯಿಂದ ಅಸೌ ಮದನೋಽಪಿ = ಈ ಕಾಮನೂ ದಗ್ಧಃ = ಬೇಯಲುಪಟ್ಟನು. ||೬೧||

ಸೂತ ಉವಾಚ = ಸೂತಮುನಿಯು ನುಡಿದನು.[2]

---

§ ಉಪೇಂದ್ರ ವಜ್ರವೃತ್ತ

[1] ದ್ದ (ಖ) [2] ಯ ವಾಕ್ಯವು (ಖ)

ದಗ್ಧೇ ರತಿಪತೌ ಶಂಭುರುವಾಚಾಚಲಕನ್ಯಕಾಮ್
ಕಿಮಹಂ ತವ ದೇವೇಶಿ ಕರೋಮಿ ಮನಸಿ ಸ್ಥಿತಮ್ ||೬೨||

ವರಂ ಬ್ರೂಹಿ ಮಹಾದೇವಿ ದಾಸ್ಯಾಮ್ಯದ್ಯ ಸುರೇಶ್ವರಿ
ಮಯಿ ಪ್ರಸನ್ನೇ ದೇವೇಶಿ ಕಿಂ ದುರ್ಲಭಮಿಹಾಸ್ತಿ ತೇ ||೬೩||

ಪಾರ್ವತ್ಯುವಾಚ—

[1] ಹತೇ ತು ಕಾಮೇ ವದ ನೀಲಕಂಠ
ವರೇಣ ಕಿಂ ದೇವ ಕರೋಮಿ ತೇಽದ್ಯ ।
ವಿನೈವ ಕಾಮೇನ ನ ಚಾಸ್ತಿ ಭಾವಃ
ಸ್ತ್ರೀಪುಂಸಯೋರ್ಭಾಸ್ಕರಕೋಟಿಕಲ್ಪ ||೬೪||

ರತಿಪತೌ = ಕಾಮನು ದಗ್ಧೇ ಸತಿ = ಚೇವುತ್ತಂ ಇರಲಾಗಿ ಶಂಭುಃ = ಪರಮೇಶ್ವರನು ಅಚಲಕನ್ಯಕಾಂ = ಹಿಮವತ್ಪರ್ವತನ ಕುಮಾರಿಯುಹಂಥಾ ಪಾರ್ವತೀ ದೇವಿಯನು ಕುರಿತು ಉವಾಚ = ನುಡಿದನು. ಭೋ ದೇವೇಶಿ ! = ಎಲೆ ದೇವರ್ಕಳಿಗೆ ಒಡತಿಯುಹಂಥಾಯಕನೇ ತವ = ನಿನ್ನ ಮನಸಿ = ಮನಸ್ಸಿನಲ್ಲಿ ಸ್ಥಿತಂ ಕಿಂ = ಇದ್ದಂಥಾದೇನು ? ಅಹಂ = ನಾನು ಕರೋಮಿ = ಮಾಡುವೆನು. ||೬೨||

ಸುರೇಶ್ವರಿ = ದೇವತೆಗಳಿಗೆ ಒಡತಿಯುಹಂಥಾ ಭೋ ಮಹಾದೇವಿ = ಎಲೆ ಪಾರ್ವತೀದೇವಿ ! ವರಂ = ವರವನು ಬ್ರೂಹಿ = ಹೇಳು. ಅದ್ಯ = ಈಗ ದಾಸ್ಯಾಮಿ = ಕೊಟ್ಟೇನು. ಭೋ ದೇವೇಶಿ = ಎಲೆ ದೇವರ್ಕಳಿಗೆ ಒಡತಿಯುಹಂಥಾ ಯಕನೆ ! ಮಯಿ ಪ್ರಸನ್ನೇ ಸತಿ = ನಾನು ಪ್ರಸನ್ನವಾಗುತ್ತಿರಲು ತೇ = ನಿನಗೆ ಇಹ = ಇಲ್ಲಿ ದುರ್ಲಭಂ = ಹಡೆಯಲು ಬಾರದೇ ಇದ್ದಂಥಾದ್ದು ಕಿಮಸ್ತಿ = ಏನುಂಟು ? ||೬೩||

ಪಾರ್ವತ್ಯುವಾಚ = ಪಾರ್ವತೀದೇವಿಯು ನುಡಿದಳು.

ನೀಲಕಂಠ = ಕರೆಕೊರಳನಹಂಥಾ ಭೋ ದೇವ = ಎಲೆ ದೇವನೇ ! ಕಾಮೇ ತು = ಕಾಮನು ಹತೇ ಸತಿ = ಹತವಾಗುತ್ತಿರಲು ಅದ್ಯ = ಈಗ, ತೇ = ನಿನ್ನ ವರೇಣ = ವರದಿಂದ ಕಿಂ = ಏನು ಕರೋಮಿ = ಮಾಡುವೆನು. ವದ = ಹೇಳು. ಭಾಸ್ಕರಕೋಟಿಕಲ್ಪ = ಸೂರ್ಯಕೋಟಿಪ್ರಭೆಗೆ ಸಮಾನವಹಂಥಾ ಶಿವನೇ ! ಕಾಮೇನ ವಿನೈವ = ಕಾಮನಿಲ್ಲದೆ ಸ್ತ್ರೀಪುಂಸಯೋಃ = ಸ್ತ್ರೀಪುರುಷರುಗಳ ಭಾವಶ್ಚ = ವ್ಯಾಪಾರವು ನಾಸ್ತಿ = ಇಲ್ಲ. ||೬೪||

---

[1] ಉಪಜಾತಿ ವೃತ್ತ

*ಭಾವಸ್ಯ ಹೀನೇ ಸುಖಸನ್ನಿಕರ್ಷಃ
ಕಥಂ ಭವೇದ್ಬ್ರೂಹಿ ಸುರೇಶವಂದ್ಯ ।
ಉವಾಚ ಭೂಯೋ ಮದನಾಂತಕಾರೀ
ದೇಹೇ ನ ಚಾಹಂ ಮದನಂ ಸುನೇತ್ರೇ ॥೬೫॥

ನೇತ್ರಸ್ಯ ದೇವಿ ಜ್ವಲನಾತ್ಮಕಸ್ಯ
ಸ್ವಭಾವಮೇತದ್ವದ ಕಿಂ ಕರೋಮಿ ॥೬೬॥

ದೇವ್ಯುವಾಚ—

* ಬಾಲೇತಿ ಮತ್ವಾ ಭವ ಭೂತನಾಥ
ವ್ಯಾಮೋಹಸೇ ಕಿಂ ತ್ವಮನಿಂದ್ಯವರ್ಣ ।
ಸ್ವತಂತ್ರಶಕ್ತಿರ್ಯದಿ ಚಕ್ಷುಷಸ್ತೇ
ತದಾ ದಹೇನ್ಮಾಮಪಿ ನಾಗ್ರಸಂಸ್ಥಾಮ್ ॥೬೭॥

ಭಾವಸ್ಯ = ವ್ಯಾಪಾರದ ಹೀನೇ = ಹೀನದಲ್ಲಿ ಸುಖಸನ್ನಿಕರ್ಷಃ = ಸುಖದ ಅತಿಶಯವು ಕಥಂ = ಹೇಂಗೆ ಭವೇತ್ = ಆಹುದು ? ಭೋಃ ಸುರೇಶವಂದ್ಯ = ಎಲೆ ಇಂದ್ರನಿಂದ ವಂದಿಸಿಕೊಳಲುಪಟ್ಟಾತನೆ ಬ್ರೂಹಿ = ಹೇಳು. ಮದನಾಂತಕಾರೀ = ಕಾಮನ ನಾಶವ ಮಾಡಿದಂಥಾ ಶಿವನು ಭೂಯಃ = ಮರಳಿ ಉವಾಚ = ನುಡಿದನು. ಭೋಃ ಸುನೇತ್ರೇ = ಎಲೆ ಒಪ್ಪುತ್ತಂವಿದ್ದಂಥಾ ನಯನಂಗಳನುಳ್ಳಾಯಕನೇ [ಳ್ಳಾತಳೇ] ಅಹಂ ಚ = ನಾನು ದೇಹೇ = ಶರೀರದಲ್ಲಿ ಮದನಂ = ಕಾಮನನು ನ = ಸಂಹರಿಸಿದುದಿಲ್ಲ. ಭೋ ದೇವಿ = ಎಲೆ ದೇವಿ ! ಜ್ವಲನಾತ್ಮಕಸ್ಯ = ಅಗ್ನಿಸ್ವರೂಪವನುಳ್ಳಂಥಾ ನೇತ್ರಸ್ಯ = ನಯನಕ್ಕೆ ಏತತ್ = ಇದು ಸ್ವಭಾವಂ = ಸ್ವಭಾವವು. ಕಿಂ ಕರೋಮಿ ? = ಏನ ಮಾಡುವೆನು ? ವದ = ಹೇಳು. ॥೬೬॥

ದೇವ್ಯುವಾಚ—ಪಾರ್ವತೀದೇವಿಯ ವಾಕ್ಯವು.

ಭೂತನಾಥ ! = ಭೂತಂಗಳಿಗೆ ಒಡೆಯನಹಂಥಾ ಅನಿಂದ್ಯವರ್ಣ = ನಿಂದೆಯಿಲ್ಲದ ವರ್ಣವನುಳ್ಳಂಥಾ ಭೋ ಭವ = ಎಲೆ ಪರಮೇಶ್ವರನೆ ತ್ವಂ = ನೀನು ಬಾಲೇತಿ = ಚಿಕ್ಕವಳೆಂದೀ ಪ್ರಕಾರದಲ್ಲಿ ಮತ್ವಾ = ಅರಿದು ಕಿಂ = ಏನು ಕಾರಣ ವ್ಯಾಮೋಹಸೇ = ಮರುಳು ಮಾಡುತ್ತಿದ್ದಿ. ಯದಿ = ಎತ್ತಲಾನು ತೇ = ನಿನ್ನ ಚಕ್ಷುಷಃ = ದೃಷ್ಟಿಗೆ ಸ್ವತಂತ್ರಶಕ್ತಿಶ್ಚೇತ್ = ಸ್ವತಂತ್ರಶಕ್ತಿ ಉಂಟಾದ ಪಕ್ಷೇ ತದಾ = ಆಗ ಅಗ್ರಸಂಸ್ಥಾಂ = ಇದಿರಲ್ಲಿ ಇದ್ದಂಥಾ ಮಾಮಪಿ = ಎನ್ನನೂ[1] [ಕಿಂ]ನ ದಹೇತ್ ? = ಏಕೆ ದಹಿಸದು ? [ದಹಿಸದಿರುವುದೇಕೆ ?][1] ॥೬೭

---

* ಉಪಜಾತಿ ವೃತ್ತ   [1] ನ ದಹೇತ್—ದಹಿಸದು ?

ಯದಿ ವಿಶ್ವೇಶ್ವರೋ ದೇವೋ ಬ್ರಹ್ಮಾದೀನಾಂ ವರಃ ಶಿವಃ
ಪ್ರತಾರಣೇ ಪ್ರವೃತ್ತಶ್ಚೇತ್ ಕೋ ವಿಚಾರಯಿತುಂ ಕ್ಷಮಃ ||೬೮||

ನಾಹಂ ಪ್ರತಾರ್ಯಾ ಭಗವನ್ ತ್ವಾಮೇವ ಶರಣಂ ಗತಾ
ಗತಿರ್ನಾನ್ಯಾಽಸ್ತಿ ಮೇ ದೇವ ತಸ್ಮಾನ್ಮಾಂ ತ್ರಾತುಮರ್ಹಸಿ ||೬೯||

ತ್ವಮೇವ ಚಕ್ಷುರ್ಜಗತಃ ತ್ವಮೇವ ವಚಸಾಂ ಪತಿಃ
ತ್ವಮೇವ ಧಾತಾ ಜಗತೋ ವಿಧಾತಾ ವಿಶ್ವತೋಮುಖಃ ||೭೦||

‡ ನಮಾಮ್ಯಹಂ ದೇವಮಜಂ ಪುರಾಣ-
ಮುಪೇಂದ್ರವೇಧಾಮರರಾಜಜುಷ್ಟಮ್ ।

ವಿಶ್ವೇಶ್ವರಃ = ವಿಶ್ವಕ್ಕೆ ಒಡೆಯನಹಂಥಾ ದೇವಃ = ಪ್ರಕಾಶನಹಂಥಾ ಬ್ರಹ್ಮ ಬ್ರಹ್ಮಾದೀನಾಂ = ಬ್ರಹ್ಮನೊದಲಾದಂಥಾವರುಗಳಿಗೆ ವರಃ = ಶ್ರೇಷ್ಠನಹಂಥಾ ಶಿವಃ = ಶಿವನು ಯದಿ = ಎತ್ತಲಾನು ಪ್ರತಾರಣೇ = ಲೋಕಸ್ಥಿತಿಯ ಮೀರುವಲ್ಲಿ ಪ್ರವೃತ್ತಶ್ಚೇತ್ = ವರ್ತಿಸುತ್ತಿದ್ದಾತನಾದ ಪಕ್ಷೇ ವಿಚಾರಯಿತುಂ = ವಿಚಾರಿಸಲು ಕ್ಷಮಃ = ಸಮರ್ಥನು ಕಃ = ಆವಾತನು ? ||೬೮||

ಭೋ ಭಗವನ್ = ಎಲೆ ಷಡ್ಗುಣೈಶ್ವರ್ಯ ಸಂಪನ್ನನಹಂಥಾ ಪರಮೇಶ್ವರನೇ! ಅಹಂ = ನಾನು ಪ್ರತಾರ್ಯಾ = ಅತಿಶಯವಾಗಿ ಮಾಡಲು [ಪ್ರತಾರಣ ಅರ್ಥಾತ್ ವಂಚಿಸಲು, ಅಥವಾ ಮೋಸಮಾಡಲು] ಯೋಗ್ಯಳಹಂಥಾ [ತಳು] ಯುಕಳು ನ = ಅಲ್ಲ. ತ್ವಾಮೇವ = ನಿನ್ನನೇ ಶರಣಂ = ಮರೆಹೊಗುಹವನು ಗತಾ = ಎಯ್ದಿದಾ[ತಳು]ಯುಕನು. ಮೇ[1] = ಎನಗೆ[1] ಅನ್ಯಾಗತಿಃ = ಮತ್ತೊಂದುಗತಿ ನಾಸ್ತಿ = ಇಲ್ಲ. ಭೋ ದೇವ = ಎಲೆ ದೇವನೇ ! ತಸ್ಮಾತ್ = ಅದು ಕಾರಣವಾಗಿ ಮಾಂ = ಎನನು ತ್ರಾತುಂ = ರಕ್ಷಿಸಲು ಅರ್ಹಸಿ = ಯೋಗ್ಯ[2]ನಾ[2]ಗುತ್ತಿಹೆ. ||೬೯||

ತ್ವಮೇವ—ನೀನೇ ಜಗತಃ—ಲೋಕಕ್ಕೆ ಚಕ್ಷುಃ—ನಯನವು. ತ್ವಮೇವ—ನೀನೇ ವಚಸಾಂ—ವಾಕ್ಯಂಗಳಿಗೆ ಪತಿಃ—ಒಡೆಯನು. ತ್ವಮೇವ—ನೀನೇ ಜಗತಃ— ಲೋಕಕ್ಕೆ ಧಾತಾ — ಸೃಷ್ಟಿಕರ್ತನು. ವಿಧಾತಾ — ಒಡೆಯನು. ವಿಶ್ವತೋಮುಖಃ—ವಿಶ್ವತೋಮುಖನು. ||೭೦||

ಅಜಂ — ಜನ್ಮವಿಲ್ಲದೇ ಇದ್ದಂಥಾ ಪುರಾಣಂ — ಚಿರಕಾಲದಾತನಹಂಥಾ ಉಪೇಂದ್ರವೇಧಾಮರರಾಜಜುಷ್ಟಂ— ವಿಷ್ಣು ಬ್ರಹ್ಮ ದೇವೇಂದ್ರರುಗಳಿಂದ ಓಲೈಸಿ

---

‡ ಉಪಜಾತಿ ವೃತ್ತ [1] ನನಗೆ (ಖ) [2] ವಾ (ಕ)

ಶಶಾಂಕಸೂರ್ಯಾಗ್ನಿಮಯತ್ರಿಲೋಚನಂ
ಧ್ಯಾನಾಧಿಗಮ್ಯಂ ಜಗತಃ ಪ್ರಕಾಶಮ್ ||೨೦||

*ತ್ವಾಂ ವಾಙ್ಮಯಾಧಾರಮನಂತವೀರ್ಯಂ
ಜ್ಞಾನಾರ್ಣವಂ ಚೈವ ಗುಣಾರ್ಣವಂ ಚ |
ಪರಾಪರಂ ಧಾಮನಿಧಿಂ ಸುಸೂಕ್ಷ್ಮ-
ಮನಾದಿಮಧ್ಯಾಂತವಿಹೀನರೂಪಮ್ ||೨೧||

† ಹಿರಣ್ಯಗರ್ಭಂ ಜಗತಃ ಪ್ರಸೂತಿಂ
ನಮಾಮಿ ದೇವಂ ಹರಿಣಾಂಕಚಿಹ್ನಮ್ |
ಪಿನಾಕಪಾಶಾಂಕುಶಶೂಲಹಸ್ತಂ
ಕಪರ್ದಿನಂ ಮೇಘಸಹಸ್ರಘೋಷಮ್ ||೨೨||

ಕೊಳಲುಪಟ್ಟಂಥಾ ಶಶಾಂಕಸೂರ್ಯಾಗ್ನಿಮಯತ್ರಿಲೋಚನಂ — ಚಂದ್ರ ಸೂರ್ಯಾಗ್ನಿಸ್ವರೂಪನನ್ನು ತ್ರಿಲೋಚನಂಗಳನುಳ್ಳಂಥಾ ಧ್ಯಾನಾಧಿಗಮ್ಯಂ—ಧ್ಯಾನದಿಂದ ಎಯ್ದಲು ಯೋಗ್ಯನಹಂಥಾ ಜಗತಃ — ಲೋಕಕ್ಕೆ ಪ್ರಕಾಶಂ — ಪ್ರಕಾಶಸ್ವರೂಪನಹಂಥಾ ದೇವಂ—ದೇವನಹಂಥಾ ನಿನ್ನನು ಅಹಂ—ನಾನು ನಮಾಮಿ —ನಮಸ್ಕರಿಸುತ್ತಿದ್ದೇನು. ||೨೦||

ಅನಂತವೀರ್ಯಂ — ಬಹಳ ಪರಾಕ್ರಮವನುಳ್ಳಂಥಾ ಜ್ಞಾನಾರ್ಣವಂ = ಜ್ಞಾನಕ್ಕೆ ಸಮುದ್ರನಹಂಥಾ ವಾಙ್ಮಯಾಧಾರಂ= ವಾಕ್ಯಂಗಳಿಗೆ ಆಶ್ರಯನಹಂಥಾ ಗುಣಾರ್ಣವಂ ಚ= ಗುಣಂಗಳಿಗೆ ಸಮುದ್ರನಹಂಥಾ ಪರಾಪರಂ= ಪರಾಪರನಹಂಥಾ ಧಾಮನಿಧಿಂ= ತೇಜೋನಿಧಿಯಹಂಥಾ ಸುಸೂಕ್ಷ್ಮಂ— ಅತ್ಯಂತ ಸೂಕ್ಷ್ಮನಹಂಥಾ ಅನಾದಿಮಧ್ಯಾಂತವಿಹೀನರೂಪಂ = ಅನಾದಿ ಮಧ್ಯ ಅವಸಾನವಿಲ್ಲದೆ ಇದ್ದ ರೂಪನುಳ್ಳಂಥಾ ತ್ವಾಂ ಚೈವ= ನಿನ್ನನೇ ನಮಾಮಿ= ನಮಸ್ಕರಿಸುತ್ತಿದ್ದೇನು. ||೨೧||

